ಬ್ಯಾಂಕಿಂಗ್ ಪ್ರಪಂಚ

ಹಣ ಮತ್ತು ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ಸಂಪಾದಕರು

ಎಚ್ಚೆಸ್ಕೆ

ಎಚ್ಚೆಸ್ಕೆ ಅವರ "ಬ್ಯಾಂಕಿಂಗ್ ಪ್ರಪಂಚ"ದ ಸಂಪಾದಕೀಯ ಮತ್ತು ಇತರ ಲೇಖನಗಳ ಸಂಕಲನ

ಸಮನ್ವಯ ಸಮಿತಿ ಸಾಹಿತ್ಯದಾಸೋಹ
ಎಚ್ಚೆಸ್ಕೆ - ಅಕ್ಷರನಮನ
ಜನ್ಮ ಶತಾಬ್ದಿ ಸವಿನೆನಪು

ಪ್ರಕಾಶಕರು
ಸಮನ್ವಯ ಸಮಿತಿ
(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು),
ಭಾರತೀಯ ಸ್ಟೇಟ್ ಬ್ಯಾಂಕ್, ನಂ.22,
ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು - 560002

ಅರಿಕೆ

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ಪ್ರತಿ ಆರು ತಿಂಗಳುಗಳಿಗೆ ಒಂದರಂತೆ ರಾಜ್ಯದ ಬೇರೆಬೇರೆಡೆಗಳಲ್ಲಿ ನಡೆಸಲಾಗುತ್ತಿರುವ ಬ್ಯಾಂಕಿಂಗ್ ಕಮ್ಮಟಗಳ ನೂರನೆಯ ದಿನವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿರುವ ಈ ಪುಸ್ತಕ ಒಂದು ದೃಷ್ಟಿಯಲ್ಲಿ ಬ್ಯಾಂಕಿಂಗಿನ ಹತ್ತು ವರ್ಷಗಳ ಸಿಂಹಾವಲೋಕನ, ಸಿಂಹ ಸಂಚಾರ ಹೊರಟಾಗ ಸ್ವಲ್ಪ ದೂರ ಹೋಗಿ, ನಿಂತು, ಹಿಂದೆ ನೋಡಿಕೊಂಡು ಮತ್ತೆ ಮುಂದೆ ನಡೆಯುವುದಂತೆ. ಯಾವುದಕ್ಕೂ ಹೆದರದ ಸಿಂಹ ಹೀಗೇಕೆ ಮಾಡುವುದೋ, ಅದು ಬೇಟೆಯಾಡುವಾಗ ಉದ್ದಕ್ಕೂ ಸಿಕ್ಕ ಮೃಗಗಳನ್ನೆಲ್ಲ ಹೊಡೆದು ಕೊಂದು, ಕೊನೆಗೆ ಎತ್ತರದ ಸ್ಥಳದ ಮೇಲೆ ನಿಂತು ಹಿಂದಿರುಗಿ, ತಾನು ಕೊಂದ ಮೃಗಗಳನ್ನೆಲ್ಲ ಅವಲೋಕಿಸುವುದಂತೆ, 'ಬ್ಯಾಂಕಿಂಗ್ ಪ್ರಪಂಚ'ದ ಅನುಭವ ಇಂಥದಲ್ಲ. ಅದರದು ಸಿಂಹದ ನಡಿಗೆಯಲ್ಲ. ಅದರ ನಡಿಗೆ ಆಮೆಯದು; ಆದರೆ ದೃಢವಾದ್ದಂತೂ ಹೌದು. ಅದು ಹಿಂದಿರುಗಿ ನೋಡಿದಾಗ ಸಾಲಾಗಿ ಕಾಣುವ ಹೆಜ್ಜೆಗಳ ಗುರುತುಗಳನ್ನು ಕಂಡು ಹೆಮ್ಮೆಯಂತೂ ಆಗದಿರುವುದಿಲ್ಲ. ಈ ಹತ್ತು ವರ್ಷಗಳಲ್ಲಿ ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಪ್ರಕಟವಾದ ಸಂಪಾದಕೀಯ ಈ ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಈ ಅವಧಿಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳ ಮತ್ತು ಸಾಧನೆಗಳ, ಅದು ಎದುರಿಸಿರುವ ಸಮಸ್ಯೆಗಳ ಪರಿಚಯ ಇಲ್ಲಿ ಸಿಗುತ್ತದೆ. ಇದರ ಜೊತೆಗೇ 'ಬ್ಯಾಂಕುಗಳು ಮತ್ತು ಭಾಷೆ' ಎಂಬ ಒಂದು ಲೇಖನವನ್ನೂ ಇಲ್ಲಿ ಸೇರಿಸಲಾಗಿದೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಪ್ರಕಟಿಸಿರುವ 'ಬ್ಯಾಂಕಿಂಗ್ ಕೈಪಿಡಿ' ಎಂಬ ಕೃತಿಗಾಗಿ ಬರೆದ ಲೇಖನವಿದು.

ಜನರು ಆಡುವ ಭಾಷೆಯನ್ನೇ ಬ್ಯಾಂಕುಗಳು ತಮ್ಮ ವ್ಯವಹಾರದಲ್ಲಿ ಬಳಸುವುದು ಅಗತ್ಯ ಎಂಬ ತತ್ವವನ್ನು ಇಂದಲ್ಲ ನಾಳೆ ಎಲ್ಲರೂ ಒಪ್ಪಿಕೊಳ್ಳಲೇಬೇಕು. ಆದರೆ ಅದು ಸಾಧ್ಯವೇ? ಎಂಬ ಪ್ರಶ್ನೆಗೆ ಉತ್ತರ ಈ ಲೇಖನದಲ್ಲಿದೆ. ಕನ್ನಡವನ್ನು ಅದಕ್ಕಾಗಿ ಅಣಿಗೊಳಿಸಲು ಮಾಡುತ್ತಿರುವ ಪ್ರಯತ್ನದ ಫಲಶೃತಿಯೇ ಈ ಲೇಖನಗಳು. 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆ ಭಾರತದ ಬೇರೆ ಯಾವ ಭಾಷೆಯಲ್ಲೂ ಪ್ರಕಟವಾಗುತ್ತಿಲ್ಲ. ಸಮನ್ವಯ ಸಮಿತಿಯ ಆಶ್ರಯದಲ್ಲಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಡನೆ, ಏರ್ಪಡಿಸಲಾಗುತ್ತಿರುವ 'ಬ್ಯಾಂಕಿಂಗ್ ಕಮ್ಮಟ'ದಂಥ ನಿರಂತರ ಪ್ರಯೋಗವೂ ಬೇರೆಲ್ಲೂ ನಡೆದಿಲ್ಲ. ಈ ಎಲ್ಲ ಕೆಲಸವಾ ಸಾರ್ಥಕವಾಗಬಕಾದರೆ, ಇದನ್ನೆಲ್ಲ ಯಾರಿಗಾಗಿ ಮಾಡಲಾಗುತ್ತಿದೆಯೋ ಅವರು ಇದನ್ನು ಸ್ವೀಕರಿಸಬೇಕು. ಆ ಒಳ್ಳೆಯ ದಿನಗಳಿಗಾಗಿ ಕಾಯುತ್ತ, ಈ ಕೃತಿಯನ್ನು ಅವರ ಮಡಿಲಲ್ಲಿ ಹಾಕುತ್ತಿದ್ದೇವೆ.

ಎಚ್ಚೆಸ್ಕೆ

1991ರಲ್ಲಿ ಬ್ಯಾಂಕಿಂಗ್ ಪ್ರತಿಷ್ಠಾನ (ಸಮನ್ವಯ ಸಮಿತಿಯಿಂದ ಪ್ರಾಯೋಜಿತ)ದಿಂದ ಪ್ರಕಟವಾದ ಪ್ರಾಚಾರ್ಯ ಎಚ್ಚೆಸ್ಕೆ ಅವರ "ಬ್ಯಾಂಕಿಂಗ್ ಪ್ರಪಂಚ"ದ ಸಂಪಾದಕೀಯ ಲೇಖನಗಳ "ಬ್ಯಾಂಕು ಮತ್ತು ಭಾಷೆ ಹಾಗೂ ಬ್ಯಾಂಕಿಂಗ್ ಹೆಜ್ಜೆಗುರುತಗಳು" ಪುಸ್ತಕಕ್ಕೆ ಎಚ್ಚೆಸ್ಕೆ ಅವರು ಬರೆದಿರುವ ಅರಿಕೆ.

ಬ್ಯಾಂಕಿಂಗ್ ಪ್ರಪಂಚ

ಹಣ ಮತ್ತು ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ಸಂಪಾದಕರು

ಎಚ್ಚೆಸ್ಕೆ

ಎಚ್ಚೆಸ್ಕೆ ಅವರ "ಬ್ಯಾಂಕಿಂಗ್ ಪ್ರಪಂಚ"ದ ಸಂಪಾದಕೀಯ ಮತ್ತು ಇತರ ಲೇಖನಗಳ ಸಂಕಲನ

ಸಮನ್ವಯ ಸಮಿತಿ ಸಾಹಿತ್ಯದಾಸೋಹ
ಎಚ್ಚೆಸ್ಕೆ-ಅಕ್ಷರನಮನ
ಜನ್ಮ ಶತಾಬ್ದಿ ಸವಿನೆನಪು

ಸಂಕಲನ

ಎಚ್. ಎಲ್. ಗುರುಪ್ರಸಾದ್
ಬೆಂಶ್ರೀ ರವೀಂದ್ರ

ಪ್ರಕಾಶಕರು
ಸಮನ್ವಯ ಸಮಿತಿ
(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು),
ಭಾರತೀಯ ಸ್ಟೇಟ್ ಬ್ಯಾಂಕ್, ನಂ.22,
ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು - 560002

Banking Prapancha, collection of editorials and other articles of Prof. HSK (Dr.H.S.Krishnaswamy Iyengar) published by Samanvaya Samithi (Bharathiya State Bank Kannada Sanghagalu), No.22, J.C.Road, Bangalore – 560022

Pages – 308

Price : Rs.265/-

No. of Copies – 1000

Copyright - Samanvaya Samithi (Bharathiya State Bank Kannada Sanghagalu), Bangalore – 560022

Paper used : 70 GSM NS 1/8th Demmy

ಮುದ್ರಣ:
ಶ್ರೀ ಯಂತ್ರೋದ್ಧಾರಕ
ಮುದ್ರಕರು ಹಾಗು ಪ್ರಕಾಶಕರು
10/2, 1ನೇ ಮುಖ್ಯ ರಸ್ತೆ, ಅಶ್ವತ್ಥಕಟ್ಟೆ ರಸ್ತೆ,
ರುದ್ರಪ್ಪ ಗಾರ್ಡನ್, ಬೆಂಗಳೂರು – 560 026.
ಮೊಬೈಲ್ : 94487 95121 / 9886071144
Email: sypp2019@gmail.com

ಮುನ್ನುಡಿ

ಮುನ್ನುಡಿ ಎಂದರೆ ಒಬ್ಬ ಕೃತಿಕಾರ ಮತ್ತು ಕೃತಿಯನ್ನು ಏಕೆ ಓದಬೇಕು ಎಂಬುದನ್ನು ತಿಳಿಸುವ ಪುಸ್ತಕದ ಆದಿಯಲ್ಲಿ ಬರೆಯುವ ನುಡಿಗಳು. ಪ್ರಾಚಾರ್ಯ ಎಚ್ಚೆಸ್ಕೆಯವರು ಬ್ಯಾಂಕಿಂಗ್ ಪ್ರಪಂಚಕ್ಕೆ ಬರೆದ ಸಂಪಾದಕೀಯಗಳಿಗೆ ಮುನ್ನುಡಿ ಬರೆಯಬೇಕೆ? ಎಂಬುದು ಪ್ರಶ್ನೆ. ಅವರ ಸಂಪಾದಕೀಯಗಳು ಸ್ವಯಂವೇದ್ಯ ಹಾಗೂ ಮುನ್ನುಡಿಯ ಅಗತ್ಯವನ್ನೇ ಬೇಡದವು.

ಗೊಮ್ಮಟನಂತೆ ಬೃಹತ್ತಾಗಿ ಬೆಳೆದ ವ್ಯಕ್ತಿಗೆ ಮುನ್ನುಡಿ ಬರೆಯುವುದು ಸಾಹಸವೇ ಸರಿ. ಅವರ ಬರಹಗಳು ಅಮೂಲ್ಯವಾದುವು. ಸುಮಾರು ಎರಡು ದಶಕಗಳ ಕಾಲ ಬರೆದ ಸಂಪಾದಕೀಯಗಳು ಅಂದಂದಿನಲ್ಲಿದ್ದ ಅರ್ಥ ವ್ಯವಸ್ಥೆಯ ಸ್ಥಿತಿ, ಬ್ಯಾಂಕಿಂಗಿನಲ್ಲಾದ ಏಳು ಬೀಳುಗಳು, ಕನ್ನಡದ ಬಗ್ಗೆ ಹೋರಾಟಗಳು, ಸ್ಥಿತ್ಯಂತರಗಳನ್ನು ಸಂಪಾದಕೀಯಗಳಲ್ಲಿ ಸೆರೆ ಹಿಡಿದಿದ್ದಾರೆ.

ಬ್ಯಾಂಕಿಂಗ್ ಪ್ರಪಂಚದ ಕಪ್ತಾನ :

ಪ್ರಾ॥ ಎಚ್ಚೆಸ್ಕೆ ಯವರು ನಡೆಸುವ ನಾವೆ, ಬ್ಯಾಂಕಿಂಗ್ ಪ್ರಪಂಚ, ಬ್ಯಾಂಕಿಂಗ್ ಕಮ್ಮಟ, ಬ್ಯಾಂಕಿಂಗ್ ವಿಚಾರ ಸಂಕಿರಣ, ಬ್ಯಾಂಕಿಂಗ್ ನಿಘಂಟು, ಬ್ಯಾಂಕಿಂಗ್ ಯಾವುದೇ ಉತ್ತಮ ಕಾರ್ಯಕ್ರಮಗಳಿಗೆ ಅವರದೇ ಮಾರ್ಗದರ್ಶನ ಇತ್ಯಾದಿ. ಈ ನಾವೆಯಲ್ಲ, ನಿಂತು ಸುತ್ತಲಿನ ಅರ್ಥ ವ್ಯವಸ್ಥೆ, ಬ್ಯಾಂಕಿಂಗ್ ಮುಂತಾದುವುಗಳಿಗೆ ಪ್ರತಿಕ್ರಿಯಿಸುತ್ತಾ ಸಾಗುತ್ತಾರೆ. ಇದು ಕೇವಲ ವರದಿಯಾಗಿರುವುದಿಲ್ಲ. ಸಂಬಂಧಿಸಿದ ಚಟುವಟಿಕೆಗಳ ಸತ್ವವನ್ನು ಗುರುತಿಸುತ್ತಾರೆ. ಹಣ ಮತ್ತು ಬ್ಯಾಂಕಿಂಗ್‌ನ ಎಲ್ಲಾ ಮುಖಗಳ ಎಲ್ಲ ಹಿತಗಳ ಪಡಿನೆಳಲು ಇದಾಗ ಬೇಕು ಎಂಬುದು ಬ್ಯಾಂಕಿಂಗ್ ಪ್ರಪಂಚದ ಉದ್ದೇಶ ಎಂದು ಅದರ ಉದ್ದೇಶ, ಗುರಿಯನ್ನು ತಿಳಿಸುತ್ತಾರೆ.

ಅದೇ ರೀತಿ 'ಬ್ಯಾಂಕಿಂಗ್ ಕಮ್ಮಟಗಳು, ಕಮ್ಮಟಿಗರ ತರಬೇತಿ ಕನ್ನಡದಲ್ಲಿ ಬ್ಯಾಂಕಿಂಗ್ ವಿಷಯಗಳ ಅಭಿವ್ಯಕ್ತಿಸಲು ಸಮರ್ಥ ಪಡೆ ನಿರ್ಮಾಣ' ಎಂಬ ವ್ಯಾಖ್ಯೆಯನ್ನು ನೀಡಿದ್ದಾರೆ. ಬ್ಯಾಂಕಿಂಗ್ ನಿಘಂಟಿನ ಪ್ರಕಟಣೆ ಮತ್ತು ಅದಕ್ಕೆ ದೊರೆತ ಪ್ರತಿಕ್ರಿಯೆಯನ್ನು ದಾಖಲಿಸಿದ್ದಾರೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಸಂಘಗಳ ಸ್ಥಾಪನೆ, ಸಮನ್ವಯ ಸಮಿತಿಯ ಉಗಮ ಮತ್ತು ಕಾರ್ಯ, ಇತರೆ ಬ್ಯಾಂಕುಗಳಲ್ಲಿ ಕನ್ನಡ ಸಂಘಗಳ ಸ್ಥಾಪನೆ, ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು. ಅದು ಬ್ಯಾಂಕಿಂಗ್ ಕ್ಷೇತ್ರದಲ್ಲಿ

ಮಾಡಿದ ಹೋರಾಟ, ಭಾರತೀಯ ಸ್ಟೇಟ್ ಬ್ಯಾಂಕ್ ಪ್ರತ್ಯೇಕ ವೃತ್ತಕ್ಕಾಗಿ ಹೋರಾಟ ಮುಂತಾದವನ್ನು ಕೇವಲ ವರದಿಯಾಗಿ ಚಿತ್ರಿಸಿಲ್ಲ. ಮೇಲಾಗಿ ಅವುಗಳ ಹಿಂದಿನ ಸಂಘಟನೆ, ಉದ್ದೇಶ, ಕನ್ನಡ, ಕನ್ನಡಿಗರ ಪರಿಸ್ಥಿತಿ ಬ್ಯಾಂಕಿಂಗ್‌ನಲ್ಲಿ ಕನ್ನಡ ಸ್ಥಿತಿಗತಿಗಳನ್ನು ಸ್ವಾರಸ್ಯಪೂರ್ಣವಾಗಿ ವಿವರಿಸುತ್ತಾರೆ.

ಪ್ರಾ। ಎಚ್ಚೆಸ್ಕೆಯವರಲ್ಲಿನ ಮತ್ತೊಂದು ವಿಶೇಷವೆಂದರೆ ವಿಷಯ ಮಂಡನ ಕ್ರಮ. ವಿಷಯದ ಪೂರ್ವ – ಉತ್ತರ, ಎರಡೂ ಪಕ್ಷಗಳನ್ನು ಮಂಡಿಸಿ, ಆ ಮೂಲಕ ಯಾವುದನ್ನು ಎಷ್ಟರ ಮಟ್ಟಿಗೆ ಸ್ವೀಕರಿಸಬೇಕೆಂಬುದನ್ನು 'ಬ್ಯಾಂಕುಗಳಲ್ಲಿ ಗಣಕೀಕರಣ' ಎಂಬುದರ ಬಗ್ಗೆ ಬರೆಯುವಾಗ ವಿವರಿಸಿದ್ದಾರೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರಾದೇಶಿಕ ಭಾಷೆಗಳು ಕರ್ನಾಟಕದಲ್ಲಿ ಕನ್ನಡದ ಬಗ್ಗೆ ವಿಚಾರ ಮಂಡಿಸುವಾಗ, ವಿಷಯಗಳ ಎಲ್ಲಾ ಮಗ್ಗುಲುಗಳನ್ನು ತೆರೆದಿಟ್ಟು ಕನ್ನಡವನ್ನೇಕೆ ಬಳಸಬೇಕು ಎಂದು ಸೋದಾಹರಣವಾಗಿ ವಿವರಿಸುತ್ತಾರೆ. ಬ್ಯಾಂಕುಗಳ ಆಕೃತಿ ಪಿರಮಿಡಿನಂತೆ, ತಳಭಾಗದಲ್ಲಿ ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ ಪ್ರಾದೇಶಿಕ ಭಾಷೆಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಹೇಳುತ್ತಾರೆ.

ಬ್ಯಾಂಕಿಂಗ್ ಬಗ್ಗೆ ಬರೆಯುವಾಗ ಕೇವಲ ಅಂಕಿ ಸಂಖ್ಯೆ ಅಥವಾ ವಿವರಗಳನ್ನು ಮಾತ್ರ ಕೊಡದೆ, ಉದಾಹರಣೆಯ, ಸಹಿತ ಮಂಡಿಸುತ್ತಾರೆ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಮೈಸೂರು ವಿಲೀನವಾದ ಅದು ಹೇಗಿತ್ತೆಂದರೆ ಗಂಗ – ಯಮುನಾ ನದಿ ಸಂಗಮದಂತೆ ಬಹುದೂರದವರೆಗೆ ಪ್ರತ್ಯೇಕವಾಗಿ ಸಾಗುವಂತಿತ್ತು ಎಂದು ಭಿನ್ನತೆಯನ್ನು ಗುರುತಿಸುತ್ತಾರೆ.

ಬ್ಯಾಂಕುಗಳ ಹದಗೆಟ್ಟ ಸ್ಥಿತಿಯನ್ನು ವಿವರಿಸುವಾಗ ವೈದ್ಯರಿಗೆ ವ್ಯಾಧಿ ತಗುಲಿದಂತಾಗಿದೆ ಎನ್ನುತ್ತಾರೆ. ಸರ್ಕಾರ ಮತ್ತು ರಿಸರ್ವ್ ಬ್ಯಾಂಕಿನ ನಡುವೆ ಸಿಕ್ಕ ಬ್ಯಾಂಕುಗಳ ಲಾಭ ಪುಸ್ತಕದ ಬದನೆಕಾಯಿಯಾಗುತ್ತದೆ. ಸರ್ಕಾರಿ ಸಂಸ್ಥೆಗಳು ಎಂದ ಮಾತ್ರಕ್ಕೆ ವಿನಾಯತಿ ಇಲ್ಲ ಎಂಬುದನ್ನು 'ಯಮ ಧರ್ಮರಾಯ ಬರಿಗೈಯಲ್ಲಿ ತೆರಳಲಾರ, ಹಂತಕನ ದೂತರಿಗೆ ಕಿಂಚಿತ್ತೂ ದಯವಿಲ್ಲ' ಎಂದು ಪರಿಸ್ಥಿತಿಯನ್ನು ವಿವರಿಸುತ್ತಾರೆ.

ಬ್ಯಾಂಕಿಂಗ್‌ನಂತಹ ವಿಷಯವನ್ನು ಸಹ್ಯವಾಗುವಂತೆ ಮಾಡುವಲ್ಲಿ ಅವರು ಬಳಸುವ ಉಪಮೆಗಳು, ನುಡಿಗಟ್ಟುಗಳು, ಇತ್ಯಾದಿ ಶೈಲಿಯನ್ನು ಆಕರ್ಷಕವನ್ನಾಗಿಸುತ್ತದೆ.

'ಬ್ಯಾಂಕುಗಳು. ಜನಸಮುದಾಯ ಸಂಸ್ಥೆಗಳು' ಎಲ್ಲರನ್ನು ತೃಪ್ತಿಪಡಿಸುವ ಸ್ಥಿತಿ 'ರಾಮಾಯ ಸ್ವಸ್ತಿ ರಾವಣಾಯ ಸ್ವಸ್ತಿ' ಎಂದಾಗುತ್ತದೆ. ವಿವೇಚನೆಯಿಲ್ಲದೆ ತೆಗೆದುಕೊಂಡ ನಿರ್ಧಾರ 'ಎತ್ತು ಈದಿತೆಂದರೆ ಕೊಟ್ಟಿಗೆಗೆ ಕಟ್ಟು' ಎಂದಂತಾಗುತ್ತದೆ. ಇದೇ ಸಂಪಾದಕೀಯ ಇಂತಹವನ್ನು ಸಂದರ್ಭೋಚಿತವಾಗಿ ಬಳಸಿ, ಬ್ಯಾಂಕಿಂಗ್‌ನ್ನು ಕೂಡ ಆಕರ್ಷಕವಾಗಿ ಬರೆಯಬಹುದೆಂದು ತೋರಿಸಿ ಕೊಟ್ಟಿದ್ದಾರೆ.

ಕನ್ನಡದಲ್ಲಿ ಬ್ಯಾಂಕಿಂಗ್ ಬಗ್ಗೆ ಬರೆಯುವಾಗ ಅಂದಿಗೆ ಪ್ರಕಟವಾಗಿರುವ ಪುಸ್ತಗಳನ್ನು ಉಲ್ಲೇಖಿಸುತ್ತಾರೆ. ವಿ. ಸೀ. ಯವರ ಬಗ್ಗೆ ಬರೆಯುವಾಗ ಅವರ 'ಹಣ ಪ್ರಪಂಚ' ಹಾಗೂ 'ರಿಸರ್ವ್ ಬ್ಯಾಂಕಿನ ಕಾರ್ಯಕಲಾಪಗಳ ಬಗ್ಗೆ ಹೇಳಿ ಅವರು ಹಣ ಮತ್ತು ಬ್ಯಾಂಕಿಂಗ್ ಬಗ್ಗೆ ಮಾಡಿದ ಪ್ರಯತ್ನ ಶ್ಲಾಘಿಸುತ್ತಾರೆ. ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ನಗರ ಶಾಖೆಯ 'ಕನ್ನಡದಲ್ಲಿ ಬ್ಯಾಂಕಿಂಗ್' ಬಗ್ಗೆ ಹಾಗೂ ಮೈಸೂರು ಬ್ಯಾಂಕು 'ಸಣ್ಣ ಕೈಗಾರಿಕೆ ಕೈಪಿಡಿ' 'ಕೃಷಿ ಬ್ಯಾಕಿಂಗ್' ಬಗ್ಗೆ ಕನ್ನಡದ ಪ್ರಕಟಣೆಗಳು ಅವರ ಕಣ್ಣಿನಿಂದ ತಪ್ಪಿಸಿಕೊಳ್ಳುವುದಿಲ್ಲ.

ಪ್ರಾ॥ ಎಚ್ಚೆಸ್ಕೆ ಯವರು ಎಂತಹ ಬ್ಯಾಂಕಿಂಗ್ ವಿಷಯಗಳಿಗೆ ಪದಗಳನ್ನು ಟಂಕಿಸಿ ಬಳಸುತ್ತಿದ್ದರು ಎಂಬುದಕ್ಕೆ ಮುಂದಿನವು ಸಾಕ್ಷಿ ಕೆಲವು ಇಂತಿವೆ :

Cheque Transaction	ಚೆಕ್ಕು ವಿಚ್ಛೇದನ
Directed Londing	ನಿರ್ದೇಶಿತ ಉದರಿ
Call Money Market	ಕರೆ ಸಾಲ ಪೇಟೆ
Deployment	ಪ್ರವಿಸ್ತರಣೆ
Home Computer Network	ಗೃಹ ಗಣಕ ಜಾಲ
Risk Weighted Assets	ನಷ್ಟ ಸಂಭಾವ್ಯ ಬಾಧಿತ ಆಸ್ತಿಗಳು
Leaming Without Tears.	ವೇದಾನರಹಿತ ಕಲಿಕೆ ಹಾಗೂ ಕಲಿಸುವಿಕೆ
Participation Certificate	ಭಾಗೀದರಿಕೆ ಪತ್ರ
Floor Rate	ತಳ ದರ
Discount House	ವಟ್ಟದ ಮನೆ
Fast Track	ವೇಗ ಪಥ
Forfeiting	ಅನುಪಾಶ್ರಯಣೀಕರಣ
Programmer	ಕ್ರಮ ವಿಧಾಯಕ
Busy Season	ತೇಜಿ ಹಂಗಾಮು
Venture Capital	ಪ್ರವರ್ತನ ಬಂಡವಾಳ

Incremental Cash Reserve	ವೃದ್ಧಿಶೀಲ ನಗದು ಮೀಸಲು
Credit Authorisation	ಉದರಿ ಪ್ರಾಧಿಕರಣ
Economic Value	ಅರ್ಥ ಮೌಲ್ಯ
System Analyst	ವ್ಯವಸ್ಥಾ ವಿಶ್ಲೇಷಕ

ಹೀಗೆ ನೂರಾರು ಪದಗಳನ್ನು ಟಂಕಿಸಿ ಬಳಸಿದ್ದಾರೆ. ಅವರ ಬರಹಗಳನ್ನು ಓದಿದರೆ ಕನ್ನಡದ ಪರ್ಯಾಯ ಪದಗಳು ಸಾಕಷ್ಟು ಲಭ್ಯ.

ಪ್ರಾ॥ ಎಚ್ಚೆಸ್ಕೆಯವರ ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳು ಒಂದು ರೀತಿ ಸ್ವಯಂ ಬೋಧಕವಾಗಿವೆ. ಅವನ್ನು ಬ್ಯಾಂಕಿಂಗ್ ವಿದ್ಯಾರ್ಥಿಗಳು ಮಾತ್ರವಲ್ಲ ಆಸಕ್ತರೆಲ್ಲರೂ ಅವಶ್ಯ ಓದಬೇಕು. ಆಕರ್ಷಕ ಶೈಯಲ್ಲಿದ್ದು ಓದಿಸಿಕೊಂಡು ಹೋಗುತ್ತದೆ. ನಮಗೆ ಅರಿವಿಲ್ಲದಂತೆ ಸಂಬಂಧಿಸಿದ ಅವಧಿಯ ಆರ್ಥಿಕ, ಬ್ಯಾಂಕಿಂಗ್, ಸಾಹಿತ್ಯಿಕ ಘಟನಾವಳಿಗಳು ನಮಗೆ ಹೃದ್ಯವಾಗುತ್ತವೆ. ಇದೊಂದು ರೀತಿ ಬ್ಯಾಂಕಿಂಗ್ ಕೈಪಿಡಿ. ಎಂಭತ್ತು ಮತ್ತು ತೊಂಭತ್ತರ ದಶಕಕ್ಕೆ ಸಂಬಂಧಿಸಿದ್ದಾದರೂ ಇಂದೂ ಆಪ್ಯಾಯಮಾನವಾಗುತ್ತದೆ.

ಈ ಸಂಪಾದಕೀಯಗಳನ್ನು ಓದಿದ ನಂತರ ಯಾರೇ ಆಗಲಿ ಸಂಪಾದಕತ್ವ ವಹಿಸಿಕೊಂಡರೆ ಅದು ನಿರ್ವಹಿಸಬೇಕಾದ ರೀತಿಗೆ ದಿಕ್ಸೂಚಿಯನ್ನು ಸೂಚಿಸುತ್ತದೆ ಮತ್ತು ಆರ್ಥಿಕ ವಿಷಯಗಳನ್ನು ಆರ್ಕಷಕವಾಗಿ ಮಂಡಿಸುವ ಕ್ರಮವನ್ನು ಪ್ರದರ್ಶಿಸುತ್ತದೆ.
ನನ್ನ ಕಳಕಳಿಯ ಮನವಿ ಎಂದರೆ – ಆಸಕ್ತರೆಲ್ಲ ಈ ಸಂಪಾದಕೀಯಗಳನ್ನು ಓದಬೇಕು. ಅದರಲ್ಲಿ ಕಲಿಯುವುದು ಬಹಳಷ್ಟಿದೆ.

ಪಾ. ರಾಜಗೋಪಾಲ
ಬೆಂಗಳೂರು
24.4.22

ಪ್ರಕಾಶಕರ ನುಡಿ

1978ರಲ್ಲಿ ಆರಂಭವಾದ ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು) ಕನ್ನಡವನ್ನು ಬ್ಯಾಂಕಿಂಗ್ ನಲ್ಲಿ ಸಮರ್ಥವಾಗಿ ಬಳಸಲು ಅನುವಾಗುವಂತೆ ಸಿದ್ಧಗೊಳಿಸಲು ಬ್ಯಾಂಕಿಂಗ್ ಪ್ರಪಂಚ ಎಂಬ ಹಣ ಮತ್ತು ಬ್ಯಾಂಕಿಂಗ್ ಗೆ ಮೀಸಲಾದ ಪತ್ರಿಕೆಯನ್ನು ಆರಂಭಿಸಿತು. ಅಲ್ಲಿಯವರೆಗೆ ಇಂಗ್ಲೀಷಿನಲ್ಲಿ ಮಾತ್ರ ಬ್ಯಾಂಕಿಂಗ್ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಹಿಂದಿಯೂ ಸೇರಿದಂತೆ ಎಲ್ಲ ಭಾರತೀಯ ಭಾಷೆಗಳಲ್ಲಿ ಹಣ ಮತ್ತು ಬ್ಯಾಂಕಿಂಗಿಗೆ ಮೀಸಲಾದ ಪತ್ರಿಕೆಯನ್ನು ಕನ್ನಡದಲ್ಲಿ ಪ್ರಕಾಶಿಸಿದ್ದು ನಮ್ಮ ಹೆಮ್ಮೆಯಾಗಿದೆ. ಈ ಸಾಧನೆಗೆ ಕಾರಣರಾದವು ಪ್ರಾಚಾರ್ಯ ಎಚ್ಚೆಸ್ಕೆಯವರು. ಬ್ಯಾಂಕಿಂಗ್ ಪ್ರಪಂಚದ ಸಂಪಾದಕತ್ವವನ್ನು ವಹಿಸಿಕೊಂಡು, ಬ್ಯಾಂಕಿಂಗ್ ನಂತಹ ವಿಷಯವನ್ನು ಕನ್ನಡದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಬಹುದು ಮತ್ತು ವ್ಯವಹಾರದಲ್ಲಿ ಬಳಸಬಹುದು ಎಂಬುದನ್ನು ಎಚ್ಚೆಸ್ಕೆ ತೋರಿಸಿಕೊಟ್ಟರು. ಜನಸಾಮಾನ್ಯರ ಭಾಷೆಯಾದ ಕನ್ನಡವನ್ನು ಬ್ಯಾಂಕಿಂಗ್ ನಲ್ಲಿ ಅಳವಡಿಸುವುದನ್ನು ಹೇಗೆಂಬುದನ್ನು ತಿಳಿಸಿಕೊಟ್ಟರು.

ಅವರ ನೇತೃತ್ವದಲ್ಲಿ ಬ್ಯಾಂಕಿಂಗ್ ಕಮ್ಮಟಗಳು, ಬ್ಯಾಂಕಿಂಗ್ ವಿಚಾರ ಸಂಕಿರಣಗಳು ರಾಜ್ಯಾದ್ಯಂತ ನಡೆಯಿತು. ಅಲ್ಲದೆ 1985ರಲ್ಲಿ ಬ್ಯಾಂಕಿಂಗ್ ನಿಘಂಟು, 1990ರಲ್ಲಿ ಬ್ಯಾಂಕಿಂಗ್ ತ್ರಿಭಾಷಾ ಪದಕೋಶಗಳು ಅವರ ಸಂಪಾದಕತ್ವದಲ್ಲಿ ಬಿಡುಗಡೆಯಾಯಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ, ಕರ್ನಾಟಕ ಮತ್ತು ಕನ್ನಡಿಗರಿಗೆ ಆದ್ಯತೆಯನ್ನು ನೀಡಬೇಕೆಂಬ ಹಲವಾರು ಹೋರಾಟಗಳಿಗೆ ಅವರು ನಮ್ಮನ್ನು ಅಣಿಗೊಳಿಸಿದರು.

ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳನ್ನು 1990ರಲ್ಲಿ ಬ್ಯಾಂಕು ಮತ್ತು ಭಾಷೆ ಹಾಗೂ ಬ್ಯಾಂಕಿಂಗ್ ಹೆಜ್ಜೆ ಗುರುತುಗಳು ಎಂಬ ಪುಸ್ತಕವನ್ನು ಬ್ಯಾಂಕಿಂಗ್ ಪ್ರತಿಷ್ಠಾನವು ಬಿಡುಗಡೆ ಮಾಡಿತ್ತು. ಈಗ "ಎಚ್ಚೆಸ್ಕೆ ಬೆಳಕು – ಏಳನೆಯ ಆವೃತ್ತಿ" ಹಾಗೂ "ಸಮನ್ವಯ ಸಮಿತಿ ಕನ್ನಡವೇ ಸತ್ಯ" ವೇದಿಕೆಯು 1999ರಿಂದ ನಡೆಸಿಕೊಂಡು ಬರುತ್ತಿರುವ "ಸಾಹಿತ್ಯ ದಾಸೋಹ"ದ 200ನೆಯ ಕಾರ್ಯಕ್ರಮದ ಸಂದರ್ಭದಲ್ಲಿ, ಎಲ್ಲಾ ಬ್ಯಾಂಕಿಂಗ್ ಪ್ರಪಂಚದ ಸಂಚಿಕೆಗಳಲ್ಲಿರುವ ಸಂಪಾದಕೀಯ ಮತ್ತು ಎಚ್ಚೆಸ್ಕೆಯವರ ಲೇಖನಗಳನ್ನು ಸಂಗ್ರಹಿಸಿ ಬಿಡುಗಡೆ ಮಾಡಲಾಗುತ್ತಿದೆ. ಇದು ನಮಗೆ ಅತೀವ ಸಂತೋಷವನ್ನು ನೀಡಿರುವ ವಿಚಾರ.

1972 ರಿಂದ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ

ತೀವ್ರವಾಗಿ ತೊಡಗಿಸಿಕೊಂಡವರು ಶ್ರೀ.ಪಾ.ರಾಜಗೋಪಾಲ ಅವರು. ಬ್ಯಾಂಕಿಂಗ್ ಪ್ರಪಂಚ, ಬ್ಯಾಂಕಿಂಗ್ ಕಮ್ಮಟ ಮತ್ತಿತರ ಎಲ್ಲ ಚಟುವಟಿಕೆಗಳನ್ನೂ ಸಮನ್ವಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ರಾಜಗೋಪಾಲ್ ನಿರ್ವಹಿಸಿದ್ದಾರೆ. ಈ ಸಂಪಾದಕೀಯಗಳ ಸಂಗ್ರಹಕ್ಕೆ ಅವರು ಮುನ್ನುಡಿಯನ್ನು ಬರೆದಿದಿರುವುದು ಸೂಕ್ತ ಮತ್ತು ಆದರಣೀಯವಾಗಿದೆ.

ಅತ್ಯಂತ ಶ್ರಮವಹಿಸಿ ಬ್ಯಾಂಕಿಂಗ್ ಪ್ರಪಂಚದ ಸಂಚಿಕೆಗಳನ್ನು ಸಂಗ್ರಹಿಸಿ ಕೊಟ್ಟ ಹಲವಾರು ಗೆಳೆಯರಿಗೆ ನಾವು ಆಭಾರಿಯಾಗಿದ್ದೇವೆ. ಶ್ರೀ.ಎಚ್.ಎಲ್.ಗುರುಪ್ರಸಾದ್ ಅವರು ಎಲ್ಲ ಪುಟಗಳನ್ನೂ ಅಂಕೀಕರಿಸಿ ಈ ಪುಸ್ತಕವನ್ನು ಸಿದ್ಧಗೊಳಿಸುವುದರಲ್ಲಿ ಶ್ರಮವಹಿಸಿದ್ದಾರೆ. ಅಪಾರ ಸಮಯವನ್ನೂ ಮೀಸಲಿಟ್ಟಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಮತ್ತು ಸಾಹಿತ್ಯ ದಾಸೋಹ ವೇದಿಕೆಗಳ ಪ್ರದಾನ ಸಂಚಾಲಕರಾದ ಶ್ರೀ ಬೆಂ.ಶ್ರೀ ರವೀಂದ್ರ ಅವರು ನಮ್ಮ ಕಾರ್ಯ ಚಟುವಟಿಕೆಗಳಿಗೆ ಸ್ಫೂರ್ತಿಯನ್ನೂ ಚಾಲನೆಯನ್ನೂ ನೀಡುತ್ತಿದ್ದಾರೆ. ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳ ಸಂಗ್ರಹ ರೂಪವನ್ನು ಪ್ರಕಾಶಿಸುವುದೂ ಅವರ ಪರಿಕಲ್ಪನೆಯೇ ಆಗಿದೆ. ಇದೇ ರೀತಿ ನಮ್ಮ ಎಲ್ಲ ಚಟುವಟಿಕೆಗಳನ್ನೂ ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಬೇಕೆಂದು ಕೋರುತ್ತೇವೆ.

ಪುಸ್ತಕವನ್ನು ಸಿದ್ಧಗೊಳಿಸುವುದರಲ್ಲಿ ಸಹಕಾರ ನೀಡಿದ ಶ್ರೀ ಎಚ್.ಆರ್. ಗುರುರಾಜ ಮತ್ತು ಕರಡನ್ನು ತಿದ್ದಿಕೊಟ್ಟ ಶ್ರೀ ಟಿ.ಕೆ.ರಂಗನಾಥ್ ಅವರಿಗೆ ಧನ್ಯವಾದಗಳು. ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಿತ್ರರಿಗೂ ಹಾರ್ದಿಕ ಅಭಿನಂದನೆಗಳು.

ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ "ಶ್ರೀ ಯಂತ್ರೋದ್ಧಾರಕ, ಮುದ್ರಕರು ಹಾಗೂ ಪ್ರಕಾಶಕರು" ಇವರಿಗೆ ನಮ್ಮ ಧನ್ಯವಾದಗಳು.

ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಸ್ವಾಗತಿಸಲಿ.

ರವೀಂದ್ರ ಬಾಳಿಹಳ್ಳಿ	**ಶ್ರೀರಂಗರಾಜನ್ ಎಮ್.ಆರ್.**
ಅಧ್ಯಕ್ಷ	ಪ್ರಧಾನ ಕಾರ್ಯದರ್ಶಿ.
24.4.2022	

ಸಂಕಲನಕಾರರ ಮಾತುಗಳು

ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕನ್ನಡ ಸಂಘಗಳು ಆರಂಭವಾಗಿದ್ದು 1972ರಲ್ಲಿ. ಕನ್ನಡ, ಕನ್ನಡಿಗ ಮತ್ತು ಕರ್ನಾಟಕಕ್ಕೆ ಬ್ಯಾಂಕಿನ ವಲಯದಲ್ಲಿ ಆದ್ಯತೆಯನ್ನು ದೊರಕಿಸಿಕೊಟ್ಟು ನಮ್ಮ ಅಸ್ಮಿತೆಯನ್ನು ಕಾಪಾಡುವುದು ಅವುಗಳ ಉದ್ದೇಶವಾಗಿತ್ತು. ರಾಜ್ಯೋತ್ಸವಗಳನ್ನು ಮತ್ತು ಕೆಲವು ಸಾಹಿತ್ಯಿಕ ಚಟುವಟಿಕೆಗಳನ್ನು ಕನ್ನಡ ಸಂಘಗಳು ನಡೆಸುತ್ತಿದ್ದವು. 1978ರಲ್ಲಿ ಸಮನ್ವಯ ಸಮಿತಿಯು ಆರಂಭವಾದಾಗ ಕನ್ನಡದಲ್ಲಿ ಬ್ಯಾಂಕಿಂಗ್ ಸಾಹಿತ್ಯವನ್ನು ಬೆಳೆಸಬೇಕು ಹಾಗೂ ಬ್ಯಾಂಕಿಂಗ್ ವ್ಯವಹಾರದಲ್ಲಿ ಕನ್ನಡವನ್ನು ಬಳಸುವಂತೆ ಮಾಡಬೇಕೆಂಬ ತುಡಿತ ಉಂಟಾಯಿತು. ಅದರ ಫಲವೇ ಬ್ಯಾಂಕಿಂಗ್ ಪ್ರಪಂಚ. 1980ರಿಂದ ಅರ್ಧವಾರ್ಷಿಕವಾಗಿಯೂ, 1986ರಿಂದ ತ್ರೈಮಾಸಿಕವಾಗಿಯೂ ಪ್ರಕಾಶವಾದ ಬ್ಯಾಂಕಿಂಗ್ ಪ್ರಪಂಚದ ಸಂಪಾದಕರು ಎಚ್ಚೆಸ್ಕೆಯವರು. ಬ್ಯಾಂಕಿಂಗ್ ನಂತಹ ವಿಷಯದ ಬಗ್ಗೆ, ಅಂದಂದಿನ ಬ್ಯಾಂಕಿಂಗ್ ಘಟನಾವಳಿಗಳ ಬಗ್ಗೆ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಮತ್ತು ಕನ್ನಡಿಗರಿಗೆ ಸಂಬಂಧಿಸಿದಂತೆ ಜರುಗಿದ ಹಲವಾರು ಸಂಗತಿಗಳನ್ನು ತಮ್ಮ ಸಂಪಾದಕೀಯಗಳಲ್ಲಿ ಹಿಡಿದಿಟ್ಟವರು ಎಚ್ಚೆಸ್ಕೆಯವರು. ಇವುಗಳು ಕಾಲದ ಚಿಟಿಕೆ ಚಿತ್ರದಂತಿವೆ. ಎಚ್ಚೆಸ್ಕೆಯವರ ಸಂಪಾದಕೀಯಗಳ ಮರು ಓದು ಕಳೆದ ಶತಮಾನದ ಕಡೆಯ ಎರಡು ದಶಕಗಳ ಬ್ಯಾಂಕಿಂಗ್ ಇತಿಹಾಸವನ್ನು ಕಟ್ಟಿಕೊಡುತ್ತದೆ. ಅದರಲ್ಲೂ ಅವರು ಬಳಸಿರುವ ಭಾಷೆಯು ಖಚಿತವಾಗಿಯೂ ನಿರ್ದುಷ್ಟವಾಗಿಯೂ ಇದೆ. ಬ್ಯಾಂಕಿಂಗಿನಂತಹ ಶಾಸ್ತ್ರವನ್ನು ಅಭಿವ್ಯಕ್ತಿಸಲು ಸೂಕ್ತವಾದ ಭಾಷಾ ಚೌಕಟ್ಟು ಅವರದ್ದು. ಇಂಗ್ಲೀಷ್ ಭಾಷೆಯಷ್ಟೇ ಸಮರ್ಥ. ಇದರ ಜೊತೆಗೆ ಸಾಹಿತ್ಯದ ಮೆರಗು. ಮತ್ತೆ ಮತ್ತೆ ಓದಬೇಕೆನಿಸುವ ಆಕರ್ಷಣೆ.

1990ರಲ್ಲಿ ಸಮನ್ವಯ ಸಮಿತಿಯು ಪ್ರಾಯೋಜಿಸಿದ್ದ "ಬ್ಯಾಂಕಿಂಗ ಪ್ರತಿಷ್ಠನ"ದಿಂದ ಎಚ್ಚೆಸ್ಕೆಯವರ ಸಂಪಾದಕೀಯಗಳು "ಬ್ಯಾಂಕು ಮತ್ತು ಭಾಷೆ" ಹಾಗೂ "ಬ್ಯಾಂಕಿಂಗ್ ಹೆಜ್ಜೆಯ ಗುರುತುಗಳು" ಎಂಬ ಪುಸ್ತಕದಲ್ಲಿ ಪ್ರಕಟವಾಗಿತ್ತು. ಆದರೆ ಅವು ಆಯ್ದ ಭಾಗಗಳು ಮಾತ್ರ.

ಸುಮಾರು 4 ತಿಂಗಳ ಹಿಂದೆ ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯ ಬರಹಗಳು ಹಾಗೂ ಅದರಲ್ಲಿ ಪ್ರಕಟವಾದ ಎಚ್ಚೆಸ್ಕೆಯವರ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವ ಅಭಿಲಾಷೆಯಾಯಿತು. ಹಲವು ಮಿತ್ರರ ಸಹಕಾರದಿಂದ ಬ್ಯಾಂಕಿಂಗ್ ಪ್ರಪಂಚದ ಹಿಂದಿನ ಸಂಚಿಕೆಗಳನ್ನು ಸಂಗ್ರಹಿಸಿದೆವು. ಆದರೆ ಕೆಲವು ಸಂಚಿಕೆಗಳು ನಮ್ಮ ಕೈಗೆ ಸಿಗಲಿಲ್ಲವೆಂಬುದು ವ್ಯಥೆಯಾಗಿದೆ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ "ಇನ್ನೂರನೇ ಸಾಹಿತ್ಯ ದಾಸೋಹ" ಹಾಗೂ "ಏಳನೆಯ ಎಚ್ಚೆಸ್ಕೆ ಬೆಳಕು" ಕಾರ್ಯಕ್ರಮವು ಈ ಸಂಪಾದಕೀಯ ಲೇಖನದ ಸಂಗ್ರಹದ ಪುಸ್ತಕ ರೂಪದ ಬಿಡುಗಡೆಗೆ ಸೂಕ್ತ ವೇದಿಕೆಯನ್ನು ಒದಗಿಸಿದೆ. ಎಚ್ಚೆಸ್ಕೆಯವರ ಸಂಪಾದಕೀಯಗಳನ್ನು ಸಂಗ್ರಹಿಸಿ ಪ್ರಕಟಣೆಗೆ ಸಿದ್ಧಪಡಿಸಲು ಅನುಮತಿಸಿದ ಸಮನ್ವಯ ಸಮಿತಿ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಪದಾಧಿಕಾರಿಗಳಿಗೆ ಧನ್ಯವಾದಗಳು. ಸಮನ್ವಯ ಸಮಿತಿ ಈ ಪುಸ್ತಕವನ್ನು ಪ್ರಕಟಿಸುತ್ತಿರುವುದು ಹೆಮ್ಮೆಯ ವಿಷಯ.

ಈ ಮೂಲಕ ಬ್ಯಾಂಕಿಂಗ್ ಪ್ರಪಂಚದಲ್ಲಿ ಪ್ರಾಚಾರ್ಯ ಎಚ್ಚೆಸ್ಕೆಯವರು ಬರೆದಿರುವ ಸಂಪಾದಕೀಯಗಳನ್ನು ಸಂಗ್ರಹಿಸಿ ಮುದ್ರಣಕ್ಕೆ ಅನುವು ದೊರೆತಿರುವುದಕ್ಕೆ ನಾವು ಕೃತಜ್ಞರಾಗಿದ್ದೇವೆ. ಸಂಪಾದಕೀಯಗಳ ಮರು ಓದು ನಮ್ಮ ಅರಿವಿನ ಅಂಚನ್ನು ವಿಸ್ತರಿಸಿದೆ.

ಸಂಬಂಧಿಸಿದ ಎಲ್ಲ ಮಿತ್ರರಿಗೂ, ಕನ್ನಡ ಪ್ರೇಮಿಗಳಿಗೂ ನಮ್ಮ ವಿಶ್ವಾಸ ಪೂರ್ವಕ ವಂದನೆಗಳು.

ಬೆಂಗಳೂರು
24/04/2022

ಎಚ್.ಎಲ್.ಗುರುಪ್ರಸಾದ್
ಬೆಂಶ್ರೀ ರವೀಂದ್ರ

ಕ್ರಮ ಸಂಖ್ಯೆ	ಸಂಚಿಕೆ	ಶೀರ್ಷಿಕೆ
01	ಜೂನ್ – 1980	ಸ್ವವಿಷಯ
		ಬ್ಯಾಂಕಿಂಗಿನ ಇತಿಹಾಸ – 1
02	ಡಿಸೆಂಬರ್– 1980	ಬ್ಯಾಂಕಿಂಗ್ ಪ್ರಪಂಚ–ಒಂದು ಅವಲೋಕನ
		ಬ್ಯಾಂಕಿಂಗಿನ ಇತಿಹಾಸ–2;
		ಅಕ್ಕಸಾಲಿಗರ ಸಾಹಸ
03	ಡಿಸೆಂಬರ್– 1981	ಎರಡು ವರ್ಷಗಳ ಸಾಧನೆ
04	ಏಪ್ರಿಲ್ – 1983	ನಮ್ಮ ಅಭಿಮಾನ
05	ಅಕ್ಟೋಬರ್–1983	ಗದ್ದಲವಿಲ್ಲದ ಕ್ರಾಂತಿ
06	ಏಪ್ರಿಲ್ –1984	ಮಹತ್ವದ ಬೆಳವಣಿಗೆಗಳು
		ಬ್ಯಾಂಕ್ ವ್ಯವಹಾರದಲ್ಲಿ ಕನ್ನಡ
		ಬ್ಯಾಂಕ್ ಗಣಕೀಕರಣ : ಒಟ್ಟು ನೋಟ
07	ಅಕ್ಟೋಬರ್–1984	ಏರು ಬೆಲೆ – ಕಠಿಣತಮ ಕಜ್ಜ
08	ಏಪ್ರಿಲ್ –1985	ಭಾರತದ ಬ್ಯಾಂಕಿಂಗ್ ಪರಿಸ್ಥಿತಿಯ
		ನೈಜ ಚಿತ್ರ
09	ಅಕ್ಟೋಬರ್–1985	ರಿಸರ್ವ್ ಬ್ಯಾಂಕ್ 50
		ಬ್ಯಾಂಕಿಂಗ್ ನಿಘಂಟು
10	ಮಾರ್ಚ್ – 1986	ತ್ರೈಮಾಸಿಕ
11	ಜೂನ್ – 1986	ಶೃಂಗೇರಿ ಕಮ್ಮಟ;
		ರಿಸರ್ವ್ ಬ್ಯಾಂಕ್ ಉದರಿ ನೀತಿ
12	ಸೆಪ್ಟೆಂಬರ್– 1986	ಗ್ರಾಮೀಣ ಬ್ಯಾಂಕುಗಳ ಭವಿಷ್ಯ
13	ಡಿಸೆಂಬರ್ –1986	ಮೇಳದ ಅಪಸ್ವರ
14	ಮಾರ್ಚ್ –1987	ಕನ್ನಡವ ಕಾಪಿಡಲು ಸಂಕಲ್ಪ ಬೋಧಿಸಯ್ಯ
15	ಸೆಪ್ಟೆಂಬರ್ –1987	ಒಂದು ಚಿಟಿಕೆ ಉಪ್ಪಿನೊಂದಿಗೆ
16	ಸೆಪ್ಟೆಂಬರ್ –1988	ಸಮನ್ವಯ ಸಮಿತಿ
17	ಡಿಸೆಂಬರ್ –1988	ಹೊಸ ಉದರಿ ನೀತಿ
18	ಮಾರ್ಚ್ – 1989	ಭಾರತೀಯ ಬ್ಯಾಂಕಿಂಗ್ – 2001
19	ಜೂನ್ – 1989	ಅಕ್ಷತ ಭೂಮಿ
20	ಸೆಪ್ಟೆಂಬರ್ –1989	ವಿದೇಶಿ ಬ್ಯಾಂಕುಗಳು
21	ಡಿಸೆಂಬರ್ –1989	ಹತ್ತು ಸಂಪುಟ
22	ಜೂನ್ –1990	ಬಜೆಟ್ ಮತ್ತು ಬ್ಯಾಂಕುಗಳು
23	ಸೆಪ್ಟೆಂಬರ್ –1990	ಬ್ಯಾಂಕಿಂಗ್ ಕಮ್ಮಟ – ನೂರು ದಿನ
24	ಡಿಸೆಂಬರ್ –1990	ಮೈಸೂರು ಬ್ಯಾಂಕ್ ಮತ್ತು ಕನ್ನಡ
25	ಮಾರ್ಚ್ – 1991	ಸೀಸರನ ಹೆಂಡತಿ
26	ಸೆಪ್ಟೆಂಬರ್ –1991	ಹೊಸ ಆರ್ಥಿಕ ನೀತಿ
27	ಮಾರ್ಚ್ –1992	ಬ್ಯಾಂಕಿಂಗ್ ವ್ಯವಸ್ಥೆಯ ಸುಧಾರಣೆ
28	ಜೂನ್ –1992	ಅಭೂತಪೂರ್ವ ವಂಚನೆಯ ಜಾಲ
29	ಸೆಪ್ಟೆಂಬರ್ – 1992	ಯೂರೋಪಿಯನ್ ಕರೆನ್ಸಿ – ಬಿಕ್ಕಟ್ಟು
30	ಡಿಸೆಂಬರ್ – 1992	ಬ್ಯಾಂಕುಗಳ ಅಸ್ಪಷ್ಟ ಭವಿಷ್ಯ
31	ಮಾರ್ಚ್ – 1994	ನಮ್ಮ ನಿಮ್ಮ ನಡುವೆ
32	ಸೆಪ್ಟೆಂಬರ್ – 1994	ಕಮ್ಮಟ – ಕಾಲು ಶತಕ
33	ಡಿಸೆಂಬರ್ – 1995	ನಡು ನೀರಿನಲ್ಲಿ ಬ್ಯಾಂಕಿಂಗ್ ಸುಧಾರಣೆ
34	ಡಿಸೆಂಬರ್ – 1997	ಸುಧಾರಣೆ– ಮೊದಲ ಮಜಲು
35	ಸೆಪ್ಟೆಂಬರ್ – 1998	ಬ್ಯಾಂಕಿಂಗ್ ಸುಧಾರಣೆ–ಇಂದು–ಮುಂದೆ
36	2000–2001	ಸಂಪಾದಕರ ಬಿನ್ನಹ

01

ಜೂನ್ 1980
ಸ್ವವಿಷಯ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ಬ್ಯಾಂಕಿಂಗ್ ಉದ್ಯಮಕ್ಕೆ ಸಂಬಂಧಿಸಿದಂತೆ ಹೊರಡಿಸಲಾಗುತ್ತಿರುವ ಈ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬ್ಯಾಂಕಿಂಗಿನಲ್ಲಿ ಆಸಕ್ತಿ ಇರುವ ಕನ್ನಡ ಬಂಧುಗಳಿಗೆ ಒಪ್ಪಿಸಲು ನಮಗೆ ಬಹಳ ಹರ್ಷವಾಗುತ್ತದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಭಾರತದ ಅತ್ಯಂತ ಪ್ರತಿಷ್ಠಿತ ವಾಣಿಜ್ಯ ಬ್ಯಾಂಕು, ದೇಶದ ಹಣಸ್ಥಿತಿಯ ಮೇಲೆ ಇದು ಬೀರಬಲ್ಲ ಪರಿಣಾಮ ಅಗಾಧ. ದೇಶದ ತ್ವರಿತ ಆರ್ಥಿಕಾಭ್ಯುದಯದ ಸಾಧನೆಯಲ್ಲಿ ಇದರ ಪಾತ್ರ ಅತ್ಯಂತ ಪ್ರಮುಖವಾದ್ದು. ಕೇಂದ್ರೀಯ ಬ್ಯಾಂಕಿಗೂ ವಾಣಿಜ್ಯ ಬ್ಯಾಂಕುಗಳಿಗೂ ನಡುವಣ ಮುಖ್ಯ ಕೊಂಡಿಯಾಗಿ, ಸಾಮಾಜಿಕ ಪರಿವರ್ತನೆಯ ವೇಗವರ್ಧಕವಾಗಿ ಈ ಬ್ಯಾಂಕು ಅನೇಕ ವಿಚಾರಗಳಲ್ಲಿ ಇತರ ಬ್ಯಾಂಕುಗಳಿಗೆ ಮೇಲ್ಪಂಕ್ತಿಯಾಗಿದೆ. ಕರ್ನಾಟಕ ರಾಜ್ಯದಲ್ಲಿರುವ ಈ ಬ್ಯಾಂಕಿನ ಕಾರ್ಯಾಲಯಗಳಲ್ಲಿ ಅಭಿಮಾನಿ–ಉತ್ಸಾಹಿಗಳ ಒಂದು ಸಮರ್ಥ ತಂಡವೇ ಇರುವುದು ಹೆಮ್ಮೆಯ ಸಂಗತಿ. ಬ್ಯಾಂಕು ಇರುವುದು ಎಲ್ಲರಿಗಾಗಿ. ಆದ್ದರಿಂದ ಹತ್ತು–ಸಮಸ್ತರ ಭಾಷೆಯಲ್ಲೇ ಇದರ ವ್ಯವಹಾರ ನಡೆಯಬೇಕೆಂಬುದು ಇವರ ಆಕಾಂಕ್ಷೆ. ಹಾಗೆ ಆದಾಗಲೇ ಬ್ಯಾಂಕು ನಿಜವಾದ ಅರ್ಥದಲ್ಲಿ ಮಾರ್ಗದರ್ಶಿಯಾಗುತ್ತದೆ. ಅಗ್ರಪೂಜೆಗೆ ಅರ್ಹವಾಗುತ್ತದೆ. ಮನ್ನಿಸಲಿ, ಯಾರು ಬಿಡಲಿ, ದೇಶವನ್ನು ಕಟ್ಟುವ ಕೆಲಸದಲ್ಲಿ ಸಾರ್ಥಕವಾದ ಪಾತ್ರ ವಹಿಸಿದ ಕೃತಕೃತ್ಯತೆಯ ಭಾವ ಉಂಟಾಗುತ್ತದೆ.

ಈ ಕನಸನ್ನು ನನಸು ಮಾಡುವ ಹಾದಿಯಲ್ಲಿ ಮೊದಲ ಹೆಜ್ಜೆಯಾಗಿ ಬ್ಯಾಂಕಿನ ಕನ್ನಡಿಗ ನೌಕರರು ಹಲವು ವರ್ಷಗಳ ಹಿಂದೆ ತಂತಮ್ಮ ಕಛೇರಿಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸಿದರು. "ಸಿಬ್ಬಂದಿಯಲ್ಲಿ ಕನ್ನಡದ ಬಗ್ಗೆ ಜಾಗೃತಿಯನ್ನೂ ಬ್ಯಾಂಕಿನಲ್ಲಿ ಕನ್ನಡದ ವಾತಾವರಣವನ್ನೂ ಮೂಡಿಸುವ ಉದ್ದೇಶದಿಂದ, ಮತ್ತು ಸಂಸ್ಕೃತಿಯನ್ನು ಅರಿಯುವ ಪ್ರಯತ್ನವಾಗಿ" ಇವು ಸ್ಥಾಪಿತವಾದುವು. "ಈ ಎಲ್ಲ ಸಂಘಗಳ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಲು ಕೈಗೊಂಡ ಕಾರ್ಯಗಳನ್ನು ಇಡಿಯಾಗಿ ಸಾಧಿಸಲು," ಇವುಗಳ ಚಟುವಟಿಕೆಗಳಲ್ಲಿ ಸಾಮರಸ್ಯವನ್ನು ಸ್ಥಾಪಿಸಲು ಈ ಸಂಘಗಳೆಲ್ಲವನ್ನೂ ಪ್ರತಿನಿಧಿಸುವ ಸಮನ್ವಯ ಸಮಿತಿಯೊಂದು ರೂಪಿತವಾಯಿತು. "ಕನ್ನಡ ಸಾಹಿತ್ಯ, ಕಲೆ, ಜಾನಪದ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ, ಉಪನ್ಯಾಸ ಇತ್ಯಾದಿಗಳನ್ನು ಏರ್ಪಡಿಸುವುದು, ಶಾಖಾ ಕನ್ನಡ ಸಂಘಗಳ

ಕಾರ್ಯಕ್ರಮಗಳಿಗೆ ಸಲಹೆ ಸಹಕಾರ ನೀಡುವುದು, ಕನ್ನಡದಲ್ಲಿ ಆಸಕ್ತಿ ಇರುವವರಿಗೆ ಆ ಭಾಷೆ ಸಾಹಿತ್ಯಗಳಲ್ಲಿ ತರಬೇತಿ ದೊರಕಿಸಿ ಕೊಡುವುದು," ಒಟ್ಟಿನಲ್ಲಿ "ಕನ್ನಡ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ತೀವ್ರಗೊಳಿಸುವುದು" ಮಾತ್ರವೇ ಅಲ್ಲದೆ, "ಬ್ಯಾಂಕಿಂಗ್ ವಿಷಯದ ಬಗ್ಗೆ ಒಂದು ನಿಯತಕಾಲಿಕವನ್ನು ಪ್ರಕಾಶಿಸುವುದೂ, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಾರಿ ಭಾಷಿಕ ಶಬ್ದಕೋಶವನ್ನೂ ಗ್ರಂಥಗಳನ್ನೂ ಬರೆಯಿಸಿ ಪ್ರಕಟಿಸುವುದೂ" ಈ ಸಮಿತಿಯ ಉದ್ದೇಶ. ಬ್ಯಾಂಕಿನ ನಗರ ಶಾಖೆ ಪ್ರಕಟಿಸುತ್ತಿರುವ ಮಂದಾರ' ದಲ್ಲಿ ಸದಸ್ಯರ ಸೃಷ್ಟ್ಯಾತ್ಮಕ ಬದುಕಿಗೆ ಅಭಿವ್ಯಕ್ತಿ ದೊರಕಿದೆ. ಬ್ಯಾಂಕಿಂಗನ್ನು ಕುರಿತಂತೆ ಅದರಲ್ಲಿ ಪ್ರಕಟವಾಗಿರುವ ಹಲವು ಲೇಖನಗಳು ತಕ್ಕಮಟ್ಟಿಗೆ ಮೇಲೆ ಹೇಳಿದ ಉದ್ದೇಶವನ್ನು ಪೂರೈಸುತ್ತದೆ. ಬ್ಯಾಂಕಿಂಗಿಗೇ ಮೀಸಲಾದ, ಇದರಲ್ಲಿ ಕಾರ್ಯನಿರತರಾದವರಿಗೂ, ಆಸಕ್ತಿಯುಳ್ಳ ಸಾರ್ವಜನಿಕರಿಗೂ ಬ್ಯಾಕಿಂಗ್ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವ ಪತ್ರಿಕೆಯೊಂದನ್ನು ಹೊರಡಿಸಬೇಕೆಂಬ ಆಕಾಂಕ್ಷೆ ಇದೀಗ ಪೂರೈಸುತ್ತಿದೆ. ಇದು ನಮಗೆ ಸಂತೋಷ ನೀಡುವ ಸಂಗತಿ.

ಹಣ ಮತ್ತು ಬ್ಯಾಂಕಿಂಗಿನ ಎಲ್ಲ ಮುಖಗಳ, ಎಲ್ಲ ಹಿತಗಳ ಪಡಿನೆಳಲು ಇದಾಗಬೇಕು ಎಂಬುದು ನಮ್ಮ ಆಸೆ. ಭಾರತದಲ್ಲೂ ಕರ್ನಾಟಕದಲ್ಲೂ ಈ ಉದ್ಯಮ ಸಾಗಿರುವ ಬಗೆ, ಬ್ಯಾಂಕು ರಾಷ್ಟ್ರೀಕರಣದ ಸಾಧಕ–ಬಾಧಕಗಳು, ವಿಶ್ವ ಹಣ ಸಮಸ್ಯೆ, ಬ್ಯಾಂಕಿಂಗ್ ಉದ್ಯಮದಲ್ಲಿರುವವರು ಎದುರಿಸಬೇಕಾಗಿರುವ ಸಮಸ್ಯೆಗಳು, ಗ್ರಾಹಕರ ಕುಂದುಕೊರತೆಗಳು, ಬ್ಯಾಂಕಿಂಗ್ ಕಾನೂನು ಮತ್ತು ಆಚರಣೆ, ಸಮಾಜ ಪರಿವರ್ತನೆ ಹಾಗೂ ಆರ್ಥಿಕ ಪುರೋಗಮನಕ್ಕಾಗಿ ಬ್ಯಾಂಕುಗಳು ಕೈಗೊಂಡಿರುವ ಕಾರ್ಯಕ್ರಮಗಳ ವಿಶ್ಲೇಷಣೆ ಮುಂತಾಗಿ ನಾನಾ ವಿಷಯಗಳನ್ನು ಕುರಿತ ಲೇಖನಗಳು ಇಲ್ಲಿವೆ. ಕನ್ನಡದಲ್ಲೇ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ಅಗತ್ಯವಾದ ಶಬ್ದ ಸಂಪತ್ತನ್ನು ಒದಗಿಸಲು ಪತ್ರಿಕೆ ಪ್ರಯತ್ನಿಸಿದೆ. ಹಣ ಮತ್ತು ಬ್ಯಾಂಕಿಂಗನ್ನು ಕುರಿತ ಪ್ರಮುಖ ಪರಿಕಲ್ಪನೆಗಳನ್ನೆಲ್ಲ ಕನ್ನಡದಲ್ಲಿ ಅಭಿವ್ಯಕ್ತಿಸುವುದು ಸಾಧ್ಯವೆಂಬ ಧೈರ್ಯವನ್ನೂ ಈ ಲೇಖನಗಳು ಮೂಡಿಸುತ್ತವೆ. ಬ್ಯಾಂಕಿಂಗಿನ ಇತಿಹಾಸದ ಪರಿಚಯ ಮಾಡಿಕೊಡುವುದು ಪತ್ರಿಕೆಯ ಉದ್ದೇಶ. ಈ ನಿಟ್ಟಿನಲ್ಲಿ ಮೊದಲನೆಯ ಲೇಖನ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಯಾವುದೇ ಪತ್ರಿಕೆಯಾಗಲಿ, ಅದೊಂದು ಸಮುದಾಯ ಚಟುವಟಿಕೆ. ಬ್ಯಾಂಕಿಂಗ್ ಕುರಿತ ಪತ್ರಿಕೆಯಂತೂ, ಎತ್ತರದ ವೇದಿಕೆಯ ಮೇಲೆ ನಿಂತು ಬಿತ್ತರಿಸಿದ ಏಕಮುಖ ವಾಣಿಯಾಗಲಾರದು. ಲೇಖಕರು, ಸಂಪಾದಕರು, ಓದುಗರು – ಇವರ ನಡುವೆ ಭಾವಸಂಹವನ

ನಡೆಯುವಂತಾಗಬೇಕು. ಬ್ಯಾಂಕಿಂಗಿನಲ್ಲೂ ಕನ್ನಡದಲ್ಲೂ ಆಸಕ್ತರಾದವರೆಲ್ಲರೂ ಇದನ್ನು ತಮ್ಮದೆಂದು ಪೋಷಿಸಬೇಕು. ತಮಗೆ ಅನಿಸಿದ್ದನ್ನು ತಿಳಿಸಬೇಕು. ಪತ್ರಿಕೆಯ ಉತ್ತಮಿಕೆಗೆ ನೆರವಾಗಬೇಕು. ಆಗ ಪತ್ರಿಕೆಯ ಉದ್ದೇಶ ಸಾರ್ಥಕವಾಗುತ್ತದೆ.

ಈ ಪತ್ರಿಕೆಯ ಕೆಲಸದಲ್ಲಿ ಸಹಕಾರ ಸಹಾಯ ನೀಡುತ್ತಿರುವವರು ಅನೇಕರು. ದಕ್ಷರೂ ಅನುಭವಿಗಳೂ, ವಿದ್ವಾಂಸರೂ ಆದವರಿಂದ ಕೂಡಿದ ಸಲಹಾ ಮಂಡಲಿಯ ಮಾರ್ಗದರ್ಶನವನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯಬೇಕು. ಸಮನ್ವಯ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಇದಕ್ಕಾಗಿ ಬಹಳವಾಗಿ ದುಡಿದಿದ್ದಾರೆ. ದಕ್ಷರಾದ ಮುದ್ರಕರು ದೊರಕಿರುವುದು ನಮ್ಮ ಅದೃಷ್ಟ. ಅನೇಕ ಹಿರಿಯ ಸಂಸ್ಥೆಗಳೂ ಉದ್ಯಮಗಳೂ ಜಾಹೀರಾತನ್ನು ಕೊಟ್ಟು ಪ್ರೋತ್ಸಾಹಿಸಿವೆ. ಬ್ಯಾಂಕಿಂಗ್ ಆಸಕ್ತರೆಲ್ಲರೂ ಈ ಪತ್ರಿಕೆಯನ್ನು ಪ್ರೀತಿಯಿಂದ ಸ್ವೀಕರಿಸುವರೆಂಬ ಭರವಸೆ ನಮಗೆ ಇದೆ. ಇವರೆಲ್ಲರ ಬೆಂಬಲ ಸದಾಶಯಗಳಲ್ಲಿ ಭರವಸೆ ಇಟ್ಟು ಈ ಪತ್ರಿಕೆಯ ರಥೋತ್ಸವ ಆರಂಭವಾಗಿದೆ. ಇದನ್ನು ನೆಲೆಯತ್ತ ಎಳೆಯುವುದು ನಿಮ್ಮೆಲ್ಲರ ಹೊಣೆ. ಏಕೆಂದರೆ ಇದು ನಿಮ್ಮದೇ.

ಬ್ಯಾಂಕಿಂಗಿನ ಇತಿಹಾಸ – 1 ಆರಂಭದ ಕುರುಹುಗಳು

ಪ್ರಾಚೀನ ಕಾಲದಲ್ಲಿ ಬೇರು ಬಿಟ್ಟು ಮಧ್ಯ ಯುಗದಲ್ಲಿ ಜೀವಲಕ್ಷಣಗಳನ್ನು ಗಳಿಸಿ, ಆಧುನಿಕ ಯುಗದಲ್ಲಿ ವೈವಿಧ್ಯಮಯವಾಗಿ ಬೆಳೆದಿರುವ ಬ್ಯಾಂಕಿಗಿನ ಕಥೆ. ಧಾರಾವಾಹಿಯಾಗಿ ಪ್ರಕಟವಾಗುವ ಲೇಖನದ ಮೊದಲ ಕಂತು ಇದು.

ಬ್ಯಾಂಕ್ ಎಂದರೆ ಏನು ಎಂಬುದನ್ನು ಕೆಲವೇ ಮಾತುಗಳಲ್ಲಿ ವಿವರಿಸುವುದು ಸುಲಭವಲ್ಲ. ಬ್ಯಾಂಕ್ ಎಂದೊಡನೆಯೇ ಹಲವಾರು ಮಂದಿ ಹಣ ಕೊಡುತ್ತಿರುವ, ಪಡೆಯುತ್ತಿರುವ, ಮಿರುಮಿರುಗುವ ಮರದ ಕಟಕಟೆಗಳಾಚೀಚೆ ಜನರು ಕಲೆತು ಹಣಕ್ಕೆ ಸಂಬಂಧಿಸಿದ ಮಾತುಕತೆ ನಡೆಸುತ್ತಿರುವ ಪತ್ರಗಳಿಗೆ ಸಹಿ ಹಾಕುತ್ತಿರುವ, ಅವನ್ನು ಕೊಡುತ್ತಿರುವ ಅಥವಾ ತೆಗೆದುಕೊಳ್ಳುತ್ತಿರುವ ಚಿತ್ರ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಬ್ಯಾಂಕುಗಳು ಈ ಯುಗದ ಅತ್ಯಂತ ಪ್ರಮುಖ ಸಂಸ್ಥೆಗಳು. ಕೈಗಾರಿಕೆ, ವಾಣಿಜ್ಯ, ಆಡಳಿತ, ಅಭಿವೃದ್ಧಿ, ಎಲ್ಲಕ್ಕೂ ಮೂಲಭೂತವಾಗಿರುವ ಹಣದ ವ್ಯವಹಾರವೇ ಬ್ಯಾಂಕುಗಳ ಮುಖ್ಯ ಚಟುವಟಿಕೆ. ಅವು ವಾಸ್ತವವಾಗಿ ಹಣದ ಅಂಗಡಿಗಳು. ಹಣವೇ ಅವುಗಳ ವ್ಯಾಪಾರ ಸರಕು. ಉಳ್ಳವರಿಂದ ಹಣವನ್ನು ಪಡೆದು ಕೊಂಡು ಅವರಿಗೆ ಋಣಿಗಳಾಗುವುದು. ಇಲ್ಲ'ದವರಿಗೆ ಅದನ್ನು ಕೊಟ್ಟು ಅವರನ್ನು ಋಣಿಗಳನ್ನಾಗಿ ಮಾಡಿಕೊಳ್ಳುವುದು, ತಾವು ಋಣಿಗಳಾಗಿ ಕೊಟ್ಟ ಬಡ್ಡಿಯ ಹಣವನ್ನೂ ವ್ಯವಹಾರದ ಖರ್ಚುಗಳನ್ನೂ ಋಣಿಗಳಿಂದ ಪಡೆದ ಬಡ್ಡಿಯ ಹಣದಿಂದ ಕಳೆದು ಉಳಿದದ್ದನ್ನು ಲಾಭವೆಂದು ಪರಿಗಣಿಸುವುದು – ಇವು ಸ್ಥೂಲವಾಗಿ ಬ್ಯಾಂಕುಗಳ ಮುಖ್ಯ ವ್ಯವಹಾರಗಳು.

ಆಧುನಿಕ ಬ್ಯಾಂಕಿನ ಸ್ವರೂಪ

ಇತರ ವ್ಯಾಪಾರಿಗಳು ತಮ್ಮ ಬಂಡವಾಳದ ಹಣದಿಂದ ಸರಕನ್ನು ಕೊಂಡು, ಅದನ್ನು ಮಾರಾಟ ಮಾಡಿ ಮತ್ತೆ ಹಣವಾಗಿ ಪರಿವರ್ತಿಸಿಕೊಳ್ಳುತ್ತಾರೆ. ಇವರಿಗೆ ಹಣವೆಂಬುದು ವ್ಯವಹಾರದ ಮಾಧ್ಯಮ, ಸರಕು ಸೇವೆಗಳ ಮೌಲ್ಯವನ್ನಳೆಯುವ ಸಾಧನ, ಕೊಡಬೇಕಾದ ಅಥವಾ ಬರಬೇಕಾದ ಬಾಕಿಯನ್ನು ನಮೂದಿಸುವ ಉಪಾಯ ಇವರು ಮೌಲ್ಯವನ್ನು ಶೇಖರಿಸಿ ಇಡುವುದು ಹಣದ ರೂಪದಲ್ಲಿ. ಆದರೆ ಬ್ಯಾಂಕು ಹಣದಲ್ಲೇ ನೇರವಾಗಿ ವ್ಯವಹರಿಸುತ್ತದೆ. ಇತರ ವ್ಯಾಪಾರಿಗಳ ವ್ಯವಹಾರ ಸಾಗಲು ಅವರ ಸ್ವಂತ ಬಂಡವಾಳವೇ ಪ್ರಧಾನ ಸಾಧನವಾದರೆ, ಆಧುನಿಕ ಬ್ಯಾಂಕಿನ ಸ್ವಂತ ಬಂಡವಾಳ ಅಲ್ಪ. 'ಉಳ್ಳ'ವರಿಂದ ಅದು ಪಡೆಯುವ ಹಣ ಅಗಾಧ. ಈ ಹಣ ಹಲವರಿಂದ ಠೇವಣಿಗಳ ರೂಪದಲ್ಲಿ ಅಲ್ಪಾಂಶಗಳಲ್ಲಿ ಹರಿದುಬಂದು ಬ್ಯಾಂಕಿನಲ್ಲಿ ಒಟ್ಟೈಸುತ್ತದೆ.

ಇಲ್ಲದವರಿಗೆ, ಹಣ ಬೇಕಾದವರಿಗೆ, ಈ ಠೇವಣಿಗಳ ಹಣವನ್ನು ಬ್ಯಾಂಕು ಎರವಲಾಗಿ ಕೊಡುತ್ತದೆ. ಆದ್ದರಿಂದ ಠೇವಣಿಗಳ ರೂಪದಲ್ಲಿ ಹಣದ ಸಂಗ್ರಹಣೆ, ಸಾಲಗಳ ರೂಪದಲ್ಲಿ ಅದರ ವಿತರಣೆ – ಇವು ಬ್ಯಾಂಕಿನ ಮೂಲಭೂತ ಕಾರ್ಯಭಾರಗಳೆನ್ನಬಹುದು.

ಬ್ಯಾಂಕು ಎಂಥವರಿಂದ ಹಣವನ್ನು ಠೇವಣಿಗಳ ರೂಪದಲ್ಲಿ ಸಂಗ್ರಹಿಸುತ್ತದೆ, ಎಂಥವರಿಗೆ ಇದನ್ನು ಸಾಲವಾಗಿ – ಉದರಿಯಾಗಿ – ವಿತರಿಸುತ್ತದೆ ಎಂಬುದು ಒಂದು ಸಮುದಾಯದ ದೃಷ್ಟಿಯಿಂದ ವಿಶೇಷ ಪ್ರಾಮುಖ್ಯಗಳಿಸುತ್ತದೆ. ಬ್ಯಾಂಕಿಗೂ ಉಳಿತಾಯಕ್ಕೂ ನಿಕಟ ಸಂಬಂಧ ಇರುವುದಾದರೂ, ಅದು ಉಳಿತಾಯವನ್ನು ಬಹಳವಾಗಿ ಉತ್ತೇಜಿಸುವುದಾದರೂ, ಅದಕ್ಕೆ ಉಳಿತಾಯವೇ ಮುಖ್ಯವಲ್ಲ. ಬ್ಯಾಂಕಿಗೂ ಉದರಿಗೂ ಬಲು ಹತ್ತಿರದ ಸಂಬಂಧವೆಂಬುದು ನಿಜ. ಉದರಿಯೇ ಬ್ಯಾಂಕಿನ ಪ್ರಮುಖ ಆದಾಯ ಮೂಲ. ಆದರೂ ಅದು ಉದರಿಯನ್ನು – ಸಾಲವನ್ನು – ಮುಂಗಡವನ್ನು – ಪತ್ತನ್ನು – ಎಂಥವರಲ್ಲಿ ಹಂಚುತ್ತದೆ ಎಂಬದನ್ನೂ ಕಡೆಗಣಿಸುವಂತಿಲ್ಲ. ಬ್ಯಾಂಕು ನೀಡುವ ಉದರಿಯ ವಿತರಣೆಯಾಗುವುದು ಸಾಮಾನ್ಯವಾಗಿ ಆರ್ಥಿಕತೆಯ ಅಭ್ಯುದಯಕ್ಕಾಗಿ, ಉತ್ಪಾದಕ ಕಾರ್ಯಗಳಿಗಾಗಿ. ಪ್ರಾಮುಖ್ಯ ಪ್ರಾಪ್ತವಾಗಬೇಕಾಗುತ್ತದೆ.

ಹಣವನ್ನು ಸಂಗ್ರಹಿಸುವ, ವಿತರಿಸುವ, ಋಣವನ್ನು ಪಡೆದು ಅದನ್ನು ಇತರರಿಗೆ ನೀಡುವ ಬ್ಯಾಂಕು ಆಧುನಿಕ ಪ್ರಪಂಚದಲ್ಲಿ ವಿಶ್ವರೂಪಸದೃಶವಾದ ರೂಪವನ್ನೂ, ಆಕಾರವನ್ನೂ ತಳೆದಿರುವುದಕ್ಕೆ ಕಾರಣವಾದ ಇನ್ನೊಂದು ಅಂಶವನ್ನು ಇಲ್ಲಿ ಗಮನಿಸಬೇಕು. ಆಧುನಿಕ ಬ್ಯಾಂಕಿಂಗ್ ವ್ಯವಹಾರ ಮೇಲೆ ಕಾಣಿಸುವಷ್ಟು ಸರಳವೇನೂ ಅಲ್ಲ. ಸ್ವಂತ ಬಂಡವಾಳದ ಹಣಕ್ಕಿಂತ ಹಲವು ಮಡಿ ಅಧಿಕವಾಗಿ ಸಂಗ್ರಹಿಸಿದ ಹಣವನ್ನು ಅದರ ಅಗತ್ಯವಿರುವವರಲ್ಲಿ ವಿತರಣೆ ಮಾಡುವ ಪ್ರಕ್ರಿಯೆಯಲ್ಲಿ ಬ್ಯಾಂಕು ವಾಸ್ತವವಾಗಿ ಹಣದ ಸೃಷ್ಟಿಕಾರ್ಯವನ್ನೂ ಮಾಡುತ್ತದೆ. ಬ್ಯಾಂಕ್ ವ್ಯವಹಾರದ ಅಂತರಂಗವನ್ನು ಹೊಕ್ಕು ನೋಡಿದವರಿಗೆ ಈ ಅದ್ಭುತವ್ಯಾಪಾರದ ಅರಿವಾಗುತ್ತದೆ. ದೇಶದ ಕೇಂದ್ರೀಯ ಬ್ಯಾಂಕು ನೋಟುಗಳನ್ನು ಅಚ್ಚು ಮಾಡಿ ಚಲಾವಣೆಗೆ ನೀಡುವುದು ನೇರವಾದ ಹಣಸೃಷ್ಟಿ. ಆದರೆ ಇತರ ಬ್ಯಾಂಕುಗಳಿಗೆ ಈ ಅಧಿಕಾರ ಇರುವುದಿಲ್ಲ. ಅವು ಪರೋಕ್ಷವಾಗಿ ಹಣವನ್ನು ಸೃಷ್ಟಿ ಮಾಡುತ್ತವೆ. ಅವು ಪಡೆಯುವ ಠೇವಣಿಗಳ ಹಾಗೂ ಅವು ತಂದಿರುವ ಬಂಡವಾಳದ ಒಟ್ಟು ಹಣಕ್ಕಿಂತ ಹಲವು ಮಡಿ ಅಧಿಕವಾಗಿ ಅವು ಉದರಿ ನೀಡುತ್ತವೆ. ಬ್ಯಾಂಕಿನಿಂದ ಸಾಲ ಪಡೆದವರೆಲ್ಲರೂ ಆ ಹಣವನ್ನು ಕೂಡಲೇ ಪಡೆದುಕೊಂಡು ಹೋಗಿ ಬಿಡುವುದಿಲ್ಲ. ಬಹುತೇಕ

ಸಂದರ್ಭಗಳಲ್ಲಿ ಬ್ಯಾಂಕು ಮಾಡುವುದೆಂದರೆ, ಋಣಿಯ ಖಾತೆಗೆ ಆ ಹಣವನ್ನು ದಾಖಲಿಸುತ್ತದೆ. ತಮಗೆ ಬೇಕೆನಿಸಿದಾಗ ಆ ಹಣವನ್ನು ಚೆಕ್ ಮೂಲಕ ತೆಗೆದುಕೊಳ್ಳಬಹುದು, ಅಥವಾ ಯಾರಿಗಾದರೂ ಅದನ್ನು ಪಾವತಿ ಮಾಡಬಹುದು ಎಂಬ ಭರವಸೆ ಗ್ರಾಹಕನಿಗೆ ಇರುವುದರಿಂದ ಅವನು ಪಡೆದ ಸಾಲದ ಹಣವನ್ನು ಬ್ಯಾಂಕಿನಲ್ಲೇ ಬಿಡುತ್ತಾನೆ. ಬ್ಯಾಂಕು ಅವನ ದೃಷ್ಟಿಯಲ್ಲಿ ಒಂದು ಬೃಹತ್ ತಿಜೋರಿ. ಅವನು ಮಾಡುವ ಹಣವಹಿವಾಟುಗಳನ್ನೆಲ್ಲ ದಾಖಲಿಸಿಕೊಳ್ಳುವ ಕೆಲಸವನ್ನು ಕೂಡ ಈ ತಿಜೋರಿ ಮಾಡುತ್ತದೆ. ಗ್ರಾಹಕರು ತಮ್ಮಲ್ಲಿ ಇಟ್ಟಿರುವ ಈ ಬಗೆಯ ಭರವಸೆಯಿಂದಾಗಿಯೇ ಬ್ಯಾಂಕುಗಳು ಇಂದು ತಮಗೆ ಠೇವಣಾತಿಯಾಗಿ ನಗದಿನ ರೂಪದಲ್ಲಿ ಬರುವ ಹಣಕ್ಕಿಂತ ಹಲವು ಮಡಿ ಅಧಿಕವಾಗಿ ಉದರಿ ನೀಡುವುದು ಸಾಧ್ಯವಾಗಿದೆ. ಎಂದರೆ ಅಷ್ಟರಮಟ್ಟಿಗೆ ಬ್ಯಾಂಕುಗಳು ಹಣವನ್ನು ಸೃಷ್ಟಿ ಮಾಡಿದಂತೆಯೇ ಆಗುತ್ತದೆ. ಬ್ಯಾಂಕುಗಳಿಗೆ ಹಣಸೃಷ್ಟಿಯ ಅಗಾಧ ಸಾಮರ್ಥ್ಯ ಇರುವುದರಿಂದಲೇ ಸಾಮಾಜಿಕವಾಗಿ ಇಂದು ಅವಕ್ಕೆ ವಿಶೇಷ ಪ್ರಾಮುಖ್ಯ ಪ್ರಾಪ್ತವಾಗಿದೆ. ಅವನ್ನು ಸಮಾಜದ ಹಿತಕ್ಕೆ ಅನುಗುಣವಾಗಿ ನಿಯಂತ್ರಣದಲ್ಲಿಡುವ ಆವಶ್ಯಕತೆಯೂ ಉದ್ಭವಿಸಿದೆ.

ಆಧುನಿಕ ಬ್ಯಾಂಕಿನ ಪೂರ್ವಜರು

ಈ ಮಾತು ಹೇಗಾದರೂ ಇರಲಿ, ಆಧುನಿಕ ಬ್ಯಾಂಕುಗಳಿಗೂ ಹಣವನ್ನುಸಾಲವಾಗಿ ಕೊಟ್ಟು ಬಡ್ಡಿ ಸಂಪಾದಿಸುವ ಲೇವಾದೇವಿಗಾರನಿಗೂ ಬಹಳ ವ್ಯತ್ಯಾಸಗಳಿವೆ. ಅಧುನಿಕ ಬ್ಯಾಂಕುಗಳು ಹಳೆಯ ಕಾಲದ ಲೇವಾದೇವಿಗಾರನಿಂದ ಬಹು ಮುಂದೆ ನಡೆದುಬಂದಿದೆ. ಬ್ಯಾಂಕುಗಳ ಇತಿಹಾಸವನ್ನು ಕುರಿತು ಹೇಳುವಾಗ ಅದನ್ನು ಅತ್ಯಂತ ಪುರಾತನಕಾಲಕ್ಕೆ ತೆಗೆದುಕೊಂಡು ಹೋಗುವುದು ವಾಡಿಕೆಯಾದರೂ, ಇಂದು ನಾವು ಕಾಣುತ್ತಿರುವಂಥ ಬ್ಯಾಂಕಿಂಗ್, ಬಹುತೇಕ ಹತ್ತನೆಯ ಶತಮಾನದ ಕೂಸು ಎಂಬುದನ್ನು ಮರೆಯಬಾರದು. ಅಧುನಿಕ ಬ್ಯಾಂಕಿಂಗಿನ, ವ್ಯವಹಾರದ ಒಂದೊಂದು ಅಂಶವೂ ಅಣುಸ್ವರೂಪದಲ್ಲಿ ಹಿಂದಿನ ಕಾಲದಲ್ಲಿ ಇದ್ದದ್ದನ್ನು ಎತ್ತಿ ತೋರಿಸಬಹುದಾಗಲಿ, ಅದು ಇಂದಿನ ರೂಪ ತಳೆದದ್ದು ಈಚೆಗೆ ಮಾತ್ರವೇ ಎಂಬುದ ನಿರ್ವಿವಾದ. ಹಣವನ್ನು ಸಾಲವಾಗಿ ನೀಡುವುದು ಆಧುನಿಕ ಬ್ಯಾಂಕಿನ ಒಂದು ಪ್ರಮುಖ ಕಲಾಪವಾದ್ದರಿಂದ ಪ್ರಾಚೀನ ಲೇಪಾದೇವಿಗಾರನನ್ನು ಆಧುನಿಕ ಬ್ಯಾಂಕಿನ ಒಬ್ಬ ಮುತ್ತಜ್ಜ ಎಂದು ಹೇಳುವುದುಂಟು. ಮಧ್ಯಯುಗದ ಬೃಹದ್ ವರ್ತಕ ಇಂದಿನ ಬ್ಯಾಂಕುಗಳಂತೆಯೇ ಅಂತರಾಷ್ಟ್ರೀಯ ಖ್ಯಾತಿ ಪಡೆದಿದ್ದುದರಿಂದ ಅವನನ್ನೂ ಈ ವಂಶದ ಒಬ್ಬ ಹಿರೀಕನೆಂದು ಹೇಳುವುದು ರೂಢಿಯಾಗಿದೆ. ಇಂಗ್ಲೆಂಡಿನ ಹಳೆಯ ಕಾಲದ

ಅಕ್ಕಸಾಲಿಗನೇ ಆಧುನಿಕ ಠೇವಣಿ ಹಾಗೂ ಚೆಕ್ಕು ಪದ್ಧತಿಗಳ ಪ್ರವರ್ತಕನೆಂದು ಪರಿಗಣಿಸಲಾಗಿರುವುದರಿಂದ ಅವನಿಗೂ ಆಧುನಿಕ ಬ್ಯಾಂಕಿಂಗಿನ ವಂಶವೃಕ್ಷದಲ್ಲಿ ಒಂದು ಉನ್ನತ ಸ್ಥಾನವಿದೆಯೆನ್ನಲಾಗಿದೆ. ಈ ಬಗೆಯಾಗೆಲ್ಲ ವಿಚಾರಲಹರಿಯನ್ನು ಹರಿಯಬಿಡುವುದು ವ್ಯರ್ಥಾಲಾಪವೇನೂ ಆಗಲಾರದಾದರೂ, ಆಧುನಿಕ ಬ್ಯಾಂಕಿಂಗು ಆಧುನಿಕ ಬ್ಯಾಂಕಿಂಗೇ, ಅದಕ್ಕೆ ಅದೇ ಸಾಟಿ.

ಪ್ರಾಚೀನ ಕಾಲದಲ್ಲಿ

ಹಣಾಧಾರಿತವಾದ ಆಧುನಿಕ ಅರ್ಥ ವ್ಯವಸ್ಥೆಯಲ್ಲಿ ಬ್ಯಾಂಕಿಂಗ್ ವಿಕಾಸ ಹೊಂದಿದೆಯೆಂಬುದಂತೂ ನಿಜ. ಹಣವಿಲ್ಲದ ಕಾಲದಲ್ಲಿ, ಅದಿಲ್ಲದಂಥ ವ್ಯವಸ್ಥೆಯಲ್ಲಿ ಬ್ಯಾಂಕು ಹೊಮ್ಮಿರಲಾರದೆಂಬುದು ಕೂಡ ಸ್ಪಷ್ಟ. ಹಣ ಇದ್ದೂ ಅದು ಪ್ರಧಾನವಾಗಿರದಿದ್ದಾಗ ಬ್ಯಾಂಕಿಂಗ್ ಎಂದು ಹೆಸರಿಸಬಹುದಾದ ವ್ಯವಹಾರ ನಡೆದಿರಲಾರದು. ಆಧುನಿಕ ಬ್ಯಾಂಕಿಂಗ್ ಮುಖ್ಯವಾಗಿ ಪಾಶ್ಚಾತ್ಯ ಅರ್ಥವ್ಯವಸ್ಥೆಯ ಕೈಗೂಸು; ಅಂತೆಯೇ ಅದು ಆ ವ್ಯವಸ್ಥೆಯ ನಿರ್ಮಾತೃ ಕೂಡ ಎಂಬುದೂ ನಿಸ್ಸಂದೇಹವೇ. ಪಾಶ್ಚಾತ್ಯ ಅರ್ಥ ಪದ್ಧತಿಯನ್ನು ಅನುಕರಿಸುತ್ತ ಬಂದಿರುವ ಆ ಇತರ ದೇಶಗಳಿಗೂ ಇಂದು ಬ್ಯಾಂಕಿಂಗ್ ವ್ಯವಸ್ಥೆ ಸಹಜವಾಗಿಯೇ ಹರಿದುಬಂದಿದೆ. ಅಲ್ಲಲ್ಲಿಯ ವಿಶಿಷ್ಟ ಪರಿಸ್ಥಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಅದು ಬದಲಾವಣೆ ಹೊಂದಿದೆ, ಹೊಂದುತ್ತಿದೆ. ಆದರೆ, ಮೂಲಭೂತವಾಗಿ ಅದು ತನ್ನ ಪಾಶ್ಚಾತ್ಯ ಲಕ್ಷಣಗಳನ್ನು ಬಿಟ್ಟುಕೊಟ್ಟಿಲ್ಲ.

ಹದಿಮೂರನೆಯ ಶತಮಾನಕ್ಕಿಂತ ಹಿಂದೆ ನಡೆಯುತ್ತಿದ್ದ, ನಾವು ಬ್ಯಾಂಕಿಂಗ್ ಎಂದು ಕರೆಯಬಹುದಾದ, ಕಲಾಪಗಳ ಬಗ್ಗೆ ಹೆಚ್ಚಿನ ದಾಖಲೆಗಳೇನೂ ನಮಗೆ ಸಿಗಲಾರವೆಂಬುದು ಇತಿಹಾಸಕಾರರ ಅಭಿಪ್ರಾಯ. ಇಂದಿನ ವಿವಿಧ ಬಗೆಯ ಬ್ಯಾಂಕಿಂಗ್ ಕಲಾವಗಳು ಅಂದು ನಡೆಯುತ್ತಿರಲಿಲ್ಲ. ಸಾಲ ನೀಡುತ್ತಿದ್ದುದಕ್ಕೂ, ಠೇವಣಿಗಳನ್ನು ಸ್ವೀಕರಿಸುತ್ತಿದ್ದುದಕ್ಕೂ ನಮಗೆ ಪುರಾವೆಗಳು ದೊರಕುತ್ತವೆಯಾಗಲಿ, ಇಂದು ನಾವು ಅರ್ಥಮಾಡಿಕೊಂಡಿರುವ ರೀತಿಯಲ್ಲಿ ಬ್ಯಾಂಕಿಂಗ್ ವ್ಯವಹಾರ ಅಂದು ನಡೆಯುತ್ತಿರಲಿಲ್ಲ. ಠೇವಣಿಗಳ ಸ್ವೀಕಾರ, ಸಾಲ ನೀಡಿಕೆ ಇವು ನಡೆಯುತ್ತಿದ್ದರೂ ಉದರಿಯ ಸೃಷ್ಟಿಯಾಗುತ್ತಿರಲಿಲ್ಲ. ನೋಟುಗಳ ಸೃಷ್ಟಿಯನ್ನಂತೂ ಆಗಿನ ಕಾಲದವರು, ಕನಸಿನಲ್ಲೂ ಕಂಡಿರಲಿಲ್ಲ. ಅಮೂಲ್ಯವಾದ, ತನ್ನ ಮಟ್ಟಿಗೆ ಅನಶ್ವರವಾದ, ಎಲ್ಲರೂ ಸುಲಭವಾಗಿ ಗುರುತಿಸಬಹುದಾದ, ಆದಾಗ್ಯೂ ವಿರಳವಾದ ಲೋಹಗಳು – ಮುಖ್ಯವಾಗಿ ಚಿನ್ನ, ಬೆಳ್ಳಿ–ಆಗಿನ ಹಣದ ಸಾಮಗ್ರಿಗಳಾಗಿದ್ದುವು. ಇಂಥ ಹಣವನ್ನುಪಡೆಯುವುದು, ಕೊಡುವುದು

–ಇಷ್ಟಕ್ಕೆ ಅಂದಿನ ಲೇವಾದೇವಿಗಳು ಸಾಮಾನ್ಯವಾಗಿ ಸೀಮಿತವಾಗಿದ್ದುವು. ಭಾರತದಲ್ಲಿ ವೇದಗಳ ಕಾಲದಷ್ಟು ಹಿಂದೆಯೇ ಲೇವಾ ದೇವಿಗಳು ನಡೆಯುತ್ತಿದ್ದುದು ಖಚಿತವಾಗಿದೆ. ಹಣ ಸಾಲ ನೀಡುವುದು ಆಗ ಲಾಭದಾಯಕ ವೃತ್ತಿಯಾಗಿತ್ತು. ಸಾಲ ನೀಡುವವನನ್ನು ಶತಪಥ ಬ್ರಾಹ್ಮಣದಲ್ಲಿ ಕುಸೀದನ್ ಎಂದು ಕರೆಯಲಾಗಿದೆ. ತೈತ್ತಿರೀಯ ಬ್ರಾಹ್ಮಣದ ಪ್ರಕಾರ 'ಕುಸೀದ' ಎಂದರ ಸಾಲ. ಆಗಿನ ನಾಣ್ಯಪದ್ಧತಿಯ ಬಗ್ಗೆ ನಮಗೆ ಪುರಾವೆಗಳಿಲ್ಲ. ಆಗಿನ ನಾಣ್ಯಗಳು ಸಿಕ್ಕಿಲ್ಲ. ಅಂತೂ ವರ್ಷಕ್ಕೆ ಸೇ.15ರಂತೆ ಬಡ್ಡಿ ವಿಧಿಸುವುದು ಸಾಮಾನ್ಯವಾಗಿ ಸ್ವೀಕೃತವಾದ ಪದ್ಧತಿಯಾಗಿ ಹೊಂದಿದಂತೆ ಕಾಣುತ್ತದೆ. ಇಂದು ಬ್ಯಾಂಕುಗಳು ಅನುಸರಿಸುತ್ತಿರುವ ಭಿನ್ನಕ (ಡಿಫರೆನ್ಷಿಯಲ್) ಬಡ್ಡಿದರ. ಸಾಲದ ಆದ್ಯತೆಯ ಕ್ಷೇತ್ರಗಳು ಮುಂತಾದ ಪರಿಕಲ್ಪನೆಗಳು ಆಗಲೂ ತಮ್ಮವೇ ಆದ ರೀತಿಯಲ್ಲಿ ಜೀವಂತವಾಗಿದ್ದುವೆಂದು ಕಾಣುತ್ತದೆ. ಒಂದೊಂದು ಜಾತಿಗೆ ಒಂದೊಂದು ಬಡ್ಡಿ ದರ ಇದ್ದಿರಬೇಕು. ಕೆಲವು ಜಾತಿಗಳಿಗೆ ಆದ್ಯತೆಯೂ ಇತ್ತು. ಲೇವಾದೇವಿ ವೈಶ್ಯರ ಏಕಸ್ವಾಮ್ಯವಾಗಿತ್ತು. ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ ಬಡ್ಡಿಯ ಮೇಲೆ ಸಾಲ ಕೊಡುವ ವ್ಯವಹಾರ ಮಾಡುವಂತಿರಲಿಲ್ಲ.

ವೇದಗಳ ಅನಂತರದ ಕಾಲದಲ್ಲಿ ಈ ಕಸುಬು ಹೊರವಾಗಿ ಬೆಳೆಯಿತೆಂಬುದಕ್ಕೆ ದಾಖಲೆಗಳಿವೆ. ಅನೇಕ ಸ್ಮೃತಿಗಳಲ್ಲಿ ಈ ಬಗ್ಗೆ ವಿವರಗಳಿವೆ. ಸಾಲಗಳ ನಾನಾ ಬಗೆಗಳನ್ನು ಹೆಸರಿಸಲಾಗಿದೆ. ಆಧಾರರಹಿತ, ಆಧಾರವುಳ್ಳದ್ದು (ಪ್ರತಿಭೂ), ಒತ್ತೆಯಿರುವುದು (ಅಧಿ) – ಹೀಗೆ ಮುಖ್ಯವಾದ ಮೂರು ಬಗೆಗಳನ್ನು ಕಾಣಬಹುದಾಗಿದೆ. ಆಧಾರ, ಒತ್ತೆ, ಜಾಮೀನು ಇವುಗಳ ಹಲವು ಬಗೆಗಳ ವಿವರಣೆಗಳಿವೆ. ಬಡ್ಡಿಯ ದರಗಳಲ್ಲೂ ವ್ಯತ್ಯಾಸಗಳಿದ್ದವು. ಶ್ರೇಣಿಗಳು, ಪಾಲುದಾರಿಕೆಗಳು, ಕೂಡುಬಂಡವಾಳ ಸಂಸ್ಥೆಗಳು ಇವು ಸಾಮೂಹಿಕ ಉದರಿ ವ್ಯವಹಾರದ ಬೆಳವಣಿಗೆಗೆ ಕಾರಣಗಳಾಗಿದ್ದುವು. ಠೇವಣಿಯ ಸ್ವೀಕಾರ, ಸಾಲ ನೀಡಿಕೆ ಇವಕ್ಕೆ ಸಂಬಂಧಿಸಿದ ವಿಸ್ತೃತ ನಿಯಮಗಳನ್ನು ಧರ್ಮಶಾಸ್ತ್ರಗಳು ವಿಧಿಸುತ್ತವೆ. ಆದ್ದರಿಂದ ಭಾರತದಲ್ಲಿ ಒಂದು ರೀತಿಯ ಬ್ಯಾಂಕಿಗೂ ಇತ್ತೆಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಠೇವಣಿ ಸ್ವೀಕಾರ ಮತ್ತು ಸಾಲ ನೀಡಿಕೆಯೇ ಅಲ್ಲದೆ ಹಣದ ರವಾನೆ, ಕೆಟ್ಟ ಹಣವನ್ನು ಪಡೆದು ಒಳ್ಳೆಯ ಹಣದ ಪಾವತಿ ಮುಂತಾದ ವ್ಯವಹಾರಗಳನ್ನೂ ಹಳೆಯ ಕಾಲದ ಬ್ಯಾಂಕರುಗಳು ಮಾಡುತ್ತಿದ್ದರು. ದೇಶದಲ್ಲಿ ಹಲವು ಬಗೆಯ ನಾಣ್ಯಗಳು ಚಲಾವಣೆಯಲ್ಲಿದ್ದುದರಿಂದ ಅವುಗಳ ವಿನಿಮಯ ಕಾರ್ಯ ಬಹಳ ಮುಖ್ಯವಾಗಿತ್ತು.

ಕ್ರಿ.ಪೂ. 2000ದಷ್ಟು ಹಿಂದೆ ಬ್ಯಾಬಿಲಾನಿನ ದೇವಸ್ಥಾನಗಳು ಹಣದ ವ್ಯವಹಾರ ನಡೆಸುತ್ತಿದ್ದುದಕ್ಕೆ

ದಾಖಲೆಗಳಿವೆ. ದೇವಸ್ಥಾನಗಳು ಪವಿತ್ರ ಸ್ಥಳಗಳೆಂದು ಪರಿಗಣಿತವಾಗಿದ್ದುದರಿಂದ, ದೇವರೇ ಅವನ್ನು ರಕ್ಷಿಸುವನೆಂಬ ನಂಬಿಕೆಯಿದ್ದದ್ದರಿಂದ ದರೋಡೆಗಾರರು ಅವನ್ನು ಪ್ರವೇಶಿಸಲು ಹೆದರುತ್ತಿದ್ದರು. ಹಣವನ್ನು ಅಲ್ಲಿ ಭದ್ರವಾಗಿ ಇಡಬಹುದೆಂದು ಭರವಸೆಯಿತ್ತು. ದೇಗುಲಗಳು ಸಾಲವನ್ನೂ ನೀಡುತಿದ್ದುವು. ಆದ್ದರಿಂದ ಆಗಿನ ಕಾಲದ ವ್ಯಾಪಾರಿಗಳೂ ಬ್ಯಾಂಕಿಂಗಿನ ಕಾರ್ಯಭಾರಗಳನ್ನು ಸ್ವಲ್ಪ ಮಟ್ಟಿಗೆ ನಿರ್ವಹಿಸುತ್ತಿದ್ದರು. ಕ್ರಿ.ಪೂ. 6ನೆಯ ಶತಮಾನದಲ್ಲಿ ಬ್ಯಾಬಿಲಾನಿನಲ್ಲಿದ್ದ ಇಗಿಬಿ ಬ್ಯಾಂಕ್ ಒಂದು ಉದಾಹರಣೆ. ಗ್ರೀಸಿನ ದೇಗುಲಗಳಲ್ಲೂ ಕ್ರಿ.ಪೂ. 4ನೆಯ ಶತಮಾನದ ವೇಳೆಗೆ ಬ್ಯಾಂಕಿಂಗ್ ಸದೃಶವಾದ ವ್ಯವಹಾರಗಳು ನಡೆಯುತ್ತಿದ್ದುವು. ಇಂಥ ವ್ಯವಹಾರ ನಡೆಸುತ್ತಿದ್ದ ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳು ಕೂಡ ಇದ್ದುವು. ಠೇವಣಿ ಸ್ವೀಕಾರ, ಸಾಲ ನೀಡಿಕೆ, ನಾಣ್ಯ ಪರೀಕ್ಷೆ ಹಾಗೂ ವಿನಿಮಯ – ಇಂಥ ಕಾರ್ಯಗಳನ್ನೆಲ್ಲ ಈ ಸಂಸ್ಥೆಗಳು ನಿರ್ವಹಿಸುತ್ತಿದ್ದುವು. ಅನಂತರ ಬಂದ ರೋಮನ್ ಚಕ್ರಾಧಿಪತ್ಯದ ಮೇಲೂ ಇವು ಪ್ರಭಾವ ಬೀರಿದುವು. ಸಾಲ ತೀರುವೆಗಾಗಿ ಬ್ಯಾಂಕಿಗೆ ಹಣ ಪಾವತಿ ಮಾಡುವುದಕ್ಕೆ ರೋಮನ್ ಕಾನೂನಿನಲ್ಲಿ ಮನ್ನಣೆ ನೀಡಲಾಗಿತ್ತು.

ಕ್ರಿ.ಶ. 5ನೆಯ ಶತಮಾನದ ವೇಳೆಗೆ ರೋಮನ್ ಚಕ್ರಾಧಿಪತ್ಯ ಒಡೆಯಿತು. ಮುಂದೆ 10ನೆಯ ಶತಮಾನದವರೆಗೂ ಈ ನಿಟ್ಟಿನಲ್ಲಿ ಯಾವ ಗಮನಾರ್ಹ ಬೆಳವಣಿಗೆಯೂ ಆಗಲಿಲ್ಲ. ವ್ಯಾಪಾರ ಇಳಿಮೊಗವಾದ್ದರಿಂದ ಬ್ಯಾಂಕಿಂಗ್ ವ್ಯವಹಾರಕ್ಕೆ ಅಷ್ಟೇನೂ ಆಸ್ಪದ ಇರಲಿಲ್ಲ. ಬಡ್ಡಿಯ ಮೇಲೆ ಹಣ ಸಾಲ ನೀಡುವದಕ್ಕಿದ್ದ ನಾನಾ ಬಗೆಯ ನಿರ್ಬಂಧಗಳು ಬೆಳವಣಿಗೆಗೆ ಅಡ್ಡಿಗಳಾಗಿದ್ದುವು. ಲೇವಾದೇವಿ ಮಾಡುವವರನ್ನು ಅಂದಿನ ಸಮಾಜ ತುಂಬ ಕೀಳಾಗಿ ಕಾಣುತ್ತಿತ್ತು.

ಮಧ್ಯಯುಗದಲ್ಲಿ

ಆದರೆ ಕ್ರಮಕ್ರಮವಾಗಿ ವ್ಯಾಪಾರ ಕುದುರಿತು. ಹಣದ ಪ್ರಾಮುಖ್ಯ ಮತ್ತೆ ಬೆಳೆಯತೊಡಗಿತು. ಖಾಸಗಿ ವ್ಯಕ್ತಿಗಳೂ ಸರ್ಕಾರಿ ಪ್ರಾಧಿಕಾರಿಗಳೂ ತಮ್ಮ ಅಗತ್ಯಗಳಿಗಾಗಿ ಹಣದ ಸಾಲಗಳನ್ನು ಬಯಸತೊಡಗಿದರು.

ದಾನದತ್ತಿಗಳಿಂದಲೂ ಬಾಡಿಗೆಯಿಂದಲೂ ಆಗಾಧ ಹಣ ಸಂಪಾದನೆ ಮಾಡುತ್ತಿದ್ದ ಮಠಗಳು ಲೇವಾದೇವಿಯಲ್ಲಿ ನಿರತವಾದುವು. ಅವು ಸಾಲ ನೀಡುತ್ತಿದ್ದದ್ದು ವಿಶೇಷವಾಗಿ ಸ್ಥಳೀಯ ರೈತರಿಗೆ, ಜಮೀನುದಾರರಿಗೆ. ಅನೇಕ ವೇಳೆ ಅಧಿಕಾರಿಗಳೂ, ಶ್ರೀಮಂತರೂ, ಪ್ರಭುಗಳೂ, ಚಕ್ರವರ್ತಿಯೂ, ಸಾಕ್ಷಾತ್ ಪೋಪರೂ ಸಾಲ ತೆಗೆಯುತ್ತಿದ್ದರು. ಇದರ ಹಿಂದೆ ಬಲವಂತವೂ ಇರುತ್ತಿತ್ತು. ಕ್ರಮೇಣ ಅನೇಕ ಶ್ರೀಮಂತರೂ ಸರದಾರರೂ

ತಾವು ಸಂಪಾದಿಸಿದ ಹಣವನ್ನು ಲೇವಾದೇವಿಯಲ್ಲಿ ತೊಡಗಿಸಿದರು. ಹೀಗೆ ಹಣದ ಬಲೆ ವಿಸ್ತರಿಸುತ್ತಿತ್ತು.

ಮಧ್ಯಯುಗದಲ್ಲಿ ಸಾಲ ನೀಡಿಕೆಯ ವೃತ್ತಿ ಯೆಹೂದ್ಯರದಾಯಿತು. ಇವರು ಈ ಕ್ಷೇತ್ರದಲ್ಲಿ ಪ್ರಾಮುಖ್ಯ ಗಳಿಸಿದ್ದಕ್ಕೆ ಕಾರಣಗಳೇನೆಂಬುದು ತಿಳಿದಿಲ್ಲ. ಕ್ರೈಸ್ತಧರ್ಮ ವಿಧಿಸಿದ ನಿರ್ಬಂಧಗಳು ಇವರಿಗೆ ಅನ್ವಯವಾಗದಿದ್ದುದರಿಂದ ಇವರು ಈ ವ್ಯವಹಾರದಲ್ಲಿ ಹೆಚ್ಚಾಗಿ ನಿರತರಾಗಿದ್ದಿರಬಹುದು. ಕ್ರಮೇಣ ಇತರರೂ ಈ ಕ್ಷೇತ್ರವನ್ನು ಪ್ರವೇಶಿಸಿ ಯೆಹೂದ್ಯರೊಂದಿಗೆ ಸ್ಪರ್ಧೆಗೆ ಇಳಿದರು. ಬರುಬರುತ್ತ ಇವರ ಸ್ವಂತ ಬಂಡವಾಳ ಸಾಲದಾಗಿ, ಇತರ ಮೂಲಗಳಿಂದ ಹಣ ಎತ್ತಿ ಸಾಲ ನೀಡುವುದು ಅಗತ್ಯವಾಯಿತು.

14ನೆಯ ಶತಮಾನದ ವೇಳೆಗೆ ಯೂರೋಪಿನಲ್ಲಿ ವ್ಯಾಪಾರ ತಕ್ಕಮಟ್ಟಿಗೆ ಬೆಳೆದಿತ್ತು. ಇಟಲಿಯ ನಗರಗಳೂ ಈಗ ಬೆಲ್ಜಿಯಂ ದೇಶದಲ್ಲಿರುವ ಬ್ರೂಜಸ್, ಅಂಟ್ವರ್ಪ್ ಮುಂತಾದವೂ ಪ್ರಮುಖ ವ್ಯಾಪಾರಕೇಂದ್ರಗಳಾದುವು. ಸರಕು ದಾಸ್ತಾನುಗಳು ಬೆಳೆದುವು. ಸ್ಥಳೀಯವಾಗಿ ಬ್ಯಾಂಕಿಂಗ್ ವ್ಯವಹಾರಗಳು ವಿಕಾಸಗೊಂಡುವು. ಕೆಲವು ಪ್ರಮುಖ ಸಾರಿಗೆ ಕೇಂದ್ರಗಳಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ಸಂತೆಗಳು ನಡೆಯುತ್ತಿದ್ದುವು. ಫ್ರಾನ್ಸಿನ ಷಾಂಪೇನ್ ಪ್ರದೇಶದಲ್ಲಿ ಸೇರುತ್ತಿದ್ದ ಸಂತೆಗಳು ಬಹಳ ಪ್ರಸಿದ್ಧವಾಗಿದ್ದುವು. ಇಲ್ಲಿ ಸಂಚಾರಿ ಬ್ಯಾಂಕರುಗಳ ಮೂಲಕ ಹಣದ ವ್ಯವಹಾರ ನಡೆಯುತ್ತಿತ್ತು. ಅಂತರರಾಷ್ಟ್ರೀಯ ಉಣ್ಣೆ ವ್ಯಾಪಾರಕ್ಕೆ ಧನಪೋಷಣೆ ಮಾಡುತ್ತಿದ್ದ ಅಂತರರಾಷ್ಟ್ರೀಯ ಲೇವಾದೇವಿಗಾರರ ತಂಡವೂ ಬೆಳೆದಿತ್ತು. ಇವರು ಪೋಪರ ಪರವಾಗಿ ಹಣ ವಸೂಲಿ ಮಾಡಿ ರವಾನೆ ಮಾಡುತ್ತಿದ್ದರಲ್ಲದೆ ದೊರೆಗಳಿಗೂ, ಶ್ರೀಮಂತರಿಗೂ ಸಾಲ ನೀಡುತ್ತಿದ್ದರು.

ಷಾಂಪೇನಿನ ಸಂತೆಗಳಲ್ಲಿ ವ್ಯವಹರಿಸುತ್ತಿದ್ದ ಸಂಚಾರಿ ಬ್ಯಾಂಕರುಗಳು ತಮ್ಮ ಗ್ರಾಹಕರ ಪರಸ್ಪರ ಕೊಡು ಕೊಳುಗಳನ್ನು ಇತ್ಯರ್ಥಮಾಡುತ್ತಿದ್ದ ರೀತಿ ಗಮನಾರ್ಹವಾದ್ದು. ಸರಕು ವಿಕ್ರಯವಾದಾಗ ಅದರ ಮೌಲ್ಯವನ್ನು ಸಂಬಂಧಪಟ್ಟ ವರ್ತಕರ ಖಾತೆಗಳಲ್ಲಿ ದಾಖಲು ಮಾಡಲಾಗುತ್ತಿತ್ತು. ಸಂತೆಯ ಅಂತ್ಯದಲ್ಲಿ ಪರಸ್ಪರವಾಗಿ ಕೊಡಬೇಕಾದ, ಬರಬೇಕಾದ ಹಣಗಳ ಲೆಕ್ಕಾಚಾರ ಮಾಡಿ ಅಂತಿಮವಾದ ಸಿಲ್ಕನ್ನು ನಗದಾಗಿಯೋ, ಹುಂಡಿಯ ರೂಪದಲ್ಲೋ ಪಾವತಿಗೆ ವ್ಯವಸ್ಥೆ ಮಾಡಲಾಗುತ್ತಿತ್ತು.

ಮೆಡಿಟರೇನಿಯನ್ ಸಮುದ್ರದ ದಂಡೆಯ ನಗರಗಳಾಚೆ ವೆನಿಸ್, ಜಿನೋವ, ಬಾರ್ಸಿಲೋನ ಮುಂತಾದುವುಗಳಲ್ಲಿದ್ದ ಸ್ಥಾಯೀ ಬ್ಯಾಂಕರುಗಳು ಆಧುನಿಕ ವಾಣಿಜ್ಯ ಬ್ಯಾಂಕುಗಳ ಪಿತಾಮಹರು ಎಂದು

ಹೇಳಲಾಗಿದೆ. ಅವರು ತಮ್ಮ ಗ್ರಾಹಕರಿಂದ ಠೇವಣಿ ಪಡೆಯುತ್ತಿದ್ದರು. ಆ ಗ್ರಾಹಕರು ಸಾಮಾನ್ಯವಾಗಿ ವ್ಯಾಪಾರಿಗಳಾಗಿದ್ದರು. ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ಹಣ ಪಾವತಿ ಮಾಡಬೇಕಾಗಿ ಬಂದಾಗ ಬ್ಯಾಂಕರುಗಳು ಆ ಗ್ರಾಹಕರ ಖಾತೆಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಹಣ ವರ್ಗ ಮಾಡುತ್ತಿದ್ದರು. ಇದನ್ನು ಬ್ಯಾಂಕರುಗಳು ಮಾಡುತ್ತಿದ್ದರು. ಗ್ರಾಹಕರ ಎದುರಿನಲ್ಲೇ, 15ನೆಯ ಶತಮಾನದ ವೇಳೆಗೆ ವೆನಿಸಿನ ಬ್ಯಾಂಕರುಗಳು ತಮ್ಮ ಗ್ರಾಹಕರಿಗೆ ಓವರ್‌ಡ್ರಾಫ್ಟ್ (ಮೀರೆಳೆತ) ಸೌಲಭ್ಯ ನೀಡುತ್ತಿದ್ದುದುಂಟು. ಆ ಕಾಲದಲ್ಲಿ ಅನೇಕ ಬ್ಯಾಂಕರುಗಳು ದಿವಾಳಿಯಾದದ್ದೂ ಉಂಟು. ಆದ್ದರಿಂದ ಸಾರ್ವಜನಿಕ ಬ್ಯಾಂಕೊಂದರ ಸ್ಥಾಪನೆಯಾಗಬೇಕೆಂಬುದು ಅನೇಕರ ಬೇಡಿಕೆಯಾಗಿತ್ತು.

ಈ ಬೇಡಿಕೆಯ ಪೂರೈಕೆಗಾಗಿ 1587ರಲ್ಲಿ ವೆನಿಸಿನಲ್ಲಿ ಬ್ಯಾಂಕೋ ಡೆಲಾ ಪಿಯಾಜಾ ಡಿ ರಿಯಾಲ್ಟೊ ಸ್ಥಾಪಿತವಾಯಿತು. ನಾಣ್ಯರೂಪದಲ್ಲಿ ಠೇವಣಿಯ ಸ್ವೀಕಾರ, ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಇದರ ವರ್ಗಾವಣೆ, ಹುಂಡಿಗಳ ಪಾವತಿ – ಇವು ಬ್ಯಾಂಕಿನ ಮುಖ್ಯ ಕಾರ್ಯಭಾರಗಳಾಗಿದ್ದುವು. ಆದರೆ ಇದು ಸಾಲ ನೀಡುವಂತಿರಲಿಲ್ಲ. ಬ್ಯಾಂಕಿಗೆ ಸಂಪಾದನೆಯೂ ಇರಲಿಲ್ಲವಾದ್ದರಿಂದ ಠೇವಣಿಗಳ ಮೇಲೆ ಇದು ಬಡ್ಡಿ ಕೊಡುತ್ತಿರಲಿಲ್ಲ. ಇದು ನೀಡುತ್ತಿದ್ದ ಸೇವೆಗಾಗಿ ಏನೂ ಶುಲ್ಕ ವಿಧಿಸುತ್ತಿರಲಿಲ್ಲ. ಬ್ಯಾಂಕಿನ ಖರ್ಚುಗಳನ್ನೆಲ್ಲ ಸರಕಾರವೇ ವಹಿಸಿ ಕೊಳ್ಳುತ್ತಿತ್ತು.

ಸಾಲ ನೀಡಬಾರದೆಂಬುದು ಈ, ಬ್ಯಾಂಕಿನ ನಿಬಂಧನೆಯಾದರೂ ಇದು ಆಗಾಗ ಸಾಲ ನೀಡತೊಡಗಿತ್ತು. ಸರಕಾರವೇ ಸಾಲ ಪಡೆಯುತ್ತಿತ್ತು. ಇದರ ಫಲವಾಗಿ ಬ್ಯಾಂಕು ತೊಂದರೆಗೆ ಸಿಕ್ಕಿಕೊಂಡಿತು. ಸರಕಾರದ ಹಣದ ಅಗತ್ಯಗಳ ಪೂರೈಕೆಗಾಗಿ ಸ್ಥಾಪಿತವಾದ ಸಂಸ್ಥೆ, ಬ್ಯಾಂಕೋ ಗಿರೋ (1619). ಸರಕಾರ ಅನೇಕ ವ್ಯಕ್ತಿಗಳಿಂದ ಸಾಲ ತೆಗೆದುಕೊಂಡಿತ್ತು. ಇದಕ್ಕೆ ಪ್ರತಿಯಾಗಿ ಆ ಸಾಲಿಗರಿಗೆ ಬ್ಯಾಂಕೋ ಗಿರೋದಲ್ಲಿ ಠೇವಣಿಗಳನ್ನು ನೀಡಲಾಯಿತು. 1638ರಲ್ಲಿ ಇವೆರಡೂ ಬ್ಯಾಂಕುಗಳು ಒಂದಾದುವು. ಹೊಸ ಬ್ಯಾಂಕು 1806ರವರೆಗೂ ವ್ಯವಹಾರ ನಡೆಸುತ್ತಿತ್ತು. ಇವಲ್ಲದೆ ಇನ್ನೂ ಅನೇಕ ಸಾರ್ವಜನಿಕ ಬ್ಯಾಂಕುಗಳು ಆ ಕಾಲದಲ್ಲಿ ಇದ್ದುವು.

1609ರಲ್ಲಿ ಸ್ಥಾಪಿತವಾದ ಆಮ್‌ಸ್ಟರ್‌ಡ್ಯಾಂ ಬ್ಯಾಂಕ್ ಕೂಡ ಬ್ಯಾಂಕೋ ಡೆಲಾ ಪಿಯಾಜಾ ಡಿ ರಿಯಾಲ್ಟೊವಿನಂತೆಯೇ ಕೆಲಸ ಮಾಡುತ್ತಿತ್ತು. ಠೇವಣಿ ಸ್ವೀಕಾರ ಮತ್ತು ವರ್ಗಾವಣೆ, ನಾಣ್ಯಗಳ ವಿನಿಮಯ, ಟಂಕಸಾಲೆಗಾಗಿ ಬೆಳ್ಳಿಯ ಮತ್ತು ಚಲಾವಣೆಯಲ್ಲಿಲ್ಲದ ನಾಣ್ಯಗಳ ಕೊಳ್ಳಿಕೆ, ಹುಂಡಿಗಳ ತೀರುವೆ ಮುಂತಾದವು ಇದರ ಕಾರ್ಯಭಾರಗಳು. ಖಾತೆಗಳಲ್ಲಿ

ಮೀರೆಳೆತವನ್ನು ನಿಷೇಧಿಸಲಾಗಿತ್ತು. ಆದಾಗ್ಯೂ ಕೆಲವೊಮ್ಮೆ ಅದು ಸಾಲ ನೀಡುತ್ತಿತ್ತು. ಆಮ್‌ಸ್ಟರ್ ಡ್ಯಾಂ ನಗರ ಸಂಸ್ಥೆಯೂ ಡಚ್ ಈಸ್ಟ್ ಇಂಡಿಯ ಕಂಪೆನಿಯೂ ಅದರಿಂದ ಸಾಲ ಪಡೆದಿದ್ದುವು. 18ನೆಯ ಶತಮಾನದ ಅಂತ್ಯದಲ್ಲಿ ನಡೆದ ಫ್ರೆಂಚ್ ಯುದ್ಧಗಳ ಸಮಯದಲ್ಲಿ ಬ್ಯಾಂಕು ತುಂಬ ನಷ್ಟ ಅನುಭವಿಸ ಬೇಕಾಗಿ ಬಂತು. ಕೊನೆಗೆ 1819ರಲ್ಲಿ ಅದು ಮುಳುಗಿ ಹೋಯಿತು.

'ಬ್ಯಾಂಕ್' ಪದದ ವ್ಯುತ್ಪತ್ತಿ

'ಬ್ಯಾಂಕ್' ಎನ್ನುವ ಪದ ಹೇಗೆ ಬಂತು ಎಂಬುದು ಕುತೂಹಲಕರವಾದ ಪ್ರಶ್ನೆ. ಇಟಲಿಯ ನಗರಗಳಲ್ಲಿ ಹಣದ ವ್ಯವಹಾರ ನಡೆಸುತ್ತಿದ್ದ ಯೆಹೂದ್ಯರಿಂದ ಈ ಪದ ಬಂತೆಂಬುದು ಒಂದು ಊಹೆ. ಇವರು ಪೇಟೆಯಲ್ಲಿ ಬೆಂಚುಗಳನ್ನಿಟ್ಟು, ಅವುಗಳ ಮೇಲೆ ಹಣದ ವ್ಯವಹಾರ ನಡೆಸುತ್ತಿದ್ದರು. ಇಟಾಲಿಯನ್ ಭಾಷೆಯಲ್ಲಿ ಬೆಂಚಿಗೆ ಬ್ಯಾಂಕ್ ಎನ್ನುತ್ತಾರೆ. ಬ್ಯಾಂಕೋ ಎನ್ನುತ್ತಾರೆ. ಬ್ಯಾಂಕೋ ಎಂಬುದೇ ಮುಂದೆ ಬ್ಯಾಂಕ್ ಎಂದು ಆಯಿತೆಂದು ಹೇಳಲಾಗಿದೆ. ಲೇವಾದೇವಿಗಾರ ತನ್ನ ದೇಣಿಗಳನ್ನೆಲ್ಲ ತೀರಿಸಲಾರದೆ ಹೋದಾಗ ಬ್ಯಾಂಕೋವನ್ನು – ಬೆಂಚನ್ನು – ಮುರಿದುಹಾಕಲಾಗುತ್ತಿತ್ತು. ಆದ್ದರಿಂದಲೇ ದಿವಾಳಿ ತೆಗೆದವನನ್ನು ಬ್ಯಾಂಕ್ರಪ್ಟ್ ಎಂದು ಕರೆಯುವುದು ರೂಢಿಗೆ ಬಂತಂತೆ.

ಆದರೆ ಬ್ಯಾಂಕಿನ ಮೂಲ ಇಟಾಲಿಯನ್ 'ಬ್ಯಾಂಕೋ' ಅಲ್ಲ. ಜರ್ಮನ್ 'ಬ್ಯಾಕ್' ಎಂಬುದು ಇನ್ನೊಂದು ವಾದ. ಜರ್ಮನ್ ಭಾಷೆಯಲ್ಲಿ 'ಬ್ಯಾಕ್' ಎಂದರೆ ಕೂಡುನಿಧಿ. ಈಗಿನ ಜರ್ಮನಿ ಪ್ರದೇಶದಲ್ಲಿದ್ದ ಜರ್ಮಾನಿಕ್ ಜನರು ಇಟಲಿಯನ್ನು ಆಕ್ರಮಿಸಿಕೊಂಡಾಗ 'ಬ್ಯಾಕ್' ಎಂಬುದು ಅಲ್ಲಿ 'ಬ್ಯಾಂಕೋ' ಆಯಿತು; ಇಟಲಿಯ ಲೇವಾದೇವಿಗಾರರು ಮಾಡುತ್ತಿದ್ದ ವ್ಯವಹಾರಕ್ಕೆ ಈ ಹೆಸರು ಬಂತು ಎನ್ನಲಾಗಿದೆ.

ಮಧ್ಯಯುಗದ ಲೇವಾದೇವಿಗಾರರು, ಅಂತರರಾಷ್ಟ್ರೀಯ ಖ್ಯಾತಿಯ ವರ್ತಕರು – ಇವರು ಆಧುನಿಕ ಬ್ಯಾಂಕಿನ ಅಸ್ತಿಭಾರ ಹಾಕಿದರೆಂಬುದು ನಿಜ. ಇವರ ಜೊತೆಗೆ ಇಂಗ್ಲೆಂಡಿನ ಅಕ್ಕಸಾಲಿಗರೂ ಬ್ಯಾಂಕಿನ ಶಿಲಾನ್ಯಾಸದಲ್ಲಿ ಕೈ ಕೂಡಿಸಿದರೆಂದು ಪ್ರತೀತಿ. ಅವರ ಬಳಿ ಇದ್ದ ಭದ್ರ ತಿಜೋರಿಗಳಲ್ಲಿ ಆ ಕಾಲದ ಶ್ರೀಮಂತರೂ ವ್ಯಾಪಾರಿಗಳೂ ಹಣ ಮತ್ತು ಅಮೂಲ್ಯ ವಸ್ತುಗಳನ್ನು ಠೇವಣಿಯಾಗಿ ಇಡುತ್ತಿದ್ದರಂತೆ. ಈ ಠೇವಣಿಗಳಿಗೆ ಪ್ರತಿಯಾಗಿ ಅಕ್ಕಸಾಲಿಗರು ಕೊಡುತ್ತಿದ್ದ ರಸೀತಿಗಳು ಈಗಿನ ಚೆಕ್ಕುಗಳಂತೆ ಚಲಾವಣೆಗೆ ಬರತೊಡಗಿದುವಂತೆ. ಆದ್ದರಿಂದ ಅಕ್ಕಸಾಲಿಗನನ್ನೂ ಆಧುನಿಕ ಬ್ಯಾಂಕಿನ ಆದ್ಯ ಪ್ರವರ್ತಕರ ಸಾಲಿಗೆ ಸೇರಿಸಬೇಕು ಎನ್ನಲಾಗಿದೆ.

ಆದರೆ ಇದೆಲ್ಲ ದೊಡ್ಡ ಕಥೆ. ಮುಂದಿನ ಅಧ್ಯಾಯಗಳಲ್ಲಿ ಈ ಕಥೆ ಸುರುಳಿ ಬಿಚ್ಚಿಕೊಳ್ಳುತ್ತ ಸಾಗುತ್ತದೆ.

02.

ಡಿಸೆಂಬರ್ 1980

ಬ್ಯಾಂಕಿಂಗ್ ಪ್ರಪಂಚ
ಒಂದು ಅವಲೋಕನ

’ಬ್ಯಾಂಕಿಂಗ್ ಪ್ರಪಂಚದ ಎರಡನೆಯ ಸಂಚಿಕೆ ತಡವಾಗಿ ನಿಮ್ಮ ಕೈ ಸೇರುತ್ತಿದೆ. ನಮ್ಮ ಕೈ ಮೀರಿದ ಹಲವಾರು ಅಡಚಣೆಗಳು ಇದಕ್ಕೆ ಕಾರಣ. ಇಂಥ ಒಂದು ಪತ್ರಿಕೆಯ ಆರಂಭ ದೆಶೆಯಲ್ಲಿ ಈ ಅಡಚಣೆಗಳು ಸಾಮಾನ್ಯ. ಇದನ್ನೆಲ್ಲ ಕ್ರಮೇಣ ನಿವಾರಿಸಿ ಪತ್ರಿಕೆಯನ್ನು ಸಕಾಲದಲ್ಲಿ ಹೊರಡಿಸುವುದು ಬೇಗ ಸಾಧ್ಯವಾದೀತೆಂಬುದು ನಮ್ಮ ಆಸೆ.

ಹಣ–ಬ್ಯಾಂಕಿಂಗ್ ಕ್ಷೇತ್ರಕ್ಕೆ ಮೀಸಲಾದ ಇಂಥದೊಂದು ನಿಯತಕಾಲಿಕವನ್ನು ಹೊರತರುವುದೇನೂ ಸುಲಭದ ಕೆಲಸವಲ್ಲ. ಲೇಖಕರೂ ಮುದ್ರಕರೂ ಸಂಪಾದಕರೂ ಸಂಘಟಕರೂ ಸಂಮಿಳಿತರಾದಾಗಲೇ ಇದು ಸಾಧ್ಯ. ಇವುಗಳಲ್ಲಿ ಯಾವದೊಂದು ಅಂಶ ಹಾಳತ ತಪ್ಪಿದರೂ ವಿಳಂಬ ಅನಿವಾರ್ಯ. ಈ ಸಾಮರಸ್ಯ ಸಾಧನೆಗೆ ಸ್ವಲ್ಪ ಕಾಲ ಅಗತ್ಯ. ಆ ನಿಟ್ಟಿನಲ್ಲಿ ಪ್ರಯತ್ನ ಸಾಗಿಸುವ ಭರವಸೆ ನಮ್ಮದು.

ಬ್ಯಾಂಕಿಂಗ್ ಪ್ರಪಂಚ’ವನ್ನಾರಂಭಿಸುವ ಯೋಜನೆಯನ್ನು ಮುಂದಿಟ್ಟಾಗ, ಕನ್ನಡದಲ್ಲಿ ಇದು ಸಾಧ್ಯವಾಗದೆಂದು ಸಂಶಯ ವ್ಯಕ್ತಪಡಿಸಿದವರಿಲ್ಲದಿಲ್ಲ. ಬಹುಶಃ ಬೇರಾವ ಭಾರತೀಯ ಭಾಷೆಯಲ್ಲೂ ಇಂಥ ಪ್ರಯತ್ನ ನಡೆದಿಲ್ಲವೆಂಬುದು ಒಂದು ಕಾರಣ. ಈ ವಿಚಾರವನ್ನು ಕುರಿತು ಕನ್ನಡದಲ್ಲಿ ಬರೆಯಬಲ್ಲವರು ಒಂದು ಕೈಬೆರಳೆಣಿಕೆಗೂ ಸಾಲದಷ್ಟು ಕಡಿಮೆಯೆಂಬುದು ಇನ್ನೊಂದು ಕಾರಣ.. ಜೊತೆಗೆ ಮುದ್ರಣವೆಚ್ಚ ತೂಗಿಸುವುದೇನೂ ಈಗಿನ ದಿನಗಳಲ್ಲಿ ಸಾಮಾನ್ಯವಲ್ಲ.

ಲೇಖನಗಳನ್ನು ಕುರಿತಂತೆ ನಿರಾಶಾವಾದಕ್ಕೆ ಕಾರಣವೇ ಇಲ್ಲವೆಂಬುದು ನಮ್ಮ ಅನುಭವ. ಇರುವ ಕೆಲವೇ ಲೇಖಕರನ್ನೇ ಪದೇ ಪದೇ ಆಶ್ರಯಿಸಬೇಕೆನ್ನುವಂಥ ದಾರಿದ್ರವೇನೂ ಇಲ್ಲ. ಯುವಕರಲ್ಲಿ ಅನೇಕ ಮಂದಿ ಉತ್ಸಾಹಿಗಳಿದ್ದಾರೆ. ಇವರ ಉತ್ಸಾಹಕ್ಕೆ ಸಮಸಮನಾಗಿ ದುಡಿಮೆಯೂ ಕೂಡಿಬಂದರೆ ಇವರು ಒಳ್ಳೆಯ ಲೇಖನಗಳನ್ನು ಬರೆದಾರೆಂದು ಆಶಿಸಬಹುದು. ಬ್ಯಾಂಕಿಂಗ್ ಎಂದರೆ ಕೇವಲ ಅಂಕಿ–ಅಂಶಗಳಲ್ಲ, ಆಗಿರುವ ಕೆಲಸದ ವರದಿ ಮಾತ್ರವಲ್ಲ. ಬ್ಯಾಂಕಿಂಗ್ ಒಂದು ಕಲೆ ಕೂಡ. ಸೀಮಿತ ಸಾಮರ್ಥ್ಯ ಕುಶಲತೆಗಳನ್ನು ಅನುಕೂಲತಮ ರೀತಿಯಲ್ಲಿ ಜೋಡಿಸಿ ಗರಿಷ್ಠ ಫಲ ದೊರಕಿಸುವ ಕ್ರಿಕೆಟ್ ಆಟದಂತೆಯೇ ಇದು ಕೂಡ. ರಕ್ಷಣೆ, ಆಕ್ರಮಣ ಎರಡೂ ಕೂಡಿದ ಈ ಆಟದಲ್ಲಿ ಕ್ಷೇತ್ರ ವಿನ್ಯಾಸವೂ ಬಲು ಮುಖ್ಯ. ಬ್ಯಾಂಕಿಂಗ್ ಕೂಡ ಹೀಗೆಯೇ. ಲಭ್ಯವಿರುವ ಸಾಧನಗಳನ್ನು

ಯಾವಯಾವ ರೂಪದಲ್ಲಿ, ಎಷ್ಟೆಷ್ಟು ದೂರದಲ್ಲಿ ವಿನ್ಯಾಸಗೊಳಿಸಿಕೊಂಡಿದ್ದರೆ ಸೇವೆ–ಲಾಭ–ದ್ರವತ್ವ–ಭದ್ರತೆಗಳ ಚತುರ್ಮುಖ ಸಾಧನೆ ಮಾಡಬಹುದೆಂಬುದು ಬ್ಯಾಂಕರನ ನಿತ್ಯಕಾಳಜಿ. ಈ ಗುರಿಯ ಸಾಧನೆಯಲ್ಲೇ ಬ್ಯಾಂಕಿನ ಸಾರ್ಥಕ್ಯ. ಹೀಗೆ ಕಲಾತ್ಮಕ ಹಾಗೂ ಗುಣಾತ್ಮಕ ದೃಷ್ಟಿಯಿಂದ ಬ್ಯಾಂಕಿಂಗ್ ಕಲಾಪಗಳನ್ನು ಅವಲೋಕಿಸಿ, ಅದರ ಹಲವಾರು ಆವಿಷ್ಕಾರಗಳನ್ನು ವಿಶ್ಲೇಷಿಸಿ ಲೇಖನ ಬರೆಯುವ ಕಲೆಯನ್ನು ನಾವು ಅಭ್ಯಾಸ ಮಾಡಬೇಕಾಗಿದೆ. ಆಗ ಹಣ ಬ್ಯಾಂಕಿಂಗ್ ವಿಚಾರಗಳೂ ರಂಜಕವಾಗುತ್ತವೆ, ಉಪಯುಕ್ತವಾಗುತ್ತವೆ. ಹಣ ಬ್ಯಾಂಕಿಂಗ್‌ಗಳಲ್ಲಿ ಆಸಕ್ತಿ ಇಲ್ಲದವರೇ ಬಹುಶಃ ಇಂದು ಇಲ್ಲ. ಅವರನ್ನೆಲ್ಲ ಗುರಿಯಲ್ಲಿಟ್ಟು ಬರೆದ ಲೇಖನಗಳು ನಮ್ಮ ಇಂದಿನ ಅಗತ್ಯ. ಇಂಥ ಲೇಖನಗಳನ್ನು ಬರೆಯಬಲ್ಲವರ ದೊಡ್ಡ ಪೀಳಿಗೆಯ ಸೃಷ್ಟಿಯ ಕಾರ್ಯ ಇಂದು ಆಗಬೇಕಾಗಿದೆ. ಇದನ್ನು ಸಾಧಿಸಲು ಈ ನಿಯತಕಾಲಿಕ ಪ್ರಯತ್ನಿಸುತ್ತದೆ. ಬ್ಯಾಂಕಿಂಗ್ ಉದ್ಯಮದಲ್ಲೇ ನಿರತರಾದವರಿಗೆ ಇದೊಂದು ಕೈಪಿಡಿಯಾಗಬೇಕೆಂಬುದೂ ನಮ್ಮ ಉದ್ದೇಶ.

ನಾವು ಎದುರಿಸಬೇಕಾದ ಇನ್ನೊಂದು ಸಮಸ್ಯೆ ಹಣದ್ದು. ಆರ್ಥಿಕ ದೃಷ್ಟಿಯಿಂದ ನೆಮ್ಮದಿಯಾಗಿರುವಂಥ ಪರಿಸ್ಥಿತಿಯೇನೂ ಪತ್ರಿಕೆಗೆ ಇಲ್ಲ. ಆದರೆ ಹಣದ ಕಾರಣದಿಂದಾಗಿಯೇ ಯಾವ ಒಳ್ಳೆಯ ಕೆಲಸವೂ ನಿಲ್ಲಬಾರದು, ನಿಲ್ಲುವುದಿಲ್ಲ, ನಿಂತಿಲ್ಲ ಎಂಬುದಕ್ಕೆ ಈ ಪತ್ರಿಕೆಯೂ ಸಾಕ್ಷಿ. ನೂರಾರು ಕೈಗಳು ಕೂಡಿ ಇದನ್ನು ಮುನ್ನಡೆಸುವವೆಂಬ ಭರವಸೆ ನಮಗಿದೆ. ಈ ನೆರವು ಮುಂದುವರಿಯುವುದೆಂಬುದರಲ್ಲಿ ಸಂಶಯವಿಲ್ಲ.

ಇನ್ನುಳಿದದ್ದು ವಾಚಕ ಪ್ರಪಂಚ. ಈ ನಿಟ್ಟಿನಲ್ಲಿ ನಮಗೆ ಸ್ವಲ್ಪ ನಿರಾಶೆ. ಭಾರತೀಯ ಸ್ಟೇಟ್ ಬ್ಯಾಂಕಿನ ಕನ್ನಡ ಸಂಘಗಳ ಸಮನ್ವಯ ಸಮಿತಿ ಹೊರಡಿಸುತ್ತಿರುವ ಈ ನಿಯತ ಕಾಲಿಕವನ್ನು ಆ ಬ್ಯಾಂಕಿನ ಅಧಿಕೃತ ಪ್ರಕಟನೆಯೆಂದೂ, ಆ ಸಂಸ್ಥೆಗಷ್ಟೇ ಇದು ಸೀಮಿತವೆಂದೂ ಅನೇಕರು ಭಾವಿಸಿದ್ದಾರೆ. ಆದರೆ ಇದರ ಉದ್ದೇಶ ಇನ್ನೂ ವ್ಯಾಪಕವಾದ್ದು. ಹಣ ಬ್ಯಾಂಕಿಂಗ್ ಕುರಿತಂತೆ ಆರೋಗ್ಯಕರ ವಿಚಾರಗಳನ್ನು ಎಲ್ಲರಲ್ಲೂ ಪ್ರಚಾರಪಡಿಸುವುದು ಇದರ ಗುರುತರ ಹೊಣೆ. ಎಲ್ಲ ಬ್ಯಾಂಕಿಂಗ್ ಕಛೇರಿಗಳೂ ಸಾರ್ವಜನಿಕರೂ ವಿದ್ಯಾರ್ಥಿಗಳೂ ಈ ನಿಯತಕಾಲಿಕವನ್ನು ಸ್ವಾಗತಿಸಬೇಕು; ಇದರ ಉಪಯುಕ್ತತೆ ಬೆಳೆಯುವಂತೆ ಮಾಡಬೇಕು ತಮ್ಮಲ್ಲಿರುವ ವಿಚಾರಗಳನ್ನು ಇದರೊಂದಿಗೆ ಹಂಚಿಕೊಳ್ಳಬೇಕು. ಹಾಗಾದೀತೆಂಬುದು ನಮ್ಮ ನಂಬಿಕೆ.

ಬ್ಯಾಂಕಿಂಗಿನ ಇತಿಹಾಸ

ಭಾಗ–2

ಅಕ್ಕಸಾಲಿಗರ ಸಾಹಸ

ಆಧುನಿಕ ಬ್ಯಾಂಕುಗಳ ಮೂಲಪುರುಷರು ಮಧ್ಯಯುಗದ ಅಂತರರಾಷ್ಟ್ರೀಯ ಖ್ಯಾತಿಯ ವರ್ತಕ ಪ್ರಭುಗಳು, ಲೇವಾ ದೇವಿಗಾರರು ಮತ್ತು ಇಂಗ್ಲೆಂಡಿನ ಅಕ್ಕಸಾಲಿಗರು ಎಂಬುದಾಗಿ ಹೇಳುವುದು ವಾಡಿಕೆ. ಆ ಕಾಲದ ಯೂರೋಪಿನ ವರ್ತಕರಂತೆ ಆಧುನಿಕ ಬ್ಯಾಂಕುಗಳ ಖ್ಯಾತಿ ಪ್ರಪಂಚ ವ್ಯಾಪಿಯಾದದ್ದು. ಹಳೆಯ ಕಾಲದ ಲೇವಾದೇವಿಗಾರರಂತೆ ಆಧುನಿಕ ಬ್ಯಾಂಕುಗಳೂ ಹಣ ಸಾಲ ನೀಡುವುದರಲ್ಲಿ ಪ್ರಾವೀಣ್ಯ ಗಳಿಸಿಕೊಂಡಿವೆ. ಆದರೆ ಇಷ್ಟಕ್ಕೇ ಇವುಗಳ ಕಲಾಪ ಸೀಮಿತವಾಗಿಲ್ಲ. ಕಂಡವರ ಹಣವನ್ನು ಠೇವಣಿಯಾಗಿ ಇಟ್ಟುಕೊಳ್ಳುವುದು, ಆ ಮೂಲಕ ತಾವೇ ಋಣಿಗಳಾಗುವುದು, ಆ ಠೇವಣಿಯ ಬಲದ ಮೇಲೆ ಸಾಲ ನೀಡುವುದು, ಚೆಕ್ಕುಗಳೆಂಬ ವಿಶಿಷ್ಟ ರೀತಿಯ ಹಣ ಪ್ರಕಾರದ ಸೃಷ್ಟಿಕರ್ತರಾಗುವುದು, ಠೇವಣಿಯನ್ನೇ ಸೃಷ್ಟಿಸುವುದು ಹೀಗೆ ನಾನಾ ಬಗೆಯ ಕಲಾಪಗಳಲ್ಲಿ ಇಂದಿನ ಬ್ಯಾಂಕುಗಳು ನಿರತವಾಗಿವೆ. ಅವು ಬ್ಯಾಂಕುಗಳೆನಿಸಿಕೊಳ್ಳುವುದು – ಕೇವಲ ಲೇವಾದೇವಿಗಾರರ ಸಂಸ್ಥೆಗಳಲ್ಲವೆಂದು ಆಗಿರುವುದು – ಅವುಗಳ ಈ ಕಲಾಪಗಳಿಂದಾಗಿ. ಬ್ಯಾಂಕುಗಳ ಈ ಬಗೆಯ ವಹಿವಾಟುಗಳು ವಿಕಾಸಗೊಂಡದ್ದು ಬಹುತೇಕ ಇಂಗ್ಲೆಂಡಿನ ಅಕ್ಕಸಾಲಿಗರಿಂದ. ಅಕ್ಕಸಾಲಿಗರನ್ನೂ ಆಧುನಿಕ ಬ್ಯಾಂಕುಗಳ ಪೂರ್ವಜರೆಂದು ಕರೆಯುವುದು ಈ ಕಾರಣದಿಂದಲೇ. ಆಧುನಿಕ ಬ್ಯಾಂಕುಗಳ ನಿಜವಾದ ಪೂರ್ವಜರೆಂದರೆ ಇಂಗ್ಲೆಂಡಿನ ಅಕ್ಕಸಾಲಿಗರೇ ಎಂದು ಸಾಧಿಸುವವರೂ ಇದ್ದಾರೆ.

ದೊರೆಯ ಕೃತ್ಯ

ಬ್ಯಾಂಕುಗಳ ಈ ಬಗೆಯ ಕಲಾಪಗಳ ವಿಕಾಸಕ್ಕೆ ಪರೋಕ್ಷವಾಗಿ ಕಾರಣನಾದವನೆಂದರೆ ಇಂಗ್ಲೆಂಡಿನ ದೊರೆ ಒಂದನೆಯ ಚಾರ್ಲ್ಸ್. ದೊರೆ ಚಾರ್ಲ್ಸನನ್ನು ಇಂಗ್ಲೆಂಡಿನ ಪಾರ್ಲಿಮೆಂಟು ದೇಶದ್ರೋಹಿಯೆಂದು ಪರಿಗಣಿಸಿ 1649ರಲ್ಲಿ ಅವನ ತಲೆ ಕಡಿಸಿಹಾಕಿತು. ಆದರೆ 1640ರಲ್ಲಿ ಚಾರ್ಲ್ಸ್ ಮಾಡಿದ ಒಂದು ಕೃತ್ಯದಿಂದಾಗಿ ಠೇವಣಿ ಬ್ಯಾಂಕಿಂಗ್ ಸಾಧ್ಯವಾಯಿತೆನ್ನಬೇಕು. ಇದಕ್ಕಾಗಿಯೂ ಬಹುಶಃ ಚಾರ್ಲ್ಸನನ್ನು ನಾವು ನೆನೆಯಬೇಕು,

ಪಾರ್ಲಿಮೆಂಟಿನೊಡನೆ ಬಡಿದಾಟ ಹಾಗೂ ಅಂತರ ಯುದ್ಧದಿಂದಾಗಿ ಚಾರ್ಲ್ಸ್ ಹಣದ ಪೇಚಿಗೆ ಸಿಕ್ಕಿಕೊಂಡಿದ್ದ. ಲಂಡನ್ನಿನ ವ್ಯಾಪಾರಿಗಳು ಸರಕಾರದ ಟಂಕಸಾಲೆಯಲ್ಲಿ ಇಟ್ಟಿದ್ದ ಚಿನ್ನದ ಮೇಲೆ ಅವನ ಕಣ್ಣು ಬಿತ್ತು. ಚಾರ್ಲ್ಸ್ ಅದನ್ನು ಮುಟ್ಟುಗೋಲು ಹಾಕಿಕೊಂಡ. ವರ್ತಕರು ಬೊಬ್ಬೆಯಿಟ್ಟರು. ತನಗೆ ಸಾಲ ನೀಡುವುದಾದರೆ ಮಾತ್ರ ಆ

ಚಿನ್ನವನ್ನು ಬಿಡುಗಡೆ ಮಾಡುವುದಾಗಿ ಅವನು ಷರತ್ತು ಹಾಕಿದ. ದೊರೆಯ ಈ ಕೃತ್ಯದಿಂದಾಗಿ ಟಂಕಸಾಲೆಯಲ್ಲಿ ತಮ್ಮ ಧನಕನಕವನ್ನು ಇಡುವುದು ಎಷ್ಟು ಅಭದ್ರವೆಂಬುದು ವರ್ತಕರಿಗೆ ಮನವರಿಕೆಯಾಯಿತು. ಅದನ್ನು ಭದ್ರವಾಗಿ ಇಡುವ ಬೇರೆ ತಾಣ ಯಾವುದೆಂದು ಅವರು ಯೋಚಿಸತೊಡಗಿದರು. ಅವರ ಕಣ್ಣಿಗೆ ಅಕ್ಕಸಾಲಿಗರು ಬಿದ್ದರು. ತಮ್ಮ ಗ್ರಾಹಕರು ಒಡವೆ ಮಾಡಲು ಕೊಟ್ಟ ಚಿನ್ನವನ್ನು ಸುರಕ್ಷಿತವಾಗಿ ಇಡುವುದಕ್ಕಾಗಿ ಭದ್ರ ತಿಜೋರಿಗಳನ್ನಿಟ್ಟುಕೊಂಡಿರುವುದು ಅಕ್ಕಸಾಲಿಗರ ವಾಡಿಕೆ. ಹಣವಿದ್ದ ವರ್ತಕರೂ ಶ್ರೀಮಂತ ಭೂ ಒಡೆಯರೂ ಅಕ್ಕಸಾಲಿಗರ ಬಳಿಗೆ ಹೋದರು. ಅಕ್ಕಸಾಲಿಗರು ಅವರ ಹಣವನ್ನು ಭದ್ರ ಸುಫರ್ದಿಗಾಗಿ ತೆಗೆದುಕೊಂಡರು. ಇದು ಮೊದಲ ಠೇವಣಿ; ಅದರ ಭ್ರೂಣಾವಸ್ಥೆ.

ಬ್ಯಾಂಕು ವ್ಯವಹಾರದ ವಿಕಾಸ

ಯೂರೋಪಿನ ಹಣ ವರ್ಗಾವಣೆ ಬ್ಯಾಂಕುಗಳು ತಮ್ಮಲ್ಲಿ ಗ್ರಾಹಕರು ಇಟ್ಟ ಠೇವಣಿಗಳನ್ನು ಮುಟ್ಟದೆ ಹಾಗೇ ಇಡಬೇಕೆಂಬ ತತ್ತ್ವವನ್ನು ಅನುಸರಿಸುತ್ತಿದ್ದುವು. ಆದರೆ ಇಂಗ್ಲೆಂಡಿನ ಅಕ್ಕಸಾಲಿಗರು ಇಂಥ ನಿಷ್ಠುರ ವ್ರತಕ್ಕೇನೂ ಬಹುಕಾಲ ಕಟ್ಟುಬೀಳಲಿಲ್ಲ. ಠೇವಣಿಗಳನ್ನು ಸಾಲ ನೀಡುವುದಕ್ಕಾಗಿ ಬಳಸಿಕೊಳ್ಳುವುದಾಗಿ ಅವರು ತಮ್ಮ ಠೇವಣಿದಾರರಿಗೆ ಸ್ಪಷ್ಟವಾಗಿ ತಿಳಿಸಿದರು. ಹಣವನ್ನು ಭದ್ರ ಸುಪರ್ದಿಗಾಗಿ ಇಟ್ಟುಕೊಳ್ಳಲು ಶುಲ್ಕ ವಿಧಿಸುವ ಬದಲು, ತಾವೇ ಠೇವಣಿಗಳ ಮೇಲೆ ಬಡ್ಡಿ ಕೊಡಲಾರಂಭಿಸಿದರು. ದೀರ್ಘಕಾಲ ಇಡಲಾದ ಠೇವಣಿಗಳು ತಮಗೆ ಲಾಭಕರವೆಂಬುದು ಅವರಿಗೆ ಮನವರಿಕೆಯಾಯಿತು. ಬೇಡಿದಾಗ ವಾಪಸ್ ಪಾವತಿ ಮಾಡಬೇಕೆಂಬ ಷರತ್ತಿನ ಠೇವಣಿಗಳ ಮೇಲೆ ಬಡ್ಡಿ ಕೊಡುವುದನ್ನು ಅನಂತರ ಅವರು ನಿಲ್ಲಿಸಿದರು. ದೀರ್ಘ ಅವಧಿಗಳ ಠೇವಣಿಗಳ ಮೇಲೆ ಅವುಗಳ ದೀರ್ಘತೆಗಳಿಗೆ ಅನುಗುಣವಾದ ದರಗಳಲ್ಲಿ ಬಡ್ಡಿ ಕೊಡಲಾರಂಭಿಸಿದರು. ಠೇವಣಿಗಳನ್ನು ಸ್ವೀಕರಿಸಿದ್ದಕ್ಕೆ ರುಜುವಾತಾಗಿ ಅವರು ನೀಡುತ್ತಿದ್ದ ರಸೀತಿಗಳು ಹಣವಾಗಿ ಚಲಾವಣೆಯಾಗತೊಡಗಿದುವು. ಠೇವಣಿದಾರರು ಇತರರಿಗೆ ಹಣ ಪಾವತಿ ಮಾಡಬೇಕಾದಾಗ ಈ ರಸೀತಿಗಳನ್ನೇ ಅವರ ಹೆಸರುಗಳಿಗೆ ವರ್ಗಾಯಿಸಿ ಕೊಡುತ್ತಿದ್ದುದುಂಟು. ಇವೇ ಇಂಗ್ಲೆಂಡಿನ ಅತ್ಯಂತ ಪ್ರಾಚೀನ ರೂಪದ ನೋಟುಗಳೆನ್ನಬಹುದು. ಇವು ಕೇಳಿದಾಗ ಪಾವತಿ ಮಾಡುವುದಾಗಿ ಅಕ್ಕಸಾಲಿಗರು ಮಾಡಿದ ವಾಗ್ದಾನಗಳಾಗಿದ್ದುವು. ಅಕ್ಕಸಾಲಿಗರ ಪ್ರತ್ಯಯದಲ್ಲಿ ಜನಕ್ಕೆ ನಂಬಿಕೆಯಿದ್ದುದರಿಂದ, ಇವನ್ನು ವರ್ಗವಾಗಿ ಪಡೆದವರು ಅನೇಕ ವೇಳೆ ಅಕ್ಕಸಾಲಿಗರ ಬಳಿಗೆ ಕೂಡಲೇ ಓಡಿಹೋಗಿ ಇವಕ್ಕೆ ಪ್ರತಿಯಾಗಿ ಹಣವನ್ನು ಪಡೆದುಕೊಳ್ಳುತ್ತಿರಲಿಲ್ಲ.

ಆದ್ದರಿಂದ ಅಕ್ಕಸಾಲಿಗರಲ್ಲಿ ಠೇವಣಿಯಾಗಿ ಇಡಲಾಗಿದ್ದ ಹಣದ ಒಂದು ಭಾಗವನ್ನಷ್ಟೇ ಅವರು ಪಾವತಿಗಾಗಿ ಇಟ್ಟುಕೊಂಡಿದ್ದರೆ ಸಾಕಾಗಿತ್ತು. ಎಷ್ಟನ್ನು ಇಟ್ಟುಕೊಂಡಿದ್ದರೆ ಸಾಕೆಂಬುದು ಅನುಭವದಿಂದ ಅವರಿಗೆ ಗೊತ್ತಾಯಿತು. ಆದ್ದರಿಂದ ಅವರು ಅನೇಕರಿಗೆ ಸಾಲ ಕೊಡುವುದಕ್ಕೂ ತೊಡಗಿದರು. ಅವರು ಕೊಡು ತಿದ್ದುದು ಹಣವನ್ನೇ ಅಲ್ಲ, ಠೇವಣಿ ರಸೀತಿಗಳು, ಈ ರಸೀತಿಗಳನ್ನೇ ಹಣವೆಂದು ಗ್ರಾಹಕರು ಪರಿಗಣಿಸುತ್ತಿದ್ದರು. ಲಂಡನ್ನಿನ ವರ್ತಕರು ತಮಗೆ ಪಾವತಿಯಾಗಬೇಕಾದ ಹುಂಡಿಗಳನ್ನು ಈ ಅಕ್ಕಸಾಲಿಗರಿಗೆ ಕೊಟ್ಟು, ಅವನ್ನು ಮುರಿಸಿ ಹಣ ಪಡೆಯುತ್ತಿದ್ದರು, ಎಂದರೆ ಸಾಲ ಪಡೆಯುತ್ತಿದ್ದರು. ಹುಂಡಿಯ ಮುಖ ಮೌಲ್ಯದಲ್ಲಿ ಸ್ವಲ್ಪ ಅಂಶವನ್ನು ಅಕ್ಕಸಾಲಿಗರು ಹಿಡಿದುಕೊಂಡು ಉಳಿದ ಮೊಬಲಗನ್ನೇ ಈ ವರ್ತಕರಿಗೆ ಪಾವತಿ ಮಾಡುತ್ತಿದ್ದದ್ದು. ಹೀಗೆ ಹಿಡಿದುಕೊಳ್ಳುತ್ತಿದ್ದದ್ದು ಅಕ್ಕಸಾಲಿಗರ ಶುಲ್ಕ; ಇದು ವಟ್ಟ.

ಸಾಲದ ಮೂಲಕವೋ, ತಮಗೆ ಹಣ ಪಾವತಿ ಮಾಡಿದ್ದರಿಂದಲೋ ಅಕ್ಕಸಾಲಿಗರು ಒದಗಿಸುತ್ತಿದ್ದ ಠೇವಣಿಗಳನ್ನು ಗ್ರಾಹಕರು ಹಲವು ಬಗೆಯಾಗಿ ಬಳಸಿಕೊಳ್ಳಬಹುದಾಗಿತ್ತು, ಅಕ್ಕಸಾಲಿಗರಲ್ಲಿ ಈ ರೀತಿ ಠೇವಣಿ ಇಟ್ಟಿದ್ದವರು ತಮ್ಮ ತಮ್ಮಲ್ಲಿ ಇದನ್ನು ವರ್ಗಾಯಿಸಿಕೊಳ್ಳಬಹುದಾಗಿತ್ತು. ಹೀಗೆ ಪರಸ್ಪರ ಋಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದು ಸಾಧ್ಯವಿತ್ತು. ಅಕ್ಕಸಾಲಿಗರು ಮಾಡುತ್ತಿದ್ದದ್ದು ಇಷ್ಟೆ: ಲೆಕ್ಕಪುಸ್ತಕದಲ್ಲಿ ಒಬ್ಬ ಗ್ರಾಹಕನ ಖಾತೆಯಿಂದ ಒಂದು ನಿಶ್ಚಿತ ಮೊಬಲಗನ್ನು ಕಳೆದು ಇನ್ನೊಬ್ಬನ ಖಾತೆಗೆ ಕೂಡಿಸುವುದು. ಠೇವಣಿಯ ಮೊಬಲಗನ್ನು ಕೇಳಿದಾಗ ಪಾವತಿ ಮಾಡಬೇಕೆಂಬ ಷರತ್ತಿಗೆ ಅಕ್ಕಸಾಲಿಗರ ಬದ್ಧರಾಗಿದ್ದುದರಿಂದ, ಬೇರೆ ಯಾವೊಬ್ಬನಿಗಾಗಲಿ ಇಂತಿಷ್ಟು ಮೊಬಲಗು ಪಾವತಿ ಮಾಡತಕ್ಕದ್ದೆಂದು ತನ್ನ ಅಕ್ಕಸಾಲಿಗನಿಗೆ ಆದೇಶ ನೀಡಬಹುದಿತ್ತು. ಇಂಥ ಆದೇಶಗಳೇ ಮೊದಮೊದಲ ಚೆಕ್ಕುಗಳು.

ದ್ರವತ್ವಕ್ಕೆ ಧಕ್ಕೆ

ಲಂಡನ್ನಿನ ಅಕ್ಕಸಾಲಿಗರು ಈ ರೀತಿ ಹಣ–ವಹಿವಾಟುಗಳಲ್ಲಿ ತೊಡಗಿ, ಬಲಿಷ್ಠರಾಗತೊಡಗಿದಾಗ ಇಂಗ್ಲೆಂಡಿನ ಸರಕಾರದ ಖಜಾನೆಯ ಕಣ್ಣು ಅವರ ಮೇಲೆ ಬಿತ್ತು. ಅವರಿಗೂ ಖಜಾನೆಗೂ ನಡುವೆ ವ್ಯವಹಾರ ಬೆಳೆಯಿತು. ಆದರೆ ರಾಜದೃಷ್ಟಿ ಯಾವಾಗಲೂ ಒಳ್ಳೆಯದೇ ಆಗಿರುವುದಿಲ್ಲ. 1672ರಲ್ಲಿ ಸರಕಾರ ಒಮ್ಮೆಲೇ ಅಕ್ಕಸಾಲಿಗರಿಗೆ ಹಣ ಪಾವತಿಯನ್ನು ನಿಲ್ಲಿಸಿತು. ಹಣಕಾಸಿನ ತೊಂದರೆಯೇ ಕಾರಣ. ಅಕ್ಕಸಾಲಿಗರ ದ್ರವತ್ವಕ್ಕೆ ಧಕ್ಕೆ ಉಂಟಾಯಿತು. ಕೇಳಿದಾಗ ಕೊಡುವುದಾಗಿ ಠೇವಣಿದಾರರಿಗೆ ನೀಡಿದ ವಾಗ್ದಾನವನ್ನು ಅವರು ಪಾಲಿಸಲಾಗಲಿಲ್ಲ. ಗ್ರಾಹಕರಿಗೆ ಅವರಲ್ಲಿ

ನಂಬಿಕೆ ಕರಗಿತು. ಗ್ರಾಹಕರು ಒಮ್ಮೆಲೇ ಹಣಕ್ಕೆ ತಗಾದೆ ಮಾಡಿದರು. ಅನೇಕ ಅಕ್ಕಸಾಲಿಗರು ಕಕ್ಕಾಬಿಕ್ಕಿಯಾದರು. ಬಹುತೇಕ ಅಕ್ಕಸಾಲಿಗರು ದಿವಾಳಿಯಾದರು. ಸರಕಾರದ ಪ್ರತ್ಯಯ ನಷ್ಟವಾಯಿತು. ಅಕ್ಕಸಾಲಿಗರ ಬ್ಯಾಂಕಿಂಗ್ ವ್ಯವಹಾರವನ್ನು ಮೊಳಕೆಯಲ್ಲೇ ಚಿವುಟಿ ಹಾಕಿದಂತಾಯಿತು.

ಇದರಿಂದ ಇಂಗ್ಲೆಂಡಿನ ವರ್ತಕರಿಗೆ ಬಹಳ ತೊಂದರೆಯಾಯಿತು. ಸರಕಾರದ ಅಧೀನದಲ್ಲಿಲ್ಲದ ಸುಭದ್ರ ಹಣಕಾಸು ಸಂಸ್ಥೆಯೊಂದು ಅವರ ವ್ಯವಹಾರಗಳಿಗೆ ಅವಶ್ಯವಾಗಿತ್ತು. ಅಕ್ಕಸಾಲಿಗರು ಈ ಕಾರ್ಯಭಾರವನ್ನು ತಕ್ಕ ಮಟ್ಟಿಗೆ ನಿರ್ವಹಿಸುತ್ತಿದ್ದರು. ಅವರ ಸ್ಥಾನದಲ್ಲಿ ಸಾರ್ವಜನಿಕ ಸಂಸ್ಥೆಯೊಂದನ್ನು ಸ್ಥಾಪಿಸಲು ಅಂದಿನ ರಾಜಕೀಯ ಪರಿಸ್ಥಿತಿ ಪ್ರತಿಕೂಲಕರವಾದ್ದಾಗಿತ್ತು. ಇಂಗ್ಲೆಂಡಿನ ದೊರೆಗೂ ಅಲ್ಲಿಯ ಪಾರ್ಲಿಮೆಂಟಿಗೂ ನಡುವೆ ಪರಮಾಧಿಕಾರಕ್ಕಾಗಿ ಬಡಿದಾಟ ನಡೆದಿತ್ತು. ಸರಕಾರ ಯಾವುದೇ ಸಾಲವನ್ನೆತ್ತಬೇಕಾದರೂ ಅದಕ್ಕೆ ತನ್ನ ಸಮ್ಮತಿ ಅಗತ್ಯ ಎಂಬುದು ಪಾರ್ಲಿಮೆಂಟಿನ ನಿಲುವು. ನಾಗರಿಕ ಹಕ್ಕುಗಳನ್ನು ಮೊಟಕು ಮಾಡುವ ಯಾವುದೇ ಕ್ರಮಕ್ಕೆ ಅದು ಒಪ್ಪಲಿಲ್ಲ. ಸರ ಕಾರಕ್ಕೆ ಸಾಲ ಕೊಡಲು ಶಕ್ತವಾದ ಬ್ಯಾಂಕೊಂದರ ಸ್ಥಾಪನೆಯಾದರೆ ಆಗ ಸರಕಾರ ಹಣಕ್ಕಾಗಿ ಪಾರ್ಲಿಮೆಂಟಿನ ಕೈ ಕಾಯಬೇಕಾಗಿರದ ಸ್ಥಿತಿ ಬಂದೀತೆಂದು ಪಾರ್ಲಿಮೆಂಟ್ ಶಂಕಿಸಿತು. ಹಣದ ಮೇಲೆ ಹಿಡಿತ ಹೊಂದುವುದರ ಮೂಲಕ ದೊರೆಯನ್ನು ಸಾಂಕುಶನನ್ನಾಗಿ ಮಾಡಬೇಕೆಂಬುದು ಪಾರ್ಲಿಮಂಟಿನ ಸಂಕಲ್ಪ. ಪರಮಾಧಿಕಾರ ನಿಹಿತವಾಗಿರಬೇಕಾದ್ದು ತನ್ನಲ್ಲೇ ಹೊರತು ದೊರೆತನದಲ್ಲಲ್ಲವೆಂಬುದನ್ನು ಸಾಧಿಸುತ್ತಿದ್ದ ಪಾರ್ಲಿಮೆಂಟು ತನ್ನ ಈ ನಿಲುವನ್ನು ದುರ್ಬಲಗೊಳಿಸುವ ಯಾವುದೇ ಯೋಜನೆಗೆ ಬೆಂಬಲ ನೀಡಲು ಒಪ್ಪುತ್ತಿರಲಿಲ್ಲ. 1688ರಲ್ಲಿ ಇಂಗ್ಲೆಂಡಿನಲ್ಲಿ ಆದ ಕ್ರಾಂತಿಯ ಫಲವಾಗಿ ಎರಡನೆಯ ಜೇಮ್ಸ್ ದೊರೆ ಪದಚ್ಯುತನಾದ. ಅವನ ಅಳಿಯ ಮೂರನೆಯ ವಿಲಿಯಂ ಇಂಗ್ಲೆಂಡಿನ ದೊರೆಯಾದ, ರಾಜಕೀಯ ವಾತಾವರಣ ತಿಳಿಗೊಂಡಿತು.

ಪೇಟರ್ಸನ್ ಯೋಜನೆ

ಬ್ಯಾಂಕೊಂದರ ಸ್ಥಾಪನೆಗೆ ಅನೇಕರು ಯೋಜನೆಗಳನ್ನು ಮಂಡಿಸಿದ್ದರು. ಅವುಗಳ ಪೈಕಿ ವಿಲಿಯಂ ಪೇಟರ್‌ಸನ್ ಎಂಬವನದು ಕಾರ್ಯರೂಪಕ್ಕೆ ಬಂತು. ಸರಕಾರಕ್ಕೆ ಸಾಲ ನೀಡುವುದರ ಮೂಲಕ ಬ್ಯಾಂಕನ್ನು ಸ್ಥಾಪಿಸುವ ಯೋಜನೆ ಅದು. ಸರಕಾರ ಹೊಸದಾಗಿ ವಿಧಿಸಲು ಒಪ್ಪಿಗೆ ಪಡೆದಿದ್ದ ತೆರಿಗೆಗಳ ಆಧಾರದ ಮೇಲೆ ಹನ್ನೆರಡು ಲಕ್ಷ ಪೌಂಡುಗಳ ಸಾಲವೆತ್ತಲು ಅದಕ್ಕೆ ಅಧಿಕಾರ ನೀಡಲಾಗಿತ್ತು. ವರ್ಷಕ್ಕೆ ಒಂದು ಲಕ್ಷ ಪೌಂಡುಗಳಂತೆ ಇದನ್ನು

ಮರು ಪಾವತಿ ಮಾಡಬೇಕೆಂಬುದು ಒಂದು ಷರತ್ತು. 1694ರ
ಏಪ್ರಿಲ್ 25ರಂದು ನೀಡಲಾದ ಸನ್ನದಿನ ಪ್ರಕಾರ ಸರಕಾರದ ಈ ಸಾಲಿಗರ ಸಂಸ್ಥೆಯ ಸ್ಥಾಪನೆಯಾಯಿತು. ಬ್ಯಾಂಕ್ ಆಫ್ ಇಂಗ್ಲೆಂಡಿನ ಗವರ್ನರ್ ಮತ್ತು ಕಂಪೆನಿ' ಎಂದು ಇದರ ಹೆಸರು. ಬ್ಯಾಂಕಿಂಗ್ ಕಲಾಪಗಳಲ್ಲಿ ನಿರತವಾಗಲು ಇದಕ್ಕೆ ಹಕ್ಕು ದೊರಕಿತು. ಚಿನ್ನ ಬೆಳ್ಳಿ ಗಟ್ಟಿಗಳ ಖರೀದಿ, ಹುಂಡಿಗಳ ವಟಾವಣೆ, ಆಧಾರಿತ ಸಾಲಗಳ ನೀಡಿಕೆ – ಇವು ಇದರ ಮುಖ್ಯ ಬ್ಯಾಂಕಿಂಗ್ ಕಲಾಪಗಳು. ಸರಕಾರಕ್ಕೆ ನೀಡಿದ ಸಾಲವೇ ಇದರ ಬಂಡವಾಳ. ಕಾರ್ಯನಿರ್ವಹಣೆಗೆ ಅಗತ್ಯವಾದ ಬಂಡವಾಳಕ್ಕಾಗಿ ಬ್ಯಾಂಕು ಠೇವಣಿಗಳನ್ನು ಸ್ವೀಕರಿಸಬಹುದಾಗಿತ್ತು. ತನ್ನ ಬಂಡವಾಳದ ಭಾಗವಾಗಿದ್ದ ಪರಕ್ರಾಮ್ಯ ಪ್ರತಿಭೂತಿಗಳ (negotiable securities) ಆಧಾರದ ಮೇಲೆ ಇದು ನೋಟುಗಳನ್ನು ನೀಡಬಹುದಾಗಿತ್ತು. ಮುಂದೆ ಸರಕಾರಕ್ಕೆ ಬ್ಯಾಂಕು ಹೆಚ್ಚು ಹೆಚ್ಚು ಸಾಲ ನೀಡಿದಂತೆಲ್ಲ ಇದರ ಬಂಡವಾಳವೂ ಏರುತ್ತ ಹೋಯಿತು, ಇದರ ನೋಟು ನೀಡಿಕೆಯ ಪರಿಮಿತಿಯೂ ವಿಸ್ತರಿಸುತ್ತ ಸಾಗಿತ್ತು. ಆದರೆ ಪರಕ್ರಾಮ್ಯ ಪ್ರತಿಭೂತಿಗಳ ಮೇಲೆ ಮಾತ್ರವೇ ನೋಟು ನೀಡಬಹುದಾಗಿತ್ತು. ಬ್ಯಾಂಕ್ ಆಫ್ ಇಂಗ್ಲೆಂಡ್ ಹೀಗೆ ಪ್ರಪ್ರಥಮ ಆಧುನಿಕ ನೋಟು ನೀಡಿಕೆ ಬ್ಯಾಂಕು ಆಯಿತು. ಜೊತೆಗೆ ಇದು ಗ್ರಾಹಕರ ಖಾತೆಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಹಣವನ್ನು ವರ್ಗಾಯಿಸುವ ಕೆಲಸವನ್ನೂ, ವಾಣಿಜ್ಯ ಬ್ಯಾಂಕಿಂಗ್ ವ್ಯವಹಾರವನ್ನೂ ಮಾಡುತ್ತಿತ್ತು. ಬಹುಕಾಲ ಇದು ಇಂಗ್ಲೆಂಡಿನ ಏಕೈಕ ಕೂಡುಬಂಡವಾಳ ಬ್ಯಾಂಕಾಗಿ ಮುಂದುವರಿಯಿತು. ಸರಕಾರದ ಬ್ಯಾಂಕಾಗಿಯೂ ವಾಣಿಜ್ಯ ಬ್ಯಾಂಕಾಗಿಯೂ
ಕಾರ್ಯನಿರ್ವಹಿಸುತ್ತಿದ್ದದ್ದು ಇದರ ವೈಶಿಷ್ಟ್ಯ.

03.

ಡಿಸೆಂಬರ್ 1981
ಎರಡು ವರ್ಷಗಳ ಸಾಧನೆ

ಈ ಸಂಚಿಕೆಯೊಂದಿಗೆ ' ಬ್ಯಾಂಕಿಂಗ್ ಪ್ರಪಂಚ' ಎರಡು ವರ್ಷಗಳನ್ನು ಪೂರೈಸುತ್ತಿದೆ. ಈ ಎರಡು ವರ್ಷಗಳಲ್ಲಿ ಪತ್ರಿಕೆಯ ಸಾಧನೆ ನಾಚಿಕೊಳ್ಳುವಂಥದೇನೂ ಅಲ್ಲ ಎಂಬುದು ನಮ್ಮ ನಂಬಿಕೆ. ಹಣ ಬ್ಯಾಂಕಿಂಗ್ ವಿಚಾರಗಳಿಗಾಗಿಯೇ ಮೀಸಲಾದ ಪತ್ರಿಕೆಯೊಂದು ಭಾರತದ ಬೇರಾವ ಭಾಷೆಯಲ್ಲೂ ಇಲ್ಲವೆಂಬುದು ನಮ್ಮ ತಿಳಿವಳಿಕೆ. ಇದಕ್ಕಾಗಿ ಕನ್ನಡಿಗರು ಹೆಮ್ಮೆಪಟ್ಟುಕೊಂಡಾರೆಂಬುದು ನಮ್ಮ ಆಸೆ.

ಆದರೆ ಇತರ ಭಾಷೆಗಳವರಲ್ಲಿರುವಂಥ ಅಭಿಮಾನ ಕನ್ನಡಿಗರಲ್ಲಿ ಇಲ್ಲವೆಂಬುದು ಅನುಭವದಿಂದ ನಮಗೆ ಮತ್ತೊಮ್ಮೆ ಮನವರಿಕೆಯಾಗುತ್ತಿದೆ.
ಅಭಿಮಾನಪಡಬೇಕಾದ ಸಂದರ್ಭದಲ್ಲಿ ಅದೆಲ್ಲಿ ದುರಭಿಮಾನವಾದೀತೋ ಎಂದು ಅಳುಕಿ ಅದನ್ನು ದೂರೀಕರಿಸುವುದು ಕನ್ನಡಿಗರ ಹುಟ್ಟುಗುಣ. ಇದು ಶ್ರೇಯಸ್ಕರವಲ್ಲ, ನಾವು ಯಾವುದನ್ನು ಧಾರಾಳತೆಯೆಂದು ಭಾವಿಸುತ್ತೇವೋ ಅದರ ದುರ್ಲಾಭ ಪಡೆದು ಇತರರು ನಮ್ಮನ್ನು ತುಳಿಯುತ್ತಾರೆ. ಜ್ಞಾನಪ್ರಸಾರಕ್ಕೆಂದೇ ಮೀಸಲಾದ ಈ ಪತ್ರಿಕೆಯನ್ನು ಸಂಶಯದ ಕಣ್ಣುಗಳಿಂದಲೇ ನೋಡುವವರೂ ಇದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳಿಗೆ ಇಂಥ ಪ್ರಯತ್ನವೂ ಸಹನೀಯವೆನಿಸುವುದಿಲ್ಲ. ಇಂದು ರಾಜ್ಯದ ಇತರ ಎಲ್ಲ ಕ್ಷೇತ್ರಗಳಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತರ ಭಾಷೆಗಳವರದೇ, ಇತರ ರಾಜ್ಯಗಳವರದೇ ಮೇಲುಗೈ ಆಗಿದೆ. ವ್ಯವಹಾರದಲ್ಲಿ, ಉದ್ಯೋಗದಲ್ಲಿ, ನೀತಿನಿರ್ದೇಶನದಲ್ಲಿ ಹೀಗೆ ಎಲ್ಲ ವಿಚಾರಗಳಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಇದು ಭಾಷೆಯ ಪ್ರಶ್ನೆ ಮಾತ್ರವೇ ಅಲ್ಲ. ನಮ್ಮವರ ಜೀವನ ಸಂಪಾದನೆಯ ಪ್ರಶ್ನೆ, ಅಳಿವು–ಉಳಿವಿನ ಪ್ರಶ್ನೆ. ಇದನ್ನು ಅರಿತು ಕನ್ನಡಿಗರು ತಮ್ಮ ಪರಂಪರಾಗತ ಜಡತ್ವವನ್ನು ಕೊಡವಿ ತಮ್ಮ ಹಿತರಕ್ಷಣೆಗಾಗಿ ಜಾಗೃತರಾಗದಿದ್ದರೆ ಕರ್ನಾಟಕವೆಂಬುದು ರಾಜ್ಯದ ಹೆಸರಾಗಿ ಮಾತ್ರ ಉಳಿಯುವ ಕಾಲ ದೂರವಿಲ್ಲ. ಅಂಥ ಕಾಲ ಬಾರದಂತೆ ನಾವು ಕಾರ್ಯಪ್ರವೃತ್ತರಾಗಬೇಕಾಗಿದೆ.

ಈ ಎರಡು ವರ್ಷಗಳಲ್ಲಿ 'ಬ್ಯಾಂಕಿಂಗ್ ಪ್ರಪಂಚ' ಅನೇಕ ಹೊಸ ಲೇಖಕರನ್ನು ಸೃಷ್ಟಿಸಿದೆಯೆಂದು ಹೆಮ್ಮೆಪಟ್ಟುಕೊಳ್ಳಬಹುದಾಗಿದೆ.
ಬ್ಯಾಂಕುಗಳಿದ್ದಲ್ಲಿಗೆ ಜನ ಹೋಗುತ್ತಿದ್ದ ಕಾಲ ದೂರವಾಗಿ, ಜನತೆ ಇದ್ದಲ್ಲಿಗೆ ಬ್ಯಾಂಕುಗಳು ಬರುತ್ತಿರುವ ಈ ಕಾಲದಲ್ಲಿ 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯ ಪಾತ್ರ ಎಷ್ಟು ಮಹತ್ವದ್ದು ಎಂಬುದನ್ನು ಹೇಳಬೇಕಾದ್ದಿಲ್ಲ. ಬ್ಯಾಂಕಿಂಗ್ ಇಂದು ಕೇವಲ ಲಾಭಗಳಿಕೆಯ

ಉದ್ಯಮವಾಗಿಲ್ಲ. ಜನಸಾಮಾನ್ಯರ ಸರ್ವತೋಮುಖ ಏಳಿಗೆಯ ಸಾಧನೆಯೇ ಬ್ಯಾಂಕುಗಳ ಕರ್ತವ್ಯವಾಗಿದೆ. ಅವು ಇಂದು ಕೇವಲ ವಾಣಿಜ್ಯ ಬ್ಯಾಂಕುಗಳಾಗಿ ಉಳಿದಿಲ್ಲ. ಅವುಗಳ ಕಾರ್ಯಭಾರಗಳ ಗಡಿರೇಖೆ ದೂರ ದೂರ ಸರಿಯುತ್ತಿದೆ, ದಿಗಂತ ವಿಸ್ತರಿಸುತ್ತಿದೆ. ಈ ಸಂದರ್ಭದಲ್ಲಿ ಬ್ಯಾಂಕುಗಳು ತಮ್ಮ ಎಲ್ಲ ವ್ಯವಹಾರಗಳನ್ನೂ ಜನರ ಭಾಷೆಯಲ್ಲೇ ನಡೆಸುವುದು ಅತ್ಯವಶ್ಯವಾಗಿದೆ. ಇದು ಕೇವಲ ಭಾಷಾಭಿಮಾನದ ಪ್ರಶ್ನೆಯಲ್ಲ, ಬ್ಯಾಂಕುಗಳ ಸೇವೆಯನ್ನು ಸಾರ್ಥಕಗೊಳಿಸುವ ಪ್ರಶ್ನೆ, ಬ್ಯಾಂಕಿಂಗ್ ಸಂದೇಶವನ್ನು ಜನಕ್ಕೆ ತಲಪಿಸುವ ಪ್ರಶ್ನೆ. ಬ್ಯಾಂಕುಗಳಲ್ಲಿ ಕೆಲಸಮಾಡುವವರು ಜನರ ಭಾಷೆ ಆಡುವವರಾಗಬೇಕು. ಜನರಿಗೆ ತಿಳಿಯುವ ಭಾಷೆಯಲ್ಲಿ ಎಲ್ಲ ದಾಖಲೆಗಳನ್ನೂ ರಚಿಸಬಲ್ಲವರಾಗಬೇಕು. ಹೀಗೆ ಆದಾಗ ಮಾತ್ರ ಬ್ಯಾಂಕುಗಳು ಜನತೆಯವಾಗುತ್ತವೆ. ಜನಕ್ಕೆ ಗೊತ್ತಿಲ್ಲದ ಭಾಷೆಯಲ್ಲಿ ಉದ್ದುದ್ದನೆಯ ಆದರ್ಶಗಳನ್ನು ಸಾರುವುದರಿಂದ, ಯೋಜನೆಗಳನ್ನು ಹಾಕುವುದರಿಂದ ಜನಕ್ಕೆ ಅವಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆಂಬುದು ನಮ್ಮ ಧುರೀಣರಿಗೆ ಇನ್ನೂ ಅರ್ಥವಾಗದಿರುವುದು ತುಂಬ ವಿಷಾದದ ಸಂಗತಿ. ನಮ್ಮ ರಾಜ್ಯದ ಬಹುತೇಕ ಬ್ಯಾಂಕುಗಳಲ್ಲಿ ಅನ್ಯಭಾಷೆಗಳವರೇ ತುಂಬಿದ್ದಾರೆ. ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತ ಪ್ರಸಾರಕಾರ್ಯದಲ್ಲಿ ತೊಡಗಿರುವ 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯ ಪ್ರಕಟನೆಗೆ ಉತ್ತೇಜನ ನೀಡುವ ಮಾತು ಹಾಗಿರಲಿ, ಇದಕ್ಕೆ ತಡೆಯೊಡ್ಡುವವರಿದ್ದಾರೆ. ಇಲ್ಲಿಯ ಉಪ್ಪು ತಿಂದು ಈ ರಾಜ್ಯಕ್ಕೇ ದ್ರೋಹ ಬಗೆಯುವ ಜನರನ್ನು ಬೆಳಸುತ್ತಿರುವುದಕ್ಕೆ ಕನ್ನಡಿಗರ ಅಭಿಮಾನರಾಹಿತ್ಯವೇ ಮುಖ್ಯ ಕಾರಣ.

ನಮ್ಮ ಬುದ್ಧಿವಂತ'ರೆನಿಸಿಕೊಂಡವರಿಗೆ ಈ ಬಗೆಗೆ ತಿಳಿವಳಿಕೆ ನೀಡುವ ಕಾರ್ಯದಲ್ಲಿ ಬ್ಯಾಂಕಿಂಗ್ ಪ್ರಪಂಚ' ಉದ್ಯುಕ್ತವಾಗಿದೆ: ಹಿರಿತನದ ಹಮ್ಮಿನಿಂದಲ್ಲ; ಸಹಯೋಗದಲ್ಲಿ ನಂಬಿಕೆಯಿಟ್ಟು ಈ ನಿಟ್ಟಿನಲ್ಲಿ ನಡೆಯುತ್ತಿದೆ. ಕನ್ನಡದಲ್ಲಿ ಲೇಖನ ಬರೆಯುವವರಿಲ್ಲ, ಬರೆಯುವುದು ಸುಲಭವಲ್ಲ ಎಂಬುದು ತಪ್ಪು ಎನ್ನುವುದಕ್ಕೆ 'ಬ್ಯಾಂಕಿಂಗ್ ಪ್ರಪಂಚದಲ್ಲಿ ಬಂದಿರುವ ಲೇಖನಗಳು ಸಾಕ್ಷಿ. ಬ್ಯಾಂಕಿಂಗ್ ಉದ್ಯಮದಲ್ಲಿ ನಿರತರಾದವರಿಗೆ ಬ್ಯಾಂಕುಗಳೊಂದಿಗೆ ವ್ಯವಹಾರ ನಡೆಸುವವರಿಗೆ, ಬ್ಯಾಂಕಿಂಗ್ ವಿಷಯ ಕಲಿಯುವವರಿಗೆ, ಬೋಧಿಸುವವರಿಗೆ ಸಂಶೋಧಕರಿಗೆ ಎಲ್ಲರಿಗೂ ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆ ಅತ್ಯವಶ್ಯ. ಈ ಎಲ್ಲರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ.

ಭಾರತೀಯ ಸ್ಟೇಟ್ ಬ್ಯಾಂಕಿನ ಕನ್ನಡ ಸಂಘಗಳ ಸಮನ್ವಯ ಸಮಿತಿಯಿಂದ

'ಬ್ಯಾಂಕಿಂಗ್ ಪ್ರಪಂಚ' ಪ್ರಕಟವಾಗುತ್ತಿರುವುದರಿಂದ ಇದು ಆ ಬ್ಯಾಂಕಿನ ಪತ್ರಿಕೆ, ಅದರ ಚಟುವಟಿಕೆಗಳ ಪ್ರಕಟನೆಗೆ ಮೀಸಲಾದ ಪತ್ರಿಕೆ, ಅದರ ಗೃಹಪತ್ರಿಕೆ ಎಂಬ ಭಾವನೆ ಹಲವರಲ್ಲಿದ್ದಂತಿದೆ. ಇದು ಆ ಬ್ಯಾಂಕಿನ ಪತ್ರಿಕೆಯಲ್ಲವೆ? ನಾವೇಕೆ ಇದನ್ನು ಪಡೆದು ಓದಬೇಕು?' ಎಂದು ಕೇಳುವವರಿದ್ದಾರೆ. ಈ ಭಾವನೆ ಸರಿಯಲ್ಲ. ಹಣ ಬ್ಯಾಂಕಿಂಗ್ ಕುರಿತು ಕನ್ನಡದಲ್ಲಿ ವಿವೇಚನೆ ನಡಸುವುದೂ ಬೆಳಸುವುದೂ ಈ ಪತ್ರಿಕೆಯ ಉದ್ದೇಶ. ಕನ್ನಡಕ್ಕಾಗಿ, ಬ್ಯಾಂಕಿಂಗಿನಲ್ಲಿ ಆಸಕ್ತಿ ಉಳ್ಳ ಎಲ್ಲರಿಗಾಗಿ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಈ ಪತ್ರಿಕೆಯ ಪ್ರಕಟನೆಯ ಹೊರೆಹೊತ್ತಿದೆ. ಎಲ್ಲ ಕನ್ನಡಿಗರ ಬೆಂಬಲವನ್ನು ಇದು ಕೋರುತ್ತದೆ. ಈ ಪತ್ರಿಕೆಯ ಓದುಗರು ಈ ವಿಷಯವನ್ನು ತಮ್ಮ ಮಿತ್ರರಿಗೆಲ್ಲ ತಿಳಿಸಬೇಕು. ಹೆಚ್ಚು ಹೆಚ್ಚು ಮಂದಿ ಇದರ ಚಂದಾದಾರರಾಗಿ ಇದನ್ನು ಓದಿದರೆ, ಇದರೊಂದಿಗೆ ಸಂವಾದ ಬೆಳಸಿದರೆ, ಸಲಹೆ ಸೂಚನೆ ಬೆಂಬಲ ನೀಡಿದರೆ ಆಗ ಪತ್ರಿಕೆ ಸಾರ್ಥಕವಾಗುತ್ತದೆ. ಹಣ ಬ್ಯಾಂಕಿಂಗ್ ವಿಚಾರಗಳಲ್ಲಿ ಆಸಕ್ತರಾದ ಯಾರಾದರೂ ಇದಕ್ಕೆ ಲೇಖನ ಬರೆಯಬಹುದು. ಅವರಿಗೆ ಸದಾ ಸ್ವಾಗತ.

ಸಂಚಿಕೆಯಿಂದ ಸಂಚಿಕೆಗೆ ಪತ್ರಿಕೆ ಹೆಚ್ಚು ಹೆಚ್ಚು ಉಪಯುಕ್ತವಾಗಲು ಪ್ರಯತ್ನಿಸುತ್ತಿದೆ. ಈ ಸಂಚಿಕೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಕುರಿತ ಲೇಖನಗಳೇ ಅಧಿಕ ಸಂಖ್ಯೆಯಲ್ಲಿವೆ. ಸಣ್ಣ ಕೈಗಾರಿಕೆಗಳ ಸ್ವರೂಪ, ಸ್ಥಾನಮಾನ, ಸಮಸ್ಯೆಗಳು, ಸಣ್ಣ ಕೈಗಾರಿಕೆಗಳಿಗೆ ಸಾಂಸ್ಥಿಕ ನೆರವು ಇವನ್ನು ಕುರಿತಂತೆ ಸರಕಾರದ ನೀತಿ, ನೆರವು ಸಂಸ್ಥೆಗಳ ಸಮನ್ವಯ ಸಾಧನೆ ಮುಂತಾದ ಅನೇಕ ವಿಚಾರಗಳ ವಿವೇಚನೆ ಇಲ್ಲಿದೆ. ಹೀಗೆ ಪ್ರತಿ ಸಂಚಿಕೆಯಲ್ಲೂ ಸಾಧ್ಯವಾದ ಮಟ್ಟಿಗೆ ಯಾವುದಾದರೊಂದು ಪ್ರಮುಖ ವಿಷಯದ ನಾನಾ ಮುಖಗಳನ್ನು ಕುರಿತ ಲೇಖನಗಳನ್ನು ಪ್ರಕಟಿಸುವ ಉದ್ದೇಶವಿದೆ. ಅಂತೆಯೇ ಸಾಧ್ಯವಾದರೆ ಪ್ರತಿಯೊಂದು ಸಂಚಿಕೆಯಲ್ಲಿ ಒಂದು ಪ್ರಮುಖ ಬ್ಯಾಂಕಿಂಗ್ ಸಂಸ್ಥೆಯ ಪರಿಚಯ ನೀಡಬೇಕೆಂದೂ ಯೋಚಿಸಲಾಗಿದೆ. ಹಳೆಯ ಮೈಸೂರು ಸಂಸ್ಥಾನದಲ್ಲಿ ಡಾ॥ ಎಂ. ವಿಶ್ವೇಶ್ವರಯ್ಯನವರಿಂದ ಸ್ಥಾಪಿತವಾಗಿ, ಬೆಳೆದು ಹೆಮ್ಮರವಾಗಿ, ರಾಜ್ಯದಲ್ಲಿ ಹೆಮ್ಮೆಯ ಸ್ಥಾನ ಗಳಿಸಿ, ಈಗ ಭಾರತೀಯ ಸ್ಟೇಟ್ ಬ್ಯಾಂಕಿನ ಸಹ ಸಂಸ್ಥೆಯಾಗಿ ಇನ್ನೂ ವಿಸ್ತರಿಸುತ್ತಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಪರಿಚಯ ಲೇಖನ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. ಮೈಸೂರು ಬ್ಯಾಂಕ್' ಎಂದೇ ಇಂದಿಗೂ ಜನರ ಬಾಯಲ್ಲಿ ಉಳಿದಿರುವ ಈ ಬ್ಯಾಂಕಿನ ಸಾಧನೆ ಅಲ್ಪವೇನಲ್ಲ. ಅಚ್ಚಕನ್ನಡಿಗರ ಸಂಸ್ಥೆಯಾಗಿ ಆರಂಭವಾದ ಈ ಸಂಸ್ಥೆ ತನ್ನ ಕನ್ನಡತನವನ್ನು ಉಳಿಸಿಕೊಳ್ಳುವಂತೆ ಹೆಣಗುವುದು ಎಲ್ಲ ಕನ್ನಡಿಗರ ಕರ್ತವ್ಯವೆಂದರೆ ತಪ್ಪಲ್ಲ. ಮುಂದಿನ ವರ್ಷದಿಂದ 'ಬ್ಯಾಂಕಿಂಗ್

ಪ್ರಪಂಚ' ಜೂನ್ ಮತ್ತು ಡಿಸೆಂಬರ್ ಬದಲು ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಪ್ರಕಟವಾಗುತ್ತದೆ. ಇದುವರೆಗೆ ಪತ್ರಿಕೆಯನ್ನು ತಮ್ಮದೆಂದು ಭಾವಿಸಿ ಇದಕ್ಕೆ ಎಲ್ಲ ಬಗೆಯ ಪ್ರೋತ್ಸಾಹ ನೀಡಿದ ಲೇಖಕರು, ಚಂದಾದಾರರು ಮತ್ತು ಜಾಹೀರಾತುದಾರರಿಗೆ ಪತ್ರಿಕೆ ಧನ್ಯವಾದ ಹೇಳುತ್ತದೆಯಲ್ಲದೆ, ಮುಂದಿನ ವರ್ಷಗಳಲ್ಲಿ ಇದನ್ನು ಬೆಳಸುತ್ತ ಹೋಗಬೇಕೆಂದು ಪ್ರಾರ್ಥಿಸುತ್ತದೆ. ಪತ್ರಿಕೆಯನ್ನು ಅತ್ಯಂತ ಆಕರ್ಷಕವಾಗಿ ಸಕಾಲದಲ್ಲಿ ಮುದ್ರಿಸಿಕೊಡುತ್ತಿರುವ ಈಸ್ಟರ್ನ್ ಪ್ರೆಸ್ಸಿನ ಒಡೆಯರಾದ ಶ್ರೀ ಚಿಂತಾಮಣಿ ಅವರಿಗೂ ಅವರ ದಕ್ಷ ಸಿಬ್ಬಂದಿವರ್ಗಕ್ಕೂ ಪತ್ರಿಕೆ ತುಂಬ ಆಭಾರಿಯಾಗಿದೆ.

04.

ಏಪ್ರಿಲ್ 1983
ನಮ್ಮ ಅಭಿಮಾನ

'ಬ್ಯಾಂಕಿಂಗ್ ಪ್ರಪಂಚ' ಮೂರು ವರ್ಷಗಳನ್ನು ಮುಗಿಸಿ ನಾಲ್ಕನೆಯ ವರ್ಷದಲ್ಲಿ ಕಾಲಿರಿಸುತ್ತಿದೆಯೆಂಬುದು, ಉಳಿದವರಿಗೆ ಹೇಗೆ ಅನಿಸಲಿ, ನಮಗಂತೂ ತುಂಬ ಸಂತೋಷದ ಸಂಗತಿ. ಬೇರೆ ಯಾವ ಭಾರತೀಯ ಭಾಷೆಯಲ್ಲಿ ಬ್ಯಾಂಕಿಂಗ್ ಕುರಿತ ಇಂಥ ಒಂದು ಪತ್ರಿಕೆ ಇಲ್ಲವೆಂಬುದು ನಮ್ಮ ಅಭಿಮಾನಕ್ಕೆ ಒಂದು ಮುಖ್ಯ ಕಾರಣ. ಕನ್ನಡಿಗರ 'ಅಭಿಮಾನ' ಎಂಥದು ಎಂಬುದು ಎಲ್ಲರಿಗೂ ಗೊತ್ತಿರುವಾಗ, ಇದು ಮೂರು ವರ್ಷಗಳನ್ನು ಕ್ರಮಿಸಿ ಮುನ್ನಡೆಯುತ್ತಿದೆಯೆಂಬುದು ನಮ್ಮ ಅಭಿಮಾನವನ್ನು ಇಮ್ಮಡಿಗೊಳಿಸುತ್ತದೆ. ಸರಕಾರದ, ಬ್ಯಾಂಕಿಂಗ್ ಸಂಸ್ಥೆಗಳ, ಪ್ರತಿಷ್ಟಿತರೆನಿಸಿಕೊಂಡವರ ಯಾವ ಬಗೆಯ ಪ್ರೋತ್ಸಾಹವೂ ಇಲ್ಲದಿದ್ದರೂ, ಕನ್ನಡ ಹಾಗೂ ಬ್ಯಾಂಕಿಂಗ್‌ನಲ್ಲಿ ಆಸಕ್ತಿಯುಳ್ಳ ಕೆಲವೇ ಮಂದಿ ಉತ್ಸಾಹಿಗಳ ಬಲ ಹಾಗೂ ಬೆಂಬಲದಿಂದ ಇದು ಇಷ್ಟರಮಟ್ಟಿಗೆ ನಡೆದು ಬರುತ್ತಿದೆಯೆಂಬುದು ಸೋಜಿಗವೆನಿಸಬಹುದು. ಇಂಥ ಯಾವುದೇ ಕೆಲಸಕ್ಕೆ ಮುಂದೆ ಬರುವವರೂ, ಅದರ ಹಿಂದೆ ನಿಂತು ಪ್ರೋತ್ಸಾಹ ನೀಡುವವರೂ ಯಾವಾಗಲೂ ಬಲು ಕಡಿಮೆಯೇ. ಆದರೆ ಇದರಲ್ಲಿ ಸಂಖ್ಯೆ ಮುಖ್ಯವಲ್ಲ, ಸತ್ತ್ವ ಮುಖ್ಯ. ಈ ನಂಬಿಕೆಯಿಂದಲೇ ನಾವು ಮುಂದುವರಿಯುತ್ತಿದ್ದೇವೆ.

ಹಣ, ಬ್ಯಾಂಕಿಂಗ್ ಮತ್ತು ತತ್ಸಂಬಂಧಿ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಆಲೋಚಿಸಬಲ್ಲ, ಕನ್ನಡದಲ್ಲಿ ಬರೆಯಬಲ್ಲ, ಮಾತಾಡಬಲ್ಲ ತರುಣರ ತಂಡವನ್ನು ಈ ಪತ್ರಿಕೆ ನಿರ್ಮಿಸುತ್ತಿದೆಯೆಂಬುದು ನಮಗೆ ಹೆಮ್ಮೆಯ ಸಂಗತಿ. ಆರಂಭದಿಂದಲೂ ಈ ಪತ್ರಿಕೆ ದೊಡ್ಡ ದೊಡ್ಡ ಹೆಸರುಗಳ ಬೆನ್ನಟ್ಟಿ ಹೋದದ್ದಿಲ್ಲ. ಇದಕ್ಕಾಗಿ ದುಡಿಯುತ್ತಿರುವವರಲ್ಲೇ ಸುಪ್ತವಾಗಿರುವ ಶಕ್ತಿಯನ್ನು ಗುರುತಿಸಿ ಅದನ್ನು ಹೊರಗೆಳೆದು ನಿಶ್ಚಿತ ದಿಕ್ಕುಗಳಲ್ಲಿ ಹರಿಯುವ ಹಾಗೆ ಮಾಡುವುದರಲ್ಲಿ ಪತ್ರಿಕೆ ಯಶಸ್ವಿಯಾಗುತ್ತಿದೆ. ಇದೊಂದು ದೊಡ್ಡ ಸಾಧನೆಯೆಂದೇ ನಮ್ಮ ಅನಿಸಿಕೆ.

ಬ್ಯಾಕಿಂಗ್ ಕನ್ನಡ ಕಮ್ಮಟ

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಈ ನಿಟ್ಟಿನಲ್ಲಿ ಈಚೆಗೆ ಒಂದು ದೊಡ್ಡ ಹೆಜ್ಜೆ ಇಟ್ಟಿದೆ. ಹಣ, ಬ್ಯಾಂಕಿಂಗ್ ಮುಂತಾದ ವಿಚಾರಗಳನ್ನು ಕುರಿತು ಬರೆಯುವವರ ತರಬೇತಿಗಾಗಿ ಕಮ್ಮಟಗಳನ್ನು ನಡೆಸುತ್ತಿದೆ. ಕಳೆದ ವರ್ಷ ಇಂಥ ಎರಡು ಕಮ್ಮಟಗಳನ್ನು ಅನುಕ್ರಮವಾಗಿ ಮೈಸೂರು ಮತ್ತು ಶಿವನಸಮುದ್ರಗಳಲ್ಲಿ ಯಶಸ್ವಿಯಾಗಿ ನಡೆಸಿದೆ. ಮೂರನೆಯ ಕಮ್ಮಟ ಈ ಏಪ್ರಿಲ್ ತಿಂಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಡೆಯುತ್ತಿದೆ. ಮೊದಲ ಎರಡು

ಕಮ್ಮಟಗಳಲ್ಲಿ ವಿವಿಧ ಬ್ಯಾಂಕುಗಳ ಸುಮಾರು ಹದಿನೈದು ಮಂದಿ ಭಾಗವಹಿಸಿದ್ದರು. ಮೊದಲನೆಯ ಕಮ್ಮಟದ ಅವಧಿ ನಾಲ್ಕು ದಿನ; ಎರಡನೆಯದರದು ಆರು ದಿನ. ಭಾಗಿಗಳು ಕಮ್ಮಟದಲ್ಲಿ ತಾವು ರಚಿಸಿದ ಪ್ರಬಂಧಗಳನ್ನು ಮಂಡಿಸಿದರು. ಹಣ ಬ್ಯಾಂಕಿಂಗ್ ವಿಚಾರಗಳನ್ನು ಕುರಿತ ಇಂಗ್ಲಿಷ್ ಲೇಖನಗಳನ್ನು ಅನುವಾದಿಸಿದರು. ಈ ಪ್ರಬಂಧಗಳನ್ನು ಹಾಗೂ ಅನುವಾದಗಳನ್ನು ಉತ್ತಮಪಡಿಸುವ ಬಗ್ಗೆ ಭಾಗಿಗಳು ಚರ್ಚೆ ನಡೆಸಿದರು. ಇದು ಸಾಮೂಹಿಕ ಚಿಂತನೆ ಹಾಗೂ ಅಭಿವ್ಯಕ್ತಿಯಲ್ಲಿ ಒಂದು ಸಾರ್ಥಕ ಪ್ರಯೋಗ. ಯಾವುದೇ ವಿಷಯವನ್ನಾದರೂ ಅರ್ಥವಾಗುವ ರೀತಿಯಲ್ಲಿ ಕನ್ನಡದಲ್ಲಿ ಹೇಳುವುದು ಸಾಧ್ಯ ಎಂಬ ಆತ್ಮವಿಶ್ವಾಸ ಮೂಡಿಸಿದ ಈ ಕಮ್ಮಟಗಳಲ್ಲಿ ಕೆಲವರಾದರೂ ಸಮರ್ಥ ಲೇಖಕರು ಸೃಷ್ಟಿಯಾಗಿದ್ದಾರೆಂದು ನಮ್ಮ ಅನಿಸಿಕೆ. ಪಾರಿಭಾಷಿಕ ಪದಗಳ ಸೃಷ್ಟಿ, ಬ್ಯಾಂಕುಗಳಲ್ಲಿ ಬಳಸಲಾಗುವ ಹಲವಾರು ನಮೂನೆಗಳ ಕನ್ನಡೀಕರಣ ಇವುಗಳ ವಿಚಾರವಾಗಿಯೂ ಉಪಯುಕ್ತವಾದ ಚರ್ಚೆಗಳು ನಡೆದುವು. ಕೆಲವು ಸೂತ್ರಗಳನ್ನು ರೂಪಿಸಲಾಯಿತು. ಈ ಕಮ್ಮಟಗಳಿಂದ 'ಬ್ಯಾಂಕಿಂಗ್ ಪ್ರಪಂಚ'ಕ್ಕೆ ಸಂದಿರುವ ದೊಡ್ಡ ಲಾಭವೆಂದರೆ ಉಪಯುಕ್ತವಾದ ಕೆಲವು ಸ್ವತಂತ್ರ ಹಾಗೂ ಅನುವಾದಿತ ಲೇಖನಗಳ ಪ್ರಾಪ್ತಿ. ಎರಡನೆಯ ಕಮ್ಮಟದಲ್ಲಿ ಮಂಡಿಸಲಾದ ಕೆಲವು ಪ್ರಬಂಧಗಳನ್ನೂ ಅನುವಾದಗಳನ್ನೂ ಈ ಸಂಚಿಕೆಯಲ್ಲಿ ಕೊಡಲಾಗಿದೆ. ಇವುಗಳಿಂದ ನಮ್ಮ ಓದುಗರಿಗೆ ತುಂಬ ಪ್ರಯೋಜನವಾದೀತೆಂದು ಬಗೆದಿದ್ದೇವೆ. ಬ್ಯಾಂಕುಗಳಲ್ಲಿ ಬಳಸಲಾಗುವ ಕೆಲವು ನಮೂನೆಗಳ ಕನ್ನಡ ರೂಪಗಳನ್ನು ಪ್ರತ್ಯೇಕವಾಗಿ ಕೊಡಲಾಗುತ್ತದೆ. ಕನ್ನಡ ನಮ್ಮ ರಾಜ್ಯದ ಅಧಿಕೃತ ಭಾಷೆಯಾಗಿರುವ ಈ ಸುಮುಹೂರ್ತದಲ್ಲಿ ಈ ಕನ್ನಡ ನಮೂನೆಗಳು ಕರ್ನಾಟಕದ ಎಲ್ಲ ಬ್ಯಾಂಕುಗಳಲ್ಲಿ ಬಳಕೆಗೆ ಬರುತ್ತವೆಂದು ಹಾರೈಸುತ್ತೇವೆ. 'ಬ್ಯಾಂಕಿಂಗ್ ಪ್ರಪಂಚ'ದ ಸಂಚಿಕೆಗಳಲ್ಲಿ ಪ್ರಕಟವಾಗುತ್ತಿರುವ 'ಪಾರಿಭಾಷಿಕ ಪದಕೋಶ'ವೂ ಬ್ಯಾಂಕಿಂಗಿನಲ್ಲಿ ಆಸಕ್ತರಾದವರಿಗೆಲ್ಲ ಉಪಯುಕ್ತವಾಗುವುದೆಂದು ನಮ್ಮ ನಂಬಿಕೆ.

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘ

ಭಾರತೀಯ ಸ್ಟೇಟ್ ಬ್ಯಾಂಕ್ ಅನೇಕ ವಿಚಾರಗಳಲ್ಲಿ ವಿಕ್ರಮ ಸಾಧಿಸಿದೆ. ಅದು ಪ್ರಪಂಚದ ಅತ್ಯಂತ ದೊಡ್ಡ ವಾಣಿಜ್ಯ ಬ್ಯಾಂಕು. ಬ್ರಿಟಿಷರ ಕಾಲದಲ್ಲಿ 'ಇಂಪೀರಿಯಲ್ ಬ್ಯಾಂಕ್' ಎಂಬ ಹೆಸರಿನಿಂದ ಆರಂಭವಾಗಿ ಕೇಂದ್ರೀಯ ಬ್ಯಾಂಕಿನ ಅನೇಕ ಕಾರ್ಯಭಾರಗಳನ್ನು ನಿರ್ವಹಿಸುತ್ತಿದ್ದ ಈ ಬ್ಯಾಂಕು ರಿಸರ್ವ್ ಬ್ಯಾಂಕಿನ ಸ್ಥಾಪನೆಯೊಂದಿಗೆ ಈ ಕಾರ್ಯಭಾರಗಳನ್ನು ಬಿಟ್ಟುಕೊಟ್ಟಿತಾದರೂ ಭಾರತದ ವಾಣಿಜ್ಯ

ಬ್ಯಾಂಕುಗಳ ಮುಂದಾಳುತನವನ್ನು ಬೆಳೆಸಿಕೊಂಡೇ ಬಂತು. ವಿದೇಶೀಯರ ಹತೋಟಿಯಲ್ಲಿದ್ದ ಈ ಬ್ಯಾಂಕಿನ ಭಾರತೀಕರಣವಾಗಬೇಕೆಂಬ ಕೂಗು ಇದ್ದೇ ಇತ್ತು. ಸ್ವತಂತ್ರ ಭಾರತದಲ್ಲಿ ಇದು ಅಪ್ಪಟ ಭಾರತೀಯವಾಯಿತು. ಸಾಮ್ರಾಜ್ಯಶಾಹಿಯ ದ್ಯೋತಕವಾದ ಹಳೆಯ ಹೆಸರನ್ನೂ ಕಳೆದುಕೊಂಡು ಭಾರತೀಯ ಸ್ಟೇಟ್ ಬ್ಯಾಂಕ್ ಆಯಿತು. ಹಲವು ರಾಜ್ಯಗಳ ಸರಕಾರಗಳ ಬ್ಯಾಂಕುಗಳನ್ನೂ ಒಡನಾಡಿಗಳಾಗಿ ಸೇರಿಸಿಕೊಂಡು ಪ್ರಭಾವ ಗಳಿಸಿ ಕೊಂಡಿತು. ಇಂದು ಹಲವು ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕರಣಗೊಂಡಿವೆಯಾದರೂ ಭಾರತೀಯ ಸ್ಟೇಟ್ ಬ್ಯಾಂಕಿನ ಹಿರಿತನ ಬೆಳೆಯುತ್ತಲೇ ಇದೆ. ದೇಶದ ಆರ್ಥಿಕಾಭಿವೃದ್ಧಿ ಹಾಗೂ ಕಲ್ಯಾಣ ಸಾಧನೆಯಲ್ಲಿ ಅದರ ಪಾತ್ರ ಬಲು ದೊಡ್ಡದು.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಭಾರತೀಯ ಸ್ಟೇಟ್ ಬ್ಯಾಂಕಿನ ಉದ್ಯೋಗಿಗಳು ಒಂದು ಪವಾಡವನ್ನೇ ಮಾಡಿದ್ದಾರೆ. ಈ ಬ್ಯಾಂಕಿನ ಬೆಂಗಳೂರು ನಗರ ಶಾಖೆಯ ಕನ್ನಡಿಗರು ಹತ್ತು ವರ್ಷಗಳ ಹಿಂದೆ ಒಂದು ಕನ್ನಡ ಸಂಘ ಸ್ಥಾಪಿಸಿಕೊಂಡರು. 'ಹಚ್ಚೇವು ಕನ್ನಡದ ದೀಪ' ಎಂಬುದು ಅವರ ಧ್ಯೇಯ. ಅವರು ಅಂದು ಹಚ್ಚಿದ ದೀಪ ಇಂದು ಜ್ವಾಜ್ವಲ್ಯಮಾನವಾಗಿದೆ. ಬ್ಯಾಂಕಿನ ಹಲವು ಶಾಖೆಗಳಲ್ಲಿ ಕನ್ನಡ ಸಂಘಗಳ ಸ್ಥಾಪನೆಯಾಗಿದೆ. ಈ ಕನ್ನಡ ಸಂಘಗಳೆಲ್ಲ ಸೇರಿ 'ಸಮನ್ವಯ ಸಮಿತಿ'ಯನ್ನು ರಚಿಸಿಕೊಂಡು ಸಂಘಟಿತವಾಗಿವೆ. 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯನ್ನು ಪ್ರಕಟಿಸಲು ಸಾಧ್ಯವಾಗಿರುವುದು ಈ ಸಂಘಟನೆಯ ಫಲ. ಇಂದು ಇತರ ಬ್ಯಾಂಕುಗಳ ಶಾಖೆಗಳಲ್ಲಿ ಕನ್ನಡ ಸಂಘಗಳ ಸ್ಥಾಪನೆಯಾಗಿರುವುದು ತುಂಬಾ ಸಂತೋಷ ಸಂಗತಿ. ಭಾರತೀಯ ಸ್ಟೇಟ್ ಬ್ಯಾಂಕ್ ಈ ನಿಟ್ಟಿನಲ್ಲಿ ಇತರ ಬ್ಯಾಂಕುಗಳಿಗೆ ಮಾರ್ಗದರ್ಶನ ನೀಡಿದೆಯೆನ್ನಬೇಕು. ಇದಕ್ಕಾಗಿ ಗೌರವ ಸಲ್ಲಬೇಕಾದ್ದು ಭಾರತೀಯ ಸ್ಟೇಟ್ ಬ್ಯಾಂಕಿನ ಉತ್ಸಾಹಿ ಕನ್ನಡಿಗರಿಗೆ.

ದಶಮಾನೋತ್ಸವ

ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ನಗರ ಶಾಖೆ ಕಳೆದ ಡಿಸೆಂಬರ್ 9ರಿಂದ 12ರ ವರೆಗೆ ದಶಮಾನೋತ್ಸವ ಆಚರಿಸಿತು. ಈ ಸಂಬಂಧವಾಗಿ ಏರ್ಪಡಿಸಿದ್ದ ಉಪನ್ಯಾಸಗಳ ಹಾಗೂ ಮನೋರಂಜನೆಯ ಕಾರ್ಯಕ್ರಮಗಳ ಜೊತೆಗೆ ಪುಸ್ತಕ ಪ್ರಕಟನೆ, ವಿಚಾರ ಸಂಕಿರಣ ಮುಂತಾದವನ್ನೂ ಇಟ್ಟುಕೊಂಡಿದ್ದುದು ಒಂದು ವೈಶಿಷ್ಟ್ಯ. ಬ್ಯಾಂಕಿಂಗ್ ಕುರಿತ ಹತ್ತು ವಿಭಿನ್ನ ವಿಷಯಗಳ ಮೇಲೆ ಹತ್ತು ಮಂದಿ ತಜ್ಞರು ದಶಮಾನೋತ್ಸವ ವರ್ಷದಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ ಕನ್ನಡ

ಸಂಘದ ಆಶ್ರಯದಲ್ಲಿ ನೀಡಿದ ಭಾಷಣಗಳ ಸಂಕಲನವೇ 'ಕನ್ನಡದಲ್ಲಿ ಬ್ಯಾಂಕಿಂಗ್' ಎಂಬ ಪುಸ್ತಕವಾಗಿ ಪ್ರಕಟವಾಗಿದೆ. ಕನಾಟಕದಲ್ಲಿ ಬ್ಯಾಂಕಿಂಗ್ ವ್ಯವಹಾರ ಕನ್ನಡದಲ್ಲೇ ಏಕೆ ನಡೆಯಬೇಕು ಎಂಬುದರ ವಿವೇಚನೆ ಇಲ್ಲಿದೆ. ಮಾತ್ರವಲ್ಲ, ಬ್ಯಾಂಕಿಂಗ್ ಕುರಿತ ಯಾವ ವಿಚಾರವನ್ನೇ ಆಗಲಿ ಕನ್ನಡದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸುವದು ಸಾಧ್ಯ ಎಂಬುದಕ್ಕೆ ಈ ಪುಸ್ತಕ ಸಾಕ್ಷಿಯಾಗಿದೆ. ಅಂತೆಯೇ, 'ಕರ್ನಾಟದಲ್ಲಿ ಬ್ಯಾಂಕಿಂಗ್ ಇನ್ನೂ ಸಾಕಷ್ಟು ಇಲ್ಲ' ಎಂಬ ವಿಷಯವನ್ನು ಕುರಿತು ಬ್ಯಾಂಕಿಂಗ್ ಕ್ಷೇತ್ರದ ನಾಲ್ವರು ಪರಿಣತರು ನಡೆಸಿಕೊಟ್ಟ ವಿಚಾರ ಸಂಕಿರಣವೂ ತುಂಬ ಉನ್ನತಮಟ್ಟದ್ದಾಗಿತ್ತು. ಈ ಸಂಕಿರಣದಲ್ಲಿ ಮಾಡಲಾದ ಭಾಷಣಗಳು ಪುಸ್ತಕ ರೂಪದಲ್ಲಿ ಬೇಗ ಹೊರಬರಲೆಂಬುದು ನಮ್ಮ ಆಶಯ.

ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು

'ದಶಮಾನೋತ್ಸವ' ಸಂದರ್ಭದಲ್ಲಿ ಏರ್ಪಡಿಸಿದ್ದ ಇನ್ನೊಂದು ಕಾರ್ಯಕ್ರಮವೂ ಗಮನಾರ್ಹ. ವಿವಿಧ ಬ್ಯಾಂಕುಗಳ ಕನ್ನಡ ಸಂಘಗಳ ಪ್ರತಿನಿಧಿಗಳ ಸಭೆ ಅದು. ಬ್ಯಾಂಕಿಂಗ್ ಹಾಗೂ ಕನ್ನಡಕ್ಕೆ ಸಂಬಂಧಿಸಿದ ನಾನಾ ಸಮಸ್ಯೆಗಳನ್ನು ಕುರಿತ ಚರ್ಚೆ ನಡೆಸಿ ಮುಂದಿನ ದಾರಿಯೇನೆಂಬುದನ್ನು ಕಂಡುಕೊಳ್ಳುವುದು ಈ ಸಭೆಯ ಉದ್ದೇಶ. ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತೊಂದನ್ನು ಸ್ಥಾಪಿಸಬೇಕೆಂಬುದು ಇದರ ಮುಖ್ಯ ತೀರ್ಮಾನ. ಅಂತೆಯೇ ಇದರ ರೂಪರೇಷೆ ಇದೀಗ ಸಿದ್ಧವಾಗಿದೆ. ಎಲ್ಲ ಬ್ಯಾಂಕುಗಳ ಕನ್ನಡ ಸಂಘಗಳನ್ನು ಪ್ರತಿನಿಧಿಸುವ ಇಂಥ ಸಂಸ್ಥೆಯೊಂದು ಜನ್ಮ ತಳೆದಾಗ ಕರ್ನಾಟಕದಲ್ಲಿ ಬ್ಯಾಂಕಿಂಗಿನ, ಬ್ಯಾಂಕುಗಳಲ್ಲಿ ಕನ್ನಡದ ಹಾಗೂ ಕನ್ನಡಿಗರ ಹಿತರಕ್ಷಣೆಯ ಹಾದಿಯಲ್ಲಿ ಅದೊಂದು ಪ್ರಮುಖ ಹೆಜ್ಜೆಯಾದೀತೆಂಬುದರಲ್ಲಿ ಸಂದೇಹವಿಲ್ಲ.

ಸ್ಟೇಟ್ ಬ್ಯಾಂಕ್ ಕರ್ನಾಟಕ ವೃತ್ತ

ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ನಗರ ಶಾಖೆಯ ದಶಮಾನೋತ್ಸವದ ನೆನಪು ಇನ್ನೂ ಹಸುರಾಗಿರುವಾಗಲೇ ಸಂತಸದ ಸುದ್ದಿಯೊಂದು ಬಂದಿದೆ. ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕವಾಗಿ ಈ ಬ್ಯಾಂಕಿನ ವೃತ್ತವೊಂದನ್ನು ಸ್ಥಾಪಿಸಬೇಕೆಂದು ಸರ್ಕಾರ ತೀರ್ಮಾನಿಸಿದೆ. ಇದುವರೆಗೂ ಭಾರತೀಯ ಸ್ಟೇಟ್ ಬ್ಯಾಂಕಿನ ಕರ್ನಾಟಕದ ಶಾಖೆಗಳು ಮದ್ರಾಸಿನಲ್ಲಿರುವ ಸ್ಥಳೀಯ ಮುಖ್ಯ ಕಛೇರಿಯ ಅಧಿಕಾರವ್ಯಾಪ್ತಿಗೆ ಒಳಪಟ್ಟು ಕಾರ್ಯನಿರ್ವಹಿಸುತ್ತ ಬಂದಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲೊಂದು ಪ್ರಾದೇಶಿಕ ಕಛೇರಿ ಇರುವುದಾದರೂ, ಎಲ್ಲ ಪ್ರಮುಖ ವಿಚಾರಗಳಲ್ಲಿ ಇದು ಮದ್ರಾಸಿನ ಕಛೇರಿಗೆ ಅಧೀನವಾಗಿ

ಕಾರ್ಯ ನಿರ್ವಹಿಸಬೇಕಾಗಿದೆ. ಇದರಿಂದಾಗಿ ತಿಳಿದೂ ತಿಳಿಯದೆಯೂ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಅಷ್ಟಿಷ್ಟಲ್ಲ. ಠೇವಣಿ ಸಂಗ್ರಹಣೆಯಲ್ಲಿ ಕರ್ನಾಟಕ ರಾಜ್ಯ ಶಾಖೆಗಳು ಇತರ ಹಲವು ರಾಜ್ಯ ಶಾಖೆಗಳಿಗಿಂತಲೂ ಮುಂದು, ಆದರೆ ಈ ಹಣದ ವಿನಿಯೋಗದ ವಿಚಾರದಲ್ಲಿ ಹಿಂದು. ಕರ್ನಾಟಕ ರಾಜ್ಯದಲ್ಲಿ ಈ ಬ್ಯಾಂಕಿನ ಶಾಖೆಗಳನ್ನು ತೆರೆಯುವ ವಿಚಾರದಲ್ಲೂ ಅಷ್ಟೆ, ಕೇವಲ ಕೆಲವು ವರ್ಷಗಳ ಹಿಂದೆ ಭಾರತೀಯ ಸ್ಟೇಟ್ ಬ್ಯಾಂಕಿನ ಕೆಲವೇ ಶಾಖೆಗಳನ್ನು ಹೊಂದಿದ್ದ ಅನೇಕ ರಾಜ್ಯಗಳಲ್ಲಿ ಇಂದು ಕರ್ನಾಟಕದಲ್ಲಿ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಶಾಖೆಗಳಿವೆ. ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಶಾಖೆಗಳಿಲ್ಲವಾದ್ದರಿಂದ ಇದಕ್ಕೆ ಪ್ರತ್ಯೇಕ ಸ್ಥಳೀಯ ಮುಖ್ಯ ಕಛೇರಿಯ ಅಗತ್ಯವಿಲ್ಲವೆಂಬ ವಾದವನ್ನು ಮುಂದಿಡಲಾಗುತ್ತಿತ್ತು. ಆದರೆ ಇದಕ್ಕಿಂತ ಕಡಿಮೆ ಸಂಖ್ಯೆಯ ಶಾಖೆಗಳಿದ್ದ ರಾಜ್ಯಗಳಲ್ಲಿ ಸ್ಥಳೀಯ ಮುಖ್ಯ ಕಛೇರಿಗಳನ್ನು ಸ್ಥಾಪಿಸಲಾಗಿಲ್ಲವೆ? ಎಂಬ ಪ್ರಶ್ನೆಗೂ ಉತ್ತರವಿತ್ತು. ಆ ರಾಜ್ಯಗಳಲ್ಲಿ ಹಿಂದೆಯೇ ಅವನ್ನು ಕೊಟ್ಟಾಗಿಬಿಟ್ಟಿದೆ; ಈಗೇನೂ ಮಾಡಲಾಗುವುದಿಲ್ಲ, ಎಂಬುದು ಆ ಉತ್ತರ. ಕರ್ನಾಟಕದಲ್ಲೇ ಹುಟ್ಟಿ ಬೆಳೆದ ಅನೇಕ ಬ್ಯಾಂಕಿಂಗ್ ಸಂಸ್ಥೆಗಳಿರುವುದರಿಂದ, ಈ ವಿಚಾರದಲ್ಲಿ ಈ ರಾಜ್ಯ ಸಾಕಷ್ಟು ಮುಂದುವರಿದಿರುವುದರಿಂದ ರಾಜ್ಯದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಗಳನ್ನು ವಿಸ್ತರಿಸುವ ಪ್ರಶ್ನೆಯಾಗಲಿ, ಪ್ರತ್ಯೇಕ ವೃತ್ತರಚನೆಯ ಪ್ರಶ್ನೆಯಾಗಲಿ ಉದ್ಭವಿಸುವುದಿಲ್ಲವೆಂದೂ ಹೇಳಲಾಗುತ್ತಿತ್ತು. ಆದರೆ ಇದೇ ರೀತಿ ಇನ್ನೂ ಕೆಲವು ರಾಜ್ಯಗಳಲ್ಲಿ ಬ್ಯಾಂಕಿಂಗ್ ಸಂಸ್ಥೆಗಳು ಉದಿಸಿ ಪ್ರವರ್ಧಮಾನಕ್ಕೆ ಬಂದಿಲ್ಲವೆ? ಅಲ್ಲೇಕೆ ಪ್ರತ್ಯೇಕ ವೃತ್ತ ಪ್ರಾರಂಭಿಸಲಾಗಿದೆ? ಎಂಬ ಪ್ರಶ್ನೆಗೆ ಉತ್ತರ ಇರಲಿಲ್ಲ. ಭಾರತೀಯ ಸ್ಟೇಟ್ ಬ್ಯಾಂಕ್ ನಮ್ಮ ದೇಶದ ಹಿರಿಯ ಬ್ಯಾಂಕಿಂಗ್ ಸಂಸ್ಥೆ. ಅದರ ಪ್ರಭಾವವೂ ಬಂಡವಾಳ ಸಾಮರ್ಥ್ಯವೂ ಅಗಾಧ. ಈ ದೃಷ್ಟಿಯಿಂದ ಇತರ ಬ್ಯಾಂಕುಗಳು ಅದರ ಸಮಕ್ಕೆ ಬರಲಾರವು. ಭಾರತೀಯ ಸ್ಟೇಟ್ ಬ್ಯಾಂಕ್ ನಿರ್ವಹಿಸಬೇಕಾಗಿರುವ ಕೆಲವು ಕ್ಷೇತ್ರಗಳುಂಟು. ಆದ್ದರಿಂದ ಭಾರತೀಯ ಸ್ಟೇಟ್ ಬ್ಯಾಂಕಿನ ವಿಸ್ತರಣೆ, ರಾಜ್ಯಕ್ಕೆ ಅದರ ಪ್ರತ್ಯೇಕವಾದ ಮುಖ್ಯ ಕಛೇರಿ ಅಗತ್ಯವೆನಿಸಿತ್ತು.

ಇವೆಲ್ಲಕ್ಕೂ ಸರಿಜೋಡಿಯಾಗಿ ಇನ್ನೊಂದು ಸಮಸ್ಯೆಯನ್ನೂ ಇಲ್ಲಿ ಹೇಳಬೇಕಾದ್ದು ಅಗತ್ಯ. ಮದರಾಸು ವೃತ್ತಕ್ಕೆ ಸೇರಿದ್ದರಿಂದಾಗಿ ಕರ್ನಾಟಕದ ಯುವಕರಿಗೆ ಈ ಬ್ಯಾಂಕಿನಲ್ಲಿ ಸಾಕಷ್ಟು ಉದ್ಯೋಗ ದೊರಕುತ್ತಿಲ್ಲವೆಂಬುದು ಆ ಸಮಸ್ಯೆ. ಭಾರತೀಯ ಸ್ಟೇಟ್ ಬ್ಯಾಂಕ್ ಅಖಿಲ ಭಾರತ ಸಂಸ್ಥೆಯೆಂಬುದು ನಿಜ. ಆದರೆ ಅದರಲ್ಲಿ ಇತರ ರಾಜ್ಯಗಳವರಂತೆ ಕರ್ನಾಟಕದವರಿಗೂ ನ್ಯಾಯವಾದ ಪ್ರಮಾಣದಲ್ಲಿ ಉದ್ಯೋಗಗಳು ದೊರಕಬೇಕೆಂದು

ನಿರೀಕ್ಷಿಸುವುದರಲ್ಲಿ ತಪ್ಪೇನೂ ಇರಲಾರದು; ಇದು ದುರಭಿಮಾನವೆಂದು ಯಾರೂ ಭಾವಿಸಬಾರದು. ಕರ್ನಾಟಕದ ಗ್ರಾಹಕರಿಗೂ ಅನೇಕ ವೇಳೆ ಅನ್ಯಾಯಗಳಾಗಿವೆ. ಅಚ್ಚ ಕನ್ನಡಿಗರೇ ಅತ್ಯಧಿಕ ಸಂಖ್ಯೆಯಲ್ಲಿರುವ ಪ್ರದೇಶವೊಂದರ ಬ್ಯಾಂಕ್ ಶಾಖೆಗೆ ತಮಿಳಿನ ಜಮಾಪಟ್ಟಿ ಮತ್ತು ಇತರ ನಮೂನೆಗಳನ್ನು ಸರಬರಾಜು ಮಾಡಿದ ಪ್ರಸಂಗಗಳೂ ಉಂಟು. ಕರ್ನಾಟಕದಲ್ಲಿಯ ಜನ ಯಾವ ಭಾಷೆ ಆಡುತ್ತಾರೋ ಆ ಭಾಷೆಯಲ್ಲೇ ಅವರೊಂದಿಗೆ ವ್ಯವಹಾರ ನಡೆಯುವುದಾದರೆ ಮಾತ್ರ ಬ್ಯಾಂಕಿಂಗ್ ವ್ಯವಹಾರ ಸಾರ್ಥಕವಾಗಬಲ್ಲುದು. ಕರ್ನಾಟಕಕ್ಕೆ ಪ್ರತ್ಯೇಕ ವೃತ್ತ ಇಲ್ಲದಿದ್ದುದರಿಂದಲೇ ಹೀಗೆಲ್ಲಾ ಆಗುತ್ತಿದೆಯೆಂಬ ಅಸಮಾಧಾನ ನಿರಾಧಾರವೆಂದು ತಳ್ಳಿಹಾಕಲಾಗುವುದಿಲ್ಲ. ಕರ್ನಾಟಕಕ್ಕೆ ಪ್ರತ್ಯೇಕವಾದ ವೃತ್ತದ ನಿರ್ಮಾಣದಿಂದ ಇಂಥ ಪರಿಸ್ಥಿತಿಯ ನಿವಾರಣೆ ಆಗಬಹುದೆಂದು ಹೇಳಬಹುದು. ಈ ವೃತ್ತ ರಚನೆಗಾಗಿ ಕಳೆದ ಹಲವು ವರ್ಷಗಳಿಂದ ನಡೆಸಿದ ಪ್ರಯತ್ನ ಕೊನೆಗೂ ಫಲಿಸಿರುವುದು ನೆಮ್ಮದಿಯ ಸಂಗತಿ. ಇದಕ್ಕಾಗಿ ಬ್ಯಾಂಕ್ ಉದ್ಯೋಗಿಗಳೂ ಸಾರ್ವಜನಿಕರೂ ಶಾಸಕರೂ ಪತ್ರಿಕೆಗಳವರೂ ಬಹಳವಾಗಿ ಶ್ರಮಿಸಿದ್ದಾರೆ. ಇದಕ್ಕಾಗಿ ದುಡಿದವರನ್ನೆಲ್ಲ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುವುದೂ ಅವರಿಗೆ ಧನ್ಯವಾದ ಹೇಳುವುದೂ ಬ್ಯಾಂಕಿಂಗಿನಲ್ಲಿ ಆಸಕ್ತರಾದವರೆಲ್ಲರ ಕರ್ತವ್ಯ.

ದರೋಡೆ

ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿಯ ಈ ಹೊಸ ಬೆಳವಣಿಗೆಯನ್ನು ಕುರಿತು ಸಂತೋಷ ವ್ಯಕ್ತಪಡಿಸುತ್ತಿರುವಾಗಲೇ ಆತಂಕಕಾರಿಯಾದ ಪ್ರವೃತ್ತಿಯೊಂದನ್ನೂ ಇಲ್ಲಿ ವಿಷಾದದಿಂದ ಗುರುತಿಸಬೇಕಾಗಿದೆ. ಅದು ಬ್ಯಾಂಕುಗಳ ದರೋಡೆ ಹಾಗೂ ಅವುಗಳಲ್ಲಿ ನಡೆಯುತ್ತಿರುವ ವಂಚನೆಯ ಪ್ರಕರಣಗಳಿಗೆ ಸಂಬಂಧಿಸಿದ್ದು. ಭಾರತದ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣದ ಅನಂತರದ ಕಾಲದಲ್ಲಿ ಬ್ಯಾಂಕು ಶಾಖೆಗಳ ಸಂಖ್ಯೆ ತೀವ್ರವಾಗಿ ಏರುತ್ತಿದೆ. ಇದು ಸ್ವಾಗತಾರ್ಹವೇ. ಭಾರತದಂಥ ವಿಶಾಲವಾದ ದೇಶದಲ್ಲಿ ಸಾಕಷ್ಟು ಬ್ಯಾಂಕಿಂಗ್ ಸೌಲಭ್ಯ ಇನ್ನೂ ನಿರ್ಮಾಣವಾಗಿಲ್ಲ ಎಂಬುದು ನಿಜವೇ. ಬ್ಯಾಂಕುಗಳ ರಾಷ್ಟ್ರೀಕರಣದ ಒಂದು ಮುಖ್ಯ ಉದ್ದೇಶವೆಂದರೆ ದೇಶದಲ್ಲಿ ಬ್ಯಾಂಕಿಂಗ್ ಕಛೇರಿಗಳ ವ್ಯಾಪಕ ಜಾಲವೊಂದನ್ನು ರಚಿಸುವುದೇ. ರಾಷ್ಟ್ರೀಕರಣದ ಸಮಯದಲ್ಲಿ ದೇಶದಲ್ಲಿದ್ದ ಒಟ್ಟು ಬ್ಯಾಂಕ್ ಶಾಖೆಗಳ ಸಂಖ್ಯೆ ಎಂಟು ಸಾವಿರ. ಇಂದು ಸರ್ಕಾರಿ ವಲಯದ 28 ಬ್ಯಾಂಕಿಂಗ್ ಸಂಸ್ಥೆಗಳ ಶಾಖೆಗಳು ಸುಮಾರು 40,000. ಭಾರತೀಯ ಸ್ಟೇಟ್ ಬ್ಯಾಂಕ್

ಒಂದರ ಶಾಖೆಗಳೇ 6,000ಕ್ಕಿಂತಲೂ ಅಧಿಕ. ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣವಾದಾಗ (1969) 30,000 ಮಂದಿ ಬ್ಯಾಂಕ್ ಉದ್ಯೋಗಿಗಳಿದ್ದರು. ಈಗ ಅವರ ಸಂಖ್ಯೆ 4.5 ಲಕ್ಷ. ಹೀಗೆ ಪರಿಮಾಣಾತ್ಮಕವಾಗಿ ಅಗಾಧ ಬೆಳವಣಿಗೆ ಆಗಿದ್ದಾಗ್ಯೂ ಗುಣಾತ್ಮಕವಾಗಿ ಎಷ್ಟರಮಟ್ಟಿನ ಸಾಧನೆ ಆಗಿದೆ? ಈ ವಿಸ್ತರಣೆಗೆ ಅನುಗುಣವಾಗಿ ಆಡಳಿತ, ವ್ಯವಸ್ಥಾಪನೆ ಹಾಗೂ ಲೆಕ್ಕಪತ್ರ ವ್ಯವಸ್ಥೆಗಳನ್ನು ಎಷ್ಟರಮಟ್ಟಿಗೆ ಆಧುನೀಕರಿಸಿದ್ದೇವೆ? ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ಡೈನೋಸಾರಿನಂತಾಗಿದೆಯಲ್ಲವೆ? ಸಕಾಲದಲ್ಲಿ ಇದನ್ನು ಹೆಚ್ಚು ದಕ್ಷವೂ ವೈಜ್ಞಾನಿಕವೂ ಆಗುವಂತೆ ಮಾಡದಿದ್ದರೆ ಅಪರಿಹಾರ್ಯವಾದ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆಯಲ್ಲವೆ? ಇದು ತೀವ್ರವಾಗಿ ಗಮನಿಸಬೇಕಾದ ವಿಚಾರ.

ಪರಿಸ್ಥಿತಿ ಈಗಾಗಲೇ ಕೈಮೀರಿ ಹೋಗುತ್ತಿದೆಯೆಂಬುದಕ್ಕೆ ಬ್ಯಾಂಕು ಕಛೇರಿಗಳಲ್ಲಿ ನಡೆಯುತ್ತಿರುವ ದರೋಡೆಗಳನ್ನು ಹಾಗೂ ಹಣದ ಛಪಾವಣೆಯನ್ನು ನಿದರ್ಶನವಾಗಿ ನೀಡಬಹುದು. ಈ ಸಂಚಿಕೆಯಲ್ಲಿ ಬ್ಯಾಂಕ್ ದರೋಡೆಗಳನ್ನು ಕುರಿತ ಲೇಖನವೊಂದು ಪ್ರಕಟವಾಗಿದೆ. ನಮ್ಮ ಸಂಸತ್ತಿನಲ್ಲಿ ಇದರ ಪ್ರಸ್ತಾಪ ಬಂದಿತ್ತು. 1981ರಲ್ಲಿ ಸರ್ಕಾರಿ ವಲಯದ ಬ್ಯಾಂಕಿಂಗ್ ಕಛೇರಿಗಳ ದರೋಡೆಗಳ ಸಂಖ್ಯೆ 32 ಇದ್ದದ್ದು ಮರು ವರ್ಷ (1982) 71ಕ್ಕೆ ಏರಿತು. ಲೂಟಿಯಾದ ಹಣ ರೂ. 16.85 ಲಕ್ಷ. ಇದರೊಂದಿಗೇ ಹಣದ ಛಪಾವಣೆಯ ಪ್ರಕರಣಗಳೂ ಅಧಿಕವಾಗುತ್ತಿವೆ. ಕಳೆದ ವರ್ಷ ಇವುಗಳ ಸಂಖ್ಯೆ 1,574.

ದೇಶದಲ್ಲಿರುವ ಬ್ಯಾಂಕು ಶಾಖೆಗಳ ಸಂಖ್ಯೆಯನ್ನು ಗಮನಿಸಿದಾಗ ಒಂದು ವರ್ಷದಲ್ಲಿ ಎಪ್ಪತ್ತೊಂದು ದರೋಡೆಗಳು ಅಷ್ಟೇನೂ ಹೆಚ್ಚಲ್ಲ ಎಂದು ಸಮಾಧಾನ ತಂದುಕೊಳ್ಳಲು ಪ್ರಯತ್ನಿಸಬಹುದು. ಆದರೆ 'ಹಿಂದೂ' ಪತ್ರಿಕೆ ಬರೆದಿರುವ ಹಾಗೆ ಕೇವಲ ಕೆಲವೇ ಮಂದಿ ಸಾಹಸಿಗಳು, ಕೆಲವು ವೇಳೆ ಕೇವಲ ಇಬ್ಬರು ಮೂವರು, ಬ್ಯಾಂಕು ಸಿಬ್ಬಂದಿಯನ್ನು ಬೆದರಿಸಿ ಮಿಂಚಿನ ವೇಗದಲ್ಲಿ ಹಣವನ್ನು ಲಪಟಾಯಿಸಿ ಪರಾರಿಯಾಗುವುದರಿಂದ ಒಂದು ಅಂಶವಂತೂ ಸ್ಪಷ್ಟವಾಗುತ್ತದೆ. ನಮ್ಮ ಬ್ಯಾಂಕು ಕಛೇರಿಗಳಲ್ಲಿ ಭದ್ರತಾವ್ಯವಸ್ಥೆ ಎಷ್ಟು ಅಸಮರ್ಪಕವೆಂಬುದು ವೇದ್ಯವಾಗುತ್ತದೆ. ಪದೇಪದೇ ಲೂಟಿಗಳು ಸಂಭವಿಸುತ್ತಲೇ ಇವೆ. ಹೊಸಹೊಸ ಶಾಖೆಗಳನ್ನು ತೆರೆಯಬೇಕೆಂಬ ಆತುರದಲ್ಲಿ ಬ್ಯಾಂಕುಗಳು ಭದ್ರತೆಯ ಅಂಶವನ್ನು ಕಡೆಗಣಿಸುತ್ತಿವೆಯೆನಿಸುತ್ತದೆ. ಹೊಸ ಶಾಖೆಗಳನ್ನು ತೆರೆಯುವ ಮುನ್ನ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಈ ಬಗ್ಗೆ ಸಾಕಷ್ಟು ಪುರಾವೆಗಳನ್ನೊದಗಿಸದಿದ್ದರೆ, ಅಂಥ ಶಾಖೆಗಳಿಗೆ ಅನುಮತಿ ನೀಡಬಾರದೆಂದು ಪಶ್ಚಿಮ ಬಂಗಾಳ ಸರ್ಕಾರ ತೀರ್ಮಾನಿಸಿದೆ. ಕಳೆದ

ವರ್ಷದಿಂದ ಈ ನಿಯಮ ಜಾರಿಗೆ ಬಂದಿದೆ. ಬ್ಯಾಂಕುಗಳಲ್ಲಿ ಮುಖ್ಯ ಸ್ಥಾನಗಳಲ್ಲಿರುವ ಉದ್ಯೋಗಿಗಳಿಗೆ ಪಿಸ್ತೂಲು ನೀಡಬೇಕು. ಎಲ್ಲ ಶಾಖೆಗಳಿಗೂ ಸಶಸ್ತ್ರ ಪಹರೆ ಒದಗಿಸಬೇಕು. ಹತ್ತಿರದ ಪೊಲೀಸ್ ಠಾಣೆ ಅಥವಾ ನಿಯಂತ್ರಣ ಕೊಟಡಿಗಳಿಗೆ ನೇರ ಸಂಪರ್ಕ ಸೌಲಭ್ಯ ಏರ್ಪಡಿಸಬೇಕು. ವಿದ್ಯುನ್ಮಾನ ಗಸ್ತು ವ್ಯವಸ್ಥೆ ಹಾಗೂ ಅಪಾಯದ ಕರೆ ನೀಡುವ ಸಾಧನಗಳನ್ನು ಸ್ಥಾಪಿಸಬೇಕು. ಬ್ಯಾಂಕು ಸಿಬ್ಬಂದಿಯಲ್ಲಿ ಭದ್ರತಾ ಮನೋಧರ್ಮ ಬೆಳೆಯುವಂತೆ ಮಾಡಬೇಕು. 'ಹಿಂದೂ' ಪತ್ರಿಕೆ ನೀಡಿರುವ ಈ ಸಲಹೆಗಳನ್ನು ಸರ್ಕಾರವೂ ಬ್ಯಾಂಕುಗಳೂ ಗಂಭೀರವಾಗಿ ಪರಿಶೀಲಿಸಿ ಆದಷ್ಟು ಬೇಗ ಜಾರಿಗೆ ತರುವುದು ಅತ್ಯವಶ್ಯ.

ವಂಚನೆ

ಬ್ಯಾಂಕು ಶಾಖೆಗಳ ಅವ್ಯವಸ್ಥಿತ ವಿಸ್ತರಣೆ, ಅಸಮರ್ಪಕ ನಿರ್ವಹಣೆ ಹಾಗೂ ನಿಯಂತ್ರಣ, ಹಳೆಯ ಲೆಕ್ಕಬರಹ ವ್ಯವಸ್ಥೆ, ಅದಕ್ಷ ಸಿಬ್ಬಂದಿ ಮುಂತಾದ ಕಾರಣಗಳಿಂದಾಗಿ ಬ್ಯಾಂಕುಗಳಲ್ಲಿ ವಂಚನೆಯ ಪ್ರಕರಣಗಳೂ ಹೆಚ್ಚುತ್ತಿವೆ. ಗುಜರಾತ್ ರಾಜ್ಯದ ಗಾಂಧೀನಗರದಲ್ಲಿ ಪ್ರಮುಖ ಬ್ಯಾಂಕೊಂದರ ಶಾಖೆಯಲ್ಲಿ ಸುಮಾರು ರೂ. 3.5 ಕೋಟಿಯ ಭಾರಿ ವಂಚನೆಯ ಪ್ರಕರಣವೊಂದು ಪತ್ತೆಯಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಅಲ್ಲಿಯ ಗುಮಾಸ್ತೆಯೊಬ್ಬ ಲೆಕ್ಕಗಳಲ್ಲಿ ಕೈವಾಡ ನಡೆಸಿ ಇಷ್ಟೊಂದು ಅಗಾಧ ಮೊತ್ತದ ಹಣದ ಛಪಾವಣೆ ಮಾಡಿದನೆಂಬುದು ಆಶ್ಚರ್ಯಕರ. ಭಾರತದ ವಾಣಿಜ್ಯ ಬ್ಯಾಂಕುಗಳ ಇತಿಹಾಸದಲ್ಲೇ ಇದು ಬಹುಶಃ ಅತ್ಯಂತ ಭಾರಿ ವಂಚನೆಯೆಂದು ಹೇಳಲಾಗುತ್ತಿದೆ. ಕೆಲವು ವರ್ಷಗಳ ಹಿಂದೆ ಇನ್ನೊಂದು ಬ್ಯಾಂಕಿನ ಲಂಡನ್ ಶಾಖೆಯಲ್ಲಿ ನಡೆದದ್ದೇ ಇದುವರೆಗಿನ ಅತಿ ದೊಡ್ಡ ವಂಚನೆಯಾಗಿತ್ತು. ಗುಜರಾತಿನಲ್ಲೇ ರಾಷ್ಟ್ರೀಕೃತ ಬ್ಯಾಂಕುಗಳ ಇನ್ನೂರಕ್ಕೂ ಹೆಚ್ಚು ಕಛೇರಿಗಳಲ್ಲಿ ಮೋಸ ನಡೆದಿದೆಯೆಂಬುದು ಒಂದು ಅಂದಾಜು. ಒಂದೊಂದು ಪ್ರಕರಣದಲ್ಲಿ ಸುಮಾರು ರೂ. 20 ಲಕ್ಷದಿಂದ ರೂ. 4 ಕೋಟಿಯ ವರೆಗೆ ಛಪಾವಣೆಯಾಗಿರಬಹುದೆಂದು ಪ್ರಾಥಮಿಕ ತನಿಖೆಗಳಿಂದ ತಿಳಿದುಬಂದಿದೆ. ಬ್ಯಾಂಕು ಹಾಗೂ ಸರ್ಕಾರಿ ನೌಕರರು ಮತ್ತು ಸಾಲಗಾರರು ಒಂದಾಗಿ ನಡೆಸಿರುವ ಸಂಚುಗಳು ಇವು. ಕೇಂದ್ರ ತನಿಖಾಮಂಡಲಿ ಈ ಬಗ್ಗೆ ನಡೆಸುತ್ತಿರುವ ತನಿಖೆಯಿಂದ ಎಷ್ಟೋ ರಹಸ್ಯಗಳು ಬಯಲಾಗುತ್ತವೆ.

ಕಪ್ಪು ಹಣದ ಚಾಲನೆ

ರಾಷ್ಟ್ರೀಕೃತ ಬ್ಯಾಂಕುಗಳ ಕಾಳ್ಬಾದೇವಿಯ ಕೆಲವು ಶಾಖೆಗಳು ಕಪ್ಪುಹಣದ ಚಾಲನೆಗೆ ನೆರವು ನೀಡುತ್ತಿವೆಯೆಂಬುದು ವರಮಾನ ತೆರಿಗೆ ಅಧಿಕಾರಿಗಳು

ನಡೆಸಿರುವ ಕಾರ್ಯಾಚರಣೆಗಳಿಂದ ಪತ್ತೆಯಾಗಿದೆ. ಈ ಶಾಖೆಗಳಲ್ಲಿ ಬೇನಾಮಿ ಖಾತೆಗಳನ್ನು ತೆರೆಯಲಾಗುತ್ತಿದೆ. ಮಿಥ್ಯಾನಾಮಗಳಿಗೆ ನೀಡಲಾದ ಡ್ರಾಫ್ಟ್‌ಗಳನ್ನು ಈ ಖಾತೆಗಳಿಗೆ ಜಮಾ ಮಾಡಲಾಗುತ್ತಿದೆ. ಇತ್ತೀಚಿಗೆ ವರಮಾನ ತೆರಿಗೆ ಅಧಿಕಾರಿಗಳು ದಾಳಿ ನಡೆಸಿ, ಸರಿಯಾದ ವಿವರಣೆ ಬಾರದ ಸುಮಾರು 25 ಲಕ್ಷ ರೂಗಳನ್ನು ವಶಪಡಿಸಿಕೊಂಡಿದ್ದಾರೆ. ದೇಶದ ವಿವಿಧ ಭಾಗಗಳಿಂದ ಮುಂಬಯಿ ಬ್ಯಾಂಕುಗಳ ಮೇಲೆ ಬರೆಯಲಾದ 600 ಡ್ರಾಫ್ಟ್‌ಗಳು ಸಿಕ್ಕಿವೆ. ಬೇನಾಮಿ ಖಾತೆಗಳಲ್ಲಿರುವ ಸುಮಾರು 12 ಲಕ್ಷ ರೂ.ಗಳನ್ನು ಅವರು ನಿಶ್ಚಾಲನಗೊಳಿಸಿದ್ದಾರೆ.

ಕಳೆದ ಸೆಪ್ಟೆಂಬರಿನಲ್ಲಿ ಇದೇ ರೀತಿಯ ದಾಳಿಗಳನ್ನು ಅಧಿಕಾರಿಗಳು ನಡೆಸಿದ್ದರು. ಚಾಲ್ತಿ ಖಾತೆಗಳನ್ನು ತೆರೆಯುವಲ್ಲಿ ಬ್ಯಾಂಕುಗಳು ಅನುಸರಿಸಬೇಕಾದ ಕೆಲವು ಸ್ಥೂಲ ಸೂತ್ರಗಳನ್ನು ಆಗ ನೀಡಲಾಗಿತ್ತು, ಆದರೆ ಇವನ್ನು ಅನುಷ್ಠಾನಕ್ಕೆ ತಂದಿಲ್ಲವೆಂಬುದು ಅನಂತರದ ವಿದ್ಯಮಾನಗಳಿಂದ ವೇದ್ಯವಾಗುತ್ತದೆ, ಕೆಲವು ಅವ್ಯವಹಾರಗಳ ಮಾದರಿಗಳು ಇವು. ಒಬ್ಬನೇ ವ್ಯಕ್ತಿ ಹಲವು ಹೆಸರುಗಳಲ್ಲಿ ಖಾತೆಗಳನ್ನು ತೆರೆದು ಆ ನಾನಾ ಹೆಸರುಗಳ ಸಹಿ ಮಾಡುತ್ತಿದ್ದಾನೆ. ಬ್ಯಾಂಕರರ ತಿಳಿವಳಿಕೆಗೆ ಒಳಪಟ್ಟೇ ಇದು ನಡೆಯುತ್ತಿದೆ. ಪಾಸ್ ಪುಸ್ತಕದಲ್ಲಿ ನೀಡಿರುವ ವಿಳಾಸ ಸುಳ್ಳು, ಖಾತೆ ತೆರೆಯಲು ನೀಡಿರುವ ಪರಿಚಯವೂ ಬರೀ ಸೃಷ್ಟನೆಯೇ. ಈ ಖಾತೆಗಳ ವ್ಯವಹಾರಗಳು ಎಷ್ಟರ ಮಟ್ಟಿಗೆ ಸಾಚಾ ಎಂಬುದನ್ನು ಬ್ಯಾಂಕು ಅಧಿಕಾರಿಗಳು ಪರಿಶೀಲಿಸುವುದು ಹಲವು ವೇಳೆ ಅಸಾಧ್ಯ. ಏಕೆಂದರೆ ಸಂಬಂಧಪಟ್ಟ ವ್ಯಕ್ತಿಗಳು ಖುದ್ದಾಗಿ ಬಂದು ತಮ್ಮ ಪತ್ರಗಳನ್ನು ತೆಗೆದು ಕೊಳ್ಳುತ್ತಾರೆ. ಕೆಲವು ಶಾಖೆಗಳಲ್ಲಿ ಡ್ರಾಫ್ಟ್‌ಗಳ ಮೊಬಲಗುಗಳನ್ನು ವಸೂಲಿಗೆ ಮುಂಚೆಯೇ ಖಾತೆಗಳಿಗೆ ಜಮೆ ಮಾಡಲಾಗುತ್ತಿದೆ. ಬ್ಯಾಂಕೊಂದು ತನ್ನ ಗ್ರಾಹಕನೊಬ್ಬನಿಗೆ 2 ಲಕ್ಷ ರೂಗಳನ್ನು ಈ ರೀತಿ ಪಾವತಿ ಮಾಡಿದ್ದುದು ದಾಳಿಯ ಸಮಯದಲ್ಲಿ ಪತ್ತೆಯಾಯಿತು. ಆದರೆ ಡ್ರಾಫ್ಟ್‌ನಲ್ಲಿಯ ದೋಷವೊಂದರಿಂದಾಗಿ ಅದರ ಮೊಬಲಗು ಪಾವತಿಯಾಗಲಿಲ್ಲ. ಅಧಿಕಾರಿಗಳು ಆ ಡ್ರಾಫ್ಟನ್ನು ವಶಪಡಿಸಿಕೊಂಡು ಆ ಖಾತೆಯನ್ನು ನಿಶ್ಚಾಲನಗೊಳಿಸಿದರು. ಆ ಎರಡು ಲಕ್ಷ ರೂ.ಗಳನ್ನು ಲೆಕ್ಕ ಪುಸ್ತಕಗಳಲ್ಲಿ ಹೇಗೆ ಹೊಂದಾವಣೆ ಮಾಡಬೇಕೆಂದು ಬ್ಯಾಂಕು ತೊಳಲಾಟಕ್ಕೆ ಸಿಲುಕಿಕೊಂಡಿತು. ತೆರಿಗೆ ಅಧಿಕಾರಿಗಳು ಖಾತೆದಾರನಿಗಾಗಿ ಹುಡುಕಾಟ ನಡೆಸಿದರು. ಆದರೆ ಆ ವಿಳಾಸವೇ ಸುಳ್ಳು. ಮುಂಬಯಿಯಲ್ಲಿ ಕನಿಷ್ಠ ರೂ. 50 ಕೋಟಿಯಷ್ಟು ಕಪ್ಪು ಹಣ ಡ್ರಾಫ್ಟ್‌ಗಳ ರೂಪದಲ್ಲಿ ಚಲಾವಣೆಯಾಗುತ್ತಿದೆಯೆಂಬುದು ಒಂದು ಅಂದಾಜು.

ಒಟ್ಟಿನಲ್ಲಿ ಬ್ಯಾಂಕುಗಳಲ್ಲಿ ದಕ್ಷತೆಗೆ ವಿಶೇಷ

ಗಮನ ನೀಡಬೇಕೆಂಬುದಕ್ಕೆ ಇದು ನಿದರ್ಶನ. ಕಟ್ಟುನಿಟ್ಟಾದ ಆಂತರಿಕ ಪರಿಶೋಧನ, ಲೆಕ್ಕ ಪರೀಕ್ಷಣ, ತನಿಖೆ, ಸಿಬ್ಬಂದಿಯ ನೇಮಕದಲ್ಲಿ ಪ್ರಾಮಾಣಿಕತೆ ಯೋಗ್ಯತೆಗಳಿಗೆ ಆದ್ಯತೆ, ಬ್ಯಾಂಕು ಲೆಕ್ಕವ್ಯವಸ್ಥೆಯ ಆಧುನೀಕರಣ, ಸಾಧ್ಯವಿದ್ದಲ್ಲೆಲ್ಲ ಕಂಪ್ಯೂಟರ್ ಬಳಕೆ, ಅಂದಂದಿನ ಲೆಕ್ಕಗಳನ್ನು ಅಂದಂದೇ ಮುಗಿಸುವಂತೆ ನಿರ್ಬಂಧ, ಸೂಕ್ತ ಪರಿಚಯ ಹಾಗೂ ಪರಿಶೀಲನೆಯ ಅನಂತರವೇ ಹೊಸ ಖಾತೆಗಳ ಆರಂಭ – ಇಂಥ ಕ್ರಮಗಳಿಂದ ಈ ಅನಿಷ್ಟ ಪ್ರವೃತ್ತಿಗಳನ್ನು ಬಹಳಮಟ್ಟಿಗೆ ಹತ್ತಿಕ್ಕುವುದು ಸಾಧ್ಯ. ನಮ್ಮ ಹಣಕಾಸು ಮಂತ್ರಿ ಪ್ರಣವ ಮುಖರ್ಜಿಯವರು ಹೇಳಿರುವ ಹಾಗೆ ಜಾಗ್ರತ ವ್ಯವಸ್ಥೆಯನ್ನು ಬಲಗೊಳಿಸುವುದು ಅತ್ಯಗತ್ಯ.

ಕೃತಜ್ಞತೆ

ಈ ಸಂಚಿಕೆಯಿಂದ 'ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಯನ್ನು ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್‌ನ ಶ್ರೀ ಜಿ. ಎಚ್. ಕೃಷ್ಣಮೂರ್ತಿ ಅವರು ಅಚ್ಚು ಮಾಡುತ್ತಿದ್ದಾರೆ. ಇದುವರೆಗೆ ಇದನ್ನು ಮುದ್ರಿಸುತ್ತಿದ್ದ ಈಸ್ಟರ್ನ್ ಪ್ರೆಸ್ಸಿನ ಶ್ರೀ ಚಿಂತಾಮಣಿ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಆರಂಭದ ವರ್ಷಗಳಲ್ಲಿ ಶ್ರೀ ಚಿಂತಾಮಣಿ ಅವರು ಇದರ ಮುದ್ರಣದ ಹೊಣೆ ವಹಿಸಿಕೊಂಡು ಉಪಕಾರಮಾಡಿದ್ದಾರೆ. ಶ್ರೀ ಚಿಂತಾಮಣಿ ಅವರಂತೆಯೇ ಶ್ರೀ ಜಿ. ಎಚ್. ಕೃಷ್ಣಮೂರ್ತಿ ಅವರೂ ಮುದ್ರಣ ಕ್ಷೇತ್ರದಲ್ಲಿ ಉತ್ತಮ ಮಟ್ಟವನ್ನು ಸದಾ ಕಾಯ್ದುಕೊಂಡು ಬರುತ್ತಿರುವವರು. ಇವರ ನೆರವಿನಿಂದ 'ಬ್ಯಾಂಕಿಂಗ್ ಪ್ರಪಂಚ' ಎಂದಿನಂತೆ ಆಕರ್ಷಕವಾಗಿ ಸಕಾಲದಲ್ಲಿ ಹೊರಬರುವ ಭರವಸೆ ನಮಗಿದೆ. ಇವರಿಗೆ ನಮ್ಮ ವಂದನೆಗಳು.

05.

ಅಕ್ಟೋಬರ್ 1983
ಗದ್ದಲವಿಲ್ಲದ ಕ್ರಾಂತಿ

ಈ ಬಾರಿಯ ಸಂಪಾದಕೀಯವನ್ನು ದುಃಖದ ಸಂಗತಿಯೊಂದರಿಂದ ಆರಂಭಿಸಬೇಕಾಗಿದೆ, ಅದು ವಿ.ಸೀ. ಅವರ ನಿಧನ.

ಪ್ರೋ.ವಿ.ಸೀತಾರಾಮಯ್ಯ ಅವರು ಕನ್ನಡ ಸಾಹಿತ್ಯದ ದಿಗ್ಗಜಗಳಲ್ಲೊಬ್ಬರು. ಕನ್ನಡ ನವೋದಯದ ಕಾಲದಲ್ಲಿ ಹೊಸ ಬಗೆಯ ಕವನಗಳನ್ನು ಬರೆದು, ಪ್ರಚಾರಮಾಡಿ, ಅವನ್ನು ಆಸ್ವಾದಿಸುವ ಹಾಗೂ ವಿಮರ್ಶಾತ್ಮಕವಾಗಿ ಅಭ್ಯಸಿಸುವ ಹಾದಿಯನ್ನು ತೋರಿಸಿದವರು. ಬಿ.ಎಂ.ಶ್ರೀ. ಅವರು ಕಟ್ಟಿದ ಕನ್ನಡ ಪಡೆಯ ಮುಂಚೂಣಿಯಲ್ಲಿ ವಿ.ಸೀ. ಅವರೂ ಇದ್ದರು.

ಹಣ ಮತ್ತು ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ 'ಬ್ಯಾಂಕಿಂಗ್ ಪ್ರಪಂಚ' ಇವರ ಸಾವಿಗಾಗಿ ಕಂಬನಿಗರೆಯುತ್ತಿರುವುದಕ್ಕೆ ವಿಶೇಷವಾದ ಕಾರಣವೊಂದುಂಟು. ಜೀವನದ ಯಾವ ಕ್ಷೇತ್ರವೇ ಆಗಲಿ, ಕಾವ್ಯದಿಂದ ಹೊರಗಾಗಿರಬೇಕಾದುದೇನೂ ಇಲ್ಲ. ಎಲ್ಲವನ್ನೂ ಒಳಗೊಳ್ಳುವಂಥದು ಸಾಹಿತ್ಯ. ವಿ.ಸೀ. ಅವರ ವೈಶಿಷ್ಟ್ಯವೆಂದರೆ ಅರ್ಥಶಾಸ್ತ್ರದಿಂದ ಸಾಹಿತ್ಯ ಕ್ಷೇತ್ರಕ್ಕೆ ಅವರು ಬಂದದ್ದು. ಅರ್ಥಶಾಸ್ತ್ರವನ್ನು ವಿಶೇಷವಾಗಿ ಅಧ್ಯಯನ ಮಾಡಿ ಪದವಿ ಪಡೆದ ವಿ.ಸೀ. ಅವರು ಕನ್ನಡದ ಅಧ್ಯಾಪಕರಾದದ್ದು ಒಂದು ವಿಶೇಷ. ಸಾಹಿತ್ಯಕ್ಕಾದ ಲಾಭವನ್ನು ಅರ್ಥಶಾಸ್ತ್ರಕ್ಕಾದ ನಷ್ಟ ಎಂದು ಹೇಳಬಹುದಾದರೂ ವಿ.ಸೀ. ಅವರು ಅರ್ಥಶಾಸ್ತ್ರದಲ್ಲಿ ಆಸಕ್ತಿಯನ್ನು ಎಂದೂ ಕಳೆದುಕೊಂಡವರಲ್ಲ. ಕಾವ್ಯ ಪ್ರಬಂಧ ವಿಮರ್ಶೆಗಳ ಉತ್ತುಂಗಶಿಖರಗಳನ್ನೇರಿದ ವಿ.ಸೀ. ಅವರು ಅರ್ಥಶಾಸ್ತ್ರದ ಅಧ್ಯಯನವನ್ನೂ ಮುಂದುವರಿಸಿಕೊಂಡೇ ಬಂದಿದ್ದರು. ಆ ಕ್ಷೇತ್ರದಲ್ಲಾಗುತ್ತಿದ್ದ ಬೆಳವಣಿಗೆಗಳನ್ನೆಲ್ಲಾ ಅವಲೋಕಿಸುತ್ತಿದ್ದರು. ವೈಯಕ್ತಿಕ ಜಂಜಡಗಳೇನೇ ಇರಲಿ, ಇಂಗ್ಲೆಂಡಿನ 'ದಿ ಇಕಾನಮಿಸ್ಟ್' ಪತ್ರಿಕೆಯನ್ನು ಬಿಡದೆ ತರಿಸಿಕೊಂಡು ಓದುತ್ತಿದ್ದರೆಂಬುದು ತುಂಬ ಪ್ರಸಿದ್ಧವಾದ ಮಾತಾಗಿದೆ. ಅರ್ಥಶಾಸ್ತ್ರದ ಸಂಕೀರ್ಣ ವಿಚಾರಗಳನ್ನೆಲ್ಲ ಅವರು ಯಾರೊಂದಿಗಾದರೂ ಚರ್ಚಿಸಬಲ್ಲವರಾಗಿದ್ದರು.

ಹಣದ ಅಧ್ಯಯನ ಕ್ಷೇತ್ರಕ್ಕೆ ವಿ. ಸೀ. ಅವರ ಕೊಡುಗೆ ಅಸಾಧಾರಣವಾದ್ದು. 1937ರಷ್ಟು ಹಿಂದೆಯೇ ಅವರು 'ಹಣ ಪ್ರಪಂಚ' ಎಂಬ ಉದ್ಘ ಕೃತಿಯೊಂದನ್ನು ಬರೆದರು. 'ಈಗಿನ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಂತೆ ದಿನಚರಿಯ ಬದುಕಿನಲ್ಲಿ ಅನೇಕ ಮೇಲು ಬೀಳುಗಳೂ ಕಷ್ಟ ಸುಖಗಳೂ ನ್ಯಾಯ ಅನ್ಯಾಯಗಳೂ ಹಣದಿಂದ ಉಂಟಾಗುತ್ತವೆ. ಸಂಪತ್ತಿನ ಉತ್ಪತ್ತಿ,

ಮಾರುವೆ, ಹಂಚಿಕೆ, ಭೋಗಸಾಧನೆಗಳಲ್ಲೆಲ್ಲ ಹಣದ ಸ್ಥಾನ ದೊಡ್ಡದು' ಎಂದು ಆರಂಭವಾಗುವ ಈ ಪುಸ್ತಕದ ಸುಮಾರು ಮುನ್ನೂರೈವತ್ತು ಪುಟಗಳಲ್ಲಿ ವಿ.ಸೀ. ಅವರು ಹಣದ ವಿಚಿತ್ರ ವ್ಯಾಪಾರಗಳನ್ನು, ಕೇವಲ ಮಧ್ಯಸ್ಥಿಕೆಗಾಗಿ ಸೃಷ್ಟಿಸಲಾದ ಈ ಸಾಧನ ಇಂದು ಹೇಗೆ ಒಂದು ತೊಡಕಿನ ವ್ಯವಸ್ಥೆಯಾಗಿ ಪರಿಣಮಿಸಿದೆಯೆಂಬುದನ್ನು ತುಂಬ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಈ ವಿಚಾರವನ್ನು ಕುರಿತು ಕನ್ನಡದ ಮೊಟ್ಟಮೊದಲನೆಯ ದೊಡ್ಡ ಕೃತಿಯಾದ 'ಹಣ ಪ್ರಪಂಚ' ಅನೇಕ ದೃಷ್ಟಿಗಳಿಂದ ಪಥಪ್ರದರ್ಶಕವಾದ್ದು. ಶಾಸ್ತ್ರ ಸಾಹಿತ್ಯಗಳೆರಡೂ ಮೇಳೈಸಿದಾಗ ಒಂದು ಕೃತಿ ಎಷ್ಟು ಸುಂದರವಾಗಿರಬಲ್ಲುದು ಎಂಬುದಕ್ಕೆ ಇದು ನಿದರ್ಶನ.

ಹಣದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿ.ಸೀ. ಅವರು ಇಲ್ಲಿ ಕನ್ನಡಕ್ಕೆ ಅನೇಕ ಪಾರಿಭಾಷಿಕ ಪದಗಳನ್ನು ನೀಡಿದ್ದಾರೆ. ಈ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಪ್ರೊ। ಎನ್.ಎಸ್. ಸುಬ್ಬರಾಯರು ಇದರ ಬಗ್ಗೆ ಹೀಗೆ ಹೇಳಿದ್ದಾರೆ : "ಇಂಗ್ಲಿಷಿನಲ್ಲಿ 'ಫಿನಾನ್ಸ್' ಎಂಬ ಒಟ್ಟು ಹೆಸರಿನಲ್ಲಿ ಅಡಕವಾಗುವ ಅತಿ ತೊಡಕಿನ ವಿಷಯಗಳನ್ನು ವಿವರಿಸುವುದರಲ್ಲಿ ಅವರು ಪಾಂಡಿತ್ಯವನ್ನೂ ತುಂಬಿದ ತಿಳಿವಳಿಕೆಯನ್ನೂ ಪ್ರಯೋಗಿಸಿದ್ದಾರೆಂದು ನಾನು ಗೊತ್ತಾಗಿ ಹೇಳಬಲ್ಲೆ" ಎಂದಿದ್ದಾರೆ. ರಿಸರ್ವ್ ಬ್ಯಾಂಕಿನ ಕಾರ್ಯಕಲಾಪಗಳನ್ನು ಕುರಿತ ಹೊತ್ತಗೆಯೊಂದನ್ನೂ ಅನುವಾದಿಸಿರುವ ವಿ.ಸೀ, ಅವರು ಅರ್ಥಶಾಸ್ತ್ರಕ್ಷೇತ್ರದಲ್ಲಿ, ಮುಖ್ಯವಾಗಿ ಹಣ ಬ್ಯಾಂಕಿಂಗ್ ಕುರಿತು, ಇನ್ನೂ ಹೆಚ್ಚು ಕೆಲಸ ಮಾಡಲು ಸಾಧ್ಯವಾಗಲಿಲ್ಲವಲ್ಲ ಎಂಬುದು ನಮ್ಮ ಕೊರಗು. ಅಂತೂ ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ರಚಿಸಿದ ಮೊದಲಿಗರಲ್ಲೊಬ್ಬರಾದ ವಿ.ಸೀ. ಅವರಿಗೆ 'ಬ್ಯಾಂಕಿಂಗ್ ಪ್ರಪಂಚ' ಶ್ರದ್ಧಾಂಜಲಿ ಅರ್ಪಿಸುತ್ತದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಕರ್ನಾಟಕ ವಲಯ

ಭಾರತೀಯ ಸ್ಟೇಟ್ ಬ್ಯಾಂಕಿಗೆ ಸಂಬಂಧಿಸಿದಂತೆ ಆಗಿರುವ ಮಹತ್ವದ ಸಾಧನೆಯೊಂದನ್ನೂ ನಾವು ಇಲ್ಲಿ ದಾಖಲಿಸಬೇಕಾಗಿದೆ. 'ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯ ಬಂತು' ಎಂಬ ಹಾಗೆ, ಭಾರತದ ಈ ಪ್ರತಿಷ್ಠಿತ ಬ್ಯಾಂಕಿನ ಕರ್ನಾಟಕ ವಲಯ ಕೊನೆಗೂ ಆರಂಭವಾಗಿದೆ. ಇದಕ್ಕಾಗಿ ಅನೇಕ ವರ್ಷಗಳಿಂದ ಈ ಬ್ಯಾಂಕಿನ ಉದ್ಯೋಗಿಗಳೂ, ಕರ್ನಾಟಕದ ಅಭ್ಯುದಯದಲ್ಲಿ ಆಸಕ್ತರಾದ ಇತರರೂ ಬಹಳಷ್ಟು ಶ್ರಮಿಸಿದ್ದಾರೆ, ಚಳವಳಿ ಮಾಡಿದ್ದಾರೆ, ದೆಹಲಿಯ ತನಕ ದೂರು ಹೊತ್ತಿದ್ದಾರೆ, ಸಂಸತ್ತಿನಲ್ಲಿ ಈ ವಿಚಾರ ಪದೇಪದೇ ಚರ್ಚಿತವಾಗುವಂತೆ ಮಾಡಿದ್ದಾರೆ. ಭಾರತದ ಉಳಿದ ಬಹುತೇಕ ರಾಜ್ಯಗಳಿಗೆ ಅವವುಗಳದೇ ಆದ

ಸ್ಥಳೀಯ ಪ್ರಧಾನ ಕಛೇರಿಗಳು ಇರುವಾಗ, ಪ್ರತ್ಯೇಕ ವಲಯಗಳಿರುವಾಗ, ಕರ್ನಾಟಕಕ್ಕೆ ಮಾತ್ರ ಏಕೆ ಬೇಡ ಎಂಬ ಪ್ರಶ್ನೆಯನ್ನು ಹಾಕಿ ಹಾಕಿ ನಮ್ಮವರು ಬಹಳ ಬಸವಳಿದಿದ್ದಾರೆ. ಒಂದಿಲ್ಲೊಂದು ಕಾರಣದಿಂದ ಸರಕಾರ ಇದನ್ನು ತಳ್ಳಿ ಹಾಕುತ್ತಲೇ ಬಂದಿತ್ತು. ಕರ್ನಾಟಕಕ್ಕೆ ಪ್ರತ್ಯೇಕ ವಲಯ ಬಾರದಂತೆ ತಡೆಯುತ್ತಿದ್ದ ಪಟ್ಟಭದ್ರ ಹಿತಗಳೇ ಈ ಆಶಯ ನೆರವೇರದೆ ಇದ್ದದ್ದಕ್ಕೆ ಕಾರಣ. ಆದರೆ ಇನ್ನು ಯಾವ ನೆವವನ್ನೂ ಒಡ್ಡುವುದು ಸಾಧ್ಯವಾಗದೆ ಹೋದಾಗ, ಕರ್ನಾಟಕದ ನ್ಯಾಯಬದ್ಧ ಬೇಡಿಕೆಯನ್ನು ಪೂರೈಸುವುದು ಅನಿವಾರ್ಯವಾದಾಗ ಸರಕಾರ ಮಣಿದಿದೆ. ಕರ್ನಾಟಕಕ್ಕೆ ಪ್ರತ್ಯೇಕ ವಲಯವೊಂದು ಆರಂಭವಾಗಿದೆ. ಆದರೆ ಒಂದು ಕೊರತೆ; ಇದನ್ನು ಕರ್ನಾಟಕ ವಲಯವೆನ್ನದೆ ಬೆಂಗಳೂರು ವಲಯವೆಂದು ಕರೆಯಲಾಗಿದೆ. ಮದರಾಸ್ ವಲಯ, ಮುಂಬಯಿ ವಲಯ ಎಂದು ಮುಂತಾಗಿ ಉಳಿದ ವಲಯಗಳನ್ನು ಆಯಾ ಸ್ಥಳೀಯ ಪ್ರಧಾನ ಕಛೇರಿಗಳಿರುವ ಸ್ಥಳಗಳ ಹೆಸರಿನಿಂದಲೇ ಕರೆದಿರುವುದರಿಂದ ಇದನ್ನೂ ಅಂತೆಯೇ ಬೆಂಗಳೂರು ವಲಯವೆಂದು ಕರೆಯಲಾಗಿದೆಯೆಂಬುದಾಗಿ ವಿವರಣೆ ನೀಡಬಹುದು. ಆದರೆ ಮದರಾಸ್ ಮುಂಬಯಿ ವಲಯಗಳು ಆರಂಭವಾದಾಗ ಮದರಾಸ್ ಮುಂಬಯಿಗಳು ಆಯಾ ಪ್ರಾಂತಗಳ ಹೆಸರುಗಳೂ ಆಗಿದ್ದುವೆಂಬುದನ್ನು ಮರೆಯಬಾರದು. ಕಲ್ಕತ್ತೆಯಲ್ಲಿ ಸ್ಥಳೀಯ ಪ್ರಧಾನ ಕಛೇರಿ ಹೊಂದಿರುವ ವಲಯವನ್ನು ಬಂಗಾಲ ವಲಯವೆಂದೇ ಕರೆಯಲಾಗಿದೆಯೆಂಬುದನ್ನು ಗಮನಿಸಬೇಕು. 'ಕಲ್ಕತ್ತ' ಎಂಬುದು ಪ್ರಾಂತದ ಹೆಸರಾಗಿರಲಿಲ್ಲ, ರಾಜ್ಯದ ಹೆಸರೂ ಅಲ್ಲ. ಇದು ಹೇಗೂ ಇರಲಿ, ಬೆಂಗಳೂರು ವಲಯವೆಂದೇ ಕರೆದಿದ್ದರೂ ಕರ್ನಾಟಕಕ್ಕೆ ಪ್ರತ್ಯೇಕ ವಲಯ ಸ್ಥಾಪಿತವಾಯಿತೆಂಬುದೇ ಸಮಾಧಾನದ ಸಂಗತಿ.

ಆದರೂ ಕರ್ನಾಟಕಕ್ಕೆ ನ್ಯಾಯ ಸಂದಂತಿಲ್ಲ. ಹೊಸ ವಲಯದ ನಿರ್ವಹಣೆಗೆ ಅಗತ್ಯವಾದ ಉನ್ನತಾಧಿಕಾರಿಗಳನ್ನೆಲ್ಲ ಹೊರಗಡೆಯಿಂದಲೇ ತರಲಾಗಿದೆಯೆಂಬುದೊಂದು ಆಕ್ಷೇಪಣೆ. ಕರ್ನಾಟಕದವರೇ ಆದವರು ಜ್ಯೇಷ್ಠತೆ ಅರ್ಹತೆಗಳ ದೃಷ್ಟಿಯಿಂದ ಉನ್ನತ ಹೊಣೆ ಹೊರಬಹುದಾಗಿರುವಾಗ, ಉದ್ದೇಶಪೂರ್ವಕವಾಗಿಯೇ ಎಂಬಂತೆ ಅವರನ್ನು ಬೇರೆ ಹುದ್ದೆಗಳಲ್ಲಿಟ್ಟು, ಕರ್ನಾಟಕ ವಲಯದ ರಚನೆಗೆ ವಿರೋಧವಾಗಿದ್ದವರನ್ನು ತಂದು ಕೂರಿಸಿರುವುದರ ಹಿಂದೆ ಯಾವುದೋ ಸಂಚು ಇದೆಯೆಂಬ ಅಂಜಿಕೆಗೆ ಕಾರಣವಿಲ್ಲದೆ ಇಲ್ಲ. ಹೊಸ ವಲಯದ ರಚನೆಯೊಂದಿಗೇ ಆ ವಲಯದ ಬ್ಯಾಂಕಿಂಗ್ ಕಛೇರಿಗಳ ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲು, ಅಭ್ಯರ್ಥಿಗಳ

ಆಯ್ಕೆ ಮಾಡಲು ಪ್ರತ್ಯೇಕವಾದ ನೇಮಕಾತಿ ಮಂಡಲಿಯ ರಚನೆಯಾಗಬೇಕಾದ್ದು ನಿಯಮ. ಭಾರತೀಯ ಸ್ಟೇಟ್ ಬ್ಯಾಂಕಿನ ಸಹವರ್ತಿ ಬ್ಯಾಂಕುಗಳಿಗೆ ನೇಮಕಾತಿಗೂ ಈ ಮಾತು ಅನ್ವಯಿಸುತ್ತದೆ. ಇವುಗಳ ರಚನೆ ಮಾಡದೆ ವಿಳಂಬ ಮಾಡುತ್ತಿದ್ದ ಪ್ರಾಧಿಕಾರಿಗಳು ತಮ್ಮ ಧೋರಣೆ ಬದಲಿಸುವಂತಾದ್ದು ಕರ್ನಾಟಕದಲ್ಲಿಯ ಬ್ಯಾಂಕ್ ಉದ್ಯೋಗಿಗಳಿಂದ ಪ್ರತಿಭಟನೆ ಪ್ರದರ್ಶನಗಳಾದ ಮೇಲೆಯೇ. ಇಂಥ ಅಹಿತಕರ ಸನ್ನಿವೇಶಗಳಿಗೆ ಎಡೆಕೊಡುವುದು ಜಾಣತನವಲ್ಲ. ಗಾಳಿ ಎತ್ತ ಬೀಸುತ್ತಿದೆಯೆಂಬುದನ್ನು ಪ್ರಾಧಿಕಾರಿಗಳು ಅರಿತು ನ್ಯಾಯಸಮ್ಮತವಾದ ಧೋರಣೆ ತಳೆದು ಎಲ್ಲರ ವಿಶ್ವಾಸಗಳಿಸುವ ಯತ್ನ ಮಾಡುವುದೊಳಿತು.

ಬಿರುಗಾಳಿಯ ಶಿಶು

ಕಳೆದ ಸಂಚಿಕೆಯಲ್ಲಿ ಪ್ರಸ್ತಾವಿಸಲಾಗಿದ್ದಂತೆ ಅಖಿಲ ಕರ್ನಾಟಕದ ಎಲ್ಲ ಬ್ಯಾಂಕುಗಳ ಕನ್ನಡ ಸಂಘಗಳ ಒಕ್ಕೂಟವೊಂದು ಸ್ಥಾಪಿತವಾಗಿದೆಯೆಂಬುದು ವಿಶೇಷವಾಗಿ ಇಲ್ಲಿ ಉಲ್ಲೇಖಿಸಬೇಕಾದ ಸಂಗತಿ. ರಾಜ್ಯದ ಬ್ಯಾಂಕು ಕಛೇರಿಗಳಲ್ಲಿ ಕನ್ನಡದ ಹಾಗೂ ಕನ್ನಡಿಗರ ಸ್ಥಾನಮಾನಗಳನ್ನು ರಕ್ಷಿಸುವ ದಿಶೆಯಲ್ಲಿ ಇದೊಂದು ಗಮನಾರ್ಹವಾದ ಹೆಜ್ಜೆ. ಸಂಘಟನೆಯಿಲ್ಲದೆ ಯಾವ ಹೋರಾಟವೂ ಯಶಸ್ವಿಯಾಗದು, ಯಾವ ರಚನಾತ್ಮಕ ಕಾರ್ಯವೂ ಫಲಪ್ರದವಾಗದು. ಅತ್ಯಂತ ಮಹತ್ವಪೂರ್ಣ ಸನ್ನಿವೇಶದಲ್ಲಿ ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು ಜನ್ಮತಳೆದಿದೆಯೆನ್ನಬೇಕು. ಅದೊಂದು ಬಿರುಗಾಳಿಯ ಶಿಶು. ಹುಟ್ಟುತ್ತಲೇ ಹೋರಾಟದಲ್ಲಿ ಕಾಲಿಟ್ಟಿದ್ದು ಅದರ ವೈಶಿಷ್ಟ್ಯ. ಕರ್ನಾಟಕದ ಜೀವಶಿಲ್ಪಿ ಡಾ॥ ಎಂ. ವಿಶ್ವೇಶ್ವರಯ್ಯನವರ ಕಾಣ್ಕೆಯ ಫಲವಾಗಿ ಜನ್ಮವೆತ್ತಿದ, ಅಚ್ಚಕನ್ನಡ ಸಂಸ್ಥೆಯಾದ ಮೈಸೂರು ಬ್ಯಾಂಕು ಭಾರತೀಯ ಸ್ಟೇಟ್ ಬ್ಯಾಂಕಿನ ಅಂಗಸಂಸ್ಥೆಯಾಗಿ ಪರಿವರ್ತನೆಗೊಂಡಮೇಲೆ ಅನುಭವಿಸುತ್ತಿರುವ ಅವಸ್ಥಾಂತರದಿಂದಾಗಿ ಆಗಿರುವ ಅನ್ಯಾಯಗಳನ್ನು ನಿವಾರಿಸುವ ಸಲುವಾಗಿ ಆ ಸಂಸ್ಥೆಯ ಉದ್ಯೋಗಿಗಳು ನಡೆಸುತ್ತಿರುವ ಹೋರಾಟವನ್ನು ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು ತನ್ನ ಹೋರಾಟವೆಂದು ಕೈಗೆತ್ತಿಕೊಂಡಿದ್ದು ಅತ್ಯಂತ ಔಚಿತ್ಯಪೂರ್ಣವಾದ್ದು. ಪರಿಷತ್ತಿನ ಕರಪತ್ರವೊಂದರಲ್ಲಿ ಹೇಳಿರುವಂತೆ, 'ಕರ್ನಾಟಕದಲ್ಲೇ ಹುಟ್ಟಿ ಬೆಳೆದು, ತನ್ನ ಕಾರ್ಯ ವ್ಯಾಪ್ತಿಯ ಹೆಚ್ಚು ಭಾಗವನ್ನು ಕರ್ನಾಟಕಕ್ಕೆ ಸೀಮಿತಗೊಳಿಸಿಕೊಂಡಿರುವ ಮೈಸೂರು ಬ್ಯಾಂಕಿನಲ್ಲಿ ಕಳೆದ ಮೂರು ವರ್ಷಗಳಿಂದೀಚೆಗೆ ಒಂದು ಸಾವಿರಕ್ಕೂ ಹೆಚ್ಚು ಮಂದಿ ಕನ್ನಡೇತರರಿಗೆ ಉದ್ಯೋಗ ಲಭಿಸಿದೆಯೆಂಬುದು ಎಂತಹ ಕನ್ನಡಿಗನಿಗೂ ಗಾಬರಿ

ಹುಟ್ಟಿಸುವ ವಿಚಾರ. ಎಪ್ಪತ್ತರ ಹೊಸ್ತಿಲಲ್ಲಿರುವ ಈ ಬ್ಯಾಂಕಿನ ಈ ಬಾರಿಯ ನೇಮಕಾತಿಯಲ್ಲಿ ಮುನ್ನೂರಕ್ಕೂ ಹೆಚ್ಚು ಮಂದಿ ಕನ್ನಡೇತರರರನ್ನು ಗುಮಾಸ್ತ ಹುದ್ದೆಗಳಿಗೆ ನೇಮಿಸಿಕೊಳ್ಳುವ ಹುನ್ನಾರು ನಡೆದದ್ದು ತುಂಬ ಆತಂಕದ ಬೆಳೆವಣಿಗೆ. ಕನ್ನಡಿಗರು ಕನ್ನಡೇತರರ ಬಗ್ಗೆ ಯಾವ ದ್ವೇಷಭಾವನೆಯನ್ನೂ ತಳೆದಿಲ್ಲ. ಆದರೆ ಕರ್ನಾಟಕದ ಬ್ಯಾಂಕುಗಳಲ್ಲಿಯೇ ಕನ್ನಡಿಗರಿಗೆ, ಕರ್ನಾಟಕದವರಿಗೆ ಉದ್ಯೋಗ ದೊರಕದಿದ್ದರೆ ಅವರೇನು ಮಾಡಬೇಕು? ಬ್ಯಾಂಕಿನ ಪರಿವೀಕ್ಷಾ (ಪ್ರೊಬೇಷನರಿ) ಹಾಗೂ ತಾಂತ್ರಿಕ ಅಧಿಕಾರಿಗಳ ಹುದ್ದೆಗಳಿಗೂ ಶೇ 90ರಷ್ಟು ಮಂದಿ ಕನ್ನಡೇತರರೇ ನೇಮಕ ವಾಗುತ್ತಿರುವುದೂ, ಈ ಬಾರಿ ಆಯ್ಕೆಯಾದ ಇಪ್ಪತ್ತಾರು ಮಂದಿ ಅಧಿಕಾರಿಗಳಲ್ಲಿ ಒಬ್ಬರಾದರೂ ಕನ್ನಡಿಗರಿರದಿರುವುದೂ ಕೇವಲ ಆಕಸ್ಮಿಕವೇನಲ್ಲ. ಇದರ ಹಿಂದೆ ಪೂರ್ವನಿಯೋಜಿತ ಸಂಚೊಂದು ಇದೆಯೆಂದು ಯಾರಿಗಾದರೂ ಅನಿಸದಿರದು. ಈ ಬ್ಯಾಂಕಿನ 440 ಶಾಖೆಗಳ ಪೈಕಿ 400 ಶಾಖೆಗಳು ಕರ್ನಾಟಕದಲ್ಲಿವೆ. ಇವುಗಳ ಪೈಕಿ ಅರ್ಧದಷ್ಟು ಇರುವುದು ಗ್ರಾಮಪ್ರದೇಶಗಳಲ್ಲಿ. ಇಲ್ಲಿ ಕನ್ನಡೇತರರ ನೇಮಕವಾದರೆ ಅದರಿಂದ ಜನಸಾಮಾನ್ಯರಿಗೆ ದೊರಕುವ ಪುರುಷಾರ್ಥವಾದರೂ ಏನು? ಸಾಮಾಜಿಕ ಬ್ಯಾಂಕಿಂಗ್, ಹಿಂದುಳಿದವರ ಮುನ್ನಡೆ, ಗ್ರಾಮಗಳ ದತ್ತು ಸ್ವೀಕಾರ, ಸಮಗ್ರ ಗ್ರಾಮೀಣ ಅಭಿವೃದ್ಧಿ ಮುಂತಾದ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿರುವ ಬ್ಯಾಂಕುಗಳು ಜನಸಾಮಾನ್ಯರ ಭಾಷೆ ಗೊತ್ತಿರದ ಸಿಬ್ಬಂದಿ ವರ್ಗದಿಂದ ಏನನ್ನು ತಾನೆ ಸಾಧಿಸಬಲ್ಲುವು? ಗಂಭೀರವಾಗಿ ಆಲೋಚಿಸಬೇಕಾದ ವಿಚಾರವಿದು. ಈ ಅನ್ಯಾಯದ ವಿರುದ್ಧ ಸೊಲ್ಲೆತ್ತಿದ ಪರಿಷತ್ತು ವರಿಷ್ಠರ ಗಮನ ಇತ್ತ ಹರಿಯುವಂತೆ ಮಾಡಿದೆ. ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಪ್ರಧಾನ ಕಛೇರಿಯೊಂದು ಬೆಂಗಳೂರಿನಲ್ಲಿ ಆರಂಭವಾಗಿರುವುದರಿಂದ ಈ ರಾಜ್ಯ ವಲಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ನೇಮಕಾತಿ ಮಂಡಲಿಯೊಂದು ಬೆಂಗಳೂರಿನಲ್ಲಿ ರಚನೆಯಾಗುವುದು ಅನಿವಾರ್ಯ. ಇದರೊಂದಿಗೆ ಈ ಅನ್ಯಾಯವೂ ನಿವಾರಣೆಯಾಗಬೇಕು. ಈ ಮಂಡಲಿಯ ಸದಸ್ಯರು ಯಾವುದೇ ಬಗೆಯ ಪೂರ್ವಾಗ್ರಹದಿಂದ ಪೀಡಿತರಾಗದೆ, ಕನ್ನಡಿಗರಿಗೆ ನ್ಯಾಯ ಸಲ್ಲುವಂತೆ ನೋಡಿಕೊಳ್ಳಬೇಕು. ಹಾಗಾದೀತೆಂದು ನಮ್ಮ ಆಶಯ.

ಬ್ಯಾಂಕ್ ವಿಕೇಂದ್ರೀಕರಣ

ಇದೇ ಸಮಯಕ್ಕೆ ಇನ್ನೊಂದು ವಿಚಾರವನ್ನೂ ಇಲ್ಲಿ ಪ್ರಸ್ತಾಪಿಸಬೇಕು. ಅದು ಬ್ಯಾಂಕಿಂಗ್ ವ್ಯವಸ್ಥೆಯ ವಿಕೇಂದ್ರೀಕರಣದ ಪ್ರಶ್ನೆ. ಹಳೆಯ ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಿಸಿ ಭಾರತೀಯ ಸ್ಟೇಟ್ ಬ್ಯಾಂಕನ್ನು ಸ್ಥಾಪಿಸಿದಾಗ ಸರ್ಕಾರದ ಮುಂದಿದ್ದ

ಗುರಿಯೆಂದರೆ ಗ್ರಾಮಾಂತರ ಪ್ರದೇಶಕ್ಕೆ ಬ್ಯಾಂಕನ್ನು ಕೊಂಡೊಯ್ಯುವುದು. ಗ್ರಾಮೀಣ ಜನಕ್ಕೆ ಅಗತ್ಯವಾದ ಧನಪೋಷಣೆ ನೀಡುವಲ್ಲಿ ಸ್ಥಳೀಯ ಲೇವಾದೇವಿಗಾರರಿಗೆ ಪರ್ಯಾಯವಾಗಿ ಆರಂಭವಾದ ಸಹಕಾರಿ ಚಳವಳಿ ಯಶಸ್ವಿಯಾಗದಿರುವುದರಿಂದ ಆತಂಕಗೊಂಡ ಪರಿಣತರ ಶಿಫಾರಸಿಗೆ ಅನುಗುಣವಾಗಿ ಭಾರತೀಯ ಸ್ಟೇಟ್ ಬ್ಯಾಂಕಿಗೆ ಈ ಹೊಣೆಯನ್ನು ವಹಿಸಲಾಯಿತು. ತ್ವರಿತವಾಗಿ ಗ್ರಾಮಪ್ರದೇಶಗಳಲ್ಲಿ ಬ್ಯಾಂಕ್ ಶಾಖೆಗಳನ್ನು ತೆರೆಯಬೇಕೆಂದು ಸೂಚಿಸಲಾಯಿತು. ಹಳೆಯ ದೇಶೀಯ ಸಂಸ್ಥಾನಗಳಲ್ಲಿ ಸರ್ಕಾರಿ ಆಶ್ರಯದಲ್ಲಿ ಸ್ಥಾಪಿತವಾಗಿ ಬಹುತೇಕ ಆಯಾ ಸರ್ಕಾರಗಳ ಬ್ಯಾಂಕುಗಳಂತೆ ಕಾರ್ಯನಿರ್ವಹಿಸುತ್ತಿದ್ದ ಮೈಸೂರು ಬ್ಯಾಂಕಿನಂಥ ಸಂಸ್ಥೆಗಳನ್ನು ಭಾರತೀಯ ಸ್ಟೇಟ್ ಬ್ಯಾಂಕಿನ ಕೊರಳಿಗೆ ಕಟ್ಟಲಾಯಿತು. ಇವೆಲ್ಲಾ ಭಾರತೀಯ ಸ್ಟೇಟ್ ಬ್ಯಾಂಕ್ ಗುಂಪಿಗೆ ಸೇರಿದುವು. ಗ್ರಾಮೀಣ ಶಾಖಾ ವಿಸ್ತರಣೆಯ ಕಾರ್ಯದಲ್ಲಿ ಇವೆಲ್ಲಾ ನಿರತವಾದುವು. ಇದು ಸಹಜವೇ.

ಆದರೆ ಅಂದಿನಿಂದ ಇಂದಿನವರೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಮುದ್ರ ಸದೃಶ ಬದಲಾವಣೆಯೇ ಆಗಿದೆ. 1969ರಿಂದೀಚೆಗೆ ರಾಷ್ಟ್ರದ ಅನೇಕ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾಗಿದೆ. ಭಾರತೀಯ ಸ್ಟೇಟ್ ಬ್ಯಾಂಕಿಗೂ ಇತರ ರಾಷ್ಟ್ರೀಕೃತ ಬ್ಯಾಂಕುಗಳಿಗೂ ಇರುವ ಭಿನ್ನತೆಯ ಗೆರೆ ಬಹಳ ತೆಳುವು. ಈ ಬ್ಯಾಂಕುಗಳೂ ಶಾಖೆಗಳನ್ನು ವಿಸ್ತರಿಸುವ ಕಾರ್ಯದಲ್ಲಿ ನಿರತವಾಗಿದೆ ಬಹಳಮಟ್ಟಿಗೆ ಅತಿವ್ಯಾಪ್ತಿಯ ಪ್ರವೃತ್ತಿ ಉಂಟಾಗಿದೆ. ಇವುಗಳ ನಡುವಣ ಸ್ಪರ್ಧೆ ಅಸಹಜವೂ ಅಪವ್ಯಯಕಾರಿಯೂ ಅರ್ಥಹೀನವೂ ಎನಿಸುವ ಪರಿಸ್ಥಿತಿ ಉದ್ಭವಿಸಿದೆ. ಈ ಸಂಚಿಕೆಯಲ್ಲಿ ಈ ವಿಚಾರ ಕುರಿತ ಒಂದು ಗಂಭೀರ ಲೇಖನವೂ ಇನ್ನೊಂದು ವಿನೋದ ಲೇಖನವೂ ಪ್ರಕಟವಾಗಿರುವುದನ್ನು ಓದುಗರು ಗಮನಿಸಬೇಕು.

ಹೀಗೆ ಒಂದು ನಿಟ್ಟಿನಲ್ಲಿ ಬ್ಯಾಂಕ್ ಕೇಂದ್ರೀಕರಣ ಪ್ರವೃತ್ತಿ ಬೆಳೆಯುತ್ತಿರುವಂತೆ, ವಿಕೇಂದ್ರೀಕರಣದ ನಿಟ್ಟಿನಲ್ಲೂ ಪ್ರಯತ್ನಗಳು ನಡೆಯುತ್ತಿವೆಯನ್ನಬೇಕು. ಭಾರತೀಯ ಸ್ಟೇಟ್ ಬ್ಯಾಂಕ್ ವಲಯಗಳ ನಿರ್ಮಾಣ ಒಂದು ದೃಷ್ಟಿಯಲ್ಲಿ ವಿಕೇಂದ್ರೀಕರಣದ್ದೇ ಆದರೆ ಇತರ ರಾಷ್ಟ್ರೀಕೃತ ಬ್ಯಾಂಕುಗಳು ಕೇಂದ್ರೀಕೃತ ವ್ಯವಸ್ಥೆಗಳಾಗಿದೆ. ದಕ್ಷಿಣದಲ್ಲಿ ಸ್ಥಾಪಿತವಾದ ಬ್ಯಾಂಕು ಉತ್ತರದ ದೂರದೂರ ಕೇಂದ್ರಗಳಲ್ಲೂ ಉತ್ತರದಲ್ಲಿ ಸ್ಥಾಪಿತವಾದ ಬ್ಯಾಂಕು ದಕ್ಷಿಣದ ತುತ್ತ ತುದಿಯಲ್ಲೂ ಶಾಖೆಗಳನ್ನು ತೆರೆದು ಪರಸ್ಪರವಾಗಿ ಸ್ಪರ್ಧೆಯಲ್ಲಿ ನಿರತವಾಗುವದಾಗಲಿ, ಅಮೂಲ್ಯ ಸಂಪನ್ಮೂಲಗಳನ್ನು ವ್ಯರ್ಥಗೊಳಿಸುವುದಾಗಲಿ, ಸಿಬ್ಬಂದಿಯನ್ನು ಅಡ್ಡಾದಿಡ್ಡಿಯಾಗಿ ವರ್ಗಮಾಡುವುದಾಗಲಿ ಅಷ್ಟೇನೂ

ವಿವೇಕದ ಕ್ರಮವೆನಿಸದು. ಬ್ಯಾಂಕುಗಳ ದಕ್ಷ ನಿರ್ವಹಣೆ, ನಿಯಂತ್ರಣ ಇವೆಲ್ಲ ಕ್ಲಿಷ್ಟವಾಗುವುದಲ್ಲದೆ ವಂಚನೆ ದುರನ್ವಯಗಳಿಗೂ ಎಡೆಯುಂಟಾಗುತ್ತದೆ. ಭಾಷೆಯ ಪ್ರಶ್ನೆಯೂ ಮುಖ್ಯವೇ. ಸ್ಥಳೀಯ ಹಾಗೂ ಪ್ರಾದೇಶಿಕ ಅಗತ್ಯಗಳನ್ನು ಅನುಲಕ್ಷಿಸಿ ಪೂರೈಸಬಲ್ಲ ಸಂಸ್ಥೆಗಳ ರಚನೆಯತ್ತ ಗಮನ ಕೊಡುವ ಸಲುವಾಗಿ ದೊಡ್ಡ ಬ್ಯಾಂಕುಗಳ ನೇತೃತ್ವದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ರಚನೆ ಒಂದು ರೀತಿಯಲ್ಲಿ ಬ್ಯಾಂಕ್ ವಿಕೇಂದ್ರೀಕರಣ ತತ್ತ್ವಕ್ಕೆ ಪರೋಕ್ಷವಾಗಿ ನೀಡಿದ ಮನ್ನಣೆಯೇ ಆಗಿದೆ.

ಆದ್ದರಿಂದ ಬ್ಯಾಂಕಿಂಗ್ ಸಂಸ್ಥೆಗಳ ದಕ್ಷತೆಯನ್ನು ಹೆಚ್ಚಿಸಿ, ದರೋಡೆ ವಂಚನೆ ದುರನ್ವಯಗಳನ್ನು ಕಡಿಮೆ ಮಾಡಿ, ವೆಚ್ಚವನ್ನು ತಗ್ಗಿಸಿ, ಉತ್ಪಾದಕತೆಯನ್ನು ಅಧಿಕಗೊಳಿಸಬೇಕಾದರೆ ವಿವಿಧ ವಲಯಗಳಿಗೆ ಬೇರೆಬೇರೆಯೇ ಬ್ಯಾಂಕಿಂಗ್ ಸಂಸ್ಥೆಗಳನ್ನು ರೂಪಿಸಬಾರದೇಕೆ? ಎಂಬುದನ್ನು ಕುರಿತು ತೀವ್ರವಾಗಿ ಚಿಂತಿಸಬೇಕಾಗಿದೆ. ಆಗ ಪ್ರಾದೇಶಿಕ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡುವದು ಸಾಧ್ಯವಾಗುತ್ತದೆ; ವ್ಯರ್ಥ ಸ್ಪರ್ಧೆ ತಪ್ಪುತ್ತದೆ; ಪ್ರಾದೇಶಿಕ ಹಿತಾಸಕ್ತಿಗಳ ರಕ್ಷಣೆಯೂ ಆಗುತ್ತದೆ; ಭಾಷೆಯ ಪ್ರಶ್ನೆ ತನಗೆ ತಾನೇ ಬಹುಮಟ್ಟಿಗೆ ಇತ್ಯರ್ಥವಾಗುತ್ತದೆ. ಈ ನಿಟ್ಟಿನಲ್ಲಿ ಮೊದಲನೆಯ ಹೆಜ್ಜೆಯಾಗಿ ಹಳೆಯ ರಾಜ್ಯ ಬ್ಯಾಂಕುಗಳನ್ನು – ಮೈಸೂರು ಬ್ಯಾಂಕಿನಂಥವನ್ನು ಭಾರತೀಯ ಸ್ಟೇಟ್ ಬ್ಯಾಂಕಿನ ತೆಕ್ಕೆಯಿಂದ ಬಿಡಿಸಿ ಮೊದಲಿನಂತೆಯೇ ಆಯಾ ರಾಜ್ಯಗಳ ವ್ಯಾಪ್ತಿಗೆ ಸೀಮಿತಗೊಳಿಸಬಾರದೇಕೆ? ಈ ನಿಟ್ಟಿನಲ್ಲಿ ಈ ಹಿಂದೆ ಅನೇಕರು ಸಲಹೆ ನೀಡಿದ್ದಾರೆ. ಇದನ್ನು ತೀವ್ರವಾಗಿ ಪರಿಶೀಲಿಸಿ ಕಾರ್ಯರೂಪಕ್ಕೆ ತರುವ ಕಾಲವೀಗ ಸನ್ನಿಹಿತವಾಗಿದೆ.

ರಿಸರ್ವ್ ಬ್ಯಾಂಕಿನ ಅಧಿಕಾರ

ಆದರೆ ಈ ವಿಚಾರದಲ್ಲಿ ಸರ್ಕಾರದ ಚಿಂತನೆ ವೈಜ್ಞಾನಿಕವಾದ ದಿಕ್ಕಿನಲ್ಲಿ ಹರಿಯುತ್ತಿಲ್ಲವೆಂಬುದು ಸ್ಪಷ್ಟ. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ಇಂದು ಹೆಚ್ಚು ಕಡಿಮೆ ಸರ್ಕಾರಿ ಇಲಾಖೆಗಳೆಂಬ ರೀತಿಯಲ್ಲಿ ನಿರ್ವಹಿಸಲ್ಪಡುತ್ತಿವೆ. ಬ್ಯಾಂಕುಗಳ ಜೀವಸತ್ತ್ವದ ಧಾರೆ ತೆಳ್ಳಗಾಗುತ್ತಿದೆಯೇನೋ ಎನಿಸುತ್ತಿದೆ. ಕೇಂದ್ರೀಯ ಬ್ಯಾಂಕ್ ಎಂಬ ಸೂರ್ಯನ ಸುತ್ತ ವಾಣಿಜ್ಯ ಹಾಗೂ ಇತರ ಬ್ಯಾಂಕುಗಳೂ ಹಣಕಾಸು ಸಂಸ್ಥೆಗಳ ಗ್ರಹಗಳೋಪಾದಿಯಲ್ಲಿ ಪರಿಭ್ರಮಿಸುತ್ತ 'ಧನಮಂಡಲ'ವೆಂಬ ಹೆಸರು ಅನ್ವರ್ಥವಾಗುವ ರೀತಿಯಲ್ಲಿ ವರ್ತಿಸುವ ಆದರ್ಶ ಚಿತ್ರ ಮಸುಕಾಗುತ್ತ ನಡೆಯುತ್ತಿದೆ. ಸರಕಾರ ನಿರ್ಧರಿಸಿದ ಆರ್ಥಿಕ ನೀತಿಯ ಚೌಕಟ್ಟಿನೊಳಗೆ, ಅದರ ಗುರಿಗಳ ಪೂರೈಕೆಯ ನಿಟ್ಟಿನಲ್ಲಿ ಬ್ಯಾಂಕಿಂಗ್ ಹಾಗೂ ಹಣ ವ್ಯವಸ್ಥೆಯನ್ನು ನಿಯಂತ್ರಿಸಿ

ನಿರ್ದೇಶಿಸುವ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಹಾಗೂ ಸರಕಾರದ ಗೆಳೆಯ – ದಾರ್ಶನಿಕ – ಮಾರ್ಗದರ್ಶಿಯಾಗಿ ವರ್ತಿಸುವಲ್ಲಿ ಕೇಂದ್ರೀಯ ಬ್ಯಾಂಕಿನ ಸ್ಥಾನ ಮಹತ್ವದ್ದು. ಭಾರತದಲ್ಲಿ ಕೇಂದ್ರೀಯ ಬ್ಯಾಂಕಿಂಗ್ ಕಾರ್ಯಭಾರಗಳನ್ನು ನಿರ್ವಹಿಸುತ್ತಿರುವ ರಿಸರ್ವ್ ಬ್ಯಾಂಕಿನ ಪ್ರತಿಷ್ಠೆಯನ್ನು ಈ ದೃಷ್ಟಿಯಿಂದ ಎತ್ತರದಲ್ಲಿ ನಿಲ್ಲಿಸುವುದು ಅಗತ್ಯ. ಪ್ರಪಂಚದ ಅನೇಕ ದೇಶಗಳಲ್ಲಿರುವಂತೆ ಭಾರತದಲ್ಲಿ ಕೂಡ ರಿಸರ್ವ್ ಬ್ಯಾಂಕು ರಾಷ್ಟ್ರದ ಒಡೆತನದಲ್ಲಿರುವುದಾದರೂ ಅದರ ಸ್ವತಂತ್ರ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕು. ಅಂತಿಮವಾಗಿ ಸರಕಾರದ ಮಾತಿಗೇ ಬೆಲೆಯಾದರೂ ಕೇಂದ್ರೀಯ ಬ್ಯಾಂಕಿನ ಅಧಿಕಾರ ಸವೆಯುವಂಥ ಕ್ರಮ ಅನುಸರಿಸುವದು ಅನುಚಿತ. ಆದರೆ ಈಚಿನ ದಿನಗಳಲ್ಲಿ ರಿಸರ್ವ್ ಬ್ಯಾಂಕ್ ಹಾಗೂ ಸರಕಾರದ ನಡುವಣ ಸಂಬಂಧ ಆದರ್ಶಯುತವಾದ ರೀತಿಯಲ್ಲಿ ಮುಂದುವರಿಯುತ್ತಿಲ್ಲವೇನೋ ಎನಿಸುತ್ತದೆ. ವಿದೇಶಗಳಲ್ಲಿರುವ ಅನಿವಾಸಿ ಭಾರತೀಯರು ಹಾಗೂ ಭಾರತೀಯ ಸಂಜಾತರು ಭಾರತದ ಕಂಪನಿಗಳ ಷೇರುಗಳಲ್ಲಿ ಹಣ ತೊಡಗಿಸುವ ಬಗ್ಗೆ ಸರ್ಕಾರ ಘೋಷಿಸಿದ ಸೂತ್ರದ ಅನ್ವಯದ ವಿಚಾರದಲ್ಲಿ ರಿಸರ್ವ್ ಬ್ಯಾಂಕ್ ತಳೆದ ಎಚ್ಚರಿಕೆಯ ನಿಲುವನ್ನು ಬದಿಗೊತ್ತಿ, ದೇಶೀಯ ಉದ್ಯಮವಲಯಗಳ ಆತಂಕವನ್ನು ಹೆಚ್ಚಿಸುವ ರೀತಿಯಲ್ಲಿ ಸರಕಾರ ಕ್ರಮ ತೆಗೆದುಕೊಂಡಿದ್ದು ಇತ್ತೀಚಿನ ಒಂದು ನಿದರ್ಶನ. ರಿಸರ್ವ್ ಬ್ಯಾಂಕ್ ಹಾಗೂ ಸರಕಾರದ ನಡುವಣ ಭಿನ್ನ ನಿಲುವುಗಳ ಬಗ್ಗೆ ಪತ್ರಿಕೆಗಳಲ್ಲಿ ನಾನಾ ಊಹಾಪೋಹಗಳು ಪ್ರಕಟವಾಗಿವೆ. ಇವು ಅಷ್ಟೇನೂ ಸಾಧುವಾದ ಪ್ರವೃತ್ತಿಗಳಲ್ಲವೆಂಬುದು ನಮ್ಮ ಅಭಿಪ್ರಾಯ. ವಿದೇಶಿ ಬಂಡವಾಳ ಸಂಸ್ಥೆಗಳು ತಲೆಮರೆಸಿಕೊಂಡು ಭಾರತಕ್ಕೆ ಪ್ರವೇಶ ಮಾಡುವ ಇಲ್ಲಿಯ ಉದ್ಯಮಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನಗಳನ್ನು ಹತ್ತಿಕ್ಕುವುದು ಅತ್ಯಗತ್ಯ.

ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳ ನಿರ್ವಹಣೆಯ ದೋಷಗಳು, ಅನಿಷ್ಟಕಾರಿ ಪ್ರವೃತ್ತಿಗಳು – ಇವಕ್ಕೆಲ್ಲಾ ರಿಸರ್ವ್ ಬ್ಯಾಂಕ್ ಹೊಣೆಯೆಂಬ ಧೋರಣೆಯೂ ಸರ್ಕಾರಿ ವಲಯಗಳಲ್ಲಿ ಬೆಳೆಯುತ್ತಿರುವಂತಿದೆ. ಬ್ಯಾಂಕುಗಳನ್ನು ಆರಂಭಿಸಲು ಹಾಗೂ ಹೊಸ ಶಾಖೆಗಳನ್ನು ತೆರೆಯಲು ಅನುಮತಿಯ ನೀಡಿಕೆಯ ವಿಚಾರದಲ್ಲಿ ರಿಸರ್ವ್ ಬ್ಯಾಂಕು ಅನೇಕ ಬಾರಿ ನಾನಾ ಬಗೆಯ ಒತ್ತಡಗಳಿಗೆ ಗುರಿಯಾಗಿದೆ. ಈ ವಿಚಾರದಲ್ಲಿ ಕೆಲವು ಸೂತ್ರಗಳನ್ನು ರಿಸರ್ವ್ ಬ್ಯಾಂಕ್ ಅನುಸರಿಸಬೇಕಾಗುತ್ತದೆ. ಆದರೆ ಹಲವೊಮ್ಮೆ ಅದು ಕೇಂದ್ರ ರಾಜ್ಯ ಸರಕಾರಗಳ ಒತ್ತಡವನ್ನು ಎದುರಿಸಬೇಕಾಗುತ್ತದೆ. ಬ್ಯಾಂಕ್ ವ್ಯವಹಾರವನ್ನು ಆರ್ಥಿಕ ದೃಷ್ಟಿಯಿಂದ ಅದು ಪರಿಗಣಿಸಬೇಕಾದ್ದು

ನ್ಯಾಯಸಮ್ಮತ. ಆದರೆ ರಾಜಕೀಯ ಉದ್ದೇಶಗಳಿಂದ ಸರ್ಕಾರಗಳು ಹೊಸ ಶಾಖೆಗಳನ್ನು ತೆರೆಯಲು ಒತ್ತಡ ಹೇರುವದುಂಟು. ಅಂತೆಯೇ ಸರ್ಕಾರಿ ವಲಯದ ಉದ್ಯಮಗಳ ನಷ್ಟವನ್ನು ತುಂಬಲು ಬ್ಯಾಂಕ್ ಉದರಿ ನೀಡಿಕೆಯ ವಿಚಾರದಲ್ಲೂ ರಿಸರ್ವ್ ಬ್ಯಾಂಕ್ ಶುದ್ಧ ಆರ್ಥಿಕ ಸೂತ್ರವನ್ನನುಸರಿಸಲು ಅಡ್ಡಿಯುಂಟಾಗಿದೆ.

ವಾಣಿಜ್ಯ ಬ್ಯಾಂಕ್ ಸ್ಥಾಪನೆಗೆ ಅಥವಾ ಬ್ಯಾಂಕ್ ಶಾಖೆಗಳನ್ನು ತೆರೆಯಲು ಪರವಾನಗಿ ನೀಡುವ ರಿಸರ್ವ್ ಬ್ಯಾಂಕಿನ ಅಧಿಕಾರವನ್ನ ಸರ್ಕಾರ ವಹಿಸಿಕೊಳ್ಳುವುದೆಂಬ ಸುದ್ದಿಯೊಂದು ಪ್ರಕಟವಾಗಿತ್ತು. ಸರ್ಕಾರದ ಹಣಕಾಸು ಇಲಾಖೆಯಲ್ಲಿ ಇಂಥ ಅಧಿಕಾರ ಕೇಂದ್ರೀಕೃತವಾಗುವುದು ಸರ್ವಥಾ ಸರಿಯಲ್ಲ. ರಿಸರ್ವ್ ಬ್ಯಾಂಕಿನಂಥ ಸ್ವಾಯತ್ತ ಪರಿಣತ ಸಂಸ್ಥೆಯಲ್ಲಿ ಇದು ನಿಹಿತವಾಗಿರುವುದು ಎಲ್ಲ ದೃಷ್ಟಿಗಳಿಂದಲೂ ಯುಕ್ತವಾದ್ದು. ಸುದೈವದಿಂದ ಸರ್ಕಾರ ತನ್ನ ಈ ಯೋಚನೆಯನ್ನು ಈಚೆಗೆ ಬಿಟ್ಟುಕೊಟ್ಟಿದೆಯೆಂದೂ, ರಿಸರ್ವ್ ಬ್ಯಾಂಕಿನ ಕೈಯಲ್ಲೇ ಈ ಅಧಿಕಾರ ಮುಂದುವರಿಯುವುದೆಂದೂ ತಿಳಿದುಬಂದಿದೆ. ಈ ವಿವೇಕ ಮೂಡಿರುವುದು ಸ್ವಾಗತಾರ್ಹ. ಸರ್ಕಾರ ಘೋಷಿಸಿರುವ ಕೈಗಾರಿಕಾ ನೀತಿಯ ರೀತಿಯಲ್ಲಿ ವ್ಯಾಪಕ ಬ್ಯಾಂಕಿಂಗ್ ನೀತಿಯೊಂದನ್ನು ಘೋಷಿಸಿಲ್ಲದಿರುವುದು ಒಂದು ಲೋಪ. ಸರ್ಕಾರದ ಬ್ಯಾಂಕಿಂಗ್ ನೀತಿಯ ಉದ್ದೇಶ, ವಿವಿಧ ಸಂಸ್ಥೆಗಳ ಅಧಿಕಾರ ಹಾಗೂ ಕಾರ್ಯಭಾರಗಳು – ಇವನ್ನೆಲ್ಲ ವ್ಯಾಖ್ಯಾನಿಸುವುದು ಅತ್ಯಗತ್ಯ.

ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ವಿಧೇಯಕ

ಸರ್ಕಾರ ಈಚೆಗೆ ಲೋಕಸಭೆಯ ಮುಂದೆ ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ವಿಧೇಯಕವೊಂದನ್ನು ಮಂಡಿಸಿದೆ. 1983ರ ಈ ವಿಧೇಯಕ ಇಷ್ಟರಲ್ಲೇ ಪರಿಶೀಲನೆಗೆ ಬರಲಿದಯೆಂದು ಹೇಳಲಾಗಿದೆ. ಕೇಂದ್ರದಲ್ಲಿ ಜನತಾ ಸರ್ಕಾರ ಅಧಿಕಾರದಲ್ಲಿದ್ದ ಕಾಲದಲ್ಲಿ 1978 ವಿಧೇಯಕವೊಂದನ್ನು ಮಂಡಿಸಲಾಗಿತ್ತು. ಆದರೆ ಅದಕ್ಕೆ ಬಹಳಷ್ಟು ವಿರೋಧ ಬಂದುದರಿಂದ ಅದನ್ನು ಕೈಬಿಡಲಾಯಿತೆಂದು ಕಾಣುತ್ತದೆ; ಅಥವಾ ಕಾಲಾನುಕ್ರಮದಲ್ಲಿ ತಾನಾಗಿಯೇ ವ್ಯಪಗತಗೊಳ್ಳಲು (ಲ್ಯಾಪ್ಸ್) ಬಿಟ್ಟಿರಬಹುದು. ಆದರೆ ಈಗ ಬಹತೇಕ ಅಂಥದೇ ವಿಧೇಯಕವನ್ನು ಈಗಿನ ಸರ್ಕಾರ ತಂದಿದೆ. 1934ರ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1949ರ ಬ್ಯಾಂಕಿಂಗ್ ನಿಬಂಧನ (ರೆಗ್ಯುಲೇಷನ್) ಅಧಿನಿಯಮ, 1955ರ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1970 ಮತ್ತು 1980ರ ಬ್ಯಾಂಕ್ ರಾಷ್ಟ್ರೀಕರಣ ಅಧಿನಿಯಮಗಳು ಇವೂ

ಒಳಗೊಂಡಂತೆ ಒಂಬತ್ತು ಪ್ರಸಕ್ತ ಅಧಿನಿಯಮಗಳನ್ನು ತಿದ್ದುಪಡಿ ಮಾಡುವುದು ಈ ವಿಧೇಯಕದ ಉದ್ದೇಶ. ಏಕರೂಪತೆಯ ದೃಷ್ಟಿಯಿಂದ ಇದು ನ್ಯಾಯವಾದ್ದೇ. ದೇಶದ ವಿಚಾರವಂತರು ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಯುಕ್ತ ಸಲಹೆಗಳನ್ನು ನೀಡಬೇಕು.

ಪ್ರಸಕ್ತ ವಿಧೇಯಕದಲ್ಲಿ ವಾಣಿಜ್ಯ ವಲಯಗಳ ವಿಶೇಷವಾದ ಟೀಕೆಗೆ ಗುರಿಯಾಗಿರುವ ಭಾಗವೆಂದರೆ 10ನೆಯ ಖಂಡ (ಕ್ಲಾಸ್). 1934ರ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮಕ್ಕೆ ಹೊಸದೊಂದು ಅಧ್ಯಾಯವನ್ನು (ಅಧ್ಯಾಯ IIIC) ಸೇರಿಸುವುದು ಈ ಖಂಡದ ಉದ್ದೇಶ. ಇದರಲ್ಲಿ 45R, 45S, 45T ಎಂಬ ಮೂರು ಹೊಸ ಪ್ರಕರಣಗಳು (ಸೆಕ್ಷನ್ಸ್) ಇರುತ್ತವೆ. ಅನಿಗಮಿತ (ಅನ್–ಇನ್ ಕಾರ್ಪೊರೇಟೆಡ್) ಕಾಯಗಳು (ಬಾಡೀಸ್) ಠೇವಣಿಗಳನ್ನು ಸ್ವೀಕರಿಸವ ಬಗ್ಗೆ ನಿರ್ಬಂಧ – ನಿಷೇಧಗಳನ್ನು ಈ ಪ್ರಕರಣಗಳು ವಿಧಿಸುತ್ತವೆ. ಠೇವಣಿಗಳ ವ್ಯಾಖ್ಯೆ, ಇವನ್ನು ಸ್ವೀಕರಿಸುವ ಬಗೆಗೆ ವಿಧೇಯಕದಲ್ಲಿ ಸೂಚಿಸಲಾಗಿರುವ ಉಪಬಂಧಗಳು – ಇವು ರಾಷ್ಟ್ರದ ಪ್ರಜೆಗಳು ಸ್ವತಂತ್ರವಾಗಿ ಅಬಾಧಿತವಾಗಿ ನ್ಯಾಯಬದ್ಧವಾದ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅಡ್ಡಿಯುಂಟುಮಾಡುತ್ತವೆಂದೂ, ಭಾರತದ ಸಂವಿಧಾನದ ಅನುಚ್ಛೇದ 19(1)(g)ಗೆ ವ್ಯತಿರಿಕ್ತವಾಗಿವೆಯೆಂದೂ ವಾದಿಸಲಾಗಿದೆ. ಖಾಸಗಿ ವಲಯಕ್ಕೆ ಧನ ಪೋಷಣೆಯ ಪರ್ಯಾಯ ವ್ಯವಸ್ಥೆಯೊಂದು ಅಲಭ್ಯವಾಗಿರುವಲ್ಲಿ ಇಂಥ ನಿರ್ಬಂಧಗಳಿಂದ ಆರ್ಥಿಕ ಬೆಳವಣಿಗೆಗೆ ಧಕ್ಕೆ ಉಂಟಾಗುವುದೆಂದೂ ವಾದಿಸಲಾಗಿದೆ. ವಿಧೇಯಕದ ಉದ್ದೇಶಗಳು ಅಷ್ಟೇನೂ ಸ್ಪಷ್ಟವಾಗಿಲ್ಲವೆಂದು ಕೂಡ ಹೇಳಲಾಗಿದೆ. ಠೇವಣಿದಾರರ ಹಿತರಕ್ಷಣೆ, ಆರ್ಥಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಇವೆರಡನ್ನೂ ಅನುಲಕ್ಷಿಸುವ ರೀತಿಯಲ್ಲಿ ಈ ತಿದ್ದುಪಡಿ ವಿಧೇಯಕ ಅಂತಿಮವಾಗಿ ರೂಪುಗೊಳ್ಳುವುದೆಂದು ಆಶಿಸಬಹುದಾಗಿದೆ.

ಈ ಸಂಚಿಕೆಯಲ್ಲಿ

'ಬ್ಯಾಂಕಿಂಗ್ ಪ್ರಪಂಚ'ದ ನಾಲ್ಕನೆಯ ವರ್ಷದ ಎರಡನೆಯ ಸಂಚಿಕೆ ಎಂದಿನಂತೆ ಉತ್ತಮ ಮಟ್ಟದ ಹಾಗೂ ಉಪಯುಕ್ತವಾದ ಲೇಖನಗಳನ್ನು ಒಳಗೊಳ್ಳುವಂತೆ ಮನಃಪೂರ್ವಕವಾಗಿ ಶ್ರಮಿಸಲಾಗಿದೆಯೆಂದು ನಮ್ಮ ನಂಬಿಕೆ. ತರುಣ ಲೇಖಕರ ಸಮರ್ಥ ಪಡೆಯೊಂದನ್ನು ನಿರ್ಮಿಸಲು 'ಬ್ಯಾಂಕಿಂಗ್ ಪ್ರಪಂಚ' ಸದಾ ಪ್ರಯತ್ನಶೀಲವಾಗಿದೆ. ಸಮನ್ವಯ ಸಮಿತಿಯ ಆಶ್ರಯದಲ್ಲಿ ಪ್ರತಿ ಆರು ತಿಂಗಳುಗಳಿಗೆ ಒಮ್ಮೆ ಏರ್ಪಡಿಸಲಾಗುತ್ತಿರುವ ಬ್ಯಾಂಕಿಂಗ್ ಕನ್ನಡ ಕಮ್ಮಟಗಳು ಬಹಳ ಉಪಯುಕ್ತವೆನಿಸಿದೆ. ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದಂತೆ ಕಳೆದ

ಏಪ್ರಿಲಿನಲ್ಲಿ ಶಿರಸಿಯಲ್ಲಿ ಆರು ದಿನಗಳ ಕಾಲ ಮೂರನೆಯ ಕಮ್ಮಟ ನಡೆಯಿತು. ಇದನ್ನು ಕುರಿತ ವಿವರವಾದ ವರದಿ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ. ಈ ಕಮ್ಮಟದಲ್ಲಿ ಮಂಡಿಸಲಾದ ಕೆಲವು ಪ್ರಬಂಧಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿವೆ. ಯಾವುದೇ ವಿಷಯವನ್ನು ಕುರಿತ ಅಭ್ಯಾಸಪೂರ್ಣ ಲೇಖನಗಳನ್ನು ಕನ್ನಡದಲ್ಲಿ ಬರೆಯಬಲ್ಲ ಸಾಮರ್ಥ್ಯವನ್ನು ಕಮ್ಮಟದ ಭಾಗಿಗಳು ಪಡೆದುಕೊಂಡಿದ್ದಾರೆಂಬುದು ಸಮಾಧಾನದ ಸಂಗತಿ. ಪಾರಿಭಾಷಿಕ ಪದಗಳ ಸೃಷ್ಟಿ, ಭಾಷಾಂತರದ ತಂತ್ರ ಇವನ್ನು ಕುರಿತ ಪ್ರಾಯೋಗಿಕ ಜ್ಞಾನವನ್ನು ಸಾಧಿಸುವಲ್ಲಿಯೂ ಕಮ್ಮಟ ಯಶಸ್ವಿಯಾಗಿದೆ. ಕಮ್ಮಟದ ಭಾಗಿಗಳ ಉತ್ಸಾಹ ಶ್ರದ್ಧೆಗಳು ಪ್ರಶಂಸಾರ್ಹ. ಇವರು ಬ್ಯಾಂಕಿಂಗ್ ಪ್ರಪಂಚದ ಮಿದುಳಾಗಿ, ಬೆನ್ನೆಲುಬಾಗಿ, ಶಾಶ್ವತ ಬರಹಗಾರರಾಗಿ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ಇವರನ್ನು 'ಬ್ಯಾಂಕಿಂಗ್ ಪ್ರಪಂಚ' ಅಭಿನಂದಿಸುತ್ತದೆ. ಸಮನ್ವಯ ಸಮಿತಿಯ ಆಶ್ರಯದಲ್ಲಿ ನಾಲ್ಕನೆಯ ಕಮ್ಮಟ ನವೆಂಬರ್ 1ರಿಂದ ಆರು ದಿನಗಳ ಕಾಲ ಹೊಸಪೇಟೆಯಲ್ಲಿ ನಡೆಯಲಿದೆ. ಇದು ಕೂಡ ಯಶಸ್ವಿಯೂ ಉಪಯುಕ್ತವೂ ಆದೀತೆಂಬ ನಂಬಿಕೆ ನಮ್ಮದು.

ಸಮನ್ವಯ ಸಮಿತಿಯ ಕಮ್ಮಟದ ಯಶಸ್ಸಿನ ಕಂಪು ಸರ್ಕಾರಿ ವಲಯಕ್ಕೂ ಹಬ್ಬಿರುವುದು ಸಂತೋಷದ ಸಂಗತಿ. ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ವಿಭಾಗದ ವತಿಯಿಂದ ಬೆಂಗಳೂರಿನಲ್ಲಿ ಕಳೆದ ಮಾರ್ಚ್ ತಿಂಗಳಲ್ಲಿ ಇದೇ ಬಗೆಯ ಕಾರ್ಯಶಿಬಿರವೊಂದನ್ನು ಏರ್ಪಡಿಸಲಾಗಿತ್ತು. ಬೆಂಗಳೂರು ನಗರದ ವಿವಿಧ ಬ್ಯಾಂಕುಗಳಿಂದ ಬಂದಿದ್ದ ಅಧಿಕಾರಿಗಳ ಈ ಶಿಬಿರದ ಯಶಸ್ಸೂ ಗಮನಾರ್ಹ. ಇದೇ ಬಗೆಯ ಶಿಬಿರಗಳನ್ನು ರಾಜ್ಯದ ಇತರ ಸ್ಥಳಗಳಲ್ಲಿ ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮ ಹಾಕಿಕೊಂಡಿದೆ. ಇದರಿಂದ ಬ್ಯಾಂಕುಗಳಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಸಲು ಅಗತ್ಯವಾದ ಪರಿಣತಿ ನಿರ್ಮಾಣಗೊಳ್ಳುತ್ತದೆ. ಬ್ಯಾಂಕಿಂಗ್ ವಿಷಯ ಕುರಿತ ಬರಹಗಾರರ ಸಂಖ್ಯೆಯೂ ಬೆಳೆಯುತ್ತದೆ. ಸರ್ಕಾರಿ ಕಮ್ಮಟದಲ್ಲಿ ಮಂಡಿಸಲಾದ ಕೆಲವು ಪ್ರಬಂಧಗಳನ್ನೂ, ಭಾಷಾಂತರಿಸಲಾದ ಲೇಖನವೊಂದನ್ನೂ 'ಬ್ಯಾಂಕಿಂಗ್ ಪ್ರಪಂಚ'ದ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಗದ್ದಲವಿಲ್ಲದ ಈ ಕ್ರಾಂತಿಯನ್ನು ರೂಪಿಸುವಲ್ಲಿ 'ಬ್ಯಾಂಕಿಂಗ್ ಪ್ರಪಂಚ' ಪ್ರಮುಖ ಪಾತ್ರ ವಹಿಸುತ್ತಿದೆಯೆಂಬುದು ಅಭಿಮಾನದ ಸಂಗತಿ.

06.

1984 ಏಪ್ರಿಲ್
ಮಹತ್ವದ ಬೆಳವಣಿಗೆಗಳು

'ಬ್ಯಾಂಕಿಂಗ್ ಪ್ರಪಂಚ'ದ ಕಳೆದ ಸಂಚಿಕೆ ಪ್ರಕಟವಾದಂದಿನಿಂದ ಇದುವರೆಗಿನ ಅವಧಿಯಲ್ಲಿ ಭಾರತೀಯ ಕ್ಷೇತ್ರದಲ್ಲಿ ಅನೇಕ ಮಹತ್ತ್ವದ ಬೆಳವಣಿಗೆಗಳಾಗಿವೆ. ಗಣಕಗಳ (ಕಂಪ್ಯೂಟರ್) ಬಳಕೆಯ ಬಗ್ಗೆ ಬ್ಯಾಂಕುಗಳ ವ್ಯವಸ್ಥಾಪಕ ವರ್ಗಕ್ಕೂ ಉದ್ಯೋಗಿಗಳಿಗೆ ನಡುವೆ ಆಗಿರುವ ಒಪ್ಪಂದ, ಬ್ಯಾಂಕಿಂಗ್ ಕಾನೂನುಗಳ (ತಿದ್ದುಪಡಿ) ಅಧಿನಿಯಮ ಇವು ಮುಖ್ಯವಾದ ಎರಡು ಬೆಳವಣಿಗೆಗಳು. ಬ್ಯಾಂಕುಗಳ ಮೇಲೆ ದೀರ್ಘಕಾಲದಲ್ಲಿ ಆಗುವ ಪರಿಣಾಮಗಳ ದೃಷ್ಟಿಯಿಂದ ಇವುಗಳ ಪರಿಶೀಲನೆ ಅಗತ್ಯ.

ಗಣಕಯಂತ್ರದ ಬಳಕೆ

ಹಲವರ ಕೆಲಸವನ್ನು ಶೀಘ್ರವಾಗಿಯೂ ಸಮರ್ಥವಾಗಿಯೂ ಮಾಡಬಲ್ಲ ಯಾವುದೇ ಯಂತ್ರವ್ಯವಸ್ಥೆಯನ್ನು ಅಳವಡಿಸುವಾಗಲೂ ಅದರಿಂದ ಕಾರ್ಮಿಕರಿಗೆ ನಿರುದ್ಯೋಗ ಪ್ರಾಪ್ತವಾಗುವುದೆಂಬ ಅಂಜಿಕೆ ಬರುವುದು ಸಹಜ. ಲಾಭದೃಷ್ಟಿಯೇ ಮುಖ್ಯವಾದ ಅರ್ಥವ್ಯವಸ್ಥೆ ಇರುವ ಸಮಾಜಗಳಲ್ಲಿ ಈ ಅಂಜಿಕೆ ನಿಜವಾಗುವುದೂ ಉಂಟು. ಭಾರತದಲ್ಲಿ ಬಹುತೇಕ ಬ್ಯಾಂಕುಗಳು ರಾಷ್ಟ್ರೀಕೃತವಾಗಿ ಸರ್ಕಾರದ ಸ್ವಾಮ್ಯ ಹಾಗೂ ನಿಯಂತ್ರಣಗಳಿಗೆ ಒಳಪಟ್ಟಿರುವುವಾದರೂ ಅವು ಲಾಭದೃಷ್ಟಿಯ ಚೌಕಟ್ಟಿನೊಳಗೇ ಕೆಲಸ ಮಾಡುವುದು ಸದ್ಯಕ್ಕಂತೂ ಅನಿವಾರ್ಯ. ದಕ್ಷತೆ, ಉಪಯುಕ್ತತೆ, ಜೀವನಸಾಮರ್ಥ್ಯಗಳನ್ನು ಅಳತೆ ಮಾಡುವ ಪರ್ಯಾಯ ವಿಧಾನವೊಂದು ಲಭ್ಯವಾಗುವವರೆಗೂ ಇದು ಮುಂದುವರಿಯುವುದೆಂದು ನಿರೀಕ್ಷಿಸಬಹುದು. ಈ ಮೌಲ್ಯ ಪದ್ಧತಿಯ ಅಡಿಯಲ್ಲಿ ಕೆಲಸ ಮಾಡುವ ಬ್ಯಾಂಕುಗಳ ವ್ಯವಸ್ಥಾಪಕ ವರ್ಗವಾದರೂ ಹಳೆಯ ದೃಷ್ಟಿ–ಧೋರಣೆಗಳಿಂದಲೇ ಪ್ರೇರಿತವಾದಂಥದು. ಬಹುಕಾಲದಿಂದ ಬಂದ ಮಾನಸಿಕ ನಿಲುವುಗಳನ್ನು ಕೊಡವಿಕೊಳ್ಳುವುದು ಸುಲಭವಲ್ಲ. ಸುಪ್ತಮನಸ್ಸಿನ ಆಳದಲ್ಲಿ ಅವು ಕೆಲಸ ಮಾಡುತ್ತಲೇ ಇರುತ್ತವೆ. ಕಾರ್ಮಿಕರಾದರೂ ತಮ್ಮನ್ನು ಶೋಷಣೆ ಮಾಡಲು ವ್ಯವಸ್ಥಾಪಕ ವರ್ಗ ಸದಾ ಸಜ್ಜಾಗಿದೆಯೆಂದೇ ಭಾವಿಸುತ್ತಾರೆ. ಈ ಭಾವನೆಗೆ ಇಂಬುಗೊಡುವ ಸಂಗತಿಗಳು ಪ್ರತ್ಯಕ್ಷವಾಗಿದ್ದಾಗಲಂತೂ ಇದು ತೀವ್ರಗೊಳ್ಳುತ್ತದೆ. ಎರಡೂ ವರ್ಗಗಳ ಗುರಿ ಒಂದೇ – ಅದು ಸಮಾಜಸೇವೆ ಎಂಬ ಹೊಸ ಮೌಲ್ಯವ್ಯವಸ್ಥೆ ರೂಪುಗೊಂಡು ಬೆಳೆದು ಸ್ಥಿರವಾಗುವವರೆಗೂ ಪರಸ್ಪರ ಅಸೂಯೆ, ಘರ್ಷಣೆ, ಮುಖಾಮುಖಿ ಇದ್ದದ್ದೇ. ಒಂದೊಂದು ಪಕ್ಷವೂ ತಂತಮ್ಮಲ್ಲಿ ಸಂಘಟಿತಗೊಳ್ಳುವುದರ

ಮೂಲಕವೇ ಇನ್ನೊಂದು ಪಕ್ಷವನ್ನು ಯಶಸ್ವಿಯಾಗಿ ಇದಿರಿಸಬಹುದೆಂಬ ನಂಬಿಕೆ ಬೆಳೆದಿದೆ.

ಈ ಪರಿಸ್ಥಿತಿಯ ಒಳಿತು – ಕೆಡುಕುಗಳನ್ನು ಪರಿಶೀಲಿಸುವುದು ಈಗ ಇಲ್ಲಿಯ ಉದ್ದೇಶವಲ್ಲ. ಬೆಳೆಯುತ್ತಿರುವ ಆವಶ್ಯಕತೆಗಳಿಗೆ ಅನುಗುಣವಾಗಿ ಭಾರತೀಯ ಬ್ಯಾಂಕುಗಳು ತಮ್ಮ ಕಲಾಪಗಳಲ್ಲಿ ಗಣಕಗಳನ್ನು ಸಜ್ಜುಗೊಳಿಸುವ ವಿಚಾರವಾಗಿ ತೀವ್ರವಾದ ವಿವಾದಗಳು ಉದ್ಭವಿಸಿದ್ದುವು. ಭಾರತದ ಪರಿಸ್ಥಿತಿಯಲ್ಲಿ ಬ್ಯಾಂಕುಗಳಲ್ಲಿ ಗಣಕಯಂತ್ರಗಳನ್ನು ವ್ಯಾಪಕವಾಗಿ ಬಳಸುವ ಅಗತ್ಯವಿದೆಯೆ ಎಂಬುದಾಗಿ ಉದ್ಯೋಗಿಗಳು ಪ್ರಶ್ನಿಸುತ್ತಿದ್ದರು. ಮುಂದೆ ಹೆಚ್ಚು ಹೆಚ್ಚಾಗಿ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ಸಾಧ್ಯತೆ ಕಡಿಮೆಯಾಗುವುದು ಮಾತ್ರವೇ ಅಲ್ಲ, ಇರುವವರೇ ಕೆಲಸ ಕಳೆದುಕೊಳ್ಳುವರೆಂಬ ಭಯ ಉಂಟಾಗಿತ್ತು. ಬ್ಯಾಂಕುಗಳ ವ್ಯವಹಾರಗಳನ್ನು ಗಣಕೀಕರಣಗೊಳಿಸಲು ತಗಲುವ ವೆಚ್ಚ ಅಗಾಧ. ಕಡಿಮೆ ಖರ್ಚಿನಲ್ಲಿ ಹೆಚ್ಚು ಜನರನ್ನು ನೇಮಕ ಮಾಡಿಕೊಂಡು ಹೆಚ್ಚು ಉದ್ಯೋಗವನ್ನು ಕಲ್ಪಿಸಬಹುದಲ್ಲವೇ? – ಎಂಬುದು ಸಹಜವಾದ ಪ್ರಶ್ನೆ. ಆದರೆ ಗ್ರಾಹಕರ ಅಗತ್ಯಗಳ ಪೂರೈಕೆ, ವ್ಯವಹಾರದ ಗಾತ್ರ ಬೆಳೆದಿರುವುದರಿಂದ ಸೇವೆಯಲ್ಲಿ ಉಂಟಾಗುತ್ತಿರುವ ವಿಳಂಬದ ನಿವಾರಣೆ, ಮಾನವ ದುಡಿಮೆಯಿಂದಲೇ ನಿರ್ವಹಿಸಲಾಗದಂಥ ಬ್ಯಾಂಕಿಂಗಿನ ಉನ್ನತ ಕರ್ಮಗಳ ನಿರ್ವಹಣೆ, ಉತ್ತಮವಾದ ಸೇವೆಯ ಸಲ್ಲಿಕೆ ಈ ದೃಷ್ಟಿಯಿಂದ ಗಣಕಗಳ ಬಳಕೆ ಅನಿವಾರ್ಯವೆಂಬುದು ವ್ಯವಸ್ಥಾಪನದ ದೃಷ್ಟಿ.

ದೀರ್ಘಕಾಲದ ಈ ವಿವಾದ ಈಚೆಗೆ ಒಂದು ರೀತಿಯಲ್ಲಿ ಇತ್ಯರ್ಥವಾಗಿರತಕ್ಕದ್ದು ಸ್ವಾಗತಾರ್ಹವಾದ ಸಂಗತಿ. ಐವತ್ತೆಂಟು ಬ್ಯಾಂಕುಗಳ ವ್ಯವಸ್ಥಾಪನವನ್ನು ಪ್ರತಿನಿಧಿಸುವ ಭಾರತೀಯ ಬ್ಯಾಂಕುಗಳ ಸಂಘಕ್ಕೂ (ಐ.ಬಿ.ಎ.) ಅಖಿಲ ಭಾರತ ಬ್ಯಾಂಕ್ ನೌಕರರ ಸಂಘಕ್ಕೂ ನಡುವೆ ಒಂದು ಒಪ್ಪಂದಕ್ಕೆ ಸಹಿಯಾಗಿದೆ.

(1) ಕೆಲವು ಪ್ರಾದೇಶಿಕ ಕೇಂದ್ರಗಳಲ್ಲಿ ಚೆಕ್ಕು ತೀರುವೆ ಕಲಾಪಗಳು,

(2) ಬ್ಯಾಂಕುಗಳ ನಡುವಣ ವಹಿವಾಟುಗಳು, ಅಭಿಕರಣ ಕಲಾಪಗಳು, ಸರಕಾರಿ ಖಾತೆಗಳು, ಪ್ರಯಾಣಿಕರ ಚೆಕ್ಕು ವಹಿವಾಟುಗಳು ಮತ್ತು ಉದರಿ ಕಾರ್ಡುಗಳು ಇವುಗಳ ಸಮನ್ವಯ, (3) ಸುಧಾರಿತ ವಿಧಾನಗಳ ಮೂಲಕ ಹಣದ ವರ್ಗಾವಣೆ ಹಾಗೂ ರವಾನೆ,

(4) ವಿದೇಶಿ ವಿನಿಮಯ ವಹಿವಾಟುಗಳು,

(5) ಬ್ಯಾಂಕ್ ವ್ಯವಸ್ಥಾಪನದಿಂದ ವಿನಿಯೋಜನೆ(ಇನ್‌ವೆಸ್ಟ್‌ಮೆಂಟ್), (6) ಉದರಿಯನ್ನು ಕುರಿತದ್ದೂ ಸೇರಿದಂತೆ

ವ್ಯವಸ್ಥಾಪನಕ್ಕೆ ಅಗತ್ಯವಾದ ಮಾಹಿತಿ ವ್ಯವಸ್ಥೆ, ಅಂಕಿ–ಅಂಶ ಕುರಿತ ಹಾಗೂ ಆಯ–ವ್ಯಯಕ್ಕೆ ಸಂಬಂಧಿಸಿದ ಮಾಹಿತಿ, ವಾರ್ಷಿಕ ಅಂತಿಮ ಲೆಕ್ಕಗಳ ಮಾಹಿತಿ ಮುಂತಾದವು, (7) ವಣಿಕ ಬ್ಯಾಂಕಿಂಗ್

(8) ಸಂಬಳ ಪಟ್ಟಿಗಳನ್ನು ಈಗಾಗಲೇ ಗಣಕೀಕೃತಗೊಳಿಸಿದ್ದರೆ ಅಂಥ ಬ್ಯಾಂಕುಗಳಲ್ಲಿ ಈ ಬಗ್ಗೆ, ಹಾಗೂ ಮುಂದೆ ಒಪ್ಪಂದಕ್ಕೆ ಬರಬಹುದಾದ ಬ್ಯಾಂಕುಗಳಲ್ಲಿ ಈ ಪಟ್ಟಿಗಳ ತಯಾರಿಕೆಗೆ, ಗಣಕಗಳನ್ನು ಬಳಸಿಕೊಳ್ಳಲು ಒಪ್ಪಂದದಲ್ಲಿ ಅನುವು ಮಾಡಲಾಗಿದೆ. ಆದರೆ ಈ ಕಾರಣದಿಂದಾಗಿ ಯಾವ ಸಿಬ್ಬಂದಿಯನ್ನೂ ಕಡಿತಮಾಡತಕ್ಕದ್ದಲ್ಲ ಎಂದೂ ನಿರ್ಧರಿಸಲಾಗಿದೆ. ಗಣಕಗಳನ್ನು ಯಾವ ಯಾವ ಕಲಾಪದಲ್ಲಿ ಎಷ್ಟೆಷ್ಟು ಮಟ್ಟಿಗೆ ಬಳಸಬೇಕೆಂಬ ವಿಚಾರವಾಗಿಯೂ, ಗಣಕೀಕರಣದ ಫಲವಾಗಿ ನೇಮಕವಾಗುವ ಸಿಬ್ಬಂದಿಗೆ ಪಾವತಿ ಮಾಡಬೇಕಾಗಬಹುದಾದ ಭತ್ಯೆಗಳ ವಿಚಾರವಾಗಿಯೂ ಪರಸ್ಪರ ಸಂಧಾನದಿಂದ ಇತ್ಯರ್ಥಪಡಿಸಬೇಕೆಂದು ಹೇಳಲಾಗಿದೆ. ಯಾಂತ್ರೀಕರಣ ಹಾಗೂ ಗಣಕೀಕರಣವನ್ನು ಇನ್ನಷ್ಟು ವಿಸ್ತರಿಸುವ ಪ್ರಶ್ನೆಯನ್ನು ಸಂಬಂಧಪಟ್ಟ ಪಕ್ಷಗಳು ಮೂರು ವರ್ಷಗಳ ಅನಂತರ ಪರಸ್ಪರ ಚರ್ಚಿಸಿ ಆ ಬಗ್ಗೆ ಹೊಸ ಒಪ್ಪಂದ ಮಾಡಿಕೊಳ್ಳಬೇಕೆಂದೂ ಒಡಂಬಡಿಕೆಯಾಗಿದೆ.

ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಬ್ಯಾಂಕುಗಳ ಕಲಾಪಗಳನ್ನೂ ಸೇವೆಗಳನ್ನೂ ಹೆಚ್ಚು ಶೀಘ್ರವಾಗಿ ಹಾಗೂ ದಕ್ಷವಾದ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ಹಾಗೂ ಸಾಮಾಜಿಕ ಸ್ವಾಸ್ಥ್ಯವೂ ಏರ್ಪಡುವಂತೆ ಬ್ಯಾಂಕುಗಳ ಆಧುನೀಕರಣ ಕಾರ್ಯ ಸಾಗಬೇಕಾಗಿದೆ. ಬ್ಯಾಂಕುಗಳು, ನೌಕರವರ್ಗ, ಗ್ರಾಹಕರು ಈ ಮೂರೂ ನಿಟ್ಟುಗಳಿಂದ ಮಾತ್ರವಲ್ಲದೆ ಇಡೀ ಸಮಾಜದ ದೃಷ್ಟಿಯಿಂದ, ಅರ್ಥವ್ಯವಸ್ಥೆಯ ದೃಷ್ಟಿಯಿಂದ ಈ ಪ್ರಶ್ನೆಯನ್ನು ಅತ್ಯಂತ ಕೂಲಂಕಷವಾಗಿ ಪರಿಶೀಲಿಸಬೇಕಲ್ಲದೆ ಸರ್ವಸಮರ್ಪಕವಾದ ವ್ಯವಸ್ಥೆಯೊಂದನ್ನು ರೂಪಿಸಿ ಜಾರಿಗೆ ತರಬೇಕಾದ್ದು ಅತ್ಯಗತ್ಯ. ಈ ಉದ್ದೇಶದಿಂದ 'ಬ್ಯಾಂಕಿಂಗ್ ಪ್ರಪಂಚ'ದ ಆಶ್ರಯದಲ್ಲಿ ಕಳೆದ ಫೆಬ್ರುವರಿ 25ರಂದು ಬೆಂಗಳೂರಿನಲ್ಲಿ ವಿಚಾರಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಣಕಯಂತ್ರದ ಬಳಕೆಯ ಇತಿಮಿತಿ, ವಿದೇಶಿ ಬ್ಯಾಂಕುಗಳಲ್ಲಿ ಇದರ ಬಳಕೆ, ಗ್ರಾಹಕನ, ಕಾರ್ಮಿಕರ ಹಾಗೂ ಆಡಳಿತದ ದೃಷ್ಟಿಯಲ್ಲಿ ಗಣಕೀಕರಣ, ಭವಿಷ್ಯದ ಸಾಧ್ಯತೆ ಮುಂತಾದ ನಾನಾ ಮುಖಗಳನ್ನು ಕುರಿತ ವಿಚಾರಪೂರ್ಣ ಪ್ರಬಂಧಗಳು ಈ ಸಂಕಿರಣದಲ್ಲಿ ಮಂಡಿತವಾಗಿದ್ದುವು. ಈ ಬಗ್ಗೆ ಸ್ವಾರಸ್ಯಪೂರ್ಣವಾದ ಚರ್ಚೆಯೂ ನಡೆಯಿತು. ಇಂಥ ಒಂದು

ವಿಚಾರವನ್ನು ಕುರಿತು ಈ ನಾನಾ ಕ್ಷೇತ್ರಗಳ ಧುರೀಣರು ಕನ್ನಡದಲ್ಲಿ ಪ್ರಬಂಧ ಮಂಡಿಸಿದರು, ಚರ್ಚಿಸಿದರು ಎಂಬುದೂ, 'ಬ್ಯಾಂಕಿಂಗ್ ಪ್ರಪಂಚ' ಇದಕ್ಕೆ ಸಂಚಾಲನೆ ನೀಡಿತೆಂಬುದೂ ಅಭಿಮಾನದ ಸಂಗತಿ. 'ಬ್ಯಾಂಕಿಂಗ್ ಪ್ರಪಂಚ'ದ ಮುಂದಿನ ಸಂಚಿಕೆಯಲ್ಲಿ ಈ ಪ್ರಬಂಧಗಳನ್ನು ಪ್ರಕಟಿಸುವ ಉದ್ದೇಶವಿದೆ.

ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ

ಬಹಳ ಕಾಲದಿಂದ ಅಡಿಗಲ್ಲಿನ ಮೇಲಿದ್ದ ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ವಿಧೇಯಕ ಕೊನೆಗೂ ಅಧಿನಿಯಮವಾಗಿ ಭಾರತದ ಸಂಸತ್ತಿನಿಂದ ಸ್ವೀಕೃತವಾದ್ದು ಇನ್ನೊಂದು ಮುಖ್ಯ ಬೆಳವಣಿಗೆ. ಬ್ಯಾಂಕರನ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಸಹವರ್ತಿ ಬ್ಯಾಂಕ್ ಅಧಿನಿಯಮಗಳು, ಠೇವಣಿ ವಿಮೆ ಹಾಗೂ ಉದರಿ ಖಾತರಿ ನಿಗಮ ಅಧಿನಿಯಮ, ಬ್ಯಾಂಕಿಂಗ್ ಕಂಪನಿಗಳ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮಗಳು – ಹೀಗೆ ಹಲವಾರು ಕಾನೂನುಗಳಿಗೆ ಯುಕ್ತವೆನಿಸಿದ ಹಾಗೂ ಅಗತ್ಯವೆನಿಸಿದ ತಿದ್ದುಪಡಿಗಳನ್ನು ತರುವ ಈ ಹೊಸ ಅಧಿನಿಯಮ ನಿಜಕ್ಕೂ ತುಂಬಾ ವ್ಯಾಪಕವಾದದ್ದು. ಇದರ ಅನೇಕ ಉಪಬಂಧಗಳನ್ನು ಸಾರ್ವಜನಿಕರೂ ಸಂಬಂಧಪಟ್ಟ ವಲಯಗಳವರೂ ಸ್ವಾಗತಿಸಿದ್ದಾರೆ. ಅಂತೆಯೇ ಕೆಲವು ಉಪಬಂಧಗಳು ಆಸಕ್ತ ವಲಯಗಳ ಉಗ್ರವಾದ ಟೀಕೆಗಳಿಗೂ ಗುರಿಯಾಗಿವೆ. ಈ ವ್ಯಾಪಕ ತಿದ್ದುಪಡಿಗಳ ಫಲವಾಗಿ ಬ್ಯಾಂಕಿಂಗ್ ಕಲಾಪಗಳಲ್ಲಿ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಬದಲಾವಣೆಗಳಾಗುವ ಸಂಭವವಿದೆ. ಆದರೆ ದುರ್ದೈವದ ಸಂಗತಿಯೆಂದರೆ, ಇದರ ಎಲ್ಲ ಮುಖಗಳ ಚರ್ಚೆ ಸಾಕಷ್ಟು ಆಗಿಲ್ಲ. ಈ ಸಂಚಿಕೆಯಲ್ಲಿ ಶ್ರೀ ಟಿ. ಕೆ. ರಂಗನಾಥ ಅವರು ಬರೆದಿರುವ ಲೇಖನದಲ್ಲಿ ಈ ಹೊಸ ಅಧಿನಿಯಮದ ವಿವೇಚನೆ ನಡೆದಿದೆ. ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ಹೊಸ ಪೇಟೆಯಲ್ಲಿ ಏರ್ಪಡಿಸಲಾಗಿದ್ದ ಬ್ಯಾಂಕಿಂಗ್ ಕಮ್ಮಟದಲ್ಲಿ ಮಂಡಿಸಲಾದ ಪ್ರಬಂಧಗಳ ಪೈಕಿ ಇದು ಒಂದು. ಆ ಕಮ್ಮಟದ ಮುಂದೆ ಬಂದ ಇನ್ನೂ ಹಲವಾರು ಪ್ರಬಂಧಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿವೆ. ಚಲಾರ್ಥ ಕೋಠಿಗಳು, ಸಹಭಾಗಿತ್ವ ಬ್ಯಾಂಕಿಂಗ್, ಸಾರ್ವಜನಿಕ ಕಂಪನಿ ಠೇವಣಿಗಳು, ಬ್ಯಾಂಕಿಂಗ್ ಪರಿಭಾಷೆ, ಬ್ಯಾಂಕರರ ತರಬೇತಿ ಮುಂತಾದ ವಿಷಯಗಳನ್ನು ಕುರಿತ ಲೇಖನಗಳು ಬ್ಯಾಂಕಿಂಗಿನ ಹಲವಾರು ಹೊಸ ಮಗ್ಗಲುಗಳನ್ನೂ ಇತ್ತೀಚಿನ ಪ್ರವೃತ್ತಿಗಳನ್ನೂ ಪರಿಚಯ ಮಾಡಿಕೊಡುತ್ತವೆ. ಕೆಲವು ಇಂಗ್ಲಿಷ್ ಲೇಖನಗಳ ಅನುವಾದಗಳು ಪಾಶ್ಚಾತ್ಯ ದೇಶಗಳಲ್ಲಿಯ ಬ್ಯಾಂಕು

ಬೆಳವಣಿಗೆಯತ್ತ ಹಾಗೂ ಸಮಸ್ಯೆಗಳತ್ತ ನಮ್ಮನ್ನು ಕರೆದೊಯ್ಯುತ್ತವೆ. ಇವೆಲ್ಲ ನಮ್ಮ ಓದುಗರಿಗೆ ಉಪಯುಕ್ತವಾದಾವೆಂದು ನಮ್ಮ ನಂಬಿಕೆ.

ಬ್ಯಾಂಕಿಂಗ್ ಸೇವಾ ಆಯೋಗ

ಭಾರತದ ಬ್ಯಾಂಕುಗಳಿಗೆ ಅಗತ್ಯವಾದ ಅಧಿಕಾರಿಗಳ ನೇಮಕಕ್ಕೆ ಅಖಿಲ ಭಾರತ ವ್ಯಾಪ್ತಿಯ ಆಯ್ಕೆ ವ್ಯವಸ್ಥೆಯೊಂದನ್ನು ಜಾರಿಗೆ ತರುವ ಆಲೋಚನೆ ಕೇಂದ್ರ ಸರಕಾರಕ್ಕಿದೆಯೆಂದೂ ಇಷ್ಟರಲ್ಲೇ ಈ ಬಗ್ಗೆ ವಿಧೇಯಕವೊಂದು ನಮ್ಮ ಸಂಸತ್ತಿನ ಮುಂದೆ ಬರಲಿದೆಯೆಂದೂ ಸುದ್ದಿಯೊಂದು ಬಂದಿದೆ. ಈ ಕಾರ್ಯದ ನಿರ್ವಹಣೆಗಾಗಿ ಬ್ಯಾಂಕಿಂಗ್ ಸೇವಾ ಆಯೋಗವೊಂದರ ಸ್ಥಾಪನೆಯಾಗಲಿದೆ. ಈ ಆಯೋಗ ಆಯ್ಕೆ ಮಾಡುವ ಅಭ್ಯರ್ಥಿಗಳು ಭಾರತೀಯ ಆಡಳಿತ ಸೇವಾ ಸಿಬ್ಬಂದಿಯಂತೆಯೇ (ಐಎಎಸ್) ಸೇವೆ ಸಲ್ಲಿಸುತ್ತಾರೆ. ಭಾರತೀಯ ಬ್ಯಾಂಕುಗಳಲ್ಲಿ ಈಗ ಸುಮಾರು ಒಂದೂವರೆ ಲಕ್ಷ ಅಧಿಕಾರಿಗಳಿದ್ದಾರೆ. ವರ್ಷಕ್ಕೆ ಸುಮಾರು 1,500 ಅಧಿಕಾರಿಗಳು ಹೊಸದಾಗಿ ನೇಮಕಗೊಳ್ಳುತ್ತಿದ್ದಾರೆ. ಈ ನೇಮಕ ಆಯಾ ಬ್ಯಾಂಕುಗಳಿಂದಲೇ ಈಗ ಸಾಮಾನ್ಯವಾಗಿ ಆಗುತ್ತಿದೆ. ಬ್ಯಾಂಕಿಂಗ್ ಸೇವಾ ಆಯೋಗ ಬಂದ ಮೇಲೆ ಈ ನೇಮಕಗಳನ್ನು ಎಲ್ಲ ಬ್ಯಾಂಕುಗಳಿಗೂ ಸಮಾನವಾಗಿ ಮಾಡಲಾಗುತ್ತದೆ. ಇದರಿಂದ ಅನಾವಶ್ಯಕವಾದ ವೆಚ್ಚಗಳು ತಪ್ಪುತ್ತವೆಯೆಂದು ಹೇಳಲಾಗಿದೆ. ಈಗ ಒಂದು ಬ್ಯಾಂಕು ನೇಮಕ ಮಾಡಿಕೊಳ್ಳುವ ಅಧಿಕಾರಿಗಳು ಯಾವಾಗಬೇಕಾದರೂ ಆ ಬ್ಯಾಂಕನ್ನು ಬಿಟ್ಟು ಬೇರೊಂದು ಬ್ಯಾಂಕಿಗೆ ಹೋಗಬಹುದು. ಇದರಿಂದ ಆ ಬ್ಯಾಂಕಿಗೆ ತೊಂದರೆ ಆಗುವುದು ಸಹಜ. ಅಖಿಲ ಭಾರತ ಬ್ಯಾಂಕಿಂಗ್ ಸೇವಾ ಆಯೋಗದ ನೇಮಕದಿಂದ ಇದು ತಪ್ಪುತ್ತದೆ. ಅಧಿಕಾರಿಗಳು ಒಂದು ಬ್ಯಾಂಕನ್ನು ಬಿಟ್ಟು ಇನ್ನೊಂದು ಬ್ಯಾಂಕಿಗೆ ಹೋಗುವಂತಿಲ್ಲ. ಆದರೆ ಐಎಎಸ್ ಅಧಿಕಾರಿಗಳನ್ನು ಬೇರೆಬೇರೆ ರಾಜ್ಯಗಳಿಗೆ ನಿಗದಿಪಡಿಸಿದಂತೆ ಬ್ಯಾಂಕ್ ಅಧಿಕಾರಿಗಳನ್ನೂ ನಿಗದಿಪಡಿಸಬಹುದು. ಅನೇಕ ಬ್ಯಾಂಕುಗಳಿಗೆ ತಮ್ಮ ಗ್ರಾಮೀಣ ಶಾಖೆಗಳನ್ನು ನಿರ್ವಹಿಸಲು ಯುಕ್ತವಾದ ಸಿಬ್ಬಂದಿಯೇ ದೊರಕುತ್ತಿಲ್ಲವೆನ್ನಲಾಗಿದೆ. ಇಷ್ಟವಿಲ್ಲದವರನ್ನು ಅವುಗಳಿಗೆ ನೇಮಕಮಾಡುವುದರಿಂದ ಯಾರಿಗೂ ಪ್ರಯೋಜನವಿಲ್ಲ. ಬ್ಯಾಂಕಿಂಗ್ ಸೇವಾ ಆಯೋಗ ಈ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಆಯ್ಕೆ ಮಾಡುತ್ತದೆಯೆಂದೂ ಹೇಳಲಾಗಿದೆ.

ಬ್ಯಾಂಕಿಂಗ್ ಸೇವಾ ಆಯೋಗ ಹೊಸ ಪ್ರಯೋಗವೇನೂ ಅಲ್ಲ. 1975ರಲ್ಲಿ ಕಾಂಗ್ರೆಸ್ ಸರಕಾರ ಇಂಥ ಆಯೋಗವೊಂದನ್ನು ನೇಮಿಸಿತ್ತು. 1977ರಲ್ಲಿ ಜನತಾ ಸರಕಾರ ಬಂದಾಗ ಆ ಆಯೋಗದ ಅಧ್ಯಕ್ಷರು ಅಧಿಕಾರ ಬಿಡಲೊಲ್ಲದೆಹೋದ್ದರಿಂದ ಹೊಸ

ಸರಕಾರ ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಕರೆದು ಹಳೆಯ ಅಧಿನಿಯಮವನ್ನು ರದ್ದುಗೊಳಿಸಿತು. ಈಗ ಬರಲಿರುವ ಅಧಿನಿಯಮ ಹಳೆಯದರ ಪುನರ್ಜನ್ಮ. ಇದರಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲಾಗುತ್ತದೆಯೆಂದೂ ಹೇಳಲಾಗಿದೆ. ಬ್ಯಾಂಕಿಂಗ್ ಸೇವೆಗೆ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಗುಮಾಸ್ತರಿಂದ ನಿಶ್ಚಿತ ಪ್ರಮಾಣದಲ್ಲಿ ಬಡತಿ ನೀಡುವ ಕ್ರಮವನ್ನು ಕೊನೆಗೊಳಿಸುವುದಿಲ್ಲ. ಗುಮಾಸ್ತರ ನೇಮಕಕ್ಕೆ ಹಳೆಯ ಪದ್ಧತಿಯೇ ಮುಂದುವರಿಯುತ್ತದೆ.

ಸರಕಾರ ಜಾರಿಗೆ ತರಲಿರುವ ಈ ಹೊಸ ವ್ಯವಸ್ಥೆಯನ್ನು ಎಚ್ಚರದಿಂದ ಪರೀಕ್ಷಿಸುವುದು ಅಗತ್ಯ. ಅಖಿಲ ಭಾರತದ ಹೆಸರಿನಲ್ಲಿ ಮಾಡಲಾಗುವ ಯಾವುದೇ ನೇಮಕಾತಿಯಲ್ಲಿ ಪ್ರಾದೇಶಿಕ ಆಶೋತ್ತರಗಳನ್ನು ಬಲಿಕೊಡಲಾಗದು. ಆಯಾ ಭಾಷಾ ರಾಜ್ಯಗಳಲ್ಲಿ ಆಯಾ ಭಾಷೆಗಳವರೇ ನೇಮಕವಾಗಬೇಕೆಂಬುದನ್ನು ಮರೆತರೆ ಈಗಾಗಲೇ ಆಗುತ್ತಿರುವ ಅನ್ಯಾಯವನ್ನು ವಿಸ್ತರಿಸಿದಂತಾಗುತ್ತದೆ. ಹಾಗಾಗದಂತೆ ತಡೆಗಟ್ಟಲು ಸಂಬಂಧಪಟ್ಟವರು ಈಗಲೇ ಜಾಗೃತರಾಗಬೇಕು. ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಲು ಯತ್ನಿಸಬಾರದು.

ಬ್ಯಾಂಕ್ ಸಾಲದ ಸಮಾರಾಧನೆ

ಈಚಿನ ತಿಂಗಳುಗಳಲ್ಲಿ ಬಹಳವಾಗಿ ರಾಜಕೀಯದ ದೂಳೆಬ್ಬಿಸಿರುವ ವಿಚಾರವೆಂದರೆ ಬ್ಯಾಂಕುಗಳ ಸಾಮೂಹಿಕ ಸಾಲ ನೀಡಿಕೆ ಕಾರ್ಯಕ್ರಮ. ದೇಶದ ಹಲವೆಡೆಗಳಲ್ಲಿ ಗ್ರಾಮೀಣ ಜನಕ್ಕೂ ಹಿಂದುಳಿದ ವರ್ಗಗಳಿಗೂ ಒಟ್ಟೊಟ್ಟಿಗೆ ಸಾಲ ನೀಡುವ ಸಮಾರಂಭಗಳು ಏರ್ಪಡುತ್ತಿವೆ. ಬ್ಯಾಂಕುಗಳಿಗೂ ಸಾಲಪಡೆಯುವವರಿಗೂ ನಡುವೆ ರಾಜಕಾರಣಿಗಳು ಬರುತ್ತಿದ್ದಾರೆ. ಬ್ಯಾಂಕರ್ – ಗ್ರಾಹಕ ಸಂಬಂಧ ನೇರವಾಗಿ ಏರ್ಪಡುವ ಬದಲು ರಾಜಕಾರಣಿಯ, ಆಡಳಿತ ವ್ಯವಸ್ಥೆಯ, ಅಭಿವೃದ್ಧಿ ಅಧಿಕಾರಿಯ ಮಧ್ಯಸ್ತಿಕೆಯ ಮೂಲಕ ಏರ್ಪಡುತ್ತಿದೆ. ಸಾಲ ಮೇಳಗಳು ಆಳುವ ರಾಜಕೀಯ ಪಕ್ಷದ ಪ್ರಚಾರ ಸಾಧನಗಳಾಗಿವೆಯೆನ್ನಲಾಗುತ್ತಿದೆ. ಠೇವಣಿದಾರರ ಹಣದ ಸೂರೆಯಾಗುತ್ತಿದೆ, ಪೋಲಾಗುತ್ತಿದೆ ಎಂದೂ ಟೀಕಿಸಲಾಗುತ್ತಿದೆ.

ಭಾರತದಂಥ ದೇಶದಲ್ಲಿ ಸಾಮಾಜಿಕ ಆರ್ಥಿಕ ಮುನ್ನಡೆಯ ಸಾಧನವಾಗಿ ಬ್ಯಾಂಕುಗಳು ಮುಂದೆ ಬರುವುದರಲ್ಲಿ ತಪ್ಪೇನೂ ಇಲ್ಲ. ಅದು ಸಾಧುವಾದ್ದೇ, ಸ್ತುತ್ಯವಾದ್ದೇ, ಸ್ವಾಗತಾರ್ಹವಾದ್ದೇ. ಕೆಲವೇ ವರ್ಗಗಳ ಸಂಸ್ಥೆಯಾಗಿದ್ದ ಬ್ಯಾಂಕು ಜನಸಮುದಾಯದ ಸಂಸ್ಥೆಯಾಗಿ

ಪರಿವರ್ತನೆಗೊಳ್ಳುತ್ತಿರುವುದಕ್ಕೆ ಯಾರೂ ಆತಂಕಗೊಳ್ಳಬೇಕಾದ್ದಿಲ್ಲ. ಈ ಉದ್ದೇಶಕ್ಕಾಗಿಯೇ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾದದ್ದು. ಬ್ಯಾಂಕುಗಳ ರಾಷ್ಟ್ರೀಕರಣ ಮಾಡದೆಯೇ ಇದನ್ನು ಸಾಧಿಸಲಾಗುತ್ತಿರಲಿಲ್ಲವೇ ಎಂಬುದು ಈಗ ಜೀವಂತ ಪ್ರಶ್ನೆಯೇನೂ ಅಲ್ಲ. ಏಕೆಂದರೆ ರಾಷ್ಟ್ರೀಕರಣವಾಗಿ ಎಷ್ಟೋ ಕಾಲ ಆಗಿಹೋಗಿದೆ. ಬ್ಯಾಂಕುಗಳು ರಾಷ್ಟ್ರೀಕರಣಗೊಂಡಾಗ್ಯೂ ಅವು ಸ್ವಾಯತ್ತ ಸಂಸ್ಥೆಗಳಾಗಿ ಮುಂದುವರಿಯುವಂತೆ ಎಚ್ಚರಿಕೆ ವಹಿಸುವುದು ಅಗತ್ಯವಲ್ಲವೇ ಎಂಬುದು ಇಂದು ತೀವ್ರವಾಗಿ ಪರಿಗಣಿಸಬೇಕಾದ ಪ್ರಶ್ನೆ. ಬ್ಯಾಂಕುಗಳು ಸರಕಾರಿ ಇಲಾಖೆಗಳಂತೆ ವರ್ತಿಸಬೇಕಾದರೆ, ಮಂತ್ರಿಯೊಬ್ಬರ ಆದೇಶದಂತೆ ದಿನನಿತ್ಯದ ವ್ಯವಹಾರಗಳನ್ನು ನಡೆಸಬೇಕಾದರೆ, ಬ್ಯಾಂಕು ವ್ಯವಸ್ಥಾಪನ ವರ್ಗಕ್ಕೆ ಕಾರ್ಯ ಸ್ವಾತಂತ್ರ ಇಲ್ಲದೆ ಇರುವುದಾದರೆ ಅವು ಪ್ರತ್ಯೇಕ ಸಂಸ್ಥೆಗಳಾಗಿ ಏಕಾದರೂ ಮುಂದುವರಿಯಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಈ ಪ್ರಶ್ನೆಯನ್ನು ಸದ್ಯಕ್ಕೆ ಪಕ್ಕಕ್ಕೆ ಸರಿಸೋಣ. ಆದರೆ ಪ್ರಕೃತದಲ್ಲಿ ಒಂದು ಮುಖ್ಯವಾದ ವಿಚಾರವನ್ನು ಕುರಿತಂತೂ ನಾವೆಲ್ಲರೂ ತೀವ್ರವಾಗಿ ಚಿಂತಿಸುವುದು ಅತ್ಯವಶ್ಯ. ದುರ್ಬಲ ವರ್ಗಗಳಿಗೆ ನೆರವು ನೀಡುವ ಸಲುವಾಗಿ ಬ್ಯಾಂಕುಗಳು ಹಮ್ಮಿಕೊಂಡಿರುವ ಸಾಲ ನೀಡಿಕೆ ಕಾರ್ಯಕ್ರಮಗಳು ಸ್ವಲ್ಪಮಟ್ಟಿಗಾದರೂ ಫಲಪ್ರದವಾಗಿವೆಯೆ? ದೇಶದಲ್ಲಿ ರಾರಾಜಿಸುತ್ತಿರುವ ಬಡತನ, ನಿರುದ್ಯೋಗ ಸಮಸ್ಯೆಗಳ ಪರಿಹಾರದ ಹಾದಿಯಲ್ಲಿ ಯಶಸ್ಸು ಸಾಧಿಸಲಾಗುತ್ತಿದೆಯೆ?

ಬ್ಯಾಂಕುಗಳು ಅಧಿಕೃತವಾಗಿ ಈ ಬಗ್ಗೆ ನಡೆಸಿರುವ ಅಧ್ಯಯನಗಳು ನಮ್ಮಲ್ಲಿ ಆಶಾವಾದವನ್ನೇ ಹುಟ್ಟಿಸುತ್ತವೆ. ಬ್ಯಾಂಕುಗಳು ಸರಕಾರದ ಅಧೀನ ಸಂಸ್ಥೆಗಳಾದ್ದರಿಂದ ಸರಕಾರದ ನೀತಿಗಳನ್ನು ಎತ್ತಿ ಹಿಡಿಯಬೇಕಾದ್ದು ಅನಿವಾರ್ಯವೇನೋ. ಈ ಕಾರ್ಯಕ್ರಮಗಳು ವಿಫಲಗೊಂಡಿವೆಯೆಂದು ಹೇಳುವುದಾದರೆ ಆಗ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳ ನಿಷ್ಠೆ ದಕ್ಷತೆಗಳೇ ಸಂದೇಹಕ್ಕೆ ಒಳಗಾಗಬಹುದು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಾಲದಿಂದಲೂ ನಮ್ಮಲ್ಲಿ ಬೆಳೆದುಬಂದಿರುವ ಒಂದು ಅಭ್ಯಾಸವೆಂದರೆ, ಮೇಲಿನವರ ಮರ್ಜಿಗೆ ಅನುಗುಣವಾಗಿ ಕೆಳಗಿನವರು ನಡೆದುಕೊಳ್ಳುವುದು. 'ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ' ಎನ್ನುವ ನೀತಿ ಅನುಸರಿಸದಿದ್ದರೆ ಕೆಳಗಿನವರು ಬದುಕಿ ಮುನ್ನಡೆಯಲಾರರು ಎಂಬ ಮನೋಭಾವ ಬಲವಾಗಿ ಬೇರೂರಿದೆ. ಪ್ರಜಾಪ್ರಭುತ್ವದಲ್ಲಿ ಇದು ಬೆಳೆಯುತ್ತಲೇ ಇದೆ. ಸ್ವತಂತ್ರವಾಗಿ ಆಲೋಚಿಸುವುದು, ಸತ್ಯವೆಂದು ಕಂಡದ್ದನ್ನು ನಿರ್ಭಯವಾಗಿ ನುಡಿಯುವುದು – ಇವು ಸೇವಾ ನಿಯಮಗಳ ಲಂಘನೆಯೆಂದು

ಪರಿಭಾವಿಸುವುದೇ ಮೇಲಿನವರ ವಾಡಿಕೆ. ಅವರಾದರೂ ತಮಗೆ ಮೇಲ್ಪಟ್ಟವರು ಹೇಳುವುದನ್ನೇ ಹೇಳಬೇಕಾಗುತ್ತದೆ, ಅಂತೆಯೇ ನಡೆಯಬೇಕಾಗುತ್ತದೆ. ಅಂತೂ ಬ್ಯಾಂಕುಗಳು ನಡೆಸಿರುವ ಅಧ್ಯಯನಗಳು ಅವು ನೀಡಿದ ಸಾಲಗಳಲ್ಲಿ ಯಶಸ್ಸು ಗಳಿಸಿದವರನ್ನು ತೋರಿಸುತ್ತವೆಯಾಗಲಿ, ವಿಫಲಗೊಂಡಂಥವನ್ನು ಎತ್ತಿಕೊಂಡು ಅವು ಏಕೆ ಹಾಗಾದುವೆಂಬುದರ ವಿವೇಚನೆ ನಡೆದಿಲ್ಲ.

ಬ್ಯಾಂಕ್ ಅಧ್ಯಯನಗಳ ಇನ್ನೊಂದು ಮಗ್ಗಲಿನತ್ತ ನೋಡಿದಾಗ ಚಂದ್ರನ ಶಾಶ್ವತವಾದ ಕತ್ತಲ ಮುಖದ ಹಾಗೆ ನಮಗೆ ಸತ್ಯದ ಆ ಮಹಾಪಾರ್ಶ್ವದ ದರ್ಶನವಾಗುತ್ತದೆ. ಮೂರು ವರ್ಷಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಾನಾ ಕಾರ್ಯಕ್ರಮಗಳ ಅಡಿಯಲ್ಲಿ ಸುಮಾರು ಒಂದು ಕೋಟಿ ಜನಕ್ಕೆ ಸುಮಾರು ರೂ. 3,000 ಕೋಟಿಯಷ್ಟು ಹಣ ನೀಡಲಾಗಿದೆ. ಇದು ಬಹುತೇಕ ಅನುತ್ಪಾದಕವಾಗಿ ಪರಿಣಮಿಸಿದೆ. ನೀಡಿರುವ ಮುಂಗಡಗಳಲ್ಲಿ ಶೇಕಡ ಇಪ್ಪತ್ತರಷ್ಟು ಮಾತ್ರ ವಸೂಲಾಗುತ್ತಿದೆ. ಉಳಿದದ್ದು ವಸೂಲಾಗುವಂತೆಯೇ ಇಲ್ಲ. ಪಡೆದವರು ಮರುಪಾವತಿ ಮಾಡುವ ಸ್ಥಿತಿಗೆ ಸುಧಾರಣೆ ಹೊಂದಿದ್ದಾರೆಂದು ಧೈರ್ಯವಾಗಿ ಯಾರೂ ಹೇಳುವ ಹಾಗೆಯೂ ಇಲ್ಲ.

ಹೀಗೆಂದರೆ ಬ್ಯಾಂಕುಗಳು ಈ ಮಹಾಪ್ರಯತ್ನವನ್ನು ನಿಲ್ಲಿಸಿಬಿಡಬೇಕು ಎಂದೇನೂ ತೀರ್ಮಾನಿಸಬೇಕಾದ್ದಿಲ್ಲ. ಆದರೆ ಮೇಲಿನವರು ಹೇಳಿದ್ದನ್ನು ಅಕ್ಷರಶಃ ಪಾಲಿಸುತ್ತಿದ್ದೆ ಎಂದು ತೋರ್ಪಡಿ ಸಲು ಮಾತ್ರ, ಅಂಕಿ ಅಂಶಗಳನ್ನು ತುಂಬುವ ಸಲುವಾಗಿಯೋ, ಕೆಟ್ಟ ಹೆಸರು ಬಂದೀತೆಂಬ ಅಂಜಿಕೆಯಿಂದಾಗಿಯೋ ಇಂಥ ಕಾರ್ಯಕ್ರಮಗಳಲ್ಲಿ ಅವಿಚಾರದಿಂದ ದುಮುಕುವ ಬದಲು, ಇಂಥ ಸಂದರ್ಭಗಳಲ್ಲಿ ಬ್ಯಾಂಕರುಗಳು ಸಾಮಾನ್ಯವಾಗಿ ನಡೆಸಬೇಕಾದ ಪರಿಶೀಲನೆಗಳನ್ನು ಲಕ್ಷ್ಯಪೂರ್ವಕವಾಗಿ ನಡೆಸಬೇಕು. ನೀಡಿದ ಸಾಲದ ಫಲಪ್ರದತೆಯತ್ತ ಗಮನ ಹರಿಸಬೇಕು. ಅನಂತರ ಕೈಗೊಳ್ಳಬೇಕಾದ ಕ್ರಮಗಳನ್ನೂ ತೆಗೆದುಕೊಳ್ಳಬೇಕು. ಯಾವುದೇ ಸಾಲದ ಬಗ್ಗೆ ಬ್ಯಾಂಕು ಸ್ವತಂತ್ರವಾಗಿ, ನಿಷ್ಪಕ್ಷಪಾತವಾಗಿ, ಪೂರ್ವಾಗ್ರಹದೂರವಾಗಿ, ನಿರ್ದಯವಾಗಿ ತೀರ್ಮಾನ ತೆಗೆದುಕೊಳ್ಳಲು ಅಗತ್ಯವಾದ ವಾತಾವರಣದ ಸೃಷ್ಟಿಯಾಗಬೇಕು. ತಕಾವಿ ಸಾಲ ನೀಡುವ ರೆವಿನ್ಯೂ ಅಧಿಕಾರಿಗೂ ಬ್ಯಾಂಕ್ ಅಧಿಕಾರಿಗೂ ಯಾವ ವ್ಯತ್ಯಾಸವೂ ಇಲ್ಲವೆಂಬಂತೆ ಬಗೆಯಬಾರದು. ಒಬ್ಬಾತ ಒಂದು ಬ್ಯಾಂಕಿನ ಅಧಿಕಾರಿಯಾದ ಮಾತ್ರಕ್ಕೆ ಅವನು ಒಮ್ಮೆಲೇ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಬೇಕಾದ ಎಲ್ಲ ಜ್ಞಾನವನ್ನೂ ಅನುಭವವನ್ನೂ ಸಾಮರ್ಥ್ಯವನ್ನೂ

ಪಡೆದುಕೊಂಡಿರುತ್ತಾನೆಂದು ಭಾವಿಸಬಾರದು. ಬ್ಯಾಂಕ್ ಕೆಲಸವೂ ಒಂದು ವೃತ್ತಿ. ಈ ವೃತ್ತಿಧರ್ಮಕ್ಕೆ ಸಮಾಜಸೇವೆಯನ್ನೂ ಜೋಡಿಸ ಬೇಕಾದರೆ ಸಮಾಜಸೇವೆಯನ್ನೊಂದು ವೃತ್ತಿ ಎಂಬಂತೆ ವೈಜ್ಞಾನಿಕವಾಗಿ, ಶಾಸ್ತ್ರೀಯವಾಗಿ ಅದರ ಜ್ಞಾನವನ್ನು ದೊರಕಿಸಿಕೊಡಬೇಕಾಗುತ್ತದೆ. ನಮ್ಮ ಬ್ಯಾಂಕಿಂಗ್ ಸೇವಾ ತರಬೇತಿ ಸಂಸ್ಥೆಗಳಲ್ಲಿ ಈ ವಿಚಾರಕ್ಕೆ ಎಷ್ಟರಮಟ್ಟಿನ ಗಮನಹರಿಸಲಾಗಿದೆ? ಬ್ಯಾಂಕ್ ನೌಕರರಿಗೆ ಅಗತ್ಯವಾದ ಹಿನ್ನೆಲೆ ದೊರಕಿಸಿಕೊಡಲು ಯಾವ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ? ಅದಕ್ಕೆ ಅಗತ್ಯವಾದ ಅಧೋರಚನೆಯ ನಿರ್ಮಾಣವಾಗಿದೆಯೆ? ವ್ಯವಸ್ಥೆ ಇದೆಯೆ? ಆದ ಕೆಲಸದ ಗುಣಾತ್ಮಕ ಹಾಗೂ ಪರಿಮಾಣಾತ್ಮಕವಾದ ಅಳತೆಗೆ ಏನು ಸಾಧನವಿದೆ?

'ಎತ್ತು ಈದಿತು' ಎಂದರೆ 'ಕೊಟ್ಟಿಗೆಗೆ ಕಟ್ಟು' ಎಂಬ ಅವಿಚಾರಿ ಸೇವಾ ಮನೋಧರ್ಮದಿಂದ ಎಂಥ ಸದುದ್ದೇಶಗಳೂ ದುರಂತದಲ್ಲೇ ಪರ್ಯವಸಾನವಾಗಬಹುದು ಎಂಬುದಕ್ಕೆ ಈ ಕಾರ್ಯಕ್ರಮಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ದುರ್ಬಲವರ್ಗಗಳಿಗೆ ನೆರವು ನೀಡುವ ಕಾರ್ಯಕ್ರಮಗಳಲ್ಲಿ ನಿರತರಾದಂಥವರು ಸಾಮಾನ್ಯವಾಗಿ ಎರಡು ಮಹಾಪ್ರಮಾದಗಳನ್ನು ಮಾಡುತ್ತಾರೆ. ಸಮಾಜವಿಜ್ಞಾನವನ್ನಾಗಲಿ ಮನೋವಿಜ್ಞಾನವನ್ನಾಗಲಿ ಅರಿಯದ ಜನ ಇವರು. ವ್ಯವಹಾರಜ್ಞಾನವೂ ಇವರಲ್ಲಿ ಬಹುತೇಕ ಶೂನ್ಯ. ಸಮಾಜದಲ್ಲಿರುವ ದೋಷಗಳಿಗೆಲ್ಲ ಹಣದ ಅಭಾವವೇ ಮೂಲ ಎಂಬುದು ಇವರ ಒಂದು ಭ್ರಾಂತಿ. ಹಣ ಇದ್ದರೆ ಪರಿಹಾರ ಖಂಡಿತ ಎಂಬ ಭ್ರಮಾಲೋಕದಲ್ಲಿ ಇವರು ಅಡ್ಡಾಡುತ್ತಾರೆ. ಬಡವನೊಬ್ಬನಿಗೆ ಐದು ಸಾವಿರ ರೂಪಾಯಿ ಕೊಟ್ಟು ಬಿಟ್ಟರೆ ಅವನು ಅದರಿಂದ ಸ್ವಾವಲಂಬನೆ ಪಡೆದುಕೊಂಡುಬಿಡುತ್ತಾನೆ ಎಂದು ಭಾವಿಸಿಕೊಳ್ಳುತ್ತಾರೆ. ಬಹುಕಾಲದಿಂದ ಉಪವಾಸ ಮಾಡುತ್ತಿರುವವನಿಗೆ ಒಮ್ಮೆಲೇ ಊಟ ಬಡಿಸಿದರೆ ಅದನ್ನು ಅವನು ತಿಂದು ಬದುಕಲಾರ. ಹಣವನ್ನೇ ಕಾಣದವನು ಅದನ್ನು ಪಡೆದಾಗ ಆ ಹಣವನ್ನು ಹೇಗೆ ಹಾಳತವಾಗಿ ಬಳಸಿಕೊಳ್ಳಬೇಕೆಂಬ ಜ್ಞಾನವೂ ಅವನಿಗೆ ಇರುವುದಿಲ್ಲ. ಜನ ಸಾಮಾನ್ಯರ ಅಜ್ಞಾನದ ದುರುಪಯೋಗ ಪಡೆದುಕೊಳ್ಳುವ ಶೋಷಕರು ಬಹುಸಂಖ್ಯೆಯಲ್ಲಿರುವ ನಮ್ಮ ದೇಶದಲ್ಲಿ ಸಾಮಾನ್ಯ ಜನಕ್ಕೆ ನೆರವು ಪೂರ್ಣವಾಗಿ ತಲಪುವುದೇ ಅಪರೂಪ. ಭಗೀರಥ ತಂದ ಗಂಗೆಯ ಹಾಗೆ ಅದಕ್ಕೆ ಹಾದಿಯಲ್ಲಿ ನೂರೆಂಟು ಅಡೆತಡೆ. ಅದನ್ನು ನುಂಗಿ ನೊಣೆಯುವ ವಂಚಕರ ಸಾಲುಸಾಲು! ಇವರ ನಿವಾರಣೆಗೆ ಯಾವ ಕ್ರಮವೂ ಇಲ್ಲ. ನಮ್ಮಲ್ಲಿರುವ ವ್ಯವಸ್ಥೆಯೇ ಮಾರಿಯಂತೆ ಎಲ್ಲವನ್ನೂ ನುಂಗಿಹಾಕಿಬಿಡುತ್ತದೆ. ಈ ವ್ಯವಸ್ಥೆಯನ್ನು ಕಟ್ಟಿಕೊಂಡು ದುರ್ಬಲ ವರ್ಗಗಳ ಮುನ್ನಡೆಯ ಕಾರ್ಯದಲ್ಲಿ

ತೊಡಗಿದ್ದೇವೆ ನಾವು! ಮಣ್ಣು ದೋಣಿಯಲ್ಲಿ ಕುಳಿತು ಹೊಳೆ ದಾಟಲು ಯತ್ನಿಸಿದಂತೆಯೇ ಇದು ಕ್ಲೇಶದಾಯಕ, ಅನಾಹುತಕಾರಿ.

ನಮ್ಮ ಸಾಲ ಧುರೀಣರ ಇನ್ನೊಂದು ಭ್ರಮೆಯೆಂದರೆ, ನಮ್ಮ ಸಮಾಜದಲ್ಲಿರುವ ಪ್ರತಿಯೊಬ್ಬ ನಿರುದ್ಯೋಗಿ ಸ್ವತಂತ್ರವಾಗಿ ಯಾವುದಾದರೊಂದು ಉದ್ಯಮವನ್ನು ಸ್ಥಾಪಿಸಿ ನಡೆಸಬಲ್ಲನೆಂಬುದು. ಹಣವಿಲ್ಲದ್ದರಿಂದಲೇ ಅವನು ನಿರುದ್ಯೋಗಿಯಾಗಿದ್ದಾನೆ ಎಂಬ ಭಾವನೆಯುಂಟು. ಯಾವುದೇ ಉದ್ಯಮ ಸ್ಥಾಪಿಸಿ ನಡೆಸಬೇಕಾದರೆ ಅದು ಎಷ್ಟೇ ಸಣ್ಣದಾಗಿರಲಿ, ಅದಕ್ಕೆ ಅನುಭವ ಬೇಕು, ದಕ್ಷತೆ ಇರಬೇಕು. ಪರಂಪರೆಯಾಗಿ ಬಂದ ಉದ್ಯೋಗಗಳನ್ನೆಲ್ಲಾ ನಾಶಪಡಿಸಿರುವ ನಾವು ಹೊಸ ಉದ್ಯೋಗಗಳನ್ನು ಸ್ಥಾಪಿಸಿ ನಡೆಸಲು ಅಗತ್ಯವಾದ ಸಂರಚನೆಯನ್ನು ನಿರ್ಮಿಸಬೇಕು. ದುರ್ಬಲವರ್ಗಗಳಿಗೆ ನೀಡುವ ನೆರವು ಅರ್ಥಪೂರ್ಣವೂ ಸಫಲವೂ ಆಗಬೇಕಾದರೆ, ಪ್ರತಿಯೊಂದು ಪ್ರದೇಶಕ್ಕೂ ಹೊಂದಿಕೊಳ್ಳುವ ಕಾರ್ಯಯೋಜನೆಗಳನ್ನು ವೈಜ್ಞಾನಿಕವಾಗಿ ಚಿಂತಿಸಿ ರೂಪಿಸಬೇಕು. ಅಲ್ಲಿಯ ಜನರಲ್ಲಿರುವ ಕೌಶಲ ಹಾಗೂ ಅನುಭವಗಳಿಗೆ ಅವು ಅನುಗುಣವಾಗಿರಬೇಕು. ಅಲ್ಲಿ ಹೊಸ ಉದ್ಯಮಗಳನ್ನು ನಡೆಸಲು ಅಗತ್ಯವಾದ ಅಧೋರಚನೆಯ ನಿರ್ಮಾಣವಾಗಬೇಕು. ಅವಕ್ಕೆ ಬೇಕಾದ ಯಂತ್ರ, ಕಚ್ಚಾ ಸಾಮಗ್ರಿ ಮುಂತಾದವು ಒದಗಬೇಕು. ಜೊತೆಗೆ ಮಾರಾಟಗಾರಿಕೆಯ ಸೌಲಭ್ಯಗಳನ್ನೊದಗಿಸಬೇಕು. ಉತ್ಪಾದಿಸಿದ್ದು ಮಾರಾಟವಾಗುವ ಹಾಗೆ, ಅದರಿಂದ ವರಮಾನದ ಉತ್ಪಾದನೆಯಾಗುವ ಹಾಗೆ, ಲಾಭ ಕೂಡಿ ಬರುವ ಹಾಗೆ ವ್ಯವಸ್ಥೆಯಿರಬೇಕು. ಹೀಗೆ ವಿಸ್ತೃತತವಾದ ಜಾಲದ ನಿರ್ಮಾಣವಾಗದೆ ನೀಡುವ ನೆರವು ಯಶಸ್ವಿಯಾಗದು. ಅಲ್ಲದೆ, ಕೇವಲ ನಾಲ್ಕೈದು ಸಾವಿರ ರೂಪಾಯಿಗಳಿಂದ ಒಂದು ಉದ್ಯಮ ಸ್ಥಾಪಿಸಬಹುದೆಂಬುದು, ಒಬ್ಬವ್ಯಕ್ತಿ ಸ್ವಾವಲಂಬಿಯಾಗಬಹುದೆಂಬುದು ಅವಾಸ್ತವಿಕ. ಸ್ವ–ಉದ್ಯೋಗವೆಂಬುದು ತಾತ್ಕಾಲಿಕವಾದ ಗುರಿ. ಅಂತಿಮವಾಗಿ ಇಡೀ ಗ್ರಾಮಪ್ರದೇಶವೇ ಪುನರ್ಜನ್ಮ ತಳೆಯಬೇಕು. ಅಲ್ಲಲ್ಲಿಗೆ ಅನುಗುಣವಾದ ತಂತ್ರಜ್ಞಾನದ ವಿಕಾಸದೊಂದಿಗೆ ಚೈತನ್ಯ ಪೂರ್ಣವಾದ ಉತ್ಪಾದನ ವ್ಯವಸ್ಥೆಯ ರೂಪಣಕ್ಕೆ ಶ್ರಮಿಸಬೇಕು. ಇಷ್ಟು ದಿನಗಳಲ್ಲಿ ಇಷ್ಟು ಹಣವನ್ನು ಸಾಲವಾಗಿ ಕೊಡಬೇಕು ಎಂದು ಗುರಿಯ ಮೇಲೆ ಕಣ್ಣಿಟ್ಟು, ಗಾಡಿಗೆ ಕಟ್ಟಿದ ಕುದುರೆಯಂತೆ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು, ಅರ್ಥವಿಲ್ಲದ ಓಟ ನಡೆಸುವುದರಿಂದ ಅರ್ಥಸಾಧನೆಯಾಗದು, ಅನರ್ಥವೇ ಸಂಭವಿಸಬಹುದು. ಸಂಬಂಧಪಟ್ಟ ಎಲ್ಲರೂ ಇದನ್ನು ಕುರಿತು ಗಂಭೀರ ವಾಗಿ ಆಲೋಚಿಸಬೇಕು.

07.

ಅಕ್ಟೋಬರ್ 1984
ಏರು ಬೆಲೆ – ಕಠಿಣತಮ ಕಜ್ಜ

ದೇಶದಲ್ಲಿ ಈಗ ಬಹಳ ಆತಂಕ. ಬೆಲೆಗಳು ಒಂದೇ ಸಮನೆ ಏರುತ್ತಲೇ ಇವೆ. ಇದು ಅಪಾಯದ ಚಿಹ್ನೆ. ಆರ್ಥಿಕ ಆರೋಗ್ಯ ಕೆಟ್ಟಾಗ ಜ್ವರದ ಕಾವು ಏರುತ್ತದೆ. ಇದಕ್ಕೆ ಕಾರಣಗಳು ಹಲವಾರು : ಆರ್ಥಿಕ, ರಾಜಕೀಯ, ಮಾನಸಿಕ, ಹೀಗೆಂದು ಪರಿಸ್ಥಿತಿಯನ್ನು ವಿಶ್ಲೇಷಿಸುವುದು ಸಾಧ್ಯ. ಇಂಥ ವಿಶ್ಲೇಷಣೆ ಅಗತ್ಯ ಕೂಡ.

ಆದರೆ ಎಲ್ಲ ವಿಶ್ಲೇಷಣೆಗಳನ್ನೂ ಮೀರಿ ಬೆಲೆಗಳು ಒಗಟಿನಂತೆ ವರ್ತಿಸುತ್ತಿವೆ. ಸರಕು ಪೂರೈಕೆ ಯಥೇಚ್ಛವಾದಾಗ ಬೆಲೆಗಳು ತಂತಾವೇ ಹದ್ದು ಬಸ್ತಿಗೆ ಒಳಪಡಬೇಕು ಎಂಬುದು ಪಠ್ಯಪುಸ್ತಕದ ಸೂತ್ರ. ಆ ದೃಷ್ಟಿಯಿಂದ ನೋಡಿದಾಗ ಈ ವರ್ಷ ಆತಂಕಕ್ಕೆ ಕಾರಣ ಇರಬಾರದು. ಫಸಲು ಯಥೇಚ್ಛವಾಗಿದೆ. ಆಹಾರ, ಕಚ್ಚಾ ಸಾಮಗ್ರಿಗಳ ಪೂರೈಕೆಗೆ ಕೊರತೆಯಿಲ್ಲ. ಈ ವರ್ಷವೂ ಒಟ್ಟಿನಲ್ಲಿ ದೇಶದಲ್ಲಿ ಮಳೆ ಇದುವರೆಗೆ ಚೆನ್ನಾಗಿ ಆಗಿದೆ. ಬೆಳೆಯೂ ಗುರಿ ಮುಟ್ಟೀತು. ಸರಕಾರಿ ಹಾಗೂ ಖಾಸಗಿ ಕಣಜಗಳು ತುಂಬಿ ತುಳುಕುತ್ತಿವೆ. ಸರಕಾರಕ್ಕಂತೂ, ಸಂಗ್ರಹವಾದ ಕಾಳನ್ನು ಹೇಗೆ ದಾಸ್ತಾನು ಮಾಡಿಡುವುದೆಂಬುದೇ ಸಮಸ್ಯೆ. ಇನ್ನೊಂದೆರಡು ವರ್ಷವಂತೂ ಆಹಾರ ಅಭಾವ ಇರಲಾರದು. ಆದಾಗ್ಯೂ ಆಹಾರ ಬೆಲೆಗಳು ಇಳಿಯದೆ ಸತಾಯಿಸುತ್ತಿವೆ; ಮೇಲೆ ಮೇಲೆ ಏರುತ್ತಿವೆ ರಾವಣನ ಆಸ್ಥಾನದಲ್ಲಿ ಬಾಲದ ಸುರುಳಿ ಸುತ್ತಿ, ರಾವಣನ ಸಿಂಹಾಸನಕ್ಕಿಂತ ಎತ್ತರದಲ್ಲಿ ಕುಳಿತ ಆಂಜನೇಯನ ಹಾಗೆ! ಏಕೆ ಹೀಗೆ ಎಂಬುದೇ ಅರ್ಥವಾಗದಂತಾಗಿದೆ.

ಸಮೃದ್ಧಿಯೇ ಸಂಕಷ್ಟಕ್ಕೆ ಮೂಲ ಎಂಬುದಾಗಿಯೇ ಶಂಕಿಸಬೇಕೇನೋ. ಫಸಲು ಸಮೃದ್ಧಿಯಾದ್ದರಿಂದ ಜನರ ಕೈಗೆ ಹೆಚ್ಚು ಹಣ ಬಂದಿದೆ. ಸರಕಿನ ಪರಿಮಾಣ ಹೆಚ್ಚಾದ್ದರಿಂದ ಬಿಕರಿ ಮಾಡಿ ಬಂದ ಹಣವೂ ಅಧಿಕ. ಸರಕಾರದ ಸಂಗ್ರಹಣ ಕಾರ್ಯ ಚುರುಕಾಗಿರುವುದರಿಂದ ಬೇಡಿಕೆಗೇನೂ ಕೊರತೆಯಿಲ್ಲ. ಹಣ ಹೆಚ್ಚಾದ್ದರಿಂದ ಇತರ ಸರಕುಗಳಿಗೆ ಬೇಡಿಕೆ, ಬೆಲೆಗಳಿಗೆ ಪ್ರಚೋದನೆ, ವೆಚ್ಚದ ಮೇಲೆ ಹೆಚ್ಚು ಒತ್ತಡ ಬೀಳುತ್ತಿರುವುದರಿಂದಾಗಿ ಉಬ್ಬರಕ್ಕೊಳಗಾದ ಕೈಗಾರಿಕೆಗಳು ಉತ್ಪಾದನೆ ಹೆಚ್ಚಿಸಲಾರವಾಗಿವೆ. ಅಲ್ಲದೆ ಇದು ಆರನೆಯ ಯೋಜನೆಯ ಕೊನೆಯ ವರ್ಷ. ಯೋಜನೆಯಲ್ಲಿ ಇಟ್ಟುಕೊಳ್ಳಲಾದ ಗುರಿಗಳನ್ನು ನಿಲುಕಲು ಹೆಣಗಾಟ. ವೆಚ್ಚ ಏರುತ್ತಿದೆ. ಇದಕ್ಕೆಲ್ಲ ಹಣದ ಬಿಡುಗಡೆ, ಜೊತೆಗೆ ದೇಶ ಇನ್ನೊಂದು ಚುನಾವಣೆಯ ಪ್ರತೀಕ್ಷೆಯಲ್ಲಿದೆ. ಈ ಸಮಯದಲ್ಲಿ ಸರಕಾರ ಬಿಗಿನೀತಿ ಅನುಸರಿಸಲಾರದು. ಸಮಾಜ ಕಲ್ಯಾಣ ಕಾರ್ಯಗಳ ವಿಚಾರದಲ್ಲಾಗಲಿ, ವೇತನ ಭತ್ಯಗಳ

ಏರಿಕೆಯ ವಿಚಾರದಲ್ಲಾಗಲಿ ಜಿಪುಣತನ ತೋರಿಸಲಾರದು. ಜನಮನ ಗೆಲ್ಲಲು ನಾನಾ ಕಾರ್ಯಕ್ರಮ ಹಮ್ಮಿಕೊಂಡು ಹಣ ಹರಿಯ ಬಿಡುವ ಪ್ರವೃತ್ತಿ. ಸಂಯಮದ ಮಾತಿಗಿದು ಸಕಾಲವಲ್ಲ. ಇದು ಕೂಡ ಹಣದ ಅತಿ ಪ್ರಸರಣಕ್ಕೆ ಕಾರಣವಾಗಿದೆ. ಅಧಿಕ ದ್ರವತ್ವ. ಇಂಥ ಪರಿಸ್ಥಿತಿಯಲ್ಲಿ ಬ್ಯಾಂಕುಗಳು ಹೊರಗುಳಿಯುವಂತಿಲ್ಲ. ಅದಕ್ಕೂ ಹಣ ಹರಿದು ಬರುತ್ತಿದೆ. ಠೇವಣಿಗಳು ಏರುತ್ತಿವೆ. ಈ ವರ್ಷವೂ ಕಳೆದ ವರ್ಷದಷ್ಟೇ ಠೇವಣಿಗಳು ಬರುವ ನಿರೀಕ್ಷೆ. ಈಗಾಗಲೇ ಠೇವಣಿಗಳ ಹೆಚ್ಚಳ ಸುಮಾರು ಐದು ಸಾವಿರ ಕೋಟಿ ರೂಪಾಯಿಗಳ ಗಡಿ ಮುಟ್ಟಿದೆ. ಠೇವಣಿಗಳ ಏರಿಕೆಗೆ ಅನುಗುಣವಾಗಿ ಉತ್ಪಾದಕ ಚಟುವಟಿಕೆಗಳಿಗೆ ಉದರಿ ನೀಡುವ ಅವಕಾಶಗಳು ಬೆಳೆದಿಲ್ಲ. ಈ ಹಣಕಾಸು ವರ್ಷದ ಮೊದಲ ಅರ್ಧದಲ್ಲಿ – ಸೆಪ್ಟೆಂಬರ್ ಅಂತ್ಯದವರೆಗೆ – ಆಹಾರೇತರ ಉದರಿ ರೂ. 1,700 ಕೋಟಿಯಷ್ಟು ವಿಸ್ತರಿಸಬೇಕು ಎಂಬುದಾಗಿ ರಿಸರ್ವ್ ಬ್ಯಾಂಕ್ ಅಷ್ಟಕ್ಕೆ ಅಣಿಮಾಡಿತ್ತು. ಆದರೆ ಅದರಲ್ಲಿ ಅರ್ಧದಷ್ಟು ಸಾಧಿಸುವಂತಿದೆ. ಕೈಗಾರಿಕಾ ಚಟುವಟಿಕೆ ಸಾಕಷ್ಟು ಚೇತರಿಸಿಕೊಂಡಿದೆಯನ್ನಲಾದರೂ ಏಕೆ ಹೀಗೆ ಎಂಬುದು ಒಂದು ಪ್ರಶ್ನೆ. ಒಟ್ಟು ಉದರಿ ವಿಸ್ತರಣೆಯಲ್ಲಿ ಶೇ. 40 ರಷ್ಟು ಭಾಗವನ್ನು ದೊಡ್ಡ ಕೈಗಾರಿಕೆಗಳು ಪಡೆಯುತ್ತಿದ್ದುವು. ಆದರೆ ಅವು ಸಾರ್ವಜನಿಕರಿಂದ ನೇರವಾಗಿ ಹಾಗೂ ಬ್ಯಾಂಕೇತರ ಮೂಲಗಳಿಂದ ತಮಗೆ ಬೇಕಾದ ನಿಧಿಗಳನ್ನು ಪಡೆಯುತ್ತಿರುವುದರಿಂದ ಈ ಪರಿಸ್ಥಿತಿ. ಭಾರತೀಯ ಸ್ಟೇಟ್ ಬ್ಯಾಂಕಿನ ಹೆಚ್ಚುವರಿ ನಿಧಿ ಅತ್ಯಧಿಕ. ತೈಲಕ್ಷೇತ್ರದಿಂದ ಉದರಿ ಬೇಡಿಕೆ ಕಡಿಮೆಯಾಗಿರುವುದು ಇದಕ್ಕೆ ಕಾರಣವೆನ್ನಲಾಗಿದೆ. ಉಳಿದ ಪ್ರಮುಖ ಬ್ಯಾಂಕುಗಳಿಗೆ ಸಮಸ್ಯೆ ಇಷ್ಟು ತೀವ್ರವಾಗಿಲ್ಲ. ದಕ್ಷಿಣದಲ್ಲಿ ಸ್ಥಾಪಿತವಾದ ಹಲವು ಬ್ಯಾಂಕುಗಳಿಗೆ ಹಣ ಸಂಪನ್ಮೂಲದ ಕೊರತೆ ಕಂಡುಬರುತ್ತಿದೆ. ಒಟ್ಟು ಬ್ಯಾಂಕಿಂಗ್ ವಲಯವನ್ನು ತೆಗೆದು ಕೊಂಡಾಗ ಠೇವಣಿ ವಿಸ್ತರಣೆಯ ಪ್ರಮಾಣದಲ್ಲೇ ಉದರಿ ವಿಸ್ತರಣೆಯಾಗುತ್ತಿಲ್ಲವೆಂದು ಹೇಳಲಾಗಿದೆ. ಹೆಚ್ಚಿನ ದ್ರವತ್ವ ಸ್ಥಿತಿಯಿದ್ದಾಗ ಲಾಭದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಬಾರದೆಂಬ ಕಳವಳದಿಂದ ಬ್ಯಾಂಕುಗಳು ತಮ್ಮ ಸಂಪನ್ಮೂಲಗಳನ್ನು ಚೆಲ್ಲಾಡಬಹುದು. ಇದರಿಂದ ಬೆಲೆ ಏರಿಕೆ ಹಾಗೂ ಅಸ್ಥಿರ ಪ್ರವೃತ್ತಿಗಳಿಗೆ ಪ್ರಚೋದನೆ ದೊರಕಿದಂತಾಗುತ್ತದೆ. ನ್ಯಾಯಬದ್ಧವಾದ ಬೇಡಿಕೆಗಳ ಪೂರೈಕೆಗೆ ಚ್ಯುತಿಯುಂಟಾಗದ ರೀತಿಯಲ್ಲಿ, ಆದರೆ ಸಿಕ್ಕಾಬಟ್ಟೆ ಉದರಿ ವಿಸ್ತರಣೆಯಾಗದಂತೆ ಕಟ್ಟುಪಾಡುಗಳನ್ನು ವಿಧಿಸುವುದೂ, ನಿಯಂತ್ರಣ ಕ್ರಮ ಕೈಗೊಳ್ಳುವುದೂ ರಿಸರ್ವ್ ಬ್ಯಾಂಕಿನ ಹೊಣೆ.

ಕಠಿಣತಮ ಕಜ್ಜ

ಒಂದು ಕಡೆ ಸರಕಾರದ ಹಣಕಾಸು

ನೀತಿಯಿಂದ ಅಧಿಕಾಧಿಕ ಧನೋತ್ಪತ್ತಿಯಾಗುತ್ತಿರುವಾಗ, ಆರ್ಥಿಕ ಪ್ರವೃತ್ತಿಗಳು ಅಪಾಯಕಾರಿಯಾಗಿರುವಾಗ, ವಿದೇಶಿ ವ್ಯಾಪಾರ ಪರಿಸ್ಥಿತಿ ಪ್ರತಿಕೂಲಕರವಾದ್ದಾಗಿರುವಾಗ, ಇದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಹಣ–ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಿಯಂತ್ರಣ ವಿಧಿವಿಧಾನಗಳನ್ನು ರೂಪಿಸಿ ಜಾರಿಗೆ ತರುವ ಪ್ರಯತ್ನ ಮಾಡುತ್ತಿರುವ ರಿಸರ್ವ್ ಬ್ಯಾಂಕಿನ ಕಜ್ಜ ಕಠಿಣತಮವಾದ್ದು. ಇದು ನಿಜಕ್ಕೂ ಅಸೂಯೆ ತರುವಂಥದಲ್ಲ, ಕನಿಕರ ಹುಟ್ಟಿಸುವಂಥದು. ಆದಾಗ್ಯೂ ಛಲವನ್ನು ಬಿಡದ ತ್ರಿವಿಕ್ರಮನಂತೆ ರಿಸರ್ವ್ ಬ್ಯಾಂಕ್ ಪ್ರಯತ್ನ ನಡೆಸುತ್ತಲೇ ಇದೆ. ಕಳೆದ ಹಲವಾರು ತಿಂಗಳುಗಳಿಂದಲೇ ಈ ನಿಟ್ಟಿನಲ್ಲಿ ಅದರ ಪ್ರಯತ್ನ. ಅದರ ಕೈಗೆ ಸುಲಭವಾಗಿ ಒದಗಿ ಬರುವ ಎರಡು ಅಸ್ತ್ರಗಳೆಂದರೆ ನಗದು ಮೀಸಲು ಅನುಪಾತ ಹಾಗೂ ದ್ರವತ್ವ ಅನುಪಾತ. ಬ್ಯಾಂಕು ದರ, ಮುಕ್ತಪೇಟೆ ವಹಿವಾಟು, ಉದರಿಯ ಅಂಚಿನ ಅಪೇಕ್ಷಿತಗಳ ವಿಸ್ತರಣೆ ಮುಂತಾದ ಪರಂಪರಾಗತ ಅಸ್ತ್ರಗಳು ಭಾರತದಂಥ ದೇಶದಲ್ಲಿ ಮೊಂಡು. ಏಕೆಂದರೆ ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗೆ ಹಣ ವಹಿವಾಟು ಅಪಾರ. ಗುಪ್ತಗಾಮಿನಿಯಾದ ಆರ್ಥಿಕ ಚಟುವಟಿಕೆಗಳೂ ಅಗಾಧ. ಕಣ್ಣಿಗೆ ಗೋಚರವಾಗುವ ವ್ಯಾಪಾರ ಚೋಟುದ್ದವಾದರೆ, ಒಳಗೊಳಗೇ ನಡೆಯುವುದು ಮಾರುದ್ದ. ಇಷ್ಟೆಲ್ಲಾ ನಿರ್ಬಂಧಗಳಿಗೆ ಒಳಪಟ್ಟೂ ರಿಸರ್ವ್ ಬ್ಯಾಂಕು ಆರ್ಥಿಕಸಮುದ್ರರಾಜನ ಮೇಲೆ ತನ್ನ ರಾಮಬಾಣವನ್ನು ಪ್ರಯೋಗಿಸಬೇಕಾಗಿದೆ. ಬ್ಯಾಂಕುಗಳು ಕಡ್ಡಾಯವಾಗಿ ರಿಸರ್ವ್ ಬ್ಯಾಂಕಿನಲ್ಲಿ ಇಡಬೇಕಾದ ನಗದು ಮೀಸಲು ಅನುಪಾತವನ್ನು ಕ್ರಮಕ್ರಮವಾಗಿ ಶೇಕಡ ಅರ್ಧರ್ಧದಂತೆ ಏರಿಸುತ್ತ ಬರುತ್ತಿದೆ. ಈ ವರ್ಷದ ಆದಿಭಾಗದಲ್ಲಿ ಇದು ಒಟ್ಟು ಠೇವಣಿಗಳ ಶೇ 9ರಷ್ಟಕ್ಕೆ ಏರಿತ್ತು. ಇಷ್ಟು ಹಣವನ್ನು ಬ್ಯಾಂಕುಗಳು ಕಡ್ಡಾಯವಾಗಿ ಇಡಬೇಕಾಗಿ ಬಂದದ್ದರಿಂದ ಬ್ಯಾಂಕುಗಳ ಉದರಿ ಸೃಷ್ಟಿಯ ಸಾಮರ್ಥ್ಯ ಇದಕ್ಕನುಗುಣವಾಗಿ ಮೊಟಕಾಗುವುದೆಂದು ನಿರೀಕ್ಷೆ. ಹೆಚ್ಚುವರಿ ನಿಧಿಗಳ ಕೆಸರು ಆಚೀಚೆ ಎರಚಾಡದಂತೆ ಈ ತರದೂದು. ಇದು ಸಾಲದೆಂಬಂತೆ ರಿಸರ್ವ್ ಬ್ಯಾಂಕು ಒಂದು ಗೊತ್ತಾದ ದಿನದಿಂದ ಈಚೆಗಿನ ಠೇವಣಿ ಹೆಚ್ಚಳದಲ್ಲಿ ಶೇ.10ರಷ್ಟನ್ನೂ ತೆಗೆದಿಡಬೇಕೆಂದು ವಿಧಿಸಿದೆ. ಒಟ್ಟಿನಲ್ಲಿ ಅಧಿಕ ಠೇವಣಿಯ ಸುಮಾರು ಶೇ. 19 ರಷ್ಟು ಹಣ ಉದರಿ ವಿಸ್ತರಣೆಗೆ ಇಲ್ಲವಾದಂತಾಗಿದೆ.

ಜೊತೆಗೆ, ನಗದಾಗಿ ಸುಲಭವಾಗಿ ಪರಿವರ್ತಿಸಬಹುದಾದ ಗಟ್ಟಿ ಪ್ರತಿಭೂತಿ ಪತ್ರಗಳೇ ಮುಂತಾದವುಗಳಲ್ಲಿ ಹೂಡಬೇಕಾದ ವಿನಿಯೋಜನೆಯ ಅನುಪಾತವನ್ನೂ ಅದು ಈಚೆಗೆ ಹೆಚ್ಚಿಸಿದೆ. ಪರಿನಿಯತ ದ್ರವತ್ವ ಅನುಪಾತವೆಂದು ಇದಕ್ಕೆ ಗಂಭೀರವಾದ ಹೆಸರು. ಕಳೆದ ಜುಲೈ 28ರಂದು ಈ

ಅನುಪಾತವನ್ನು ಶೇ.35ರಿಂದ ಶೇ.35.5, ಏರಿಸಲಾಯಿತು. ಸೆಪ್ಟೆಂಬರ್ 1ರಿಂದ ಇದು ಶೇ. 36ಕ್ಕೆ ಹೆಚ್ಚಿತು. ಇದರಿಂದಲೂ ಇಷ್ಟಕಾರಕವಲ್ಲದ ಕ್ಷೇತ್ರಗಳಲ್ಲಿ ಉದರಿಯ ನುಗ್ಗಾಟಕ್ಕೆ ತಡೆ ಒಡ್ಡಿದಂತಾಗಿದೆ. ಅಷ್ಟರಮಟ್ಟಿಗೆ ಹಣದುಬ್ಬರ ಪ್ರವೃತ್ತಿಗೆ ನಿರುತ್ತೇಜನ.

ಜೊತೆಗೆ ಈ ಹಿಂದೆ ಅಧಿಕ ಠೇವಣಿಗಳ ಮೇಲೆ ಕಡ್ಡಾಯವಾಗಿ ಇಡಬೇಕೆಂದು ವಿಧಿಸಲಾಗಿದ್ದ ನಗದು ಹಣವನ್ನು ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡುವುದನ್ನೂ ಮುಂದಕ್ಕೆ ಹಾಕಿದೆ. ಅಲ್ಲದೆ ಆಹಾರದ ಮೇಲೆ ನೀಡುವ ಮುಂಗಡದ ಹಣದ ಪೂರೈಕೆಯ ಸೌಲಭ್ಯಗಳನ್ನೂ ಸಂಕುಚಿತಗೊಳಿಸಲಾಗಿದೆ. ಇವೆಲ್ಲ ಕ್ರಮಗಳಿಂದ ಹಣದುಬ್ಬರ ಪ್ರವೃತ್ತಿಗೆ ತಡೆ ಉಂಟಾಗುವುದಾದರೆ ಸಂತೋಷವೇ.

ಉಭಯ ಸಂಕಟ

ಆದರೆ ಆದೀತೆ? ಮೊದಲೇ ಹೇಳಿದ ಹಾಗೆ, ಒಡಕು ಪಾತ್ರೆಯಿಂದ ಹಲವೆಡೆ ನೀರು ಸೋರುತ್ತಿರುವಾಗ ಅದರ ಬಾಯಿಯನ್ನು ಮಾತ್ರ ಗಿಡಿಯುವುದರಿಂದ ಪರಿಸ್ಥಿತಿ ಹೆಚ್ಚು ಸುಧಾರಿಸದು. ಬ್ಯಾಂಕುಗಳು ಮುಂಬರುವ ತೀವ್ರ ಆರ್ಥಿಕ ಚಟುವಟಿಕೆಯ ಕಾಲದಲ್ಲಿ ಹಣದ ಕೊರತೆಯಿಂದ ಮಿಸುಕಾಡಬೇಕಾದೀತಲ್ಲವೆ ಎಂಬುದು ಒಂದು ಅಂಜಿಕೆ. ಕೇಂದ್ರ ರಾಜ್ಯ ಸರಕಾರಗಳು ನೀಡುವ ಸಾಲಪತ್ರಗಳಲ್ಲಿ ಅವು ಅಗಾಧ ಹಣ ತೊಡಗಿಸಬೇಕು. ಮುಂದಿನ ಮಾರ್ಚ್ ಕೊನೆಯ ವೇಳೆಗೆ ಬ್ಯಾಂಕುಗಳು ತಮ್ಮ ಒಟ್ಟು ಮುಂಗಡಗಳಲ್ಲಿ ಶೇಕಡ 40ರಷ್ಟು ಹಣವನ್ನು ಆದ್ಯತಾವಲಯಗಳಿಗೆ ನೀಡಬೇಕು. ಇದಕ್ಕಾಗಿಯೂ ಬ್ಯಾಂಕುಗಳಿಗೆ ಹೆಚ್ಚು ಹಣ ಬೇಕು.

ಅಲ್ಲದೆ ಬ್ಯಾಂಕುಗಳ ಲಾಭಪ್ರದತೆಯದು ಒಂದು ಮುಖ್ಯ ಪ್ರಶ್ನೆ. ಹೇಳಿ ಕೇಳಿ ನಮ್ಮ ಬ್ಯಾಂಕುಗಳು ಲಾಭ–ನಷ್ಟಗಳ ಚೌಕಟ್ಟಿನಲ್ಲೇ ಕೆಲಸ ಮಾಡಬೇಕಾಗಿದೆ. ಸದ್ಯಕ್ಕಂತೂ ಇದೇ ದಕ್ಷತೆಯ ಖಚಿತ ನಿಕಷ. ಬ್ಯಾಂಕುಗಳು ನಷ್ಟಪ್ರದವಾದರೆ ಸಮಾಜ ತೆರಬೇಕಾದ ಬೆಲೆ ವಿಪರೀತ. ಹುಚ್ಚು ಕುದುರೆಯಂತೆ ನೆಗೆಯುತ್ತಿರುವ ಬೆಲೆಗಳು ಆಗ ಎಲ್ಲ ಕಟ್ಟುಗಳನ್ನೂ ಸಂಪೂರ್ಣ ಕಿತ್ತು ಕೊಂಡುಬಿಡುತ್ತವೆ. ನಮ್ಮ ಬ್ಯಾಂಕುಗಳ ಠೇವಣಿ ವಿಸ್ತರಣೆಯತ್ತ ಕಣ್ಣು ಹಾಯಿಸಿದಾಗ ಅವುಗಳ ಲಾಭಪ್ರದತೆಯ ಸಾಧ್ಯಾಸಾಧ್ಯತೆಗಳ ಸುಳಿವು ನಮಗೆ ದೊರಕೀತು. ಬ್ಯಾಂಕುಗಳ ಠೇವಣಿ ಬೆಳವಣಿಗೆಯಲ್ಲಿ ಅವಧಿ ಠೇವಣಿಗಳೇ ಪ್ರಧಾನವಾಗುತ್ತಿವೆ. ಬ್ಯಾಂಕು ನಿಧಿಗಳ ಸೀಮಾಂತ ಬಡ್ಡಿ ವೆಚ್ಚ ಸುಮಾರು ಶೇ. 10ರಷ್ಟಾಗುತ್ತದೆ. ಸುಮಾರು ಶೇ. 45ರಷ್ಟು ಠೇವಣಿ ಹಣವನ್ನು ಶಾಸನ ವಿಧಿಸಿದ ನಗದು ಮೀಸಲು ಹಾಗೂ ದ್ರವತ್ವ ಪಾಲನೆಗಾಗಿ ತೆಗೆದಿಡಬೇಕಾಗುತ್ತದೆ. ಬ್ಯಾಂಕುಗಳು ಶೇ. 15ರಷ್ಟಾದರೂ ಲಾಭ ಸಂಪಾದನೆ

ಮಾಡದಿದ್ದರೆ ಎಣ್ಣೆಗೂ ಬತ್ತಿಗೂ ನೇರವಾಗುವದಿಲ್ಲ. ಆದ್ದರಿಂದ ಬ್ಯಾಂಕುಗಳು ನಿಜಕ್ಕೂ ಈಗ ಉಭಯಸಂಕಟದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತು.

ಬ್ಯಾಂಕ್ ವೇತನ ಉತ್ಕರ್ಷ

ನಾವು ಅಚ್ಚಿನ ಮನೆಗೆ ಹೋಗುತ್ತಿರುವಾಗ ಬ್ಯಾಂಕ್ ನೌಕರರನ್ನು ಕುರಿತಂತೆ ಒಂದು ಸ್ವಾಗತಾರ್ಹ ಸುದ್ದಿ ಬಂದಿದೆ. ನೌಕರರ ದೃಷ್ಟಿಯಿಂದಂತೂ ಇದು ಸ್ವಾಗತಾರ್ಹವೇ. ಸಮಾಜದ ಯಾವುದೇ ಒಂದು ವರ್ಗಕ್ಕೆ ಆರ್ಥಿಕವಾಗಿ ಅನುಕೂಲವಾಗುವುದಾದರೆ ಅದನ್ನು ಯಾರಾದರೂ ಸ್ವಾಗತಿಸಿಯಾರು. ಉದ್ಯೋಗಿಗಳ ನಾನಾ ವಲಯಗಳಲ್ಲಿ ವೇತನಗಳ ಉತ್ಕರ್ಷೆಯಾಗುತ್ತಿರುವಾಗ ಬ್ಯಾಂಕ್ ಉದ್ಯೋಗಿಗಳಾದರೂ ಅದನ್ನು ಬಯಸುವುದು ಸಹಜವೇ. ಸರ್ಕಾರಿ ವಲಯದ ಇತರ ಉದ್ಯಮಗಳಾದ ಕಲ್ಲಿದ್ದಲು, ಉಕ್ಕು ಮುಂತಾದವುಗಳ ಉದ್ಯೋಗಿಗಳಿಗೆ ವೇತನಗಳು ಈಗಾಗಲೇ ಏರಿವೆ. ಈಗ ಬ್ಯಾಂಕ್ ಉದ್ಯೋಗಿಗಳ ಸರದಿ. ವೇತನ ಕುರಿತ ಹಳೆಯ ಒಪ್ಪಂದದ ಅವಧಿ ಮುಗಿದು ಹೊಸದರ ಆಗಮನವನ್ನು ಬಹುಕಾಲದಿಂದಲೇ ನಿರೀಕ್ಷಿಸಲಾಗಿತ್ತು. 1983 ಜುಲೈ ತಿಂಗಳಿಂದ ಜಾರಿಗೆ ಬರುವ ಹೊಸ ಒಪ್ಪಂದದ ಪ್ರಕಾರ ದೇಶದ 55 'ಎ' ವರ್ಗದ ಬ್ಯಾಂಕ್ ಉದ್ಯೋಗಿಗಳಿಗೆ ಕನಿಷ್ಠ ರೂ. 60ರಿಂದ ಗರಿಷ್ಠ ರೂ. 293ರ ವರೆಗೆ ಮಾಸಿಕ ವೇತನದಲ್ಲಿ ಏರಿಕೆಯಾಗುತ್ತದೆ. ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯ ಗ್ರಾಮೀಣ ಪಟ್ಟಣಗಳಲ್ಲಿಯ ಶಾಖೆಗಳಲ್ಲಿ ಕೆಲಸ ಮಾಡುವವರಿಗೆ ಮೂಲವೇತನದ ಶೇ. 6ರಷ್ಟು, ರೂ. 100ರ ಗರಿಷ್ಠ ಮಿತಿಗೆ ಒಳಪಟ್ಟು, ಮನೆ ಬಾಡಿಗೆ ಭತ್ಯೆ ದೊರಕುತ್ತದೆ. ನಗರವಾಸಿ ಉದ್ಯೋಗಿಗಳಿಗೂ ಗುಮಾಸ್ತರಿಗೆ ಅವರ ಮೂಲ ವೇತನದ ಶೇ. 10ರಷ್ಟು ಹಾಗೂ ಉಪ–ಸಿಬ್ಬಂದಿಯವರಿಗೆ ಅವರ ಮೂಲ ವೇತನದ ಶೇ. 8ರಷ್ಟು ಅನುಕ್ರಮವಾಗಿ ರೂ. 140 ಮತ್ತು ರೂ. 60ರ ಗರಿಷ್ಠ ಮಿತಿಗಳಿಗೆ ಒಳಪಟ್ಟು ನಗರ ಪರಿಹಾರ ಭತ್ಯ ಪ್ರಾಪ್ತವಾಗುತ್ತದೆ. ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘ ಮತ್ತು ಬ್ಯಾಂಕ್ ಉದ್ಯೋಗಿಗಳ ರಾಷ್ಟ್ರೀಯ ಮಹಾಸಂಘಗಳಿಗೂ ಭಾರತದ ಬ್ಯಾಂಕುಗಳ ಸಂಘಕ್ಕೂ ಒಪ್ಪಂದವಾಗಿದೆ. ಭಾರತೀಯ ಸ್ಟೇಟ್ ಬ್ಯಾಂಕ್ ಉದ್ಯೋಗಿಗಳು ಪ್ರತ್ಯೇಕ ಒಪ್ಪಂದದ ಮೂಲಕ ಹೆಚ್ಚಿನ ಸವಲತ್ತು ಪಡೆದಿದ್ದಾರೆ.

ವಾದ–ಪ್ರತಿವಾದ

ಹೊಸ ಒಪ್ಪಂದದಿಂದ ಒಟ್ಟಿನಲ್ಲಿ ರೂ. 130 ಕೋಟಿಯ ಭಾರ ಬೀಳುತ್ತದೆ. ವೇತನದ ಮೊಬಲಗು ಶೇ. 14.5ರಷ್ಟು ಅಧಿಕವಾಗುತ್ತದೆ. ಇದರಿಂದ ಉದ್ಯೋಗಿಗಳಿಗೆ ನೆಮ್ಮದಿ ದೊರಕಿ ಅವರ ಕಾರ್ಯ ಹೆಚ್ಚು ದಕ್ಷವಾಗುವುದಾದರೆ ಸಂತೋಷ. ಕಳೆದ

ಹಲವು ವರ್ಷಗಳಲ್ಲಿ ಬ್ಯಾಂಕುಗಳ ಲಾಭಪ್ರದತೆ ಬಹಳಷ್ಟು ಮುಕ್ಕಾಗಿ ಹೋಗಿದೆಯೆಂಬುದು ನಿಜ. ಉದ್ಯೋಗಿಗಳಿಗೆ ಹೆಚ್ಚು ಸಂಬಳ ಮತ್ತು ಭತ್ಯೆ ನೀಡುವುದರಿಂದ ಇದರ ಮೇಲೆ ಇನ್ನಷ್ಟು ದುಷ್ಪರಿಣಾಮವಾಗುವುದೆಂದು ವಾದಿಸಬಹುದು. ಆದರೆ ನ್ಯಾಯವಾಗಿ ಸಲ್ಲಬೇಕಾದುದನ್ನು ತಡೆಹಿಡಿಯುವುದೂ ಸರಿಯಲ್ಲವೆಂದು ಇದಕ್ಕೆ ಉತ್ತರ ಹೇಳಬಹುದು. ಬ್ಯಾಂಕ್ ಉದ್ಯೋಗಿಗಳ ಉತ್ಪಾದಕತೆ ಹಾಗೂ ಗ್ರಾಹಕ ಸೇವೆಗೂ ವೇತನ ಏರಿಕೆಗೂ ಲಗತ್ತು ಮಾಡದಿರುವುದು ಸ್ವಾಗತಾರ್ಹವೆಂದು ಕೆಲವರೂ ದುರದೃಷ್ಟಕರವೆಂದು ಇನ್ನು ಕೆಲವರೂ ವಾದಿಸಬಹುದು. ವೇತನ, ಭತ್ಯೆ ಹಾಗೂ ಪರಿಲಬ್ಧಿಗಳ ವಿಸ್ತರಣಕ್ಕೆ ವಿಲೋಮಾನುಪಾತವಾಗಿ ಉತ್ಪಾದಕತೆ ಮತ್ತು ಗ್ರಾಹಕ ಸೇವೆಗಳು ಚಲಿಸುತ್ತಿವೆಯೆಂದು ವಾದಿಸಲು ನಾನಾ ನಿದರ್ಶನಗಳನ್ನು ಕೊಡಬಹುದು. ಗಂಟೆ–ತಾರೀಕು ಪಟ್ಟಿಗಳನ್ನೇ ನಿಟ್ಟಿಸುತ್ತ ಕೆಲಸ ಮಾಡುವ ಪ್ರವೃತ್ತಿ ಬೆಳೆಯುತ್ತಿದೆಯೆನ್ನಬಹುದು. ಆದರೆ ತೃಪ್ತ ಉದ್ಯೋಗಿಯೇ ದಕ್ಷತೆಯ ಮೂಲ ಎಂಬುದನ್ನು ಮರೆಯುವಂತೆಯೂ ಇಲ್ಲ.

ಬ್ಯಾಂಕಿಂಗ್ : ಹೊಸ ಕ್ಷಿತಿಜ

ಈ ವಾದಗಳೇನೇ ಇರಲಿ. ಬ್ಯಾಂಕಿನ ದಕ್ಷತೆಯನ್ನು ಸರ್ವತೋಮುಖವಾಗಿ ಬೆಳೆಸುವ, ಗ್ರಾಹಕತೃಪ್ತಿಯನ್ನು ವರ್ಧನಗೊಳಿಸುವ ಹೊಣೆ ಆಡಳಿತ ಹಾಗೂ ಉದ್ಯೋಗಿ ವರ್ಗಗಳೆರಡಕ್ಕೂ ಸೇರಿದ್ದೆಂಬುದರಲ್ಲಿ ಎರಡು ಮಾತಿಲ್ಲ. ಬ್ಯಾಂಕ್ ಉದ್ಯಮ ಇಂದು ಹೆಚ್ಚು ಹೆಚ್ಚು ಸಂಕೀರ್ಣವಾದ್ದೂ ನಾಜೂಕಾದ್ದೂ ಆಗುತ್ತಿದೆ. ಬ್ಯಾಂಕಿನ ಚಟುವಟಿಕೆಗಳು ವಿಸ್ತರಿಸುತ್ತಿವೆ. ಶೀಘ್ರವಾಗಿ ಬದಲಾಗುತ್ತಿರುವ ಕೈಗಾರಿಕೆ – ವಾಣಿಜ್ಯಗಳ ಅಗತ್ಯಗಳಿಗೆ ಅಷ್ಟೇ ಶೀಘ್ರ ಹೊಂದಿಕೊಳ್ಳುವುದು ಬ್ಯಾಂಕಿಂಗಿನ ಕರ್ತವ್ಯ. ಕ್ರಾಂತಿಪರ ದೃಷ್ಟಿ ಇದಕ್ಕೆ ಅಗತ್ಯ. ಇನ್ನು ಹತ್ತು ವರ್ಷಗಳ ಅನಂತರದ ಅಗತ್ಯಗಳನ್ನೂ ಬೆಳವಣಿಗೆಗಳನ್ನೂ ಇಂದೇ ಊಹಿಸಿ ಅವಕ್ಕೆ ಈಗಲೇ ಅನುವು ಮಾಡಿಕೊಳ್ಳುವುದು ಅಗತ್ಯ. ಭಾರತದಲ್ಲಿ ಹಲವಾರು ಸಾಮಾಜಿಕ ಹೊಣೆಗಳನ್ನು ಹೊರಬೇಕಾಗಿರುವ ಬ್ಯಾಂಕಿಂಗ್‌ವಲಯ ಇನ್ನೂ ಹೆಚ್ಚು ಚಚ್ಚರದಿಂದ ಕಾರ್ಯ ಪ್ರವೃತ್ತವಾಗಬೇಕಾಗಿದೆ. ಜೊತೆಜೊತೆಗೆ ಬ್ಯಾಂಕಿನ ಉತ್ಪಾದಕತೆಯನ್ನು – ಅದರ ಅರ್ಥ ಏನೇ ಇರಲಿ – ಹೆಚ್ಚಿಸುವತ್ತ ಗಮನ ಹರಿಸಬೇಕು. ಮನೆವಾರ್ತೆ ಹೆಚ್ಚು ದಕ್ಷವಾಗುವುದರ ಜೊತೆಗೇ ನಿಧಿಗಳ ನಿರ್ವಹಣೆಯ ಹೊಸ ಹೊಸ ದಿಕ್ಕುಗಳನ್ನು ಗುರುತಿಸಿ ರೂಢಿಸಬೇಕು. ಸಿಬ್ಬಂದಿಯ ಅನುಕೂಲತಮ ನಿರ್ವಹಣೆ ಸಾಧ್ಯವಾಗಬೇಕು. ಬ್ಯಾಂಕುಗಳ ಖರ್ಚುಗಳ ಮೇಲೆ ನಿಯಂತ್ರಣವಿರಬೇಕು. ಮಾಹಿತಿ ವ್ಯವಸ್ಥೆ ಅತ್ಯಂತ ಸಲೀಸಾಗಿರಬೇಕು. ಶಿರೋಗಾಮಿ ವಿಧಾನಗಳ ಜಾಗದಲ್ಲಿ ಹೊಸ ಹೊಸ ಕಾರ್ಯತಂತ್ರಗಳು ರೂಪುಗೊಳ್ಳಬೇಕು. ಒಟ್ಟಿನಲ್ಲಿ ಮುಂದಿನ

ದಶಕದಲ್ಲಿ ಬ್ಯಾಂಕು ಹೇಗೆ ಇರಬೇಕು, ಏನು ಮಾಡಬೇಕು, ಹೇಗೆ ಮಾಡಬೇಕು – ಎಂಬ ಬಗೆಗೆ ಆತ್ಮಪರೀಕ್ಷಣವಾಗಲಿ, ವಿಚಾರಮಥನವಾಗಲಿ, ಮಾರ್ಗೋಪಾಯಗಳು ರೂಪುಗೊಳ್ಳುವಂತಾಗಲಿ. 'ಬ್ಯಾಂಕಿಂಗ್: ಹೊಸ ಕ್ಷಿತಿಜ' – ಇದು ನಮ್ಮ ಕಾರ್ಯಶೀಲ ಘೋಷವಾಕ್ಯವಾಗಲಿ.

ಬ್ಯಾಂಕು ವ್ಯವಹಾರದಲ್ಲಿ ಕನ್ನಡ

ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಬ್ಯಾಂಕು ಕಛೇರಿಗಳೂ ವ್ಯವಹಾರವನ್ನು ಕನ್ನಡದಲ್ಲಿ ನಡೆಸಬೇಕೆಂಬ ಬಗ್ಗೆ ತಾತ್ತ್ವಿಕವಾಗಿ ಯಾವ ಭಿನ್ನಾಭಿಪ್ರಾಯವೂ ಇರಲಾರದು. ಆದರೆ ಕನ್ನಡದಲ್ಲೇ ನಡೆಸಬೇಕೆ, ಅಥವಾ ಕನ್ನಡದಲ್ಲೂ ನಡೆಸಬಹುದೆ ಎಂಬುದು ಪ್ರಶ್ನೆ. ಕನ್ನಡವನ್ನು ಎಷ್ಟರ ಮಟ್ಟಿಗೆ ಅಥವಾ ಯಾವ ಹಂತದವರೆಗೆ ಬಳಸಬೇಕೆಂಬುದು ಈಗ ವಾದಗ್ರಸ್ತವಾಗಿರುವ ವಿಚಾರ.

ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕಂಡು ಕೊಳ್ಳಬೇಕಾದರೆ ಎರಡು ಅಂಶಗಳನ್ನು ಕುರಿತಂತೆ ಸ್ಪಷ್ಟೀಕರಣ ಅಗತ್ಯ. ಯಾವ ಸಂಸ್ಥೆಗಳನ್ನು ನಾವು ಬ್ಯಾಂಕುಗಳೆಂದು ಪರಿಗಣಿಸುತ್ತೇವೆಂಬುದು ಒಂದು. ಹಿಂದಿ ಹಾಗೂ ಇತರ ಭಾಷೆಗಳಿಗೆ ಸಂಬಂಧಿಸಿದಂತೆ ಕನ್ನಡದ ಸ್ಥಾನಮಾನಗಳೇನೆಂಬುದು ಇನ್ನೊಂದು ಅಂಶ.

ಕರ್ನಾಟಕದಲ್ಲಿರುವ ಬ್ಯಾಂಕುಗಳನ್ನು ಅವುಗಳ ಸಂಘಟನೆ ಹಾಗೂ ಕಾರ್ಯಸ್ವರೂಪಗಳ ದೃಷ್ಟಿಯಿಂದ ಮೂರು ಬಗೆಯಾಗಿ ವಿಂಗಡಿಸಬಹುದು. ಸಹಕಾರಿ ಕ್ಷೇತ್ರದಲ್ಲಿ ಸ್ಥಾಪಿತವಾಗಿ, ಠೇವಣಿಗಳನ್ನು ಸ್ವೀಕರಿಸುವ ಹಾಗೂ ಸಾಲಗಳನ್ನು ನೀಡುವ ಸಂಸ್ಥೆಗಳು ಒಂದು ಬಗೆ, ಪಾಶ್ಚಾತ್ಯ ದೇಶಗಳ ವಾಣಿಜ್ಯ ಬ್ಯಾಂಕುಗಳ ಮಾದರಿಯಲ್ಲಿ ಸ್ಥಾಪಿತವಾಗಿ ಕಾರ್ಯನಿರತವಾಗಿರುವವುಗಳದು ಇನ್ನೊಂದು ಬಗೆ. ಸಹಕಾರಿ ಕ್ಷೇತ್ರಕ್ಕೆ ಒಳಪಡದ, ವಾಣಿಜ್ಯ ಬ್ಯಾಂಕುಗಳೆಂದೂ ಕರೆಯಲಾಗದ, ದೀರ್ಘಾವಧಿ ಸಾಲ ನೀಡಿಕೆಯಲ್ಲಿ ನಿರತವಾಗಿ ಕೈಗಾರಿಕೆ – ವ್ಯವಸಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳದು ಮೂರನೆಯ ಬಗೆ. ಸಹಕಾರಿ ಕ್ಷೇತ್ರದ ಸಂಸ್ಥೆಗಳಲ್ಲಿ ವಾಣಿಜ್ಯ ಬ್ಯಾಂಕಿಂಗ್ ವ್ಯವಹಾರ ಮಾಡುವ ಸಂಸ್ಥೆಗಳೇ ಅಲ್ಲದೆ, ಅಭಿವೃದ್ಧಿ ಕಾರ್ಯಕ್ಕಾಗಿ ದೀರ್ಘಕಾಲಿಕ ಸಾಲದ ನೆರವು ನೀಡುತ್ತಿರುವ ಸಂಸ್ಥೆಗಳೂ ಸೇರುತ್ತವೆ. ವಾಣಿಜ್ಯ ಬ್ಯಾಂಕುಗಳಲ್ಲಿ ಅಖಿಲ ಭಾರತ ವ್ಯಾಪ್ತಿಯ ಸರ್ಕಾರಿ ವಲಯದ ಬ್ಯಾಂಕುಗಳೂ ಖಾಸಗಿ ಒಡೆತನದ ಬ್ಯಾಂಕುಗಳೂ ಅಲ್ಲದೆ, ಜಿಲ್ಲೆಗೆ ಒಂದರಂತೆ ಸ್ಥಾಪಿತವಾಗಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ಬರುತ್ತವೆ. ಕೈಗಾರಿಕೆ ವ್ಯವಸಾಯಗಳ ಅಭಿವೃದ್ಧಿಗೆ ಧನ ಸಹಾಯ ಮಾಡುವ ಸಂಸ್ಥೆಗಳಲ್ಲಿ ಅಖಿಲ ಭಾರತ ವ್ಯಾಪ್ತಿಯ ಭಾರತೀಯ ಕೈಗಾರಿಕಾ ಹಣಕಾಸು ನಿಗಮ, ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು, ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕು ಮುಂತಾದವಲ್ಲದೆ, ರಾಜ್ಯಕ್ಕೆ ಸೀಮಿತವಾದ ಹಣಕಾಸು ನಿಗಮವೇ ಮುಂತಾದವೂ ಇವೆ. ಇವೆಲ್ಲವೂ ಅಲ್ಲದೆ, ಕೇಂದ್ರೀಯ ಬ್ಯಾಂಕ್ ಆದ ಭಾರತೀಯ ರಿಸರ್ವ್ ಬ್ಯಾಂಕ್ ಒಂದು

ವಿಶಿಷ್ಟ ಸಂಸ್ಥೆ. ಒಟ್ಟಿನಲ್ಲಿ ಈ ಎಲ್ಲ ಸಂಸ್ಥೆಗಳನ್ನೂ ಬ್ಯಾಂಕುಗಳೆಂದು ಈ ಲೇಖನದಲ್ಲಿ ಪರಿಗಣಿಸಲಾಗಿದೆ.

ಯಾವ ಯಾವ ಬಗೆಯ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಮಟ್ಟಿಗೆ ಕನ್ನಡ ಬಳಸಬಹುದೆಂಬುದನ್ನು ವಿವೇಚಿಸುವ ಮುನ್ನ ನಮ್ಮ ದೇಶದ ಸಂವಿಧಾನದ ಚೌಕಟ್ಟಿನಲ್ಲಿ ಕನ್ನಡದ ಸ್ಥಾನಮಾನಗಳೇನು. ಇವನ್ನು ರಾಜ್ಯ ಸರಕಾರಗಳೂ ರಾಜ್ಯದಲ್ಲಿರುವ ಬ್ಯಾಂಕುಗಳೂ ಎಷ್ಟರಮಟ್ಟಿಗೆ ಮಾನ್ಯಮಾಡಿವೆ ಎಂಬುದನ್ನು ಪರಿಶೀಲಿಸುವುದು ಅಗತ್ಯ. ಭಾರತದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಹದಿನೈದು ಪ್ರಮುಖ ಭಾರತೀಯ ಭಾಷೆಗಳಲ್ಲಿ ಕನ್ನಡವೂ ಒಂದು. ಇವುಗಳ ಪೈಕಿ ಉರ್ದುವಾಗಲಿ, ಸಂಸ್ಕೃತವಾಗಲಿ, ಇತ್ತೀಚೆಗೆ ಈ ಪಟ್ಟಿಗೆ ಸೇರಿಸಲಾದ ಸಿಂಧಿಯಾಗಲಿ ಯಾವ ಒಂದು ಪ್ರದೇಶದ ಭಾಷೆಯಲ್ಲ. ಉಳಿದವು ಒಂದೊಂದು ಪ್ರದೇಶದ ಅಥವಾ ಒಂದಕ್ಕಿಂತ ಹೆಚ್ಚು ಪ್ರದೇಶಗಳ ಪ್ರಮುಖ ಭಾಷೆಗಳು, ತನ್ನ ಜ್ಞಾತಿಭಾಷೆಗಳಾದ ಉರ್ದು ಹಾಗೂ ಹಿಂದೂಸ್ತಾನಿಯೂ ಸೇರಿದಂತೆ ಹಿಂದಿಯನ್ನಾಡುವವರ ಸಂಖ್ಯೆ ಭಾರತದ ಒಟ್ಟು ಜನ ಸಂಖ್ಯೆಯ ಶೇಕಡ 46ರಷ್ಟು ಇದ್ದದ್ದರಿಂದ ಅದನ್ನು ಭಾರತ ಒಕ್ಕೂಟದ ಅಧಿಕೃತ ಭಾಷೆಯೆಂದು ಸಂವಿಧಾನ ಸ್ವೀಕರಿಸಿತು. ದೇಶದ ಅರ್ಧಕ್ಕಿಂತ ಕಡಿಮೆ ಸಂಖ್ಯೆಯ ಜನರು ಆಡುವ ಭಾಷೆಯನ್ನು ಎಲ್ಲ ಜನರ ಮೇಲೂ ಹೇರುವುದರ ಅಪಾಯವನ್ನು ನಮ್ಮ ಸಂವಿಧಾನಕಾರರು ಅರಿಯದಿರಲಿಲ್ಲ. ಹಿಂದಿಯಷ್ಟೇ ಹಳೆಯದಾದ, ಹಿಂದಿಗಿಂತ ಬಲು ಪ್ರಾಚೀನವಾದ ಪ್ರಾದೇಶಿಕ ಭಾಷೆಗಳೂ ತಂತಮ್ಮ ಕ್ಷೇತ್ರಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತ ಮುಂದುವರಿದು ಆಯಾ ಪ್ರದೇಶಗಳ ಜನರ ಆಶೋತ್ತರಗಳ ಪೂರೈಕೆಯಲ್ಲಿ ವ್ಯವಹಾರ ನಿರ್ವಹಣೆಯಲ್ಲೂ ಆಡಳಿತದಲ್ಲೂ ಪ್ರಮುಖ ಪಾತ್ರ ನಿರ್ವಹಿಸಲು ಅವಕಾಶ ಮಾಡಿಕೊಡುವುದು ಅಗತ್ಯ ಎಂಬುದನ್ನು ಅವರು ಮನಗಂಡಿದ್ದರು. ಅಂತೆಯೇ ಸಂವಿಧಾನದಲ್ಲಿ ಈ ಭಾಷೆಗಳನ್ನು ಕುರಿತಂತೆಯೂ ವ್ಯಾಪಕವಾದ ಉಪಬಂಧಗಳನ್ನು ಮಾಡಲಾಗಿದೆಯೆಂಬುದನ್ನು ನಾವು ಮರೆಯಬಾರದು. ನಮ್ಮ ಸಂವಿಧಾನದ 17ನೆಯ ಭಾಗವಿಡೀ ಅಧಿಕೃತ ಭಾಷೆಯನ್ನು ಕುರಿತ ವಿಧಿಗಳಿಗೆ ಮೀಸಲಾದದ್ದು. ಇವುಗಳ ಪೈಕಿ ಒಂದು ಅಧ್ಯಾಯದಲ್ಲಿ ಒಕ್ಕೂಟದ ಅಧಿಕೃತ ಭಾಷೆಯನ್ನು ಕುರಿತು ಹೇಳಿದ್ದರೆ, ಇನ್ನೊಂದು ಅಧ್ಯಾಯದಲ್ಲಿ ಪ್ರಾದೇಶಿಕ ಭಾಷೆಗಳನ್ನು ಕುರಿತು ಹೇಳಲಾಗಿದೆ. ಒಕ್ಕೂಟದ ಅಧಿಕೃತ ಭಾಷೆಯನ್ನು ಕುರಿತ ಅನುಚ್ಛೇದಗಳು 343 ಮತ್ತು 344. ಪ್ರಾದೇಶಿಕ ಭಾಷೆಗಳಿಗೆ 345, 346, 347 – ಹೀಗೆ ಮೂರು ಅನುಚ್ಛೇದಗಳು ಮೀಸಲಾಗಿವೆ. ಆಯಾ ರಾಜ್ಯಗಳ ವಿಧಾನಮಂಡಲಗಳ ಬಹು

ಸಂಖ್ಯಾತ ಸದಸ್ಯರು ಅಲ್ಲಿಯ ಬಹ್ವಂಶದ ಜನರು ಆಡುವ ಭಾಷೆಗಳನ್ನು ತಂತಮ್ಮ ರಾಜ್ಯಗಳ ಅಧಿಕೃತ ಭಾಷೆಗಳೆಂದು ಶಾಸನ ಮಾಡುವ ಹಕ್ಕುಳ್ಳವರೆಂಬುದನ್ನು ಈ ಅನುಚ್ಛೇದಗಳಲ್ಲಿ ಹೇಳಲಾಗಿದೆ. ಆದ್ದರಿಂದ Official language ಅಥವಾ ಅಧಿಕೃತ ಭಾಷೆ ಅಥವಾ ರಾಜಭಾಷೆ ಎಂದರೆ ಹಿಂದಿ ಮಾತ್ರವೇ ಅಲ್ಲ. ಆಯಾ ರಾಜ್ಯಗಳಲ್ಲಿ ಅಲ್ಲಿಯ ವಿಧಾನಮಂಡಲಗಳು ಸ್ವೀಕರಿಸಿದ ಬಹುಸಂಖ್ಯಾತರ ಭಾಷೆಗಳೂ ಅಧಿಕೃತ ಭಾಷೆಗಳೇ. ರಾಜ್ಯ – ರಾಜ್ಯಗಳ ನಡುವಣ ಸಂಪರ್ಕಕ್ಕೆ ಒಕ್ಕೂಟದ ಅಧಿಕೃತ ಭಾಷೆಯಾದರೆ, ಆಯಾ ರಾಜ್ಯಗಳಲ್ಲಿಯ ಜನರೊಂದಿಗೆ ನಡೆಸುವ ವ್ಯವಹಾರಗಳು ಅಲ್ಲಿಯ ಪ್ರಾದೇಶಿಕ ಭಾಷೆಗಳಲ್ಲಿಯೇ ಎಂದರೆ ಅಲ್ಲಿಯ ಅಧಿಕೃತ ಭಾಷೆಗಳಲ್ಲಿಯೇ ಎಂಬುದು ಸಂವಿಧಾನಕರ್ತರ ಆಶಯವೆಂಬುದನ್ನು ಮನಗಾಣಬೇಕು. ಪರಿವರ್ತನೆಯ ಕಾಲದಲ್ಲಿ ಇಂಗ್ಲಿಷ್ ಮುಂದುವರಿಯತಕ್ಕದ್ದೆಂಬುದೂ, ಕ್ರಮಕ್ರಮವಾಗಿ ಇದರ ಪ್ರಾಮುಖ್ಯ ತಗ್ಗುವುದೆಂಬುದೂ ನ್ಯಾಯವೇ. ಈ ನಿಟ್ಟಿನಲ್ಲಿ ಈಚಿನ ವರ್ಷಗಳಲ್ಲಿ ತೆಗೆದುಕೊಳ್ಳಲಾಗಿರುವ ಕ್ರಮಗಳನ್ನು ಇಲ್ಲಿ ವಿಶದೀಕರಿಸುವ ಅಗತ್ಯವಿಲ್ಲ. ಆದರೆ ಒಂದು ಮುಖ್ಯವಾದ ಅಂಶವನ್ನು ನಾವು ನೆನಪಿನಲ್ಲಿಡಬೇಕು. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯೆಂದು ನಾವು ಹೇಳುತ್ತಿದ್ದೇವೆಯಾದರೂ ಅದರ ವ್ಯಾಪ್ತಿ ಆಡಳಿತಕ್ಕಷ್ಟೇ ಸೀಮಿತವಲ್ಲ. ಸಂವಿಧಾನದ ಪ್ರಕಾರ ಅದು ನಮ್ಮ ಅಧಿಕೃತ ಭಾಷೆ. ಇಲ್ಲಿಯ ಜನರೊಂದಿಗಿನ ಎಲ್ಲ ವ್ಯವಹಾರಗಳೂ ಅಧಿಕೃತವಾಗಿ ನಡೆಯಬೇಕಾದ್ದು ಈ ಭಾಷೆಯಲ್ಲೇ. ರಾಜ್ಯದಲ್ಲೇ ಸ್ಥಾಪಿತವಾದ, ರಾಜ್ಯಕ್ಕೆ ಸೀಮಿತವಾದ ಸಂಸ್ಥೆಗಳಾಗಿರಲಿ, ಅಖಿಲ ಭಾರತ ವ್ಯಾಪ್ತಿಯ ಸಂಸ್ಥೆಗಳೇ ಆಗಿರಲಿ – ಎಲ್ಲ ಸಂಸ್ಥೆಗಳೂ ಇಲ್ಲಿಯ ಜನರೊಂದಿಗೆ ವ್ಯವಹರಿಸಬೇಕಾದ್ದು ಇಲ್ಲಿಯ ಭಾಷೆಯಲ್ಲೇ. ಇದು ಕೇವಲ ನ್ಯಾಯದ ಪ್ರಶ್ನೆಯಲ್ಲ. ಸಹಜತೆಯ ಪ್ರಶ್ನೆ, ಸಮರ್ಪಕತೆಯ ಪ್ರಶ್ನೆ, ಸಾರ್ಥಕತೆಯ ಪ್ರಶ್ನೆ.

ಬ್ಯಾಂಕುಗಳು ಎಂದರೆ ನಮಗೆ ಥಟ್ಟನೆ ನೆನಪಿಗೆ ಬರುವ ಸಂಸ್ಥೆಗಳೆಂದರೆ ವಾಣಿಜ್ಯ ಬ್ಯಾಂಕುಗಳೇ. ಪ್ರಮುಖ ವಾಣಿಜ್ಯ ಬ್ಯಾಂಕುಗಳೆಲ್ಲ ಇಂದು ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿವೆ. ಕೇಂದ್ರ ಸರ್ಕಾರದ ಒಡೆತನದ ಬ್ಯಾಂಕುಗಳೂ ಖಾಸಗಿ ಬ್ಯಾಂಕುಗಳೂ ಇಂದು ರಾಷ್ಟ್ರವ್ಯಾಪಿಯಾಗಿವೆ. ದೇಶದಲ್ಲಿ ದಕ್ಷಿಣೋತ್ತರವಾಗಿ, ಪೂರ್ವ ಪಶ್ಚಿಮವಾಗಿ ಇವುಗಳ ಶಾಖೆಗಳು ಹರಡಿವೆ. ಅಖಿಲ ಭಾರತ ವ್ಯಾಪ್ತಿಯ ಈ ಬ್ಯಾಂಕಿಂಗ್ ಸಂಸ್ಥೆಗಳು ಯಾವ ಭಾಷೆಯಲ್ಲಿ ವ್ಯವಹರಿಸಬೇಕೆಂಬುದು ಮುಖ್ಯವಾದ ಪ್ರಶ್ನೆ. ಅನೇಕ ಸರ್ಕಾರಿ ವಲಯ ಬ್ಯಾಂಕುಗಳು 1967ರ ತಿದ್ದುಪಡಿ ಸಹಿತವಾದ 1963ರ ಅಧಿಕೃತ ಭಾಷೆಗಳ ಅಧಿನಿಯಮದಲ್ಲಿ ಭಾರತ ಸರ್ಕಾರದ ಒಡೆತನ ಅಥವಾ

ನಿಯಂತ್ರಣಕ್ಕೆ ಒಳಪಟ್ಟ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹೇಳಿರುವ ಮಾತುಗಳನ್ನು ಅಕ್ಷರಶಃ ಅನ್ವಯಿಸಿಕೊಂಡು ತುಂಬಾ ಸೀಮಿತವಾದ ದೃಷ್ಟಿ ತಳೆದಿವೆ. ಅಂಥ ಸಂಸ್ಥೆಗಳ ನಿರ್ಣಯಗಳು, ಸಾಮಾನ್ಯ ಆದೇಶಗಳು, ನಿಯಮಗಳು, ಪ್ರಕಟಣೆಗಳು, ಒಪ್ಪಂದಗಳು ಹಿಂದಿ, ಇಂಗ್ಲಿಷುಗಳಲ್ಲಿ ಇರಬೇಕಾಗುತ್ತದೆ ಎಂದು ಹೇಳುತ್ತವೆ. ಹೀಗೆಂದರೆ ಇತರ ಭಾಷೆಗಳಿಗೆ ಸ್ಥಾನವೇ ಇಲ್ಲ ಎಂದು ಇವುಗಳ ಭಾವನೆ. ಎತ್ತಿಗಿಂತಲೂ ಮುಂದೆ ಗೋಣಿ ಹಾರಿತು ಎಂಬ ಹಾಗೆ ಕೆಲವು ಬ್ಯಾಂಕುಗಳು ಕೇಂದ್ರ ಸರ್ಕಾರಕ್ಕಿಂತ ತೀವ್ರವಾದ ವೇಗದಲ್ಲಿ ತಮ್ಮ ಇಡೀ ಆಡಳಿತ ಹಾಗೂ ವ್ಯವಹಾರಗಳನ್ನು ಹಿಂದೀಮಯವಾಗಿ ಮಾಡಲು ಹವಣಿಸುತ್ತಿವೆ. ಅಧಿಕೃತ ಭಾಷೆಯ ಜಾರಿ ಎಂದರೆ ಹಿಂದಿಯ ಜಾರಿ ಎಂಬುದಾಗಿ ಭ್ರಮಿಸಿವೆ. ಈ ವಿಪರೀತ ದೃಷ್ಟಿಯನ್ನು ತಳೆದರೆ ಇತರ ಭಾಷೆಗಳಿಗೆ ಸ್ಥಾನವೇ ಇರುವುದಿಲ್ಲ. ಈ ನಿಲುವನ್ನು ಕನ್ನಡಿಗರು ಅತ್ಯಂತ ಪ್ರಬಲವಾಗಿ ವಿರೋಧಿಸುವುದು ಅನಿವಾರ್ಯವಾಗುತ್ತದೆ. ಪ್ರಾದೇಶಿಕ ಭಾಷೆಗಳಿಗೂ ಅಧಿಕೃತ ಭಾಷೆಗಳ ಸ್ಥಾನವನ್ನು ನೀಡಿರುವ ಸಂವಿಧಾನದ 345, 347ನೆಯ ಅನುಚ್ಛೇದಗಳ ಆಶಯವನ್ನು ಉಲ್ಲಂಘಿಸುವ ಪ್ರಯತ್ನವನ್ನು ತಡೆಗಟ್ಟಲೇಬೇಕು. ಇದು ಹಿಂದೀತರ ಭಾಷೆಗಳನ್ನಾಡುವವರಿಗೆ ಸಂವಿಧಾನದಲ್ಲಿ ನೀಡಲಾಗಿರುವ ಹಕ್ಕುಗಳ ಮೇಲೆ ನಡೆಸಲಾಗಿರುವ ಆಕ್ರಮಣ. ಹಿಂದೀತರ ಭಾಷೆಗಳನ್ನಾಡುವವರೇ ಬಹುಸಂಖ್ಯಾತರೆಂಬ ಸತ್ಯಕ್ಕೆ ಮಾಡಲಾಗಿರುವ ಅಪಚಾರ. ಅಧಿಕೃತ ಭಾಷೆಗಳ ಅಧಿನಿಯಮವನ್ನೇ ತೆಗೆದುಕೊಂಡರೂ, ಅನ್ಯಭಾಷೆಗಳಲ್ಲಿ ವ್ಯವಹಾರ ನಡೆಸಬಾರದೆಂಬ ನಿಷೇಧವೇನೂ ಇಲ್ಲವೆಂಬುದನ್ನು ಕೂಡ ಅನೇಕರು ಮರೆತಿರುವುದು ದುರ್ದೈವದ ಸಂಗತಿ.

ಅಧಿಕೃತ ಭಾಷೆಗಳ ಅಧಿನಿಯಮದ 8ನೆಯ ಪ್ರಕರಣದ ಪ್ರಕಾರ 1975ರಲ್ಲಿ ಪ್ರಕಟಿಸಲಾದ ನಿಯಮಗಳಲ್ಲಿ ನೀಡಲಾಗಿರುವ ವಿಶದೀಕರಣವನ್ನು ನೋಡಿಯಾದರೂ ಇಂಥವರು ವಿವೇಕವನ್ನು ಪಡೆಯಬೇಕು. ಹಿಂದಿ ಭಾಷೆ ಆಡುವ ರಾಜ್ಯಗಳೊಡನೆ ಕೇಂದ್ರ ಸರ್ಕಾರದ ಪತ್ರವ್ಯವಹಾರ ಹಿಂದಿಯಲ್ಲಿರತಕ್ಕದ್ದು; ಹಿಂದಿ ಅರ್ಥವಾಗುವ ರಾಜ್ಯಗಳೊಡನೆ ಸಾಮಾನ್ಯವಾಗಿ ಹಿಂದಿಯಲ್ಲಿರತಕ್ಕದ್ದು; ಉಳಿದ ರಾಜ್ಯಗಳೊಡನೆ ಹಾಗೂ ಅಲ್ಲಿಯ ಯಾವುದೇ ಕಛೇರಿ ಅಥವಾ ವ್ಯಕ್ತಿಯೊಡನೆ ವ್ಯವಹಾರ ಇಂಗ್ಲಿಷಿನಲ್ಲಿರತಕ್ಕದ್ದು ಎಂಬುದಾಗಿ ನಿಬಂಧನೆಗಳು ತಿಳಿಸುತ್ತವೆ. ಹಿಂದಿಯನ್ನು ಅಧಿಕೃತ ಭಾಷೆಯಾಗಿ ಸ್ವೀಕರಿಸದಿರುವ ರಾಜ್ಯಗಳೆಲ್ಲ ಇಂಗ್ಲಿಷಿನ ಮುಂದುವರಿಕೆ ಅಗತ್ಯವಿಲ್ಲವೆಂದು ತಂತಮ್ಮ ವಿಧಾನಸಭೆಗಳಲ್ಲಿ ನಿರ್ಣಯ ಮಾಡುವವರೆಗೂ ಈ ಸ್ಥಿತಿ ಮುಂದುವರಿಯತಕ್ಕದ್ದು ಎಂಬುದಾಗಿ

ಅಧಿಕೃತ ಭಾಷಾ ಅಧಿನಿಯಮ ಹೇಳುತ್ತದೆ.

ಆದ್ದರಿಂದ ರಾಜ್ಯದಿಂದ ಹೊರಗೂ ಹಬ್ಬಿರುವ ಬ್ಯಾಂಕಿಂಗ್ ಸಂಸ್ಥೆಗಳು ಇಲ್ಲಿಯ ಜನಕ್ಕೆ ನ್ಯಾಯ ಸಲ್ಲಿಸುವ ಹಾಗೂ ತಮ್ಮ ಕಲಾಪಗಳನ್ನು ಸಾರ್ಥಕಗೊಳಿಸುವ ದೃಷ್ಟಿಯಿಂದ ಈ ಸೂತ್ರಗಳನ್ನು ಸ್ಥೂಲವಾಗಿ ಅನುಸರಿಸುವುದು ಯುಕ್ತವೆಂದು ಕಾಣುತ್ತದೆ. ರಾಜ್ಯದೊಳಗಣ ವ್ಯವಹಾರಗಳೆಲ್ಲ ಇಲ್ಲಿಯ ಅಧಿಕೃತ ಭಾಷೆಯಾದ ಕನ್ನಡದಲ್ಲೇ ನಡೆಯಲಿ. ಇಲ್ಲಿಯ ಬ್ಯಾಂಕಿಂಗ್ ಕಛೇರಿಗಳು ತಮ್ಮ ಲೆಕ್ಕ ಪತ್ರಗಳನ್ನು ಕನ್ನಡದಲ್ಲೇ ಇಡುವುದು ಸಾಧು. ಇತರ ರಾಜ್ಯಗಳ ಶಾಖೆಗಳು ಹಾಗೂ ಕೇಂದ್ರ ಕಛೇರಿಯೊಡನೆ ವ್ಯವಹಾರ ಇಂಗ್ಲಿಷ್ ಮತ್ತು ಸಾಧ್ಯವಾದಂತೆಲ್ಲ ಹಿಂದಿಯಲ್ಲಿ ನಡೆಯಬಹುದು. ಕೇಂದ್ರದ ಕೆಲವರ ಅವಗಾಹನೆಯ ಅಗತ್ಯದ ಕಾರಣವನ್ನೊಡ್ಡಿ ಇಲ್ಲಿಯ ಎಲ್ಲ ವ್ಯವಹಾರಗಳನ್ನೂ ಜನಸಾಮಾನ್ಯರಿಗೆ ತಿಳಿಯದ ಭಾಷೆಯಲ್ಲಿ ನಡೆಸುವುದರಿಂದ ಯಾವ ಪುರುಷಾರ್ಥವೂ ಸಾಧಿಸುವುದಿಲ್ಲ. ಪ್ರತಿಯಾಗಿ ವಿಪರೀತ ಹಿಂಸೆಯೇ ಆಗುತ್ತದೆ.

ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾದಂದಿನಿಂದ ಈಚೆಗೆ ಅವುಗಳ ದೃಷ್ಟಿ, ಧೋರಣೆ, ಸ್ವರೂಪ ಹಾಗೂ ವ್ಯವಹಾರಗಳಲ್ಲಿ ಆಗಿರುವ ಕ್ರಾಂತಿಕಾರಕ ಬದಲಾವಣೆಗಳ ನಿಟ್ಟಿನಿಂದಲೂ ಈ ಬ್ಯಾಂಕುಗಳು ಪ್ರಾದೇಶಿಕ ಭಾಷೆಗಳನ್ನು ಬಳಸುವುದು ಅತ್ಯವಶ್ಯ. ಹಿಂದೆ ಬ್ಯಾಂಕುಗಳು ಮಧ್ಯಮ ಹಾಗೂ ಉನ್ನತ ವರ್ಗಗಳ ಸಂಸ್ಥೆಗಳಾಗಿದ್ದುವು. ಅವುಗಳ ಶಾಖೆಗಳೂ ಕಲಾಪಗಳೂ ಬಹುತೇಕ ನಗರಗಳಿಗೇ ಸೀಮಿತವಾಗಿದ್ದುವು. ಅವುಗಳೊಂದಿಗೆ ವ್ಯವಹಾರ ನಡೆಸುವವರು ಸಾಮಾನ್ಯವಾಗಿ ಇಂಗ್ಲಿಷ್ ತಿಳಿದವರಾಗಿದ್ದರು. ಇಂಗ್ಲಿಷ್ ತಿಳಿಯದೆಂದು ಹೇಳಿಕೊಳ್ಳುವುದೂ ಅವಮಾನಕರವೆಂಬ ಭಾವನೆ ಇದ್ದ ಕಾಲವದು. ಇಂದು ಪರಿಸ್ಥಿತಿ ಬದಲಾಗಿದೆ. ಬ್ಯಾಂಕುಗಳು ಇಂದು ವರ್ಗಪ್ರಜ್ಞೆಯನ್ನು ತೊಡೆದು ಸಮೂಹಪ್ರಜ್ಞೆಯನ್ನು ಬೆಳಸಿಕೊಳ್ಳುತ್ತಿವೆ. ಜನಸಾಮಾನ್ಯರ ಆರ್ಥಿಕ, ಸಾಮಾಜಿಕ ಉತ್ಥಾನದ ಹೊಣೆ ಬ್ಯಾಂಕುಗಳದು. ಅಂತೆಯೇ ಇಂದು ಗ್ರಾಮಪ್ರದೇಶಗಳಲ್ಲಿ ಬ್ಯಾಂಕು ಶಾಖೆಗಳು ಹೆಚ್ಚು ಹೆಚ್ಚಾಗಿ ತೆರೆಯುತ್ತಿವೆ. ಇಂದು ವಾಣಿಜ್ಯ ಬ್ಯಾಂಕುಗಳಿಗೆ ವಾಣಿಜ್ಯ ದೃಷ್ಟಿಗಿಂತ, ಲಾಭ ದೃಷ್ಟಿಗಿಂತ ಸೇವಾದೃಷ್ಟಿಯೇ ಮುಖ್ಯವಾಗಿದೆ. ಇಪ್ಪತ್ತು ಅಂಶಗಳ ಕಾರ್ಯಕ್ರಮ, ಸಮಗ್ರ ಗ್ರಾಮೀಣ ಅಭಿವೃದ್ಧಿಯೋಜನೆ, ಹಳ್ಳಿಗಳ ದತ್ತು ಸ್ವೀಕಾರ, ಅಗ್ರ ಬ್ಯಾಂಕಿಂಗ್ ಪರಿಕಲ್ಪನೆ ಮುಂತಾದವೆಲ್ಲ ಸಫಲವಾಗಬೇಕಾದರೆ ಬ್ಯಾಂಕುಗಳು ಹಳ್ಳಿಗರೊಂದಿಗೆ ಅವರ ಭಾಷೆಯಲ್ಲಿ ವ್ಯವಹರಿಸುವುದು ಅತ್ಯಗತ್ಯ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಂತೂ ಕನ್ನಡಮಯವೇ ಆಗಬೇಕಾಗುತ್ತದೆ.

ಹಳ್ಳಿಗಳ ಸ್ನೇಹಿತ ದಾರ್ಶನಿಕ ಮಾರ್ಗದರ್ಶಿ ಆಗಬಯಸುವ ಬ್ಯಾಂಕು ಅವರನ್ನು ಅರ್ಥಮಾಡಿಕೊಳ್ಳಬೇಕಾದರೆ, ಅವರು ಬ್ಯಾಂಕನ್ನು ಅರಿತುಕೊಳ್ಳಬೇಕಾದರೆ ಅದು ಅವರ ಭಾಷೆಯಲ್ಲೇ ವ್ಯವಹಾರ ನಡೆಸಬೇಕಾದ್ದು ಅನಿವಾರ್ಯ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ನಮೂನೆಗಳನ್ನು ಕನ್ನಡದಲ್ಲಿ ಅಚ್ಚುಹಾಕಿಸಿಗದ ಮಾತ್ರಕ್ಕೆ ಇದು ಆಗದು. ಬ್ಯಾಂಕಿನದು ಕನ್ನಡತನವಾಗಬೇಕು, ಕನ್ನಡ ಮನವಾಗಬೇಕು. ಕನ್ನಡ ಅರಿಯದವರು ಗ್ರಾಮೀಣ ಶಾಖೆಗಳಲ್ಲಿ ಕುಳಿತು ಕನ್ನಡದಲ್ಲಿ ವ್ಯವಹಾರ ನಡೆಸಲಾರರು. ಅವರ ಲೆಕ್ಕ ಪತ್ರಗಳೆಲ್ಲ ಇಂಗ್ಲಿಷಿನಲ್ಲೊ ಹಿಂದಿಯಲ್ಲೋ ಇದ್ದು ನಾಲ್ಕಾರು ನಮೂನೆಗಳು ಮಾತ್ರ ಕನ್ನಡದಲ್ಲಿದ್ದರೆ ಅದರಿಂದ ಕನ್ನಡ ವಾತಾವರಣ ಮೂಡದು. ಬ್ಯಾಂಕ್ ಕಛೇರಿಗೆ ಬರುವ ಶ್ರೀಸಾಮಾನ್ಯನಲ್ಲಿ ಅನಾಥಪ್ರಜ್ಞೆ ಮೂಡುವಂತಾಗಬಾರದು; : ತಾನೊಬ್ಬ ಪರಕೀಯ ಎನಿಸ ಬಾರದು. ಬ್ಯಾಂಕಿರುವುದು ತನಗಾಗಿ, ಬ್ಯಾಂಕಿನಲ್ಲಿರುವವರು ತನ್ನವರು ಎನಿಸಿದಾಗಲೇ ಬ್ಯಾಂಕಿನ ಸಾಮಾಜಿಕ ಉದ್ದೇಶ ಸಾರ್ಥಕವಾಗುತ್ತದೆ. ಇಂದು ಬ್ಯಾಂಕುಗಳು ಈ ನಿಟ್ಟಿನಲ್ಲಿ ಸಾಕಷ್ಟು ಯಶಸ್ವಿಯಾಗದಿದ್ದರೆ ಅದಕ್ಕೆ ಭಾಷೆಯ ತೊಡಕು ಒಂದು ಮುಖ್ಯ ಕಾರಣವೆಂಬುದನ್ನು ಮರೆಯುವಂತಿಲ್ಲ.

ಕನ್ನಡ ಬಳಕೆಯನ್ನು ಗ್ರಾಮೀಣ ಬ್ಯಾಂಕುಗಳಿಗೆ ಮಾತ್ರ ಸೀಮಿತಗೊಳಿಸುವುದರಲ್ಲಿ ಅರ್ಥವಿಲ್ಲ. ಕರ್ನಾಟಕದಲ್ಲಿರುವ ಎಲ್ಲ ಕಛೇರಿಗಳಲ್ಲೂ ಇದು ಬಂದಾಗ ಮಾತ್ರ ಇದಕ್ಕೆ ಮರ್ಯಾದೆ ಪ್ರಾಪ್ತವಾಗುತ್ತದೆ. ಕನ್ನಡವನ್ನು ಬಳಸಿದರೆ ತನ್ನನ್ನು ಇತರರು ಹಳ್ಳಿಗನೆಂದು ಭಾವಿಸುವರೆಂಬ ಭಾವನೆ ಗ್ರಾಹಕನಲ್ಲಿ ಮೂಡಬಾರದು. ಎಲ್ಲ ಬ್ಯಾಂಕ್ ಶಾಖೆಗಳಲ್ಲಿ ಕನ್ನಡದ ನಮೂನೆಗಳು ಲಭ್ಯವಾಗಬೇಕು. ಕನ್ನಡ ಬಾರದ, ಅನ್ಯರಾಜ್ಯಗಳಿಂದ ಬಂದ ಗ್ರಾಹಕರಿಗೆ ಇಂಗ್ಲಿಷ್ ಅಥವಾ ಹಿಂದಿಯ ನಮೂನೆಗಳನ್ನು ಕೊಡಬಹುದು. ಕನ್ನಡವನ್ನು ಕಡ್ಡಾಯವಾಗಿ ಹೇರಬೇಕೆಂದೇನೂ ಅಲ್ಲ. ಆದರೆ ಕನ್ನಡವನ್ನು ಬಳಸುವುದು ಸಹಜವಾಗುವಂತೆ ಅದಕ್ಕೆ ಅಗತ್ಯವಾದ ವಾತಾವರಣವನ್ನು ಸೃಷ್ಟಿಸುವುದು ಮುಖ್ಯ.

ಕರ್ನಾಟಕದ ಬ್ಯಾಂಕ್ ಕಛೇರಿಗಳಲ್ಲಿ ಕನ್ನಡವನ್ನು ಜಾರಿಗೆ ತರುವುದು ಏನೇನೂ ಕಷ್ಟವಿಲ್ಲ. ಬ್ಯಾಂಕುಗಳ ವ್ಯವಹಾರ ಬಹುತೇಕ ಅಚ್ಚಾದ ನಮೂನೆಗಳನ್ನು ತುಂಬುವುದರ ಮೂಲಕವೇ ನಡೆಯುತ್ತದೆ. ಬ್ಯಾಂಕುಗಳು ಸಾಮಾನ್ಯವಾಗಿ ಬರೆಯುವ ಅನೇಕ ಪತ್ರಗಳೂ ಅಚ್ಚಾಗಿರುತ್ತವೆ. ಇವನ್ನೆಲ್ಲ ಪ್ರಾದೇಶಿಕ ಭಾಷೆಯಲ್ಲಿ ಅಚ್ಚು ಹಾಕಿಸಿದರೆ ಸಾಕು. ಬ್ಯಾಂಕ್ ಆಗಲಿ, ಗ್ರಾಹಕರಾಗಲಿ, ಸಾರ್ವಜನಿಕರಲ್ಲಿ ಯಾರೇ ಆಗಲಿ ಸಂಬಂಧಪಟ್ಟ ನಮೂನೆಯನ್ನು

ಸುಲಭವಾಗಿ ತುಂಬಬಹುದು. ಕಾನೂನಿನ ದೃಷ್ಟಿಯಿಂದಲೂ ಇದು ಯಾವ ತೊಡಕನ್ನೂ ಗೊಂದಲವನ್ನೂ ಉಂಟು ಮಾಡುವುದಿಲ್ಲ. ಚೆಕ್ಕು, ಪಾಸುಬುಕ್ಕು, ಜಮಾಪಟ್ಟಿ, ಖಾತೆ ತೆರೆಯಲು ಅರ್ಜಿ, ಠೇವಣಿ ಪತ್ರಗಳು ಮುಂತಾದ ಎಲ್ಲವೂ ಕನ್ನಡದಲ್ಲಿದ್ದರೆ, ಬ್ಯಾಂಕುಗಳಲ್ಲಿ ಪ್ರಾದೇಶಿಕ ಭಾಷೆ ಬಹಳ ಮಟ್ಟಿಗೆ ಬಂದಹಾಗೆಯೇ ಆಗುತ್ತದೆ. ಕರಾರುಗಳು, ಕಾನೂನಿನ ಪತ್ರಗಳು, ದಸ್ತಾವೇಜುಗಳು ಇವನ್ನೆಲ್ಲ ತಜ್ಞರ ನೆರವಿನಿಂದ ಒಂದು ಸಾರಿ ಕನ್ನಡಿಸಿಕೊಂಡರೆ ಅವು ಎಂದೆಂದಿಗೂ ಬಳಕೆಗೆ ಬರುತ್ತವೆ. ಬಹುತೇಕ ಎಲ್ಲ ಬ್ಯಾಂಕುಗಳೂ ಇವನ್ನೇ ಬಳಸಬಹುದಾದ್ದರಿಂದ ತೊಂದರೆಯೇನೂ ಇರುವುದಿಲ್ಲ. ಏಕರೂಪತೆಯೂ ಸಾಧಿಸುತ್ತದೆ.

ಬ್ಯಾಂಕುಗಳಲ್ಲಿ ಬಳಸಲಾಗುವ ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲಿ ಸಮಾನ ಪದಗಳನ್ನು ರೂಪಿಸುವುದೇನೂ ಕಷ್ಟವಲ್ಲ. ರಾಜ್ಯದಲ್ಲಿ ಕಾರ್ಯಪ್ರವೃತ್ತವಾಗಿರುವ ಅನೇಕ ಸಹಕಾರಿ ಬ್ಯಾಂಕುಗಳು ಬಹಳ ಹಿಂದಿನಿಂದಲೂ ಕನ್ನಡದಲ್ಲಿ ವ್ಯವಹಾರ ನಡೆಸುತ್ತಿವೆ. ವಾಣಿಜ್ಯ ಬ್ಯಾಂಕುಗಳು ಬಳಸುತ್ತಿರುವಂಥ ಹಲವಾರು ನಮೂನೆಗಳನ್ನು ಅವು ಬಳಸುತ್ತಿವೆ. ಅವು ಕನ್ನಡದಲ್ಲೇ ಇವೆ. ಸಹಕಾರಿ ಬ್ಯಾಂಕುಗಳ ಮೇಲ್ಪಂಕ್ತಿಯನ್ನು ರಾಜ್ಯದಲ್ಲಿ ಸ್ಥಾಪಿತವಾದ, ರಾಜ್ಯಕ್ಕೆ ಸೀಮಿತವಾದ ಇತರ ಸಂಸ್ಥೆಗಳೂ ಕೂಡಲೇ ಅನುಸರಿಸುವುದರಲ್ಲಿ ಏನೂ ತೊಂದರೆಯಿಲ್ಲ. ಈಗಾಗಲೇ ಬಳಕೆಯಲ್ಲಿರದ ಶಬ್ದಗಳನ್ನು ಸೃಷ್ಟಿಸುವುದರಲ್ಲಿ ಏನೇನೂ ತೊಡಕಿಲ್ಲ. ಪಾರಿಭಾಷಿಕ ಪದಗಳ ಸೃಷ್ಟಿಯನ್ನು ಕುರಿತಂತೆ ಮುಖ್ಯವಾಗಿ ಮೂರು ಸೂತ್ರಗಳನ್ನು ಅನುಸರಿಸಬಹುದು. ಎಲ್ಲೆಲ್ಲಿ ನಮ್ಮಲ್ಲಿ ಈಗಾಗಲೇ ಪದಗಳು ಬಳಕೆಯಲ್ಲಿವೆಯೋ ಅಲ್ಲಲ್ಲಿ ಅವನ್ನೇ ಬಳಸಬಹುದು. ಜನರಲ್ಲಿ ರೂಢಿಯಲ್ಲಿರುವ ಪದಗಳನ್ನು ಸ್ವೀಕರಿಸಿ, ಅವಕ್ಕೆ ಹೊಸ ಅರ್ಥಗಳನ್ನು ತುಂಬಿ ಚಲಾವಣೆಗೆ ತರಬಹುದು. ಇನ್ನು ಕೆಲವು ಪದಗಳನ್ನು ನಾವು ಸಂಸ್ಕೃತದಿಂದ ಎತ್ತಿಕೊಳ್ಳಬಹುದು. ಉರ್ದು, ಪರ್ಷಿಯನ್, ಹಿಂದಿ, ಮರಾಠಿ, ಇಂಗ್ಲಿಷ್ ಮುಂತಾದ ಭಾಷೆಗಳ ಪದಗಳೆಷ್ಟೋ ಈಗಾಗಲೇ ವಾಣಿಜ್ಯ ಕ್ಷೇತ್ರದಲ್ಲಿ ಬಳಕೆಯಲ್ಲಿವೆ. ಉದರಿ, ನಗದು, ಬ್ಯಾಂಕು, ಚೆಕ್ಕು, ಡ್ರಾಫ್ಟ್ ಮುಂತಾದ ಪದಗಳನ್ನು ಕನ್ನಡದವಲ್ಲವೆಂದು ಹೇಳುವುದಾಗದು. ಪಾರಿಭಾಷಿಕ ಪದಗಳು ಸಂಕೇತಗಳು ಮಾತ್ರ ಕನ್ನಡ ವಾಕ್ಯದ ಶಿಲ್ಪ ಕೆಡದಂತೆ, ಭಾಷಾ ಮರ್ಯಾದೆಗೆ ಭಂಗ ಬಾರದಂತೆ, ಜನ ಸ್ವೀಕರಿಸಬಹುದಾದ, ಯಾವುದೇ ಭಾಷೆಯ ಶಬ್ದಗಳನ್ನು ಎತ್ತಿಕೊಳ್ಳಬಹುದು. ಸಂವಹನವೇ ಮುಖ್ಯವಾದ ಗುರಿ, ಕಿವಿಯೇ ಅತ್ಯುತ್ತಮ ತೀರ್ಪುಗಾರ.

ಪಾರಿಭಾಷಿಕ ಪದಗಳನ್ನು ರೂಪಿಸುವಲ್ಲಿ ಸಾಧ್ಯವಾದ ಮಟ್ಟಿಗೆ ಅಖಿಲ ಭಾರತ

ದೃಷ್ಟಿಯನ್ನು ಇಟ್ಟುಕೊಂಡಿರಬೇಕಾದ್ದು ಅಗತ್ಯ. ಕರ್ನಾಟಕದಲ್ಲಿ ಬ್ಯಾಂಕುಗಳ ವ್ಯವಹಾರದ ಭಾಷೆ ಕನ್ನಡವಾಗಬೇಕು ಎನ್ನುವುದು ಕೇವಲ ಅಭಿಮಾನದ ಮಾತಲ್ಲ; ಸೌಕರ್ಯದ, ಸೌಲಭ್ಯದ ಮಾತು. ನಾವೇನೂ ನಮ್ಮದೇ ಆದ ದ್ವೀಪವೊಂದನ್ನು ನಿರ್ಮಿಸಿಕೊಳ್ಳಬೇಕೆಂದೇನೂ ಅಲ್ಲ. ಸಾಧ್ಯವಾದರೆ ಭಾರತದ ಇತರ ಭಾಷೆಗಳಲ್ಲಿ ಚಾಲ್ತಿಯಲ್ಲಿರುವ ಶಬ್ದಗಳನ್ನು ನಾವು ಸ್ವೀಕರಿಸುವುದರಲ್ಲಿ ತಪ್ಪೇನೂ ಇಲ್ಲ. ಕೇಂದ್ರದ ಅಧಿಕೃತ ಭಾಷಾ ವಿಭಾಗದ ಆಶ್ರಯದಲ್ಲಿ ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ ಮುಂತಾದ ಎಲ್ಲ ವಿಷಯಗಳ ಪಾರಿಭಾಷಿಕ ಪದಗಳಿಗೆ ಭಾರತದ ವಿವಿಧ ಭಾಷೆಗಳ ಸಮಾನ ಪದಗಳನ್ನು ಗುರುತಿಸಿ, ಸಾಧ್ಯವಾದರೆ ಬಹುತೇಕ ಭಾಷೆಗಳಿಗೆ ಒಪ್ಪಿಗೆಯಾಗುವ ಅಖಿಲ ಭಾರತ (ಪ್ಯಾನ್–ಇಂಡಿಯನ್) ಪಾರಿಭಾಷಿಕ ಪದಗಳ ಪಟ್ಟಿಯ ನಿರ್ಮಾಣ ಮಾಡುವ ಕಾರ್ಯ ನಡೆದಿದೆ. ಇದು ಕೂಡ ನಮಗೆ ನೆರವಾಗಬಲ್ಲುದು.

ನಮ್ಮ ದೇಶದ ಅತ್ಯಂತ ಹಿರಿಯ ಹಾಗೂ ಪ್ರತಿಷ್ಠೆಯ ಬ್ಯಾಂಕಾದ ಭಾರತೀಯ ಸ್ಟೇಟ್ ಬ್ಯಾಂಕಿನ ಕರ್ನಾಟಕ ವಲಯದ ಶಾಖೆಗಳ ಕನ್ನಡಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ಈ ದಿಸೆಯಲ್ಲಿ ಮಾಡಿರುವ ಕೆಲಸವನ್ನು ಇಲ್ಲಿ ಉಲ್ಲೇಖಿಸುವುದು ಅಪ್ರಕೃತವಾಗಲಾರದು. ಕನ್ನಡದಲ್ಲಿ ಬ್ಯಾಂಕ್ ವ್ಯವಹಾರಗಳನ್ನು ನಡೆಸುವುದರಲ್ಲಿ ಬ್ಯಾಂಕಿಂಗ್ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಚಿಂತಿಸುವುದರಲ್ಲಿ ಆಸಕ್ತಿಯುಳ್ಳವರಿಗಾಗಿ ವರ್ಷಕ್ಕೆ ಎರಡು ಕಮ್ಮಟಗಳನ್ನು ನಡೆಸಲಾಗುತ್ತಿದೆ. ಪ್ರತಿಯೊಂದು ಕಮ್ಮಟದಲ್ಲಿ ಸುಮಾರು ಹದಿನೈದು ಮಂದಿ ಭಾಗಿಗಳು ಇರುತ್ತಾರೆ. ಬ್ಯಾಂಕಿಂಗ್ ಕುರಿತು ಪಾರಿಭಾಷಿಕ ಪದಗಳನ್ನು ಕನ್ನಡದಲ್ಲಿ ಟಂಕಿಸುವುದು ಅಥವಾ ರೂಪಿಸುವುದು, ಬ್ಯಾಂಕಿಂಗ್ ಪರಿಕಲ್ಪನೆಗಳನ್ನು ಕನ್ನಡದಲ್ಲಿ ವಿವರಿಸುವುದು, ಬ್ಯಾಂಕಿಂಗ್ ವಿಚಾರಗಳನ್ನು ಕುರಿತ ಪ್ರಬಂಧಗಳನ್ನು ಕನ್ನಡದಲ್ಲಿ ಬರೆಯುವುದು, ಇಂಗ್ಲಿಷ್ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸುವುದು – ಈ ಕೆಲಸವನ್ನು ಈ ಕಮ್ಮಟಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಭಾರತದ ಬೇರೆ ಯಾವ ಭಾಷೆಯಲ್ಲೂ ಸ್ವಯಂಪ್ರೇರಣೆಯಿಂದ ಇಂಥ ಕೆಲಸ ನಡೆಯುತ್ತಿಲ್ಲವೆಂದರೆ ತಪ್ಪಾಗದು. ಹಣ ಬ್ಯಾಂಕಿಂಗ್‌ಗಳಿಗೆ ಮೀಸಲಾದ 'ಬ್ಯಾಂಕಿಂಗ್ ಪ್ರಪಂಚ' ಎಂಬ ವಿದ್ವತ್ ಪತ್ರಿಕೆಯೊಂದು ಪ್ರಕಟವಾಗುತ್ತಿದೆ. ಬೇರೆ ಯಾವ ಭಾರತೀಯ ಭಾಷೆಯಲ್ಲೂ ಇಂಥ ಪತ್ರಿಕೆಯೊಂದು ಪ್ರಕಟವಾಗುತ್ತಿಲ್ಲವೆಂದು ನನ್ನ ತಿಳಿವಳಿಕೆ. ಸಮನ್ವಯ ಸಮಿತಿಯ ಆಶ್ರಯದಲ್ಲಿ ಬ್ಯಾಂಕಿಂಗ್ ಕುರಿತ ಪಾರಿಭಾಷಿಕ ಪದಗಳ ಕೋಶ ಈಗಾಗಲೇ ತಯಾರಾಗಿ ಪುಸ್ತಕರೂಪದಲ್ಲಿ ಪ್ರಕಟಣೆಗೆ ಸಿದ್ಧವಾಗಿದೆ. 'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಈ ಪಾರಿಭಾಷಿಕ ಪದಗಳ ಪಟ್ಟಿಯೂ ಅರ್ಥ ವಿವರಣೆಯೂ

ಅನುಕ್ರಮವಾಗಿ ಪ್ರಕಟವಾಗುತ್ತಿವೆ. ಬ್ಯಾಂಕುಗಳಲ್ಲಿ ಬಳಸಲಾಗುವ ಎಲ್ಲ ಮುಖ್ಯ ನಮೂನಗಳನ್ನೂ ಕನ್ನಡಕ್ಕೆ ತರಲಾಗಿದೆ. ಇವೂ ಪುಸ್ತಕರೂಪದಲ್ಲಿ ಪ್ರಕಟನೆಗೆ ಸಿದ್ಧವಾಗಿವೆ. ಇದುವರೆಗೆ ಮೈಸೂರು, ಶಿವನ ಸಮುದ್ರ, ಶಿರಸಿ ಹಾಗೂ ಹೊಸಪೇಟೆಯಲ್ಲಿ ಕಮ್ಮಟಗಳು ನಡೆದಿವೆ. ಐದನೆಯದು ಮೇ ತಿಂಗಳ ಕೊನೆಯ ವಾರದಲ್ಲಿ ಮಡಿಕೇರಿಯಲ್ಲಿ ಸೇರಲಿದೆ. ಪ್ರತಿಯೊಂದು ಕಮ್ಮಟದ ಆರು ದಿನಗಳು, ಕನ್ನಡದಲ್ಲಿ ಹಣ ಹಾಗೂ ಬ್ಯಾಂಕಿಂಗ್ ಕುರಿತು ಚಿಂತಿಸಬಲ್ಲ, ಬರೆಯಬಲ್ಲ ತರುಣರ ತಂಡವೊಂದು ತರಬೇತಾಗಿದೆ. ಯಾವುದೇ ಪ್ರಚಾರದಲ್ಲಿ ತೊಡಗದೆ ಗಟ್ಟಿಯಾದ ಅರ್ಥಪೂರ್ಣವಾದ ಕೆಲಸ ಮಾಡುವುದರಲ್ಲಿ ಈ ತರುಣರ ನಂಬಿಕೆ. ಬ್ಯಾಂಕುಗಳಲ್ಲಿ ಉನ್ನತ ವ್ಯವಸ್ಥಾಪಕವರ್ಗದ ನಿರುತ್ತೇಜನದ ಎದುರಿನಲ್ಲಿ ಒಂದು ಕೆಲಸ ನಡೆದಿದೆಯೆಂಬುದನ್ನು ನೆನಸಿಕೊಂಡಾಗ, ಕನ್ನಡದಲ್ಲಿ ಏನನ್ನಾದರೂ ಸಾಧಿಸಬಹುದು ಎಂಬ ನಂಬಿಕೆ ಮೂಡುತ್ತದೆ. ಇದೇ ಮಾದರಿಯ ಕಮ್ಮಟವೊಂದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲೂ ಕೆಲವು ತಿಂಗಳ ಹಿಂದೆ ನಡೆಸಲಾಯಿತು. ಈ ಶಿಬಿರದ ಬ್ಯಾಂಕುಗಳ ವ್ಯವಸ್ಥಾಪಕವರ್ಗದ ಆಸಕ್ತಿ ಮೂಡಿಸುವುದು ಕಷ್ಟವೇ ಆಯಿತು. ಈ ಶಿಬಿರದ ಭಾಗಿಗಳಲ್ಲಿ ಮೊದಮೊದಲು ಸಂದೇಹವೇ ಇದ್ದಾಗ್ಯೂ ಇದರ ಅನುಭವ ಪಡೆದ ಮೇಲೆ ಅವರಲ್ಲಿ ಮೂಡಿದ ಉತ್ಸಾಹ ಅಸಾಧಾರಣ. ರಾಜ್ಯ ಸರ್ಕಾರದ ಈ ಪ್ರಯತ್ನಕ್ಕೆ ಬ್ಯಾಂಕುಗಳ ವ್ಯವಸ್ಥಾಪಕ ವರ್ಗದಿಂದ ಇನ್ನಷ್ಟು ಬೆಂಬಲ ದೊರಕಿದರೆ ನಿಜಕ್ಕೂ ದೇಶವನ್ನು ಕಟ್ಟುವ ಕೆಲಸ ಸಾಧಿಸಿದಂತಾಗುತ್ತದೆ.

ಬ್ಯಾಂಕಿಂಗ್ ಕ್ಷೇತ್ರ ಇಂದು ಅಗಾಧವಾಗಿ ಬೆಳೆಯುತ್ತಿದೆ, ವೈವಿಧ್ಯಮಯವಾಗುತ್ತಿದೆ. ಭಾರತದಲ್ಲಿ ಮಾತ್ರವೇ ಅಲ್ಲ, ಪ್ರಪಂಚದಲ್ಲೇ ಹೊಸ ಹೊಸ ಸೇವೆಗಳೂ ಪರಿಕಲ್ಪನೆಗಳೂ ಪಾರಿಭಾಷಿಕ ಪದಗಳೂ ಹುಟ್ಟಿಕೊಳ್ಳುತ್ತಿವೆ. ಇವನ್ನೆಲ್ಲ ಕನ್ನಡದಲ್ಲಿ ಬಳಸುವುದೂ ಅಗತ್ಯವಾಗುತ್ತಿದೆ. ರಾಜ್ಯದಲ್ಲಿ ಎಲ್ಲ ಬ್ಯಾಂಕ್ ವ್ಯವಹಾರಗಳೂ ಕನ್ನಡದಲ್ಲೇ ನಡೆಯುವ ಕಾಲ ಬಂದಾಗ, ಈ ಹೊಸ ಸೇವೆಗಳನ್ನೂ ಪರಿಕಲ್ಪನೆಗಳನ್ನೂ ಕನ್ನಡದಲ್ಲಿ ವಿವರಿಸುವುದಾಗಲಿ, ಕನ್ನಡ ಪಾರಿ ಭಾಷಿಕ ಪದಗಳ ಸೃಷ್ಟಿಯಾಗಲಿ ಕಷ್ಟವೆನಿಸುವುದಿಲ್ಲ. ಕನ್ನಡದಲ್ಲಿ ಚಿಂತನೆ ನಡೆದಾಗ ಬರವಣಿಗೆ ಹಾಗೂ ಪಾರಿಭಾಷಿಕ ಪದಗಳ ಸೃಷ್ಟಿಗಳು ಸಹಜ ಪ್ರಕ್ರಿಯೆಗಳಾಗುತ್ತವೆ. ಇವು ಕೈಗಾರಿಕಾಕ್ಷೇತ್ರದ ತಂತ್ರಜ್ಞಾನವಿದ್ದಂತೆ. ಸಂಶೋಧನೆ ಪ್ರಯೋಗಗಳು ನಮ್ಮಲ್ಲೇ ನಡೆದಾಗ ತಂತ್ರಜ್ಞಾನ ತಾನಾಗಿಯೇ ವಿಕಾಸಹೊಂದುತ್ತದೆ. ಇವು ಇಲ್ಲದಾಗ ತಂತ್ರಜ್ಞಾನವನ್ನು ಅನ್ಯದೇಶಗಳಿಂದ ಆಮದು ಮಾಡಿಕೊಳ್ಳುತ್ತಲೇ ಇರಬೇಕಾಗುತ್ತದೆ. ಅದು ಎಂದೂ ನಮ್ಮದಾಗುವುದಿಲ್ಲ. ಪಾರಿಭಾಷಿಕ

ಪದಗಳೂ ಹಾಗೆಯೇ. ನಮ್ಮ ಭಾಷೆಯಲ್ಲಿ ಚಿಂತನೆ, ವ್ಯವಹಾರ ನಡೆದಾಗ ಅಗತ್ಯಕ್ಕೆ ತಕ್ಕಂತೆ ಪಾರಿಭಾಷಿಕ ಪದಗಳು ತಾವಾಗಿಯೇ ಹುಟ್ಟಿಕೊಳ್ಳುತ್ತವೆ. ಎರವಲು ಅಥವಾ ಅನುವಾದ ಅಗತ್ಯವಾಗುವುದಿಲ್ಲ. ಬ್ಯಾಂಕಿಂಗ್ ಜೀವಂತವಾಗಿರಬೇಕಾದರೆ ಅದಕ್ಕೆ ಆಯಾ ಪ್ರದೇಶದ ಭಾಷೆಯ ನೀರು, ಗೊಬ್ಬರ ಎರೆಯುವುದು ಅಗತ್ಯ. ಇದನ್ನು ನಮ್ಮ ಬ್ಯಾಂಕಿಂಗ್ ಪ್ರಭೃತಿಗಳು ಅರಿಯುವುದು ಅನಿವಾರ್ಯ. ಈ ಅರಿವು ಎಷ್ಟು ಬೇಗ ಬಂದರೆ ಅಷ್ಟು ಒಳ್ಳೆಯದು. ಇಲ್ಲದಿದ್ದರೆ ಅದು ದೇಶದ ದೌರ್ಭಾಗ್ಯ.

ನಾನು ಈ ವಿಚಾರವನ್ನು ಇಷ್ಟೊಂದು ವಿಶದವಾಗಿ, ಇಷ್ಟೊಂದು ಭಾವಪರವಶತೆಯಿಂದ ಹೇಳುವುದಕ್ಕೆ ಕಾರಣವಿಲ್ಲದೆ ಇಲ್ಲ. ನಮ್ಮ ಬ್ಯಾಂಕಿನಲ್ಲಿರುವ ಉನ್ನತ ಅಧಿಕಾರಿಗಳ ಮನೋಧರ್ಮ ಬದಲಾಗಬೇಕೆಂಬುದು ನನ್ನ ಕಳಕಳಿ. ಕನ್ನಡದ ಮಾತು ಬಂದಾಗ ಇವರಲ್ಲಿ ಅನೇಕರು ಅದು ರಾಷ್ಟ್ರವಿರೋಧಿ ಎಂಬಂತೆ ನಡುಗುತ್ತಾರೆ. ರಾಷ್ಟ್ರದಲ್ಲಿರುವ ಭಾಷೆಗಳೆಲ್ಲ ರಾಷ್ಟ್ರಭಾಷೆಗಳೇ. ರಾಷ್ಟ್ರದ ಯಾವುದೇ ಭಾಷೆಯಲ್ಲಿ ಬರೆದರೂ ಅದನ್ನು ಮಾನ್ಯ ಮಾಡುವುದೇ ನಿಜವಾದ ರಾಷ್ಟ್ರೀಯ ಧೋರಣೆ. ಬ್ರಿಟಿಷ್ ಸಾಮ್ರಾಜ್ಯದ ಕಾಲದಲ್ಲಿ ನಮ್ಮ ಆಳರಸರು ಇಂಗ್ಲಿಷ್ ಬಿಟ್ಟು ಉಳಿದ ಭಾಷೆಗಳನ್ನು 'ವರ್ನಾಕ್ಯುಲರ್' ಎಂದು ಜರಿಯುತ್ತಿದ್ದರು. ಆದಾಗ್ಯೂ ಆಡಳಿತಾನುಕೂಲತೆಯ ದೃಷ್ಟಿಯಿಂದ ವರ್ನಾಕ್ಯುಲರ್‌ಗಳಿಗೆ ಇಷ್ಟಷ್ಟು ಅವಕಾಶವಿರುತ್ತಿತ್ತು. ಇಂದು ಆ ಅವಕಾಶವೂ ಇಲ್ಲ. ತಾತ್ಸಾರವಂತೂ ಅತಿಯಾಗಿದೆ. ಹಿಂದಿ ಅಥವಾ ಇಂಗ್ಲಿಷ್ ಬಿಟ್ಟು ಬೇರೆ ಭಾಷೆಗಳನ್ನು ತಿರಸ್ಕಾರದಿಂದ ಕಾಣುವುದು ಅನೇಕರಿಗೆ ಮಾಮೂಲಾಗಿಹೋಗಿದೆ. ಸಂವಿಧಾನ ಏನು ಹೇಳುತ್ತದೆ. ಅಧಿಕೃತ ಭಾಷೆಗಳ ಅಧಿನಿಯಮದ ಆಶಯವೇನು ಎಂಬುದನ್ನು ಇವರು ಅರಿಯರು. ಮೇಲಿನಿಂದ ಬರುವ ಸುತ್ತೋಲೆಗಳ ಕಣ್ಣು ಪಟ್ಟಿಯಿಂದಾಗಿ ಇವರಿಗೆ ದೃಷ್ಟಿಮಾಂದ್ಯ ಸಂಭವಿಸಿದೆ. ಕರ್ನಾಟಕವಿರಲಿ, ಅನ್ಯಭಾಷಾ ರಾಜ್ಯಗಳಲ್ಲಿ ಬ್ಯಾಂಕುಗಳು ಎಷ್ಟರಮಟ್ಟಿಗೆ ಸ್ಥಳೀಯ ಭಾಷೆಗಳನ್ನು ಬಳಸುತ್ತಿವೆಯೆಂಬುದನ್ನು ಕೂಡ ಇವರು ಯೋಚಿಸುವುದಿಲ್ಲ. ಕರ್ನಾಟಕದೊಳಗಿನ ಒಂದು ಬ್ಯಾಂಕಿಂಗ್ ಕಛೇರಿಯಿಂದ ಇನ್ನೊಂದು ಕಛೇರಿಯ ಮೇಲೆ ಬರೆಯಲಾದ ಬ್ಯಾಂಕ್ ಡ್ರಾಫ್ಟ್ ಕನ್ನಡದಲ್ಲಿದ್ದರೆ ಅದನ್ನು ಅನಾದರಿಸುವವರೆಗೆ ಕೆಲವರು ಹೋಗುತ್ತಾರೆ. ಕನ್ನಡಿಗರೇ ಇರುವ ಸ್ಥಳಗಳ ಬ್ಯಾಂಕುಗಳಲ್ಲಿ ತಮಿಳು ನಮೂನೆಗಳನ್ನು ಹಂಚುವವರ ಧಾರ್ಷ್ಟ್ಯವನ್ನು ಸಹಿಸುವುದು ಹೇಗೆ? ರಿಸರ್ವ್ ಬ್ಯಾಂಕಿನ ಮೇಲೆ ಸರ್ಕಾರ ಕನ್ನಡದಲ್ಲಿ ಬರೆದ ಚೆಕ್ಕನ್ನು ಅದೇಕೆ ಅನಾದರಿಸಬೇಕು? ಭಾರತದ ಯಾವುದೇ ಭಾಷೆಯಲ್ಲಿ ಬರೆದ ಚೆಕ್ಕನ್ನು, ಡ್ರಾಫ್ಟನ್ನು ಆ ಭಾಷೆಯ

ಪ್ರದೇಶದಲ್ಲಿ – ರಾಜ್ಯದಲ್ಲಿ – ಆದರಿಸುವುದರಲ್ಲೇನು ತಪ್ಪು? ಚೆಕ್ಕು-ಡ್ರಾಫ್ಟ್ ಗಳ ಬರಹ, ನೀಡಿಕೆ, ಪಾವತಿ, ವಸೂಲಿ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಕಾನೂನಾದ ಪರಕ್ರಾಮ್ಯ ಸಂಲೇಖಗಳ ಅಧಿನಿಯಮದಲ್ಲಿ (ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್) ಈ ಸಂಲೇಖಗಳು ಯಾವ ಭಾಷೆಯಲ್ಲಿರಬೇಕು, ಯಾವುದರಿಂದ ಬರೆಯಬೇಕು ಎಂಬಿವೇ ಮುಂತಾದ ಕಟ್ಟುಪಾಡುಗಳೇನನ್ನೂ ವಿಧಿಸಿಲ್ಲ. ಕಟ್ಟುಪಾಡುಗಳು ನಮ್ಮ ಅನುಕೂಲಕ್ಕಾಗಿ; ತೊಂದರೆಗಾಗಿಯಲ್ಲ. ಕನ್ನಡದಲ್ಲಿ ಸಹಿಮಾಡಿದರೆಂದು ಬ್ಯಾಂಕಿನ ಅಧಿಕಾರಿಯೊಬ್ಬರಿಗೆ ಮೇಲಿನವರು ಎಚ್ಚರಿಕೆ ನೀಡಿದ್ದೂ, ಅವರ ಬಡತಿಯನ್ನು ತಡೆಹಿಡಿದಿದ್ದೂ ಉಂಟು. ಇದೆಲ್ಲಾ ಅಜ್ಞಾನದ, ಅರ್ಧಜ್ಞಾನದ ಪರಿಣಾಮ. ಅನೇಕ ಬ್ಯಾಂಕುಗಳಲ್ಲಿ ಅಧಿಕೃತ ಭಾಷಾ ವಿಭಾಗವಿದೆ. ಅಧಿಕೃತ ಭಾಷೆಯೆಂದರೆ ಅವರ ದೃಷ್ಟಿಯಲ್ಲಿ ಹಿಂದಿಯೊಂದೇ! ಒಕ್ಕೂಟದ ಅಧಿಕೃತ ಭಾಷೆ ಹಿಂದಿಯೆಂಬುದು ಸರಿ. ಆದರೆ ಆಯಾ ರಾಜ್ಯಗಳ ಅಧಿಕೃತ ಭಾಷೆಗಳು ಎಲ್ಲಿ ಹೋಗಬೇಕು? ಅವುಗಳನ್ನು ಈ ಹಿಂದೆ ಹೇಳಿದ ವ್ಯಾಪ್ತಿಯಲ್ಲಿ ಬಳಸಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕೃತ ಭಾಷೆಗಳ ವಿಭಾಗವನ್ನು ವಿಸ್ತರಿಸಬೇಕು.

ಈ ವಿಚಾರದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕುಗಳ ವರ್ಷಗಳ ಹಿಂದೆಯೇ ಸ್ತುತ್ಯವಾದ ಕ್ರಮ ತೆಗೆದುಕೊಂಡಿತ್ತು. 1959ರಷ್ಟು ಹಿಂದೆಯೇ ಅದು ಪ್ರಾದೇಶಿಕ ಭಾಷೆಗಳನ್ನು ಬಳಸತೊಡಗಿತು. 1969ರಲ್ಲಿ ಈ ಬಗ್ಗೆ ವಿಧಿಬದ್ಧ ಯೋಜನೆಗಳು ಬಂದುವು. ಗ್ರಾಮಪ್ರದೇಶಗಳ ಕೆಲವು ಆಯ್ದ ಕಛೇರಿಗಳಲ್ಲಿ ಅದು ಪ್ರಾದೇಶಿಕ ಭಾಷೆಯನ್ನು ಬಳಸತೊಡಗಿತ್ತು. ಇತರ ಬ್ಯಾಂಕುಗಳೂ ಇಂಥ ಪ್ರಯತ್ನವನ್ನು ಮಾಡಿವೆ. ಭಾರತೀಯ ಸ್ಟೇಟ್ ಬ್ಯಾಂಕ್ ಕೂಡ ಅಧಿಕೃತ ಭಾಷೆಗಳ ಇಲಾಖೆಯನ್ನು ತೆರೆದಿದೆ. 'ಅಧಿಕೃತ ಭಾಷೆಗಳು' ಎಂಬ ಬಹುವಚನ ಪ್ರಯೋಗ ಗಮನಾರ್ಹ. ವಿವಿಧ ಪ್ರಾದೇಶಿಕ ಭಾಷೆಗಳ ಬಳಕೆಗೆ ಎರಡು ವರ್ಷಗಳ ಕಾಲಬದ್ಧ ಯೋಜನೆಯೊಂದನ್ನು ಅಂದು ಭಾರತೀಯ ಸ್ಟೇಟ್ ಬ್ಯಾಂಕು ಹಾಕಿಕೊಂಡಿತ್ತು. ಈ ಬಗ್ಗೆ ತರಬೇತಿ, ಪದಕೋಶಗಳ ಹಾಗೂ ನಮೂನೆಗಳ ರಚನೆ, ಎಲ್ಲಕ್ಕೂ ಕ್ರಮ ತೆಗೆದುಕೊಂಡಿತ್ತು. ಆದರೆ ಈಚೆಗೆ ಯಾವ ಪವಾಡವೋ ಏನೋ, ಹಿಂದಿಯೊಂದಕ್ಕೇ ಒತ್ತು ಬರುತ್ತಿದೆ. ಇಂಗ್ಲಿಷಿನಿಂದ ಪ್ರಾದೇಶಿಕ ಭಾಷೆಗಳಿಗೆ ಬದಲಾವಣೆ ಸುಸೂತ್ರವಾಗುವಂತೆ ಅಸ್ತಿಭಾರದ ರಚನೆಗೆ ಅದು ಹಾಕಿಕೊಂಡ ಕಾರ್ಯಕ್ರಮವನ್ನು ಈಗಿನವರು ಮರೆಯುತ್ತಿದ್ದಾರೆ. ಇದು ದುರ್ದೈವದ ಸಂಗತಿ.

ಪ್ರಾದೇಶಿಕ ಭಾಷೆಗಳನ್ನು ಬಳಸುವುದರಿಂದ ಬ್ಯಾಂಕುಗಳ ನಿರ್ವಹಣೆಗೆ ತೊಂದರೆಯಾಗುವುದೆಂಬ

ಮಾತು ಅವೈಜ್ಞಾನಿಕ. ವಿಕೇಂದ್ರೀಕರಣವೇ ಪ್ರಜಾಸತ್ತೆಯ ಲಕ್ಷಣ. ಎಲ್ಲವನ್ನೂ ಕೇಂದ್ರೀಕರಿಸುವುದರಿಂದ ನಿಯಂತ್ರಣ ಕಠಿಣವಾಗುತ್ತದೆ. ವಂಚನೆ, ಹಣದ ದುರುಪಯೋಗ ಎಲ್ಲಕ್ಕೂ ಇದೂ ಕಾರಣ. ಬ್ಯಾಂಕು ನೌಕರರನ್ನು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ವರ್ಗಾಯಿಸಿ, ಅಲ್ಲಿಯ ಭಾಷೆ ಬಾರದವರು ಆ ಸ್ಥಳಗಳಲ್ಲಿ ಕಾರ್ಯನಿರ್ವಹಣೆ ಮಾಡುವಂತಾದರೆ ಅದರಿಂದಾಗುವ ದುಷ್ಪರಿಣಾಮಗಳನ್ನು ಊಹಿಸಿಕೊಳ್ಳಬಹುದು. (ಕರ್ನಾಟಕದ ಪ್ರಮುಖ ಬ್ಯಾಂಕು ಗಳಲ್ಲಿ ತಮಿಳರು ತುಂಬಿದ್ದಾರೆ.) ಬ್ಯಾಂಕುಗಳ ವಿಕೇಂದ್ರೀಕರಣದ ಪ್ರಯತ್ನ ನಡೆಯುವುದು ಅಗತ್ಯ. ಭಾರತೀಯ ಸ್ಟೇಟ್ ಬ್ಯಾಂಕ್ ಈ ನೀತಿಯನ್ನನುಸರಿಸುತ್ತಿರುವುದು ಗಮನಾರ್ಹ. ಅಂಥ ದೊಡ್ಡ ಬ್ಯಾಂಕೇ ಪ್ರಾದೇಶಿಕ ವಲಯಗಳನ್ನು ಸ್ಥಾಪಿಸಿ ಕಾರ್ಯ ನಡೆಸುತ್ತಿರುವಾಗ ಇತರ ಬ್ಯಾಂಕುಗಳು ಏಕೆ ಹಾಗೆ ಮಾಡಬಾರದು?

ಬ್ಯಾಂಕುಗಳು ಕನ್ನಡವನ್ನು ಹೆಚ್ಚು ಹೆಚ್ಚಾಗಿ ಬಳಸುವಂತೆ ಮಾಡುವುದರಲ್ಲಿ ರಾಜ್ಯ ಸರ್ಕಾರದ ಹೊಣೆಯೂ ಬಹಳಷ್ಟು ಇದೆ. ಸಲಹೆ, ನೆರವು, ಕೆಲವೆಡೆಯಲ್ಲಿ ಕಾನೂನಿನ ಕ್ರಮ ಒತ್ತಾಯ ಇವೆಲ್ಲವೂ ಅಗತ್ಯ. ಸರ್ಕಾರ ಅನೇಕ ವೇಳೆ ಉದಾಸೀನದ ನಿಲವು ತಳೆದಿರುವುದು ವಿಷಾದಕರ. ಬ್ಯಾಂಕೊಂದರಲ್ಲಿ ಸ್ಥಳೀಯ ಭಾಷೆಯನ್ನು ಬಳಸುವ ಪ್ರಶ್ನೆ ಬಂದಾಗ ಅದರ ವ್ಯವಸ್ಥಾಪಕರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು, ಈ ರಾಜ್ಯದ ಭಾಷೆ ಯಾವುದು ಎಂದು ಕೇಳಿದರಂತೆ. ಇಲ್ಲಿ ಯಾವುದೇ ಒಂದು ಭಾಷೆಯೂ ಇಲ್ಲವೆಂಬ ಅರ್ಥದಲ್ಲಿ ಸರ್ಕಾರ ಉತ್ತರ ಬರೆಯಿತಂತೆ. ಪತ್ರ ಬರೆದ ಬ್ಯಾಂಕಿನ ಉತ್ಸಾಹಿಗಳಿಗೆ ಹತಾಶೆಯಾಗಿರಬೇಕು. ಈ ಸಂಗತಿ ನಿಜವಿದ್ದರೆ ಖಂಡನಾರ್ಹ. ಸರ್ಕಾರ ಎಚ್ಚೆತ್ತುಕೊಳ್ಳಬೇಕು.

ಬ್ಯಾಂಕುಗಳಲ್ಲಿ ಕನ್ನಡ ಹೆಚ್ಚು ಹೆಚ್ಚಾಗಿ ಬಳಕೆಗೆ ಬರಬೇಕು ಎಂದು ಕಾರ್ಯನಿರತರಾಗಿರುವವರಿಗೆ ಹೆಚ್ಚಿನ ಬೆಂಬಲ ನೀಡಬೇಕು. ಬ್ಯಾಂಕ್ ಅಧಿಕಾರಿಗಳನ್ನು ಕರೆಯಿಸಿಕೊಂಡು ಅವರೊಂದಿಗೆ ಸಮಾಲೋಚಿಸಬೇಕು. ಕಾನೂನಿನ ತೊಡಕೇನಿದೆಯೆಂಬುದನ್ನು ಪರಿಶೀಲಿಸಬೇಕು. ಅನಾವಶ್ಯಕಕವಾದ ಗೊಂದಲವನ್ನು ಪರಿಹರಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆಸಿದ ಕನ್ನಡ ಬಳಕೆ ಕಾರ್ಯಶಿಬಿರದ ವಿಚಾರವನ್ನು ನಾನು ಹಿಂದೆ ಹೇಳಿದೆ. ಮತ್ತೆ ಅಂಥ ಶಿಬಿರ ನಡೆಸಬೇಕೆಂದು ಕನ್ನಡ ಸಂಸ್ಕೃತಿ ಇಲಾಖೆ ಯತ್ನ ನಡೆಸಿತು. ಆದರೆ ಶಿಬಿರ ಮತ್ತೆ ನಡೆಯಲಿಲ್ಲ. ಬ್ಯಾಂಕುಗಳಿಂದ ಸಾಕಷ್ಟು ಅನುಕೂಲಕರ ಪ್ರಕ್ರಿಯೆ ತೋರಿಬರಲಿಲ್ಲವೆಂಬ ಕಾರಣವನ್ನೇ ಒಡ್ಡಿ ಕೂರಲಾಗದು. ಕರ್ನಾಟಕದ ಬ್ಯಾಂಕುಗಳಲ್ಲಿ ಕನ್ನಡವನ್ನು ಬಳಸಬೇಕೆಂಬುದು ಕೇವಲ

ಅಭಿಮಾನದ ಪ್ರಶ್ನೆಯಲ್ಲ, ಅನ್ಯ ಭಾಷಾದ್ವೇಷದ ಪ್ರಶ್ನೆಯೂ ಅಲ್ಲ. ಅದು ಅನುಕೂಲತೆಯ ಪ್ರಶ್ನೆ. ಜನಸಮೂಹದ ಸೇವಾ ಸಂಸ್ಥೆಗಳಾದ ಬ್ಯಾಂಕುಗಳು ಜನಸಮೂಹವನ್ನು ತಲಪುವಂತೆ ಮಾಡುವ ಪ್ರಶ್ನೆ. ಇದಕ್ಕೆ ಶ್ರದ್ಧೆ, ಉತ್ಸಾಹ, ಯೋಜನೆ, ದುಡಿಮೆ ಅಗತ್ಯ. ಕನ್ನಡಕ್ಕೇನಾದರೂ ಅನಾಹುತವಾಗುವುದಾದರೆ ಆಗ ಶತ್ರುವನ್ನು ಬಡಿದುಹಾಕೋಣ ಎಂದು ಕಣ್ಣು ಮುಚ್ಚಿ ಕೂರುವುದರಿಂದ ಪ್ರಯೋಜನವಿಲ್ಲ. ನಮ್ಮ ಪ್ರಯತ್ನ ಬರೀ ನೇತ್ಯಾತ್ಮಕವಾಗಿರಬಾರದು, ಇತ್ಯಾತ್ಮಕವಾಗಿರಬೇಕು, ರಚನಾತ್ಮಕವಾಗಿರಬೇಕು. ಕನ್ನಡಕ್ಕೆ, ಕನ್ನಡಿಗರಿಗೆ ಒದಗಿರುವ ನಿತ್ಯ ಗಂಡದ ನಿವಾರಣೆಯಾಗಬೇಕು. ಅಂಥ ಕಾಲ ಬೇಗ ಬರಲೆಂಬ ಹಾರೈಕೆ ನನ್ನದು.

ವಿ.ಸೂ.:– ಮೇಲ್ಕಂಡ ಲೇಖನವು 26–3–1984ರಂದು ಬೆಂಗಳೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಏರ್ಪಡಿಸಿದ್ದ 'ಕನ್ನಡ ಆಡಳಿತ ಭಾಷಾ ವಿಚಾರ ಸಂಕಿರಣ'ದಲ್ಲಿ ಮಂಡಿಸಿದ ಪ್ರಬಂಧ.

ಬ್ಯಾಂಕು ಗಣಕೀಕರಣ : ಒಟ್ಟುನೋಟ
(ವಿಚಾರ ಸಂಕಿರಣದ ಅಧ್ಯಕ್ಷ ಪೀಠದಿಂದ ಮಾಡಿದ ಲಿಖಿತ ಭಾಷಣ)

ಬ್ಯಾಂಕು ಕಂಪ್ಯೂಟರೀಕರಣ ಅಥವಾ ಗಣಕೀಕರಣದ ವಿಚಾರವಾಗಿ ಇದುವರೆಗೂ ಮಾತಾಡಿದವರು ಈ ವಿಷಯದ ನಾನಾ ಮುಖಗಳ ಪರಿಚಯವನ್ನು ನಮಗೆಲ್ಲ ಮಾಡಿಸಿಕೊಟ್ಟಿದ್ದಾರೆ. ವಿದೇಶಿ ಬ್ಯಾಂಕುಗಳಲ್ಲಿ ಗಣಕೀಕರಣ ಎಷ್ಟರಮಟ್ಟಿಗೆ ಸಾಗಿದೆ, ಅದರ ಅನುಕೂಲ–ಪ್ರತಿಕೂಲ ಪರಿಣಾಮಗಳೇನು, ಭಾರತದ ಬ್ಯಾಂಕುಗಳಲ್ಲಿ ಗಣಕಗಳನ್ನು ಅಳವಡಿಸುವುದರಿಂದ ಏನು ಪ್ರಯೋಜನ, ಈ ಸಂಬಂಧವಾಗಿ ನಾವು ಎದುರಿಸಬೇಕಾಗಿಬರುವ ಸಮಸ್ಯೆಗಳೇನು, ಆ ಸಮಸ್ಯೆಗಳನ್ನು ಪರಿಹರಿಸುವ ಬಗೆಯೆಂತು ಎಂಬ ವಿಚಾರಗಳನ್ನು ಕುರಿತು ಈ ಕ್ಷೇತ್ರದಲ್ಲಿ ಪರಿಣತರಾದವರು ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಭೆಯಲ್ಲಿ ಉದ್ಭವಿಸಿದ ಪ್ರಶ್ನೆಗಳನ್ನು ಉತ್ತರಿಸಿದ್ದಾರೆ. ಬ್ಯಾಂಕ್ ವ್ಯವಸ್ಥಾಪನದ ದೃಷ್ಟಿಯಿಂದ, ಉದ್ಯೋಗಿಗಳ ದೃಷ್ಟಿಯಿಂದ, ಗ್ರಾಹಕರ ದೃಷ್ಟಿಯಿಂದ – ಹೀಗೆ ವಿಭಿನ್ನ ಕೋನಗಳಿಂದ ಈ ಸಮಸ್ಯೆಯ ಪರಿಶೀಲನೆ ನಡೆದಿದೆ. ಇಷ್ಟೊಂದು ಸಮಗ್ರವಾದ, ದೀರ್ಘವಾದ ವಿವೇಚನೆಯ ಅನಂತರ ಈ ವಿಚಾರಸಂಕಿರಣದ ಅಧ್ಯಕ್ಷ ಪೀಠದಿಂದ ನಾನು ಹೇಳಬೇಕಾದ್ದು ಹೆಚ್ಚಾಗಿ ಏನೂ ಇಲ್ಲ ಎಂದೇ ಎನಿಸುತ್ತದೆ. ಅಲ್ಲದೆ, ಆರಂಭದಲ್ಲೇ ನಾನು ಒಂದು ವಿಚಾರವನ್ನು ಕುರಿತಂತೆ ಒಪ್ಪಿಕೊಂಡುಬಿಡುವುದು ಒಳಿತು. ಬ್ಯಾಂಕಿಂಗ್ ವಿಷಯದಲ್ಲಿ ನನಗೆ ವಿಶೇಷವಾದ ಆಸಕ್ತಿ ಇದೆಯೆಂಬುದು ನಿಜವಾದರೂ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಣಕದ ಅಳವಡಿಕೆಯನ್ನು ಕುರಿತಂತೆ ನನ್ನ ಜ್ಞಾನ ಅತ್ಯಲ್ಪ. ಅದು ಇಲ್ಲವೇ ಇಲ್ಲವೆಂದರೂ ಸರಿಯೆನಿಸೀತು. ಈ ಕ್ಷೇತ್ರದಲ್ಲಿ ಗಣಕದ ಬಳಕೆಯ ಸಾಧಕ ಬಾಧಕಗಳ ವಾಸ್ತವಿಕ ಅನುಭವ ನನಗೆ ಇಲ್ಲ. ಆದ್ದರಿಂದ ಈ ವಿಚಾರವಾಗಿ ನಾನು ಆಡಬಹುದಾದ ಮಾತುಗಳು ವಿಶೇಷವಾಗಿ ಸಾಮಾನ್ಯನೊಬ್ಬನ ದೃಷ್ಟಿಯಿಂದ ಮಾತ್ರ ಎಂದು ಮೊದಲೇ ನಾನು ನಿಮಗೆ ಎಚ್ಚರಿಕೆ ನೀಡ ಬಯಸುತ್ತೇನೆ. ನನ್ನ ಮಾತುಗಳಿಗೆ ಎಷ್ಟು ಬೆಲೆ ಕೊಡ ಬೇಕೆಂಬುದು ನಿಮಗೇ ಬಿಟ್ಟ ಸಂಗತಿ.

ಬ್ಯಾಂಕುಗಳಲ್ಲಿ ಗಣಕದ ಬಳಕೆಯ ವಿಚಾರ ಈಚೆಗೆ ತುಂಬಾ ಪ್ರಧಾನವಾಗಿ ಪರಿಣಮಿಸಿದೆಯೆಂಬುದರಲ್ಲಿ ಸಂದೇಹವಿಲ್ಲ. ಈ ವಿಚಾರವಾಗಿ ಕೆಲವರಿಗೆ ವಿಶೇಷವಾದ ಆಸಕ್ತಿ ಉತ್ಸಾಹ ಇರುವಂತೆಯೇ ಇನ್ನು ಕೆಲವರಿಗೆ ಈ ಬಗ್ಗೆ ಆತಂಕ ಸಂದೇಹಗಳೂ ಉಂಟು. ಗಣಕದ ಬಳಕೆಯಿಂದ ಬ್ಯಾಂಕುಗಳಲ್ಲಿ ಉದ್ಯೋಗಕ್ಕೆ ಧಕ್ಕೆ ಬರಬಹುದು ಎಂಬ ಶಂಕೆ ವಿಶೇಷವಾಗಿ ಕಾಡಿಸುತ್ತಿದ್ದದ್ದರಿಂದ ಇದಕ್ಕೆ ಉದ್ಯೋಗಿಗಳ ವಿರೋಧ

ವಿಶೇಷವಾಗಿತ್ತು. ಬಹುಕಾಲದ ಸಂಧಾನದ ಅನಂತರ ಭಾರತೀಯ ಬ್ಯಾಂಕುಗಳ ಸಂಘಕ್ಕೂ, ಬ್ಯಾಂಕ್ ಕೆಲಸಗಾರರ ಸಂಘಗಳ ಪ್ರತಿನಿಧಿಗಳಿಗೂ ನಡುವೆ ಈ ಬಗ್ಗೆ ಒಪ್ಪಂದ ಆಗಿರುವ ಸಂಗತಿಯನ್ನೂ, ಈ ವಿಚಾರದಲ್ಲಿ ಕೆಲಸಗಾರರ ಸಂಘಗಳ ದೃಷ್ಟಿ ಏನೆಂಬುದನ್ನೂ ನೀವು ಈಗಾಗಲೇ ತಿಳಿದುಕೊಂಡಿದ್ದೀರಿ.

ಬ್ಯಾಂಕುಗಳೊಳಗಿನ ಪರಿಕರ್ಮಗಳಿಗೆ ಕಂಪ್ಯೂಟರುಗಳನ್ನು ಎಷ್ಟರಮಟ್ಟಿಗೆ ಬಳಸಬಹುದು ಎಂಬುದನ್ನು ಕುರಿತಂತೆ ಈಗಾಗಲೇ ಸಾಕಷ್ಟು ಆಲೋಚನೆ ನಡೆದಿದೆ. ಇಂದು ಬ್ಯಾಂಕುಗಳು ನಡೆಸುತ್ತಿರುವ ಕಲಾಪಗಳು ನಾನಾಮುಖವಾದಂಥವು, ಅತ್ಯಂತ ಸಂಕೀರ್ಣವಾದಂಥವು. ದೇಶಾದ್ಯಂತ ಹಬ್ಬಿರುವ ಬ್ಯಾಂಕ್ ಶಾಖೆಗಳ ವಿಸ್ತೃತ ಜಾಲದ ಕಲಾಪಗಳನ್ನು ಸಮನ್ವಯಗೊಳಿಸಲು ಇವುಗಳ ನಿರ್ವಹಣೆ ನಿಯಂತ್ರಣಗಳನ್ನು ಸುಸೂತ್ರಗೊಳಿಸಲು, ವೇಗವಾಗಿ ಬೆಳೆಯುತ್ತಿರುವ ಗ್ರಾಹಕವರ್ಗಕ್ಕೆ ಶೀಘ್ರ ಸೇವೆ ಸಲ್ಲಿಸಲು, ಬ್ಯಾಂಕ್ ಸೇವೆಯಲ್ಲಿ ನಿರತರಾದ ಉದ್ಯೋಗಿಗಳ ಕೆಲಸವನ್ನು ಸರಳಗೊಳಿಸಲು, ಮಾಹಿತಿ ಸಂಗ್ರಹಣೆ–ವಿಶ್ಲೇಷಣೆ–ಅನುಮಿತಿಗಳನ್ನು (ಇನ್‌ಫರೆನ್ಸ್) ಸುಗಮಗೊಳಿಸಲು, ಮೇಲುನೋಟಕ್ಕೆ ಪರಸ್ಪರ ಅಸಂಬದ್ಧವೆನಿಸುವ ಹಲವಾರು ಸಂಗತಿಗಳ ನಡುವಣ ಅಂತಃಸೂತ್ರಗಳನ್ನು ಕಂಡುಕೊಳ್ಳಲು, ವ್ಯವಸ್ಥಾಪಕ ವರ್ಗದವರು ಯಾವುದೇ ವಿಷಯವನ್ನು ಕುರಿತಂತೆ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುವುದನ್ನು ಸುಲಭಗೊಳಿಸಲು ಗಣಕಗಳ ನೆರವು ಅಗತ್ಯ ಎಂಬ ವಿಚಾರವಾಗಿ ಎರಡು ಮಾತು ಇರಲು ಸಾಧ್ಯವಿಲ್ಲ. ಬ್ಯಾಂಕ್ ಸೇವೆಯ ವೆಚ್ಚವನ್ನು ತಗ್ಗಿಸುವಲ್ಲಿ, ಮತ್ತು ಯಾವುದೇ ವಿಷಯವನ್ನು ಕುರಿತಂತೆ ಯುಕ್ತವಾದ ತೀರ್ಮಾನ ತೆಗೆದುಕೊಳ್ಳಲು ಅಗತ್ಯವಾದ ಮಾಹಿತಿಯನ್ನು ಕೇಳಿದೊಡನೆಯೇ ಒದುಗಿಸುವುದರಲ್ಲಿ ಗಣಕಗಳ ಪಾತ್ರ ಹಿರಿದಾದ್ದು. ಬ್ಯಾಂಕುಗಳೊಳಗೆ ತಾಂತ್ರಿಕ ಪ್ರಾವೀಣ್ಯವನ್ನು ನಿರ್ಮಿಸಲು ಅಗತ್ಯವಾದ ಹಾದಿ ಇವರಿಂದ ಸಿದ್ಧವಾಗುವುದೆಂಬುದು ನಿರ್ವಿವಾದ. ಆದರೆ ನಮ್ಮ ಮುಂದೆ ಇಂದು ಇರತಕ್ಕ ದೊಡ್ಡ ಪ್ರಶ್ನೆಯೆಂದರೆ ಇದು: ಗಣಕೀಕರಣ ಏತಕ್ಕೆ ಹೇಗೆ ಮತ್ತು ಎಷ್ಟರಮಟ್ಟಿಗೆ? ಈ ಪ್ರಶ್ನೆಯ ಮೂರೂ ಮುಖಗಳನ್ನು ಕುರಿತಂತೆ ಬಗೆಬಗೆಯ ಉಪಪ್ರಶ್ನೆಗಳು ಉದ್ಭವಿಸುವುದರಲ್ಲಿ ಸಂದೇಹವಿಲ್ಲ. ಇವನ್ನು ಎಷ್ಟರಮಟ್ಟಿಗಿನ ಜಾಣತನದಿಂದ ಬ್ಯಾಂಕುಗಳು ಪರಿಹರಿಸಿಕೊಳ್ಳಬಲ್ಲುವು ಎಂಬುದನ್ನೇ ಗಣಕೀಕರಣದ ಯಶಸ್ಸು ಅವಲಂಬಿಸಿದೆ ಎನ್ನಬಹುದು.

ಭಾರತದಲ್ಲಿ ಗಣಕ ಕ್ರಾಂತಿ ಆರಂಭವಾದ್ದು ಹಲವು ವರ್ಷಗಳ ಹಿಂದೆ. ಆದರೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಇದು ಅಷ್ಟಾಗಿ ಹರಿದುಬರಲಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ಕೆಲವು ಬ್ಯಾಂಕುಗಳಲ್ಲಿ

ಮಾತ್ರ ಗಣಕೀಕರಣದ ಪ್ರಯೋಗ ಇಷ್ಟಷ್ಟು ನಡೆಯಿತು. ಕೆಲವು ಸೀಮಿತ ಪರಿಕರ್ಮಗಳಿಗೆ ಮಾತ್ರ ಕಂಪ್ಯೂಟರುಗಳನ್ನು ಬಳಸಿಕೊಳ್ಳಲಾಯಿತು. ಶಾಖೆಗಳ ನಡುವಣ ಲೆಕ್ಕಗಳ ಸಮನ್ವಯ, ಕೆಲವು ವರದಿಗಳ ಕ್ರೋಢೀಕರಣ, ವ್ಯವಸ್ಥಾಪನದ ವರದಿಗಳ ರಚನೆ – ಈ ನಿಟ್ಟಿನಲ್ಲಿ ಗಣಕಗಳ ನೆರವು ಪಡೆದುಕೊಳ್ಳಲಾಯಿತು. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಈ ಬ್ಯಾಂಕುಗಳಲ್ಲಿ ಬಳಕೆಯಲ್ಲಿದ್ದ ಮಾನವಚಾಲಿತ ವ್ಯವಸ್ಥೆಯ ಬದಲು ಗಣಕ ಪದ್ಧತಿಯನ್ನು ತರಲಾಯಿತು ಎಂಬುದು. ಆದ್ದರಿಂದ ಇದು ಬಹಳ ಮಟ್ಟಿಗೆ ತೇಪೆಯಾಗಿ ಪರಿಣಮಿಸಿತು. ಗಣಕದ ಸಜ್ಜಿಗೆ ಬೇಕಾದ ವಿಶಿಷ್ಟ ತಳಪಾಯವನ್ನು, ಚೌಕಟ್ಟನ್ನು, ವ್ಯವಸ್ಥೆಯನ್ನು ನಿರ್ಮಿಸಲಿಲ್ಲ. ಕೆಲವು ಬ್ಯಾಂಕುಗಳಲ್ಲಿ ಸ್ಥಾಪಿಸಲಾದ ದಾಖಲೆ ವ್ಯವಸ್ಥೆಗಳು ಬಹುಬೇಗ ಹಳತಾದುವು. ಅಗಾಧಗಾತ್ರದಲ್ಲಿ ಬಂದು ತುಂಬುವ ಅಂಕಿ–ಅಂಶ ಸಾಮಗ್ರಿಯನ್ನು ನಿರ್ವಹಿಸಲು ಇವು ಅಸಮರ್ಥವಾದುವು. ಇವುಗಳ ಪರಿಕರ್ಮ ಬಹಳ ತೊಡಕಿನದೆನಿಸಿತು. ಇವು ವಿಫಲಗೊಂಡುವು. ಅನೇಕ ವೇಳೆ ಹೊರಗಿನ ದತ್ತಾಂಶ ಪ್ರಕ್ರಮ ಅಭಿಕರಣಗಳ (ಡೇಟಾ ಪ್ರೋಸೆಸಿಂಗ್ ಏಜೆನ್ಸಿ) ನೆರವು ಪಡೆದುಕೊಳ್ಳಲಾಯಿತು. ಇದರಿಂದ ಬ್ಯಾಂಕುಗಳು ತಮ್ಮದೇ ಆದ ಮಾಹಿತಿ ತಂತ್ರಜ್ಞಾನ (ಇನ್‌ಫರ್ಮೇಷನ್ ಟೆಕ್ನಾಲಜಿ) ಕುರಿತ ಮೂಲಭೂತವಾದ ಅರಿವನ್ನು ಸಂಪಾದನೆ ಮಾಡಿಕೊಳ್ಳಲಾಗಲಿಲ್ಲ, ಸ್ವಾವಲಂಬನೆ ಬೆಳೆಯಲಿಲ್ಲ. ಬ್ಯಾಂಕಿನ ಅಗತ್ಯಗಳೇನು ಎಂಬುದನ್ನು ಅರಿಯಲಾರದ ಬಾಹ್ಯ ಸಂಸ್ಥೆಗಳಿಂದ ಬ್ಯಾಂಕಿಗೆ ಏನೂ ಪ್ರಯೋಜನವಾಗಲಿಲ್ಲ. ಬ್ಯಾಂಕುಗಳು ತಮ್ಮ ಆಕರ ದಾಖಲೆಗಳನ್ನು ಹೊರಗಿನ ಸಂಸ್ಥೆಗಳಿಗೆ ಒಪ್ಪಿಸಿ, ಅವು ಪ್ರಕ್ರಮಗೊಳಿಸಿ ಕೊಟ್ಟ ಫಲಿತಾಂಶಗಳನ್ನೂ ಸಮಸ್ಯಾಪರಿಹಾರೋಪಾಯಗನ್ನೂ ಕಣ್ಣು ಮುಚ್ಚಿ ಸ್ವೀಕರಿಸಿ, ಅವು ವಿಧಿಸಿದ ಶುಲ್ಕವನ್ನೊಪ್ಪಿಸಬೇಕಾಯಿತು. ಇದರಿಂದ ಗಣಕದ ಸೇವೆಯ ವೆಚ್ಚ ಗಮನಾರ್ಹವಾಗಿ ಪರಿಣಮಿಸಿತಷ್ಟೇ ಅಲ್ಲ. ಗಣಕ ತಂತ್ರಜ್ಞಾನದ ಫಲವನ್ನೂ ಯೋಜಿತ ರೀತಿಯಲ್ಲಿ ಇತರ ಉದ್ಯಮಗಳು ಪಡೆದಂತೆ ಬ್ಯಾಂಕಿಂಗ್ ಉದ್ಯಮ ಪಡೆದುಕೊಳ್ಳಲಾಗಲಿಲ್ಲ. ಈ ಕ್ಷೇತ್ರದ ಭವಸಾಮರ್ಥ್ಯದ ಅರಿವು ಬ್ಯಾಂಕುಗಳಿಗೆ ಉಂಟಾಗಲಿಲ್ಲ. ಬ್ಯಾಕಿಂಗ್ ಮುನ್ನಡೆಗೂ ದಕ್ಷತೆಗೂ ಗಣಕದ ಪ್ರಯೋಜನ ಇದುವರೆಗೂ ದೊರಕಲಿಲ್ಲ. ಆದ್ದರಿಂದ ಇತರ ಉದ್ಯಮಗಳಲ್ಲಿಯ ಗಣಕದ ಬಳಕೆಯ ಮಟ್ಟದೊಂದಿಗೆ ಹೋಲಿಸಿದರೆ ಬ್ಯಾಂಕು ಬಹಳ ಹಿಂದೆ ಉಳಿದಿದೆಯೆಂಬುದರಲ್ಲಿ ಸಂದೇಹವಿಲ್ಲ.

ಬ್ಯಾಂಕ್ ಗಣಕೀಕರಣದ ಪ್ರಶ್ನೆಯ ವಿವೇಚನೆ ಮಾಡುವಾಗ, ಕಂಪ್ಯೂಟರ್ ಏನು ಮಾಡಬಹುದು,

ಏನುಮಾಡಲಾರದು ಎಂಬುದರ ಸ್ಪಷ್ಟ ಕಲ್ಪನೆ ನಮಗೆ ಇರಬೇಕಾದ್ದು ಅತ್ಯಾವಶ್ಯಕ. ಗಣಕ ಮೂಲತಃ ಮಾಡುವ ಕೆಲಸ ಮೂರು ಬಗೆ :

1.ಸಂಕಲನ, ವ್ಯವಕಲನ, ಗುಣಾಕಾರ, ಭಾಗಕಾರಗಳನ್ನು, ಕಣ್ಣು ಮಿಟುಕಿಸುವಷ್ಟು ವೇಗವಾಗಿ ಅದು ಮಾಡಬಲ್ಲುದು.

2.ಗೊತ್ತಾದ ಮಾಧ್ಯಮದಲ್ಲಿ ದಾಖಲಾದ ದತ್ತಾಂಶವನ್ನು ಅದು ಓದಬಲ್ಲುದು ಮತ್ತು ತನ್ನ ಲೆಕ್ಕಾಚಾರದ ಫಲಿತಾಂಶವನ್ನು ಲೇಖಿಸಬಲ್ಲುದು. ಕಂಪ್ಯೂಟ್ ಎಂಬ ಪದದ ಅರ್ಥವೇ ಎಣಿಕೆಮಾಡು, ಲೆಕ್ಕಮಾಡು ಎಂದು. ಕನ್ನಡ ಪದವಾದ ಗಣಕದ ಅರ್ಥ ಕೂಡ ಎಣಿಸುವುದು, ಲೆಕ್ಕ ಮಾಡುವುದು ಎಂದೇ.

3.ಯಾವುದಕ್ಕೆ ಯಾವುದನ್ನು ಕೂಡಬೇಕು, ಯಾವುದರಿಂದ ಯಾವುದನ್ನು ಕಳೆಯಬೇಕು, ಏನು ಬರೆಯಬೇಕು, ಎಲ್ಲಿ ಬರೆಯಬೇಕು ಮುಂತಾದವುಗಳ ಬಗ್ಗೆ ನಾವು ಕೊಡುವ ಸೂಚನೆಗಳನ್ನು ಅದು ಗಮನಿಸಿ ನೆನಪಿನಲ್ಲಿಟ್ಟುಕೊಂಡು ಯಥಾಕ್ರಮವಾಗಿ ಆ ಪರಿಕರ್ಮಗಳನ್ನು ನಡೆಸಿಕೊಡಬಲ್ಲುದು.

ಆದರೆ ಮಾನವನ ನಿಯಂತ್ರಣವಿಲ್ಲದೆ ಗಣಕ ಕೆಲಸ ಮಾಡಲಾರದು. ಇದರ ಕ್ರಿಯೆಗಾಗಿ ಮೂರು ಬಗೆಯ ಪರಿಣತರ ಅಗತ್ಯವುಂಟು. ವ್ಯವಸ್ಥಾ ವಿಶ್ಲೇಷಕ (ಸಿಸ್ಟಮ್ ಅನಲಿಸ್ಟ್) ಮೊದಲನೆಯ ಬಗೆಯ ತಜ್ಞ. ಗಣಕಯಂತ್ರವನ್ನು ಬಳಸಲಿಚ್ಛಿಸುವವರ ಸಮಸ್ಯೆಗಳೇನೆಂಬುದನ್ನು ಅವನು ಮೊದಲು ತಿಳಿದುಕೊಳ್ಳುತ್ತಾನೆ. ಆ ಸಮಸ್ಯೆಯನ್ನು ವಿಶ್ಲೇಷಿಸುತ್ತಾನೆ. ಅದಕ್ಕೆ ಪರಿಹಾರೋಪಾಯವನ್ನು (ಸಲ್ಯೂಷನ್) ಪಡೆಯಲು ಅಗತ್ಯವಾದ ವಿಧಾನವನ್ನು ಅವನು ರೂಪಿಸುತ್ತಾನೆ. ಎರಡನೆಯವನಾಗಿ ಬರುವವನು ಕ್ರಮವಿಧಾಯಕ (ಪ್ರೋಗ್ರಾಮರ್). ಮಾಡಬೇಕಾದ ಪರಿಕರ್ಮದ ವಿವರಣೆಯನ್ನು ಅವನು ವಿಶ್ಲೇಷಕನಿಂದ ಪಡೆದು ಕೊಳ್ಳುತ್ತಾನೆ. ಕಂಪ್ಯೂಟರ್ ಅಥವಾ ಗಣಕಕ್ಕೆ ಅರ್ಥವಾಗುವ ಅದರದೇ ಭಾಷೆಯಲ್ಲಿ ಅವನು ವಿವರವಾದ ಸೂಚನೆಗಳನ್ನು ಅಥವಾ ಕ್ರಮವಿಧಿಯನ್ನು ತಯಾರಿಸುತ್ತಾನೆ. ಕೊನೆಯಲ್ಲಿ ಬರುವವರು ಚಾಲಕರು(ಆಪರೇಟರ್). ವಿಶ್ಲೇಷಕನಿಂದ ನಿಗದಿ ಮಾಡಲ್ಪಟ್ಟು, ಕ್ರಮವಿಧಾಯಕನಿಂದ ಗಣಕಕ್ಕೆ ಊಡಲಾದ ಕ್ರಮವಿಧಿಯ ಪ್ರಕಾರ ಕಂಪ್ಯೂಟರನ್ನು ದಿನದಿನವೂ ಬಳಸುವವರು ಚಾಲಕರು.

ಆದ್ದರಿಂದ ಯಾವುದೇ ಗಣಕ ವ್ಯವಸ್ಥೆಯ ಅಳವಡಿಕೆ ಮಾಡಬೇಕಾದರೆ ಈ ಮೂರೂ ಹಂತಗಳಲ್ಲಿ ಅದನ್ನು ಕಾರ್ಯಾನ್ವಯಗೊಳಿಸ - ಬೇಕಾಗುತ್ತದೆಂಬುದು ಮುಖ್ಯವಾಗಿ ಗಮನಿಸಬೇಕಾದ ವಿಚಾರ. ನಾವು ಅಂಗಡಿಯಿಂದ ಟ್ರಾನ್ಸಿಸ್ಟರೊಂದನ್ನು ಕೊಂಡುತಂದು ಬಳಸುವಷ್ಟು ಸರಾಗವಲ್ಲ ಇದು. ಅಲ್ಲದೆ ಎಂಥ

ಗಣಕ ಯಂತ್ರ ಬೇಕು, ಅದರಿಂದ ಯಾವ ಕೆಲಸವನ್ನು ಹೇಗೆ ಮಾಡಿಸಿಕೊಳ್ಳಬೇಕು, ಅದರೊಂದಿಗೆ ಯಾವ ಭಾಷೆಯಲ್ಲಿ ಸಂಭಾಷಣೆ ಮಾಡಬೇಕು ಎಂಬುದೆಲ್ಲಾ ಮುಖ್ಯವೇ.

ಗಣಕೀಕರಣ ಎರಡು ದೃಷ್ಟಿಗಳಿಂದ ಉಪಯುಕ್ತವಾದದ್ದು. ಅದಕ್ಕೆ ಅರ್ಥಮೌಲ್ಯವೂ ಇದೆ (ಎಕನಾಮಿಕ್ ವ್ಯಾಲ್ಯೂ), ವಿಸ್ಮಯಮೌಲ್ಯವೂ ಇದೆ (ಸರ್‌ಪ್ರೈಸ್ ವ್ಯಾಲ್ಯೂ). ಗಣಕ ದೊರಕಿಸಿಕೊಡುವ ಯಾವುದೇ ಮಾಹಿತಿಯಿಂದ ನಿಮ್ಮ ವ್ಯವಸ್ಥೆಯಲ್ಲಿರುವ ಯಾವುದೇ ದೋಷ ಬೆಳಕಿಗೆ ಬಂದು, ನಿಶ್ಚಿತ ಗುರಿಸಾಧನೆಗಾಗಿ ನೀವು ಆ ದೋಷಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಬಹುದು. ಇದು ಆರ್ಥಿಕ ಮೌಲ್ಯ. ಪ್ರಸಕ್ತ ವ್ಯವಸ್ಥೆಯಿಂದ ದೊರಕದಿದ್ದ, ಗಣಕ ದೊರಕಿಸಿಕೊಡುವ ಕೆಲವು ಮಾಹಿತಿಗಳಿಂದ, ಫಲಗಳಿಂದ (ರಿಸಲ್ಟ್ಸ್) ವ್ಯವಸ್ಥಾಪಕರು ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸಾಧ್ಯವಾಗುತ್ತದೆ. ಗಣಕವನ್ನು ದಿಢೀರನೆ ನೀವು ಸ್ಥಾಪಿಸುವುದೂ ಸಾಧ್ಯವಾಗದು. ಈಗ ಮಾನವ ಕೆಲಸಗಾರರು ಮಾಡುತ್ತಿರುವ ಕೆಲಸಕ್ಕೆ ಅನಾಮತ್ತಾಗಿ ಗಣಕವನ್ನು ತಂದು ಕುಕ್ಕರಿಸುವುದಕ್ಕಾಗುವುದಿಲ್ಲ. ಅದರ ಬದಲು ಇದು ಎನ್ನುವುದಕ್ಕಾಗದು. ಗಣಕದ ಅಗಾಧ ಸಾಧ್ಯತೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಅದರ ಮೂಲಕ ವೆಚ್ಚವನ್ನು ತಗ್ಗಿಸಬೇಕಾದರೆ ಬ್ಯಾಂಕು ಶಾಖೆಗಳಲ್ಲಿಯ, ಮುಖ್ಯ ಕಛೇರಿಯಲ್ಲಿಯ ಈಗಿನ ಕೆಲಸ ಪದ್ದತಿಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿ ನೇರ್ಪುಗೊಳಿಸಿ ಅನಂತರ ಕಂಪ್ಯೂಟರನ್ನು ಅಳವಡಿಸುವ ಬಗ್ಗೆ ಯೋಚಿಸಬೇಕು. ಇದಕ್ಕೆ ಉದಾಹರಣೆಯಾಗಿ ಇಂದು ಅನೇಕ ಬ್ಯಾಂಕುಗಳಲ್ಲಿರುವ ಲೆಕ್ಕಪದ್ಧತಿ ಹಾಗೂ ಮಾಹಿತಿ ಸಂಗ್ರಹಣೆ ಪದ್ಧತಿ ಇವನ್ನು ನೋಡಬಹುದು. ಇವೆರಡೂ ಇಂದು ಪ್ರತ್ಯೇಕವಾಗಿವೆ. ಶಾಖೆಗಳು ತಮ್ಮ ಮುಖ್ಯ ಕಚೇರಿಗೆ ಕಳುಹಿಸಿಕೊಡಬೇಕಾದ ಮಾಹಿತಿಯನ್ನು ನಾನಾ ಮೂಲಗಳಿಂದ ಅವು ಸಂಗ್ರಹಿಸಿ ಕ್ರೋಢೀಕರಿಸಿ ಕಳುಹಿಸಬೇಕಾಗುತ್ತದೆ. ಇದರಿಂದ ಅಪಾರವಾದ ಕಾಲವ್ಯಯವಾಗುತ್ತದೆ. ವಿವರಣಗಳನ್ನು ಕಳುಹಿಸುವಲ್ಲಿ ವಿಳಂಬವೂ ಆಗುತ್ತದೆ. ಮಾಹಿತಿ ಸಂಗ್ರಹಣೆಯನ್ನು ಲೆಕ್ಕಪದ್ಧತಿಗೆ ತಳಕು ಹಾಕಿದರೂ ಪ್ರಯೋಜನವಾಗದು. ಒಂದೇ ಬಗೆಯ ಕೆಲಸವನ್ನು ಎರಡು ಬಾರಿ ಮಾಡುವಂತಾಗಬಹುದು.

ಸಂಗ್ರಹಣೆಯಾದ ಮಾಹಿತಿ ಲೆಕ್ಕಪದ್ಧತಿಯ ಉಪೋತ್ಪನ್ನವಾಗುವಂತೆ, ಮಾಹಿತಿ ಸಂಗ್ರಹಣೆಯೂ ಲೆಕ್ಕ ದಾಖಲೆಯೂ ಏಕಕಾಲದಲ್ಲಿ ಒಂದೇ ಪರಿಕರ್ಮದಿಂದ ಆಗುವಂತೆ ಮಾಡುವುದಾದರೆ ಆದ್ದರಿಂದ ಎಷ್ಟೋ ಕಾಲದ ಹಾಗೂ ವೆಚ್ಚದ ಉಳಿತಾಯ ಆಗುತ್ತದೆ. ಆದ್ದರಿಂದ ಗಣಕವನ್ನು ಅಳವಡಿಸುವಾಗ, ಒಂದೊಂದು ದಾಖಲೆಯಿಂದಲೂ ಯಾವ ಯಾವ

ನಿಟ್ಟಿನಲ್ಲಿ ಏನೇನು ಫಲ ಪಡೆಯಬಹುದೆಂಬುದನ್ನು ಯೋಚಿಸಿ ಅದಕ್ಕೆ ತಕ್ಕಂತೆ ಸಮಗ್ರವಾದ ವ್ಯವಸ್ಥೆಯನ್ನು ರೂಪಿಸುವುದು ಅಗತ್ಯ. ಗಣಕ ವ್ಯವಸ್ಥೆಗೆ ಊಡಬಯಸುವ ನಿವಿಷ್ಟಿಯನ್ನು (ಇನ್‌ಪುಟ್) ಈ ದೃಷ್ಟಿಯಿಂದ ನಿರ್ಧರಿಸಬೇಕಾಗುತ್ತದೆ. ತೀರ್ಮಾನ ಕೈಗೊಳ್ಳಬೇಕಾದವನಿಗೆ ಅಗತ್ಯವಾದ ಎಲ್ಲ ಮಾಹಿತಿಯನ್ನೂ, ಫಲಗಳನ್ನೂ ಕ್ಷಣಾರ್ಧದಲ್ಲಿ ಒದಗಿಸಬಲ್ಲ ರೀತಿಯಲ್ಲಿ ಅದನ್ನು ಗೊತ್ತುಪಡಿಸಬೇಕು.

ಅಂತರಶಾಖಾಶಿಲ್ಕುಗಳ ಸಮನ್ವಯ, ವರದಿಗಳ ಕ್ರೋಢೀಕರಣ ಮುಂತಾದವಕ್ಕೆ ಈಗಾಗಲೇ ಕಂಪ್ಯೂಟರ್‌ಗಳ ನೆರವು ಪಡೆದುಕೊಳ್ಳಲಾಗುತ್ತಿದೆ. ಬ್ಯಾಂಕುಗಳಲ್ಲಿ ಸ್ಥಾಪಿಸಲಾಗುವ ಹೊಸ ಕಂಪ್ಯೂಟರ್ ವ್ಯವಸ್ಥೆಯಲ್ಲಿ ಇವನ್ನೆಲ್ಲ ಅಡಕಮಾಡಿ ಸಮಗ್ರವಾದ ಪದ್ಧತಿಯನ್ನು ರೂಪಿಸುವ ವಿಚಾರವಾಗಿ ಪುನರ್ಪರಿಶೀಲನೆ ನಡೆಸಬೇಕು. ಯಾವುದೇ ಹೊಸ ವ್ಯವಸ್ಥೆ ತರ್ಕಬದ್ಧವಾಗಿರಬೇಕು. ಹಂತದಿಂದ ಹಂತಕ್ಕೆ ಕೊಂಡೊಯ್ಯುವಂತಿರಬೇಕು. ದಾಖಲೆ ವ್ಯವಸ್ಥೆಯ ಸರಳೀಕರಣ, ವ್ಯವಸ್ಥಾಪನಕ್ಕೆ ಅಗತ್ಯವಾಗುವ ಎಲ್ಲ ಮಾಹಿತಿಗಳ ಸಂಗ್ರಹಣ ಹಾಗೂ ಪೂರೈಕೆ – ಹೀಗೆ ಇಂದಿನ ಹಾಗೂ ಮುಂದಿನ ಎಲ್ಲ ಅಗತ್ಯಗಳನ್ನೂ ಗಣನೆಗೆ ತಂದುಕೊಂಡ ಸಮಗ್ರ ವ್ಯವಸ್ಥೆಯ ಸ್ಥಾಪನೆಯಿಂದ ಗಣಕೀಕರಣ ದುಬಾರಿ ವೆಚ್ಚದ್ದಾಗದು. ಇಲಾಖೆಯ ದೃಷ್ಟಿಯಿಂದ ನೋಡುವ ಬದಲು ಇಡೀ ಬ್ಯಾಂಕಿಂಗ್ ಸಂಸ್ಥೆಯ ದೃಷ್ಟಿಯಿಂದ ಪರಿವೀಕ್ಷಿಸಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟು ಅಧ್ಯಯನ ನಡೆಸಬೇಕಾಗುತ್ತದೆ.

ಗಣಕ ವ್ಯವಸ್ಥೆಯನ್ನು ಯಾವುದೇ ವಿಭಾಗದಲ್ಲಿ ಜಾರಿಗೆ ತರಬೇಕಾದ ಪಕ್ಷದಲ್ಲಿ, ಅದನ್ನು ಬಳಸುವ ಬಗ್ಗೆ ನಿರ್ವಾಹಕರಿಗೆ ಸ್ಪಷ್ಟವಾದ ಅರಿವು ಇರಬೇಕಾದ್ದು ಅಗತ್ಯ. ಗಣಕ ವ್ಯವಸ್ಥೆಗೆ ಪೂರ್ವಭಾವಿಯಾಗಿ ಕೆಲವು ಅಗತ್ಯಗಳ ಪುರೈಕೆಯಾಗಬೇಕು : ಮೊದಲನೆಯದಾಗಿ, ಪ್ರಸಕ್ತ ವಿಧಾನಗಳಲ್ಲಿ ಯುಕ್ತವಾವ ಬದಲಾವಣೆಗಳನ್ನು ಮಾಡಬೇಕು. ಎರಡನೆಯದಾಗಿ, ಬಹಳ ಸುಲಭವಾದ ಪರಿಕರ್ಮಗಳಿಗೆ ಗಣಕ ಬಳಕೆ ಮಾಡುವುದು ಬೇಡ. ವ್ಯವಹಾರದಲ್ಲಿಯ ಕ್ಲಿಷ್ಟವಾದ ಸಂದಿಗ್ಧವಾದ ಹಂತಗಳಲ್ಲಿ ಗಣಕವನ್ನು ಎಷ್ಟು ಯಶಸ್ವಿಯಾಗಿ ಬಳಸಬಹುದೆಂಬುದರ ಬಗೆಗೆ ಪರೀಕ್ಷಣ ನಡೆಸಬೇಕು. ವ್ಯವಸ್ಥೆಗಳು, ಪ್ರಕ್ರಮಗಳು, ತೀರ್ಮಾನ ತೆಗೆದುಕೊಳ್ಳುವುದನ್ನು ಕುರಿತ ನಿಯಮಗಳು – ಇವೆಲ್ಲವನ್ನು ಅರ್ಥ ಮಾಡಿಕೊಂಡು ದಾಖಲಿಸಿದ ಮೇಲೆಯೇ ಗಣಕೀಕರಣದ ಕ್ರಮ ತೆಗೆದುಕೊಳ್ಳಬೇಕು. ಗಣಕ ವ್ಯವಸ್ಥೆಯನ್ನು ದಿಢೀರನೆ ಜಾರಿಗೆ ತರಲಾಗುವುದಿಲ್ಲ. ಮುಂದಾಗಿಯೇ ಎಲ್ಲವನ್ನೂ ಯೋಜಿಸಬೇಕು. ಮೂರನೆಯದಾಗಿ, ಯಾವುದೇ ಗೊತ್ತಾದ ಪರಿಕರ್ಮಗಳಿಗೆ ಕಂಪ್ಯೂಟರನ್ನು ಬಳಸುವ ಬಗ್ಗೆ ಹಿರಿಯ

ನಿರ್ವಹಣಾಧಿಕಾರಿಗಳು ಖುದ್ದಾಗಿ ತೀರ್ಮಾನ ತೆಗೆದುಕೊಳ್ಳುವ ಆಸಕ್ತಿವಹಿಸಬೇಕು. ಈ ತೀರ್ಮಾನವನ್ನು ಇತರರಿಗೆ ಬಿಡಬಾರದು. ಹಿಂದೆ ಹೇಳಿದ ಹಾಗೆ ವ್ಯವಸ್ಥೆಯ ಅಧ್ಯಯನದ ಅನಂತರವೇ ಗಣಕೀಕರಣದ ಸ್ವರೂಪ ವ್ಯಾಪಕತೆಗಳನ್ನು ನಿರ್ಧರಿಸಬೇಕು.

ಒಟ್ಟಿನಲ್ಲಿ ಗಣಕೀಕರಣದ ಬಗ್ಗೆ ಕೆಲವು ಸ್ಥೂಲ ನಿಯಮಗಳನ್ನು ಇಲ್ಲಿ ಉಲ್ಲೇಖಿಸಬಹುದು : ಗಣಕೀಕರಣಗೊಳಿಸುವ ಯಾವುದೇ ಕ್ಷೇತ್ರದಲ್ಲಿ ಅದಿಲ್ಲದಿದ್ದರೆ ಕೆಲಸ ಸುಗಮವಾಗಿ ಸಾಗುವುದಿಲ್ಲವೇ? ಸಂಸ್ಥೆ ಸಮಸ್ಯೆಗಳನ್ನು ಎದುರಿಸುತ್ತಿದೆಯೆ? ಅಥವಾ ಭವಿಷ್ಯದಲ್ಲಿ ಸಮಸ್ಯೆಗಳು ಉದ್ಭವಿಸುತ್ತವೆಯೆಂಬ ನಿರೀಕ್ಷೆ ಇದೆಯೆ?

ಈ ಪ್ರಶ್ನೆಗೆ ಉತ್ತರ 'ಹೌದು' ಎಂದಾದರೆ ಗಣಕದ ಸ್ಥಾಪನೆಯ ಬಗ್ಗೆ ಮುಂದೆ ಹೆಜ್ಜೆ ಇಡಿ. ಇಲ್ಲ ಎಂದಾದರೆ ಗಣಕೀಕರಣ ಬೇಡ.

ಗಣಕವನ್ನು ಬಳಸುವುದೆಂದು ಮುಂದೆ ಹೆಜ್ಜೆ ಇಡುವಿರಾದರೆ, ಆ ಕ್ಷೇತ್ರದ ಇಡೀ ವ್ಯವಸ್ಥೆಗಳೂ ಪ್ರಕ್ರಮಗಳೂ ಸಮರ್ಪಕವಾಗಿ ರೂಪಿತವಾಗಿವೆಯೆ? ಅವನ್ನೆಲ್ಲಾ ದಾಖಲೆಗೊಳಿಸಲಾಗಿದೆಯೆ?

ಈ ಪ್ರಶ್ನೆಗೆ 'ಹೌದು' ಎಂದು ಉತ್ತರವಾದರೆ : ಇನ್ನೊಂದು ಹೆಜ್ಜೆ ಮುಂದೆ ಇಡಿ. 'ಇಲ್ಲ' ಎಂಬುದು ಉತ್ತರವಾದರೆ, ವ್ಯವಸ್ಥೆಗಳನ್ನು ಹಾಗೂ ಪ್ರಕ್ರಮಗಳನ್ನು ಸುಧಾರಿಸಲು, ನೇರ್ಪಗೊಳಿಸಲು ಸಂಶೋಧನೆ ಹಾಗೂ ಅಭಿವೃದ್ಧಿ ಅಧ್ಯಯನ ನಡೆಸಿ, ಇದನ್ನು ಮಾಡಿದ ಮೇಲೂ ಸಮಸ್ಯೆ ಹಾಗೆಯೇ ಉಳಿದಿದ್ದು ಗಣಕೀಕರಣ ವಿನಾ ಸುಲಭ ಹಾಗೂ ಶೀಘ್ರ ಪರಿಕರ್ಮ ಸಾಧ್ಯವಿಲ್ಲವೆಂದಾದರೆ ಗಣಕೀಕರಣದ ಹಾದಿಯಲ್ಲಿ ಇನ್ನೊಂದು ಹೆಜ್ಜೆ ಮುಂದೆ ಇಡಿ, ಗಣಕದ ಬಳಕೆಗೆ ಅಗತ್ಯವಾದ ಅಧ್ಯಯನ ನಡೆಸಿ ಗಣಕವನ್ನು ಅಳವಡಿಸುವುದೆಂದಾದರೆ, ಅದಕ್ಕೆ ಇಡೀ ದಿನದ ಕೆಲಸ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ. ಉಂಟೆಂದಾದರೆ ಗಣಕವನ್ನು ಕೊಳ್ಳುವ ಅಥವಾ ಗುತ್ತಿಗೆಗೆ ಪಡೆಯುವ ತೀರ್ಮಾನ ಮಾಡಿ. ಪೂರ್ಣ ವೇಳೆ ಅದರ ಪ್ರಯೋಜನವಿಲ್ಲವೆಂದೆನಿಸಿದರೆ ಗಣಕ ಸಲಹೆಗಾರರೊಂದಿಗೆ ಒಪ್ಪಂದ ಮಾಡಿಕೊಳ್ಳಿ ಅಥವಾ ನಿಮ್ಮಂಥ ಇತರ ಸಂಸ್ಥೆಗಳೊಂದಿಗೆ ಕೂಡಿ ಗಣಕ ಪಡೆಯಿರಿ.

ಗಣಕ ಸ್ಥಾಪನೆಯ ಬಗ್ಗೆ ಅಧ್ಯಯನ ನಡೆಸುವ ಪರಿಣತರ ತಂಡ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ: ಸೂಚಿತ ವ್ಯವಸ್ಥೆಯ ಉದ್ದೇಶಗಳೇನು? ಈ ಉದ್ದೇಶಗಳನ್ನು ವ್ಯವಸ್ಥೆ ಹೇಗೆ ಪೂರೈಸಬಲ್ಲುದು? ಸೂಚಿತ ವ್ಯವಸ್ಥೆಯಿಂದ ಸಂಸ್ಥೆಯ ಸರ್ವಾಂಗೀಣ ಯೋಜನೆ – ನಿರ್ದೇಶನ –

ನಿಯಂತ್ರಣಗಳು ಗಮನಾರ್ಹವಾಗಿ ಉತ್ತಮಗೊಳ್ಳುವವೆ? ಈಗಿನ ವ್ಯವಸ್ಥೆಗಿಂತ ಈ ಹೊಸ ವ್ಯವಸ್ಥೆ ಯಾವ ಸುಧಾರಣೆಗಳನ್ನು ತರುತ್ತದೆ? ಇವನ್ನು ಅಳತೆ ಮಾಡಬಹುದೆ? ಹೊಸ ವ್ಯವಸ್ಥೆಯಿಂದ ಎಷ್ಟರ ಮಟ್ಟಿನ ಉಳಿತಾಯವಾಗುತ್ತದೆ? ಈ ಉಳಿತಾಯ ಪರಿಸ್ಥಿತಿ ಎಷ್ಟು ಕಾಲ ಇರಬಹುದು? ಇದನ್ನು ನಿರ್ವಹಿಸಲು ಹಣಕಾಸು, ಭೌತ ಹಾಗೂ ಮಾನವಸಂಪತ್ತಿನ ರೂಪದಲ್ಲಿ ಇದಕ್ಕಾಗಿ ಹೂಡಬೇಕಾಗುವ ವಿನಿಯೋಜನೆ (ಇನ್‌ವೆಸ್ಟ್ಮೆಂಟ್) ಎಷ್ಟು? ಸಂಸ್ಥೆಯ ಈಗಿನ ಅನುಭವದಿಂದಲೇ ಈ ವ್ಯವಸ್ಥೆಯನ್ನು ನಿರ್ವಹಿಸಬಹುದೆ? ಇಲ್ಲವಾದರೆ ಈ ಗಣಕ ವ್ಯವಸ್ಥೆಯನ್ನು ನಿರ್ವಹಿಸಲು ಅಗತ್ಯವಾದ ಕೌಶಲವನ್ನು ಸಂಸ್ಥೆ ಹೇಗೆ ಪಡೆದುಕೊಳ್ಳುತ್ತದೆ. ಹೊಸದಾಗಿ ಕುಶಲ ಕೆಲಸಗಾರರನ್ನು ನೇಮಿಸಿಕೊಳ್ಳುವುದರ ಮೂಲಕವೆ? ಹಾಗಾದರೆ ಅವರ ಸೇವೆ ಲಭ್ಯವಾಗುವದು ಯಾವಾಗ? ಸಲಹೆಗಾರರ ಸೇವೆ ಪಡೆಯುವುದಾದರೆ ಎಷ್ಟು ಕಾಲ? ಅಗತ್ಯ ಸಿಬ್ಬಂದಿ, ಪದ್ಧತಿಗಳು, ಗ್ರಾಹಕರ ಸೇವೆ ಮುಂತಾದವನ್ನು ಕುರಿತಂತೆ ನೀವು ಮಾಡಬಯಸುವ ಬದಲಾವಣೆಗಳು ಬ್ಯಾಂಕಿನ ನೀತಿಗಳಿಗೆ ಅನುಗುಣವಾಗಿವೆಯೆ? ಅಥವಾ ನೀತಿಗಳಲ್ಲೇ ಬದಲಾವಣೆ ಅಗತ್ಯವೆ? ಇಂಥ ಬದಲಾವಣೆಗಳು ಯಾವವು? ಈ ಪ್ರಶ್ನೆಗೆ ಅಧ್ಯಯನ ತಂಡ ಸಮರ್ಪಕವಾದ ಉತ್ತರ ನೀಡಿದರೆ ಆ ತಂಡಕ್ಕೆ ಸಂಸ್ಥೆಯ ಕಲಾಪಗಳ ಅನುಭವ ಇರಬೇಕು. ದತ್ತಾಂಶ ಪ್ರಕ್ರಮೀಕರಣಕ್ಕಾಗಿ (ಡೇಟಾ ಪ್ರೋಸೆಸಿಂಗ್) ಬಳಸಬಹುದಾದ ಸಲಕರಣೆಗಳ ಜ್ಞಾನವಿರಬೇಕು. ಸಂದರ್ಶನಗಳನ್ನು ನಡೆಸುವ ಹಾಗೂ ದತ್ತಾಂಶವನ್ನು ವಿಶ್ಲೇಷಿಸಿ ಸಂಕ್ಷೇಪಿಸುವ ಕೌಶಲವಿರಬೇಕು, ವೈಜ್ಞಾನಿಕ ವ್ಯವಸ್ಥಾಪನ (ಸೈಯಿಂಟಿಫಿಕ್ ಮ್ಯಾನೇಜ್‌ಮೆಂಟ್) ವಿಧಾನಗಳ ಸಾಕಷ್ಟು ಜ್ಞಾನವಿರಬೇಕು.

ವ್ಯವಸ್ಥೆಯ ಅಧ್ಯಯನ ಮಾಡುವುದರಲ್ಲಿ ಅನೇಕ ಸಲಹಾ ಸಂಸ್ಥೆಗಳು ಮುಂದೆ ಬರುವುದುಂಟು. ಗಣಕ ತಯಾರಿಕಾ ಸಂಸ್ಥೆಗಳೂ ಈ ನೆರವು ನೀಡಬಹುದು, ಆದರೆ ಸಾಧ್ಯವಾದಷ್ಟು ಮಟ್ಟಿಗೆ ಹೊರಗಿನ ಅಭಿಕರಣಗಳ ನೆರವನ್ನು ಈ ವಿಚಾರದಲ್ಲಿ ತೆಗೆದುಕೊಳ್ಳದಿರುವುದು ಮೇಲು. ಗಣಕದ ಸ್ಥಾಪನೆಗೆ ಬೇಕಾದ ಉಪಕರಣ ತಂತ್ರಜ್ಞಾನವನ್ನೊದಗಿಸಿ ಲಾಭ ಪಡೆಯುವ ಸಂಸ್ಥೆಗಳನ್ನು ವ್ಯವಸ್ಥೆಯ ಅಧ್ಯಯನ ಕಾರ್ಯದಲ್ಲಿ ಉಪಯೋಗಿಸಿಕೊಳ್ಳಬಾರದು. ಏಕೆಂದರೆ ಅವು ತಮ್ಮ ಲಾಭದ ದೃಷ್ಟಿಯಿಂದಲೇ ನಿಮಗೆ ಸಲಹೆ ನೀಡುತ್ತವೆ, ನಿಮ್ಮ ಅನುಕೂಲದ ದೃಷ್ಟಿಯಿಂದ ಅಲ್ಲ.

ವ್ಯವಸ್ಥೆಯ ಅಧ್ಯಯನ ನಡೆಸಿದ ಮೇಲೆ, ಗಣಕಾಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕೆಂದು ತೀರ್ಮಾನವಾದರೆ ಆಗ ನಿಮಗೆ ಅತ್ಯಂತ ಉಚಿತವಾದ, ಕಡಿಮೆ ವೆಚ್ಚದ

ಗಣಕ ಸಂಪಾದನೆಯ ವಿಧಾನವನ್ನು ಆರಿಸಿಕೊಳ್ಳಬೇಕು. ನೇರವಾಗಿ ನೀವು ಗಣಕ ಕೊಳ್ಳಬಹುದು, ಇಲ್ಲವೇ ಗುತ್ತಿಗೆಗೆ ಪಡೆಯಬಹುದು. ಕೊಳ್ಳಲು ಮೂಲತಃ ಅಗಾಧ ಹಣ ಬೇಕು, ಆದರೆ ಇದರಿಂದ ನೀವು ಸ್ವತಂತ್ರರಾಗುತ್ತೀರಿ, ತೆರಿಗೆಯ ವಿನಾಯಿತಿಯು ದೊರಕಬಹುದು. ಮೂರು ನಾಲ್ಕು ವರ್ಷಗಳೊಳಗೆ ಅದನ್ನು ನೀವು ಪೂರ್ಣವಾಗಿ ಬಳಸಿಕೊಳ್ಳಬಹುದೆನಿಸಿದರೂ ಕೊಳ್ಳುವುದು ಮೇಲು. ಅಗತ್ಯವಾದ ಸಿಬ್ಬಂದಿಗೆ ತರಬೇತು ನೀಡಬೇಕು. ಕೊಳ್ಳದಿದ್ದರೆ ಅದನ್ನು ಗುತ್ತಿಗೆಗೆ (ಲೀಸ್) ಪಡೆಯಬಹುದು. ಆದರೆ ಇದಕ್ಕಾಗಿ ಮೂರು ನಾಲ್ಕು ವರ್ಷಗಳಲ್ಲಿ ನೀವು ಕೊಡುವ ಹಣ ಹೊಸ ಗಣಕದ ಬೆಲೆಗೇ ಸಮನಾಗಬಹುದು. ಹಾಗಿದ್ದರೆ ಕೊಳ್ಳುವುದೇ ಮೇಲು. ಗಣಕವನ್ನು ಪೂರ್ಣವೇಳೆ ಬಳಸಿಕೊಳ್ಳುವ ಸಾಧ್ಯತೆ ಇಲ್ಲದಿದ್ದರೆ ಗೊತ್ತಾದ ವೇಳೆಗೆ ಬಾಡಿಗೆಗೆ ಪಡೆಯಬಹುದು, ಗಣಕದ ಸಲಹೆಗಾರರೊಂದಿಗೆ ಒಪ್ಪಂದ ಮಾಡಿಕೊಂಡು ಅವರ ಸೇವೆ ಪಡೆಯಬಹುದು, ಆದರೆ ಈ ರೀತಿ ಹೊರಗಡೆ ದತ್ತಾಂಶ ಪ್ರಕ್ರಮ ಮಾಡಿಸಿಕೊಳ್ಳುವುದರಿಂದ ಗಣಕದ ಬಳಕೆಯ ಪೂರ್ಣಫಲ ನಿಮಗೆ ದೊರಕದು. ಅದರ ಉಪೋತ್ಪನ್ನಗಳು ಲಭ್ಯವಾಗವು. ಸದಾ ಗಣಕದ ಸಾನ್ನಿಧ್ಯದಲ್ಲಿದ್ದಾಗ ಹೊಸ ಹೊಸ ಪ್ರಯೋಜನಗಳು ಹೊಳೆದಾವು. ಒಂದೇ ಬಗೆಯ ಸೇವೆ ಸಲ್ಲಿಸುವ ಹಲವು ಸಂಸ್ಥೆಗಳು ಸಹಕರಿಸಿ ಗಣಕವನ್ನು ಸ್ಥಾಪಿಸಿ ಸಹಕಾರ ತತ್ತ್ವದ ಮೇಲೆ ಅದರ ವೆಚ್ಚವನ್ನೂ ಪ್ರಯೋಜನವನ್ನೂ ಹಂಚಿಕೊಳ್ಳಬಹುದು. ದೊಡ್ಡ ನಗರಗಳಲ್ಲಿ ಇದು ಸಾಧ್ಯ. ಒಟ್ಟಿನಲ್ಲಿ ಸರಿಯಾದ ಗಣಕದ ಆಯ್ಕೆ ಅತ್ಯಂತ ಮುಖ್ಯವಾದ್ದು.

ಯಾವುದೇ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವಾಗ ಅಂಥ ಬದಲಾವಣೆಗೆ ವಿರೋಧ ಇದ್ದೇ ಇರುತ್ತದೆ. ಯಥಾ ಸ್ಥಿತಿ ಮುಂದುವರಿಕೆಯಿಂದ ಹಿಂಸೆ ಇರುವುದಿಲ್ಲವೆಂಬುದು ಒಂದು ಕಾರಣ. ಉದ್ಯೋಗ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟಾಗಬಹುದೆಂಬ ಅಂಜಿಕೆ ಇನ್ನೊಂದು ಕಾರಣ. ಯಂತ್ರಗಳು ಬಂದಾಗಲೂ ಇಂಥ ವಿರೋಧವಿತ್ತು. ಹತ್ತು ಜನ ನೂರು ಜನ ಮಾಡುವ ಕೆಲಸವನ್ನು ಒಂದು ಯಂತ್ರ ಮಾಡುವುದಾದರೆ, ಅದನ್ನು ಒಬ್ಬ ನಿರ್ವಹಿಸಬಹುದಾದರೆ, ಉಳಿದ ಒಂಬತ್ತು ಜನಕ್ಕೊ ತೊಂಬತ್ತೊಂಬತ್ತು ಜನಕ್ಕೋ ಕೆಲಸ ಇಲ್ಲದಂತಾಗದೆ? ಆದರೆ ಯಂತ್ರದಿಂದ ಉತ್ಪಾದನೆ ಹೆಚ್ಚಿ, ಆರ್ಥಿಕ ಚಟುವಟಿಕೆ ಹಿಗ್ಗಿ, ಹೊಸಹೊಸ ಉದ್ಯೋಗಗಳ ಸೃಷ್ಟಿಯಾಗುವ ಸಾಧ್ಯತೆಯೂ ಇಲ್ಲದಿಲ್ಲ. ಹಿಂದೆಲ್ಲಾ ಹೀಗೆ ಆಗಿರುವ ಅನುಭವವುಂಟು. ಸ್ವಯಂಚಲೀ ವ್ಯವಸ್ಥೆ – ಗಣಕ ವ್ಯವಸ್ಥೆ ಬಂದಾಗ ವ್ಯವಹಾರಗಳು ಸುಗಮವಾಗಿ, ಶೀಘ್ರವಾಗಿ, ಗ್ರಾಹಕರಿಗೆ ಬೇಗ ಸೇವೆ ಸಂದು, ತೀರ್ಮಾನ ಕೈಗೊಳ್ಳುವುದು ಸುಲಭವಾಗಿ, ಅದಕ್ಕನುಗುಣವಾಗಿ

ಸೇವಾ ಕ್ಷೇತ್ರ, ಕಲಾಪಗಳ ವ್ಯಾಪ್ತಿ ವೈವಿಧ್ಯಗಳು ಬೆಳೆದು ಹೆಚ್ಚು ಜನಕ್ಕೆ ಹೊಸ ಬಗೆಯ ಉದ್ಯೋಗಗಳು ದೊರಕುವ ಸಾಧ್ಯತೆಯೂ ಇಲ್ಲದಿಲ್ಲ. ಸರಿಯಾಗಿ ಯೋಜಿಸಲಾದ ಕಾರ್ಯಕ್ರಮಗಳಿಂದ ಬದಲಾವಣೆಯ ಹಿಂಸೆಯನ್ನು ತಪ್ಪಿಸಬಹುದು. ಸಂಸ್ಥೆಯಲ್ಲಿರುವ ಜನಕ್ಕೆ ಅಸಮಾಧಾನವಾಗದ ರೀತಿಯಲ್ಲಿ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವುದರಲ್ಲೇ ವ್ಯವಸ್ಥಾಪಕರ ಜಾಣ್ಮೆ ಇರುತ್ತದೆ.

ಗಣಕದ ವಿಚಾರವಾಗಿ ಇನ್ನೊಂದು ಎಚ್ಚರಿಕೆಯ ಮಾತನ್ನಿಲ್ಲಿ ಹೇಳಬೇಕು. ಗಣಕ ತಪ್ಪು ಮಾಡುವುದೇ ಎಂಬುದು ಪ್ರಶ್ನೆ. ನಮ್ಮ ಅಂಕಿಗಳು ಸರಿಯಾಗಿವೆ. ಆದರೆ ಗಣಕ ತಪ್ಪು ಮಾಡಿದೆ ಎಂಬ ಉದ್ಗಾರವನ್ನು ಗಣಕದ ಬಳಕೆದಾರರು ಮಾಡುವುದುಂಟು. ಗಣಕ ತಪ್ಪು ಮಾಡದು. ಗಣಕದ್ದು ರಾಕ್ಷಸ ಜಾತಿ, ಎಷ್ಟೇ ಅಂಕಿಗಳನ್ನಾದರೂ ಅದು ಕಬಳಿಸಬಲ್ಲುದು. ಆದರೆ ಗಣಕ ವ್ಯವಸ್ಥೆಯ ವಿನ್ಯಾಸ, ಅಭಿವೃದ್ಧಿ ಮತ್ತು ಅನ್ವಯದ ಪ್ರತಿಯೊಂದು ಹಂತದಲ್ಲೂ ಮಾನವನ ಕೈ ಇದ್ದೇ ಇರಬೇಕು. ಗಣಕಕ್ಕೆ ಊಡಬೇಕಾದ ಅಗಾಧ ದತ್ತಾಂಶ ರಾಶಿಯ ಸಂಗ್ರಹಣೆಯಲ್ಲಿ ತಪ್ಪಿರಬಾರದು. ಇಲ್ಲೇ ತಪ್ಪಾದರೂ ಗಣಕ ಸರಿಯಾದ ಫಲಿತಾಂಶ ನೀಡದು. ಗಾಡಿಗೆ ಕಟ್ಟಿದ ಮೊಂಡು ಕುದುರೆಯ ಹಾಗೇ ಅದು ಚಲಿಸಲೊಲ್ಲದೆ ಹೋಗಬಹುದು. ಆದ್ದರಿಂದ ಗಣಕಕ್ಕೆ ಊಡಬೇಕಾದ ನಿವಿಷ್ಟಿಗಳನ್ನು ನಿಯಂತ್ರಕ್ಕೊಳಪಡಿಸಬೇಕು. ಗಣಕ ವ್ಯವಸ್ಥೆಯನ್ನು ಸರಿಯಾಗಿ ಬಳಸುವ ಬಗ್ಗೆ ಸಂಬಂಧಪಟ್ಟವರಿಗೆ ಯುಕ್ತವಾದ ಶಿಕ್ಷಣ ನೀಡಬೇಕು. ಆರಂಭದ ಹಂತದಲ್ಲಿ ಈ ವಿಚಾರಗಳಿಗೆಲ್ಲಾ ಗಮನ ನೀಡುವುದು ಅತ್ಯಗತ್ಯ. ಗಣಕದ ಅಳವಡಿಕೆಯ ಕಾರ್ಯಕ್ಕೆ ಸಂಬಂಧಿಸಿದಂತೆ ವ್ಯವಸ್ಥೆ ಹಾಗೂ ಪ್ರಕ್ರಮಗಳ ಸರಳೀಕರಣ, ಅಧೋರಚನೆಯ ನಿರ್ಮಾಣ, ಮಾಹಿತಿ ಸಂರಚನೆಯ ಸುಧಾರಣೆ, ಸರಿಯಾದ ಗಣಕ ವ್ಯವಸ್ಥೆಗಳ ಆಯ್ಕೆ ಇವೆಲ್ಲ ಮುಖ್ಯ, ಸಮಗ್ರವಾದ ಗಣಕ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇದು ಯಶಸ್ವಿಯಾಗಬೇಕಾದರೆ ವಿಭಿನ್ನ ವಿಧಾನಗಳ ಸಮಗ್ರ ದೃಷ್ಟಿಯುಳ್ಳ ಪರಿಣತರ ತಂಡಕ್ಕೆ ಇದನ್ನು ಒಪ್ಪಿಸಿ ಇದರ ಶಿಸ್ತಿಗೆ ಎಲ್ಲವನ್ನೂ ಒಳಪಡಿಸಬೇಕು. ಈ ತಂಡಕ್ಕೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ನೀಡಬೇಕಾದ್ದೂ ಅಗತ್ಯ.

ನಾವು ಈಗ ಆಡುತ್ತಿರುವ ಮಾತೆಲ್ಲಾ ಸಾಮಾನ್ಯವಾದ ಗಣಕಗಳನ್ನು ಕುರಿತದ್ದು. ಇದುವರೆಗೆ ಗಣಕಗಳಲ್ಲಿ ಪ್ರಮುಖವಾಗಿ ನಾಲ್ಕು ಪೀಳಿಗೆಗಳಿವೆ (ಜನರೇಷನ್ಸ್). ಸ್ಮರಣೆ, ಪ್ರಕ್ರಮ ಸಾಮರ್ಥ್ಯ, ವೇಗ – ಈ ಮೂರು ವಿಚಾರಗಳಲ್ಲಿ ಒಂದು ಪೀಳಿಗೆಗಿಂತ ಇನ್ನೊಂದು ಪೀಳಿಗೆ ಉತ್ತಮತರದ್ದಾಗಿದೆ. ಅದಕ್ಕೆ ಅವುಗಳ ಭಾಷೆಗಳನ್ನೇ ಬಳಸಬೇಕು

(Fortran), ಅಲ್ಗೋಲ್ (Algol) ಕೊಬೋಲ್ (Cobol), ಬೇಸಿಕ್ (Basic) ಮುಂತಾದವು ಈ ಭಾಷೆಗಳು. ನಾವು ಸಾಮಾನ್ಯವಾಗಿ ಮಾತಾಡುವ ಅಥವಾ ಬರೆಯುವ ಭಾಷೆಗಳು ಅದಕ್ಕೆ ಅರ್ಥವಾಗುವುದಿಲ್ಲ. ಅಲ್ಲದೆ ಅವು ಕೆಲವು ನಿರ್ದಿಷ್ಟ ಗಣಿಕೀಯ ಹಾಗೂ ತಾರ್ಕಿಕ ಕಾರ್ಯಭಾರಗಳನ್ನು ಮಾತ್ರ ನಡೆಸಬಲ್ಲುವು, ಅದೂ ಅವಕ್ಕೆ ಆ ಸೂಚನೆ ನೀಡಿದಾಗ. ಇಂದಿನ ಗಣಕಗಳು ತಾವೇ ಆಲೋಚಿಸಲಾರವು, ಅವು ಸರ್ವಶಕ್ತವಲ್ಲ, ಮಾನವರು ನೀಡಿದ ಆದೇಶಗಳನ್ನು ಅವು ಪಾಲಿಸುತ್ತವೆ ಮಾತ್ರ.

ಜಪಾನ್, ಅಮೆರಿಕಾ ಮುಂತಾದ ದೇಶಗಳು ಈಗ ಐದನೆಯ ಪೀಳಿಗೆಯ ಕಂಪ್ಯೂಟರಿನ ತಯಾರಿಕೆಯ ಹಾದಿಯಲ್ಲಿ ನಡೆಯುತ್ತಿವೆ. ಇದೊಂದು ಮಹಾಕ್ರಾಂತಿಯಾಗಿ ಪರಿಣಮಿಸಬಹುದು. ಮಾನವ ಮಿದುಳಿನಂತೆ ಇದು ಮಾಹಿತಿಯನ್ನು ತಾನೇ ಪ್ರಕ್ರಮಗೊಳಿಸಬಹುದು. ಅದನ್ನು ಅರ್ಥೈಸಬಹುದು, ಆಧುನಾತನಗೊಳಿಸಬಹುದು, ಅಳವಡಿಸಿಕೊಳ್ಳಬಹುದು. ವಿವಿಧ ಕ್ಷೇತ್ರಗಳ ನಡುವೆ ನೇರಸಂಬಂಧ ಕಲ್ಪಿಸಿ ಕಾರ್ಯ–ಕಾರಣ ಸಂಬಂಧವನ್ನು ಗುರುತಿಸಿ ಇದ ಮಿತ್ಥಂ ಎಂದು ಸ್ವಯಮೇವ ನಿರ್ಣಯ ಕೈಗೊಳ್ಳಬಹುದು. ವಿಜ್ಞಾನ ಕಾದಂಬರಿಯ ಅದ್ಭುತಗಳು ವಾಸ್ತವಿಕವಾಗಿ ಸಂಭವಿಸಬಹುದು. ಇಂಥ ಗಣಕ ನಾವು ಆಡುವ ಭಾಷೆಯನ್ನೇ ಅರ್ಥಮಾಡಿಕೊಳ್ಳಬಹುದು. ಗಣಕಕ್ಕೆ ತಿಳಿಸಲು ಬಳಸಬೇಕಾದ ವಿಶಿಷ್ಟ ಭಾಷೆಯನ್ನು ಅರಿತಿರಬೇಕಾದ ಅಗತ್ಯವಿರದು. ಹಲವು ಪರಿಣತ ವ್ಯವಸ್ಥೆಗಳ ಸಂಕೀರ್ಣವಾಗಿ ಇದು ಕೆಲಸ ಮಾಡುವ ಸಾಧ್ಯತೆಯುಂಟು, ವೈದ್ಯ, ಹವಾ ಎಂಜಿನಿಯರಿಂಗ್, ಹೀಗೆ ಹಲವು ಕ್ಷೇತ್ರಗಳ ಪರಿಣತಿಯನ್ನು ಒಂದೇ ಯಂತ್ರ ಒಳಗೊಳ್ಳಬಲ್ಲುದು. ಒಂದು ಮಾನವ ಮಿದುಳಿಗೆ ಸಾಧ್ಯವಿಲ್ಲದ ರೀತಿ ಇದು ಕ್ಷಣಾರ್ಧದಲ್ಲಿ ಕೆಲಸ ಮಾಡಬಲ್ಲುದು. ತನ್ನ ಕಾರ್ಯವನ್ನು ತಾನೇ ನಿರ್ದೇಶಿಸುವುದಕ್ಕೂ ಇದು ಶಕ್ತವಾಗಿರುತ್ತದೆ. ಹಲವು ಭಾಷೆಗಳನ್ನು ಅರ್ಥಮಾಡಿಕೊಳ್ಳಬಲ್ಲ, ಅದದೇ ಭಾಷೆಯಲ್ಲಿ ಫಲಿತಾಂಶ ನೀಡಬಲ್ಲ, ತೀರ್ಮಾನ ತೆಗೆದುಕೊಳ್ಳಬಲ್ಲ, ಸಲಹೆ ನೀಡಬಲ್ಲ ಗಣಕ ಭಾರತದಂಥ ಬಹುಭಾಷಾದೇಶಕ್ಕೆ ತುಂಬ ಉಪಯುಕ್ತವಾಗಬಲ್ಲುದು. ಭಾಷೆಯ ಜಗಳವೇ ಅನಗತ್ಯವೆನಿಸಬಲ್ಲ ಅಂಥ ಕಾಲ ಬಂದರೂ ಬರಬಹುದು – ನಾವು ಈಗಿನಿಂದಲೇ ಜಾಣತನದ ಗಣಕ ವ್ಯವಸ್ಥೆಯ ಯೋಜನೆಯನ್ನು ಜಾರಿಗೆ ತಂದರೆ; ಜೊತೆಜೊತೆಗೇ ಸಂಶೋಧನೆಯೂ ಬೆಳೆದರೆ, ತಂತ್ರಜ್ಞಾನದ ನಿರ್ಮಾಣವಾದರೆ, ಆ ಕಾಲ ಬೇಗ ಬರಲೆಂದು ಹಾರೈಸಬಹುದಲ್ಲವೆ?

08.

1985 ಏಪ್ರಿಲ್
ಭಾರತದ ಬ್ಯಾಂಕಿಂಗ್ ಪರಿಸ್ಥಿತಿಯ ನೈಜ ಚಿತ್ರ

ಭಾರತದ ಬ್ಯಾಂಕಿಂಗ್ ವಲಯದಲ್ಲಿ ಈಚೀಚೆಗೆ ಬಹಳಷ್ಟು ಸಂಭವಿಸುತ್ತಿದೆ – ಒಳ್ಳೆಯದು, ಕೆಟ್ಟದ್ದು, ಕುರೂಪವಾದ್ದು, ಎಲ್ಲ.

ಬೆಳೆಯುವ ವ್ಯವಸ್ಥೆಯಲ್ಲಿ ಒಳ್ಳೆಯದರೊಂದಿಗೆ ಕೆಟ್ಟದ್ದೂ ಸೊಟ್ಟನಾದ್ದೂ ಸೇರಿಕೊಂಡೇ ಇರುವುದು ಸಾಮಾನ್ಯ – ಪ್ರವಾಹ ಬಂದಾಗ ಕಸಕಡ್ಡಿಗಳೂ ತೇಲಿ ಬರುವಂತೆ ಕ್ರಮೇಣ ನೀರು ತಳಿದು ತಿಳಿಯಾಗಿ ಮೊತ್ತವಾಗಿ ಗಂಭೀರವಾಗಿ ಪ್ರವಹಿಸುವ ಸ್ಥಿತಿ ಬರುವಂತೆ. ಬೆಳೆವಣಿಗೆ ಒಂದು ಘಟ್ಟ ಮುಟ್ಟಿದಾಗ ಸತ್ಪ್ರವೃತ್ತಿಗಳೇ ದೃಢವಾಗಿ ಬಲಿತು ಉಳಿಯುವುವೆಂಬುದು ಆಸೆ. ಆದರೆ ಹಾಗಾಗದೆ ಆಂತರಿಕ ವೈರುಧ್ಯಗಳಿಂದಾಗಿ ವ್ಯವಸ್ಥೆಯೇ ಕುಸಿದುಬೀಳುವಂಥ ಪ್ರವೃತ್ತಿಗಳೇ ಬಲಗೊಳ್ಳಬಹುದೆಂಬ ಅಂಜಿಕೆಯೂ ಇಲ್ಲದಿರುವುದಿಲ್ಲ.

ಮೂರು ರಾಷ್ಟ್ರೀಕೃತ ಬ್ಯಾಂಕುಗಳ ಮುಖ್ಯರ ಸೇವೆಯನ್ನು ಸರ್ಕಾರ ಮುಕ್ತಾಯಗೊಳಿಸುವ ಕ್ರಮವನ್ನು ಈಚೆಗೆ ತೆಗೆದುಕೊಂಡಿದ್ದು ಈ ಪ್ರವೃತ್ತಿಗಳು ಎಷ್ಟು ಬಲಗೊಂಡಿವೆಯೆಂಬುದರ ಸಂಕೇತ. ಕುಟ್ಟೆಯಂತೆ ಇಡೀ ವ್ಯವಸ್ಥೆಯನ್ನೇ ಕೊರೆದು ಹಾಕುತ್ತಿರುವ ವಿಷಾಣುಗಳ ಸಂಪೂರ್ಣ ಸ್ವರೂಪವೇನೂ ಬಯಲಾಗಿಲ್ಲ. ಮಂಜು ಗಡ್ಡೆಯ ಮಹಾಗಿರಿಯ ತುತ್ತತುದಿ ಮಾತ್ರವೇ ನಮಗೆ ಗೋಚರವಾಗಿರತಕ್ಕದ್ದು. ಅಗೋಚರವಾದ್ದು ಇನ್ನೂ ಬಹಳಷ್ಟು ಇದೆಯೆಂಬುದು ನಿರ್ವಿವಾದ.

ಅಪರಾಧಿಕ ಬ್ಯಾಂಕಿಂಗ್

ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕೇಂದ್ರೀಯ ಬ್ಯಾಂಕಿಂಗ್, ವಾಣಿಜ್ಯ ಬ್ಯಾಂಕಿಂಗ್, ಸಹಕಾರಿ ಬ್ಯಾಂಕಿಂಗ್ ಎಂದು ಮುಂತಾಗಿ ವಿಂಗಡಿಸುವುದು ಹಿಂದಿನಿಂದ ಬಂದಿರುವ ಪರಿಪಾಟಿ. ಈಗ ಇವುಗಳ ಜೊತೆಗೆ "ಅಪರಾಧಿಕ ಬ್ಯಾಂಕಿಂಗ್" ಎಂಬ ಇನ್ನೊಂದು ಪ್ರರೂಪವನ್ನೂ
ಸೇರಿಸಬೇಕಾದೀತೇನೋ!
ಠೇವಣಿಗಳನ್ನು ಸ್ವೀಕರಿಸುವುದು. ಚೆಕ್ಕುಗಳ ಮೇಲೆ ಹಣ ಪಾವತಿ ಮಾಡುವುದು ಇವೆರಡೂ ಬ್ಯಾಂಕುಗಳ ಮುಖ್ಯ ಕಾರ್ಯಭಾರಗಳಾಗಿರುವಂತೆ ಅಪರಾಧವೆಸಗುವುದೂ
ಆಗಿದೆಯೇನೋ ಎಂದು ವಿಸ್ಮಯ ಪಡಬೇಕಾದ ಪರಿಸ್ಥಿತಿ ಬಂದಿರುವಂತಿದೆ. ಈಗಾಗಲೇ ಬ್ಯಾಂಕಿಂಗ್ ವ್ಯವಸ್ಥೆಗೆ ಎಷ್ಟೊಂದು ಹಾನಿ ತಟ್ಟಿದೆಯೆಂಬುದನ್ನು ಖಚಿತವಾಗಿ ಹೇಳುವಂತಿಲ್ಲ. ಏಕೆಂದರೆ ಈ ಕಲಾಪಗಳ ಮೇಲೆ ರಹಸ್ಯದ ತೆರೆಯೊಂದು ಮುಸುಕಿಬಿಟ್ಟಿದೆ.

ಲಂಡನ್ನಿನ ಪ್ರಮುಖ ಭಾರತೀಯ

ಉದ್ಯಮಿಯೊಬ್ಬರ ಸಂಸ್ಥೆಗಳಿಗೆ ಭಾರತದ ಮೂರು ರಾಷ್ಟ್ರೀಕೃತ ಬ್ಯಾಂಕುಗಳು ಅಗಾಧ ಮೊತ್ತದ ಸಾಲಗಳನ್ನು ನೀಡಿದ್ದು, ಆ ಸಾಲಗಳನ್ನು ವಸೂಲುಮಾಡಲು ಸಾಧ್ಯವಾಗದಂಥ ಪರಿಸ್ಥಿತಿ ಒದಗಿಬಂದದ್ದು, ಈ ಸಾಲಗಳಿಗೆ ಸಂಬಂಧಿಸಿದ ಬಹುತೇಕ ವಹಿವಾಟುಗಳು ಕೇವಲ ಖೊಟ್ಟಿಯವಾಗಿದ್ದುದರಿಂದ ಬ್ಯಾಂಕುಗಳು ಭಾರಿ ನಷ್ಟ ಅನುಭವಿಸಬೇಕಾಗಿ ಬಂದದ್ದು, ರಿಸರ್ವ್ ಬ್ಯಾಂಕಿಗೂ ಭಾರತ ಸರ್ಕಾರಕ್ಕೂ ಈ ವಿಚಾರಗೊತ್ತಿದ್ದೂ ಪರಿಸ್ಥಿತಿ ಕೈಮೀರುವವರೆಗೂ ಅವು ಏನೂ ಕ್ರಮ ತೆಗೆದುಕೊಳ್ಳದೆ ಹೋದದ್ದು ಇವೆಲ್ಲಾ ಈಗ ಢಾಣಾಡಂಗುರವಾಗಿರುವ ಸಂಗತಿಗಳು. ತುಂಬಾ ವಿಚಿತ್ರದ ಸಂಗತಿಯೆಂದರೆ, ಭಾರತದ ನಿಯಮಾವಳಿಗಳಿರಲಿ, ಈ ಬ್ಯಾಂಕುಗಳು ಬ್ರಿಟಿಷ್ ನಿಯಮಗಳನ್ನು ಕೂಡ ಮುರಿದಿರತಕ್ಕದ್ದು. ಯಾವುದೇ ಬ್ಯಾಂಕು ತನ್ನ ಬಂಡವಾಳ ಹಾಗೂ ಮೀಸಲುಗಳ ಹತ್ತನೆಯ ಒಂದರಷ್ಟಕ್ಕಿಂತ ಹೆಚ್ಚು ಮೊಬಲಗನ್ನು ಯಾವನೇ ಒಬ್ಬ ವ್ಯಕ್ತಿಗೆ ಸಾಲವಾಗಿ ನೀಡಬಾರದೆಂಬುದು ಬ್ರಿಟಿಷ್ ಸರ್ಕಾರದ ದಿಗ್ದರ್ಶಕ ಸೂತ್ರಗಳಲ್ಲೊಂದು. ಈ ಭಾರತೀಯ ಬ್ಯಾಂಕುಗಳ ಇಂಗ್ಲೆಂಡ್ ಶಾಖೆಗಳು ಈ ಸೂತ್ರಗಳನ್ನು ಹರಿದು ಚೆಲ್ಲಿದ್ದುವು. ದಿವಾಳಿಯಾಗಲಿದ್ದ ಆ ಉದ್ಯಮಿಗೆ ಈ ಬ್ಯಾಂಕುಗಳು ನಾ ಮುಂದು ತಾ ಮುಂದು ಎಂದು ಸಾಲಕೊಡಲು ನುಗ್ಗಿದುವು, ತಂತಮ್ಮಲ್ಲೇ ಸ್ಪರ್ಧಿಸಿದುವು. ರಿಸರ್ವ್ ಬ್ಯಾಂಕ್ ಭಾರತ ಸರ್ಕಾರವೂ ಮೌನ ಪ್ರೇಕ್ಷಕರ ಪಾತ್ರ ವಹಿಸಿದ್ದವು, ಬ್ಯಾಂಕು ಶಾಖೆಗಳು ಮಾಡುವ ಯಾವುದೇ ಅಕೃತ್ಯಗಳಿಗೆ ಅವುಗಳ ನೇತಾರರೇ ಹೊಣೆಯಾಗುತ್ತಾರೆಂಬುದಾಗಿ ರಿಸರ್ವ್ ಬ್ಯಾಂಕ್ ಎಚ್ಚರಿಕೆಯನ್ನೇನೋ ನೀಡಿತು. ಆದರೆ ಅಕ್ರಮಗಳನ್ನು ಬಯಲಿಗೆಳೆಯಲು ಮುಕ್ತಕ್ರಮ ತೆಗೆದುಕೊಳ್ಳಲು ಮೊದಲೇ ಏಕೆ ಅದು ಪ್ರಯತ್ನಿಸಲಿಲ್ಲ? ಅಥವಾ ಅದರ ಅಧೀಕ್ಷಣಾಧಿಕಾರಕ್ಕೆ ಮೊನೆಯಿಲ್ಲವೆ? ಇದು ಮೂಲಭೂತ ಪ್ರಶ್ನೆ.

1982ರಷ್ಟು ಹಿಂದೆ ರಿಸರ್ವ್ ಬ್ಯಾಂಕಿನ ಅಂದಿನ ಗವರ್ನರರು ಬ್ಯಾಂಕುಗಳ ವಂಚನೆ ಪ್ರಕರಣಗಳ ತನಿಖೆಗಾಗಿ – ವಿಶೇಷ ವಿಭಾಗವೊಂದನ್ನು ತೆರೆದಿದ್ದರು. ಈ ವಿಭಾಗವೇನೋ ಕೆಲಸ ಮಾಡುತ್ತಿದೆ. ಆದರೆ ಈ ಪ್ರಕರಣಗಳು – ಎಷ್ಟೊಂದು ವ್ಯಾಪಕವಾಗಿವೆಯೆಂದರೆ, ಇವುಗಳ ತನಿಖೆಯ ಕಾರ್ಯ ನಿರ್ವಹಿಸಲು ಸಾಕಷ್ಟು ಸಿಬ್ಬಂದಿಯೇ ಇದ್ದಂತಿಲ್ಲ. ಹೀಗಾಗಿ ರಿಸರ್ವ್ ಬ್ಯಾಂಕಿನ ಈ ಉದ್ದೇಶ ಸಫಲವಾಗಿಲ್ಲವೆನಿಸುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳ ಶಾಖೆಗಳೂ ವಹಿವಾಟುಗಳೂ ವಿಸ್ತರಿಸುತ್ತಿದ್ದಂತೆ ವಂಚನೆಗಳೂ ಬೆಳೆಯುತ್ತಿವೆ. 1979ರಲ್ಲಿ ಬ್ಯಾಂಕಿಂಗ್ ವಲಯದಲ್ಲಿಯ ವಂಚನೆಗಳ ಸಂಖ್ಯೆ 1,400 ಇದ್ದದ್ದು 1983ರ ವೇಳೆಗೆ 2,343ಕ್ಕೆ ಏರಿತು. ಬ್ಯಾಂಕುಗಳ ನಷ್ಟವೂ ಈ ಅವಧಿಯಲ್ಲಿ ರೂ. 15,4 ಕೋಟಿಯಿಂದ ರೂ. 33.39 ಕೋಟಿಗೆ ಬೆಳೆಯಿತು. 1983ರಿಂದ ಈಚೆಗೆ ಈ ಸಂಖ್ಯೆಗಳು ಇನ್ನೂ

ಗಮನಾರ್ಹವಾಗಿ ಬೆಳೆದಿವೆಯೆಂಬುದರಲ್ಲಿ ಸಂದೇಹವಿಲ್ಲ. ಮೇಲೆ ಪ್ರಸ್ತಾಪಿಸಲಾದ ಇಂಗ್ಲೆಂಡಿನ ಉದ್ಯಮಗಳಿಗೆ ಸಂಬಂಧಿಸಿದ ವಹಿವಾಟುಗಳಲ್ಲಿ ಮೂರು ಭಾರತೀಯ ಬ್ಯಾಂಕುಗಳು ಅನುಭವಿಸಿದ ನಷ್ಟ ಸುಮಾರು 30ಕೋಟಿ ಡಾಲರ್ ಎಂದು ಹೇಳಲಾಗಿದೆ.

ಕಾರಣಗಳು

ಬ್ಯಾಂಕಿಂಗ್ ವಲಯದಲ್ಲಿ ಭ್ರಷ್ಟಾಚಾರವೂ ಅಕ್ರಮಗಳೂ ಹಣದ ದಸ್ತುಗಳೂ (ಎಂಬೆಜ್‌ಲ್‌ಮೆಂಟ್) ಬೆಳೆಯುತ್ತಿರುವುದಕ್ಕೆ ಸಾಮಾನ್ಯವಾಗಿ ನೀಡಲಾಗುವ ಕಾರಣಗಳು ಎರಡು. ವೇಗವಾದ ಶಾಖಾ ವಿಸ್ತರಣೆಯಿಂದಾಗಿ ಬ್ಯಾಂಕಿಂಗ್ ವಲಯಕ್ಕೆ ಸಿಬ್ಬಂದಿಯ ಬೇಡಿಕೆ ಬಹಳವಾಗಿ ಬೆಳೆದಿದೆ. ಸಾಕಷ್ಟು ತರಬೇತಿ ಪಡೆಯದವರನ್ನು ನೇಮಿಸಿಕೊಳ್ಳುವುದು ಅನಿವಾರ್ಯವಾಗಿದೆ. ಇದರಿಂದಾಗಿ ಶಾಖಾ ಲೆಕ್ಕಗಳ ಹಾಗೂ ಅಂತರ ಶಾಖಾ ಲೆಕ್ಕಗಳ ಶಿಲ್ಕು ತಾಳೆ ಕೆಲಸ ತುಂಬಾ ಹಿಂದೆ ಬಿದ್ದಿದೆ. ಈ ಪರಿಸ್ಥಿತಿ ವಂಚನೆಗೆ ಅವಕಾಶ ನೀಡಿದೆ. ಬೆಳೆಯುತ್ತಿರುವ ಬ್ಯಾಂಕಿಂಗ್ ವಹಿವಾಟುಗಳಿಗೆ ಅನುಗುಣವಾಗಿ ಗಣಕೀಕರಣ ಹಾಗೂ ಯಾಂತ್ರೀಕರಣದಲ್ಲಿ ಮುನ್ನಡೆ ಸಾಧಿಸಿಲ್ಲವೆನ್ನಲಾಗಿದೆ. ಖಾತಾ ವರ್ಗಾವಣೆ ಯಂತ್ರ, ಸೂಕ್ಷ್ಮ ಪ್ರಕ್ರಮೀಕರಣ ಯಂತ್ರ, ಗಣಕ ಇವುಗಳನ್ನು ಮುಂದಿನ ಮೂರು ವರ್ಷಗಳಲ್ಲಿ ಕೊಳ್ಳಲು ಬ್ಯಾಂಕುಗಳು ಯೋಚಿಸುತ್ತಿವೆ.

ಬ್ಯಾಂಕ್ ಕಲಾಪಗಳಲ್ಲಿ ದಕ್ಷತೆಯನ್ನು ಹೆಚ್ಚಿಸಿದಾಗ ವಂಚನೆ, ಭ್ರಷ್ಟಾಚಾರ, ಹಣದ ದುರುಪಯೋಗಗಳು ತಾವಾಗಿಯೇ ಮರೆಯಾಗಿಬಿಡುವುದಿಲ್ಲ. ಇವು ಸಂಭವಿಸದಂತೆ ಮುನ್ನೆಚ್ಚರಿಕೆ, ಸುಬದ್ಧ ನಿರೀಕ್ಷಣಾ ವ್ಯವಸ್ಥೆಯ ರಚನೆ, ಅಕ್ರಮಗಳ ಪತ್ತೆಯಾದಾಗ ಸಂಬಂಧಪಟ್ಟವರ ಮೇಲೆ ಆ ಕೂಡಲೇ ಯುಕ್ತ ಕ್ರಮ ಇವೆಲ್ಲಾ ಅಗತ್ಯ.

ರಾಜಕೀಯ ಪ್ರಭಾವ

ಆಪರಾಧಿಕ ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಚಾರವನ್ನಿಲ್ಲಿ ವಿವೇಚಿಸಲೇಬೇಕು. ಬ್ಯಾಂಕುಗಳಲ್ಲಿ ನಡೆಯುತ್ತಿರುವ ವಂಚನೆಗಳೂ ಆಕ್ರಮಗಳೂ ಇಡೀ ವ್ಯವಸ್ಥೆಯ ಆಂತರಿಕ ವ್ಯಾಧಿಯ ಬಹಿರ್ಲಕ್ಷಣಗಳು. ನಮ್ಮ ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಅಪರಾಧಿಕ ಪ್ರವೃತ್ತಿಯೇ ಬ್ಯಾಂಕಿಂಗ್ ವ್ಯವಸ್ಥೆಯೊಳಗ ಹಬ್ಬಿದೆಯೆಂಬುದು ತುಂಬಾ ವಿಷಾದದ ಸಂಗತಿ. ಅಧಿಕಾರದಲ್ಲಿರುವ ರಾಜಕಾರಣಿಗಳು ಬ್ಯಾಂಕುಗಳ ಆಡಳಿತದಲ್ಲಿ ತಮ್ಮ ಪ್ರಭಾವ ಬೀರುತ್ತ ಬಂದಿದ್ದಾರೆ; ಬ್ಯಾಂಕುಗಳ ಆಡಳಿತ ಮಂಡಲಿಗಳಲ್ಲಿ ತಮ್ಮವರನ್ನು ತುಂಬುತ್ತ ಬಂದಿದ್ದಾರೆ; ಇವರ ಮೂಲಕ ಬ್ಯಾಂಕುಗಳ ವ್ಯವಸ್ಥಾಪನಗಳ ಮೇಲೆ ತಮ್ಮ ಒತ್ತಡ ಹಾಕುತ್ತಿದ್ದಾರೆ. ಬ್ಯಾಂಕಿಂಗ್ ಸಂಪ್ರದಾಯ ಮತ್ತು

ಸಮುದಾಚಾರಗಳನ್ನು ಗಾಳಿಗೆ ತೂರುವಂತೆ ಮಾಡಿದ್ದಾರೆ. ಅಡಿಯಿಂದ ಮುಡಿಯವರೆಗೆ ಎಲ್ಲ ಹಂತಗಳಲ್ಲೂ ಈ ಒತ್ತಡ ಪ್ರಬಲವಾಗಿ ಬೆಳೆದಿದೆ. ತಳಾತಳದ ಶಾಖಾ ಮಟ್ಟದಲ್ಲಿ ಅದರ ವ್ಯವಸ್ಥಾಪಕನಿಗೆ ಸ್ಥಳೀಯ ಪುಡಾರಿಗಳ ಒತ್ತಡ, ಅಗ್ರಸ್ತರದಲ್ಲಿ ಮಂತ್ರಿಗಳ ಮಟ್ಟದಿಂದ ಬರುವ ಒತ್ತಡ. ಹಲವು ಬಗೆಯ ಯಜಮಾನರ ಅಡಿಯಲ್ಲಿ ಸೇವೆ ಸಲ್ಲಿಸಬೇಕಾದ ಬ್ಯಾಂಕ್ ಅಧಿಕಾರಿ ಈ ಒತ್ತಡಗಳನ್ನು ಎದುರಿಸಿ ನಿಲ್ಲುವಷ್ಟು ಧೈರ್ಯ ತೋರಿಸುವುದು ಅಸಾಧ್ಯ. ಹಾಗೆ ಮಾಡುವುದಾದರೆ ಅವನ ಅಧಿಕಾರಕ್ಕೆ ಸಂಚಕಾರ. ಆತ್ಮಹತ್ಯಾತ್ಮಕವಾದ ಇಂಥ ನಿಲುವು ತಳೆಯಲು ಇಂದಿನ ಪರಿಸ್ಥಿತಿಯಲ್ಲಿ ಯಾವ ನೌಕರನೂ ಧೈರ್ಯ ಮಾಡಲಾರ. ಅಂಥ ಧೈರ್ಯ ಮಾಡಿದರೆ ಅವನೇನೂ ಗೆಲ್ಲಲಾರ. ಅನಿಷ್ಟಕಾರಿ ಪ್ರವೃತ್ತಿಗಳನ್ನು ಹತ್ತಿಕ್ಕಲಾರ. ಈ ಸೋಲುವ ಸಮರದಲ್ಲಿ ಅವನ ಪರಾಜಯ ಸ್ವತಃಸಿದ್ಧ. ದುಷ್ಟ ಕೂಟಕ್ಕೆ ಮಣಿಯದೆ ವಿಧಿಯಿಲ್ಲ. ಒಮ್ಮೆ ಈ ಕೊಳೆತ ಆರಂಭವಾಯಿತೆಂದರೆ ಅದು ಬುಡವನ್ನೇ ತಿನ್ನಲು ತೊಡಗುತ್ತದೆ. ಈ ಅವ್ಯಾಪಾರದಲ್ಲಿ ಎಲ್ಲರೂ ಪಾಲ್ಗೊಳ್ಳುವಂತಾಗುತ್ತದೆ. ಲಂಡನ್ನಿನಲ್ಲಿ ತಲೆದೋರಿದ ಅಕ್ರಮಗಳು ಬ್ಯಾಂಕಿಂಗಿನ ಅಂಗೋಪಾಂಗಗಳಲ್ಲೆಲ್ಲ ವ್ಯಾಪಿಸಿರುವ ವಿಷದ ಕುಡಿ.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಹೊಸ ನಾಯಕತ್ವ ಈ ವಿಷವ್ಯಾಪನೆಯನ್ನರಿಯದಿಲ್ಲ. ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸುಸ್ಥಿತಗೊಳಿಸಬೇಕೆಂಬ ಆಕಾಂಕ್ಷೆ ವ್ಯಕ್ತವಾಗಿರುವುದು ಈ ಅರಿವಿನಿಂದಾಗಿ. ಇದರ ಮೊದಲನೆಯ ಕ್ರಮವೆಂದರೆ, ದೇಶದಲ್ಲಿರುವ ಇಪ್ಪತ್ತೆಂಟು ರಾಷ್ಟ್ರೀಕೃತ ಬ್ಯಾಂಕುಗಳ ನಿರ್ದೇಶಕ ಮಂಡಲಿಗಳಲ್ಲಿರುವ 14 ಅಧಿಕಾರೇತರ ನಿರ್ದೇಶಕರನ್ನು ಅವರ ಅವಧಿಗಳು ಪೂರೈಸಿದ ಮೇಲೆ ನಿವೃತ್ತಿಗೊಳಿಸಲಾಗುವುದೆಂಬ ನಿರ್ಧಾರ. ಈ 'ರಾಜಕಾರಣಿ' ನಿರ್ದೇಶಕರು ಬ್ಯಾಂಕುಗಳಲ್ಲಿ ತಂತಮ್ಮವೇ ಆದ ಸಂಚುಕೂಟಗಳನ್ನು ರಚಿಸಿಕೊಂಡಿದ್ದರು. ವೃತ್ತಿಪರ ಅಧಿಕಾರಿಗಳು ತೀರ್ಮಾನಗಳನ್ನು ತಮ್ಮಂತೆ ಪರಿವರ್ತಿಸಿಕೊಳ್ಳುತ್ತಿದ್ದರು. ಸಾಲ ನೀಡಿಕೆ, ಬಾಕಿ ವಸೂಲಿ, ಬ್ಯಾಂಕುಗಳ ಹೊಸ ಶಾಖೆಗಳ ಸ್ಥಾಪನೆ, ಸಿಬ್ಬಂದಿ ನೇಮಕ, ಬಡತಿ, ವರ್ಗ ಮುಂತಾದ ಎಲ್ಲ ವಿಚಾರಗಳಲ್ಲಿ ಇವರು ತಲೆ ಹಾಕುತ್ತಿದ್ದರು. ಕೈವಾಡ ನಡೆಸುತ್ತಿದ್ದರು. ಇವರ ನಿವೃತ್ತಿಯ ತೀರ್ಮಾನ ಒಂದು ಸರಿಯಾದ ಹೆಜ್ಜೆ.

ಪರಿಸ್ಥಿತಿಯ ನೈಜಚಿತ್ರ

ಕೊಳೆತ, ಒಣಗಿದ, ಹುಳುಬಿದ್ದ ಕೊಂಬೆ ರೆಂಬೆಗಳನ್ನು ಕಡಿದುಹಾಕುವುದು ಮೊದಲ ಹೆಜ್ಜೆ. ಆದರೆ ಹೊಸ ಟಿಸಿಲು ಒಡೆಯುವಂತೆ ಕೃಷಿ ಮಾಡುವುದೂ ಕಸಿ ಮಾಡುವುದೂ ಅಗತ್ಯ. ಈ ನಿಟ್ಟಿನಲ್ಲಿ ಎಷ್ಟರಮಟ್ಟಿನ ಪ್ರಯತ್ನ ಸಾಧ್ಯ? ಇಂಥ ಪ್ರಯತ್ನ ಎಷ್ಟು ಯಶಸ್ವಿಯಾದೀತು? ಇದು ವಿಚಾರಣೀಯ. ವಾಣಿಜ್ಯ, ಕೈಗಾರಿಕೆ,

ಕೃಷಿ ಹಾಗೂ ನಾನಾ ವೃತ್ತಿಗಳಲ್ಲಿ ಪ್ರವೀಣರೂ ಅನುಭವಿಗಳೂ ದಕ್ಷರೂ ಆದವರನ್ನು ಆರಿಸಿ, ಖಾಲಿಯಾದ ಸ್ಥಾನಗಳಲ್ಲಿ ತುಂಬುವುದು ದೊಡ್ಡ ಕೆಲಸ, ಕಷ್ಟದ ಕೆಲಸ. ಅಂಥವರ ಅನ್ವೇಷಣೆ ಹಾಗೂ ಆಯ್ಕೆ ಕಠಿಣ. ನಿಜವಾದ ದಕ್ಷರು ಬೆಳಕಿಗೆ ಬರುವುದು ಅಪುರೂಪ. ಬಂದರೂ ಅವರ ನೇಮಕಕ್ಕೆ ಹಲವಾರು ಅಡ್ಡಿ, ನಾನಾ ಬಗೆಯ ಪ್ರಭಾವ, ನೇಮಕವಾದವರು ಪೂರ್ವಾಗ್ರಹ ವಿಮುಕ್ತವಾಗಿ ಕೆಲಸ ಮಾಡಲು ನಾನಾ ಆತಂಕ. ಪಥ ವಿಚಲನೆಗೆ ನಾನಾ ಪ್ರಲೋಭನ. ಹೀಗಾಗಿ ಇದೊಂದು ಅಗ್ನಿಪರೀಕ್ಷೆಯೇ. ಖಾಲಿಯಾದ ಸ್ಥಾನಗಳ ಭರ್ತಿ ಆಗದಿರುವವರೆಗೂ ಈ ಮಂಡಲಿಗಳು ಸಾರ್ವಜನಿಕರ ಪ್ರಾತಿನಿಧ್ಯ ಕಳೆದುಕೊಂಡು ಬಡವಾಗಿರುತ್ತವೆ. ಒಂದು ಕಡೆ ಸರ್ಕಾರಿ ನಾಮಕರಣ ಸದಸ್ಯರು, ಇನ್ನೊಂದು ಕಡೆ ಅಧಿಕಾರಿಗಳ ಹಾಗೂ ಇತರ ನೌಕರರ ಪ್ರತಿನಿಧಿಗಳು, ನಡುವೆ ಅಧ್ಯಕ್ಷ, ವ್ಯವಸ್ಥಾಪನವೂ ನೌಕರ ವರ್ಗವೂ ಇದಿರುಬದಿರು. ಅನೇಕ ಸಂಸ್ಥೆಗಳಲ್ಲಿ ತಲೆಯಾಳುಗಳೇ ಇಲ್ಲದ ಪರಿಸ್ಥಿತಿಯಿದೆ. ದಕ್ಷರೂ ಅನುಭವಿಗಳೂ ಪ್ರಾಮಾಣಿಕರೂ ಆದವರ ಅಭಾವ ಉಂಟಾಗಿದೆ. ನಮ್ಮ ದೇಶದಲ್ಲಿ ಇವರ ಪೂರೈಕೆಯ ಕೊರತೆ ಬಹಳ ತೀವ್ರ. ಯಾವ ಹುತ್ತದಲ್ಲಿ ಯಾವ ಹಾವೋ ಎಂದು ಕೈ ಹಾಕಲು ಹೆದರಿ ಕುಳಿತ ಉನ್ನತ ವ್ಯವಸ್ಥಾಪಕ ವರ್ಗದ ತಲೆಯ ಮೇಲೆ 'ನಾಳೆ ಏನು?' ಎಂಬ ಪ್ರಶ್ನೆ ಡೆಮಾಕ್ಲೀಸನ ತೂಗುಕತ್ತಿಯಂತೆ ತೊನೆದಾಡುತ್ತಿದೆ. ಇದು ನೈಜಚಿತ್ರ

ಅಚ್ಚುಕಟ್ಟು–ಸಜ್ಜುಗಾರಿಕೆ

ಭಾರತದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಬೇಕಾದರೆ ನಾವು ಈ ಬಗ್ಗೆ ಇನ್ನೂ ಆಳವಾಗಿ, ಇನ್ನೂ ವ್ಯಾಪಕವಾಗಿ ಚಿಂತನೆ ಹರಿಸಬೇಕಾದ್ದು ಅತ್ಯಗತ್ಯ. ಕಳೆದ ಹಲವು ದಶಕಗಳಲ್ಲಿ ಭಾರತೀಯ ಬ್ಯಾಂಕಿಂಗ್ ಬಹಳ ಮಟ್ಟಿಗೆ ಬೆಳೆದಿದೆಯೆಂಬುದು ನಿಜ. ರಾಷ್ಟ್ರೀಕರಣವಾದ ಮೇಲಂತೂ ಬ್ಯಾಂಕಿಂಗಿನ ಸ್ವರೂಪದಲ್ಲೇ ಸಾಗರಿಕ ಪರಿವರ್ತನೆಯಾಗಿರುವುದನ್ನು ಯಾರಾದರೂ ಕಾಣಬಹುದು, ವಿಶಿಷ್ಟೀಕರಣದ (ಸ್ಪೆಷಲೈಸೇಷನ್) ಜೊತೆಗೆ ಬ್ಯಾಂಕಿಂಗ್ ಚಟುವಟಿಕೆ ಹೊಸ ದಿಕ್ಕುಗಳಲ್ಲಿ ಮುನ್ನಡೆದಿದೆ. ಇದುವರೆಗೆ ಬ್ಯಾಂಕಿಂಗಿಗೆ ತಮ್ಮನ್ನು ತಾವೇ ತೆರೆದುಕೊಳ್ಳದಿದ್ದವರೆಲ್ಲ, ಇಂದು ಬ್ಯಾಂಕಿಂಗಿನ ಸೇವೆ ಪಡೆಯುವಂತಾಗಿದೆ. ಭಾರತೀಯ ಜನಜೀವನದ ಎಲ್ಲ ಕ್ಷೇತ್ರಗಳನ್ನೂ ಪ್ರವೇಶಿಸಿರುವ ಬ್ಯಾಂಕು ಇಂದು ಮೈದಾಸನಂತೆ (ಆದರೆ ಒಳ್ಳೆಯ ಅರ್ಥದಲ್ಲಿ) ಮುಟ್ಟಿದ್ದನ್ನೆಲ್ಲಾ ಚಿನ್ನವಾಗಿ ಪರಿವರ್ತಿಸುವ ಹೊಣೆ ಹೊತ್ತಿದೆ. ಇದರ ಜೊತೆಗೆ, ಪಾಶ್ಚಾತ್ಯ ದೇಶಗಳಲ್ಲಿ ಬ್ಯಾಂಕಿಂಗ್ ಸೇವೆ ಪಡೆಯುತ್ತಿರುವ ಹೊಸ ಸಾಧನಗಳನ್ನೂ ಹೊಸ ಆಯಾಮಗಳನ್ನೂ ಅದು ಮರೆಯುವಂತಿಲ್ಲ, ಗಣಕದ ಪ್ರವೇಶವನ್ನು ಸ್ವಾಗತಿಸದಿರುವಂತಿಲ್ಲ. ಬ್ಯಾಂಕಿಂಗ್ ಸೇವೆಯ ಸ್ವರೂಪವೇ ಅಲ್ಲಿ

ಬದಲಾಗಿದೆ. ಚೆಕ್ಕುಗಳು ಹೋಗಿ ಪ್ಲಾಸ್ಟಿಕ್ ಕಾರ್ಡುಗಳು, ಉದರಿ ಕಾರ್ಡುಗಳು ಬಂದುವು, ಈ ಕ್ರಾಂತಿಯ ಹಳತಾಯಿತು, ಗೃಹಗಣಕ ಜಾಲ (ಹೋಮ್ ಕಂಪ್ಯೂಟರ್ ನೆಟ್‌ವರ್ಕ್) ಬರುತ್ತಿದೆ. ಒಬ್ಬ ಗ್ರಾಹಕ ತನ್ನ ದಿವಾನಖಾನೆಯಲ್ಲಿ ಕುಳಿತು ತನ್ನ ಗೃಹಗಣಕದ ಗುಂಡಿಗಳನ್ನೊತ್ತಿ ಬಿಲ್ಲುಗಳ ಪಾವತಿ ಮಾಡುವುದು ಸಾಧ್ಯ. ನಮ್ಮಲ್ಲಿ ಬೀದಿಬೀದಿಗಳಲ್ಲಿ ಇರುವ ಅಂಚೆಪೆಟ್ಟಿಗೆಗಳಂತೆ ಸ್ಥಾಪಿತವಾಗಿರುವ ಯಂತ್ರಗಳ ಪೈಕಿ ಒಂದರಲ್ಲಿ ತನ್ನ ಪ್ಲಾಸ್ಟಿಕ್ ಕಾರ್ಡನ್ನು ಒಳನುಗ್ಗಿಸಿ, ತನಗೆ ಯಾವ ಮೌಲ್ಯವರ್ಗಗಳ (ಡಿನಾಮಿನೇಷನ್ಸ್) ನೋಟುಗಳು ಬೇಕೆಂಬುದನ್ನು ಸೂಚಿಸುವ ರಂಧ್ರಗಳನ್ನು ಕೊರೆದರೆ ಸಾಕು. ಕ್ಷಣಾರ್ಧದಲ್ಲಿ ಗ್ರಾಹಕನಿಗೆ ಬೇಕಾದ ಹಣ ಲಭ್ಯ. ಅಷ್ಟು ಮಾತ್ರವೇ ಅಲ್ಲ. ಅಗಾಧವಾಗಿ ಹಬ್ಬಿದ ಇಡೀ ಭೂಮಂಡಲವೇ ಇಂದು ಗ್ರಾಹಕನ ಕರಸ್ಥಲ ಲಿಂಗದಂತಾಗಿದೆ. ಅಂತರರಾಷ್ಟ್ರೀಯ ವ್ಯವಹಾರ ಹೊಂದಿರುವ ಯಾವನೇ ಗ್ರಾಹಕನಿಗೆ ಪ್ರಪಂಚದ ಯಾವಯಾವ ಮೂಲೆಯ ಯಾವಯಾವ ಸ್ಥಳದಲ್ಲಿ ಈ ಕ್ಷಣದವರೆಗೆ ಎಷ್ಟೆಷ್ಟು ಹಣ ಬಂದಿದೆ, ತನ್ನ ಖಾತೆಯಿಂದ ಎಷ್ಟೆಷ್ಟು ಸಂದಾಯವಾಗಿದೆ. ಶಿಲ್ಕು ಎಷ್ಟು ಇದೆ ಎಲ್ಲವನ್ನೂ ಅವನು ಕುಳಿತಲ್ಲಿಂದಲೇ ಅರಿಯುವುದು ಸಾಧ್ಯ. ಗಣಕ ವ್ಯವಸ್ಥೆ ಅದನ್ನೆಲ್ಲ ವಿಚಾರಿಸಿ ವರದಿ ಮಾಡುತ್ತದೆ. ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ, ಪಾ. ರಾಜಗೋಪಾಲ ಅವರು ಅನುವಾದಿಸಿರುವ ಸ್ವಿಸ್ ಕ್ಯಾಷ್' ಎಂಬ ಲೇಖನ ಇದನ್ನು ನಮಗೆ ತಿಳಿಯಪಡಿಸುತ್ತದೆ. ಬ್ಯಾಂಕುಗಳು ನೀಡುತ್ತಿರುವ ಇನ್ನೊಂದು ಹೊಸ ಸೇವೆ 'ಅನುಪಾಶ್ರಯಣೀಕರಣ, ಆ ಕುರಿತ ಅನುವಾದಿತ ಲೇಖನವೂ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅಂತರ ರಾಷ್ಟ್ರೀಯ ಬ್ಯಾಂಕಿಂಗ್ ಎಷ್ಟು ವೇಗವಾಗಿ ಮುನ್ನಡೆಯುತ್ತಿದೆಯೆಂಬುದಕ್ಕೆ ಈ ಲೇಖನಗಳು ಸಾಕ್ಷಿ. ವ್ಯಾಪಕ ವಿಸ್ತರಣೆಯೊಂದಿಗೆ ಅಧುನೀಕರಣಕ್ಕೂ ಗಮನ ಹರಿಸಬೇಕಾದ ಭಾರತೀಯ ಬ್ಯಾಂಕಿಂಗು ಈ ವಿಚಾರದಲ್ಲಿ ಇನ್ನೂ ಬಹಳ ಹಿಂದೆಯೇ ಇದೆಯೆಂಬುದು ನಿರ್ವಿವಾದ. ವಂಚನೆ, ಆದಕ್ಷತೆ, ಅಕ್ರಮ, ಭ್ರಷ್ಟಾಚಾರಗಳನ್ನು ತಪ್ಪಿಸಬೇಕಾದರೆ, ಅವಕ್ಕೆ ಅವಕಾಶವಿಲ್ಲದಂಥ ಸುವ್ಯವಸ್ಥೆ, ತಾಂತ್ರಿಕ ಅಚ್ಚು ಕಟ್ಟು, ಯಾಂತ್ರಿಕ ಸಜ್ಜುಗಾರಿಕೆ ಅತ್ಯವಶ್ಯವೆಂಬುದನ್ನು ಮರೆಯುವಂತಿಲ್ಲ.

ಹೊಸ ದೃಷ್ಟಿಯ ನೇಮಕಾತಿ

ಇದುವರೆಗೂ ಮುಟ್ಟದಿದ್ದ ಹೊಸ ಹೊಸ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತವಾಗಿರುವ ಬ್ಯಾಂಕುಗಳ ನೈಪುಣ್ಯದ ವೃದ್ಧಿಗಾಗಿ ವಿಶಿಷ್ಟೀಕರಣವನ್ನೂ ಸಾಧಿಸಬೇಕಾಗಿದೆ. ಬ್ಯಾಂಕ್ ಸಿಬ್ಬಂದಿ ಈ ನಿಟ್ಟಿನಲ್ಲಿ ಪ್ರಗತಿ ಸಾಧಿಸಬೇಕಾಗಿದೆ. ಹೊಸದಾಗಿ ಸಿಬ್ಬಂದಿಯ ನೇಮಕ ಮಾಡುವಾಗ ಅಭ್ಯರ್ಥಿಗಳ ಕೇವಲ ಗುಮಾಸ್ತಿಕೆ

ಸಾಮರ್ಥ್ಯ, ಲೆಕ್ಕ ಸಾಮರ್ಥ್ಯ, ತರ್ಕ ಸಾಮರ್ಥ್ಯ, ಭಾಷಾ ಸಾಮರ್ಥ್ಯ (ಅದೂ ಪರಕೀಯ ಭಾಷೆ) ಇಷ್ಟನ್ನು ಮಾತ್ರ ಪರೀಕ್ಷೆ ಮಾಡದೆ, ತ್ರಿವಿಕ್ರಮ ರೂಪ ತಳೆದಿರುವ ಬ್ಯಾಂಕಿಂಗಿನ ಸ್ವರೂಪದರ್ಶನ ಈ ಅಭ್ಯರ್ಥಿಗಳಿಗೆ ಎಷ್ಟರಮಟ್ಟಿಗೆ ಇದೆಯೆಂಬುದನ್ನು ಪರೀಕ್ಷಿಸುವ ಹೊಸ ವಿಧಾನವೊಂದು ರೂಪುಗೊಳ್ಳಬೇಕಾಗಿದೆ. ಬ್ರಿಟಿಷರು ಹಾಕಿಟ್ಟು ಹೋದ ದೃಷ್ಟಿಯಿಂದಲೇ ಆಯ್ಕೆ ಮಾಡುವುದರಿಂದ, ಬ್ಯಾಂಕಿನಲ್ಲಿ ಕೆಲಸ ಮಾಡುವವರಿಗೆ ಕೂಡುವ ಕಳೆಯುವ ಲೆಕ್ಕ ಬಂದರೆ ಸಾಕೆಂದು ಭಾವಿಸುವುದರಿಂದ ಬ್ಯಾಂಕಿಂಗ್ ವಲಯದ ಇಂದಿನ ಅಗತ್ಯಗಳನ್ನು ಅಲಕ್ಷಿಸಿದಂತಾಗುತ್ತದೆ. ಇಂದು ಬ್ಯಾಂಕ್ ಉದ್ಯೋಗಿ ವಿಶೇಷ ದರ್ಶನ ಪಡೆದವನಾಗಿರಬೇಕಾಗುತ್ತದೆ,
ಮಾನವೀಯ ಮೌಲ್ಯಗಳಿಗೆ ಸೊಪ್ಪು ಹಾಕುವವನಾಗಿರಬೇಕಾಗುತ್ತದೆ. ಅವನಿಗೆ ಸಮಾಜವಿಜ್ಞಾನ ಮನೋವಿಜ್ಞಾನಗಳ ಅರಿವಿರಬೇಕಾಗುತ್ತದೆ. ಅವನು ಸೇವಾ ಮನೋಧರ್ಮವುಳ್ಳವನಾಗಿರಬೇಕಾಗುತ್ತದೆ, ಬ್ಯಾಂಕಿಂಗಿನ ಅಂತರಂಗದ ಅರಿವು ಉಳ್ಳವನಾಗಿರಬೇಕಾಗುತ್ತದೆ. ಜನರು ಆಡುವ ಭಾಷೆಯ, ಅವರ ಸಮಸ್ಯೆಗಳ ಪರಿಚಯವುಳ್ಳವನಾಗಿರಬೇಕಾಗುತ್ತದೆ.

ಈ ದೃಷ್ಟಿಯಿಂದ ನಮ್ಮ ಬ್ಯಾಂಕುಗಳ ನೇಮಕಾತಿ ಪರೀಕ್ಷೆಗಳನ್ನು ನಡೆಸುವುದು ಅತ್ಯವಶ್ಯ. ಅಲ್ಲದೆ ವಿದೇಶಿ ವಿನಿಮಯ, ಸಣ್ಣ ಕೈಗಾರಿಕೆ, ಕೃಷಿ ಬ್ಯಾಂಕಿಂಗ್, ಗ್ರಾಮೀಣ ಅಭಿವೃದ್ಧಿ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಪರಿಣತಿ ಪಡೆದ ಸಿಬ್ಬಂದಿಯ ಅಗತ್ಯ ಇಂದು ಎಂದಿಗಿಂತ ಹೆಚ್ಚಾಗಿದೆ. ಇದರತ್ತ ಗಮನ ಹರಿಸುವುದೂ ಅವಶ್ಯ. ಭಾರತದಲ್ಲಿ ರೈಲ್ವೆಯನ್ನು ಬಿಟ್ಟರೆ ಬ್ಯಾಂಕಿಂಗಿನಲ್ಲಿರುವಷ್ಟು ಸಿಬ್ಬಂದಿ ಬೇರಾವ ಕ್ಷೇತ್ರದಲ್ಲಿ ಇಲ್ಲ. ಈ ಸಿಬ್ಬಂದಿಯ ಸಾಮರ್ಥ್ಯದ ಸಂಪೂರ್ಣ ಫಲ ದೇಶಕ್ಕೆ ದೊರಕುವಂತೆ ಮಾಡಬೇಕು. ಉತ್ಪಾದಕತೆ ಹೆಚ್ಚಿಸಬೇಕು. ಬ್ಯಾಂಕುಗಳ ಲಾಭಪ್ರದತೆಯ ಸಾಧನೆಗೆ ಇದು ಅಗತ್ಯ.

ವ್ಯವಸ್ಥೆಯ ಪುನರ್ರಚನೆ

ಅದಕ್ಷತೆ, ಅವ್ಯವಹಾರಗಳ ನಿವಾರಣೆಗೆ ಸಂಬಂಧಿಸಿದಂತೆ ಇನ್ನೊಂದು ವಿಚಾರ, ನಮ್ಮ ಇಡೀ ಬ್ಯಾಂಕಿಂಗ್ ವ್ಯವಸ್ಥೆ ಇಂದು ತುಂಬಾ ಅವ್ಯವಸ್ಥಿತವಾಗಿದೆಯೆನಿಸುತ್ತದೆ.
ಭಾರತದ ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದಾಗ ಈ ಕ್ರಮದಿಂದ ಅವುಗಳ ಸ್ಪರ್ಧಾತ್ಮಕತೆ ನಾಶವಾಗುವುದೆಂದು ಅನೇಕರು ಅಂಜಿದ್ದರು. ಆದರೆ ಪ್ರತಿಯಾಗಿ ಸ್ಪರ್ಧೆ ಅತಿಯಾಗಿ ಬೆಳೆದಿವೆ. ಈ ಸ್ಪರ್ಧೆಯಿಂದ ಸೇವೆಯ ಗುಣಮಟ್ಟದಲ್ಲೇನೂ ಸುಧಾರಣೆಯಾಗಿಲ್ಲ. ಪ್ರತಿಯಾಗಿ ಒಂದರಿಂದ ಇನ್ನೊಂದು ಬ್ಯಾಂಕು, ಒಂದು ಶಾಖೆಯಿಂದ ಇನ್ನೊಂದು ಶಾಖೆ ಠೇವಣಿಗಳನ್ನು ಕಸಿಯುವ ಪ್ರವೃತ್ತಿ ಬೆಳೆದಿದೆ. ಗ್ರಾಹಕರೂ ಪರಿಸ್ಥಿತಿಯ ದುರುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಒಂದು ಶಾಖೆಯಲ್ಲಿ ವ್ಯವಹಾರ ಕೆಟ್ಟು, ಸಾಲಗಳು ಅಂಟಂಟಾದಾಗ, ಆ

ಶಾಖೆಯನ್ನು ಬಿಟ್ಟು ಇನ್ನೊಂದು ಶಾಖೆಯಲ್ಲಿ ಖಾತೆ ತೆರೆದು ಮತ್ತೆ ಹಳೆಯ ರೀತಿಯಲ್ಲೇ ವ್ಯವಹಾರದಲ್ಲಿ ತೊಡಗುವುದುಂಟು. ಒಂದು ಬ್ಯಾಂಕ್ ಶಾಖೆ ಬಿಟ್ಟ ಗ್ರಾಹಕನನ್ನು ಇನ್ನೊಂದು ಶಾಖೆ ಸ್ವೀಕರಿಸುವ ಬಗ್ಗೆ ಯಾವ ಅಳುಕೂ ಇರುವುದಿಲ್ಲ. ಪ್ರಮುಖ ಬ್ಯಾಂಕುಗಳು ದೇಶದ ಎಲ್ಲೆಡೆಗಳಲ್ಲೂ ಶಾಖೆ ತೆರೆದು ನಿಯಂತ್ರಣದಲ್ಲಿ ತೊಡಕನ್ನು ತಂದು ಕೊಂಡಿವೆ. ಇದರಿಂದ ವಿರಳ ಸಂಪನ್ಮೂಲಗಳು ಪೋಲಾಗುತ್ತಿವೆ. ಇವನ್ನೆಲ್ಲ ತಪ್ಪಿಸಲು ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ಪುನರಚಿಸುವ ಪ್ರಶ್ನೆ ಪದೇ ಪದೇ ಬಂದಿದೆ. 1972ರಷ್ಟು ಹಿಂದೆ ಬ್ಯಾಂಕಿಂಗ್ ಆಯೋಗ ಈ ಪ್ರಶ್ನೆಗೆ ಪರಿಹಾರವಾಗಿ ನಾಲ್ಕು ಸೂತ್ರಗಳನ್ನು ಪರಿಶೀಲಿಸಿತು. ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳನ್ನು ಒಂದುಗೂಡಿಸಿ ಇಡೀ ದೇಶಕ್ಕೆ ಒಂದೇ ರಾಷ್ಟ್ರೀಕೃತ ಬ್ಯಾಂಕಿಂಗ್ ಸಂಸ್ಥೆಯ ಸ್ಥಾಪನೆ ಒಂದು ಸೂತ್ರ, ಆದರೆ ಇದು ಅತಿಭಾರಿಯಾಗಿ ನಿರ್ವಹಣೆ ಅಸಾಧ್ಯವೆನಿಸುವುದೆಂಬುದು ಸ್ವಯಂವೇದ್ಯ. ಅಲ್ಲದೆ ಗ್ರಾಹಕರು ತಮಗೆ ಬೇಕಾದ ಬ್ಯಾಂಕನ್ನು ಆರಿಸಿಕೊಳ್ಳಲು ಅವಕಾಶ ಇರಬೇಕಾದ್ದು ಅವಶ್ಯ. ಬ್ಯಾಂಕುಗಳನ್ನು ಅವುಗಳ ಕಾರ್ಯಭಾರಾನುಗುಣವಾಗಿ

ಉಳಿತಾಯ ಬ್ಯಾಂಕ್, ಸಣ್ಣ ಹಾಗೂ ಮಧ್ಯಮ ಗಾತ್ರಗಳ ಕೈಗಾರಿಕೆಗಳ ಬ್ಯಾಂಕ್, ವಿದೇಶಿ ವಿನಿಮಯ ಬ್ಯಾಂಕ್, ಕೃಷಿ ಬ್ಯಾಂಕ್ ಇತ್ಯಾದಿ ಮರುವಿಂಗಡಣೆ ಮಾಡಬೇಕೆಂಬುದು ಎರಡನೆಯ ಸಲಹೆ, ಆದರೆ ಇದನ್ನು ಸಾಧಿಸಬೇಕಾದರೆ ಮೂಲಭೂತ ಬದಲಾವಣೆ ಅಗತ್ಯವಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳನ್ನೆಲ್ಲ ಒಂದುಗೂಡಿಸಿ ಒಟ್ಟು ಏಳೆಂಟು ಬ್ಯಾಂಕುಗಳಾಗಿ ಪುನರ್ರಚಿಸಬೇಕು ಎಂಬುದು ಮೂರನೆಯ ಸಲಹೆ. ಒಂದೊಂದು ಪ್ರದೇಶಕ್ಕೆ ಒಂದೊಂದು ಬ್ಯಾಂಕು ಇರಲಿ; ಎರಡು ಮೂರು ಬ್ಯಾಂಕುಗಳು ಮಾತ್ರ ಅಖಿಲ ಭಾರತೀಯವಾಗಿರಲಿ ಎಂಬುದು ನಾಲ್ಕನೆಯ ಸಲಹೆ. ಆಯೋಗ ಮೂರನೆಯ ವಿಧಾನವನ್ನು ಶಿಫಾರಸು ಮಾಡಿತು.

ಎಲ್ಲ ಬ್ಯಾಂಕುಗಳನ್ನೂ ಅಖಿಲಭಾರತೀಯವಾಗಿ ಮಾಡಿ, ಅನೈತಿಕ ಸ್ಪರ್ಧೆಗೆ ಎಡೆಗೊಟ್ಟು, ವಿರಳ ಮಾನವ ಹಾಗೂ ಭೌತಿಕ ಸಂಪನ್ಮೂಲಗಳ ಪೋಲಿಗೆ ಅವಕಾಶ ನೀಡುವ ಬದಲು, ಪ್ರಾದೇಶಿಕವಾಗಿ ಬ್ಯಾಂಕುಗಳನ್ನು

ಪುನರ್ರಚಿಸಬಹುದೆಂಬುದು ನಮ್ಮ ಅಭಿಪ್ರಾಯ. ಕೆಲವು ಅಖಿಲಭಾರತೀಯ ಬ್ಯಾಂಕುಗಳಿರಲಿ, ಅಥವಾ ಅಂಥ ಒಂದು ಬ್ಯಾಂಕ್ ಇದ್ದರೂ ಸಾಕು. ಅದನ್ನೂ ವಿಕೇಂದ್ರೀಕರಿಸಬೇಕು. ಪ್ರಾದೇಶಿಕ ಬ್ಯಾಂಕುಗಳಲ್ಲಿ, ಪ್ರಾದೇಶಿಕ – ವಿಭಾಗಗಳಲ್ಲಿ ಆಯಾ ಪ್ರದೇಶಗಳವರಿಗೆ ಉದ್ಯೋಗ ನೀಡಿಕೆಯ ಬಗ್ಗೆ ಆದ್ಯತೆಯಿರಲಿ, ಆಯಾ ಪ್ರಾದೇಶಿಕ ಭಾಷೆಗೂ ಪ್ರಾಧಾನ್ಯವಿರಲಿ, ಆಗ ಮಾತ್ರ, ಬ್ಯಾಂಕಿಂಗ್ – ವ್ಯವಸ್ಥೆ ಜನಪರವಾದೀತು. ಅದಕ್ಕೆ ಒಪ್ಪಿಸಲಾದ ಅಗಾಧ ಹೊಣೆಗಾರಿಕೆಯನ್ನು

ನಿರ್ವಹಿಸುವುದು ಸಾಧ್ಯವಾದೀತು. ಈ ಬಗೆಯ ಪುನರ್ವ್ಯವಸ್ಥೆಯತ್ತ ಗಮನ ಹರಿಸಬೇಕೆಂಬುದು ನಮ್ಮ ಅಭಿಮತ.

09.

ಅಕ್ಟೋಬರ್ 1985
ರಿಸರ್ವ್ ಬ್ಯಾಂಕ್ 50

ಭಾರತೀಯ ರಿಸರ್ವ್ ಬ್ಯಾಂಕಿಗೆ ಈ ಏಪ್ರಿಲ್ ಒಂದಕ್ಕೆ ಐವತ್ತು ವರ್ಷ. ಈಗ ನಡೆಯುತ್ತಿರುವುದು ಐವತ್ತೊಂದು. "ನಡೆದು ಬಂದ ದಾರಿ ಕಡೆಗೆ ತಿರುಗಿಸಬೇಡ ಕಣ್ಣ ಹೊರಳಿಸಬೇಡ," ಎಂದು ಉದ್ಗರಿಸಬಹುದು ಕವಿ, ಆದರೆ ರಿಸರ್ವ್ ಬ್ಯಾಂಕು ತನ್ನ ಐವತ್ತು ವರ್ಷಗಳ ಪಥದಾಖಲೆಯ ಬಗ್ಗೆ ಹೆಮ್ಮೆ ಪಡಬಹುದಾದ್ದು ಸಹಜ.

ಐವತ್ತು ವರ್ಷ ಹಿಂದೆ ರಿಸರ್ವ್ ಬ್ಯಾಂಕು ಷೇರುದಾರರ ಸಂಸ್ಥೆಯಾಗಿ ಸ್ಥಾಪಿತವಾಯಿತು. ಅದರ ಪಾವತಿಯಾದ ಬಂಡವಾಳ ರೂ. ಐದು ಕೋಟಿ. ಇಂದಿನ ಮಾನಕಗಳ ಪ್ರಕಾರ ರೂ. ಐದು ಕೋಟಿ ಬಹಳ ಕಡಿಮೆಯೆನಿಸಬಹುದು. ಆದರೆ ಅಂದಿನ ಲೆಕ್ಕದಲ್ಲಿ ಅದು ಅಧಿಕವೇ. ಪ್ರಪಂಚವೇ ಮಹಾ ಆರ್ಥಿಕ ಮುಗ್ಗಟ್ಟನ್ನು ದಾಟಿ ನಡೆಯುತ್ತಿದ್ದ ಕಾಲವದು.

ಪರಕೀಯರ ಆಳ್ವಿಕೆಗೆ ಒಳಪಟ್ಟಿದ್ದ ಭಾರತದಲ್ಲಿ ಕೇಂದ್ರೀಯ ಬ್ಯಾಂಕೊಂದು ಸ್ಥಾಪಿತವಾಗಬೇಕೆಂಬುದು ಇಲ್ಲಿಯ ಜನರ ಬಹುಕಾಲದ ಬೇಡಿಕೆಯಾಗಿತ್ತು, ಆದರೆ ಬ್ರಿಟಿಷ್ ಸರ್ಕಾರ ಈ ಬೇಡಿಕೆಯನ್ನು ಕಡೆಗಣಿಸುತ್ತಲೇ ಬಂದಿತ್ತು. 1836ರಷ್ಟು ಹಿಂದೆ, ಭಾರತದಲ್ಲಿ ಈಸ್ಟ್ ಇಂಡಿಯ ಕಂಪನಿಯಲ್ಲಿ ರಾಜ್ಯಭಾರವಿದ್ದಾಗ, ಬ್ರಿಟಿಷ್ ಭಾರತದಲ್ಲಿ ಬೃಹತ್ ಬ್ಯಾಂಕಿಂಗ್ ವ್ಯವಸ್ಥೆಯೊಂದು ಸ್ಥಾಪಿತವಾಗಬೇಕೆಂದು ಕಂಪನಿಯ ನಿರ್ದೇಶಕರ ಮಂಡಲಿಗೆ ವರ್ತಕರ ತಂಡವೊಂದು ಬೇಡಿಕೆ ಸಲ್ಲಿಸಿತ್ತು. ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ಸಮಾಮೇಲನಗೊಳಿಸಿ ಅಖಿಲ ಭಾರತ ಬ್ಯಾಂಕಿಂಗ್ ಸಂಸ್ಥೆಯೊಂದನ್ನು ಸ್ಥಾಪಿಸುವ ಸೂಚನೆ ಪ್ರಪ್ರಥಮವಾಗಿ ಪ್ರಧಾನವಾಗಿ ಕೇಳಿಬಂದಿದ್ದು 1867ರಲ್ಲಿ. ಆದರೆ ಈ ಸೂಚನೆಯನ್ನು ಸರ್ಕಾರ ಅಷ್ಟೇನೂ ಪರಿಗಣಿಸಲಿಲ್ಲ. ಭಾರತದ ಕರೆನ್ಸಿ ಮತ್ತು ವಿನಿಮಯವನ್ನು ಕುರಿತಂತೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು 1913ರಲ್ಲಿ ಆಸ್ಟಿನ್ ಚೇಂಬರ್ಲೆನ್‌ರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಆಯೋಗದ ಸದಸ್ಯರಾಗಿದ್ದ ಜೆ. ಎಂ. ಕೇನ್ಸರು, ಇನ್ನೊಬ್ಬ ಸದಸ್ಯರೊಂದಿಗೆ, ಭಾರತಕ್ಕೊಂದು ಕೇಂದ್ರೀಯ ಬ್ಯಾಂಕನ್ನು ಸ್ಥಾಪಿಸುವ ಬಗ್ಗೆ ವಿವರವಾದ ಯೋಜನೆಯೊಂದನ್ನು ತಯಾರಿಸಿದ್ದರು. 1921ರಲ್ಲಿ ಸ್ಥಾಪಿತವಾದ ಇಂಪೀರಿಯಲ್ ಬ್ಯಾಂಕು ಬಹಳಮಟ್ಟಿಗೆ ಈ ಯೋಜನೆಗೆ ಅನುಗುಣವಾಗಿತ್ತು. ಈ ಬ್ಯಾಂಕು ಸರ್ಕಾರದ ಬ್ಯಾಂಕಾಗಿ ಕಾರ್ಯ ನಿರ್ವಹಿಸುತ್ತಿತ್ತಾದರೂ ಕೇಂದ್ರೀಯ ಬ್ಯಾಂಕಿನ ಎಲ್ಲ ಕಾರ್ಯಭಾರಗಳನ್ನು ನಿರ್ವಹಿಸುವ ಅಧಿಕಾರ ಇದಕ್ಕೆ ಪ್ರಾಪ್ತವಾಗಿರಲಿಲ್ಲ. 1935ರಲ್ಲಿ

ಸ್ಥಾಪಿತವಾದ ರಿಸರ್ವ್ ಬ್ಯಾಂಕು ನಿಜವಾದ ಅರ್ಥದಲ್ಲಿ ಭಾರತದ ಕೇಂದ್ರೀಯ ಬ್ಯಾಂಕು.

ಅಂದಿನಿಂದ ಇಂದಿನವರೆಗಿನ ಐದು ದಶಕಗಳ ಅವಧಿಯಲ್ಲಿ ರಿಸರ್ವ್ ಬ್ಯಾಂಕು ಅಗಾಧವಾಗಿ ಬೆಳೆದಿದೆ, ಅನೇಕ ವಿಕ್ರಮಗಳನ್ನು ಸಾಧಿಸಿದೆ. ಭಾರತದ ಅತ್ಯಂತ ಬಿಕಟ್ಟಿನ ದಿನಗಳಲ್ಲಿ ಸ್ಥಾಪಿತವಾದ ಬ್ಯಾಂಕು ಈ ಐವತ್ತು ವರ್ಷಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಿ ಗೆದ್ದಿದೆ. ರಿಸರ್ವ್ ಬ್ಯಾಂಕ್ ಐವತ್ತು ವರ್ಷಗಳಲ್ಲಿ ಭಾರತದ ಆರ್ಥಿಕ ಇತಿಹಾಸವನ್ನೇ ತಿದ್ದಿ ಬೆಳೆಸಿದೆಯೆನ್ನಬಹುದು. ದೇಶ ಈ ಅವಧಿಯಲ್ಲಿ ಅಗಾಧ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಕಂಡಿದೆ. ರಿಸರ್ವ್ ಬ್ಯಾಂಕು ಕೂಡ ಬಹಳಮಟ್ಟಿಗೆ ಇದರಲ್ಲಿ ಪಾಲ್ಗೊಂಡಿದೆ.

1935ರಲ್ಲಿ ರಿಸರ್ವ್ ಬ್ಯಾಂಕು ಸ್ಥಾಪಿತವಾದ್ದು ಪ್ರಪಂಚದ ಮುಂದುವರಿದ ದೇಶಗಳ ಕೇಂದ್ರೀಯ ಬ್ಯಾಂಕುಗಳ ಮಾದರಿಯಲ್ಲೇ ನೋಟು ನೀಡಿಕೆಯ ಪ್ರಾಧಿಕಾರ ಹೊಂದಿ, ಸರ್ಕಾರದ ಬ್ಯಾಂಕಾಗಿ, ಬ್ಯಾಂಕುಗಳ ಬ್ಯಾಂಕಾಗಿ ಇದು ಕಾರ್ಯದಲ್ಲಿ ತೊಡಗಿತು. ಇವೆಲ್ಲಾ ಕೇಂದ್ರೀಯ ಬ್ಯಾಂಕುಗಳಿಗೆ ಪರಂಪರಾಗತವಾಗಿ ಬಂದ ಕಾರ್ಯಭಾರಗಳೇ. ಆರ್ಥಿಕ ಅಭಿವರ್ಧನೆಯ ಸಾಧನವಾಗಿ ಅದು ಕೈಗೊಂಡ ಒಂದು ಕಾರ್ಯಭಾರವೆಂದರೆ ಕೃಷಿಗೆ ಸಹಕಾರ ಕ್ಷೇತ್ರದಿಂದ ಉದರಿ ದೊರಕುವಂತೆ ಪ್ರೋತ್ಸಾಹ ನೀಡುವುದು. ಈ ಒಂದು ವಿಚಾರವನ್ನು ಬಿಟ್ಟರೆ ಉಳಿದಂತೆ ರಿಸರ್ವ್ ಬ್ಯಾಂಕಿಗೆ ದೇಶದ ಮಹಾ ಪರಿವರ್ತನೆಯ ಕಾರ್ಯದಲ್ಲಿ ಕೈಹಾಕುವ ಹೊಣೆಯೇನೂ ಇರಲಿಲ್ಲವೆನ್ನಬೇಕು. ದೇಶದ ಅರ್ಥವ್ಯವಸ್ಥೆಯ ಪರಿವರ್ತನೆಯ ವೇಗವರ್ಧಕವಾಗಿ ಅದೇನೂ ಮಾಡಬೇಕಾದ್ದಿರಲಿಲ್ಲ.

ರಿಸರ್ವ್ ಬ್ಯಾಂಕಿನ ಸ್ಥಾಪನೆಯ ಅನಂತರದ ವರ್ಷಗಳು ಬಹಳ ತ್ರಾಸದಾಯಕವಾಗಿದ್ದಂಥವೇ. ಪ್ರಪಂಚದಲ್ಲಿ ಎರಡನೆಯ ಮಹಾಯುದ್ಧಕ್ಕೆ ಸನ್ನಾಹ ನಡೆದಿತ್ತು. ಅನಂತರ ಯುದ್ಧವೇ ಭುಗಿಲೆದ್ದಿತು, ತನ್ನಿಚ್ಛೆಯಿಲ್ಲದೆ ಯುದ್ಧದ ಹೊಂಡಕ್ಕೆ ಭಾರತ ತಳ್ಳಲ್ಪಟ್ಟಾಗ ಅದರ ಅರ್ಥ ವ್ಯವಸ್ಥೆ ಜರ್ಜರಿತವಾಯಿತು, ಮೊತ್ತ ಮೊದಲನೆಯ ಬಾರಿಗೆ ಭಾರತಕ್ಕೆ ಹಣದುಬ್ಬರದ ಬಿಸಿ ತಾಕಿತು. ಯುದ್ಧಾನಂತರದ ಕಾಲದ ಹಣಕಾಸು ಪರಿಸ್ಥಿತಿಯ ಸ್ವರೂಪವೇ ಬೇರೆಯಾಯಿತು. ಯುದ್ಧದ ಫಲವಾಗಿ ಉದ್ಭವಿಸಿದ್ದ ಆರ್ಥಿಕ ಸಮಸ್ಯೆಗಳ ಜೊತೆಗೆ ರಾಜಕೀಯ ಅಲ್ಲೋಲಕಲ್ಲೋಲದ ಪರಿಣಾಮವನ್ನೂ ಎದುರಿಸಬೇಕಾಗಿ ಬಂತು. ದೇಶ ಒಡೆಯಿತು. ಭಾರತ ಸ್ವತಂತ್ರವಾಯಿತು. ದೇಶವಿಭಜನೆಯೊಂದಿಗೆ ಬ್ಯಾಂಕಿಂಗ್ ಹಾಗೂ ಹಣಕಾಸಿನ ಕ್ಷೇತ್ರದ ಹಲವಾರು

ಸಮಸ್ಯೆಗಳು ಉದ್ಭವಿಸಿದುವು. ಅನಂತರ ಪಾಕಿಸ್ತಾನದೊಂದಿಗೂ ಚೀನದೊಂದಿಗೂ ಯುದ್ಧಗಳು ಸಂಭವಿಸಿದುವು. ಈ ಸಂದರ್ಭಗಳಲ್ಲೆಲ್ಲ ರಿಸರ್ವ್ ಬ್ಯಾಂಕು ಹಣಕಾಸಿನ ಕ್ಷೇತ್ರದಲ್ಲಿ ಕೈಗೊಳಬೇಕಾಗಿಬಂದ ಕ್ರಮಗಳು ಸಾಮಾನ್ಯವಲ್ಲ.

ಈ ನಡುವೆ ರಿಸರ್ವ್ ಬ್ಯಾಂಕಿನ ಸ್ವರೂಪದಲ್ಲೇ ಮಹಾ ಪರಿವರ್ತನೆಯಾಗಿದೆ. 1949ರಲ್ಲಿ ರಿಸರ್ವ್ ಬ್ಯಾಂಕಿನ ರಾಷ್ಟ್ರೀಕರಣವಾಯಿತು, ಪೇರುದಾರರ ಸಂಸ್ಥೆಯಾಗಿದ್ದ ರಿಸರ್ವ್ ಬ್ಯಾಂಕಿನ ಒಡೆತನ ಹಾಗೂ ನಿಯಂತ್ರಣಗಳು ಸರ್ಕಾರದ ವಶಕ್ಕೆ ಬಂದುವು, ಯುದ್ಧಾನಂತರದ ಕಾಲದಲ್ಲಿ ಅನೇಕ ದೇಶಗಳಲ್ಲಿ ಕಂಡುಬಂದ ಪ್ರವೃತ್ತಿಯೇ ಇದು. ಅನೇಕ ಹಳೆಯ ಕೇಂದ್ರೀಯ ಬ್ಯಾಂಕುಗಳು ರಾಷ್ಟ್ರೀಕರಣಗೊಂಡಿದ್ದುವು. ಇಂಗ್ಲೆಂಡಿನಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ ರಾಷ್ಟ್ರೀಕೃತ ಬ್ಯಾಂಕ್ ಆಗಿ ಪರಿವರ್ತನೆಗೊಂಡಿತ್ತು. ಅನೇಕ ರಾಷ್ಟ್ರಗಳಲ್ಲಿ ನೂತನವಾಗಿ ಸ್ಥಾಪಿತವಾದ ಕೇಂದ್ರೀಯ ಬ್ಯಾಂಕುಗಳು ರಾಷ್ಟ್ರದ ಒಡೆತನದಲ್ಲೇ ಆರಂಭವಾಗಿದ್ದುವು. ಭಾರತವಾದರೂ ಈ ವಿಚಾರದಲ್ಲಿ ಹಿಂದುಳಿಯಲಿಲ್ಲ.

ಗಣರಾಜ್ಯ ಭಾರತ ಹೊಸದೊಂದು ಸಾಹಸದ ಮಾರ್ಗದಲ್ಲಿ ಹೆಜ್ಜೆಯಿಡತೊಡಗಿತ್ತು. ಪಂಚವಾರ್ಷಿಕಯೋಜನೆಗಳ ಮಾರ್ಗವದು. ಭಾರತದ ಅರ್ಥವ್ಯವಸ್ಥೆಯ ಅಭಿವೃದ್ಧಿ ಸಾಧನೆಯಲ್ಲಿ ರಿಸರ್ವ್ ಬ್ಯಾಂಕಿಗೆ ಒಪ್ಪಿಸಿದ ಹೊರೆ ಅಗಾಧವಾದ್ದು. ಅಭಿವೃದ್ಧಿಗೆ ಒದಗಿಬರುವಂತೆ ಆಂತರಿಕ ಉಳಿತಾಯ ಹಾಗೂ ವಿನಿಯೋಜನೆಗೆ ಪ್ರೋತ್ಸಾಹ, ಜೊತೆ ಜೊತೆಗೇ ಬೆಲೆಗಳ ಮಟ್ಟ ಏರದಂತೆ ಕಟ್ಟುನಿಟ್ಟಿನ ಕ್ರಮಗಳ ಜಾರಿ, ಬ್ಯಾಂಕಿನ ಕಲಾಪಗಳ ವಿಸ್ತರಣೆ – ಇವೂ ರಿಸರ್ವ್ ಬ್ಯಾಂಕಿನ ಮುಖ್ಯ ಹೊಣೆಗಳಾದುವು, ಸರ್ಕಾರದ ವ್ಯವಹಾರ ನಡೆಸುವ, ನೋಟು ನೀಡಿಕೆಯ ಪಾತ್ರ ನಿರ್ವಹಿಸುವ, ಬ್ಯಾಂಕುಗಳ ಬ್ಯಾಂಕಾಗಿ ವರ್ತಿಸುವ ಕಾರ್ಯಭಾರಗಳ ಜೊತೆಗೆ ರಿಸರ್ವ್ ಬ್ಯಾಂಕು ಅಭಿವೃದ್ಧಿಶೀಲ ಅರ್ಥವ್ಯವಸ್ಥೆಯ ಅಗತ್ಯಗಳನ್ನು ಪೂರೈಸುವ ಕಾರ್ಯದಲ್ಲಿ ಸಾಕಷ್ಟು ದೂರಸಾಗಿ ಬಂದಿದೆ. ಅನೇಕ ದೇಶಗಳ ಕೇಂದ್ರೀಯ ಬ್ಯಾಂಕುಗಳು ಸಾಮಾನ್ಯವಾಗಿ ಅದುವರೆಗೂ ನಿರ್ವಹಿಸದಿದ್ದಂಥ ಕಾರ್ಯಭಾರಗಳು ಇವು.

ರಿಸರ್ವ್ ಬ್ಯಾಂಕು ಈ ಹೊಣೆಯನ್ನು ತಕ್ಕಮಟ್ಟಿಗೆ ಯಶಸ್ವಿಯಾಗಿಯೇ ನಿರ್ವಹಿಸಿದೆಯನ್ನಬೇಕು, ಭಾರತದ ಅರ್ಥವ್ಯವಸ್ಥೆಯಲ್ಲಿ ಹಣದ ಪಾತ್ರ ವಿಸ್ತರಿಸಿದೆ. ಜನರಲ್ಲಿ ಬ್ಯಾಂಕಿಂಗ್ ಅಭ್ಯಾಸ ಬೆಳೆದಿದೆ. ಅವರ ಉಳಿತಾಯಗಳು ಹಣ ಸಂಸ್ಥೆಗಳ ಮೂಲಕ ಹರಿದುಬಂದು ಒಗ್ಗೂಡಿ,

ರಾಷ್ಟ್ರಾಭಿವೃದ್ಧಿ ಕಾರ್ಯಕ್ಕೆ ಒದಗಿಬರುವಂತಾಗಿದೆ. ದೇಶದಲ್ಲಿ ಸುಭದ್ರ ಬ್ಯಾಂಕಿಂಗ್ ಹಾಗೂ ಉದರಿ ಸಂರಚನೆಯ ನಿರ್ಮಾಣವಾಗಿದೆ. ಕೃಷಿ ಹಾಗೂ ತತ್ಸಂಬಂಧದ ಚಟುವಟಿಕೆಗಳಿಗೆ ಉದರಿಯ ವಿತರಣೆ ಸಾಧ್ಯವಾಗುವಂತೆ ವಿವಿಧ ಸ್ತರಗಳಲ್ಲಿ ವೈವಿಧ್ಯಮಯವಾದ ಸಾಂಸ್ಥಿಕ ವ್ಯವಸ್ಥೆಯ ರಚನೆಯಾಗಿದೆ. ಕೈಗಾರಿಕೆಗಳಿಗೆ ಸಾವಧಿಕ ಹಣಕಾಸು ದೊರಕುವಂತೆ ಅಖಿಲ ಭಾರತದ ಹಾಗೂ ಪ್ರಾದೇಶಿಕ ಮಟ್ಟಗಳಲ್ಲಿ ಅನೇಕ ವಿಶಿಷ್ಟ ಹಣಕಾಸು ಸಂಸ್ಥೆಗಳನ್ನು ರಿಸರ್ವ್ ಬ್ಯಾಂಕು ಪ್ರವರ್ತನೆಗೊಳಿಸಿದೆ. ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯವನ್ನು ಸಾಧಿಸುವ ಉದ್ದೇಶದಿಂದ ಯೋಜನಾ ಪ್ರಾಧಿಕಾರ ಹಾಗೂ ಸರ್ಕಾರಗಳು ಇಟ್ಟುಕೊಂಡ ಕಾರ್ಯಕ್ರಮಗಳಿಗೆ ಹಣದ ಬೆಂಬಲ ಪ್ರಾಪ್ತವಾಗುವಂತೆ ಇದು ನೋಡಿಕೊಂಡಿದೆ.

ದೇಶಾದ್ಯಂತ ಅಭಿವೃದ್ಧಿ ಚಟುವಟಿಕೆಗಳಿಗೆ ಹಣಕಾಸು ಒದಗಿಬರಲು ಅಗತ್ಯವಾದ ವ್ಯವಸ್ಥೆಯನ್ನು ರಿಸರ್ವ್ ಬ್ಯಾಂಕು ತಾನೇ ರಚಿಸಬೇಕು, ಇಲ್ಲವೇ ಅದರ ರಚನೆಗೆ ಅಗತ್ಯವಾದ ನೆರವು ನೀಡಬೇಕು; ಅಭಿವೃದ್ಧಿಗೆ ಒದಗಿ ಬರುವ ಹಣಕಾಸು ಉದ್ದೇಶಿಸಿದ ದಿಕ್ಕುಗಳಲ್ಲಿ, ನಿಗದಿಯಾದ ಪ್ರಮಾಣಗಳಲ್ಲಿ ಹರಿದುಬರುವಂತೆ ರಿಸರ್ವ್ ಬ್ಯಾಂಕು ನೋಡಿಕೊಳ್ಳಬೇಕು ಎಂಬುದಾಗಿ ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಆಶಿಸಲಾಗಿತ್ತು. ರಿಸರ್ವ್ ಬ್ಯಾಂಕು ಈ ಆಶಯವನ್ನು ಬಹುಮಟ್ಟಿಗೆ ಸಫಲಗೊಳಿಸಿದೆಯೆನ್ನಬಹುದು. ತನ್ನ ಮುಂದೆ ಇರಿಸಲಾದ ವಿಭಿನ್ನ ಹೊಣೆಗಳನ್ನು ಅದು ನಿರ್ವಹಿಸಿದೆ. ಹಣಕಾಸಿನ ಅಧೋರಚನೆಯಲ್ಲಿದ್ದ ಕೊರತೆಗಳನ್ನು ತುಂಬಲು ಯತ್ನಿಸಿದೆ. ಅರ್ಥವ್ಯವಸ್ಥೆಯ ಉದರಿ ಅಗತ್ಯಗಳನ್ನು ಪೂರೈಸಿದೆ. ವಿನಿಯೋಜನಾರ್ಹ ನಿಧಿಗಳನ್ನು ದಕ್ಷವಾದ ಹಾಗೂ ಉತ್ಪಾದಕವಾದ ರೀತಿಯಲ್ಲಿ ಹೂಡುವಲ್ಲಿ ಯೋಜನಾ ಆಯೋಗಕ್ಕೆ ಬ್ಯಾಂಕು ನೆರವನ್ನೂ ಬೆಂಬಲವನ್ನೂ ನೀಡಿದೆ. ಸ್ಥಿರತೆ, ಸಾಮಾಜಿಕ ನ್ಯಾಯ ಇವುಗಳನ್ನು ಸಾಧಿಸುವುದರೊಂದಿಗೇ ಬೆಳವಣಿಗೆಯನ್ನು ಗರಿಷ್ಠಗೊಳಿಸುವಂತೆ ಧನ ನಿರ್ವಹಣೆಯ ಕಾರ್ಯ ಕೈಗೊಂಡಿದೆ.

ದೇಶದ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲಂತೂ ರಿಸರ್ವ್ ಬ್ಯಾಂಕಿನ ಪಾತ್ರ ಹಾಗೂ ಹೊಣೆಗಳು ಅಗಾಧವಾಗಿ ಬೆಳೆದಿವೆಯೆನ್ನಬಹದು. ದೇಶದ ಹಿಂದುಳಿದ ಪ್ರದೇಶಗಳ ಹಾಗೂ ಜನವರ್ಗಗಳ ಪ್ರಗತಿ ಸಾಧನೆಯ ಗುರಿಯನ್ನು ಮುಂದಿಟ್ಟುಕೊಂಡು ಬ್ಯಾಂಕುಗಳು ಮುನ್ನಡೆಯುವಂತೆ ಅವಕ್ಕೆ ಮಾರ್ಗದರ್ಶನ ಹಾಗೂ ನೆರವು ನೀಡುವ ಕಾರ್ಯದಲ್ಲಿ ರಿಸರ್ವ್ ಬ್ಯಾಂಕು ಎಂದೂ ಹಿಂದೆಮುಂದೆ ನೋಡಿಲ್ಲ. ಅಗ್ರ ಬ್ಯಾಂಕಿಂಗ್ ಒಂದು ಕ್ರಾಂತಿಕಾರಕವಾದ ಪರಿಕಲ್ಪನೆ. ದೇಶದ

ಮೂಲೆಮೂಲೆಗಳಿಗೂ ಬ್ಯಾಂಕುಗಳ ಸೇವೆ ಲಭ್ಯವಾಗುವಂತೆ ಶಾಖಾ ಜಾಲದ ರಚನೆ ಮಾಡಬೇಕೆಂಬ ಉದ್ದೇಶದಿಂದ ಹೊಸ ಶಾಖೆಗಳ ಆರಂಭಕ್ಕೆ ಪರವಾನೆ ನೀಡುವಲ್ಲಿ ರಿಸರ್ವ್ ಬ್ಯಾಂಕು ಸಂಯೋಜಿತವಾದ ಕ್ರಮ ಕೈಗೊಂಡಿದೆ. ಪಟ್ಟಣಗಳಲ್ಲೇ ದಟ್ಟೈಸಿದ್ದ ಬ್ಯಾಂಕಿಂಗ್ ಕಲಾಪಗಳು ಹಳ್ಳಿಗಳಿಗೂ ಪಯಣ ಬೆಳೆಸುವಂತೆ ರಿಸರ್ವ್ ಬ್ಯಾಂಕ್ ನೋಡಿಕೊಂಡಿದೆ. 1969ರಿಂದ ಇದುವರೆಗೆ ಬ್ಯಾಂಕ್ ಶಾಖೆಗಳ ಸಂಖ್ಯೆ ಆರು ಮಡಿಯಾಗಿದ್ದರೆ, ಠೇವಣಿಗಳು ಹದಿನಾರರಷ್ಟಾಗಿದ್ದರೆ, ಮುಂಗಡಗಳೂ ಸುಮಾರು ಹದಿನೈದು ಪಟ್ಟು ಬೆಳೆದಿದ್ದರೆ, ಅದರ ಹಿಂದೆ ರಿಸರ್ವ್ ಬ್ಯಾಂಕಿನ ಪ್ರೇರಣೆ – ನಿರ್ದೇಶನಗಳೂ ಇಲ್ಲದಿಲ್ಲ.

ನೋಟು ನೀಡಿಕೆಯ ಪ್ರಾಧಿಕಾರವಾಗಿ, ಬ್ಯಾಂಕುಗಳ ಬ್ಯಾಂಕಾಗಿ, ಉದರಿ ನಿಯಂತ್ರಣದ ಹೊಣೆ ಹೊತ್ತ ಸಂಸ್ಥೆಯಾಗಿ ಕಾರ್ಯಾರಂಭಮಾಡಿದ ರಿಸರ್ವ್ ಬ್ಯಾಂಕು ಈಚಿನ ವರ್ಷಗಳಲ್ಲಿ ತನ್ನದೇ ಆದೊಂದು ರಾಜಮಾರ್ಗವನ್ನು ನಿರ್ಮಿಸಿಕೊಂಡಿದೆ. ಆರ್ಥಿಕ ಅಭಿವೃದ್ಧಿ ಹಾಗೂ ಬೆಳವಣಿಗೆ ಸಾಧಿಸಲು, ವರಮಾನದ ಅಂತರಗಳನ್ನು ಕಡಿಮೆ ಮಾಡಲು, ಕೆಲವೇ ವ್ಯಕ್ತಿಗಳಲ್ಲಿ ಅಥವಾ ಸಮೂಹಗಳಲ್ಲಿ ಅರ್ಥಿಕ ಅಧಿಕಾರ ಸಾಂದ್ರೀಕೃತವಾಗುವುದನ್ನು ನಿವಾರಿಸಲು, ಬ್ಯಾಂಕಿಂಗ್ ಸೌಲಭ್ಯಗಳ ಒದಗಣೆಯಲ್ಲಿಯ ಪ್ರಾದೇಶಿಕ ತರತಮಗಳನ್ನು ಹೋಗಲಾಡಿಸಲು ಸಾಧ್ಯವಾಗುವಂತೆ ಅದು ತನ್ನ ರೀತಿನೀತಿಗಳನ್ನು ಪುನರನುಸ್ಥಾಪಿಸಿಕೊಂಡಿದೆ. ಕೆಲವೇ ಪ್ರತಿಷ್ಠಿತ ವರ್ಗಗಳ ಸೇವೆಗೆ ಮುಡಿಪಾಗಿದ್ದ ಬ್ಯಾಂಕಿಂಗ್ ಸಂಸ್ಥೆಗಳು ನಿಜವಾದ ಅರ್ಥದಲ್ಲಿ ಜನಪರವಾಗುವಂತೆ ಮಾಡಲು ರಿಸರ್ವ್ ಬ್ಯಾಂಕ್ ಹೆಣಗುತ್ತ ಬಂದಿದೆ. ಅಗ್ರ ಬ್ಯಾಂಕಿಂಗ್ ಯೋಜನೆ ಈ ನಿಟ್ಟಿನಲ್ಲಿ ಒಂದು ಸ್ತುತ್ಯಪ್ರಯತ್ನ. ಒಳನಾಡಿನಲ್ಲಿ ಹಬ್ಬಿದ ಜನಸಮೂಹಗಳಿಂದ ಠೇವಣಿಗಳನ್ನು ಸಂಗ್ರಹಿಸುವುದೂ ದುರ್ಬಲ ವರ್ಗಗಳಿಗೆ ಹಣಕಾಸಿನ ಹಾಗೂ ಇತರ ಬಗೆಯ ನೆರವು ದೊರಕುವಂತೆ ಮಾಡುವುದು ಅಗ್ರ ಬ್ಯಾಂಕಿಂಗ್ ಯೋಜನೆಯ ದ್ವೈತೋದ್ದೇಶಗಳು. ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಇದರ ಮುಂದಿನ ಹೆಜ್ಜೆ, ಬಡತನದ ರೇಖೆಯ ಕೆಳಗಿರುವ ಜನಕೋಟಿಯ ಮೇಲ್ಬಾಟು, ನಿರುದ್ಯೋಗ ಅಲ್ಪೋದ್ಯೋಗ ಹಾಗೂ ಪ್ರಚ್ಛನ್ನ ನಿರುದ್ಯೋಗಪರಿಸ್ಥಿತಿಯ ನಿವಾರಣೆ, ಸ್ವೋದ್ಯೋಗಾವಕಾಶಗಳ ಕಲ್ಪನೆ ಹಾಗೂ ಸಾಮರ್ಥ್ಯದ ನಿರ್ಮಾಣ ಇಂಥ ಅನೇಕ ಉದ್ದೇಶಗಳಿಂದ ಬ್ಯಾಂಕುಗಳು ಇಂದು ಕಾರ್ಯಪ್ರವೃತ್ತವಾಗಿವೆ. ಅಭಿವೃದ್ಧಿ ಬ್ಯಾಂಕಿಂಗಿನ ನಾನಾ ಪರಿಕಲ್ಪನೆಗಳ ಉದಯವಾಗಿದೆ. ಬೆಳವಣಿಗೆಯ ಕೇಂದ್ರಗಳನ್ನು ಗುರುತಿಸುವ, ಠೇವಣಿ ಸಂಗ್ರಹಣೆಯ ಅವಕಾಶಗಳ ಪತ್ತೆಹಚ್ಚುವ ಎಲ್ಲಿ ಉದರಿ ಅಗತ್ಯವೆಂಬುದನ್ನೂ ಎಲ್ಲಿ ಅದು ಸಾಕಷ್ಟಿಲ್ಲವೆಂಬುದನ್ನೂ ಪರಿಶೀಲಿಸುವ, ಪ್ರತಿಯೊಂದು ಜಿಲ್ಲೆಯ

ಬ್ಯಾಂಕಿಂಗ್, ಹಾಗೂ ಇತರ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಆ ಪ್ರದೇಶದಲ್ಲಿ ಉದರಿ ವಿನಿಯೋಜನೆಗಾಗಿ ಸಂಯೋಜಿತ ಕಾರ್ಯಕ್ರಮವೊಂದನ್ನು ರೂಪಿಸುವ ಹೊಣೆ ಆಯಾ ಜಿಲ್ಲೆಯ ಅಗ್ರಬ್ಯಾಂಕಿಂಗ್ ಸಂಸ್ಥೆಯದಾಗಿರುತ್ತದೆ. ಪ್ರಾದೇಶಿಕ ಅಭಿವೃದ್ಧಿಯ ಆರ್ಥಿಕ ಬದಲಾವಣೆಯ ಸಾಧನವಾಗಿ ಬ್ಯಾಂಕುಗಳನ್ನು ಪರಿವರ್ತಿಸುವಲ್ಲಿ ರಿಸರ್ವ್ ಬ್ಯಾಂಕಿನ ಪಾತ್ರ ದೊಡ್ಡದು.

ಉದರಿ ನಿಯಂತ್ರಣವನ್ನು ಕುರಿತದ್ದು ರಿಸರ್ವ್ ಬ್ಯಾಂಕಿನ ಇನ್ನೊಂದು ದೊಡ್ಡ ಕಾರ್ಯಕ್ಷೇತ್ರ. ಭಾರತದಂಥ ಅಭಿವೃದ್ಧಿಶೀಲ ದೇಶದಲ್ಲಿ ಇದು ಬಹು ಜಟಿಲವಾದ್ದು. ದೇಶದ ವಿವಿಧ ಹಣ ವಲಯಗಳ ನಡುವೆ ಹೊಂದಾಣಿಕೆಯಿಲ್ಲದಿರುವುದು, ಇಡೀ ಹಣ ಮಾರುಕಟ್ಟೆ ಏಕೀಕೃತವಾಗಿಲ್ಲದಿರುವುದು, ಒಂದು ಕಾರಣ. ಉದರಿಯ ಪರಿಮಾಣಾತ್ಮಕ ಅಥವಾ ಗಾತ್ರಾತ್ಮಕ ನಿಯಂತ್ರಣದೊಂದಿಗೆ ಗುಣಾತ್ಮಕ ಹಾಗೂ ವಲಯಾತ್ಮಕ ನಿಯಂತ್ರಣವೂ ಅಗತ್ಯವಾಗಿದೆ. ಆದ್ಯತೆಗೆ ಅನುಗುಣವಾಗಿ ನಿಧಿಗಳು ಹರಿಯುವಂತೆ ಮಾಡುವುದರ ಜೊತೆಗೆ, ಕೆಲವು ಕ್ಷೇತ್ರಗಳಿಗೆ ಅನಾವಶ್ಯಕವಾಗಿ ಹಣ ಹರಿದು, ಕೊಬ್ಬೆ ಏರ್ಪಟ್ಟು, ಇಡೀ ಅರ್ಥವ್ಯವಸ್ಥೆಯೇ ಅಸ್ತವ್ಯಸ್ತವಾಗದ ಹಾಗೆ ನೋಡಿ ಕೊಳ್ಳಬೇಕಾಗಿದೆ. ಉತ್ಪಾದನೆಗೆ ಉತ್ತೇಜನ ದೊರಕಿಸಿ ಕೊಡಬೇಕಾಗಿದೆ. ಕೇಂದ್ರೀಯ ಬ್ಯಾಂಕಿನ ಪರಂಪರಾಗತ ಉದರಿ ನಿಯಂತ್ರಣಾಸ್ತ್ರಗಳ ಜೊತೆಗೆ ಹೊಸ ಹೊಸ ಅಸ್ತ್ರಗಳನ್ನು ಬೇರೆಬೇರೆಯಾಗಿಯೋ ಪರಸ್ಪರ ಹೊಂದಿಸಿಯೋ ಪ್ರಯೋಗಿಸುವುದರ ಮೂಲಕ ರಿಸರ್ವ್ ಬ್ಯಾಂಕು ಇದನ್ನೆಲ್ಲ ಸಾಧಿಸಲು ಯತ್ನಿಸುತ್ತಿದೆ. ಬ್ಯಾಂಕು ದರ, ತೆರೆದ ಪೇಟೆಯ ಕಲಾಪಗಳು, ವರಣಾತ್ಮಕ ಉದರಿ ನಿಯಂತ್ರಣ, ಪ್ರತಿಭೂತಿಯ ಆಧಾರದ ಮೇಲೆ ನೀಡಬಹುದಾದ ಮುಂಗಡದ ಪ್ರಮಾಣದ ನಿಗದಿ, ನಗದು ಮೀಸಲು ಅನುಪಾತದ ಏರಿಳಿತ, ಪರಿನಿಯತ ದ್ರವತ್ವ, ಅನುಪಾತದಲ್ಲಿ ವ್ಯತ್ಯಾಸ, ನೈತಿಕ ಪ್ರಭಾವ, ಬಲಾತ್ಕಾರ ಮುಂತಾದ ನಾನಾ ವಿಧಾನಗಳಿಂದ ಉದರಿ ನಿಯಂತ್ರಣ ಸಾಧಿಸಲೂ, ಉತ್ಪಾದನೆಗೆ ಯಥೋಚಿತ ಉತ್ತೇಜನ ದೊರಕಿಸಲೂ, ಹಣದುಬ್ಬರವನ್ನು ಹತ್ತಿಕ್ಕಲೂ ರಿಸರ್ವ್ ಬ್ಯಾಂಕು ಯತ್ನಿಸಿದೆ.

ರಿಸರ್ವ್ ಬ್ಯಾಂಕು ಈಗ ಸರ್ಕಾರದ ಒಡೆತನದ ಸಂಸ್ಥೆಯಾದರೂ ಅದಕ್ಕೆ ತಕ್ಕಮಟ್ಟಿನ ಸ್ವಾಯತ್ತಾಧಿಕಾರ ಇದೆಯೆನ್ನಬಹುದು. ಅದು ಸ್ವತಂತ್ರ ಸಂಸ್ಥೆಯೆಂಬಂತೆ ಸರ್ಕಾರಕ್ಕೆ ಆಗಿಂದಾಗ್ಗೆ ಆರ್ಥಿಕ ವಿಚಾರಗಳ ಬಗ್ಗೆ ಸಲಹೆ ನೀಡುತ್ತ ಬಂದಿದೆ. ಸರ್ಕಾರದ ನೀತಿಗಳು ಕಾರ್ಯಗತವಾಗುವಂತೆ ಮಾಡಲು ಯುಕ್ತಕ್ರಮಗಳನ್ನೂ ಕೈಗೊಳ್ಳುತ್ತ ಬರುತ್ತಿದೆ. ಸರ್ಕಾರ ಹಾಗೂ ಬ್ಯಾಂಕಿನ ನಡುವೆ ಸಂಪೂರ್ಣ ಸಹಯೋಗ ಅತ್ಯಗತ್ಯ. ಆದರೆ ಯಾವುದೇ ವಿಚಾರದಲ್ಲಿ

ಭಿನ್ನಾಭಿಪ್ರಾಯವುಂಟಾದಾಗ ರಿಸರ್ವ್ ಬ್ಯಾಂಕಿನ ಮಾತು ನಡೆಯತಕ್ಕದ್ದೇ ಅಥವಾ ಸರ್ಕಾರದ ಮಾತು ನಡೆಯಬೇಕೇ ಎಂಬುದು ಕೂಟಪ್ರಶ್ನೆ, ರಿಸರ್ವ್ ಬ್ಯಾಂಕ್ ಸರ್ಕಾರದ ಒಡೆತನದ ಸಂಸ್ಥೆಯಾದ್ದರಿಂದ, ಅದರ ಉನ್ನತಾಧಿಕಾರಿಗಳ ನೇಮಕವಾಗುವುದು ಸರ್ಕಾರದಿಂದಲಾದ್ದರಿಂದ ಅನೇಕ ವೇಳೆ ಸರ್ಕಾರದ್ದೇ ಕೊನೆಯ ಮಾತು ಎಂಬಂತಾಗಿದೆ. ರಿಸರ್ವ್ ಬ್ಯಾಂಕು ಸರ್ಕಾರದ ಆದೇಶದಂತೆಯೇ ನಡೆದುಕೊಂಡು, ಸ್ವಾಯತ್ತ ಹಣ ಸಂಸ್ಥೆಯಾಗಿ ತನ್ನ ಹೊಣೆಯನ್ನು ಬಿಟ್ಟುಕೊಟ್ಟ ಸಂದರ್ಭಗಳೂ ಇಲ್ಲದಿಲ್ಲ. ಆದರೆ ಕೇಂದ್ರೀಯ ಬ್ಯಾಂಕ್ ಹಾಗೂ ಸರ್ಕಾರದ ಸಂಬಂಧ ಅತ್ಯಂತ ಸೂಕ್ಷ್ಮವಾದ್ದು. ಈ ವಿಚಾರದಲ್ಲಿ ಸಮತೋಲ ಸಾಧಿಸಲು ಉಭಯಪಕ್ಷಗಳೂ ವಿವೇಕದಿಂದ ವರ್ತಿಸಬೇಕಾಗುತ್ತದೆ. ಸರ್ಕಾರ, ಬ್ಯಾಂಕು ಎರಡೂ ಈ ಕೌಶಲವನ್ನು ಇನ್ನೂ ಸಾಧಿಸಬೇಕಾಗಿದೆ. ಇದೊಂದು ಕೊರತೆಯೇ ಎನ್ನಬೇಕು.

ಈ ಐವತ್ತು ವರ್ಷಗಳ ಸಾಧನೆಗಳನ್ನು ನೆನೆದು ರಿಸರ್ವ್ ಬ್ಯಾಂಕು ಬೆನ್ನು ಚಪ್ಪರಿಸಿಕೊಳ್ಳಬಹುದಾಗಿದೆ.
ಭಾರತದಲ್ಲಿ ಪದೇಪದೇ ಬ್ಯಾಂಕುಗಳು ದಿವಾಳಿ ಏಳುತ್ತಿದ್ದ ಪರಿಸ್ಥಿತಿ ಈಗ ಇಲ್ಲದಂತಾಗಿರುವುದಕ್ಕೆ ರಿಸರ್ವ್ ಬ್ಯಾಂಕ್ ಬಹಳಮಟ್ಟಿಗೆ ಕಾರಣ. ಆದರೆ ಬ್ಯಾಂಕುಗಳ ಮೇಲೆ ರಿಸರ್ವ್ ಬ್ಯಾಂಕು ನಿಜವಾದ ಅರ್ಥದಲ್ಲಿ ಸಾಕಷ್ಟು ನಿಯಂತ್ರಣ ಸಾಧಿಸಲಾಗಿಲ್ಲ. ಈಚಿನ ವರ್ಷಗಳಲ್ಲಿ ನಮ್ಮ ಬ್ಯಾಂಕಿಂಗ್ ವಲಯ ಅಗಾಧವಾಗಿ ಬೆಳೆದಿದೆ. ಬ್ಯಾಂಕುಗಳ ಸಂಖ್ಯೆ ಹೆಚ್ಚದಿದ್ದರೂ ಶಾಖೆಗಳು ಬೆಳೆದಿವೆ. ಅವುಗಳ ನಿರೀಕ್ಷಣೆ, ಗುಣಮಟ್ಟದ ಏರಿಕೆ ಈ ನಿಟ್ಟಿನಲ್ಲಿ ರಿಸರ್ವ್ ಬ್ಯಾಂಕು ಸಾಧಿಸಬೇಕಾದ್ದು ಬಹಳಷ್ಟಿದೆ. ಬ್ಯಾಂಕುಗಳಲ್ಲಿ ವಂಚನೆ, ಹಣದ ದಸ್ತು ಮುಂತಾದ ಪ್ರಕರಣಗಳು ಬೆಳೆಯುತ್ತಿವೆ. ಬ್ಯಾಂಕುಗಳು ಬೃಹತ್ ಅಸ್ವಸ್ಥ ಉದ್ಯಮಗಳಾಗುತ್ತಿವೆ. ಈ ಅನಿಷ್ಟಕಾರಕ ಪ್ರವೃತ್ತಿಗಳ ನಿವಾರಣೆಗೆ ರಿಸರ್ವ್ ಬ್ಯಾಂಕು ಇನ್ನೂ ಹೆಚ್ಚು ಶ್ರದ್ಧೆಯಿಂದ ಟೊಂಕ ಕಟ್ಟಿ ನಿಲ್ಲಬೇಕಾಗಿದೆ.

ದೇಶದಲ್ಲಿ ಅರ್ಬುದವ್ಯಾಧಿಯಂತೆ ಬೆಳೆಯುತ್ತಿರುವ ಹಣದುಬ್ಬರವನ್ನಾಗಲಿ, ಕಪ್ಪು ಹಣವನ್ನಾಗಲಿ ತಡೆಗಟ್ಟುವಲ್ಲಿ ರಿಸರ್ವ್ ಬ್ಯಾಂಕು ಯಶಸ್ಸುಗಳಿಸಿಲ್ಲ. ಆದರೆ ರಿಸರ್ವ್ ಬ್ಯಾಂಕ್ ಒಂದೇ ಇದನ್ನು ಸಾಧಿಸಲಾರದು. ರಾಜಕೀಯ ವ್ಯವಸ್ಥೆ, ನೈತಿಕಮೌಲ್ಯಗಳು, ತೆರಿಗೆ ನೀತಿ, ಕಾನೂನು ಮುಂತಾದ ಹಲವಾರು ಪ್ರಸಕ್ತ ನಿಯತಾಂಕಗಳನ್ನು ನಾವಿಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಲಿಲಿಪುಟದ ನಾಡಿನಲ್ಲಿ ಬಂಧಿತನಾಗಿದ್ದ ಗಲಿವರನಂತೆ ಕಟ್ಟುಗಳನ್ನು ಮುರಿದು ಮೇಲೆದ್ದು ಬೆಳೆಯುತ್ತಿರುವ ಕೈಗಾರಿಕಾ ಸಾಮ್ರಾಜ್ಯಗಳನ್ನು ಹತ್ತಿಕ್ಕುವಲ್ಲೂ ರಿಸರ್ವ್ ಬ್ಯಾಂಕ್ ವಿಫಲಗೊಂಡಿದೆ. ಬ್ಯಾಂಕ್ ನಿಧಿಗಳು ಇವುಗಳಿಗೆ ಹರಿಯುವುದನ್ನು ತಡೆಗಟ್ಟುವುದು

ಇನ್ನೂವರೆಗೂ ಸಾಧ್ಯವಾಗಿಲ್ಲ. ಅಸ್ವಸ್ಥ ಕೈಗಾರಿಕೆಗಳ ಸುತ್ತಣ ಮಾಯಾಜಾಲವನ್ನು ಪಕ್ಕಕ್ಕೆ ಸರಿಸಿ ನೋಡಲು ರಿಸರ್ವ್ ಬ್ಯಾಂಕ್ ಸಮರ್ಥವಾಗಿಲ್ಲ, ಆದ್ಯತಾವಲಯಗಳಿಗೆ ಹರಿಯುತ್ತಿರುವ ಹಣದ ಹೊಳೆಯಿಂದ ಹಸಿರು ಕೊನರುತ್ತಿಲ್ಲ. ಅದು ಮರಳುಗಾಡಿನಲ್ಲಿ ಬತ್ತಿದ ತೊರೆಯಂತಾಗಿದೆ. ಅದರ ಗುರುತೂ ರಿಸರ್ವ್ ಬ್ಯಾಂಕಿಗೆ ಹತ್ತುತ್ತಿಲ್ಲ! ಹಳ್ಳಿಗಾಡುಗಳಲ್ಲಿ ಲೇವಾದೇವಿಗಾರರ ಕೈವಾಡ ತಪ್ಪಿಲ್ಲ, ಪರ್ಯಾಯ ಉದರಿ ಸಾಧನಗಳನ್ನು ರಿಸರ್ವ್ ಬ್ಯಾಂಕ್ ಸರ್ಕಾರವೂ ಇನ್ನೂ ತಲಾಷ್ ಮಾಡುತ್ತಲೇ ಇವೆ. ದೇಶೀಯ ಬ್ಯಾಂಕರುಗಳನ್ನು ಸಂಘಟಿತ ಬ್ಯಾಂಕಿಂಗ್ ವಲಯದೊಂದಿಗೆ ಹೆಣೆಯಲೂ ರಿಸರ್ವ್ ಬ್ಯಾಂಕು ಅಸಮರ್ಥವಾಗಿದೆ. ಹಣ ಪೇಟೆ ಸಂಪೂರ್ಣವಾಗಿ ರಿಸರ್ವ್ ಬ್ಯಾಂಕಿನ ಹತೋಟಿಗೆ ಒಳಪಟ್ಟಿಲ್ಲವೆಂಬ ಅಂಶವನ್ನು ನಾವು ರಿಸರ್ವ್ ಬ್ಯಾಂಕಿನ ಯಾವುದೇ ಕ್ರಮದ ಸಾಫಲ್ಯವೈಫಲ್ಯಗಳ ಪರೀಕ್ಷೆ ನಡೆಸುವಾಗ ನೆನಪಿನಲ್ಲಿಟ್ಟು ಕೊಳ್ಳಬೇಕು.

ಆದಾಗ್ಯೂ ರಿಸರ್ವ್ ಬ್ಯಾಂಕು ಈ ಐವತ್ತು ವರ್ಷಗಳಲ್ಲಿ ಭಾರತದ ಅರ್ಥವ್ಯವಸ್ಥೆಯ ವಟವೃಕ್ಷವಾಗಿ ಬೆಳೆದಿದೆ. ದೇಶದ ಆರ್ಥಿಕ ಇತಿಹಾಸವೂ ರಿಸರ್ವ್ ಬ್ಯಾಂಕಿನ ಇತಿಹಾಸವೂ ಒಂದೇ ಎಂಬ ರೀತಿಯಲ್ಲಿ ಇವೆರಡರ ನಡುವೆ ಅವಿನಾಭಾವ ಸಂಬಂಧ ಏರ್ಪಟ್ಟಿದೆ. ಇದೊಂದು ಮಹಾ ಸಾಧನೆಯೇ.

ಬ್ಯಾಂಕಿಂಗ್ ನಿಘಂಟು

ಬ್ಯಾಂಕಿಂಗ್ ಪ್ರಪಂಚದ ಹಿಂದಿನ ಸಂಚಿಕೆಗಳನ್ನು ನೋಡಿರುವವರ ಗಮನ ಆ ಸಂಚಿಕೆಗಳ ಕೊನೆಯ ಪುಟಗಳತ್ತ ಹರಿದಿರಲೇಬೇಕು. ಸಾಮಾನ್ಯವಾಗಿ ಆ ಪುಟಗಳಲ್ಲಿ ಬ್ಯಾಂಕಿಂಗ್ ಪದಕೋಶವನ್ನು ಧಾರಾವಾಹಿಯಾಗಿ ಪ್ರಕಟಿಸಲಾಗುತ್ತಿತ್ತು. ಇಂಗ್ಲಿಷ್ 'ಎ'ಯಿಂದ 'ಜೆಡ್'ನ ವರೆಗಿನ ಅಕ್ಷರಗಳಿಂದ ಆರಂಭವಾಗುವ – ಬ್ಯಾಂಕಿಂಗ್, ಹಣಕಾಸು ಹಾಗೂ ತತ್ಸಂಬಂಧಿ ಕ್ಷೇತ್ರಗಳಲ್ಲಿ ಬಳಕೆಯಲ್ಲಿರುವ – ನಾನಾ ಇಂಗ್ಲಿಷ್ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನೂ ಆ ಪದಗಳ ವ್ಯಾಖ್ಯೆ, ಅರ್ಥವಿವರಣೆ, ಕಾನೂನಿನ ಹಾಗೂ ಆಚರಣೆಯ ಹಿನ್ನೆಲೆ ಮುಂತಾದುವನ್ನೂ ನೀಡಲಾಗುತ್ತಿತ್ತು.

ಸಮನ್ವಯ ಸಮಿತಿ ಇದೀಗ ಬ್ಯಾಂಕಿಂಗ್ ನಿಘಂಟನ್ನು ಪ್ರತ್ಯೇಕ ಪುಸ್ತಕವಾಗಿ ಪ್ರಕಟಿಸಿದೆ. ಎರಡು ಸಾವಿರದ ಅರನೂರಕ್ಕೂ ಹೆಚ್ಚು ಪದಗಳಿರುವ ಈ ನಿಘಂಟು ಒಂದು ರೀತಿಯಲ್ಲಿ ಬ್ಯಾಂಕಿಂಗ್ ವಿಶ್ವಕೋಶವೆನ್ನಬಹುದು. ಇವುಗಳ ಜೊತೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬಳಕೆಯಲ್ಲಿರುವ ನಾನಾ ಸಂಕೇತಾಕ್ಷರಗಳ ವಿಸ್ತೃತರೂಪಗಳನ್ನೂ ಅವುಗಳ ಕನ್ನಡ ಅನುವಾದಗಳನ್ನೂ ಒಳಗೊಂಡಿರುವ ಈ ಪುಸ್ತಕವನ್ನು ಕಳೆದ ಆಗಸ್ಟ್ 19ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಹೊರತರಲಾದ, ಸಮನ್ವಯ ಸಮಿತಿಯ ಅನಿಯತಕಾಲಿಕವಾದ 'ಸಂವಹನ'ದ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದವರು ಸಾರಿಗೆ ಮತ್ತು ವಸತಿ ರಾಜ್ಯಸಚಿವರಾದ ಶ್ರೀ ಪಿ. ಜಿ. ಆರ್. ಸಿಂಧ್ಯ. ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಿ. ವಿ. ಸುಬ್ರಹ್ಮಣ್ಯಂ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ವರ್ಣಮಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಪ್ರಧಾನ ವ್ಯವಸ್ಥಾಪಕರಲ್ಲೊಬ್ಬರಾದ ಶ್ರೀ ಎಂ. ನವರತ್ನರಾಜು ಅವರೂ ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಸಲಹಾಮಂಡಲಿಯ ಸದಸ್ಯರಾದ ಶ್ರೀ ಕೆ. ಪಿ.ರಾವ್ ಅವರೂ ಆಗಮಿಸಿದ್ದರು.

ಬ್ಯಾಂಕುಗಳಲ್ಲಿ ಕನ್ನಡ ಬಳಸಲು ಅಗತ್ಯವಾದ ಅಧೋರಚನೆಯ ನಿರ್ಮಾಣಕಾರ್ಯದಲ್ಲಿ ಬ್ಯಾಂಕಿಂಗ್ ನಿಘಂಟು ಮೊದಲನೆಯ ಹೆಜ್ಜೆ. ಇದಕ್ಕೆ ಕನ್ನಡಿಗರು ನೀಡಿರುವ ಬೆಂಬಲ ಅಸಾಧಾರಣವಾದ್ದು. ಪ್ರಕಟನೆಗೆ ಪೂರ್ವದಲ್ಲಿಯೇ ಇದರ ಬಹುತೇಕ ಪ್ರತಿಗಳು ಮಾರಾಟವಾದುವೆಂಬುದು ತುಂಬ ಅಭಿಮಾನದ ಸಂಗತಿ. ಸರ್ಕಾರ, ಬ್ಯಾಂಕ್ ವ್ಯವಸ್ಥಾಪಕವರ್ಗ ಹಾಗೂ ಉದ್ಯೋಗಿಗಳ ಪ್ರತಿನಿಧಿಗಳಿಂದ ಕೂಡಿದ್ದ ಈ ಸಮಾರಂಭದಲ್ಲಿ ಈ

ಕಾರ್ಯದ ಬಗ್ಗೆ ವ್ಯಕ್ತವಾದ ಅಭಿಪ್ರಾಯಗಳು ನಮಗೆ ಉತ್ತೇಜನ ನೀಡುವಂಥವು. ಬ್ಯಾಂಕುಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಇರುವ ಕಾಲ್ತೊಡಕುಗಳ ನಿವಾರಣೆಯ ದಿನಗಳು ಬಹು ದೂರವಿಲ್ಲ ಎಂಬುದನ್ನು ಇವು ಸೂಚಿಸುತ್ತವೆ. ಬ್ಯಾಂಕುಗಳಲ್ಲಿ ಕನ್ನಡದ ಬಳಕೆ ಅನಿವಾರ್ಯ, ಅಗತ್ಯ ಎಂಬುದು ಈಗಲಾದರೂ ಮೇಲ್ಪಟ್ಟವರಿಗೆ ಮನವರಿಕೆಯಾದೀತೆಂದೂ ಈ ನಿಟ್ಟಿನಲ್ಲಿ ಯುಕ್ತವಾದ ಕ್ರಮ ತೆಗೆದುಕೊಳ್ಳಲು ಅವರಾಗಿಯೇ ಮುಂದೆ ಬಂದಾರೆಂದೂ ನಾವು ಆಶಿಸುತ್ತೇವೆ. ಇದು ಬರೀ ಆಕಾಶಕುಸುಮವಾಗದಿರಲಿ.

10.

1986 – ಮಾರ್ಚ್ ತ್ರೈಮಾಸಿಕ

ಇದುವರೆಗೂ ಅರ್ಧವಾರ್ಷಿಕವಾಗಿದ್ದ 'ಬ್ಯಾಂಕಿಂಗ್ ಪ್ರಪಂಚ' ಈ ಸಂಚಿಕೆಯಿಂದ ತ್ರೈಮಾಸಿಕವಾಗಿದೆ. ಆರು ವರ್ಷಗಳ ಹಿಂದೆ ಇದನ್ನು ಆರಂಭಿಸಿದಾಗ ಇದು ತ್ರೈಮಾಸಿಕವಾಗಿರಬೇಕೆಂಬುದೇ ಅನೇಕರ ಆಸೆಯಾಗಿತ್ತು. ಆದರೆ ಇಂಥ ಪತ್ರಿಕೆಯೊಂದಕ್ಕೆ ಕನ್ನಡಿಗರಿಂದ ಎಷ್ಟರ ಮಟ್ಟಿಗಿನ ಸ್ವಾಗತ ಪ್ರೋತ್ಸಾಹ ದೊರಕಿಯಾವೋ, ಹಣ ಬ್ಯಾಂಕಿಂಗ್ ವಿಚಾರಗಳನ್ನು ಕುರಿತು ಲೇಖನ ಬರೆಯಬಲ್ಲವರು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿಯಾರೋ ಇಲ್ಲವೋ ಎಂದೇ ನಮ್ಮ ಚಿಂತೆಯಾಗಿತ್ತು. ಪತ್ರಿಕೆಯನ್ನು ಕೇವಲ ಹಣ–ಬ್ಯಾಂಕಿಂಗ್ ವಿಚಾರಗಳಿಗೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ಕೂಡ ಹಲವರು ಅಭಿಪ್ರಾಯಪಟ್ಟರು. ಈ ವಿಚಾರಗಳನ್ನು ಕುರಿತು ಎಷ್ಟು ಲೇಖನ ಬರೆಯುವುದು ಸಾಧ್ಯ? ಸ್ವಲ್ಪ ಕಾಲದ ಅನಂತರ ಲೇಖನಗಳಿಗೆ ವಿಷಯಗಳೇ ಇಲ್ಲದಂಥ ಸ್ಥಿತಿ ಬಂದೀತು. ಆದ್ದರಿಂದ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತ ಲೇಖನವಿದ್ದರೂ ಅದಕ್ಕೆ ಪತ್ರಿಕೆಯಲ್ಲಿ ಅವಕಾಶ ಇರಬೇಕು ಎಂಬುದು ಇವರ ಸಲಹೆಯಾಗಿತ್ತು. ಒಂದು ದೃಷ್ಟಿಯಲ್ಲಿ ಬ್ಯಾಂಕಿಂಗಿಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಬಂಧಿಸದ ಆರ್ಥಿಕ ವಿಷಯವೇ ಇಲ್ಲವೆಂಬುದು ನಿಜವಾದರೂ, ಬ್ಯಾಂಕಿಂಗಿಗೆ ನೇರವಾಗಿ ಸಂಬಂಧಿಸುವ ವಿಚಾರಗಳಿಗಷ್ಟೇ ಪತ್ರಿಕೆ ಸೀಮಿತವಾಗಿರಬೇಕು ಎಂದು ತೀರ್ಮಾನಿಸಲಾಯಿತು. ಪತ್ರಿಕೆಗೆ 'ಬ್ಯಾಂಕಿಂಗ್ ಪ್ರಂಪಂಚ' ಎಂದು ಹೆಸರಿಟ್ಟ ಮೇಲೆ, ಅದರಲ್ಲಿ ಇತರ ವಿಷಯಗಳನ್ನೂ ಕುರಿತ ಲೇಖನಗಳನ್ನು ಪ್ರಕಟಿಸುವುದು ಎಷ್ಟರ ಮಟ್ಟಿಗೆ ಉಚಿತ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಹೀಗೆಂದರೆ ಇತರ ಆರ್ಥಿಕ ವಿಚಾರಗಳಿಗೆ ಈ ಪತ್ರಿಕೆಯಲ್ಲಿ ಎಡೆಯಿರಲೇ ಬಾರದೆಂದೇನೂ ಅಲ್ಲ. ಬ್ಯಾಂಕಿಂಗ್ ಅಥವಾ ಹಣದ ಮೇಲೆ ತೀವ್ರ ಪರಿಣಾಮ ಬೀರುವಂಥ ಯಾವುದೇ ಅಸಾಧಾರಣ ಘಟನೆ ಅಥವಾ ವಿದ್ಯಮಾನಕ್ಕೆ ಪತ್ರಿಕೆ ಕಣ್ಣು ಮುಚ್ಚಲಾರದು. ಅಲ್ಲದೆ ಹಣ ಮತ್ತು ಬ್ಯಾಂಕಿಂಗ್ ಕಿರಿದಾದ ಕ್ಷೇತ್ರವೇನೂ ಅಲ್ಲ. 'ಬ್ಯಾಂಕಿಂಗ್ ಪ್ರಪಂಚ' ಒಂದಕ್ಕೇ ಅಲ್ಲ, ಇಂಥ ಹತ್ತು ಪತ್ರಿಕೆಗಳಿಗೆ ಆಗಿ ಮಿಗುವಷ್ಟು ಲೇಖನಗಳಿಗೆ ಅದು ಸಾಮಗ್ರಿ ಒದಗಿಸಬಲ್ಲುದು. ಹೀಗಿರುವಾಗ ಯಾವ ದೃಷ್ಟಿಯಿಂದಲೂ ಬ್ಯಾಂಕಿಂಗ್ ಪ್ರಪಂಚ' ಸೊರಗಬೇಕಾಗುವುದಿಲ್ಲ, ಬರಡಾಗಬೇಕಾದ್ದಿಲ್ಲ ಎಂಬುದು ನಮ್ಮ ಅನಿಸಿಕೆ.

ನಮ್ಮ ಅನಿಸಿಕೆ ಸುಳ್ಳಾಗಲಿಲ್ಲ. ಈ ಆರು ವರ್ಷಗಳಲ್ಲಿ 'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಈ ಕ್ಷೇತ್ರದ ಅನೇಕ ಮುಖಗಳ

ಪರಿಚಯ ಮಾಡಿ ಕೊಡಲು ಯತ್ನಿಸಲಾಗಿದೆ. ವಿಷಯಗಳಿಗೇನೂ ಕೊರತೆಯಿಲ್ಲ. ಇವನ್ನು ಕುರಿತು ಬರೆಯಬಲ್ಲ ಸಮರ್ಥರು ಎಷ್ಟು ಮಂದಿ ಇದ್ದಾರು ಎಂಬ ಪ್ರಶ್ನೆಗೂ ಪತ್ರಿಕೆ ಉತ್ತರ ನೀಡಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಿರತರಾದ, ಇದರಲ್ಲಿ ಆಸಕ್ತರಾದ ಅನೇಕ ತರುಣ ಲೇಖಕರ ಪ್ರತಿಭೆ ಈ ಪತ್ರಿಕೆಯಿಂದಾಗಿ ತೆರೆದುಕೊಂಡಿದೆ, ವಿಕಾಸಗೊಂಡಿದೆ, ಪ್ರಕಾಶಕ್ಕೆ ಬಂದಿದೆ. ಪತ್ರಿಕೆಯ ಪ್ರಕಟನೆಯ ಆರು ತಿಂಗಳುಗಳ ಅವಧಿ ತೀರ ನಿಡಿದು ಎನಿಸಿದೆ. ಒಂದು ಸಂಚಿಕೆ ಪ್ರಕಟವಾದ ಮೇಲೆ ಇನ್ನೊಂದು ಸಂಚಿಕೆ ಹೊರಬೀಳುವವರೆಗೆ ಇಂಥದೊಂದು ಪತ್ರಿಕೆ ಇದೆಯೆಂಬುದನ್ನೆ ಓದುಗರು ಮರೆತುಬಿಡುವ ಸಂಭವವುಂಟು, Out of sight, out of mind, ಕಂಡಾಗಷ್ಟೇ ನೆನವು, ಕಾಣದಾಗ ಮರೆವು. ಇಂಥ ವೈಚಾರಿಕ ಪತ್ರಿಕೆಯೊಂದು ಕನ್ನಡದಲ್ಲಿ ನಮ್ಮ ಆಲೋಚನೆಯ ಒಂದು ಅವಿಭಾಜ್ಯ ಅಂಗವಾಗಿ ಪರಿಣಮಿಸುವಂಥ ವಾತಾವರಣ ನಾಡಿನಲ್ಲಿ ಇನ್ನೂ ಸೃಷ್ಟಿಯಾಗಿಲ್ಲ. 'ಕೊರವಂಜಿ'ಯಂಥ ಜನಪ್ರಿಯ ಹಾಸ್ಯ ಪತ್ರಿಕೆಯೇ ನಿಂತುಹೋಗಬೇಕಾಗಿ ಬಂದಾಗ, ಅದರ ಸಂಪಾದಕರಾಗಿದ್ದ 'ರಾಶಿ' ಅವರು ಬರೆದ ಒಂದು ಮಾತು ನೆನಪಾಗುತ್ತ: 'ಹೋಗಿ ಬರುತ್ತೇನೆ ಎಂದೆಯಾ? ನೀನಿದ್ದೀಯೆಂಬುದೇ ಗೊತ್ತಿರಲಿಲ್ಲವಲ್ಲ!' ಎಂಬುದು ಕೊರವಂಜಿಯ ನಿರ್ಗಮನದ ಸಂದರ್ಭದಲ್ಲಿ ಕನ್ನಡಿಗರ ಪ್ರತಿಕ್ರಿಯೆ, ಆದರೆ ಹಾಗೆಂದುಕೊಂಡು ನಾವಂತೂ ನಿರಾಸಕ್ತಿಯ ಧೋರಣೆ ತಳೆಯಲು ಸಿದ್ಧರಿಲ್ಲ. ಕನ್ನಡ ಓದುಗರ ಮನಸ್ಸುಗಳಿಗೆ ಲಗ್ಗೆ ಹಾಕುವುದೇ ನಮ್ಮ ಸಂಕಲ್ಪ, ಆರು ತಿಂಗಳ ಅವಧಿ ತುಂಬ ನಿಡಿದಾದರೆ ಮೂರು ತಿಂಗಳಿಗೊಮ್ಮೆ ಪ್ರಕಟಿಸುವ ಹಠ. ತ್ರೈಮಾಸಿಕವಾಗಿರುವುದರಿಂದ ಕೆಲವು ಅನುಕೂಲಗಳುಂಟು. ಓದುಗರ ನೆನಪಿನ ತೆರೆಯ ಮೇಲಿಂದ ದೀರ್ಘಕಾಲ ಮರೆಯಾಗದಿರುವುದೊಂದೇ ಅನುಕೂಲವಲ್ಲ. ಕ್ರಮೇಣ ಪತ್ರಿಕೆಯ ಪುಟಗಳನ್ನು ಹೆಚ್ಚಿಸಿ, ಹೆಚ್ಚು ಹೆಚ್ಚು ಲೇಖನಗಳಿಗೆ ಅವಕಾಶಮಾಡಿಕೊಡುವುದು ಸಾಧ್ಯವಾಗುತ್ತದೆ. ಆರು ತಿಂಗಳ ಅವಧಿಯಲ್ಲಿ ಪ್ರಕಟವಾಗುವ ಕೆಲವು ಲೇಖನಗಳು ಬೆಳಕು ಕಾಣುವವೇಳೆಗೆ ಹಳತಾಗುವ ಸಂಭವವಿತ್ತು. ಲೇಖನಗಳನ್ನು ಬರೆದಂದಿನಿಂದ ಅವು ಪ್ರಕಟವಾಗುವ ವೇಳೆಗೆ ಆ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಬೆಳವಣಿಗೆಗಳೂ ಬದಲಾವಣೆಗಳೂ ಆಗುವುದು ಸಾಧ್ಯವಿತ್ತು. ಹಣ ಹಾಗೂ ಬ್ಯಾಂಕಿಂಗ್ ಸದಾ ತಳಮಳಿಸುವ ಕ್ಷೇತ್ರ, ಸದಾ ಪರಿವರ್ತನಶೀಲವಾದ ಕ್ಷೇತ್ರ. ಪತ್ರಿಕೆಯನ್ನು ತ್ರೈಮಾಸಿಕವಾಗಿ ಮಾಡಿರುವುದರಿಂದ ಲೇಖನದ ಬರವಣಿಗೆಯ ಕಾಲಕ್ಕೂ ಅದರ ಪ್ರಕಟನೆಯ ಕಾಲಕ್ಕೂ ಅಂತರ ಕಡಿಮೆಯಾಗುತ್ತದೆ. ಸಂಪಾದಕೀಯ ಬರಹವೂ ಸಂಚಿಕೆಯ ಪ್ರಕಟನೆಯ ದಿನಕ್ಕೆ ಹೆಚ್ಚು ಹತ್ತಿರದ್ದಾಗಿರುವುದು

ಸಾಧ್ಯ.

ಆದರೆ ಬದಲಾವಣೆಯಿಂದ ಪತ್ರಿಕೆಯ ಆರ್ಥಿಕ ತೊಂದರೆಗಳು ಅಧಿಕವಾಗುವುವೆಂಬುದನ್ನೂ ನಾವು ಮರೆತಿಲ್ಲ. 'ಬ್ಯಾಂಕಿಂಗ್ ಪ್ರಪಂಚ' ವಾಣಿಜ್ಯೋದ್ದೇಶದ ಪ್ರಕಟನೆಯಲ್ಲ. ಪತ್ರಿಕೆಯ ಲೇಖಕರೂ ಸಂಪಾದಕರೂ ಪ್ರಕಾಶಕರೂ ಕೇವಲ ಕನ್ನಡದ ಹಾಗೂ ಬ್ಯಾಂಕಿಂಗಿನ ಅಭಿಮಾನದಿಂದಾಗಿಯೇ ಈ ಕಾರ್ಯದಲ್ಲಿ ಪ್ರವೃತ್ತರಾಗಿದ್ದಾರೆ. ಆದರೆ 'ಅಭಿಮಾನ' ಎಂಬ ಮಾತನ್ನು ಕೆಲವರಾದರೂ ತಪ್ಪಾಗಿ ಅರ್ಥಮಾಡಿಕೊಳ್ಳುವ ಸಾಧ್ಯತೆಯುಂಟು. ಒಂದು ಮಾತನ್ನು ಲೋಕ ಹೊಲಗೆಡಿಸಿಕೊಂಡಿಹುದು' ಎನ್ನುತ್ತಾನೆ, ಷೆಲಿ (ಅನುವಾದ: 'ಶ್ರೀ') 'ಒಂದು ಭಾವದ ಹೃದಯವರಿಯದೆಯೆ ಜರೆಯುವುದು, ಜರೆಯಬೇಡದನು ನೀನು' ಎಂಬುದು ಕವಿಯ ಹಾರೈಕೆ. ಕನ್ನಡದ ಅಭಿಮಾನವೆಂದರೆ ದುರಭಿಮಾನವೆಂದೇ ಅನೇಕರ ಭಾವನೆ. ಆದರೆ 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯೊಂದು ಭಾರತದ ಬೇರಾವ ಭಾಷೆಯಲ್ಲೂ (ಇಂಗ್ಲಿಷ್ ವಿನಾ) ಇಲ್ಲವೆಂಬುದು ನಮ್ಮ ತಿಳಿವಳಿಕೆ. ಹಣ ಮತ್ತು ಬ್ಯಾಂಕಿಂಗ್ ಕುರಿತ ಸಂಕೀರ್ಣ ವಿಚಾರಗಳನ್ನು ಕೂಡ ಕನ್ನಡದಲ್ಲಿ ಚಿಂತಿಸುವ, ಚರ್ಚಿಸುವ ಅಭಿವ್ಯಕ್ತಿಸುವ ಸಾಮರ್ಥ್ಯ ದೊರಕಿಸಿಕೊಡಲು 'ಬ್ಯಾಂಕಿಂಗ್ ಪ್ರಪಂಚ' ಶ್ರಮಿಸುತ್ತಿದೆ, ಬಹುಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಎಲ್ಲ ಕನ್ನಡಿಗರೂ ಅಭಿಮಾನಪಡಬೇಕಾದ ಸಂಗತಿ. ಆದರೆ ನಮ್ಮ ಅನೇಕ ದಾರಿದ್ರ್ಯಗಳ ಪೈಕಿ ಅಭಿಮಾನದಾರಿದ್ರ್ಯವೂ ಒಂದು, ಬೇರೆ ಭಾಷೆಯೊಂದರಲ್ಲಿ ಇಂಥ ಕೆಲಸವೊಂದು ನಡೆದಿದ್ದರೆ ಅಲ್ಲಿಯ ಜನ ಅದನ್ನು ಮಾಳಿಗೆಯ ಮೇಲಿಂದ ಸಾರಿಕೊಳ್ಳುತ್ತಿದ್ದರು. ಹೀಗೆಂದರೆ ಇದಕ್ಕೆ ಪ್ರಚಾರವನ್ನು ಬಯಸಿ ನಾವು ಈ ಮಾತು ಹೇಳುತ್ತಿಲ್ಲ. ಬೇಕಾದ್ದು, ಇಂಥದೊಂದು ಕೆಲಸ ಆಗುತ್ತಿದೆಯೆಂಬುದನ್ನು ಕಾಣುವ ಔದಾರ್ಯ, ಈ ಕೆಲಸದ ಫಲ ಪಡೆದುಕೊಳ್ಳುವ ಜಾಣತನ, ವಿವೇಕ, 'ಏನಿತನೊರಲ್ದು ಪೇಳ್ವ ಕವಿಯೇವನ್? ಅದನ್ ಮೆಚ್ಚಬಲ್ಲವರನ್ ಅರಸಲ್ಕೆವೇಳ್ಪುದು. ಕಟ್ಟೆಯುಮೇನೊ, ಮಾಲೆಗಾರನ ಪೊಸ ಬಾಸಿಗಂ ಮುಡಿವ ಭೋಗಿಳಿಲ್ಲದಿದ್ದೊಡೆ ಬಾಡಿಪೊಗದೇ?' ಎನ್ನುತ್ತಾನೆ ಕವಿ ಜನ್ನ. ಈ ಮಾತು ಕಾವ್ಯಕ್ಕೆ ಮಾತ್ರ ಸಲ್ಲುವುದಲ್ಲ, ಎಲ್ಲ ಬರವಣಿಗೆಗೂ ಸಲುವಂತದು. ಕನ್ನಡದಲ್ಲಿ ಆಗುತ್ತಿರುವ ಈ ಕೆಲಸವನ್ನು ಕಂಡು ಮೆಚ್ಚಿ ಇದರ ಪ್ರಯೋಜನ ಪಡೆದುಕೊಳ್ಳುವ ಜನರ ಸಂಖ್ಯೆ ಹೆಚ್ಚುವ ಕಾಲವನ್ನು ಎದುರುನೋಡುತ್ತಾ, ಪ್ರಯತ್ನ ಮುಂದುವರಿಸುವ ಸಂಕಲ್ಪ ನಮ್ಮದು. "ಬ್ಯಾಂಕಿಂಗ್ ಪ್ರಪಂಚ' ತ್ರೈಮಾಸಿಕವಾಗಿರುವುದರಿಂದಲೂ, ಕಾಗದ ಮುದ್ರಣ ವೆಚ್ಚ ಅಧಿಕವಾಗಿರುವುದರಿಂದಲೂ ಪತ್ರಿಕೆಯ ವಾರ್ಷಿಕ ಹಾಗೂ ಆಜೀವ ಚಂದಾ ದರಗಳನ್ನು ಏರಿಸುವುದು

ಅನಿವಾರ್ಯವಾಗಿದೆ. ಪತ್ರಿಕೆಯನ್ನು ಉದ್ದಕ್ಕೂ ತಮ್ಮದೆಂದು ಪೋಷಿಸುತ್ತ ಬರುತ್ತಿರುವ ಅಭಿಮಾನಿ ಬಳಗದವರು ನಮ್ಮ ಈ ತೀರ್ಮಾನಕ್ಕೆ ಒಪ್ಪಿಗೆ ನೀಡಿ ಮುಂದೆಯೂ ಇದಕ್ಕೆ ಪೋಷಣೆ ನೀಡುವರೆಂದೂ, ತಮ್ಮ ಮಿತ್ರರನ್ನೂ ಪತ್ರಿಕೆಯ ಚಂದಾದಾರರನ್ನಾಗಿ ಮಾಡುವರೆಂದೂ ನಂಬಿದ್ದೇವೆ.

ತ್ರೈಮಾಸಿಕ ಪತ್ರಿಕೆಯಲ್ಲಿ ಇನ್ನೂ ಹೆಚ್ಚು ಉಪಯುಕ್ತವಾದ ಹಾಗೂ ವೈವಿಧ್ಯಪೂರಿತವಾದ ಲೇಖನಗಳನ್ನು ಪ್ರಕಟಿಸುವುದು ನಮ್ಮ ಉದ್ದೇಶ. ಹಣ–ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಕುರಿತ ವಿದ್ವತ್ಪೂರ್ಣ ಹಾಗೂ ಸಂಶೋಧನಾತ್ಮಕ ಬರಹಗಳ ಜೊತೆಗೆ, ಈ ಕ್ಷೇತ್ರದ ಪರಿಚಯ ಮಾಡಿಕೊಳ್ಳ ಬಯಸುವವರಿಗಾಗಿ, ಕೆಲವು ಸರಳ ಲೇಖನಗಳನ್ನೂ, ಕನ್ನಡದಲ್ಲಿ ಹಣ–ಬ್ಯಾಂಕಿಂಗ್ ಕುರಿತಂತೆ ಚಿಂತನ, ವ್ಯವಹಾರ, ಅಭಿವ್ಯಕ್ತಿ, ಸಾಧ್ಯವಾಗುವಂತೆ ನೆರವಾಗುವ ಲೇಖನಗಳನ್ನೂ ಪ್ರಕಟಿಸಲು ಹೆಚ್ಚು ಹೆಚ್ಚು ಪ್ರಯತ್ನ ನಡೆಸಲಾಗುತ್ತದೆ. ಕನ್ನಡದಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ಇರುವ ಅಥವಾ ಒದಗಿಬರುವ ಅಡ್ಡಿ ಆತಂಕಗಳ ನಿವಾರಣೆ, ವಾಚಕರೊಂದಿಗೆ ಸಂವಾದ, ಚರ್ಚಾವೇದಿಕೆ, ಬ್ಯಾಂಕಿಂಗಿಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪುಗಳು ಮುಂತಾದ ನಾನಾ ಅಂಕಣಗಳನ್ನು ಕ್ರಮೇಣ ತೆರೆಯಬೇಕೆಂಬ ಯೋಚನೆಯಿದೆ. ಇವುಗಳ ಯಶಸ್ಸು ಬಹಳ ಮಟ್ಟಿಗೆ ಓದುಗರನ್ನೇ ಅವಲಂಬಿಸಿದೆಯೆಂಬುದು ನಿರ್ವಿವಾದ. ಎರಡು ಕೈ ಸೇರಿದರೆ ಮಾತ್ರವೇ ಚಪ್ಪಾಳೆ, ಒಂದೇ ಕೈಯಿಂದ ಅದು ಸಾಧ್ಯವಾದೀತೆ?

1985ರಲ್ಲಿ ಬ್ಯಾಂಕಿಂಗ್

1985 ಅನೇಕ ದೃಷ್ಟಿಗಳಿಂದ ಗಮನಾರ್ಹವಾದ್ದು. ಇದನ್ನು ಬ್ಯಾಂಕಿಂಗ್ ಬೆಳವಣಿಗೆಯ ಜಲವಿಭಾಗ ರೇಖೆಯ ವರ್ಷ ಎಂದು ಕರೆಯಬಹುದು. ಆರನೆಯ ಪಂಚವಾರ್ಷಿಕ ಯೋಜನೆಯ ಅವಧಿ ಈ ವರ್ಷದ ಮಾರ್ಚ್ ತಿಂಗಳೊಂದಿಗೆ ಕೊನೆಗೊಂಡು, ಏಪ್ರಿಲಿನಲ್ಲಿ ಏಳನೆಯ ಯೋಜನೆ ಆರಂಭವಾಯಿತು. ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣದೊಂದಿಗೆ ಬೃಹತ್ತಾಗಿ ಬೆಳೆಯತೊಡಗಿದ ಬ್ಯಾಂಕಿಂಗ್ ವ್ಯವಸ್ಥೆಯ ಗುಣಾತ್ಮಕ ಅಭಿವರ್ಧನೆಯ ಬಗ್ಗೆ ಆಲೋಚನೆ ತೊಡಗಿದ್ದು 1985ರಲ್ಲಿ. ಬ್ಯಾಂಕ್ ಶಾಖೆಗಳ ಸಂಖ್ಯೆ ಗಮನಾರ್ಹವಾಗಿ ಅಧಿಕಾವಾಗಿದ್ದಾಗ್ಯೂ, ಅತಿವ್ಯಾಪ್ತಿ – ಅವ್ಯಾಪ್ತಿಗಳ ದೋಷ – ಲೋಪಗಳ ನಿವಾರಣೆ ಅಗತ್ಯವೆಂಬುದು ವಿಶೇಷವಾಗಿ ಮನವರಿಕೆಯಾಗತ್ತಿರುವುದು ಒಂದು ಶುಭ ಚಿಹ್ನೆ. ಸಾಮಾಜಿಕ ಬ್ಯಾಂಕಿಂಗಿನ ಉದ್ದೇಶ ಸಾರ್ಥಕವಾಗುತ್ತಿದೆಯೇ ಎಂಬುದರ ಕಡೆಗೂ ಆಲೋಚನೆ ಹರಿಯುತ್ತಿದೆ. ಬ್ಯಾಂಕುಗಳ ಉತ್ಪಾದಕತೆ, ಲಾಭಪ್ರದತೆ, ಸೇವೆಯ ಉತ್ತಮಿಕೆ –

ಇವು ಕಡೆಗಣಿಸುವಂಥ ಅಂಶಗಳೇನಲ್ಲ. ಬ್ಯಾಂಕುಗಳು ನೀಡುತ್ತಿರುವ ಸೇವೆಗೆ ಪ್ರತಿಯಾಗಿ ವಿಧಿಸಲಾಗುತ್ತಿದ್ದ ಶುಲ್ಕದ ಪುನರ್ವಿಮರ್ಶೆಯಾದ್ದೂ ಕಳೆದ ವರ್ಷದ ಒಂದು ಮುಖ್ಯ ಘಟನೆ. ಗ್ರಾಹಕ ಸೇವೆಯ ವಿಚಾರವೂ ವಿಶೇಷವಾಗಿ ಚರ್ಚೆಗೆ ಒಳಪಡುತ್ತಿರುವ ಸಂಗತಿ.

1984ಕ್ಕೆ ಹೋಲಿಸಿದರೆ 1985ರಲ್ಲಿ ಬ್ಯಾಂಕ್ ಠೇವಣಿಗಳ ಬೆಳವಣಿಗೆಯ ದರ ಗಮನಾರ್ಹವಾಗಿ ಏರಲಿಲ್ಲವಾದಾಗ್ಯೂ, ಠೇವಣಿಗಳ ಬೆಳವಣಿಗೆಯ ಮೊತ್ತವನ್ನು ಪರಿಗಣಿಸಿದಾಗ ಅದು ಹಿಂದಿನ ವರ್ಷದ್ದಕ್ಕಿಂತ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳಿಗಿಂತ ಅಧಿಕವಾಗಿತ್ತು. ಹಿಂದಿನ ವರ್ಷ ಪರಿಬದ್ಧಿಸಲಾಗಿದ್ದು, ಬಿಡುಗಡೆ ಮಾಡಲಾದ ಹಣವನ್ನೂ ಸೇರಿಸಿದರೆ ಬ್ಯಾಂಕುಗಳ ವಶದಲ್ಲಿದ್ದ, ಸಾಲ ನೀಡಲು ಒದಗಿಬಂದಿದ್ದ ಹಣ ಕಡಿಮೆಯೇನಲ್ಲ. ಪರಿನಿಯತ ದ್ರವತ್ವ ಅನುಪಾತವನ್ನು ಏರಿಸಲಾಗಿದ್ದರೂ ಬ್ಯಾಂಕುಗಳ ಬಳಿ ಹಣ ಧಂಡಿಯಾಗಿತ್ತು. ಬ್ಯಾಂಕ್ ಮುಂಗಡಗಳ ಬೆಳವಣಿಗೆಯ ದರ ಹಿಂದಿನ ವರ್ಷದ್ದಕ್ಕಿಂತ ಕಡಿಮೆಯೇ. ಆಹಾರ ಹಾಗೂ ಆಹಾರೇತರ ಮುಂಗಡಗಳೆರಡರ ಬೆಳವಣಿಗೆ ದರಗಳೂ ಕಡಿಮೆಯಾಗಿದ್ದುವು, ಆಹಾರ ಧಾನ್ಯದ ಮೇಲೆ ನೀಡಿದ ಮುಂಗಡದ ಮೇಲಣ ಬಡ್ಡಿದರವನ್ನು ಏರಿಸಿದ್ದರಿಂದ ಆಹಾರ ನಿಗಮ ಸಂಯಮದಿಂದ ವರ್ತಿಸುವುದು ಅಗತ್ಯವಾಯಿತು. ಅಹಾರೇತರ ಸರಕುಗಳಿಗೆ ಬ್ಯಾಂಕುಗಳ ಮುಂಗಡ ಅಧಿಕವಾಗಬಹುದಾಗಿತ್ತು. ಆದರೆ, ಹಾಗಾಗಲಿಲ್ಲ. ಆದ್ಯತಾವಲಯಗಳಿಗೆ ನೀಡಿದ ಮುಂಗಡದಲ್ಲೂ ಏರಿಕೆಯಾಗಲಿಲ್ಲ. ಬ್ಯಾಂಕುಗಳ ಒಟ್ಟು ಮುಂಗಡಗಳಲ್ಲಿ ಆದ್ಯತಾ ವಲಯಕ್ಕೆ ಮುಂಗಡ ಶೇ. 40ರಷ್ಟಿರಬೇಕೆಂಬ ಗುರಿಯನ್ನು ಆಗಲೇ ಮುಟ್ಟಿ ಆಗಿತ್ತು. ಹತ್ತಿ, ಸಣಬು, ರಸಗೊಬ್ಬರ ಇವಕ್ಕೆ ಮುಂಗಡಗಳು ಏರಿದುವು. ಇವು ಇಲ್ಲದಿದ್ದರೆ ಬ್ಯಾಂಕ್ ನಿಧಿಗಳು ವಿನಿಯೋಜನೆಯಾಗದೆ ಇನ್ನೂ ಹೆಚ್ಚಾಗಿ ಉಳಿದುಬಿಡುತ್ತಿದ್ದುವು, ಮೋಟಾರು ವಾಹನವೇ ಮುಂತಾದ ಕೆಲವು ಕೈಗಾರಿಕೆಗಳ ಹಿಂಜರಿತದಿಂದಾಗಿಯೂ ಬ್ಯಾಂಕ್ ಮುಂಗಡಗಳ ವಿನಿಯೋಜನೆ ಕುಂಠಿತವಾಯಿತು. ಅನೇಕ ಕಂಪನಿಗಳು ನೇರವಾಗಿ ಪರಿವರ್ತನೀಯ ಬಾಂಡುಗಳನ್ನೂ ಡಿಬೆಂಚರುಗಳನ್ನೂ ಸಾರ್ವಜನಿಕರಿಗೆ ನೀಡಿ ಹಣ ಎತ್ತತೊಡಗಿವೆ. ಇದರಿಂದಾಗಿಯೂ ಬ್ಯಾಂಕ್ ಮುಂಗಡಗಳ ಮೇಲೆ ಪರಿಣಾಮವಾಗಿದೆಯೆನ್ನಬೇಕು.

ಸರ್ಕಾರಿವಲಯ ಕಂಪನಿಗಳೂ ಬಾಂಡು ನೀಡತೊಡಗಿರುವುದು ಇನ್ನೊಂದು ಪ್ರಮುಖ ಬೆಳವಣಿಗೆ. ಕಳೆದ ವರ್ಷ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯ ದರವೂ ಗಮನಾರ್ಹವಾಗಿ ಏರಲಿಲ್ಲ. ಹೊಸದಾಗಿ ಕೈಗಾರಿಕೆಗಳಲ್ಲಿ ಮಾಡಲಾದ ವಿನಿಯೋಜನೆಗಳಿಂದ ಈ ವರ್ಷ

ಹಾಗೂ ಮುಂದಿನ ವರ್ಷಗಳಲ್ಲಿ ಉತ್ಪಾದನೆ ಅಧಿಕವಾದರೆ, ಅದಕ್ಕೆ ತಕ್ಕಂತೆ ಬೇಡಿಕೆಯೂ ಏರಿದರೆ, ಬ್ಯಾಂಕ್ ಮುಂಗಡಗಳಿಗೆ ಹೆಚ್ಚಿನ ಬೇಡಿಕೆ ಬರಬಹುದು. ಅಂತು ಬ್ಯಾಂಕುಗಳು ಠೇವಣಿ ಸಂಗ್ರಹಣೆ ಹಾಗೂ ಮುಂಗಡ ನೀಡಿಕೆಯ ವಿಚಾರದಲ್ಲಿ ಎದುರಿಸುತ್ತಿರುವ ತೀವ್ರ ಸ್ಪರ್ಧೆಯನ್ನು ಗಂಭೀರವಾಗಿ ಪರಿಗಣಿಸುವ ಕಾಲವೀಗ ಬಂದಿದೆ.

ರಿಸರ್ವ್ ಬ್ಯಾಂಕ್ ವರದಿ

ಭಾರತದಲ್ಲಿ 1984–85ರ (ಜುಲೈ – ಜೂನ್) ಬ್ಯಾಂಕಿಂಗ್ ಪ್ರವೃತ್ತಿ – ಪ್ರಗತಿಗಳನ್ನು ಕುರಿತಂತೆ ರಿಸರ್ವ್ ಬ್ಯಾಂಕ್ ನೀಡಿರುವ ವರದಿಯಲ್ಲಿ ನಮ್ಮ ಬ್ಯಾಂಕುಗಳ ಕೆಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಬ್ಯಾಂಕ್ ಸಂಪನ್ಮೂಲಗಳು ಹೆಚ್ಚು ದಕ್ಷವಾದ ರೀತಿಯಲ್ಲಿ ಪುನರಾವರ್ತನೆಯಾಗಬೇಕು, ಬ್ಯಾಂಕಿಂಗ್ ಉದ್ಯಮದ ಉತ್ಪಾದಕತೆ ಸುಧಾರಿಸಬೇಕು, ಭಾರತೀಯ ಬ್ಯಾಂಕುಗಳ ವಿದೇಶಿ ಶಾಖೆಗಳ ಕಲಾಪಗಳನ್ನು ಹೆಚ್ಚಿನ ಶಿಸ್ತಿಗೆ ಒಳಪಡಿಸಬೇಕು – ಎಂಬುದು ಅದರ ಸಲಹೆ. ಸಂಪನ್ಮೂಲಗಳ ದಕ್ಷ ಪುನರಾವರ್ತನೆಗೆ ಎರಡು ಸಮಸ್ಯೆಗಳ ಪರಿಹಾರವಾಗಬೇಕು, ಬ್ಯಾಂಕ್ ಮುಂಗಡಗಳ – ಮುಖ್ಯವಾಗಿ ಕೃಷಿ ಕ್ಷೇತ್ರದ ಮುಂಗಡಗಳ – ವಸೂಲಿಯದು ಒಂದು ಸಮಸ್ಯೆ. ಅಸ್ವಸ್ಥ ಕೈಗಾರಿಕಾ ಘಟಕಗಳ ಪುನಶ್ಚೈತನ್ಯ ಕುರಿತದ್ದು ಇನ್ನೊಂದು ಸಮಸ್ಯೆ. ಸರ್ಕಾರಿ ವಲಯದ ಬ್ಯಾಂಕುಗಳು ಕೃಷಿಕ್ಷೇತ್ರಕ್ಕೆ ನೀಡಿರುವ ಮುಂಗಡಗಳ ವಸೂಲಿ 1983ರ ಜೂನ್ ಕೊನೆಯಲ್ಲಿ ಶೇ. 53.2 ಇದ್ದದ್ದು, 1984ರ ಜೂನ್ ವೇಳೆಗೆ ಶೇ. 51.3ಕ್ಕೆ ಇಳಿದಿತ್ತು. ಎರಡು ವರ್ಷ ಒಳ್ಳೆಯ ಮಳೆ ಬೆಳೆ ಆಗಿದ್ದಾಗ್ಯೂ ವಸೂಲಿ ಮಾತ್ರ ಹಿಂದೆ ಬಿದ್ದಿರುವುದು ವಿವರಿಸಲಾಗದ ಸಂಗತಿ. ವಸೂಲಿಯ ಪ್ರಮಾಣ ಬೇರೆಬೇರೆ ರಾಜ್ಯಗಳಲ್ಲಿ ಬೇರೆಬೇರೆ ರೀತಿ ಇರುವುದು ಈ ಸಮಸ್ಯೆಯ ಇನ್ನೊಂದು ಮುಖ. ಪಶ್ಚಿಮಬಂಗಾಲದಲ್ಲಿ ಇದು ಶೇ 28.3ರಷ್ಟು ಕಡಿಮೆ, ಪಂಜಾಬಿನಲ್ಲಿ ಶೇ 74.1 ರಷ್ಟು ಅಧಿಕ. ಏಕೆ ಹೀಗೆ ಎಂಬುದನ್ನು ಕುರಿತು ಗಂಭೀರವಾಗಿ ಚಿಂತಿಸಬೇಕು.

ಬ್ಯಾಂಕುಗಳ ಒಟ್ಟು ಉದ್ದರಿಯಲ್ಲಿ ಶೇ. 7–8 ರಷ್ಟು ಭಾಗ ಅಸ್ವಸ್ಥ ಕೈಗಾರಿಕೆಗಳಲ್ಲಿ ತೊಡರಿಹೋಗಿದೆ. ಜೀವಂತಿಕೆಯ ಭವ ಸಾಮರ್ಥ್ಯವುಳ್ಳ ಘಟಕಗಳನ್ನು ಪುನರುಜ್ಜೀವನಗೊಳಿಸುವ, ಹಾಗೂ ಈ ಸಾಮರ್ಥ್ಯವಿಲ್ಲದವುಗಳ ಬಗ್ಗೆ ಕಟುವಾದ ತೀರ್ಮಾನ ತೆಗೆದುಕೊಳ್ಳುವ, ವಾಸ್ತವಿಕ ನಿಲುವು ತಳೆಯುವ ಸೂಚನೆ ಇದ್ದಂತಿದೆ. ಏನೇ ಆದರೂ ತೀರ್ಮಾನವನ್ನು ಬೇಗ ತೆಗೆದುಕೊಳ್ಳುವಂತಿರಬೇಕು. ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬ ಧೋರಣೆಯಿಂದ ಮಹಾ ಅಪಾಯ,

ಈ ನಿಟ್ಟಿನಲ್ಲಿ ಯುಕ್ತವಾದ ಕ್ರಮ ತೆಗೆದುಕೊಳ್ಳುವುದರಿಂದ ಬ್ಯಾಂಕುಗಳ ಲಾಭಪ್ರದತೆ ಉತ್ತಮಗೊಳ್ಳಲು ಸಹಾಯವಾದೀತು.

ಬ್ಯಾಂಕ್ ಶಾಖೆಗಳ ವ್ಯಾಪಕ ಜಾಲದ ರಚನೆಯ ಕಡೆಗೂ ರಿಸರ್ವ್ ಬ್ಯಾಂಕ್ ವರದಿ ತನ್ನ ದೃಷ್ಟಿ ಹರಿಸಿದೆ. ಶಾಖಾ ವಿಸ್ತರಣೆಯಿಂದ ಬ್ಯಾಂಕಿಂಗ್, ಅಧೋರಚನೆ ವಿಶಾಲವಾಗಿದೆ, ಆಳಕ್ಕೆ ಇಳಿದಿದೆ ಎಂಬುದು ನಿಜ. ಆರ್ಥಿಕ ಬೆಳವಣಿಗೆಗೆ ಇದರಿಂದ ಪ್ರಯೋಜನ ಉಂಟು ಎಂಬುದೂ ಸರಿಯೇ. ಬ್ಯಾಂಕ್ ಉದ್ಧರಿಯ ಪ್ರವಿಸ್ತಾರಣದಲ್ಲಿ (ಡೀಪ್ಲಾಯ್‌ಮೆಂಟ್) ಸಂರಚನಾತ್ಮಕ ಪರಿವರ್ತನೆಯೇನೋ ಆಗಿದೆ. ಆದ್ಯತಾವಲಯಗಳಿಗೆ ಹಾಗೂ ದುರ್ಬಲವರ್ಗಗಳಿಗೆ ಹೆಚ್ಚು ಅನುಕೂಲವಾಗುವಂತಾಗಿದೆ. ಆದರೆ ಅಭೂತಪೂರ್ವ ಶಾಖಾವಿಸ್ತರಣೆಯ ಹಿಂದೆಯೇ ಅನೇಕ ಸಮಸ್ಯೆಗಳ ಉದ್ಭವವಾಗಿದೆಯೆಂಬುದನ್ನೂ ರಿಸರ್ವ್ ಬ್ಯಾಂಕ್ ಗಮನಿಸಿದೆ. ಕಲಾಪದಲ್ಲಿ ಅದಕ್ಷತೆ, ಮನವಾರ್ತೆಯಲ್ಲಿ ಅಸಮರ್ಪಕತೆ, ಗ್ರಾಹಕ ಸೇವೆಯಲ್ಲಿ ಅತೃಪ್ತಿ – ಇವು ರಿಸರ್ವ್ ಬ್ಯಾಂಕ್ ಹೆಸರಿಸಿರುವ ಕೆಲವು ಕಹಿ ಫಲಗಳು. ಆದ್ದರಿಂದ ಶಾಖಾ ವಿಸ್ತರಣೆಯಲ್ಲಾಗಿರುವ ಪ್ರಗತಿಯನ್ನು ಕ್ರೋಡೀಕರಿಸುವತ್ತ ಲಕ್ಷ್ಯಹರಿಸಬೇಕೆಂದು ರಿಸರ್ವ್ ಬ್ಯಾಂಕ್ ಹೇಳಿದೆ. ಈ ಮೂರೂ ನಿಟ್ಟುಗಳಲ್ಲಿ ಸುಧಾರಣೆ ಆಗಬೇಕೆಂದು ಅದು ಆಶಿಸುತ್ತದೆ. ವೆಚ್ಚದತ್ತ ಹೆಚ್ಚಿನ ಅನುಲಕ್ಷ್ಯ ನಿಧೀತರ, ವ್ಯವಹಾರದ ಸುಧಾರಣೆ – ಇವು ಕೂಡ ಪ್ರಸಕ್ತ ಎನ್ನುತ್ತದೆ, ರಿಸರ್ವ್ ಬ್ಯಾಂಕ್.

ಬ್ಯಾಂಕು ಠೇವಣಿಗಳ ಬೆಳವಣಿಗೆಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್ ವರದಿ ಇನ್ನೊಂದು ಪ್ರವೃತ್ತಿಯನ್ನು ಗುರುತಿಸಿದೆ. ವರ್ಷದ ಠೇವಣಿ ಸಂಗ್ರಹಣೆಯ ಗುರಿಯನ್ನು ನಿಲುಕುವ ಸಲುವಾಗಿ ಬ್ಯಾಂಕುಗಳು ಕೊನೆಯ ತಿಂಗಳುಗಳಲ್ಲಿ ವಿಶೇಷವಾಗಿ ಶ್ರಮಿಸುವುದು ಸಾಮಾನ್ಯ. ವರ್ಷದ ಕೊನೆಯ ದಿನದಂದು ಹೆಚ್ಚು ಠೇವಣಿ ತೋರಿಸಲು ನಾನಾ ಉಪಾಯಗಳನ್ನನುಸರಿಸುವುದೂ ವಾಡಿಕೆಯಾಗಿ ಬಂದಿತ್ತು. ಮೇಲ್ಮೆರಗು (ವಿಂಡೋಡ್ರೆಸಿಂಗ್) ಮಾಡುವುದನ್ನು ಬಿಡಬೇಕೆಂಬ ರಿಸರ್ವ್ ಬ್ಯಾಂಕಿನ ಸಲಹೆಯಂತೆ ಈಗ ಈ ಪದ್ಧತಿಯನ್ನು ಬ್ಯಾಂಕುಗಳು ಬಿಟ್ಟಿವೆಯೆನ್ನಲಾಗಿದೆ. ಡಿಸೆಂಬರ್‌ನ ಅನಂತರದ ತಿಂಗಳುಗಳಲ್ಲಿ ಠೇವಣಿ ಅಂಕಿಗಳಲ್ಲಿ ಅಷ್ಟೇನೂ ವ್ಯತ್ಯಾಸವಾಗದಿರುವುದು ಒಂದು ಆರೋಗ್ಯಕರ ಪ್ರವೃತ್ತಿ ಎಂದು ರಿಸರ್ವ್ ಬ್ಯಾಂಕ್ ಮೆಚ್ಚುಗೆ ಸೂಚಿಸಿದೆ.

ಒಟ್ಟಿನಲ್ಲಿ ಬ್ಯಾಂಕುಗಳ ಹೊಣೆಗಾರಿಕೆ ಗುರುತರವಾದ್ದು, ಸಂಕೀರ್ಣವಾದ್ದು, ಗ್ರಾಹಕ ಸೇವೆ, ಮನೆವಾರ್ತೆ, ಶಾಖೆಗಳ ಮೇಲೆ ಪ್ರಧಾನ ಕಛೇರಿಯ ನಿಯಂತ್ರಣ, ಸುಸಜ್ಜಿತ ಮಾಹಿತಿ ವ್ಯವಸ್ಥೆಯ ಮೂಲಕ ಸುಧಾರಿತನೀತಿ, ರೂಪಣೆ ಮುಂತಾದವುಗಳನ್ನು ಸಾಧಿಸಲು

ಬ್ಯಾಂಕುಗಳು ಯಾಂತ್ರೀಕರಣದ ಹಾದಿಯಲ್ಲಿ ನಡೆಯಬೇಕೆಂದು ರಿಸರ್ವ್ ಬ್ಯಾಂಕ್ ಅಭಿಪ್ರಾಯಪಟ್ಟಿದೆ. ಈ ಬಗ್ಗೆ ರಿಸರ್ವ್ ಬ್ಯಾಂಕ್ ನೇಮಿಸಿದ್ದ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿ ಹಂತಹಂತವಾಗಿ ಪ್ರಗತಿ ಸಾಧಿಸುವುದು ಅಗತ್ಯವೆಂದು ಆಶಿಸಿದೆ. ಬ್ಯಾಂಕಿಂಗ್ ಕಲಾಪಗಳಲ್ಲಿ ವೇಗ ಉತ್ಪಾದಕತೆಗಳನ್ನು ಹೆಚ್ಚಿಸುವುದರ ಪ್ರಾಮುಖ್ಯವನ್ನು ವರದಿ ಒತ್ತಿ ಹೇಳಿದೆ. ವಿದೇಶಿ ಬ್ಯಾಂಕುಗಳ ನಿಯಂತ್ರಣ ವ್ಯವಸ್ಥೆಯನ್ನು ನಿರುಕಿಸುವ, ಶಿಸ್ತಿಗೆ ಒಳಪಡಿಸುವ ಅಗತ್ಯವೂ ಕಡಿಮೆಯೇನಲ್ಲ. ಬ್ಯಾಂಕುಗಳು ಈ ನಾನಾ ವಿಚಾರಗಳತ್ತ ತಮ್ಮ ಗಮನ ಹರಿಸುವುದು ಅತ್ಯಂತ ಜರೂರು ಎಂಬುದು ನಿಸ್ಸಂದೇಹ.

ದರ್ಬಾರಿ ಬ್ಯಾಂಕಿಂಗ್

ಬ್ಯಾಂಕ್ ರಾಷ್ಟ್ರೀಕರಣದ ಒಂದು ಪ್ರಮುಖ ಉದ್ದೇಶವೆಂದರೆ ಸಾಮಾಜಿಕ ಬ್ಯಾಂಕಿಂಗ್ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ದೀನ ದರಿದ್ರರು ತಮ್ಮ ಕಾಲಮೇಲೆ ತಾವು ನಿಲ್ಲುವುದು ಸಾಧ್ಯವಾಗುವಂತೆ, ಗೌರವಕ್ಕೆ ಭಂಗಬಾರದ ರೀತಿ ಅವರು ಸ್ವಯಂ–ಉದ್ಯೋಗಶಾಲಿಗಳಾಗುವಂತೆ, ರಾಷ್ಟ್ರದಸಂಪತ್ತಿಗೆ ಅವರೂ ಕಾಣಿಕೆ ಸಲ್ಲಿಸುವುದು ಸಾಧ್ಯವಾಗುವಂತೆ ಇಡೀ ಅರ್ಥವ್ಯವಸ್ಥೆಯೇ ಜಡತ್ವವನ್ನು ನೀಗಿ ಚೈತನ್ಯಪೂರ್ಣವಾಗುವಂತೆ ಮಾಡುವುದು ಸಾಮಾಜಿಕ ಬ್ಯಾಂಕಿಂಗಿನ ಗುರಿ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇದೊಂದು ಕ್ರಾಂತಿಯೇ ಸರಿ. ಇದಕ್ಕೆ ಬ್ಯಾಂಕುಗಳ ಸಾಲ ಯಾವ ರೀತಿ ನೆರವಾಗಬಲ್ಲುದು, ಸಾಲದ ಗುಣಮಟ್ಟ ಇಳಿಯದಂತೆ ಕಾಯ್ದುಕೊಂಡು ಆದ್ಯತಾ ವಲಯಕ್ಕೆ ಸಾಲ ನೀಡುವುದು ಹೇಗೆ ಎಂಬುದು ಎಲ್ಲ ಹೊಣೆಗಾರರ ಕಾಳಜಿಯಾಗಬೇಕು. ಬ್ಯಾಂಕು ನೀಡುವ ಸಾಲದಿಂದ ಹೊಸ ಆಸ್ತಿ ಸೃಷ್ಟಿಯಾದರೆ, ಅದನ್ನು ಸೃಷ್ಟಿಸುವ ಸಾಮರ್ಥ್ಯ ಸಾಲಗಾರರಿಗೆ ಬಂದರೆ, ಆ ಸಾಮರ್ಥ್ಯ ಅವರಿಗೆ ಬರುವಂತೆ ಸುಯೋಜಿತ ಕಾರ್ಯಕ್ರಮವೊಂದು ಜಾರಿಗೆ ಬಂದರೆ, ಅದರ ಸಾರ್ಥಕತೆ – ಅಸಾರ್ಥಕತೆಗಳನ್ನು ಅಳೆಯುವ ನಿರ್ದುಷ್ಟ ವಿಧಾನವೊಂದು ರೂಪಿತವಾದರೆ ಆಗ ಮಾತ್ರ ಸಾಮಾಜಿಕ ಬ್ಯಾಂಕಿಂಗಿಗೆ ಅರ್ಥ ಬರುತ್ತದೆ, ಮೌಲ್ಯ ಬರುತ್ತದೆ. ಇಲ್ಲದಿದ್ದರೆ ಬರೀ ಹಣದ ಹೊಳೆ ಹರಿದು, ಸಮಾಜದ ತಳವನ್ನೇ ಅದು ಕೊಚ್ಚಿಹಾಕುತ್ತದೆ, ಬೆಲೆಗಳ ದೃಢತೆಯನ್ನು ಕಳಚಿಬಿಡುತ್ತದೆ. ಬ್ಯಾಂಕುಗಳ ಬ್ಯಾಂಕಾದ, ದೇಶದ ಕೇಂದ್ರೀಯ ಬ್ಯಾಂಕಾದ ರಿಸರ್ವ್ ಬ್ಯಾಂಕು ಇಡೀ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ತನ್ನ ಗರುಡ ದೃಷ್ಟಿಯನ್ನಿಟ್ಟು ಅದನ್ನು ನಿರ್ದಿಷ್ಟ ದಿಕ್ಕಿನಲ್ಲಿ ನಡೆಸುವುದು ಅಗತ್ಯ. ರಿಸರ್ವ್ ಬ್ಯಾಂಕ್ ಮಾತ್ರವೇ ಈ ಕೆಲಸ ಸಾಧಿಸಬಲ್ಲುದು; ಸರ್ಕಾರವಲ್ಲ, ಬೇರೆ ಯಾವುದೇ ಬ್ಯಾಂಕೇತರ ವ್ಯವಸ್ಥೆಯಲ್ಲ. ಆದರೆ ಇಂದು ರಿಸರ್ವ್ ಬ್ಯಾಂಕ್ ಈ ಕೆಲಸವನ್ನು ನಿರ್ವಹಿಸಲು

ಯುಕ್ತವಾದ ವಾತಾವರಣ ಸೃಷ್ಟಿಯಾಗಿಲ್ಲ.

ಬ್ಯಾಂಕು ಇಂದು ಹಲವು ಯಜಮಾನರ ಅಡಿಯಲ್ಲಿ ಕೆಲಸ ಮಾಡಬೇಕಾಗಿದೆ. ಅದು ದ್ರೌಪದಿಯಂತಾಗಿದೆ. ದ್ರೌಪದಿಗೆ ಐವರು ಗಂಡಂದಿರಿದ್ದರೂ ಅವರು ಸೋದರರು, ಪರಸ್ಪರ ಮರ್ಯಾದೆಯನ್ನು ಬಲ್ಲವರಾಗಿದ್ದರು, ಅದನ್ನು ರಕ್ಷಿಸುವವರಾಗಿದ್ದರು. ಸ್ವಯಂನಿರ್ಮಿತ ಶಿಸ್ತೊಂದು ಅವರಲ್ಲೂ ಇತ್ತು, ಆದರೆ ಈ ಅಭಿನವ ದ್ರೌಪದಿಯ ಗಂಡಂದಿರಲ್ಲಿ ಆ ಬಗೆಯ ಶಿಸ್ತಿನ, ಪರಸ್ಪರ ಮರ್ಯಾದೆಯ ಸ್ಥಾಪನೆ ಸಾಧ್ಯವಾಗಿದೆಯೇ ಎಂಬುದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ. ಸರ್ಕಾರದ ಒಡೆತನಕ್ಕೆ ಸೇರಿದ ಬ್ಯಾಂಕುಗಳು ಬ್ರಿಟಿಷರ ಕಾಲದಲ್ಲಿ ಏರ್ಪಟ್ಟಿದ್ದ ದ್ವಿಮುಖ ಆಡಳಿತ ಪದ್ಧತಿಯಂಥ ವ್ಯವಸ್ಥೆಯಡಿ ಕೆಲಸ ಮಾಡಬೇಕಾಗಿದೆ. ಯಾವ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದೆಯೋ ಆ ಪಕ್ಷದ ನಾನಾ ಸ್ತರಗಳ ರಾಜಕೀಯ ವ್ಯಕ್ತಿ ಶಕ್ತಿಗಳ ಪ್ರಭಾವಗಳಿಗೆ ಅವು ಒಳಗಾಗಬೇಕಾಗಿದೆ. ಹಲವು ವೇಳೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಸೆಳೆತ ಉಂಟಾಗುತ್ತದೆ. ರಾಜ್ಯದಲ್ಲಿ ಬೇರೊಂದು ಪಕ್ಷದ ಅಡಳಿತವಿದ್ದರೆ ಆಗ ಉದ್ಭವಿಸುವ ವಾದ–ಪ್ರತಿವಾದಗಳ ಸುಳಿಗೆ ಬ್ಯಾಂಕು ಸಿಕ್ಕಿಕೊಳ್ಳುತ್ತದೆ. ಅಲ್ಲದೆ ಹಲವೇಳೆ ಯಾದೃಚ್ಛಿಕವಾದ ರೀತಿಯಲ್ಲಿ ಧನಪೋಷಣೆ ಮಾಡಬೇಕಾಗುತ್ತದೆ. ಒಂದು ಹಳ್ಳಿಯಿಂದ ಪೇಟೆಗೆ ಒಯ್ಯಲು ಲಭ್ಯವಿರುವ ಹೆಚ್ಚುವರಿ ಉತ್ಪನ್ನ ಎಷ್ಟಿದೆ, ಎಷ್ಟು ಗಾಡಿಗಳ ಅಗತ್ಯವಿದೆ ಎಂಬುದರ ಪರಿವೆಯಿಲ್ಲದೆ ಹಲವಾರು ಗಾಡಿಗಳನ್ನು ಕೊಳ್ಳಲು ಬ್ಯಾಂಕು ಸಾಲನೀಡಿರುವುದೂ, ಆ ಗಾಡಿಗಳು ಉಪಯೋಗವಿಲ್ಲದೆ ಬಿದ್ದಿರುವುದೂ ಉಂಟು, ಕರಾವು ಹಸುಗಳಿಗೆ ಸಾಲ ಕೊಡುವಾಗ, ಆ ಹಸುಗಳು ಕರೆಯುವ ಹಾಲಿನ ಮಾರಾಟಕ್ಕೆ ಯುಕ್ತ ವ್ಯವಸ್ಥೆಯಿದೆಯೇ ಎಂದು ನೋಡದಿರಬಹುದು, ಮೇವಿನ ವ್ಯವಸ್ಥೆ ಇಲ್ಲದೆ ಹೋಗಬಹುದು. ಆದಿವಾಸಿಗಳಿಗೆ ಮೇಕೆ ಕುರಿ ಇತ್ಯಾದಿ ಪ್ರಾಣಿಗಳನ್ನು ಕೊಳ್ಳಲು ಹಣ ನೀಡುವುದಷ್ಟೇ ಅಲ್ಲ, ಆ ಪ್ರಾಣಿಗಳು ಮರಿ ಹಾಕಿ ಅವುಗಳ ಮಾರಾಟದಿಂದ ಹಣ ಬರುವವರೆಗೂ ಆ ಜೀವನನಿರ್ವಹಣೆ ಸಾಧ್ಯವಾಗುವಂತೆ ವ್ಯವಸ್ಥೆ ಮಾಡದಿರುವುದು ಅಪರೂಪವೇನಲ್ಲ. ದೊರೆಗಳು ಹಿಂದಿನ ಕಾಲದಲ್ಲಿ ತಮ್ಮ ಆಸ್ಥಾನಿಕರಿಗೆ ಶಿಕ್ಷೆ ನೀಡುವ ಸಲುವಾಗಿ ಆನೆಯನ್ನು ದಾನವಾಗಿ ಕೊಡುತ್ತಿದ್ದರಂತೆ. ಅದನ್ನು ಸಾಕಲಾರದೆ ಅವರು ಬವಣೆಗೊಳಗಾಗಲಿ ಎಂಬುದು ಉದ್ದೇಶ. ಅನೇಕ ವೇಳೆ ಬ್ಯಾಂಕಿನ ಸಾಲನೀಡಿಕೆ ಆನೆಯನ್ನು ದಾನವಾಗಿ ನೀಡಿದಂತೆ ಆಗುತ್ತಿದೆಯೆ? ಗ್ರಾಮೀಣ ಅಭಿವೃದ್ಧಿಗಾಗಿ ಏರ್ಪಟ್ಟಿರುವ ಸ್ಥಳೀಯ ವ್ಯವಸ್ಥೆಗೂ ಬ್ಯಾಂಕಿನ ಸಾಲಗಳಿಗೂ ತಾಳ ಕೂಡುತ್ತದೆಯೆ? ಎಂಬುದನ್ನು ಗಂಭೀರವಾಗಿ ಪರಿಶೀಲಿಸುವ ಕಾಲವೀಗ ಬಂದಿದೆ. 'ಉದ್ದೇಶ ಘನ, ಪರಿಣಾಮ ಗಂಭೀರ' ಎಂಬ ಪರಿಸ್ಥಿತಿ

ಉದ್ಭವವಾಗದಂತೆ ಎಚ್ಚರ ವಹಿಸುವುದು ಅಗತ್ಯವಾಗಿದೆ. ಈ ಬಗ್ಗೆ ಅನೇಕ ಪರಿಶೀಲನೆಗಳು ಕೂಗಿ ನುಡಿಯುತ್ತಿವೆ. ಇವನ್ನು ಕೇಳುವಂಥ ಸೂಕ್ಷ್ಮವಾದ ಕಿವಿಗಳು ನಮ್ಮ ಆಡಳಿತವ್ಯವಸ್ಥೆಗೆ ಇರಬೇಕು.

ವಿಶೇಷವಾಗಿ ಟೀಕೆಗೆ ಒಳಗಾಗಿರುವ ಇನ್ನೊಂದು ಬೆಳವಣಿಗೆಯೆಂದರೆ, ಸಾಲ ಮೇಳಗಳದು. ಸರ್ಕಾರದ ಜನಪ್ರತಿನಿಧಿಗಳು ಇದನ್ನೊಂದು ರಾಜಕೀಯ ಪ್ರಚಾರ ಸಾಧನವಾಗಿ ಮಾಡಿಕೊಂಡಿದ್ದಾರೆಂಬ ಟೀಕೆ ಕೇಳಿಬರುತ್ತಿದೆ. ಪ್ರತಿಯೊಂದು ಸಾಲ ಮೇಳವು ಸಾವಿರಾರು ಮಂದಿಗೆ ಹಣ ಹಂಚುವ ವಿಧಾನವಾಗಿ ಪರಿಣಮಿಸಿದೆ. ಬ್ಯಾಂಕುಗಳಿಗೆ – ಅಧಿಕಾರಿಗಳಿಗೂ ಉದ್ಯೋಗಿಗಳಿಗೂ – ಉಪದೇಶ ಮಾಡುವ ಸಂದರ್ಭ ಕೂಡ ಅದು. ಹೀಗೆ ಹಂಚಿದ್ದನ್ನು ಹಿಂದಿರುಗಿ ಕೊಡಬೇಕೆ, ಕೊಡುವ ಸಾಮರ್ಥ್ಯ ಸಾಲಗಾರರಿಗೆ ದೊರಕುತ್ತದೆಯ ಎಂಬ ಬಗ್ಗೆ ಯಾರೂ ಯೋಚಿಸುತ್ತಿಲ್ಲ. ಇದು ಸಾಮಾಜಿಕ ಬ್ಯಾಂಕಿಂಗ್ ಅಲ್ಲ, ದರ್ಬಾರಿ ಬ್ಯಾಂಕಿಂಗ್ ಎಂದು ದೇಶದ ಪ್ರಮುಖ ಅರ್ಥಶಾಸ್ತ್ರ ಪತ್ರಿಕೆಯೊಂದು ತನ್ನ ಸಂಪಾದಕೀಯವೊಂದರಲ್ಲಿ ಬಣ್ಣಿಸಿ ಬರೆದಿತ್ತು. ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ಇಂಥ ಮೇಳಗಳು ಹೇಗೆ ಹೊಂದಿಕೊಳ್ಳುವುದು ಸಾಧ್ಯ ಎಂಬುದನ್ನು ಪೂರ್ವಾಗ್ರಹವಿಲ್ಲದೆ ಚಿಂತಿಸುವುದು ಅಗತ್ಯ.

ಗ್ರಾಹಕ ಸೇವೆ

ಬ್ಯಾಂಕುಗಳ ಗ್ರಾಹಕ ಸೇವೆಯ ಗುಣಮಟ್ಟ ಬಹಳ ಕಡಿಮೆಯಾಗಿದೆಯೆಂಬುದು ಈಚೆಗೆ ಪದೇ ಪದೇ ಕೇಳಿಬರುತ್ತಿರುವ ಒಂದು ಟೀಕೆ. ಇದನ್ನು ಉತ್ತಮಪಡಿಸಲು ಬ್ಯಾಂಕುಗಳೂ ಸರ್ಕಾರವೂ ರಿಸರ್ವ್ ಬ್ಯಾಂಕ್ ಭಾರತೀಯ ಬ್ಯಾಂಕುಗಳ ಸಂಘವೂ ವಿಶೇಷವಾದ ಕ್ರಮಗಳನ್ನು ಕೈಗೊಂಡಿವೆ. ಎಲ್ಲ ಪ್ರಮುಖ ನಗರಗಳಲ್ಲೂ ಗ್ರಾಹಕ ಸೇವಾ ಕೇಂದ್ರಗಳನ್ನೂ ಗ್ರಾಹಕರ ಆಕ್ಷೇಪಣೆಗಳ ಕೇಂದ್ರಗಳನ್ನೂ ತೆರೆಯಲು ಭಾರತೀಯ ಬ್ಯಾಂಕುಗಳ ಸಂಘ ತೀರ್ಮಾನಿಸಿದೆ. ಬ್ಯಾಂಕರುಗಳು ಸದಾ ತುದಿಗಾಲಮೇಲೆ ನಿಂತಿರುವಂತೆ ಮಾಡುವುದೇ ಇವುಗಳ ಸ್ಥಾಪನೆಯ ಉದ್ದೇಶ ಎಂಬುದು ಭಾರತೀಯ ಬ್ಯಾಂಕುಗಳ ಸಂಘದ ಅಧ್ಯಕ್ಷ ಫೋಯಿಫೋರಿಯಾ ಅವರ ಮಾತು,

ಬ್ಯಾಂಕುಗಳ ದಕ್ಷತೆ ಉತ್ಪಾದಕತೆಗಳನ್ನು ಹೆಚ್ಚಿಸಬೇಕೆಂಬುದು ಸರ್ಕಾರದ ಕಾಳಜಿ. ಪ್ರತಿ ಮೂರು ತಿಂಗಳುಗಳಿಗೆ ಒಮ್ಮೆ ಬ್ಯಾಂಕ್ ಅಧ್ಯಕ್ಷರುಗಳ ಹಾಗೂ ಇತರೆ ಮುಖ್ಯ ಕಾರ್ಯನಿರ್ವಾಹಕರುಗಳ ಸಭೆಗಳನ್ನು ಕೇಂದ್ರ ಹಣಕಾಸು ಮಂತ್ರಿಗಳು ಸೇರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸುವುದು ಉದ್ದೇಶ. ದಕ್ಷತೆ, ಲಾಭಪ್ರದತೆ, ರಾಷ್ಟ್ರೀಯ ಗುರಿಗಳ ಸಾಧನೆ, ಮನೆವಾರ್ತೆಯ ಉತ್ತಮಿಕೆ,

ಗ್ರಾಹಕ ಸೇವಾ ಸುಧಾರಣೆ, ಗಣಕೀಕರಣ, ಅಂತರ ಬ್ಯಾಂಕ್ ಲೆಕ್ಕ ಸಮನ್ವಯೀಕರಣ ಮುಂತಾದ ವಿಚಾರಗಳು ಇಲ್ಲಿ ಚರ್ಚೆಗೆ ಬರುತ್ತವೆ. ಪ್ರತಿಯೊಂದು ಬ್ಯಾಂಕಿನ ಅಧ್ಯಕ್ಷರೂ ಈ ಬಗ್ಗೆ ವಿವರಣೆ ನೀಡಬೇಕಾಗುತ್ತದೆ, ಪ್ರಶ್ನೆಗಳನ್ನು ಉತ್ತರಿಸಬೇಕಾಗುತ್ತದೆ. ವಿವಿಧ ಪ್ರಚಾರಗಳ ಕಕ್ಷೆಗಳೊಳಗೆ ನಿರ್ಧರಿಸಲಾದ ನಾನಾ ಗುರಿಗಳ ಸಾಧನೆಯಲ್ಲಿ ಆಗಿರುವ ಪ್ರಗತಿಯ ಅವಲೋಕನಕ್ಕಾಗಿ ಪ್ರತಿ ಮೂರು ತಿಂಗಳುಗಳಿಗೆ ಒಮ್ಮೆ ರಿಸರ್ವ್ ಬ್ಯಾಂಕು ಈ ಬಗೆಯ ಸಭೆಗಳನ್ನು ಏರ್ಪಡಿಸುತ್ತಿದೆ. ವಿದೇಶಗಳಲ್ಲಿರುವ ಭಾರತೀಯ ಬ್ಯಾಂಕ್ ಶಾಖೆಗಳ ಭಾರತೀಯ ಗ್ರಾಹಕರಿಗೆ ಹಾಳತವಾದ ಸೇವೆ ದೊರಕುವಂತೆ ಮಾಡಲು ಹೊಸ ಪರಿವೀಕ್ಷಣ ವ್ಯವಸ್ಥೆಯೊಂದನ್ನು ಸ್ಥಾಪಿಸುವ ವಿಚಾರವೂ ರಿಸರ್ವ್ ಬ್ಯಾಂಕಿನ ಪರಿಶೀಲನೆಯಲ್ಲಿದೆಯೆಂದು ವರದಿಯಾಗಿದೆ.

ಬ್ಯಾಂಕುಗಳ ನಡುವೆ ಸ್ಪರ್ಧಾತ್ಮಕ ಮನೋಧರ್ಮ ಬೆಳೆಯುವಂತೆ ಮಾಡಲೂ ಪ್ರಯತ್ನ ನಡೆದಿದೆ. ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುವಲ್ಲಿ ಈ ಸ್ಪರ್ಧೆ ಅಭಿವ್ಯಕ್ತಗೊಂಡಿದೆ. ಚೆಕ್ಕು, ಡ್ರಾಫ್ಟ್ ಲಾಭಾಂಶ ಅಧಿಪತ್ರ (ಡಿವಿಡೆಂಡ್ ವಾರಂಟ್), ಅಂಚೆ ವರ್ಗಾವಣೆ ತಿಳಿವಳಿಕೆ ಪತ್ರ ಮುಂತಾದವಕ್ಕೆ ಸಂಬಂಧಿಸಿದಂತೆ ವಸೂಲಿಯನ್ನು ತ್ವರೆಗೊಳಿಸಲು ಭಾರತೀಯ ಸ್ಟೇಟ್ ಬ್ಯಾಂಕು 'ವೇಗವಾಹಿನಿ' (ಸ್ಪೀಡ್‌ಲೈನ್) ವ್ಯವಸ್ಥೆಯೊಂದನ್ನು ಜಾರಿಗೆ ತಂದಿದೆ. ಹತ್ತು ದಿನಗಳಿಗೂ ಹೆಚ್ಚು ವಿಳಂಬವಾಗದಂತೆ ನೋಡಿಕೊಳ್ಳಲಾಗುತ್ತಿದೆ. ಇಪ್ಪತ್ತೆಂಟು ದಿನಗಳಿಗೂ ಹೆಚ್ಚು ವಿಳಂಬವಾದಲ್ಲಿ ಗ್ರಾಹಕರಿಗೆ ಆ ಮೊಬಲಗಿನ ಮೇಲೆ ಬಡ್ಡಿ ಕೊಡಲೂ ಮುಂದೆ ಬಂದಿದೆ. ಮುಂದಿನ ಆರು ತಿಂಗಳುಗಳಿಗೂ ಹೆಚ್ಚು ವಿಳಂಬವಾದರೆ ಎಂಟು ದಿನಗಳನ್ನು ಮೀರಿದ ಅವಧಿಗೆ ಬಡ್ಡಿ ನೀಡುವುದಾಗಿ ಬ್ಯಾಂಕಿನ ಅಧ್ಯಕ್ಷರು ಹೇಳಿದ್ದಾರೆ. ಬ್ಯಾಂಕ್ ಸೇವೆಯ ಗುಣಮಟ್ಟವನ್ನು ಹೆಚ್ಚಿಸಲು ತೆಗೆದುಕೊಳ್ಳಲಾಗುತ್ತಿರುವ ಇನ್ನೊಂದು ಕ್ರಮವೆಂದರೆ ಹರಿಕಾರ ಸೇವೆಯ ವಿಸ್ತರಣೆ. ಇದು ಈಗ ಹದಿನೆಂಟು ನಗರಗಳಿಗೆ ಅನ್ವಯವಾಗಿದೆ. ಇದನ್ನು ಮೂವತ್ತು ನಗರಗಳಿಗೆ ವಿಸ್ತರಿಸಬೇಕೆಂಬುದು ಭಾರತೀಯ ಬ್ಯಾಂಕುಗಳ ಸಂಘದ ಯೋಚನೆ, ದೇಶದ ಎಲ್ಲ ರಾಜ್ಯಗಳ ರಾಜಧಾನಿಗಳ ನಡುವೆ ತನ್ನದೇ ಹರಿಕಾರ ಸೇವೆ (ಕೊರಿಯರ್ ಸರ್ವಿಸ್) ಏರ್ಪಡಿಸಿಕೊಳ್ಳಬೇಕೆಂದು ಭಾರತೀಯ ಸ್ಟೇಟ್ ಬ್ಯಾಂಕ್ ತೀರ್ಮಾನಿಸಿದೆ. ಇತರ ಬ್ಯಾಂಕುಗಳೂ ಇಂಥ ಯೋಜನೆಗಳನ್ನು ಹೊಂದಿವೆ.

ಬ್ಯಾಂಕ್ ಶುಲ್ಕಗಳು

ಪ್ರತಿಯೊಂದು ಸೇವೆಗೂ ಅದರದೇ ವೆಚ್ಚ ತಗಲುತ್ತದೆ ಎಂಬುದು ನಿರ್ವಿವಾದ. ಉತ್ತಮ ಸೇವೆ, ಉತ್ತಮ

ಲಾಭ ಇವು ಒಂದೇ ನಾಣ್ಯದ ಎರಡು ಬದಿಗಳು, ಅಧಿಕ ವೆಚ್ಚದಿಂದಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿರುವ ಬ್ಯಾಂಕುಗಳು ಉತ್ತಮ ಸೇವೆ ಸಲ್ಲಿಕೆಯ ಮಾತಿನೊಂದಿಗೆ ಸೇವಾ ಶುಲ್ಕಗಳನ್ನು ಏರಿಸುವ ಕ್ರಮವನ್ನೂ ತೆಗೆದುಕೊಂಡಿವೆ. ಈ ವಿಚಾರದಲ್ಲಿ ಯಾವ ಬ್ಯಾಂಕೂ ಹಿಂದೆ ಬಿದ್ದಿಲ್ಲ. ಈ ಏರಿಕೆಗಳು ಸಮಾನವಾಗಿವೆ. ಭಾರತೀಯ ಬ್ಯಾಂಕುಗಳಲ್ಲಿ ಅತಿ ದೊಡ್ಡದಾದ, ಅಗ್ರಸ್ಥಾನದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕೇ ಈ ವಿಚಾರದಲ್ಲೂ ಮುಂದಾಳುತನವಹಿಸಿದೆ. ಇತರ ಬ್ಯಾಂಕುಗಳೂ ಇದೇ ದಾರಿ ಹಿಡಿದಿವೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಎಲ್ಲ ವೆಚ್ಚಗಳೂ ತೀವ್ರವಾಗಿ ಏರುತ್ತಲೇ ಬಂದಿದ್ದರೂ ಬ್ಯಾಂಕುಗಳು ಸೇವಾ ಶುಲ್ಕಗಳನ್ನು ಏರಿಸದೆ ತಡೆಹಿಡಿದಿದ್ದುವು. ಈಗ ಏರಿಕೆ ಅನಿವಾರ್ಯ. ಈ ಏರಿಕೆ ತೀರ ಕಡಿದು ಎನಿಸುವುದು ಸಹಜ. ಹೀಗೆಂದು ಭಾರತೀಯ ಬ್ಯಾಂಕುಗಳ ಸಂಘದ ಅಧ್ಯಕ್ಷ ಎಂ. ಎನ್. ಫೋಯಿಫೋರಿಯಾ ಹೇಳಿದ್ದಾರೆ. ಇನ್ನು ಮುಂದೆ, ಅಗತ್ಯವೆನಿಸಿದಾಗ, ನಿಯತವಾಗಿ ಶುಲ್ಕಗಳನ್ನು ಏರಿಸುತ್ತೇವೆ ಎಂದು ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕನ್ನು ಅನುಸರಿಸಿ ಇತರ ಬ್ಯಾಂಕುಗಳೂ ಸೇವಾ ಶುಲ್ಕಗಳನ್ನು – ಹಂತ ಹಂತಗಳಿಗೆ ಸಂಬಂಧಿಸಿದಂತೆ ಏರಿಸಿವೆ. ಹುಂಡಿಗಳ ವಸೂಲಾತಿಗೆ ಶೇ. 100ರಿಂದ 300ರ ವರೆಗೆ, ಚೆಕ್ಕುಗಳ ವಸೂಲಾತಿಗೆ ಶೇ. 100 ರಿಂದ 733ರ ವರೆಗೆ, ಡ್ರಾಫ್ಟ್ ಹುಂಡಿಗಳ ಖರೀದಿಗೆ ಅನುಕ್ರಮವಾಗಿ ಶೇ. 25ರಿಂದ 50 ಮತ್ತು ಶೇ. 125ರಿಂದ 137.5ರ ವರಗೆ, ಡ್ರಾಫ್ಟ್, ಅಂಚೆ ವರ್ಗಾವಣೆ, ತಂತಿ, ವರ್ಗಾವಣೆಗಗಳಿಗೆ, ಶೇ. 100ಎಂದ 566ರ ವರೆಗೆ – ಹೀಗೆ ಏರಿಕೆಯಾಗಿದೆ. ಸೇವಾ ಶುಲ್ಕಗಳ ದರಗಳನ್ನು ಬ್ಯಾಂಕುಗಳು ಈ ರೀತಿ ಏರಿಸಿವೆ : ಹುಂಡಿಗಳ ಮೇಲೆ ರೂ. 1,000ವರೆಗೆ ರೂ.5, ರೂ, 3000 ವರೆಗೆ ರೂ. 10, ರೂ, 3,000 ದಿಂದ ರೂ. 5,000 ದವರೆಗೆ ರೂ. 15, ರೂ. 5,000 ರೂ. 10,000 ವರೆಗೆ ರೂ 30, ರೂ. 10,000 ದಿಂದ ರೂ 1 ಲಕ್ಷದವರೆಗೆ ಪ್ರತಿ ರೂ. 1,000 ರೂ. 4 ತರಗು (ಕಮಿಷನ್) ವಿಧಿಸಲಾಗುತ್ತದೆ. ಚೆಕ್ಕು ವಸೂಲಿ ಶುಲ್ಕ ರೂ. 1000ದ ವರೆಗೆ ರೂ. 3, ರೂ. 1,000 ರೂ. 5,000: ರೂ. 10; ರೂ. 5,000– ರೂ, 10,000 ರೂ. 20; ರೂ. 10,000 – ರೂ. 1 ಲಕ್ಷ: ಪ್ರತಿ ರೂ. 1,000 ಕ್ಕೆ, ರೂ. 2.50; ರೂ. 1 ಲಕ್ಷ – ರೂ. 2 ಲಕ್ಷ: ಪ್ರತಿ ರೂ. 1,000ಕ್ಕೆ , ರೂ. 2 (ಕನಿಷ್ಠ ರೂ. 250, ಗರಿಷ್ಠ ರೂ. 1,000).

ಲೇಖನಸಾಮಗ್ರಿ, ಖಾತಾ ಪುಸ್ತಕಗಳು, ಸೇವೆ ಎಲ್ಲದರ ವೆಚ್ಚಗಳೂ ಅಧಿಕವಾಗಿರುವುದರಿಂದ ಶುಲ್ಕ ಏರಿಕೆ ಅನಿವಾರ್ಯವೆಂಬುದು ಭಾರತೀಯ ಬ್ಯಾಂಕುಗಳ ಸಂಘದ ವಿವರಣೆ. ಚೆಕ್ಕು,

ಪುಸ್ತಕಗಳನ್ನು ಉಚಿತವಾಗಿ ಹಂಚಲಾಗುವುದಾದರೂ ಹೊಸದಾಗಿ ನೀಡಲಾಗುತ್ತಿರುವ ಕಾಂತೀಯ ಮಸಿ ಸಂಕೇತಯುಕ್ತ ಚೆಕ್ಕು ಪುಸ್ತಕಗಳ ವೆಚ್ಚ ಮಾಮೂಲಿ ಚೆಕ್ಕು ಪುಸ್ತಕಗಳ ವೆಚ್ಚದ ಹತ್ತರಷ್ಟಾಗುತ್ತದೆ. ಈ ಮೂಲಕ ತೀರುವೆ ವ್ಯವಸ್ಥೆಯನ್ನು ಗಣಕೀಕರಿಸುವುದರಿಂದ ಸ್ಥಳೀಯ ತೀರುವೆಯ ಕಾಲ 48 ಗಂಟೆಗಳಿಂದ 24 ಗಂಟೆಗಳಿಗೆ ಇಳಿಯುತ್ತದೆ. ಈ ಚೆಕ್ಕು ಪುಸ್ತಕಗಳನ್ನು ಗ್ರಾಹಕರು ವ್ಯರ್ಥಮಾಡ ಬಾರದೆಂಬುದು ಗ್ರಾಹಕರಿಗೆ ಬ್ಯಾಂಕುಗಳ ಕೋರಿಕೆ.

ಬ್ಯಾಂಕ್ ಶುಲ್ಕಗಳ ಏರಿಕೆ ತೀರ ಕಡಿದೆಂಬ ಟೀಕೆ ತೀವ್ರವಾಗಿಯೇ ಇದೆ. ಆದರೆ ಮೊದಲೇ ಲಾಭ ಕುಗ್ಗುತ್ತಿರುವ ಬ್ಯಾಂಕಿಂಗ್ ವಲಯ ತನ್ನ ಶುಲ್ಕಗಳನ್ನು ವೆಚ್ಚಗಳಿಗೆ ಅನುಗುಣವಾಗಿ ನಿಯತಗೊಳಿಸುವುದು ಅಗತ್ಯವೆಂಬ ವಾದವನ್ನು ತಳ್ಳಿಹಾಕುವಂತಿಲ್ಲ. ಬ್ಯಾಂಕಿಂಗ್ ವ್ಯವಹಾರ ಜನಸಾಮಾನ್ಯರಿಗೆ ಬಲು ದುಬಾರಿ ಎನಿಸದಂತೆ ಬ್ಯಾಂಕುಗಳು ಎಚ್ಚರ ವಹಿಸುವುದಂತೂ ಅತ್ಯಗತ್ಯ. ಸೇವೆಯ ಗುಣಮಟ್ಟವನ್ನು ಏರಿಸಲು ವಿಶೇಷ ಕಾಳಜಿ ವಹಿಸಬೇಕಾಗಿದೆ.

ಹಣ ನೀತಿ ಸುಧಾರಣೆ

ದೇಶದ ಹಣ ವ್ಯವಸ್ಥೆಯನ್ನು ಅಧ್ಯಯನ ಮಾಡಿ, ಹಣ, ಉದ್ದರಿ ಮತ್ತು ರಾಜಕೋಶೀಯ ನೀತಿಗಳ ಪರಸ್ಪರ ಸಂಬಂಧವನ್ನು ಪರಿಶೀಲಿಸಬೇಕೆಂದು 1982ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೇಮಕಗೊಂಡಿದ್ದ ಸುಖಮೊಯ ಚಕ್ರವರ್ತಿ ಸಮಿತಿ ತನ್ನ ವರದಿಯನ್ನು ಕಳೆದ ವರ್ಷದ ಏಪ್ರಿಲ್ ತಿಂಗಳಿನಲ್ಲೇ ಒಪ್ಪಿಸಿತ್ತು. ಆ ವರದಿ ಪ್ರಕಟವಾದ್ದು ಕಳೆದ ನವೆಂಬರಿನಷ್ಟು ತಡವಾಗಿ. ಇದು ಹೇಗೂ ಇರಲಿ, ಈ ಸಮಿತಿಯ ಕಾಣ್ಕೆ ಹಾಗೂ ಶಿಫಾರಸುಗಳು ಅತ್ಯಂತ ಮಹತ್ವಪೂರ್ಣವಾದವು ಎಂಬುದರಲ್ಲಿ ಸಂಶಯವಿಲ್ಲ. ದೇಶದಲ್ಲಿ ಬೆಲೆಗಳ ಸ್ಥಿರತೆ ಸಾಧಿಸಬೇಕಾದರೆ ಹಣನೀತಿಗೆ ಪ್ರಧಾನ ಪಾತ್ರ ನೀಡುವುದು ಅಗತ್ಯವೆಂದು ಸಮಿತಿ ಹೇಳಿದೆ. ಸರ್ಕಾರಕ್ಕೆ ರಿಸರ್ವ್ ಬ್ಯಾಂಕ್ ನೀಡಬೇಕಾಗಿರುವ ಉದ್ದರಿಯಿಂದಾಗಿ ಅಸ್ಥಿರ ಪರಿಸ್ಥಿತಿ ಉಂಟಾಗಿದೆಯೆಂಬುದು ಸಮಿತಿಯ ಇನ್ನೊಂದು ಅಭಿಪ್ರಾಯ. ಸರ್ಕಾರ ಹಾಗೂ ರಿಸರ್ವ್ ಬ್ಯಾಂಕಿನ ನಡುವೆ ತಕ್ಕ ಮಟ್ಟಿನ ಹೊಂದಾಣಿಕೆ, ಸಂಯೋಜನೆ ಅಗತ್ಯವೆಂದು ಅದು ಭಾವಿಸುತ್ತದೆ. ಈಗ ನೀತಿಯನ್ನು ರೂಪಿಸುತ್ತಿರುವುದು ಸರ್ಕಾರ. ಇದಕ್ಕನುಗುಣವಾಗಿ ನಗದು ಮೀಸಲು ಅನುಪಾತವೇ ಮುಂತಾದ ಸಾಧನಗಳ ಮೂಲಕ ಪರಿಸ್ಥಿಯನ್ನು ಹತೋಟಿಗೆ ತರಲು ಯತ್ನಿಸುವುದಷ್ಟೇ ರಿಸರ್ವ್ ಬ್ಯಾಂಕಿನ ಕೆಲಸ. ನೀತಿ ರೂಪಣೆಯಲ್ಲಿ ಅದಕ್ಕೆ ಪಾತ್ರವಿಲ್ಲ. ಇದು ಸರಿಯಲ್ಲ ಎಂದು ಸಮಿತಿ ಹೇಳಿರುವುದು ಗಮನಿಸಬೇಕಾದ ಸಂಗತಿ.

ಬಡ್ಡಿ ದರಗಳಿಗೂ ಹಣದುಬ್ಬರದ ದರಕ್ಕೂ ಸಾಂಗತ್ಯ ಏರ್ಪಡಿಸಬೇಕು ಎಂದು ಸುಖಮೊಯ ಚಕ್ರವರ್ತಿ ಸಮಿತಿ ಸೂಚಿಸಿದೆ. ಆರ್ಥಿಕ ಬೆಳವಣಿಗೆಗೆ ತಕ್ಕಂತೆ ಹಣದ ಪೂರೈಕೆಯನ್ನು ನಿಯಂತ್ರಿಸಬೇಕು, ಸರ್ಕಾರ ಕೊರತೆ ಆಯವ್ಯಯ ನೀತಿಯನ್ನು ತೊರೆದು ತನ್ನ ಖರ್ಚಿಗೆ ಅಗತ್ಯವಾದ ಹಣವನ್ನು ಮಾರುಕಟ್ಟೆಯಿಂದ ಸಾಲ ಎತ್ತಬೇಕು ಎಂಬುದು ಕೂಡ ಮಹತ್ವದ ಸಲಹೆಯೆ. ಈಚೆಗೆ ಸರ್ಕಾರ ಸಾಲ ಎನ್ನುತ್ತಿರುವ ರೀತಿಯೂ ಪ್ರಚ್ಛನ್ನ ಕೊರತೆ ಆಯವ್ಯಯವೇ. ಉದಾಹರಣೆಗೆ 1980 – 85ರ ಅವಧಿಯಲ್ಲಿ ಸರ್ಕಾರ ಎತ್ತಿದ ಒಟ್ಟು ಸಾಲ ರೂ, 17,400 ಕೋಟಿ. ಇದರಲ್ಲಿ ರೂ.5,900 ಕೋಟಿ ಯನ್ನು ರಿಸರ್ವ್ ಬ್ಯಾಂಕೇ ಸಲ್ಲಿಸಬೇಕಾಯಿತು. ಇದು ಸರ್ಕಾರದ ಈ ಅವಧಿಯ ರೂ. 14,700 ಕೋಟಿಯ ಕೊರತೆ ಬಜೆಟ್ಟಿನ ಹಣದ ಜೊತೆಗೆ ರಿಸರ್ವ್ ಬ್ಯಾಂಕ್ ಹೊರಬೇಕಾಗಿ ಬಂದ ಹಣ. ಎಂದರೆ ಒಟ್ಟು ರೂ. 20,600 ಕೋಟಿ ಕೊರತೆ ಹಣಕಾಸು ಎನ್ನಬಹುದು. ಸುದೈವದಿಂದ ದೇಶದಲ್ಲಿ ಆಹಾರೋತ್ಪನ್ನ ಹಾಗೂ ಕೈಗಾರಿಕೋತ್ಪನ್ನ ತಕ್ಕಮಟ್ಟಿಗೆ ಅನುಕೂಲವಾಗಿದ್ದದ್ದರಿಂದ ಹಣದುಬ್ಬರ ಮಿತಿಮೀರಿ ಹೋಗಲಿಲ್ಲ. ಸಾರ್ವಜನಿಕ ಸಾಲಗಳನ್ನು ಹಣದ ರೂಪದಲ್ಲೇ ಪಡೆಯುವ ಕ್ರಮ ಬರಬೇಕು, ಅಪ್ಪಟ ಕೊರತೆ ಆಯವ್ಯಯದ ಪತ್ರವನ್ನು ಪೂರ್ವಭಾವಿಯಾಗಿಯೇ ಸಮಾಲೋಚನೆಯಿಂದ ನಿರ್ಧರಿಸಬೇಕು ಎಂಬ ಸಲಹೆ ಸ್ವಾಗತಾರ್ಹ.

ಬ್ಯಾಂಕ್ ಠೇವಣಿಗಳ ಬಡ್ಡಿ ದರಗಳ ನಿರ್ವಹಣೆ, ಸಾಲ ನೀಡಿಕೆಯ ಬಡ್ಡಿ ದರಗಳ ಸಂರಚನೆ – ಇವನ್ನೆಲ್ಲ ಸುಖಮೊಯ ಚಕ್ರವರ್ತಿ ಸಮಿತಿ ಟೀಕಿಸಿದೆ. ಈ ವಿಚಾರದಲ್ಲಿ ಅತಿಯಾದ ಕೈವಾಡದಿಂದಾಗಿ ಬಡ್ಡಿ ದರಗಳು ಗಡುಸಾಗಿದೆ. ನಾನಾ ವಲಯಗಳಿಗೆ ಸಹಾಯಧನ ನೀಡುವುದು ಅಗತ್ಯವಾಗಿದೆ. ಬ್ಯಾಂಕುಗಳ ಲಾಭಪ್ರದತೆ ಕುಗ್ಗಿದೆ. ನಿಧಿಗಳನ್ನು ಅತ್ಯಂತ ಉತ್ಪಾದಕ ಮಾರ್ಗಗಳಲ್ಲಿ ತೊಡಗಿಸುವ ವರ್ಗಗಳ ಸಾಲಗಾರರ ಹೊರೆ ಅಧಿಕವಾಗಿದೆ. ಆದ್ದರಿಂದ ಬಡ್ಡಿ ದರಗಳಿಗೆ ಹೊಸ ಸೂತ್ರಗಳನ್ನು ರೂಪಿಸಬೇಕು. ಹಣಕಾಸಿನ ಹಾಗೂ ಪತ್ತಿನ ಸಂಸ್ಥೆಗಳ ಹೊಂದಾವಣೆಯಾಗಬೇಕು. ಗರಿಷ್ಠ ಠೇವಣಿ ದರಕ್ಕೂ ಕನಿಷ್ಠ ಸಾಲ ನೀಡಿಕೆ ದರಕ್ಕೂ ಕೊನೆಯ ಪಕ್ಷ ಶೇ.3ರಷ್ಟು ಹರವು ಇರಬೇಕು. ರಿಯಾಯಿತಿ ಬಡ್ಡಿ ದರದ ಸಾಲಗಳನ್ನು ಆದ್ಯತಾ ವಲಯದ ಕೆಲವೇ ಗುಂಪುಗಳಿಗೆ ಸೀಮಿತಗೊಳಿಸಬೇಕು. ನಗದು ಉದ್ದರಿ ವ್ಯವಸ್ಥೆಯನ್ನು ನಿರುತ್ತೇಜಿಸಬೇಕು. ಸಾಲ ಮತ್ತು ಹುಂಡಿ ವಟಾವಣೆಯ ಮೂಲಕ ಉದ್ದರಿ ನೀಡುವ ಪದ್ಧತಿ ಬರಬೇಕು. ಇವು ಸಮಿತಿಯ ಕೆಲವು ಮುಖ್ಯ ಸಲಹೆಗಳು. ಸರ್ಕಾರವೂ ಬ್ಯಾಂಕುಗಳೂ ಹಣ ಪ್ರಾಧಿಕಾರಿಗಳೂ ಸಮಿತಿಯ ವರದಿಯನ್ನು ಗಂಭೀರವಾಗಿ ಅಧ್ಯಯಿಸಿ ಯುಕ್ತ ಬದಲಾವಣೆಗಳನ್ನು ಜಾರಿಗೆ ತರಬೇಕಾಗಿದೆ.

11. ಜೂನ್ 1986 – ಶೃಂಗೇರಿಯ ಕಮ್ಮಟ – ರಿಸರ್ವ್ ಬ್ಯಾಂಕ್ ಉದರಿ ನೀತಿ

ಈಚೆಗೆ ಶೃಂಗೇರಿಯಲ್ಲಿ ನಡೆದ ಒಂಬತ್ತನೆಯ ಬ್ಯಾಂಕಿಂಗ್ ಕಮ್ಮಟ ಅನೇಕ ದೃಷ್ಟಿಗಳಿಂದ ವೈಶಿಷ್ಟ್ಯಪೂರ್ಣವಾದ್ದು. ಹಾಗೆ ನೋಡುವುದಾದರೆ, ಇದುವರೆಗೆ ನಡೆದಿರುವ ಒಂದೊಂದು ಬ್ಯಾಂಕಿಂಗ್ ಕಮ್ಮಟವೂ ವಿಶಿಷ್ಟವೇ; ಹಿಂದಿನ ಕಮ್ಮಟಗಳ ಹೆಚ್ಚು ಅರ್ಥಪೂರ್ಣವಾಗಲು, ಭಿನ್ನವಾಗಿರಲು ಪ್ರತಿಯೊಂದು ಕಮ್ಮಟವೂ ಯತ್ನಿಸುತ್ತ ಬಂದಿದೆ; ಗುರಿಯ ಸಾಧನೆಯಲ್ಲಿ ಇನ್ನೊಂದು ಮಜಲು ಮುಂದೆ ನಡೆಯುತ್ತ ಬಂದಿದೆ. ಸದಾ ಪರಿವರ್ತನಶೀಲವಾದ, ಹೊಸ ಹೊಸ ಪಂಥಾಹ್ವಾನಗಳನ್ನು ಎದುರಿಸುತ್ತಿರುವ ಬ್ಯಾಂಕಿಂಗಿನ ಆಚಾರ ವಿಚಾರ ಪ್ರಚಾರಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಚಿಂತನೆ ನಡೆಸುವುದರ ಜೊತೆಗೆ ಬ್ಯಾಂಕ್ ವ್ಯವಹಾರಕ್ಕೆ ಕನ್ನಡದಲ್ಲಿ ಅಗತ್ಯವಾದ ಅರ್ಥೋರಚನೆಯ ನಿರ್ಮಾಣವೂ, ಬ್ಯಾಂಕಿಂಗ್ ಕುರಿತ ಚಿಂತಕರ ಹಾಗೂ ಲೇಖಕರ ಪಡೆಯೊಂದನ್ನು ರೂಪಿಸುವುದೂ, ಕನ್ನಡದಲ್ಲಿ ಬ್ಯಾಂಕ್ ವ್ಯವಹಾರ ಮತ್ತು ಈ ಕುರಿತ ಚಿಂತನೆ ಅಗತ್ಯವಷ್ಟೇ ಅಲ್ಲದೆ, ಅನಿವಾರ್ಯವೂ ಹೌದು ಎಂಬ ನಂಬಿಕೆಯನ್ನು ಮೂಡಿಸುವುದೂ ಬ್ಯಾಂಕಿಂಗ್ ಕಮ್ಮಟಗಳ ಗುರಿ, ಕಮ್ಮಟದಿಂದ ಕಮ್ಮಟಕ್ಕೆ ಇದರಲ್ಲಿ ಆಸಕ್ತಿ ಬೆಳೆಯುತ್ತಿದೆ. ಇದರಲ್ಲಿ ಪಾಲ್ಗೊಳ್ಳುವವರು ಇದರ ಯಶಸ್ಸಿಗೆ ಬಹುಮಟ್ಟಿಗೆ ಕಾರಣ. ಬ್ಯಾಂಕಿಂಗ್ ವ್ಯವಸ್ಥಾಪಕ ವರ್ಗವೂ ಇದರಲ್ಲಿ ಹೆಚ್ಚು ಹೆಚ್ಚು ಕಾಳಜಿ ವಹಿಸುತ್ತಿದೆ. ಬ್ಯಾಂಕುಗಳು ಅಧಿಕೃತವಾಗಿ ತಮ್ಮ ಪ್ರತಿನಿಧಿಗಳನ್ನು ಕಮ್ಮಟದಲ್ಲಿ ಭಾಗವಹಿಸಲು ಕಳಿಸುತ್ತಿವೆ. ಇವೆಲ್ಲಾ ಶುಭ ಚಿಹ್ನೆಗಳು. ನಾಡಿಗೆ ಒಳ್ಳೆಯದಾಗಬಹುದೆಂಬ ಆಶೆ ಅಂಕುರಿಸುತ್ತಿದೆ.

ಶೃಂಗೇರಿಯ ಬ್ಯಾಂಕಿಂಗ್ ಕಮ್ಮಟ ಯಶಸ್ವಿಯಾಗಲು ಅಲ್ಲಿಯ ಸಾರ್ವಜನಿಕ ಪ್ರಮುಖರೂ ಸ್ಥಳೀಯ ಸಂಘ ಸಂಸ್ಥೆಗಳೂ ಕಾರಣ. ಶೃಂಗೇರಿಯ ವಾಣಿಜ್ಯ ಪದವೀಧರರ ಸಂಘ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶೃಂಗೇರಿ ಶಾಖೆ ಇವು ಇದಕ್ಕಾಗಿ ವಿಶೇಷವಾಗಿ ಶ್ರಮಿಸಿವೆ. ಶೃಂಗೇರಿಯ ಮೈಸೂರು ಬ್ಯಾಂಕ್ ಶಾಖೆ' ಇದೇ ಸಮಯಕ್ಕೆ ತನ್ನ ಹತ್ತು ವರ್ಷಗಳ ಸಾರ್ಥಕ ಸೇವೆ ಮುಗಿಸಿ ಮುನ್ನಡೆದಿರುವುದೂ, ಈ ಸಂದರ್ಭದಲ್ಲಿ ಅದು ದಶಮಾನೋತ್ಸವವನ್ನಾಚರಿಸಿದ್ದೂ ಗಮನಾರ್ಹ. ಸ್ಥಳೀಯ ಪ್ರಮುಖ ಪತ್ರಿಕೆಗಳೂ ಕಮ್ಮಟದ ಕಲಾಪಗಳಲ್ಲಿ ಆಸಕ್ತಿ ತೋರಿಸಿದ್ದು, ಅಭಿನಂದನೀಯ. ಶೃಂಗೇರಿಗೆ ಬಹುಶಃ ಇದು ಸಹಜವೇ. ಶೃಂಗೇರಿ ಸಣ್ಣ ಊರಾದರೂ ಧಾರ್ಮಿಕ ಸಾಂಸ್ಕೃತಿಕ ನೆಲೆ, ನಿರ್ವೈರ ಕ್ಷೇತ್ರ. ಇಲ್ಲಿ ಹಿಂದೂ ಮುಸ್ಲಿಮರು ಹಿಂದಿನಿಂದಲೂ

ಕೂಡಿ ಬಾಳುವೆ ನಡೆಸುತ್ತ ಬಂದಿದ್ದಾರೆ. ವ್ಯವಹಾರ ಕ್ಷೇತ್ರದಲ್ಲಿ ಶೃಂಗೇರಿಯದೊಂದು ವೈಶಿಷ್ಟ್ಯ. 1914ರಷ್ಟು ಹಿಂದೆ ಶೃಂಗೇರಿಯಲ್ಲೊಂದು ಬ್ಯಾಂಕು (ಶೃಂಗೇರಿ ಶ್ರೀ ಶಾರದಾ ಬ್ಯಾಂಕ್ ಲಿ.) ಸ್ಥಾಪಿತವಾಗಿತ್ತೆಂಬುದು ಇತಿಹಾಸದ ಸಂಗತಿ. (ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಕರ್ನಾಟಕದಲ್ಲಿ ಬ್ಯಾಂಕುಗಳ ಹುಟ್ಟು ಮತ್ತು ಬೆಳವಣಿಗೆ ಎಂಬ ಲೇಖನವನ್ನು ನೋಡಿ) ಜಿಲ್ಲೆಯ ಮುಖ್ಯ ಸ್ಥಳವಾದ ಚಿಕ್ಕಮಗಳೂರಿಗೆ ಇಲ್ಲದ ಭಾಗ್ಯ ಈ ಊರಿನದು. 1962ರಷ್ಟು ಈಚೆಗೆ ಈ ಬ್ಯಾಂಕು ಕರ್ನಾಟಕ ಬ್ಯಾಂಕಿನಲ್ಲಿ ವಿಲೀನಗೊಂಡಿತು. ಅಂತೂ ಅಲ್ಲಿಯ ಜನ ಧರ್ಮ ಸಂಸ್ಕೃತಿ ಪ್ರಿಯರು, ಸಾಮರಸ್ಯ ಸಾಧಕರು, ವ್ಯವಹಾರವಿದರು ಎಂಬುದನ್ನು ತೋರಿಸಿದ್ದಾರೆ. ಇಂಥ ಪ್ರಶಾಂತ ರಮ್ಯ ಸ್ಥಳದಲ್ಲಿ ಬ್ಯಾಂಕಿಂಗ್ ಕಮ್ಮಟ ತುಂಬ ಯಶಸ್ವಿಯಾಯಿತೆಂಬುದರಲ್ಲಿ ಆಶ್ಚರ್ಯವಿಲ್ಲ.

ಈ ಬಾರಿಯ ಕಮ್ಮಟದಲ್ಲಿ ಪಾಲ್ಗೊಂಡಿದ್ದವರ ಸಂಖ್ಯೆ ಇಪ್ಪತ್ತೈದಕ್ಕೂ ಮಿಗಿಲು. ಆರಂಭದಿಂದಲೂ ಪಾಲ್ಗೊಳ್ಳುತ್ತ ಬಂದಿರುವವರ ಜೊತೆಗೆ ಈಚೆಗೆ ಇದರಲ್ಲಿ ಪ್ರೇಮಾಂಕುರಗೊಂಡು ವಿಶೇಷ ಅಭಿಮಾನ ಶ್ರದ್ಧೆಗಳಿಂದ ಬರುತ್ತಿರುವವರು ನಮ್ಮ ಕಮ್ಮಟಿಗರ ಪೀಳಿಗೆಯನ್ನು ಬೆಳೆಸುತ್ತಿದ್ದಾರೆ. ಒಮ್ಮೆ ಬ್ಯಾಂಕುಗಳ ಅಧಿಕೃತ ಪ್ರತಿನಿಧಿಗಳಾಗಿ ಬಂದು ಭಾಗವಹಿಸಿದವರು ಆಮೇಲೆ ಇದರ ಶಾಶ್ವತ ಪ್ರತಿನಿಧಿಗಳಾಗಿ ಪರಿಣಮಿಸುತ್ತಿದ್ದಾರೆ. ಈ ಕಮ್ಮಟದಲ್ಲಿ ಒಟ್ಟು ಇಪ್ಪತ್ಮೂರು ಪ್ರಬಂಧಗಳು ಮಂಡಿತವಾಗಿ ಚರ್ಚೆಗೆ ಒಳಪಟ್ಟುವು: ಎರಡು ಇಂಗ್ಲಿಷ್ ಲೇಖನಗಳ ಅನುವಾದ ಕಾರ್ಯ ನಡೆಯಿತು. ಹಲವಾರು ಹೊಸ ಪಾರಿಭಾಷಿಕ ಪದಗಳು ಟಂಕನೆಗೊಂಡವು. ಭಿನ್ನಕ ಬಡ್ಡಿ ದರ, ಸಾಲ ವಸೂಲಾತಿ, ಸಮಗ್ರ ಗ್ರಾಮೀಣ ಅಭಿವೃದ್ಧಿ, ಗ್ರಾಹಕ ಸಮಾಲೋಚನಾ ಸಭೆ ಮುಂತಾದವುಗಳಿಂದ ಹಿಡಿದು ಅಂತರರಾಷ್ಟ್ರೀಯ ಹಣ ನಿಧಿ, ಅನಿವಾಸಿ ಖಾತೆಗಳು, ಕಾಂತೀಯ ಮಸಿ ಲಿಪಿ ಗ್ರಹಣ, ವಿದ್ಯುನ್ಮಾನ ಬ್ಯಾಂಕಿಂಗು, ಹಕ್ಕು ಪತ್ರಗಳ ನಿಕ್ಷೇಪದ ಅಡಮಾನ, ಬ್ಯಾಂಕ್ ಗೃಹಪತ್ರಿಕೆಗಳು, ಬ್ಯಾಂಕ್ ಮನೆ ವಾರ್ತೆ, ಬ್ಯಾಂಕುಗಳಲ್ಲಿ ವಂಚನೆಗಳು, ಸಹಕಾರಿ ರಂಗದ ಬ್ಯಾಂಕುಗಳ ಸಾಲ ವಸೂಲಾತಿ ಮುಂತಾದವುಗಳವರೆಗೆ ಬ್ಯಾಂಕಿಂಗಿನ ವಿಸ್ತೃತ ವಲಯದ ಮಾನಸಿಕ ಪ್ರವಾಸಕಥನವಾಗಿ ಪರಿಣಮಿಸಿತು, ಈ ಕಮ್ಮಟ, ಸೂಕ್ಷ್ಮತಮ ಚಿಂತನ ಅಭಿವ್ಯಕ್ತಿಗಳಿಗೆ ಕನ್ನಡ ಭಾಷೆಯನ್ನು ಒಗ್ಗಿಸುವುದರ ಜೊತೆಗೆ ಬ್ಯಾಂಕಿಂಗಿನ ಇತ್ತೀಚಿನ ಪ್ರವೃತ್ತಿಗಳ ಪರಿಚಯ ನೀಡುವಲ್ಲಿ ಬ್ಯಾಂಕಿಂಗ್ ಕಮ್ಮಟ ಯಶಸ್ಸು ಗಳಿಸಿದೆಯನ್ನಬೇಕು.

ಸಹಚಿಂತನ, ಸಹಜೀವನ ಕುರಿತಂತೆ ಸಾರ್ಥಕ ಪ್ರಯೋಗ ನಡೆಸುತ್ತ ಬರುತ್ತಿರುವ ಬ್ಯಾಂಕಿಂಗ್ ಕಮ್ಮಟಕ್ಕೆ

ಇನ್ನೂ ಒಂದು ಮುಖವುಂಟು. ಚಿಂತನ, ಭಾಷಣ, ಲೇಖನ ಇವು ಬುದ್ಧಿಗಮ್ಯವಾದ ವ್ಯಾಪಾರಗಳು. ಭಾಷೆ ಬಹಿರ್ಮುಖ ವ್ಯಾಪಾರಗಳೇ ಅಲ್ಲದೆ ಅಂತರ್ಮುಖ ವ್ಯಾಪಾರಗಳ ಅಭಿವ್ಯಕ್ತಿಯ ಮಾಧ್ಯಮವೂ ಹೌದು. ಸೃಜನಾತ್ಮಕ ಸಾಹಿತ್ಯಾಭ್ಯಾಸದಿಂದ ವೈಚಾರಿಕ ಸಾಹಿತ್ಯ ರಚನೆಗೆ ವಿಶೇಷ ಪ್ರಯೋಜನವುಂಟು. ವಿಚಾರ ಸಾಹಿತ್ಯ ರಚನೆಯಲ್ಲಿ ನಿರತರಾಗಬಯಸುವವರು ಸೃಜನಶೀಲ ಸಾಹಿತ್ಯವನ್ನು ಅಲ್ಲಗಳೆಯತಕ್ಕದ್ದಲ್ಲ. ಅಭಿವ್ಯಕ್ತಿಯ ಸಾಧ್ಯತೆಗಳನ್ನು ತೆರೆದು ತೋರುವಂಥದು ಸೃಜನಾತ್ಮಕ ಸಾಹಿತ್ಯ. ವಿಚಾರ ಸಾಹಿತ್ಯವಾದರೂ ರಂಜನೆಯ ಗುಣದಿಂದ ವಂಚಿತವಾಗಲಾರದು, ಆಗಬಾರದು, ಈ ಕಾರಣದಿಂದಾಗಿ ಕಮ್ಮಟದ ಭಾಗಿಗಳ ಪ್ರತಿಭಾ ಪ್ರದರ್ಶನಕ್ಕೂ ಕಮ್ಮಟದಲ್ಲಿ ಅವಕಾಶವುಂಟು. ಆಶು ಭಾಷಣ, ರಸಪ್ರಶ್ನೆ ಇತ್ಯಾದಿ ಕಾರ್ಯಕ್ರಮವನ್ನು ಏರ್ಪಡಿಸುವುದರ ಉದ್ದೇಶವಿದು, ಕವಿಗಳು ಸಮಾಜದ ಅಂತಃಕರಣದ ಮೊನೆಗಳು ಎಂದು ಹೇಳುವುದುಂಟು. ಚಿಂತನಪರ ಪ್ರಬಂಧಕಾರನಿಗೂ ಕವಿಯ ಸೂಕ್ಷ್ಮವೇದಿ ಗುಣ ಅತ್ಯವಶ್ಯ. ಕಮ್ಮಟಿಗರ ಹಾಗೂ ಶೃಂಗೇರಿಯ ಕಾವ್ಯಪ್ರತಿಭೆಗೆ ಈ ಬಾರಿ ಒಂದು ಸದವಕಾಶ ಪ್ರಾಪ್ತವಾಯಿತು. ಕಮ್ಮಟದ ಅಂಗವಾಗಿ ಏರ್ಪಡಿಸಿದ್ದ ಕವಿ ಗೋಷ್ಠಿಯಲ್ಲಿ ಅನೇಕ ಕಮ್ಮಟಿಗರೂ ಶೃಂಗೇರಿಯ ಕವಿಗಳೂ ತಂತಮ್ಮ ಕವಿತೆಗಳನ್ನು ವಾಚನವಾಡಿದ್ದೊಂದು ವಿಶೇಷ – ಅತ್ಯಂತ ಉದ್ದೀಪನಕಾರಿಯಾಗಿದ್ದ ಈ ಗೋಷ್ಠಿ ಶೃಂಗೇರಿಯಲ್ಲಿ ಬ್ಯಾಂಕಿಂಗ್ ಕಮ್ಮಟಕ್ಕೆ ಮೂಡಿದ ಒಂದು ಹೊಸ ಟಿಸಿಲು ಎನ್ನಬಹುದು. ಆರು ದಿನಗಳ ಕಾಲಪರಿಮಿತಿಯಲ್ಲಿ ಕಮ್ಮಟಿಗರ ಭಾವಲೋಕ, ಚಿಂತನ ಲೋಕಗಳ ವಿಸ್ತರಣೆಗೆ ಸಾಧ್ಯವಾದ್ದನ್ನೆಲ್ಲ ಕಮ್ಮಟ ಮಾಡಿತೆಂಬುದೂ, ಇದರಲ್ಲಿ ಶೃಂಗೇರಿಯ ಸಹೃದಯ ಬಂಧುಗಳು ಮನಃಪೂರ್ವಕವಾಗಿ ಸಹಕಾರ ನೀಡಿದರೆಂಬುದೂ ಉಲ್ಲೇಖಿಸಬೇಕಾದ ಸಂಗತಿಗಳು.

ರಿಸರ್ವ್ ಬ್ಯಾಂಕಿನ ಉದರಿ ನೀತಿ

ಪ್ರಸಕ್ತ ಹಣಕಾಸು ವರ್ಷದ (1986–87) ಮೊದಲ ಅರ್ಧ ಭಾಗಕ್ಕೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್ ಪ್ರಕಟಿಸಿರುವ ಉದರಿ ನೀತಿಯಲ್ಲಿ ಹಿಂದಿನ ನೀತಿಯಿಂದ ಹೆಚ್ಚಿನ ಬದಲಾವಣೆಗಳೇನೂ ಇಲ್ಲ, ಬ್ಯಾಂಕುಗಳ ನಗದು ಮೀಸಲು, ಹೆಚ್ಚುವರಿ ಶೇವಣಿಗಳ ಮೇಲೆ ಅವು ಇಡಬೇಕಾದ ಅಧಿಕ ನಗರು ಮೀಸಲು, ಪರಿನಿಯತ ದ್ರವತ್ವ ಅನುಪಾತ ಇವು ಹಿಂದಿನ ಮಟ್ಟದಲ್ಲೇ ಮುಂದುವರೆಯುತ್ತವೆ. ನಗದು ಮೀಸಲನ್ನು ಹೆಚ್ಚಿನ ಮಟ್ಟದಲ್ಲಿ ನಿಗದಿಪಡಿಸುವುದರ ಉದ್ದೇಶವೆಂದರೆ ಬ್ಯಾಂಕುಗಳು ಹೆಚ್ಚು ಉದರಿ ನಿರ್ಮಿಸಲಾಗದಂತೆ ಮಾಡುವುದು, ಬ್ಯಾಂಕುಗಳು ಸದ್ಯದಲ್ಲಿ ತಮ್ಮ ಶೇವಣಿಗಳಲ್ಲಿ ಒಟ್ಟು ಶೇ. 19ರಷ್ಟನ್ನು ಈ

ರೀತಿ ಇಡಬೇಕಾಗಿದೆ. ಇದಲ್ಲದೆ ಶೇ. 37ರಷ್ಟನ್ನು ಅವು ಸರ್ಕಾರಿ ಪ್ರತಿಭೂತಿಗಳೇ (ಸೆಕ್ಯೂರಿಟಿ) ಮುಂತಾದವುಗಳಲ್ಲಿ ನಿಯೋಜಿಸಬೇಕು. ಹೀಗೆ ಒಟ್ಟಿನಲ್ಲಿ ಶೇ. 56ರಷ್ಟು ನಿಧಿಗಳು ಮುಂಗಡ ನೀಡಲು ಬ್ಯಾಂಕುಗಳಿಗೆ ಒದಗದಂತಾಗುತ್ತದೆ. ಮೇಲೆ ಹೇಳಿದವುಗಳಲ್ಲಿ ಎರಡನೆಯದಾದ ಪರಿನಿಯತ ದ್ರವತ್ವ ಅನುಪಾತದ ನಿಯಮದ ಮೂಲಕ ಬ್ಯಾಂಕುಗಳು ಸರ್ಕಾರದ ಸಾಲ ಪತ್ರಗಳಿಗೆ ಕಡ್ಡಾಯವಾಗಿ ಹಣ ನೀಡಬೇಕಾಗುತ್ತದೆ. ಬ್ಯಾಂಕುಗಳ ಉದರಿ ನಿರ್ಮಾಣದ ಸಾಮರ್ಥ್ಯ, ಇಷ್ಟರ ಮಟ್ಟಿಗೆ ಮೊಟಕಾಗುತ್ತಿದೆ.

ಇವೆಲ್ಲ ಕಳೆದ ವರ್ಷ ರಿಸರ್ವ್ ಬ್ಯಾಂಕ್ ಪ್ರಕಟಿಸಿದ ಉದರಿ ನೀತಿಯ ಅಂಶಗಳೇ. ಈ ವರ್ಷದ ವಿಶೇಷವೆಂದರೆ, ಈ ನೀತಿಯನ್ನು ಹಿಂದಿನದಕ್ಕಿಂತ ಹೆಚ್ಚು ಕಟ್ಟುನಿಟ್ಟಾಗಿ ಜಾರಿಗೆ ತರಲು ರಿಸರ್ವ್ ಬ್ಯಾಂಕ್ ಕೈಗೊಂಡಿರುವ ಸಂಕಲ್ಪ, ಕಳೆದ ವರ್ಷ ಪರಿನಿಯತ ದ್ರವತ್ವ, ಅನುಪಾತ ನಿಯಮವನ್ನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಲು ಅವಕಾಶವಿತ್ತು. ಇದರಲ್ಲಿ ಶೇ.4ರ ವರೆಗೂ ವಿನಾಯತಿ ನೀಡಲಾಗು ತಿತ್ತು. ಬ್ಯಾಂಕುಗಳಿಗೆ ಈ ಅನುಪಾತವನ್ನು ಸಾಧಿಸಲು ಕಷ್ಟವೆನಿಸಬಹುದಾದ ಪರಿಸ್ಥಿತಿಯಲ್ಲಿ ಅವಕ್ಕೆ ಈ ವಿನಾಯತಿ ದೊರಕುತ್ತಿತ್ತು. ಆದರೆ ಈಗ ಈ ವಿನಾಯತಿಯ ಮಿತಿಯನ್ನು ಕ್ರಮೇಣ ತೆಗೆದು ಹಾಕಲಾಗುತ್ತದೆ. ಅಕ್ಟೋಬರ್ 11ರ ಅನಂತರ ಯಾವ ರಿಯಾಯಿತಿಯೂ ಇರುವುದಿಲ್ಲ. ಬ್ಯಾಂಕು ಸಾಧಿಸಬೇಕಾದ ಪರಿನಿಯತ (ಸ್ಟ್ಯಾಟ್ಯುಟರಿ) ದ್ರವತ್ವ (ಲಿಕ್ವಿಡಿಟಿ) ಅನುಪಾತದಲ್ಲಿ (ರೇಷಿಯೋ) ಸ್ವಲ್ಪ ಕಡಿಮೆಯಾದರೂ ಅದು ದಂಡ ತೆರಬೇಕಾಗುತ್ತದೆ. ಒಂದು ನಿಯಮ ಮಾಡಿದ ಮೇಲೆ ಅದನ್ನು ಮುರಿಯಲು ದಾರಿಮಾಡಿಕೊಡುವುದು ಸರಿಯಲ್ಲವೆಂಬುದು ನಿಜ. ರಿಸರ್ವ್ ಬ್ಯಾಂಕಿನ ಕಟ್ಟು ನಿಟ್ಟು ಈ ದೃಷ್ಟಿಯಿಂದ ಸಹಜವೇ. ಬ್ಯಾಂಕುಗಳ ಠೇವಣಿ ಹಾಗೂ ಉದರಿ ಪರಿಸ್ಥಿತಿಯ ಎಲ್ಲ ಅಂಶಗಳನ್ನೂ ಪರಿಶೀಲಿಸಿಯೇ ರಿಸರ್ವ್ ಬ್ಯಾಂಕು ಈ ತೀರ್ಮಾನಕ್ಕೆ ಬಂದಿದೆಯೆಂದು ನಿರೀಕ್ಷಿಸಬಹುದಾಗಿದೆ. ರಿಸರ್ವ್ ಬ್ಯಾಂಕಿನ ಈ ಕಟ್ಟುಪಾಡು ದೇಶದ ಹಣದುಬ್ಬರ ಪರಿಸ್ಥಿತಿಯ ದ್ಯೋತಕವೆಂದೂ ಭಾವಿಸಬಹುದಾಗಿದೆ. ಬೆಲೆಗಳು ಇನ್ನೂ ಸಂಪೂರ್ಣವಾಗಿ ಹತೋಟಿಗೆ ಬಂದಿಲ್ಲವಷ್ಟೇ ಅಲ್ಲ, ಈಚೆಗೆ ಅವು ಮತ್ತೆ ಏರುವ ಪ್ರವೃತ್ತಿ ತೋರುತ್ತಿವೆ. ಕಳೆದ ವರ್ಷ ಮಳೆ ಬೆಳೆ ಎಲ್ಲೆಲ್ಲೂ ಸಮರ್ಪಕವಾಗಿಲ್ಲದಿದ್ದರೂ ಗೋದಿ ಹಾಗೂ ಅಕ್ಕಿಯ ಕಣಜಗಳು ತುಂಬಿವೆ. ಸರ್ಕಾರದ ಅಭಿಕರಣಗಳ ದಾಸ್ತಾನು ಮಳಿಗೆಗಳ ಹೊಟ್ಟೆಗಳು ಬಿರಿಯುತ್ತಿವೆ, ಅಕ್ಕಿ, ಗೋದಿ ಇತ್ಯಾದಿಗಳ ಸಂಗ್ರಹಣೆಗಾಗಿ ಬ್ಯಾಂಕುಗಳು ಮುಂಗಡ ನೀಡಬೇಕಾಗಿದೆಯಾದರೂ ರಿಸರ್ವ್ ಬ್ಯಾಂಕ್ ವಿಧಿಸಿರುವ ಮೀಸಲು ಅನುಪಾತಗಳಿಂದ ಬ್ಯಾಂಕ್, ಕಲಾಪಗಳಿಗೆ ಬಾಧಕವೇನೂ ಆಗದೆಂಬುದು ರಿಸರ್ವ್ ಬ್ಯಾಂಕ್

ಅನಿಸಿಕೆ, ಬೆಲೆಗಳ ಏರಿಕೆಯ ಪ್ರವೃತ್ತಿಯನ್ನು ತಡೆಗಟ್ಟಬೇಕೆಂಬುದು ನಿರ್ವಿವಾದ. ಬ್ಯಾಂಕುಗಳ ಮೇಲೆ ಉದರಿ ನಿರ್ಬಂಧ ವಿಧಿಸುವಾಗ, ಸಹಜವಾಗಿ ವಹಿವಾಟುಗಳಲ್ಲಿ ಆಗುವ ಏರಿಕೆಗೆ ಅಗತ್ಯವಾದದ್ದನ್ನು ನೀಡಲು ಬ್ಯಾಂಕುಗಳಿಗೆ ಅವಕಾಶವಿರುವಂತೆ ನೋಡಿಕೊಂಡು, ಅದಕ್ಕಿಂತ ಹೆಚ್ಚಿನದನ್ನು ತಡೆಹಿಡಿಯುವಂತೆ ರಿಸರ್ವ್ ಬ್ಯಾಂಕು ನೀತಿ ರೂಪಿಸಬೇಕು. ಉತ್ಪಾದನೆ, ಬೇಡಿಕೆ ಪೂರೈಕೆ, ಬೆಲೆಗಳ ಪ್ರವೃತ್ತಿ, ಹಣದ ಒದಗಣೆ ಇತ್ಯಾದಿ ಎಲ್ಲ ಆರ್ಥಿಕ ಸ್ಥಿತಿಗತಿಗಳನ್ನು ಪರಿಗಣಿಸಿ, ಸರ್ಕಾರದ ಧೋರಣೆ ಏನು ಎಂಬುದನ್ನೂ ಅರಿತು ಅದು ಈ ಕ್ರಮ ಕೈಗೊಳ್ಳಬೇಕಾಗುತ್ತದೆ. ದೇಶದಲ್ಲಿ ಒಟ್ಟು ಹಣ ವಾರ್ಷಿಕವಾಗಿ ಶೇ 17.2ರ ಪ್ರಮಾಣದಲ್ಲಿ ಏರುತ್ತದೆ. ಇದೇ ಪ್ರಮಾಣದಲ್ಲಿ ಅದರ ಏರಿಕೆ ಮುಂದುವರಿಯುವಂತೆ ನೋಡಿಕೊಂಡರೆ ಸಾಕು. ಇದನ್ನು ಮೀರಿದರೆ ಅಪಾಯ ಎಂಬುದು ರಿಸರ್ವ್ ಬ್ಯಾಂಕ್ ಭಾವನೆ. ಆರ್ಥಿಕ ಬೆಳವಣಿಗೆಯ ಅಗತ್ಯವನ್ನು ಪೂರೈಸಲು ಇಷ್ಟು ಸಾಕೆಂದು ಅದು ತೀರ್ಮಾನಿಸಿದೆ. ಬ್ಯಾಂಕ್ ಠೇವಣಿಗಳ ಮೊಬಲಗು ಹಿಂದಿನ ವರ್ಷದ್ದಕ್ಕಿಂತ ಶೇ. 17.5ರಷ್ಟು ಅಧಿಕವಾಗುವುದೆಂದು ನಿರೀಕ್ಷಿಸಲಾಗಿದೆ. ಬ್ಯಾಂಕುಗಳು ತಮ್ಮ ಅಧಿಕ ಉದರಿ ಬೇಡಿಕೆಯನ್ನು ಇಷ್ಟರಿಂದ ಪೂರೈಸಲು ಸಾಧ್ಯವೆಂದು ರಿಸರ್ವ್ ಬ್ಯಾಂಕ್ ಅನಿಸಿಕೆ. ಅಧಿಕ ನಗದು ಮೀಸಲು, ಪರಿನಿಯತ ದ್ರವತ್ವ ಅನುಪಾತ – ಇವಕ್ಕಾಗಿ ಹಣವನ್ನು ತೆಗೆದಿಟ್ಟ ಮೇಲೂ ಸುಮಾರು ರೂ 2,300 ಕೋಟಿಯಷ್ಟು ಹಣ ಈ ವರ್ಷದ ಮೊದಲ ಆರು ತಿಂಗಳಲ್ಲಿ ಮುಂಗಡಗಳಿಗಾಗಿ ಬ್ಯಾಂಕುಗಳಿಗೆ ಲಭ್ಯವಿರುತ್ತದೆ. ಇಷ್ಟು ಸಾಕು ಎಂದು ರಿಸರ್ವ್ ಬ್ಯಾಂಕ್ ಅಭಿಪ್ರಾಯ. ಆದ್ಯತಾ ವಲಯಗಳಿಗೆ ಬ್ಯಾಂಕುಗಳು ಕಡ್ಡಾಯವಾಗಿ ಶೇ. 40ರಷ್ಟು ಉದರಿ ನೀಡಬೇಕೆಂಬ ನಿಯಮವುಂಟು, ಬ್ಯಾಂಕುಗಳು ಈಗಾಗಲೇ ಈ ಗುರಿ ಮೀರಿಬಿಟ್ಟಿವೆ. ಆದ್ದರಿಂದ ಹೆಚ್ಚುವರಿ ಠೇವಣಿಗಳು ಇತರ ಮುಂಗಡಗಳಿಗೆ ಲಭ್ಯವಿರುತ್ತವೆಯೆನ್ನಬಹುದು.

ಪರಿನಿಯತ ದ್ರವತ್ವ ಅನುಪಾತವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದರ ಜೊತೆಗೆ ಕೆಲವು ನಿಟ್ಟುಗಳಲ್ಲಿ ರಿಸರ್ವ್ ಬ್ಯಾಂಕು ಸ್ವಲ್ಪ ಉದಾರವಾದ ಕ್ರಮಗಳನ್ನು ಜಾರಿಗೆ ತಂದಿದೆ. ಬ್ಯಾಂಕುಗಳು ಉದರಿ ನೀಡಲು ರಿಸರ್ವ್ ಬ್ಯಾಂಕಿನ ಅನುಮತಿ ಅಗತ್ಯವೆನಿಸುವ ಕನಿಷ್ಠ ಮಿತಿಯನ್ನು ಹೆಚ್ಚಿಸಿರುವುದು, ತಾತ್ಕಾಲಿಕ ಸಾಲದ ಮಿತಿಯ ವಿಸ್ತರಣೆ, ಕೆಲವು ಸರಕುಗಳಮೇಲೆ ನೀಡಬಹುದಾದ ಮುಂಗಡದ ಪ್ರಮಾಣದ ಏರಿಕೆ, ಮತ್ತೆ ಕೆಲವು ಸರಕುಗಳ ಮೇಲೆ ಮುಂಗಡ ನೀಡಲು ಇದ್ದ ನಿರ್ಬಂಧದ ರದ್ದು – ಇವು ಕೆಲವು ಸಡಿಲಿಕೆಗಳು. ತಾಜಾ ವಹಿವಾಟುಗಳಿಗೆ ತೊಂದರೆಯಾಗದಂತೆ ಪೂರೈಕೆ ಅಧಿಕವಿರುವ ಸರಕುಗಳು ಚಾಲೂ ಆಗುವಂತೆ ಮಾಡಲು ರಿಸರ್ವ್

ಬ್ಯಾಂಕ್ ಈ ಧೋರಣೆ ತಳೆದಿದೆಯೆನ್ನಬಹುದು.

ಆದರೆ ನಿರಾಶೆಯ ಸಂಗತಿಯೆಂದರೆ, ಬಡ್ಡಿದರಗಳನ್ನು ವಿಮರ್ಶಿಸಲಾಗದಿರುವುದು. ಭಿನ್ನಕ ಬಡ್ಡಿದರ, ಆದ್ಯತಾ ವಲಯಕ್ಕೆ ಸಾಲ ನೀಡಿಕೆ, ಸಾಮಾಜಿಕ ಬ್ಯಾಂಕಿಂಗ್ ಮುಂತಾದ ನೀತಿಗಳಿಂದ ಬ್ಯಾಂಕುಗಳ ಲಾಭದ ಅಂತರ ಕುಗ್ಗಿದೆ. ಬಡ್ಡಿದರಗಳನ್ನು ವೈಜ್ಞಾನಿಕವಾಗಿ ನಿರ್ಧರಿಸುವ ಅಗತ್ಯ ಕಂಡುಬಂದಿದೆ. ಈ ನಿಟ್ಟಿನಲ್ಲಿ ರಿಸನ್ ಬ್ಯಾಂಕ್ ಏನೂ ಕ್ರಮ ತೆಗೆದುಕೊಳ್ಳದಿರುವುದು ಅನೇಕರ ಗಮನ ಸೆಳೆದಿದೆ.

ಬ್ಯಾಂಕುಗಳ ಲಾಭಪ್ರದತೆ

ಬ್ಯಾಂಕುಗಳ ಲಾಭಪ್ರದತೆ ಇಂದಿನ ಒಂದು ಮುಖ್ಯ ಪ್ರಶ್ನೆ. ರಾಷ್ಟ್ರೀಕರಣದ ಫಲವಾಗಿ ವ್ಯಾಪಕವಾಗಿರುವ ಶಾಖಾ ವ್ಯವಸ್ಥೆ ಹೊಸದಾಗಿ ರೂಪುಗೊಂಡು ತ್ರಿವಿಕ್ರಮಾಕಾರ ತಾಳಿರುವ ಸಾಮಾಜಿಕ ಬ್ಯಾಂಕಿಗ್ ಅದ್ಯತಾ ವಲಯಕ್ಕೆ ಮುಂಗಡ ನೀಡಿಕೆ, ಭಿನ್ನಕಬಡ್ಡಿ, ದರ, ಸಾಲ ಮೇಳ ಇತ್ಯಾದಿ ಪ್ರವೃತ್ತಿಗಳನ್ನು ತಾಳಿಕೊಂಡು ಬೆಳೆಯುವ ಜೀವಶಕ್ತಿ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಗೆ ಇದೆ ಎಂಬುದನ್ನು ತೀವ್ರವಾಗಿ ಪರಿಗಣಿಸಬೇಕಾದ ಕಾಲ ಈಗ ಬಂದಿದೆ. ಭಾರತೀಯ ಸ್ಟೇಟ್ ಬ್ಯಾಂಕಿನ ವಾರ್ಷಿಕ ಅಧಿವೇಶನದಲ್ಲಿ ಅದರ ಅಧ್ಯಕ್ಷರು ನೀಡಿದ ಭಾಷಣದಲ್ಲಿ ಈ ಬಗ್ಗೆ ವ್ಯಕ್ತಪಡಿಸಲಾಗಿರುವ ಕೆಲವು ಆತಂಕಗಳು ನಿರಾಶಾವಾದದ ಅಪಶ್ರುತಿಯಲ್ಲ, ಅಪಾಯದ ಚಿಹ್ನೆ. ಮುಂದಿನ ಕೆಲವು ವರ್ಷಗಳ ಕಾಲ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ಲಾಭಪ್ರದತೆ ಕುಗ್ಗುತ್ತ ಸಾಗುವುದೆಂದು ಅವರು ಹೇಳಿದ್ದಾರೆ. ಇದರ ಬಗ್ಗೆ ಕಳೆದ ಕೆಲವು ವರ್ಷಗಳಲ್ಲಿದ್ದದ್ದಕ್ಕಿಂತ ಈ ವರ್ಷದ ಸ್ಥಿತಿ ಸ್ವಲ್ಪ ಸುಧಾರಿಸಿದೆಯಂಬ ಭಾವನೆ ಬರುವುದೇನೋ ನಿಜ. ಬ್ಯಾಂಕುಗಳ ನಡುವೆ ಸ್ಪರ್ಧೆ ಇಲ್ಲದಿರುವುದು, ಠೇವಣಿಗಳ ವಿಚಾರದಲ್ಲಿ ಇತರ ಆಕರ್ಷಕ ಸಂಸ್ಥೆಗಳೊಂದಿಗೆ ಸ್ಪರ್ಧಿಸಬೇಕಾದ ಅನಿವಾರ್ಯತೆ ಮುಂತಾದ ಅನೇಕ ಪರಿಸ್ಥಿತಿಗಳಿದ್ದಾಗ, ಈ ವರ್ಷ ಬ್ಯಾಂಕ್ ಠೇವಣಿಗಳು ಗಮನಾರ್ಹವಾಗಿ ಏರುವ ಪ್ರವೃತ್ತಿ ತೋರಿವೆ ಎನ್ನಲಾಗಿದೆ. ಕಳೆದ ವರ್ಷ (1985) ಬ್ಯಾಂಕ್ ಠೇವಣಿಗಳು ರೂ 12010 ಕೋಟಿಯಷ್ಟು ಅಧಿಕವಾದುವು, ರೂ 83,721 ಕೋಟಿಗೆ ಏರಿದುವು. ಈ ವರ್ಷ ಒಟ್ಟು ಠೇವಣಿಗಳು ರೂ. 97,000 ಕೋಟಿ ಆಗಬಹುದು, ರೂ 98,000 ಕೋಟಿಯ ಗಡಿ ಮುಟ್ಟಿದರೂ ಮುಟ್ಟಬಹುದು. ದೇಶದ ಒಳಗೆ ಬ್ಯಾಂಕಿಂಗ್ ಸಂದೇಶ ಹರಿದಿರುವುದು ಇದಕ್ಕೆ ಒಂದು ಕಾರಣ ಎಂದು ಭಾವನೆ. ಈ ವರ್ಷ ಲಾಭಪ್ರದತೆ ಇನ್ನಷ್ಟು ಸುಧಾರಿಸಬಹುದು ಎಂದು ನಿರೀಕ್ಷೆ. ಸರ್ಕಾರ ಈಚೆಗೆ ನೀಡುತ್ತಿರುವ ಸಾಲಗಳ ಮೇಲೆ ಬಡ್ಡಿ ದರಗಳನ್ನು ಗಮನಾರ್ಹವಾಗಿ ಏರಿಸಿರುವುದೂ, ಆಹಾರ ಧಾನ್ಯದ ಮೇಲೆ ನೀಡಿದ ಸಾಲದ ಬಡ್ಡಿ ದರವನ್ನು

ಕೂಡ ರಿಸರ್ವ್ ಬ್ಯಾಂಕ್ ಹೆಚ್ಚಿಸಿರುವುದೂ ಬ್ಯಾಂಕುಗಳ ಲಾಭಪ್ರದತೆ ಹಿಗ್ಗಲು ಕಾರಣವೆಂದು ವಾದಿಸಲಾಗಿದೆ. ಬ್ಯಾಂಕುಗಳು ತಮ್ಮ ಸಂಪನ್ಮೂಲಗಳಲ್ಲಿ ಮೂರನೆಯ ಒಂದು ಭಾಗಕ್ಕಿಂತ ಹೆಚ್ಚನ್ನು ಸರ್ಕಾರಿ ಸಾಲ ಪತ್ರಗಳಲ್ಲಿ ತೊಡಗಿಸಬೇಕಾಗಿರುವುದರಿಂದ ಸರ್ಕಾರಿ ಸಾಲಗಳ ಬಡ್ಡಿ ದರ ಏರಿಕೆಯನ್ನು ಬ್ಯಾಂಕುಗಳು ಸ್ವಾಗತಿಸುವುದು ಸಹಜ.

ಆದರೆ ಸರ್ಕಾರಿ ಸಾಲಗಳ ಹಾಗೂ ಆಹಾರಧಾನ್ಯದ ಮೇಲಣ ಮುಂಗಡಗಳ ಬಡ್ಡಿ ದರಗಳ ಏರಿಕೆಯಿಂದ ಲಾಭಪ್ರದತೆಯ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುವುದಿಲ್ಲ. ಈ ವರ್ಷವೂ ಬ್ಯಾಂಕುಗಳ ಲಾಭ ಕಡಿಮೆಯಾಗದೆಂಬುದಕ್ಕೆ ಇನ್ನೂ ಕೆಲವು ಕಾರಣಗಳನ್ನು ಸೇರಿಸಬಹುದು, ಬ್ಯಾಂಕು ಕಡ್ಡಾಯವಾಗಿ ಇಡಬೇಕಾದ ನಗದಿನ ಮೇಲೆ ರಿಸರ್ವ್ ಬ್ಯಾಂಕ್ ಬಡ್ಡಿದರ ಹೆಚ್ಚಿಸಿರುವುದು, ಬ್ಯಾಂಕ್ ನೌಕರರ ಸಂಬಳಗಳ ಪುನರ್ವಿಮರ್ಶೆಯ ಫಲವಾಗಿ ಅವರಿಗೆ ಬಾಕಿ ಪಾವತಿ ಮಾಡಬೇಕಾಗಿ ಬರುವ ಪರಿಸ್ಥಿತಿ ಇಲ್ಲದಿರುವುದು, ಅದ್ಯತಾ ವಲಯಕ್ಕೆ ನೀಡಬೇಕಾದ ಸಾಲದ ಪ್ರಮಾಣದ ಮಿತಿಯನ್ನು ಬ್ಯಾಂಕುಗಳು ಈಗಾಗಲೇ ತಲಪಿರುವುದು – ಇವೂ ಲಾಭಪ್ರದತೆಯ ಸುಧಾರಣೆಗೆ ಕಾರಣ. ಆದರೆ ಮುಖ್ಯವಾಗಿ ಗಮನಿಸಬೇಕಾದ ವಿಚಾರವಿದು : ಬ್ಯಾಂಕುಗಳು ಯಾವ ಕ್ಷೇತ್ರದಲ್ಲಿ ಕಲಾಪ ನಡೆಸುತ್ತಿವೆಯೋ ಆ ಕ್ಷೇತ್ರಕ್ಕೆ – ಎಂದರೆ ವಾಣಿಜ್ಯ ಕ್ಷೇತ್ರಕ್ಕೆ – ನೀಡಿದ ಮುಂಗಡಗಳಿಂದ ಹೆಚ್ಚು ಸಂಪಾದನೆಯಾಗುತ್ತಿಲ್ಲ. ಸಾಮಾಜಿಕ ಬ್ಯಾಂಕಿಂಗ್, ದೇಶಕ್ಕೆ ವರವಾಗಿ ಪರಿಣಮಿಸಿಲ್ಲ (ಹಾಗಂದಾಗ ಅದರ ಉದ್ದೇಶವನ್ನು ನಾವಿಲ್ಲಿ ಪ್ರಶ್ನಿಸುತ್ತಿಲ್ಲ, ಆದರೆ ರೀತಿ ರಿವಾಜುಗಳ ಬಗ್ಗೆ ನಮ್ಮ ಆತಂಕ). ಅದು ಬ್ಯಾಂಕುಗಳ ನಿಧಿಗಳ ಮೇಲೆ ಹಾಗೂ ಲಾಭಪ್ರದತೆಯ ಮೇಲೆ ಭಾರಿ ಹೊರೆಯಾಗಿ ಪರಿಣಮಿಸುತ್ತಿದೆ. ಜೊತೆಗೆ ಪರಂಪರಾಗತ ಕೈಗಾರಿಕೆಗಳು ಅಸ್ವಸ್ಥಗೊಳ್ಳುತ್ತಿವೆ. ಅಸ್ವಸ್ಥ ಘಟಕಗಳ ಪುನರುಜ್ಜೀವನ ಕಾರ್ಯದ ಕಹಿಫಲವನ್ನು ಬ್ಯಾಂಕುಗಳು ಭೋಗಿಸಬೇಕಾಗಿದೆ. ಇದು ವರ್ಷೇ ವರ್ಷೇ ಹೆಚ್ಚು ಹೆಚ್ಚು ಕಹಿಯಾಗುತ್ತಿದೆ. ಠೇವಣಿಗಳ ನಷ್ಟಸಂಭವ ಬೆಳೆಯುತ್ತಿದೆ. ಬ್ಯಾಂಕಗಳು ನಷ್ಟಕ್ಕಾಗಿ ಹೆಚ್ಚು ಹೆಚ್ಚು ಹಣ ತೆಗೆದಿರಿಸಬೇಕಾಗುತ್ತದೆ. ಕುಗ್ಗುತ್ತಿರುವ ಲಾಭದಿಂದ ಹೆಚ್ಚು ಹೆಚ್ಚು ದೊಡ್ಡ ಭಾಗವನ್ನು ಸಾಮಾಜಿಕ ಬ್ಯಾಂಕಿಂಗಿಗೆ ತೆಗೆದಿರಿಸಬೇಕಾಗುತ್ತದೆ. ಸಾಮಾಜಿಕ ಬ್ಯಾಂಕಿನಿಂದ ನಮ್ಮ ಅರ್ಥವ್ಯವಸ್ಥೆಯ ಜಡವಲಯ ಚೈತನ್ಯದಾಯಕರಾಗಿ ಪರಿಣಮಿಸುತ್ತಿಲ್ಲ. ಫಲಾನುಭವಿಗಳು ಪಡೆದ ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯ ಪಡೆದಿಲ್ಲ. ಆ ಇಚ್ಛೆಯನ್ನೂ ಹೊಂದಿಲ್ಲ. ಇದರಿಂದ ನಷ್ಟದ ಕ್ಷೇತ್ರ ವಿಸ್ತರಿಸುತ್ತ ಹೋಗುತ್ತದೆ.

ನಾನಾ ವಲಯಗಳಿಂದ ಸಾಲ ವಸೂಲಾತಿ ಕುಗ್ಗಿದಂತೆ ಬ್ಯಾಂಕುಗಳ

ಸಂಪನ್ಮೂಲಗಳು ಕ್ಷೀಣಿಸುವುದು ಅನಿವಾರ್ಯ. ಠೇವಣಿಗಳನ್ನು ಗಮನಾರ್ಹವಾಗಿ ಹೆಚ್ಚಿಸುವುದೊಂದೇ ಉಪಾಯ. ಆದರೆ ಇತರ ವಲಯಗಳ ಸ್ಪರ್ಧೆಯಿಂದಾಗಿ ಠೇವಣಿಗಳು ಬೇಕೆನಿಸುವಷ್ಟು ಹೆಚ್ಚಲಾರವು, ಠೇವಣಿಗಳ ಮೇಲೆ ಬಡ್ಡಿ ಹೆಚ್ಚಿಸುವ ಅಧಿಕಾರ ಬ್ಯಾಂಕುಗಳಿಗೆ ಇಲ್ಲ. ಈಗಾಗಲೇ, ಬ್ಯಾಂಕುಗಳು ನೀಡುತ್ತಿರುವ ಬಡ್ಡಿ ದರಗಳು ಅವಕ್ಕೆ ಭಾರವಾಗಿವೆ. ಒಂದು ಕಾಲದಲ್ಲಿ ಹೆಚ್ಚು ಬಡ್ಡಿ ದರದ ನಿಡು ಅವಧಿ ಠೇವಣಿಗಳ ಪ್ರಮಾಣ ಕಡಿಮೆಯಿತ್ತು. 1969 ರಲ್ಲಿ ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯ – ಅಧಿಕ ಬಡ್ಡಿ ದರದ – ಠೇವಣಿಗಳ ಪ್ರಮಾಣ ಒಟ್ಟು ಠೇವಣಿಗಳ ಮೊಬಲಗಿನಲ್ಲಿ ಕೇವಲ ಶೇ 6.2ರಷ್ಟಿತ್ತು. 1981ರಲ್ಲಿ ಇದು 61.8%ಕ್ಕೆ ಏರಿತ್ತು. ಬ್ಯಾಂಕುಗಳ ಒಟ್ಟು ಠೇವಣಿಗಳಲ್ಲಿ ಅಧಿಕ ಬಡ್ಡಿ ದರಗಳ ಠೇವಣಿಗಳ ಭಾಗ ಹೆಚ್ಚಾಗಿದೆ ಎಂದು ಸುಖಮಯ ಚಕ್ರವರ್ತಿ ಸಮಿತಿಯ ವರದಿಯೂ ಹೇಳುತ್ತದೆ. ಆದ್ದರಿಂದ ಬ್ಯಾಂಕುಗಳು ಅಧಿಕ ಬಡ್ಡಿ ತರುವ, ಕಡಿಮೆ ಬಡ್ಡಿ ಪಡೆಯುವ ನಷ್ಟಜೀವಿಗಳಾಗಿ ಪರಿಣಮಿಸಿರುವುದರಲ್ಲಿ ಆಶ್ಚರ್ಯವಿಲ್ಲ.

ಆದ್ದರಿಂದ ಬ್ಯಾಂಕುಗಳು ಸಹಾಯಧನ ನೀಡುವ ಸಂಸ್ಥೆಗಳ ಪಾತ್ರ ವಹಿಸುವುದನ್ನು ನಿಯಂತ್ರಿಸಬೇಕು. ಎಂದರೆ ಸಾಮಾಜಿಕ ಬ್ಯಾಂಕಿಂಗ್ ಬೇಡವೆಂದಲ್ಲ. ಆದರೆ ಬ್ಯಾಂಕುಗಳು ಅಕ್ಷಯ ಪಾತ್ರೆಗಳಲ್ಲ. ಇವು ನೀಡುವ ಸಹಾಯಕ್ಕೆ ಆಕಾಶವೇ ಮಿತಿ ಎಂಬ ಕಲ್ಪನೆ ಅಪಾಯಕಾರಿ. ಬ್ಯಾಂಕುಗಳು ನೀಡುವ ಇಂಥ ಸಾಲಗಳಿಗೂ ಇವುಗಳು ಸಾರ್ಥಕತೆಗೂ ಮರುಪಾವತಿಗೂ ಸಂಬಂಧ ಏರ್ಪಡಬೇಕು. ಬ್ಯಾಂಕುಗಳು ದಾನ ಸಂಸ್ಥೆಗಳೆಂಬ ಭಾವನೆಯನ್ನು ಬೆಳಸಬಾರದು. ತಾನು ಮಾಡಿದ್ದಕ್ಕೆ ನಾನೇ ಹೊಣೆ ಎಂಬ ಭಾವನೆ ಬ್ಯಾಂಕರನಲ್ಲಿ ಬೆಳೆಯುವಂತೆ ಇಡೀ ವಾತಾವರಣವೇ, ವ್ಯವಸ್ಥೆಯೇ ಬದಲಾಗಬೇಕು. ಬ್ಯಾಂಕುಗಳು ಸರ್ಕಾರದ ಕೈಗೂಸುಗಳಾಗಬಾರದು. ಹವಣರಿತ, ಹೊಣೆಯರಿತ ಲೇಣಿ – ದೇಣಿ, ಸುಯೋಜಿತ ಪ್ರಗತಿ ಮತ್ತು ಬೆಳವಣಿಗೆ – ಇದು ಬ್ಯಾಂಕಿಂಗಿನ ತಾರಕವಾಕ್ಯವಾಗಬೇಕು.

ಗ್ರಾಮೀಣ ಠೇವಣ ಸಂಗ್ರಹಣೆ

ಗ್ರಾಮ ಪ್ರದೇಶಗಳಲ್ಲಿ ತೀವ್ರವಾಗಿ ತಮ್ಮ ಜಾಲಗಳನ್ನು ಹಬ್ಬಿಸಿಕೊಳ್ಳುತ್ತಿರುವ ಬ್ಯಾಂಕುಗಳು ಆ ಪ್ರದೇಶಗಳಲ್ಲಿ ವ್ಯಾಪಕವಾಗಿ ಸಾಲ ನೀಡಿಕೆಯಲ್ಲಿ ತೊಡಗಿರುವುದೇನೋ ಸರಿಯೆ. ಆದರೆ ಗ್ರಾಮ ಪ್ರದೇಶಗಳ ಜನರಲ್ಲಿ ಉಳಿತಾಯಪ್ರವೃತ್ತಿ ಬೆಳೆಸುವುದರಲ್ಲಿ, ಅವರ ಉಳಿತಾಯವನ್ನು ಸಂಗ್ರಹಿಸುವುದರಲ್ಲಿ ಅವುಗಳ ಪಾತ್ರವೇನು?

ಲೋಕಸಭೆಯ ಅಂದಾಜು ಸಮಿತಿ ಈ ಬಗ್ಗೆ ಮಾಡಿರುವ ಟೀಕೆಗಳು ಈ

ವಿಚಾರದ ಮೇಲೆ ಬೆಳಕು ಚೆಲ್ಲುತ್ತವೆ. ಅದರ ಟೀಕೆಗಳು ಮುಖ್ಯವಾಗಿ ಭಾರತೀಯ ಸ್ಟೇಟ್ ಬ್ಯಾಂಕಿನ ಠೇವಣಿ ಸಂಗ್ರಹಣೆಯ ಕಾರ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದವಾದರೂ ಎಲ್ಲ ಬ್ಯಾಂಕುಗಳಿಗೂ ಈ ಮಾತುಗಳು ಅನ್ವಯಿಸುತ್ತವೆ. ಠೇವಣಿ ಸಂಗ್ರಹಣೆಗಾಗಿ ಬ್ಯಾಂಕುಗಳು ಹೊಂದಿರುವ ಯೋಜನೆಗಳೆಲ್ಲ ಮುಖ್ಯವಾಗಿ ಪಟ್ಟಣಿಗ ಹಾಗೂ ಉನ್ನತ ವರ್ಗಗಳ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿದಂಥವು. ಗ್ರಾಮೀಣ ಜನಕ್ಕೆ ಹೊಂದು ವಂಥವು ಇಲ್ಲವೇ ಇಲ್ಲ ಎಂಬುದು ಸಮಿತಿಯ ಅಭಿಪ್ರಾಯ.

ರಿಸರ್ವ್ ಬ್ಯಾಂಕ್ ತನ್ನ ಹೊಣೆಯನ್ನು ಸರಿಯಾಗಿ ನಿರ್ವಹಿಸಿಲ್ಲ ಎನ್ನುತ್ತದೆ, ಸಮಿತಿ. ನೂರಕ್ಕೆ ಅರವತ್ತು ಬ್ಯಾಂಕ್ ಶಾಖೆಗಳನ್ನು ಗ್ರಾಮಪ್ರದೇಶದಲ್ಲಿ ತೆರೆಯುವಂತೆ ರಿಸರ್ವ್ ಬ್ಯಾಂಕ್ ಕ್ರಮತೆಗೆದುಕೊಂಡಿರುವುದೇನೋ ನಿಜ. ಆದರೆ ಶಾಖೆಗಳನ್ನು ತೆರೆಯುವದರಿಂದಲೇ ಉಳಿತಾಯ ಹಾಗೂ ಠೇವಣಿ ಸಂಗ್ರಹಣೆ ಸಾಧಿತವಾಗುವುದಿಲ್ಲ. ಉಳಿತಾಯ ಅನುಸ್ಥಾಪಿತ (ಸೇವಿಂಗ್ಸ್ ಓರಿಯೆಂಟೆಡ್), ನವೋನ್ಮೇಷ ಯೋಜನೆಗಳನ್ನು ಬ್ಯಾಂಕ್ ಶಾಖೆಗಳು ಜಾರಿಗೆ ಕೊಡಬೇಕು, ಸಾಕಷ್ಟು ಪ್ರಚಾರ ಮಾಡಬೇಕು. ಮನೆ ಮನೆಗೆ ಹೋಗಿ ಮನ ಒಲಿಸಬೇಕು. ರಿಸರ್ವ್ ಬ್ಯಾಂಕೂ ಸರ್ಕಾರದ ಹಣಕಾಸು ಇಲಾಖೆಯೂ ಇದಕ್ಕೆ ಗಮನ ನೀಡಬೇಕು ಎಂಬುದು ಸಮಿತಿಯ ಸಲಹೆ.

ಗ್ರಾಮ ಪ್ರದೇಶಗಳಲ್ಲಿ ಅಧಿಕ ಠೇವಣಿ ಸಂಗ್ರಹಣೆ ಆಗುತ್ತಿಲ್ಲವಷ್ಟೇ ಅಲ್ಲ, ಗ್ರಾಮೀಣ ಪ್ರದೇಶದಲ್ಲಿ ಉದರಿ – ಠೇವಣಿ ಅನುಪಾತ (ಕ್ರೆಡಿಟ್–ಡಿಪಾಸಿಟ್ ರೇಷಿಯೋ) ಇಳಿಯುತ್ತಿದೆಯೆಂಬುದನ್ನು ಅಂಕಿಗಳು ಸೂಚಿಸುತ್ತವೆ. ಭಾರತೀಯ ಸ್ಟೇಟ್ ಬ್ಯಾಂಕಿಗೆ ಸಂಬಂಧಿಸಿದಂತೆ 1980ರಲ್ಲಿ ಇದು 68.17 ಆಗಿತ್ತು. 1981ರಲ್ಲಿ 65.96ಕ್ಕೆ ಇಳಿಯಿತು. 1982, 1983 ಮತ್ತು 1984ರಲ್ಲಿ ಅನುಕ್ರಮವಾಗಿ 63.38; 62.67 ಮತ್ತು 61.37 ಆಯಿತು. ನಗರ ಪ್ರದೇಶಗಳಲ್ಲಿ ಇದು ಹೆಚ್ಚುತ್ತಿದೆ (100.90 ; 104.33; 115.34; 107.87; 100.07).

ಗ್ರಾಮಪ್ರದೇಶದಲ್ಲಿ ಉದರಿ ನೀಡಿಕೆ ಹೆಚ್ಚುತ್ತಿರುವುದರಿಂದಲೇ ಅಲ್ಲಿ ಉದರಿ – ಠೇವಣಿ ಅನುಪಾತ ಇಳಿಯುತ್ತಿದೆಯೆಂಬುದನ್ನು ಸಮಿತಿ ಒಪ್ಪುವುದಿಲ್ಲ, ಬ್ಯಾಂಕು ಠೇವಣಿ ಸಂಗ್ರಹಣೆಗೆ ಸಮರ್ಪಕ ಅಧೋರಚನೆಯ ನಿರ್ಮಾಣ, ಪ್ರಚಾರ, ಕೈಗಾರಿಕೆಗಳ – ಮುಖ್ಯವಾಗಿ ಕೃಷಿ ಆಧಾರಿತ ಕೈಗಾರಿಕೆಗಳ – ಸ್ಥಾಪನೆ, ಸಾಲ ಪಡೆಯುವ ಪ್ರತಿಯೊಬ್ಬನೂ ಅಂತಿಮವಾಗಿ ಬ್ಯಾಂಕಿನ ನೈಜ ಠೇವಣಿದಾರನಾಗುವಂತೆ ಕ್ರಮ – ಇಂಥ ನಾನಾ ಸಲಹೆಗಳನ್ನು ಸಮಿತಿ ನೀಡಿದೆ. ಬ್ಯಾಂಕುಗಳ ಪರಿಶೀಲನೆಗೆ ಅರ್ಹವಾದ ಸಲಹೆಗಳು ಇವು.

12.

ಸೆಪ್ಟೆಂಬರ್ 1986
ಗ್ರಾಮೀಣ ಬ್ಯಾಂಕುಗಳ ಭವಿಷ್ಯ

ಈ ವರ್ಷದ ಜುಲೈ 21 ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಇತಿಹಾಸದಲ್ಲಿ ಮಹತ್ವದ ದಿನ. ಇನ್ನು ಎರಡು ವರ್ಷಗಳಲ್ಲಿ ಅಮೃತ ಮಹೋತ್ಸವವನ್ನಾಚರಿಸಲಿರುವ ಈ ಹಳೆಯ ಬ್ಯಾಂಕು ಕನ್ನಡದ ನೆಲದಲ್ಲಿ ಹುಟ್ಟಿ ಬೆಳೆದದ್ದು. ಆಗಿನ ಮೈಸೂರು ಸಂಸ್ಥಾನದ ಸರ್ಕಾರದ ಆಸಕ್ತಿಯಿಂದಾಗಿ ಜನ್ಮತಳೆದ, ರಾಜ್ಯದ ಮಹಾಜನರ ನೆಚ್ಚಿನ ಕೂಸಾಗಿ ವರ್ಧಿಸಿದ ಮೈಸೂರು ಬ್ಯಾಂಕು ಅನೇಕ ವಿಚಾರಗಳಲ್ಲಿ ವೈಶಿಷ್ಟ್ಯ ಮೆರೆದಿದೆ. ಭಾರತೀಯ ಸ್ಟೇಟ್ ಬ್ಯಾಂಕಿನ ಸಹವರ್ತಿ ಬ್ಯಾಂಕಾಗಿ ಪರಿವರ್ತನೆಗೊಂಡು ಗ್ರಾಮಪ್ರದೇಶದ ಅಭಿವೃದ್ಧಿಗಾಗಿ ವ್ಯಾಪಕ ಶಾಖಾಜಾಲವನ್ನು ಹಬ್ಬಿಸಿಕೊಂಡಿರುವ ಈ ಬ್ಯಾಂಕು ಜನಸಾಮಾನ್ಯರೊಂದಿಗೆ ವ್ಯವಹಾರ ನಡೆಸಲು ಜನಸಾಮಾನ್ಯರ ಭಾಷೆಯನ್ನೇ ಬಳಸಬೇಕೆಂಬ ಅನಿವಾರ್ಯ ಸತ್ಯವನ್ನು ಮನಗಂಡಿದೆ. ಬ್ಯಾಂಕು ಇದನ್ನು ಅಧಿಕೃತವಾಗಿ ಮಾನ್ಯ ಮಾಡುತ್ತಿದೆಯೋ ಎಂಬಂತೆ ಅದರ ವ್ಯವಹಾರದಲ್ಲಿ ಬಳಸುವ ನಮೂನೆಗಳೇ ಮುಂತಾದವನ್ನೂ ನಿಯಮ ನಿಬಂಧನೆಗಳನ್ನೂ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಕ್ರಮ ತೆಗೆದುಕೊಳ್ಳುತ್ತಿದೆ. ಇದಕ್ಕಾಗಿ ಈ ಜುಲೈ 21ರಂದು ಅನುವಾದ ಕಮ್ಮಟವನ್ನು ಸಂಘಟಿಸಿದ್ದು ತುಂಬ ಸಂತೋಷದ ಸಂಗತಿ. ಸಮನ್ವಯ ಸಮಿತಿಯ ಆಶ್ರಯದಲ್ಲಿ ಪ್ರತಿ ಆರು ತಿಂಗಳುಗಳಿಗೆ ಒಮ್ಮೆ ನಡೆಸಲಾಗುತ್ತಿರುವ ಬ್ಯಾಂಕಿಂಗ್ ಕಮ್ಮಟದಲ್ಲಿ ಭಾಗವಹಿಸಿದ, ಮೈಸೂರು ಬ್ಯಾಂಕಿನ ಉದ್ಯೋಗಿಗಳಾದ, ಅನುಭವಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಈ ಕಮ್ಮಟ ಹತ್ತು ದಿನಗಳ ಕಾಲ ನಡೆಯಿತು. ಬ್ಯಾಂಕಿನ ಸಣ್ಣ ವ್ಯವಹಾರ ಹಣಕಾಸು ಕೈಪಿಡಿಯನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸುವ ಕಾರ್ಯವನ್ನು ಈ ಕಮ್ಮಟ ಕೈಗೊಂಡಿತ್ತು. ಕ್ರಮೇಣ ಇತರ ಪ್ರಮುಖ ಕೈಪಿಡಿಗಳನ್ನೂ ನಿಯಮ ನಿಬಂಧನೆಗಳೇ ಮುಂತಾದವನ್ನೂ ಕರಾರುಗಳ ನಮೂನೆಗಳನ್ನೂ ಕನ್ನಡಿಸಬೇಕೆಂಬುದು ಬ್ಯಾಂಕಿನ ಉದ್ದೇಶ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರುಗಳಾದ ಶ್ರೀ ಎಸ್. ರಾಜಗೋಪಾಲ್, ಶ್ರೀ ಹಾ.ಗು, ಬಾಲಗೋಪಾಲ್, ಸಣ್ಣ ಕೈಗಾರಿಕೆ ಮತ್ತು ಉದ್ದಿಮೆ ಅಭಿವೃದ್ಧಿ ವ್ಯವಸ್ಥಾಪಕರಾದ ಶ್ರೀ ಎಸ್. ಎನ್. ಬಾಲಸುಬ್ರಹ್ಮಣ್ಯಂ, ಅಧಿಕೃತ ಭಾಷೆಗಳ ಅಧಿಕಾರಿ ಶ್ರೀ ಎನ್. ಎಸ್. ಮೃತ್ಯುಂಜಯ ಅವರೂ ಇತರ ಅಧಿಕಾರಿಗಳೂ ಕಮ್ಮಟದಲ್ಲಿ ಪಾಲ್ಗೊಂಡ ಎಲ್ಲರೂ ಅಭಿನಂದನಾರ್ಹರು. ಬ್ಯಾಂಕಿಂಗನ್ನು ಜನಸಾಮಾನ್ಯರ ಬಳಿಗೆ ಕೊಂಡೊಯ್ಯುವ ಕಾರ್ಯ ಯಶಸ್ವಿಯಾಗಬೇಕಾದರೆ ಜನಸಾಮಾನ್ಯರ ಭಾಷೆಯನ್ನೇ ಬಳಸಬೇಕು ಎಂಬುದನ್ನು ಇನ್ನು ಮುಂದಾದರೂ ನಮ್ಮ ಎಲ್ಲ

ಬ್ಯಾಂಕುಗಳೂ ಮನಗಾಣಬೇಕು. ಇದು ಭಾಷಾ ದುರಭಿಮಾನದ ವಿಚಾರವಲ್ಲ, ಬ್ಯಾಂಕುಗಳು ಮಾಡುತ್ತಿರುವ ಕಾರ್ಯದ ಸಾರ್ಥಕತೆಯ ಪ್ರಶ್ನೆ.

ನೆರವಿನ ಸಾರ್ಥಕತೆ

ಸರ್ಕಾರ ಹಮ್ಮಿಕೊಂಡಿರುವ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನದಲ್ಲಿ ನಮ್ಮ ಬ್ಯಾಂಕುಗಳ ಹೊಣೆ ಸಾಮಾನ್ಯವಾದ್ದಲ್ಲ. ಗುರುತಿಸಲಾದ ಫಲಾನುಭವಿಗಳಿಗೆ ಅಗತ್ಯ ಧನಸಹಾಯ ನೀಡುವುದರ ಜೊತೆಗೆ ಆ ಸಹಾಯ ನಿಜಕ್ಕೂ ಪರಿಣಾಮಕಾರಿಯಾಗಿದೆಯೆಂಬುದನ್ನು ನೋಡಿಕೊಳ್ಳುವುದುಕೂಡ ಅವುಗಳ ಜವಾಬ್ದಾರಿ, ಗ್ರಾಮೀಣ ಅಭಿವೃದ್ಧಿ ಕಾರ್ಯ ನಿರ್ವಹಣೆಗಾಗಿ ಸ್ಥಳೀಯ ಹಂತದಲ್ಲಿ ಸರ್ಕಾರ ನಿರ್ಮಿಸಿರುವ ವಿವಿಧ ಪ್ರಾಧಿಕಾರಗಳೊಡನೆ ಸಹಯೋಗ ಸ್ಥಾಪಿಸುವುದೂ ಅದರ ಕರ್ತವ್ಯ. ಆದರೆ ಈ ಕಾರ್ಯಕ್ರಮದ ನಿರ್ವಹಣೆಯಲ್ಲಿ ಅನೇಕ ಲೋಪದೋಷಗಳಿವೆಯೆಂಬುದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ. ಬಡತನದ ರೇಖೆಯ ಕೆಳಗಿರುವ ಕುಟುಂಬಗಳನ್ನು ಮೇಲಕ್ಕೆತ್ತುವ ಕಾರ್ಯ ಅಷ್ಟೇನೂ ಯಶಸ್ವಿಯಾಗಿಲ್ಲ. ಅರ್ಹ ಫಲಾನುಭವಿಗಳನ್ನು ಗುರುತಿಸುವ ಕಾರ್ಯದಿಂದ ಹಿಡಿದು ಕೊನೆಯ ಘಟ್ಟದವರೆಗೆ ಉದ್ದಕ್ಕೂ ದೋಷಗಳನ್ನು ಕಾಣಬಹುದು. ಕೊಟ್ಟ ಹಣದ ಮರುಪಾವತಿಯೂ ಸಮರ್ಪಕವಾಗಿಲ್ಲ. ಮರುಪಾವತಿಯ ಸಾಮರ್ಥ್ಯವೇ ಅನೇಕರಿಗೆ ಬಂದಿರುವುದಿಲ್ಲ. ಅರ್ಹ ಫಲಾನುಭವಿಗಳಿಗೆ ನೆರವು ನೀಡದಿರುವುದೂ, ನೆರವು ಪಡೆದವರಿಗಾಗಿ ಆರಿಸಲಾದ ಪರಿಯೋಜನೆಗಳು ಕಾರ್ಯಸಾಧ್ಯವಾಗದಿರುವುದೂ ಕಾರಣಗಳು. ಈ ಕಾರ್ಯಕ್ರಮದ ಮೌಲ್ಯ ಮಾಪನ ಮಾಡಿದ ಸಂಸ್ಥೆಯ ಸಲಹೆಯ ಪ್ರಕಾರ ನೆರವಿನ ಮೊಬಲಗನ್ನು ಏರಿಸಲು ಸರ್ಕಾರ ತೀರ್ಮಾನಿಸಿತು. ಏಳನೆಯ ಯೋಜನೆಯಲ್ಲಿ ಇದು ಪ್ರತಿ ಕುಟುಂಬಕ್ಕೆ ರೂ. 6,000ಕ್ಕೆ ಏರಿದೆ. ಆರನೆಯ ಯೋಜನೆಯ ಅಡಿಯಲ್ಲಿ ನೆರವು ಪಡೆದ ಕುಟುಂಬಗಳು ನಿರೀಕ್ಷಿತ ಮಟ್ಟಕ್ಕೆ ಮೇಲೇರದಿದ್ದಲ್ಲಿ ಅಂಥ ಕುಟುಂಬಗಳಿಗೆ ಚೈತನ್ಯ ದೊರಕಿಸಿಕೊಡಲು ಇನ್ನಷ್ಟು, ಸಹಾಯ ನೀಡಬೇಕೆಂದೂ ತೀರ್ಮಾನಿಸಲಾಗಿದೆ.

ಈಗ ರಿಸರ್ವ್ ಬ್ಯಾಂಕು ದೇಶದ ವಾಣಿಜ್ಯ ಬ್ಯಾಂಕುಗಳಿಗೆ ಈ ಬಗ್ಗೆ ಇನ್ನಷ್ಟು ಸೂಚನೆಗಳನ್ನು ನೀಡಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ನೆರವಿಗಾಗಿ ಬರುವ ಅರ್ಜಿಗಳನ್ನು ಶೀಘ್ರವಾಗಿ ಸಾಮಾನ್ಯವಾಗಿ ಹದಿನೈದು ದಿನಗಳಲ್ಲಿ ಇತ್ಯರ್ಥ ಮಾಡಬೇಕೆಂದು ಅದು ತಿಳಿಸಿದೆ. ಸಾಧ್ಯವಾಗದಿದ್ದರೆ ಕಾರಣಗಳನ್ನು ತಿಳಿಸಬೇಕು. ಕಾರ್ಯಕ್ರಮದ ಅಡಿಯಲ್ಲಿ

ಅಗತ್ಯವಿರುವ ಯಾವುದೇ ಸಲಕರಣೆ ಇತ್ಯಾದಿಗಳನ್ನು ಕೊಳ್ಳಲು ಫಲಾನುಭವಿಗಳಿಗೆ ಆಯ್ಕೆಯ ಸ್ವಾತಂತ್ರ್ಯವಿರಬೇಕು. ಹಣದ ಬದಲು ಅವನ್ನು ನೇರವಾಗಿ ಒದಗಿಸುವ ಕಡ್ಡಾಯ ಇರಬಾರದು. ಈ ಎಲ್ಲ ನಿಯಮಗಳು ಸ್ವಾಗತಾರ್ಹವೇ. ಆದರೆ ಯಾವುದೇ ಕಾರ್ಯಕ್ರಮದ ಅಡಿಯಲ್ಲಿ ನೀಡುವ ನೆರವು ಯಾವ ಸ್ವರೂಪದ್ದಾಗಿರಬೇಕೆಂದರೆ, ಅದನ್ನು ಪಡೆದವನು ಆದಷ್ಟು ಬೇಗ ಅದರಿಂದ ಬಿಡುಗಡೆ ಹೊಂದಿ ಸ್ವಾವಲಂಬಿಯಾಗುವಂಥ ಶಕ್ತಿ ದೊರಕಿಸಿಕೊಡುವಂತಿರಬೇಕು. ಇದನ್ನು ಕಾರ್ಯಗತಗೊಳಿಸುವುದು ಹೇಳುವಷ್ಟು ಸುಲಭವಲ್ಲ ಎಂಬುದು ನಿಜ. ಆದರೆ ಇದರ ಅರಿವು ಸದಾ ಇರಬೇಕಲ್ಲದೆ, ಇದನ್ನು ಸಾಧಿಸಲು ಅಗತ್ಯವಾದ ವ್ಯವಸ್ಥೆಯ ರಚನೆಗೆ ಆದ್ಯಗಮನ ನೀಡುವುದು ಅಗತ್ಯ. ಇಲ್ಲದಿದ್ದರೆ ನೀಡುವ ನೆರವೆಲ್ಲ ಮರಳುಗಾಡಿನಲ್ಲಿ ಹರಿಯುವ ನದಿಯಂತೆ ಬತ್ತಿ ಹೋಗುತ್ತದೆ.

ವಸೂಲಿ ಮೇಳ

ನಾವೆಲ್ಲರೂ ಸಾಲ ಮೇಳಗಳ ಪರಿಚಯ ಹೊಂದಿದವರಾಗಿದ್ದೇವೆ.

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳ ಮುಂಬರವಿಗಾಗಿ ಸಾಮಾಜಿಕವಾಗಿ ಸಾಲ ವಿತರಣೆ ಮಾಡುವುದರ ಪೂರ್ವಾಪರ ವಾದಗಳೇನೇ ಇರಲಿ, ಇದು ಈಗ ಒಂದು ಪದ್ಧತಿಯಾಗಿ ಪರಿಣಮಿಸಿದೆ. ಅಲಹಾಬಾದ್ ಬ್ಯಾಂಕು ಪಶ್ಚಿಮ ಬಂಗಾಲದಲ್ಲಿ ಸಾಲ ವಸೂಲಿ ಮೇಳಗಳನ್ನು ಸಂಘಟಿಸಿದ ಸುದ್ದಿಯ ನೋದಿದ ಅನೇಕರಿಗೆ ಆಶ್ಚರ್ಯವಾಗದೆ ಇದ್ದಿರಲಾರದು, ಸಾಲ ನೀಡುವನೆಂದರೆ ಜನರು ಇರುವೆಗಳಂತೆ ಮುತ್ತುವುದು ಸಹಜ. ಆದರೆ ಸಾಮೂಹಿಕವಾಗಿ ವಸೂಲಿ ಸಮಾರಂಭಗಳನ್ನು ಏರ್ಪಡಿಸುವುದಾದರೂ ಹೇಗೆ ? 'ಸಾಲವನು ಕೊಂಬಾಗ ಹಾಲೋಗರುಂಡಂತೆ ಎಂಬ ಸರ್ವಜ್ಞನ ಮಾತನ್ನು ಸಾಲಮೇಳಗಳು ಸಮರ್ಥಿಸುತ್ತವೆ. 'ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತ ಎಂದೂ ಸರ್ವಜ್ಞ ಹೇಳುತ್ತಾನೆ. ಆದರೆ ಬ್ಯಾಂಕುಗಳು ಕೊಟ್ಟ ಸಾಲಗಳ ವಸೂಲಾತಿ ಎಷ್ಟು ಅಸಮರ್ಪಕವಾಗಿದೆಯೆಂಬುದನ್ನು ನೋಡಿದಾಗ ಇಂಥ ಮೇಳಗಳ ಅಗತ್ಯ ಎದ್ದು ತೋರುತ್ತದೆ. ಭಾರತದಲ್ಲಿ ಹೆಚ್ಚು ಕಡಿಮೆ ಎಲ್ಲ ಬ್ಯಾಂಕುಗಳೂ ತಾವು ನೀಡಿದ ಸಾಲಗಳ ವಸೂಲಾತಿಯ ವಿಚಾರದಲ್ಲಿ ಬಹಳ ಹಿಂದೆ ಬಿದ್ದಿವೆ. ಕೋಟ್ಯಂತರ ರೂಪಾಯಿಗಳು ಕಟಬಾಕಿಗಳಾಗಿವೆ. ಬ್ಯಾಂಕಿನ ಅಂಕಿಗಳ ಪ್ರಕಾರ 1983ರ ಜೂನ್‌ನಿಂದ 1894ರ ಜೂನ್ ವರೆಗಿನ ಅವಧಿಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಕೃಷಿಸಾಲಗಳ ವಸೂಲಾತಿ ಶೇ. 53.2ರಿಂದ ಶೇ. 51.3ಕ್ಕೆ ಇಳಿದಿದೆ. ದುರ್ಬಲ ವರ್ಗಗಳವರೇ ಅಲ್ಲದೆ, ತಕ್ಕಮಟ್ಟಿನ ಅನುಕೂಲಸ್ತರು ಕೂಡ

ಕಟಬಾಕಿದಾರರಾಗಿದ್ದಾರೆ. ರೈತರು, ವ್ಯಾಪಾರಿಗಳು, ಸಾರಿಗೆ ಪರಿಚಾಲಕರು, ಕೈಗಾರಿಕೋದ್ಯಮಿಗಳು ಎಲ್ಲರೂ ಬಾಕಿದಾರರಾಗಿದ್ದಾರೆ. ಇಡೀ ಬ್ಯಾಂಕಿಂಗ್ ವಲಯ ನೀಡಿರುವ ಸಾಲಗಳಲ್ಲಿ ಶೇ. 54ರಷ್ಟು ವಸೂಲಾಗದೆ ಉಳಿದಿದೆ. ಅದ್ಯತಾ ವಲಯಕ್ಕೆ ನೀಡಿದ ಸಾಲಗಳು ಮಾತ್ರ ವಸೂಲಾಗುತ್ತಿಲ್ಲವೆಂದು ಹೇಳುವಂತಿಲ್ಲ. 1984ರ ಅಂತ್ಯದಲ್ಲಿ ರೂ. 1 ಲಕ್ಷ ಮತ್ತು ಅದಕ್ಕೂ ಹೆಚ್ಚಿನ ಉದರಿ ಸೌಲಭ್ಯ ಪಡೆದ 544 ದೊಡ್ಡ ಕೈಗಾರಿಕಾ ಘಟಕಗಳಿಂದ ಬರಬೇಕಾಗಿದ್ದ ಬಾಕಿ ರೂ, 2,340 ಕೋಟಿ. ಇದು ಒಟ್ಟು ಬ್ಯಾಂಕ್ ಉದರಿಯ ಶೇ. 6ರಷ್ಟು. ಆದ್ದರಿಂದ ಬಾಕಿ ವಸೂಲಾತಿಯ ಸಮಸ್ಯೆ ಕೇವಲ ದುರ್ಬಲವರ್ಗಗಳಿಗೆ ಅನ್ವಯಿಸುವುದಲ್ಲ, ಇಡೀ ಅರ್ಥವ್ಯವಸ್ಥೆಗೆ ಅಂಟಿದ ವ್ಯಾಧಿಯಿದು ಎಂಬುದು ಸ್ಪಷ್ಟ. ಬಹುಮುಖವಾದ ಉಪಾಯಗಳನ್ನು ರೂಪಿಸಿ ಈ ಸಮಸ್ಯೆಯನ್ನು ಪರಿಹರಿಸದಿದ್ದರೆ ಬ್ಯಾಂಕುಗಳ ದುಡಿಯುವ ಬಂಡವಾಳದ ಹರಿವಿಗೆ ಕಡಿತ ಉಂಟಾಗಿ ಬೆಳವಣಿಗೆಗೆ ಧಕ್ಕೆ ಉಂಟಾಗಬಹುದು.

ಬಾಕಿದಾರರ ವಿರುದ್ಧ ತೀವ್ರಕ್ರಮ ತೆಗೆದುಕೊಂಡು ಹಣ ವಸೂಲಿ ಮಾಡಲು ಸಾಧ್ಯವಾಗುವಂತೆ ವಿಶೇಷ ಮಂಡಲಿಯ ಸ್ಥಾಪನೆಗಾಗಿ ಕೇಂದ್ರ ಸರ್ಕಾರ ಶಾಸನ ಮಾಡಬೇಕೆಂಬುದು ಭಾರತೀಯ ಬ್ಯಾಂಕುಗಳ ಸಂಘದ ಅಪೇಕ್ಷೆ, ಈಗ ಪ್ರತಿ ಬ್ಯಾಂಕಿಗೂ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ 20 ಸಾವಿರದಿಂದ 25 ಸಾವಿರದವರೆಗೆ ವ್ಯಾಜ್ಯಗಳು ಇತ್ಯರ್ಥಕ್ಕಾಗಿ ಕಾದಿವೆಯೆಂದು ಈ ಸಂಘದ ಅಧ್ಯಕ್ಷರು ಹೇಳಿದ್ದಾರೆ. ನಮ್ಮ ಸಿವಿಲ್ ನ್ಯಾಯಾಲಯಗಳು ಸದ್ಯದ ಪರಿಸ್ಥಿತಿಯಲ್ಲಿ ಇವನ್ನೆಲ್ಲ ಶೀಘ್ರವಾಗಿ ಇತ್ಯರ್ಥ ಮಾಡಲಾರವು. ನ್ಯಾಯಾಲಯಕ್ಕೆ ಹೋದ ಪ್ರಕರಣಗಳ ತೀರ್ಮಾನ ತಡವಾಗುವುದೆಂಬ ಅಂಶವೂ ಸಾಲಗಾರರು ಉದ್ದೇಶಪೂರ್ವಕವಾಗಿ ಬಾಕಿದಾರರಾಗಲು ಒಂದು ಕಾರಣ. ಕೇಂದ್ರ ಸರ್ಕಾರ ಈ ಬಗ್ಗೆ ತರುವ ಶಾಸನದ ಸ್ವರೂಪವೇನು ಎಂಬುದನ್ನು ಊಹಿಸುವುದು ಕಷ್ಟ. ಕೇಂದ್ರದ ಕ್ರಮಕ್ಕೆ ಕಾಯದೆ, ಬ್ಯಾಂಕುಗಳೇ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ. ಅವು ಇನ್ನು ಮುಂದೆ ನೀಡುವ ಸಾಲಗಳು ಕಟ ಬಾಕಿಯಾಗದಂತೆ ನೋಡಿಕೊಳ್ಳಬೇಕು; ತಮ್ಮ ಸಾಲ ನೀಡಿಕೆಯ ಪ್ರಕ್ರಿಯೆಗಳನ್ನು ಸುಧಾರಿಸಬೇಕು; ನೀಡಿದ ಉದರಿಯ ಪರಿವೀಕ್ಷಣೆ ನಡೆಸಬೇಕು; ಉದರಿಯನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಅದಕ್ಕೇ ಬಳಸಲಾಗಿದೆಯೆಂದು ಖಾತರಿ ಮಾಡಿಕೊಳ್ಳಬೇಕು. ಸಾಲಗಾರರಲ್ಲಿ ಯಾವುದೇ ಆಲಸ್ಯಪ್ರವೃತ್ತಿ ಉಂಟಾಗದಂತೆ ಮಾಡಬೇಕು. ಇದಕ್ಕೆಲ್ಲ ಬ್ಯಾಂಕಿನ ಸಿಬ್ಬಂದಿಗೆ ಯುಕ್ತವಾದ ತರಬೇತಿ, ಅನುಭವ ಇರಬೇಕು. ವ್ಯವಸ್ಥೆಯನ್ನೇ ಪುನರ್ರೂಪಿಸಿಬೇಕು. ಬ್ಯಾಂಕುಗಳು ಈ ನಿಟ್ಟಿನಲ್ಲಿ ಚಿಂತೆ

ಹರಿಸುತ್ತಿಲ್ಲವೆಂಬುದು ನಿರ್ವಿವಾದ. ಸಾಲ ಮೇಳಗಳಿಂದ ಮುಂಗಡ ನೀಡಿಕೆಯ ವಿಳಂಬ ವಿಧಾನಗಳು ಸುಧಾರಣೆಗೊಳ್ಳುತ್ತವೆಯಾದರೆ, ವಸೂಲಿ ಮೇಳಗಳು ಮರುಪಾವತಿಗೆ ಒತ್ತುಕೊಡುತ್ತವೆ. ಯಾವುದೇ ಮೇಳ ರಾಜಕೀಯ ಸಂಬಂಧ ಉಳ್ಳದ್ದಾದಾಗ ಅದರ ಉದ್ದೇಶ ಕಲುಷಿತಗೊಳ್ಳುತ್ತದೆ. ವಸೂಲಿಯಲ್ಲಿ ರಾಜ್ಯ ಸರ್ಕಾರಗಳೂ ಹೆಚ್ಚು ಹೆಚ್ಚಾಗಿ ಸಹಾಯ ನೀಡಬೇಕಾದರೆ ಸಾಲ ನೀಡಿಕೆಯಲ್ಲೂ ಅವುಗಳ ಪಾತ್ರ ಇರಬೇಕಾಗುತ್ತದೆ. ದೋಷದೂರವಾದ, ಶುದ್ಧ ಬ್ಯಾಂಕಿಂಗ್ ಸೂತ್ರಗಳಿಗೆ ಬದ್ಧವಾದ, ಆದರೆ ವಿಳಂಬಕ್ಕೆ ಒಳಗಾಗದ ಉದರಿ ನೀಡಿಕೆ ಸೂತ್ರಗಳ ರೂಪಣೆಗೆ ಕಾಲ ಪಕ್ವವಾಗಿದೆ.

ಗ್ರಾಮೀಣ ಬ್ಯಾಂಕುಗಳ ಭವಿಷ್ಯ

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಅವುಗಳ ಪ್ರಾಯೋಜಕ ಬ್ಯಾಂಕುಗಳಲ್ಲಿ ವಿಲೀನಗೊಳಿಸಬೇಕೆಂಬುದಾಗಿ ರಿಸರ್ವ್ ಬ್ಯಾಂಕ್ ಸಲಹೆ ನೀಡಿದೆಯೆಂದು ಈಚೆಗೆ ವರದಿಯಾಗಿತ್ತು. ಕೇಂದ್ರ ಹಣ ಕಾಸು ಮಂತ್ರಿ ಹೀಗೆಂದು ಹೇಳಿದರೆಂದು ಸುದ್ದಿ.

ಕೂಡಲೇ ಈ ಬಗ್ಗೆ ವಿಶೇಷವಾದ ಆತಂಕ ವ್ಯಕ್ತಗೊಂಡಿತು, ಬಡಜನರ ಬ್ಯಾಂಕುಗಳೆನಿಸಿದ ಈ ಸಂಸ್ಥೆಗಳನ್ನು ಮುಚ್ಚಬಾರದೆಂದು ನಮ್ಮ ರಾಜ್ಯ ಸರ್ಕಾರ ಹೇಳಿತು. ಗ್ರಾಮೀಣ ಬ್ಯಾಂಕುಗಳನ್ನು ಮುಚ್ಚುವುದಾದರೆ ಅವನ್ನು ಪ್ರಾರಂಭಮಾಡಿದ್ದಾದರೂ ಏಕೆ ಎಂದು ಅನೇಕರು ಪ್ರಶ್ನಿಸಿದರು. ಗ್ರಾಮೀಣ ಬ್ಯಾಂಕುಗಳು ಲಾಭಪ್ರದವಾಗಿ ಕೆಲಸ ಮಾಡುತ್ತಿಲ್ಲವೆಂಬುದು ನಿಜ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಯೋಜನೆ ಜಾರಿಗೆ ಬಂದದ್ದು 1975ರಲ್ಲಿ. ವಾಣಿಜ್ಯ ಬ್ಯಾಂಕುಗಳು, ರಾಜ್ಯ ಸರ್ಕಾರಗಳು, ನಬಾರ್ಡ್ (ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ಇವುಗಳ ಬಂಡವಾಳದೊಂದಿಗೆ ಸ್ಥಾಪಿತವಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಂಖ್ಯೆ 183. ಇವುಗಳ ಕಲಾಪಗಳು 322 ಜಿಲ್ಲೆಗಳಲ್ಲಿ ಹಬ್ಬಿವೆ. ಈ ಬ್ಯಾಂಕುಗಳ ಕಛೇರಿಗಳು ಒಟ್ಟು ಸುಮಾರು 12,000. ಇವುಗಳ ಒಟ್ಟು ಠೇವಣಿ ರೂ. 1,100 ಕೋಟಿ. ಮುಂಗಡಗಳು ರೂ. 1,300 ಕೋಟಿ. ಸ್ಥಳೀಯ ಸಮಸ್ಯೆಗಳ ಪರಿಚಯ, ವಾಣಿಜ್ಯ ಬ್ಯಾಂಕುಗಳ ಸಂಘಟನಾಬಲ ಹಾಗೂ ಕೌಶಲ ಇವನ್ನು ಒಂದುಗೂಡಿಸುವ ಉದ್ದೇಶದಿಂದ ಸ್ಥಾಪಿತವಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದೇನೋ ನಿಜ. 1984ರ ಅಂತ್ಯದ ವೇಳೆಗೆ ಈ ಬ್ಯಾಂಕುಗಳ ಒಟ್ಟು ನಷ್ಟ ರೂ. 155 ಕೋಟಿ, ಅನೇಕ ಬ್ಯಾಂಕುಗಳ ಬಂಡವಾಳವನ್ನೇ ಅವುಗಳ ನಷ್ಟ ನುಂಗಿಬಿಟ್ಟಿದೆ. ಬಹುತೇಕ ಎಲ್ಲ ಬ್ಯಾಂಕುಗಳೂ ನಷ್ಟದ ಹಾದಿ ಹಿಡಿದಿವೆ. 58 ಬ್ಯಾಂಕುಗಳು ಮಾತ್ರ ರೂ. 20,000ದಿಂದ ರೂ. 21 ಲಕ್ಷದವರೆಗೆ

ಲಾಭಗಳಿಸಿವೆ. ಅಷ್ಟಿಷ್ಟು ಠೇವಣಿ ಸಂಗ್ರಹಣೆಯಾಗಿದ್ದರೂ ಈ ನಿಟ್ಟಿನಲ್ಲಿ ಸಾಧಿಸಬಹುದಾದ್ದು ತುಂಬ ಇದೆ. ಸಣ್ಣ ಮತ್ತು ಅಂಚಿನ ರೈತರ ಭೂಹೀನರ ಸ್ಥಿತಿ ಸುಧಾರಣೆಗಾಗಿ ಸ್ಥಾಪಿತವಾದ ಈ ಬ್ಯಾಂಕುಗಳಿಂದ ಅವರ ಸ್ಥಿತಿಯ ಸುಧಾರಣೆ ಅಷ್ಟೇನೂ ಆಗಿಲ್ಲ. ಅವುಗಳ ಸಾಲ ವಸೂಲಿ ಅಸಮರ್ಪಕ. ಈ ಪ್ರಮಾಣ ಅರ್ಧಕ್ಕಿಂತ ಕಡಿಮೆ

ಇವು ಸ್ಥಳೀಯ ಪರಿಸರಕ್ಕೆ ಹೊಂದಿಕೊಂಡು ಕೆಲಸಮಾಡುವ ಪರಿಸ್ಥಿತಿ ಇನ್ನೂ ಬಂದಿಲ್ಲ. ಸಿಬ್ಬಂದಿಯವರು ಬಹುತೇಕ ನಗರ ದೃಷ್ಟಿಯವರು. ಗ್ರಾಮೀಣ ಅನುಸ್ಥಾಪನೆ ಆಗಿಲ್ಲ. ಇತರ ಬ್ಯಾಂಕುಗಳ ಸಿಬ್ಬಂದಿಯ ಮಟ್ಟದ ಸಂಬಳ ಸಾರಿಗೆ ಸವಲತ್ತು ಸೌಲಭ್ಯ ತಮಗೆ ಇಲ್ಲವೆಂಬ ಅತೃಪ್ತಿ ಅವರಿಗೆ ಇದ್ದೇ ಇದೆ. ಅನೇಕ ಬ್ಯಾಂಕುಗಳ ನಿರ್ವಹಣೆಯ ವೆಚ್ಚ ಏರುತ್ತಲೇ ಇದೆ. ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಶಾಖೆಗಳು ಈ ಬ್ಯಾಂಕುಗಳೊಂದಿಗೆ ಸ್ಪರ್ಧಿಸುತ್ತಿವೆ. ವಾಣಿಜ್ಯ ಬ್ಯಾಂಕುಗಳು ಮಾಡುವ ಎಷ್ಟೋ ವಹಿವಾಟುಗಳನ್ನು ಇವು ಮಾಡಲಾರವು. ಹೀಗಾಗಿ ಗ್ರಾಮೀಣ ಬ್ಯಾಂಕುಗಳು ಮಲತಾಯಿ ಮಕ್ಕಳಂತೆ ಬಡವಾಗಿವೆ.

ಆದರೆ ಇವನ್ನು ಮುಚ್ಚುವುದರಿಂದ ಅಥವಾ ಪ್ರಾಯೋಜಕ ಬ್ಯಾಂಕುಗಳಲ್ಲಿ ಇವನ್ನು ವಿಲೀನಗೊಳಿಸುವುದರಿಂದ ಸಮಸ್ಯೆಯ ಪರಿಹಾರವಾಗದು. ಗ್ರಾಮೀಣ ಬ್ಯಾಂಕುಗಳ ಕಾರ್ಯಸ್ವರೂಪ, ಸಂರಚನೆಯ ಬಲಾಬಲಗಳು, ಪ್ರಯೋಗದ ಸಮಸ್ಯೆಗಳು ಮುಂತಾದವುಗಳ ಸ್ಪಷ್ಟ ಅರಿವಿಲ್ಲದೆ ಇವನ್ನು ಸ್ಥಾಪಿಸಲಾಯಿತೆನ್ನೋಣವೆ? ಮುಂದೆ ಉದ್ಭವಿಸಬಹುದಾದ ತೊಡಕುಗಳ ಪರಿಹಾರ ಹೇಗೆಂಬುದರ ಕಲ್ಪನೆ ಇರಲಿಲ್ಲವೆನ್ನೋಣವೆ? ಈ ವಿಚಾರ ಹೇಗೂ ಇರಲಿ, ಇವನ್ನು ಪರ್ಯವಸಾನಗೊಳಿಸುವುದಂತೂ ಅಷ್ಟು ಸುಲಭವಲ್ಲ. ಇವುಗಳ ವ್ಯವಸ್ಥೆ ವಾಣಿಜ್ಯ ಬ್ಯಾಂಕುಗಳದಕ್ಕಿಂತ ಭಿನ್ನ ಸ್ವರೂಪದ್ದು. ಅತಿ ಕೇಂದ್ರೀಕರಣದ ಹಾಗೂ ಅತಿ ವಿಸ್ತರಣದ ಅರ್ಬುದ ವ್ಯಾಧಿಗೆ ತುತ್ತಾಗಿರುವ ವಾಣಿಜ್ಯ ಬ್ಯಾಂಕುಗಳ ಕೆಲವು ಅಪ್ರಿಯ ಬೆಳವಣಿಗೆಗಳಿಗೆ ಒಂದು ಮದ್ದೆಂದರೆ ಈ ಬ್ಯಾಂಕುಗಳು. ಪ್ರಾದೇಶಿಕ ವೈಶಿಷ್ಟ್ಯ ಒಂದು ಮುಖ್ಯವಾದ ಅಂಶ, ಆಯಾ ಪ್ರದೇಶದ ಜನರ ಭಾಷೆಯಲ್ಲೇ ಇವುಗಳ ವ್ಯವಹಾರ ಸುಲಭಸಾಧ್ಯವಾಗುವುದರಿಂದ, ಸ್ಥಳೀಯ ಸಮಸ್ಯೆಗಳ ಅರಿವುಳ್ಳ ಸಂಸ್ಥೆಗಳು ಇವಾಗಿರಬೇಕೆಂದು ಇವನ್ನು ಯೋಜಿಸಲಾಗಿರುವುದರಿಂದ, ಸ್ಥಳೀಯರು ಇವುಗಳೊಂದಿಗೆ ಆತ್ಮೀಯ ಸಂಬಂಧ ಬೆಳಸುವಂತೆ ಮಾಡುವುದು ಸಾಧ್ಯ. ಇವುಗಳ ವ್ಯವಹಾರವನ್ನು ಸುಪುಷ್ಟಗೊಳಿಸಲು ವಾಸ್ತವಿಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇವನ್ನು ಕೊನೆಗೊಳಿಸುವ ಆಲೋಚನೆಯೇನೂ ಇಲ್ಲವೆಂದು

ತಿಳಿದುಬಂದಿದೆ. ಇದು ಸಮಾಧಾನದ ಸಂಗತಿ.

ರೂಪಾಯಿಯ ಮೌಲ್ಯ ಛೇದನ?

ರೂಪಾಯಿಯ ಮೌಲ್ಯವನ್ನಷ್ಟು ಕೊಚ್ಚಿಹಾಕಬೇಕು ಎಂದು ವಿಶ್ವ ಬ್ಯಾಂಕ್ ತನ್ನ ಈಚಿನ ವರದಿಯಲ್ಲಿ ಸಲಹೆ ಮಾಡಿದೆ. ಎಂದರೆ ರೂಪಾಯಿಯ ವಿದೇಶಿ ವಿನಿಮಯ ದರವನ್ನು ಇಳಿಸಬೇಕೆಂಬುದು ಅದರ ಸೂಚನೆ.

ಒಂದು ದೇಶದ ನಾಣ್ಯದ ಬಾಹ್ಯ ಮೌಲ್ಯ ಎಷ್ಟಿರಬೇಕೆಂಬುದು ಆ ದೇಶದ ವಿವೇಚನೆಗೆ ಬಿಟ್ಟ ವಿಚಾರ. ಅಂತರರಾಷ್ಟ್ರೀಯ ಹಣ ನಿಧಿಯೊಂದಿಗೆ ಸಮಾಲೋಚನೆ ನಡೆಸಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಕ್ರಮ. ವಿಶ್ವ ಬ್ಯಾಂಕ್ ಏಕೆ ಈ ವಿಚಾರದಲ್ಲಿ ತಲೆ ಹಾಕಬೇಕು ಎನಿಸುವುದು ಸಹಜ. ಆದರೆ ವಿಶ್ವ ಬ್ಯಾಂಕ್ ಹಾಗೂ ಅಂತರರಾಷ್ಟ್ರೀಯ ಹಣ ನಿಧಿಗಳು ಒಂದೇ ನಾಣ್ಯದ ಎರಡು ಬದಿಗಳಿದ್ದ ಹಾಗೆ. ಒಂದು ದೀರ್ಘಕಾಲಿಕ ವಿಚಾರಗಳನ್ನು – ಆರ್ಥಿಕ ಅಭಿವೃದ್ಧಿಯನ್ನು – ಕುರಿತದ್ದಾದರೆ ಇನ್ನೊಂದು ಅಂದಂದಿನ ವಿದೇಶಿ ಪಾವತಿಗಳಲ್ಲಿ ಸ್ತಿಮಿತ ಸಾಧಿಸಲು ಯತ್ನಿಸುತ್ತದೆ. ಇವೆರಡರಲ್ಲೂ ಮುಂದುವರಿದ ದೇಶಗಳದೇ ಪ್ರಭಾವ, ಪ್ರಾಬಲ್ಯ ಎಂಬುದು ಸರ್ವವಿದಿತ.

ರೂಪಾಯಿಯ ಮೌಲ್ಯಛೇದನ ಮಾಡಬೇಕೆಂದೇನೂ ತಾವು ಹೇಳುತ್ತಿಲ್ಲ. ಆದರೆ ದೇಶದ ಅಭಿವೃದ್ಧಿ ಸುಗಮವಾಗಬೇಕಾದರೆ, ಕೈಗಾರಿಕೆಗಳು ಪ್ರಪಂಚದ ಮಾರುಕಟ್ಟೆಯ ಹೋರಾಟದ ಕಣದಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಬೇಕಾದರೆ, ಅವಕ್ಕೆ ಅಗತ್ಯವಾದ ಯಂತ್ರ ತಂತ್ರ ಸಾಮಗ್ರಿಗಳನ್ನು ಧಾರಾಳವಾಗಿ ಆಮದು ಮಾಡಿಕೊಳ್ಳುವುದು ಸಾಧ್ಯವಾಗಬೇಕಾದರೆ, ರಫ್ತುಗಳನ್ನು ಬೆಳಸಬೇಕಾದರೆ ರೂಪಾಯಿಯ ವಿನಿಮಯ ದರದ ಹೊಂದಾವಣೆ ಅಗತ್ಯ ಎನ್ನುತ್ತಾರೆ ವಿಶ್ವ ಬ್ಯಾಂಕ್ ವಕ್ತಾರರು. ವಿದೇಶಿ ಪಾವತಿ ಸಿಲ್ಕು ಸದಾ ಪ್ರತಿಕೂಲದ್ದೇ ಆಗಿದ್ದರೆ ಅದರಿಂದ ನಿರಂತರ ಅಸಮತೋಲ ಉಂಟಾಗುತ್ತದೆ. ಇದನ್ನು ಸರಿಪಡಿಸಲು ವಿನಿಮಯ ದರದಲ್ಲಿ ಅಧಿಕೃತವಾಗಿ ಹೊಂದಾವಣೆ ಮಾಡಿಕೊಳ್ಳುವುದು ಅಗತ್ಯ ಎಂದು ಅವರ ಅಭಿಪ್ರಾಯ.

ಭಾರತದ ವಿದೇಶಿ ಪಾವತಿ ಸಿಲ್ಕು ಪ್ರತಿಕೂಲದ್ದಾಗಿರಲು ಕಾರಣಗಳು ಹಲವಾರು. ದೇಶದ ವಿದೇಶಿ ವ್ಯಾಪಾರ ಕೊರತೆಯ ಬಾಯಿ ವರ್ಷೇ ವರ್ಷೇ ಹಿಗ್ಗುತ್ತಲೇ ಇದೆ. ನಮ್ಮ ರಫ್ತು ಕೈಗಾರಿಕೆಗಳು ನಿರೀಕ್ಷಿಸಿದಂತೆ ಯಶಸ್ವಿಯಾಗಿಲ್ಲ. ರಫ್ತಿಗಾಗಿ ರೂಪಿತವಾದ ಕೈಗಾರಿಕೆಗಳ ಯೋಜನೆಯ ಅಡಿಯಲ್ಲಿ ಆಮದುಗಳನ್ನು ಉದಾರಗೊಳಿಸಿದ್ದರಿಂದ ಅಷ್ಟೇನೂ ಪ್ರಯೋಜನವಾಗಿಲ್ಲ. ಆಮದು

ನೀತಿಯನ್ನು ಸಡಿಲಗೊಳಿಸಿದರೆ ದೇಶೀಯ ಕೈಗಾರಿಕೆಗಳು ಸ್ಪರ್ಧಾತ್ಮಕ ಗುಣ ಬೆಳೆಸಿಕೊಳ್ಳುವುವೆಂಬ ಆಶೆ ಫಲಿಸಿಲ್ಲ. ಅನೇಕ ದೇಶೀಯ ಕೈಗಾರಿಕೆಗಳ ಸರಕುಗಳ ಬೇಡಿಕೆ ಬಿದ್ದು ಹೋಗಿದೆ. ರೂಪಾಯಿಯ ವಿನಿಮಯ ದರವನ್ನು ಇಳಿಸಿದ ಮಾತ್ರಕ್ಕೆ ತತ್ಪಲವಾಗಿ ವಿದೇಶಿ ನಾಣ್ಯಗಳ ಇದಿರಿನಲ್ಲಿ ಅಗ್ಗವಾಗುವ ಭಾರತೀಯ ಸರಕುಗಳಿಗೆ ಬೇಡಿಕೆ ಹೆಚ್ಚುವುದೆಂಬುದು ವಾಸ್ತವಿಕವಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತ ಬಿಕರಿ ಮಾಡುವ ಸರಕುಗಳ ಬೇಡಿಕೆಗಳಲ್ಲಿ ಅಷ್ಟೊಂದು ಪುಟಿತತೆಯಿಲ್ಲ. ಅಗ್ಗದ ರೂಪಾಯಿಯಿಂದ ಆಮದುಗಳು ದುಬಾರಿಯಾಗುತ್ತವೆ. ಇದರಿಂದ ಅವಕ್ಕೆ ನಿರುತ್ತೇಜನ ಉಂಟಾಗುತ್ತದೆಂಬುದೂ ನಿಜವಲ್ಲ. ವೆಚ್ಚವೆಷ್ಟೇ ಇರಲಿ, ಕೆಲವು ಪದಾರ್ಥಗಳನ್ನು ಭಾರತ ಆಮದು ಮಾಡಿಕೊಳ್ಳಲೇಬೇಕಾಗುತ್ತದೆ.
ರೂಪಾಯಿಯ ಮೌಲ್ಯಛೇದನದಿಂದ ಅಸ್ಥಿರ ಪರಿಸ್ಥಿತಿಯ ಪರಿಹಾರವಾಗುತ್ತದೆಂಬುದು ನಮ್ಮ ಇದುವರೆಗಿನ ಅನುಭವದ ದೃಷ್ಟಿಯಲ್ಲಿ ಸುಳ್ಳೇ ಆಗಿದೆ.

ಪ್ರಪಂಚದ ಪ್ರಮುಖ ನ್ಯಾಣಗಳ ಇದಿರಿನಲ್ಲಿ ರೂಪಾಯಿಯ ಮೌಲ್ಯವನ್ನು ಆಗಿಂದಾಗ್ಯೆ ನಿರ್ಧರಿಸುವುದು ಭಾರತದ ಈಗಿನ ನೀತಿ. ಅದು ಈಚಿನ ವರ್ಷಗಳಲ್ಲಿ ಇಳಿಯುತ್ತಲೇ ಬಂದಿದೆ. ಒಂದು ರೀತಿಯಲ್ಲಿ ರೂಪಾಯಿಯ ಮೌಲ್ಯಛೇದನ ಆಗುತ್ತಲೇ ಇದೆ. ಈಗ ಅದನ್ನೂ ಮೀರಿ ಮೌಲ್ಯಛೇದನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ವಿದೇಶಿ ಹಿತಗಳ ಒತ್ತಡಗಳಿಗೆ ಭಾರತ ಮಣಿಯಬಾರದು.

ಬ್ಯಾಂಕ್ ಮತ್ತು ರಹಸ್ಯ

ಬ್ಯಾಂಕುಗಳು ತಮ್ಮ ಗ್ರಾಹಕರ ವಹಿವಾಟುಗಳಿಗೆ ಸಂಬಂಧಿಸಿದಂತೆ ರಹಸ್ಯವನ್ನು ಪಾಲಿಸಬೇಕು ಎಂಬುದು ಪರಂಪರೆಯಾಗಿ ಬಂದಿರುವ ಒಂದು ನಿಯಮ. ಕೆಲವು ವಿಶೇಷ ಸಂದರ್ಭಗಳಲ್ಲಿ
ಬ್ಯಾಂಕ್‌ಗಳು ಈ ರಹಸ್ಯಪಾಲನೆ ನಿಯಮವನ್ನು ಸಡಿಲಿಸಬಹದು. ಹಲವು ದೇಶಗಳ ವ್ಯಕ್ತಿ ಸಂಸ್ಥೆಗಳ ಖಾತೆಗಳನ್ನು ಹೊಂದಿರುವ ಸ್ವಿಸ್ ಬ್ಯಾಂಕಿಂಗ್ ವ್ಯವಸ್ಥೆಗೆ ಸಂಬಂಧಿಸಿದಂತೆ ಈ ನಿಯಮ ಹೇಗೆ ಜಾರಿಯಲ್ಲಿದೆ? ಇದು ಕುತೂಹಲದ ಪ್ರಶ್ನೆ.

ಸ್ವಿಸ್ ಬ್ಯಾಂಕುಗಳಲ್ಲಿ ಖಾತೆ ತೆರೆದು ಹಣ ಇಟ್ಟಿರುವ ಎಲ್ಲರೂ ಆ ಹಣವನ್ನು ನ್ಯಾಯವಾದ ರೀತಿಯಲ್ಲೇ ಸಂಪಾದನೆ ಮಾಡಿದ್ದಾರೆಂದು ಹೇಳಲು ಬರುವುದಿಲ್ಲ. ತಮ್ಮ ಕಂಪನಿಗಳಿಂದ ಅಕ್ರಮವಾಗಿ ಹಣ ಗಳಿಸಿರುವವರೂ, ತೆರಿಗೆ ತಪ್ಪಿಸಿಕೊಳ್ಳ ಬಯಸುವವರೂ, ಬಂಡವಾಳ ವರ್ಗಾವಣೆಯ ನಿಯಂತ್ರಣಕ್ಕೆ ಒಳಗಾಗಲೊಲ್ಲದವರೂ, ಲಂಚ ತೆಗೆದುಕೊಳ್ಳುವ ರಾಜಕಾರಣಿಗಳೂ, ಕಳ್ಳಸಾಗಣೆದಾರರೂ, ಸ್ವಿಸ್ ಬ್ಯಾಂಕುಗಳಲ್ಲಿ ಖಾತೆ ತೆರೆದು ಹಣ

ಇಡುವುದು ವಿರಳವೇನಲ್ಲ. ಅನೇಕ ವೇಳೆ ಈ ಹಣ ಅವರ ಹೆಸರುಗಳ ಅಡಿಯಲ್ಲೇ ಇರುವುದಿಲ್ಲ. ಅವು ಬೇನಾಮಿ ಖಾತೆಗಳಾಗಿರಬಹುದು. ಇಂಥ ಖಾತೆಗಳ ವ್ಯವಹಾರಗಳು ಸ್ವಿಸ್ ಬ್ಯಾಂಕುಗಳಿಗೆ ಒಳ್ಳೆಯ ಲಾಭ ದೊರಕಿಸಿ ಕೊಡುತ್ತಿವೆ. ಈ ಠೇವಣಿದಾರರು ತೀರಿಕೊಂಡಾಗ ಇವರ ಖಾತೆಗಳ ಹಣವನ್ನು ಕೇಳುವವರೇ ಇಲ್ಲವಾದಾಗ ಒಂದು ನಿಶ್ಚಿತ ಕಾಲದ ಅನಂತರ ಈ ಸಿಲ್ಕುಗಳನ್ನು ಬ್ಯಾಂಕುಗಳ ಲಾಭವೆಂದು ಪರಿಗಣಿಸಬಹುದಾಗಿದೆ.

ಸ್ವಿಸ್ ಬ್ಯಾಂಕುಗಳ ರಹಸ್ಯಪಾಲನೆಗೆ ಸಂಬಂಧಿಸಿದ ಕಟ್ಟುನಿಟ್ಟಾದ ನಿಯಮಗಳಿಂದಾಗಿ ಸಂಬಂಧಪಟ್ಟ ದೇಶಗಳ ಸರ್ಕಾರಗಳು ಏನೂ ಮಾಡಲಾರವಾಗಿವೆ. ಅಪರಾಧಿಗಳನ್ನು ಹಿಡಿಯುವಲ್ಲಿ ಈ ಬ್ಯಾಂಕುಗಳು ಅಮೂಲ್ಯವಾದ ಮಾಹಿತಿ ನೀಡಬಹುದು. ಆದರೆ ರಹಸ್ಯ ಪಾಲನೆಯ ಹೆಸರಿನಲ್ಲಿ ಬ್ಯಾಂಕುಗಳು ತುಟಿ ಬಿಗಿ ಮಾಡುತ್ತ ಬಂದಿವೆ. ಈಚೆಗೆ ಈ ನಿಯಮಗಳು ಅಲ್ಪಸ್ವಲ್ಪ ಸಡಿಲವಾಗುತ್ತಿರುವುದು ನಿಜ. ಸ್ವಿಸ್ ಕಾನೂನಿನ ಪ್ರಕಾರ ಆಪರಾಧಿಕವೆನಿಸಿದ ಕೃತ್ಯಗಳಿಗೆ ಸಂಬಂಧಿಸಿದಂತೆ ನಡೆಸಲಾಗುವ ತನಿಖೆಗಳಲ್ಲಿ ಬ್ಯಾಂಕುಗಳು ಅವಶ್ಯ ಮಾಹಿತಿ ಒದಗಿಸಬಹುದು. ಕಾನೂನುಬಾಹಿರ ರೀತಿಯಲ್ಲಿ ಬಂಡವಾಳ ವರ್ಗಾವಣೆ ಆಗುತ್ತಿರುವ ಸಂದರ್ಭದಲ್ಲಿ ಬ್ಯಾಂಕುಗಳು ಅಂಥ ಬಂಡವಾಳದ ಒಡೆತನದ ಬಗ್ಗೆ ಮಾಹಿತಿ ನೀಡುವುದನ್ನು ಒಂದು ರೀತಿಯ ಮರ್ಯಾದೆಯ ವಿಚಾರವೆಂದು ನಡೆಸಿಕೊಂಡು ಬರುತ್ತಿವೆ. ಇವು ವಿನಾ ಬೇರೆ ಸಂದರ್ಭಗಳಲ್ಲಿ ಅವು ಬಿಗಿಯಾದ ನಿಯಮವನ್ನೇ ಅನುಸರಿಸುತ್ತ ಬಂದಿವೆ. ಸ್ವಿಸ್ ಸರ್ಕಾರವೂ ಏನೂ ಮಾಡಲಾರದಾಗಿದೆ. ಏಕೆಂದರೆ ಸ್ವಿಟ್ಜರ್‌ಲೆಂಡಿನಲ್ಲಿ ಬ್ಯಾಂಕಿಂಗ್ ಲಾಬಿ ಬಹಳ ಪ್ರಬಲವಾದ್ದು.

ಭಾರಿಭಾರಿ ರಾಜಕಾರಣಿಗಳೂ ಸ್ವಿಸ್ ಬ್ಯಾಂಕುಗಳಲ್ಲಿ ಹಣ ಇಟ್ಟಿರುವುದುಂಟು. ಅವರು ಅಧಿಕಾರ ಕಳೆದುಕೊಂಡಾಗ ಈ ರಹಸ್ಯ ನಿಧಿ ಅವರಿಗೆ ನೆರವಾಗಿ ಒದಗಿಬರುತ್ತದೆ. ಇರಾನಿನ ಷಹಾ ಸಿಂಹಾಸನ ಕಳೆದುಕೊಂಡು ದೇಶಭ್ರಷ್ಟರಾದಾಗ ಅಲ್ಲಿ ಅಧಿಕಾರಕ್ಕೆ ಬಂದ ಹೊಸ ಕ್ರಾಂತಿಕಾರಿ ಸರ್ಕಾರ ಈ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲು ಯತ್ನಿಸಿತು. ಸ್ವಿಸ್ ಬ್ಯಾಂಕುಗಳು ಅವಕಾಶ ನೀಡಲಿಲ್ಲ. ಆದರೆ ಈಚೆಗೆ ಹೈಟಿ ಹಾಗೂ ಫಿಲಿಪೀನ್ಸಿನ ಅಧ್ಯಕ್ಷರುಗಳು ಅಧಿಕಾರ ಕಳೆದುಕೊಂಡಾಗ ಅವರು ತಮ್ಮ ಸ್ವಿಸ್ ಬ್ಯಾಂಕಿಂಗ್ ಖಾತೆಗಳ ಹಣ ಎಳೆಯದಂತೆ ತಡೆಯಬೇಕೆಂದು ಆ ಸರ್ಕಾರಗಳು ಬ್ಯಾಂಕುಗಳನ್ನು ಕೋರಿದುವು, ಬ್ಯಾಂಕುಗಳು ಅದಕ್ಕೆ ಸಮ್ಮತಿಸಿದುವು. ಇದೊಂದು ಬದಲಾವಣೆ. ಅಂದ ಮಾತ್ರಕ್ಕೆ ಈ ಹಣವನ್ನು ಸುಲಭವಾಗಿ ಅವು

ವಶಪಡಿಸಿಕೊಳ್ಳಬಹುದೆಂದಲ್ಲ. ಇಂಥ ಖಾತೆಗಳು ಸುಲಭವಾಗಿ ಇತರರ ಕೈಗೆ ದಕ್ಕುವ ರೀತಿಯಲ್ಲಿರುವದಿಲ್ಲ. ಇದಕ್ಕಾಗಿ ವ್ಯವಹಾರ ನಡೆಸಿದರೂ ಗೆಲ್ಲುವ ಭರವಸೆಯಿಲ್ಲ.

ಸ್ವಿಸ್ ಬ್ಯಾಂಕುಗಳ ರಹಸ್ಯ ಕುರಿತ ನಿಷ್ಠುರ ನಿಯಮ ಜಾರಿಗೆ ಬಂದದ್ದು, ಮುಖ್ಯವಾಗಿ ಜರ್ಮನಿಯಲ್ಲಿ ಹಿಟ್ಲರನ ಆಳ್ವಿಕೆ ಇದ್ದ ಕಾಲದಲ್ಲಿ. ಆಗ ನಾಟ್ಸಿಗಳ ಚಿತ್ರಹಿಂಸೆಗೆ ಗುರಿಯಾದ ಯಹೂದ್ಯರನೇಕರು ದೇಶ ಬಿಟ್ಟು ಓಡಿಹೋದರು.ಆ ನಿರಪರಾಧಿಗಳ ಉಳಿತಾಯವನ್ನು ರಕ್ಷಿಸುವ ದೃಷ್ಟಿಯಿಂದ ಈ ನಿಯಮಗಳು ಬಂದುವು, ಈ ನಿಯಮಗಳೇ ದ್ವಿತೀಯ ಯುದ್ಧಾನಂತರದ ಕಾಲದಲ್ಲಿ ದುರ್ವ್ಯವಹಾರಿಗಳಿಗೆ ಅನುಕೂಲವಾಗಿ ಪರಿಣಮಿಸಿದೆ. ಈಗೀಗ ಇದು ಮನವರಿಕೆಯಾಗುತ್ತಿದೆ. ಅಂತೆಯೇ ನಿಯಮಗಳೂ ಸಡಿಲವಾಗುವ ಪ್ರವೃತ್ತಿ ತೋರಿಬರುತ್ತಿದೆ. ಇದೊಂದು ಸ್ವಾಗತಾರ್ಹ ಬೆಳೆವಣಿಗೆ.

ಚೆಕ್ ವಿಚ್ಛೇದ

ವಿದ್ಯುನ್ಮಾನ ಬೆಳವಣಿಗೆಯ ಫಲವಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲೂ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಈ ಬದಲಾವಣೆಗಳೊಂದಿಗೆ ಕಾನೂನು ಬದಲಾಗುವುದು ಅನೇಕ ವೇಳೆ ಅಗತ್ಯ. ಇಲ್ಲದಿದ್ದರೆ ಆಚರಣೆಗೂ ಕಾನೂನಿಗೂ ಅಂತರ ಉಂಟಾಗಿ ಗೊಂದಲ ಉಂಟಾಗುವುದು ಸಹಜ.

ಇದಕ್ಕೆ ನಿದರ್ಶನವಾಗಿ ಇಂಗ್ಲೆಂಡಿನ ಒಂದು ಅನುಭವವನ್ನು ಇಲ್ಲಿ ಉಲ್ಲೇಖಿಸಬಹುದು. ವಿವಿಧ ಬ್ಯಾಂಕುಗಳ ನಡುವಣ ಚೆಕ್ಕುಗಳ ತೀರುವೆಗೆ ಸಂಬಂಧಿಸಿದ ಬದಲಾವಣೆ ಇಂಥದು. ತೀರುವೆ ಮನೆಯಲ್ಲಿ ಚೆಕ್ಕುಗಳನ್ನು ಹಾಜರುಪಡಿಸುವುದು ಇದುವರೆಗೆ ನಡೆದು ಬಂದಿರುವ ಪದ್ಧತಿ. ಆದರೆ ಇಂಗ್ಲೆಂಡಿನಲ್ಲಿ ಪ್ರತಿಯೊಂದು ಚೆಕ್ಕನ್ನು ಹಾಜರುಪಡಿಸಲೂ ಸುಮಾರು 30ರಿಂದ 50 ಪೆನಿಗಳ ವರೆಗೆ ವೆಚ್ಚ ತಗಲುವುದಂತೆ. 1982ರಲ್ಲಿ ಸುಮಾರು 211 ಕೋಟಿ ಚೆಕ್ಕುಗಳು ಇಂಗ್ಲೆಂಡಿನಲ್ಲಿ ತೀರುವಗಾಗಿ ಬಂದುವಂತೆ. ವಸೂಲಿದಾರ ಬ್ಯಾಂಕುಗಳು ಚೆಕ್ಕು ಹಾಜರುಪಡಿಸುವ ವೆಚ್ಚವನ್ನುಳಿಸಲು ಈಗ ಒಂದು ಉಪಾಯವನ್ನನುಸರಿಸುತ್ತವೆ. ಇದು 'ಚೆಕ್ ವಿಚ್ಛೇದ' (cheque truncation). ಚೆಕ್ಕಿನ ಪ್ರಾಪ್ತಿಕರ್ತನಿಂದ ವಸೂಲಿಗಾಗಿ ಚೆಕ್ಕನ್ನು ಪಡೆದ ಬ್ಯಾಂಕು ಅದನ್ನು ಪಾವತಿದಾರ ಬ್ಯಾಂಕಿಗೆ ಹಾಜರುಪಡಿಸಬೇಕಾದ್ದಿಲ್ಲ. ಬದಲಾಗಿ ಚೆಕ್ಕಿನ ವಿವರಗಳನ್ನು ವಿದ್ಯುನ್ಮಾನ ರೂಪದಲ್ಲಿ ಪಾವತಿದಾರ ಬ್ಯಾಂಕಿಗೆ ರವಾನೆ ಮಾಡುತ್ತದೆ. ಒಂದೇ ಬ್ಯಾಂಕಿನ ಶಾಖೆಗಳ ನಡುವಣ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರಂಭವಾದ ಈ ಕ್ರಮವನ್ನು ಈಗ ಬೇರೆ ಬ್ಯಾಂಕುಗಳ ನಡುವಣ ಚೆಕ್ಕುಗಳ

ತೀರವ ಯಲ್ಲೂ ಅನುಸರಿಸಲಾಗುತ್ತಿದೆ. ಚೆಕ್ಕನ್ನು ವಾಸ್ತವವಾಗಿ ರವಾನಿಸುವ ವೆಚ್ಚ ಉಳಿಯುವುದರಿಂದ ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಸಲ್ಲಿಸುವ ಸೇವೆಯ ವೆಚ್ಚವನ್ನೂ ಕಾಲವನ್ನೂ ಗಮನಾರ್ಹವಾಗಿ ಇಳಿಸುವುದು ಸಾಧ್ಯ.

ಆದರೆ ಕಾನೂನಿನ ದೃಷ್ಟಿಯಲ್ಲಿ ಇದು ಎಷ್ಟರಮಟ್ಟಿಗೆ ಸರಿ ಎಂಬುದು ಪ್ರಶ್ನೆ. ಇಂಗ್ಲೆಂಡಿನ ಹುಂಡಿಗಳ ಅಧಿನಿಯಮದ ಪ್ರಕಾರ (ಭಾರತದಲ್ಲಿ ಪರಕ್ರಾಮ್ಯ ಸಂಲೇಖಗಳ ಅಧಿನಿಯಮ) ಚೆಕ್ಕನ್ನು ಯಥಾವಿಧಿಯಾಗಿ ಹಾಜರುಪಡಿಸುವುದು ಅಗತ್ಯ. ವಾಚ್ಯ ಅಥವಾ ಸೂಚ್ಯ ಒಡಂಬಡಿಕೆಯ ಮೂಲಕ ಈ ನಿಯಮವನ್ನು ಮನ್ನಾ ಮಾಡಬಹುದೆಂದು ಕಾನೂನು ಹೇಳುವುದಾದರೂ ಇದು ಸಾರಾಸಗಟವಾಗಿ ಎಲ್ಲ ಚೆಕ್ಕುಗಳಿಗೂ ಅನ್ವಯಿಸುವುದೆ? ಎಂಬುದು ವಿಚಾರಿಸಬೇಕಾದ ಅಂಶ. ಪಾವತಿದಾರ ಬ್ಯಾಂಕು ಚೆಕ್ಕಿನ ರಚಕನ ಸಹಿಯನ್ನು ಹೋಲಿಸಿ ನೋಡಬೇಕೆಂದೂ ಕಾನೂನಿನಲ್ಲಿ ವಿಧಿಸಲಾಗಿದೆ. 'ಚೆಕ್ ವಿಚ್ಛೇದ'ದಿಂದಾಗಿ ಇದು ಸಾಧ್ಯವಾಗುವುದಿಲ್ಲ. ಕಾನೂನಿನ ಈ ಅಪೇಕ್ಷಿತಗಳನ್ನು ಪಾಲಿಸದಿದ್ದರೆ ಪಾವತಿದಾರ ಬ್ಯಾಂಕಿಗೆ ಪರಿನಿಯತ ರಕ್ಷಣೆ ದೊರಕದು. ಆದ್ದರಿಂದ ಕಾನೂನಿಗೆ ಯುಕ್ತ ತಿದ್ದುಪಡಿ ಅಗತ್ಯವೆಂದು ವಾದಿಸಲಾಗಿದೆ.

ಭಾರತದಲ್ಲೂ ಇಂದಲ್ಲ ನಾಳೆ ಚೆಕ್ ವಿಚ್ಛೇದ ಪದ್ಧತಿ ಜಾರಿಗೆ ಬರಬಹುದು. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಕೂಡ ಈಗಿನಿಂದಲೇ ಯೋಚಿಸಬೇಕಾಗಿದೆ.

ಹಣದ ಪೇಟೆಯ ಸುಧಾರಣೆ

ಭಾರತದ ಹಣದ ಪೇಟೆಯ ವ್ಯಾಪ್ತಿಯನ್ನು ವಿಸ್ತರಿಸುವ ಸಾಧ್ಯತೆಗಳನ್ನು ಪರಿಶೀಲಿಸಲೂ, ಹಣದ ಪೇಟೆಯ ಸಂಲೇಖಗಳ ವಿಕಾಸಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸುಗಳನ್ನು ಸಲ್ಲಿಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿಯತ ಕಾರ್ಯ ತಂಡವೊಂದನ್ನು ರಚಿಸಿದೆ. ಭಾರತೀಯ ಕೈಗಾರಿಕಾ ಉದರಿ ಮತ್ತು ವಿನಿಯೋಜನೆ ನಿಗಮದ ಅಧ್ಯಕ್ಷರಾದ ಎನ್. ವಾಘುಲ್ ಇದರ ಅಧ್ಯಕ್ಷರು. ಭಾರತೀಯ ಯೂನಿಟ್ ಟ್ರಸ್ಟಿನ ಅಧ್ಯಕ್ಷ ಎಂ. ಜಿ. ಘರ್ವಾನಿ, ಇಂಡಿಯನ್ ಓವರ್ಸಿಸ್ ಬ್ಯಾಂಕಿನ ಅಧ್ಯಕ್ಷ ಎಸ್.ಪದ್ಮನಾಭನ್, ಭಾರತೀಯ ಸ್ಟೇಟ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಲ್ಲೊಬ್ಬರಾದ ಆರ್. ನರಸಿಂಹನ್, ಸಿಟಿಬ್ಯಾಂಕಿನ ಉಪಾಧ್ಯಕ್ಷ ಕೆ. ಸಿಂಜೀವಿ ಥಾಮಸ್, ಸ್ಟಾಕ್ ಮತ್ತು ಷೇರು ದಲಾಲರಾದ ವಿ. ಬಿ. ದೇಸಾಯಿ ಇವರು ಈ ತಂಡದ ಇತರ ಸದಸ್ಯರು. ರಿಸರ್ವ್ ಬ್ಯಾಂಕಿನ ಉದರಿ ಆಯೋಜನಾ ವಿಭಾಗದ ಪ್ರಭಾರಿ ಸಲಹೆಗಾರ ಎಸ್. ಎಸ್. ತಾರಾಪುರ್ ಸದಸ್ಯ – ಕಾರ್ಯದರ್ಶಿ. ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ತಂಡ ತನ್ನ ವರದಿ ಸಲ್ಲಿಸಬಹುದೆಂಬುದು ನಿರೀಕ್ಷೆ.

ಒಂದು ದೇಶದ ಅರ್ಥವ್ಯವಸ್ಥೆಯಲ್ಲಿ ಅದರ ಹಣದ ಪೇಟೆಯ ಪಾತ್ರ ಮಹತ್ತರವಾದ್ದು. ಬ್ಯಾಂಕುಗಳು, ವಟ್ಟದ ಮನೆಗಳು, ದಲಾಲರು, ಸ್ಟಾಕ್ ವಿನಿಮಯ ಕೇಂದ್ರಗಳು (ಸ್ಟಾಕ್ ಎಕ್ಸ್‌ಛೇಂಜ್) ಮುಂತಾದ ಹಣದ ಸಾಲ ನೀಡುವ ಪಡೆಯುವ ಕಾರ್ಯದಲ್ಲಿ ಪರಸ್ಪರ ಸ್ಪರ್ಧಿಸುವ ಹಣಕಾಸು ಸಂಸ್ಥೆಗಳು ಸ್ಥೂಲವಾಗಿ ಹಣದ ಪೇಟೆಯ ವ್ಯಾಪ್ತಿಯೊಳಕ್ಕೆ ಬರುತ್ತವೆ. ಕೇಂದ್ರೀಯ ಬ್ಯಾಂಕು ಇದರ ಕೇಂದ್ರ. ಇದರ ಸುತ್ತ ಪೇಟೆಯ ಕಲಾಪಗಳು ಪರಿಭ್ರಮಿಸುತ್ತಿರುತ್ತವೆ. ಕೇಂದ್ರೀಯ ಬ್ಯಾಂಕೇ ಹಣದ ಪೇಟೆಯ ರಕ್ಷಾದೇವತೆ. ಆಂತರಿಕ ಸ್ಥಿರತೆಯ ಸಾಧನೆಗಾಗಿ ಇದು ಹಣದ ಹಾಗೂ ಉದರಿಯ ಪೂರೈಕೆಯನ್ನು ನಿಯಂತ್ರಿಸುತ್ತಿರುತ್ತದೆ. ಪೇಟೆಯ ನಿರ್ವಹಣೆ ತನಗೆ ತಾನೇ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವುದು ಅದರ ಹೊಣೆ. ಕರೆಸಾಲ, ಕಿರುವಾಯಿದೆ ಸಾಲ, ನಿಡುವಾಯಿದೆ ಸಾಲ, ಉಳಿತಾಯ ಬ್ಯಾಂಕುಗಳು, ಕೃಷಿ ಹಣಕಾಸು ಸಂಸ್ಥೆಗಳ ಹಾಗೂ ಕಟ್ಟಡ ನಿರ್ಮಾಣ ಸಂಘಗಳೇ ಮುಂತಾದವುಗಳ ಹಣ ವ್ಯವಹಾರ ಇವೆಲ್ಲ ಹಣದ ಪೇಟೆಯ ಎಲ್ಲೆಯೊಳಗೆ ಬರುತ್ತವೆ. ಇಂಗ್ಲೆಂಡಿನಲ್ಲೂ ಅಮೆರಿಕದಲ್ಲೂ ಕರೆಸಾಲ ಪೇಟೆ ಬಹಳ ಚುರುಕಾಗಿ ಕೆಲಸ ಮಾಡುತ್ತದೆ. ಹುಂಡಿ ದಲಾಲರೂ ಸ್ಟಾಕ್ ದಲಾಲರೂ ಈ ಪೇಟೆಯಿಂದ ಸಾಲ ಪಡೆಯುತ್ತಾರೆ. ವಾಣಿಜ್ಯ ಬ್ಯಾಂಕುಗಳೂ ಇತರ ಸಂಸ್ಥೆಗಳೂ ತಮ್ಮ ಹೆಚ್ಚುವರಿ ನಿಧಿಗಳನ್ನು ಕರೆ ಸಾಲ ಪೇಟೆಯಲ್ಲಿ ಸಾಲ ನೀಡುತ್ತವೆ. ಬ್ಯಾಂಕುಗಳ ರಕ್ಷಣೆಯ ಕೋಟೆಯ ಎರಡನೆಯ ಸಾಲು ಕರೆ ಸಾಲ. ಇಂಗ್ಲೆಂಡಿನಲ್ಲಿಯ ವಟ್ಟದ ಮನೆಗಳ ಪಾತ್ರ ವಿಶೇಷವಾಗಿ ಗಮನಿಸಬೇಕಾದ್ದು. ಹುಂಡಿಗಳ ಮೂಲಕ ಇವು ವ್ಯವಹಾರ ನಡೆಸುತ್ತವೆ. ಕಿರುವಾಯಿದೆಯ ಸಾಲಗಳ ವ್ಯವಹಾರವೂ ಮುಖ್ಯವಾದ್ದೇ. ಹೊಸ ಬಂಡವಾಳ ಸಂಗ್ರಹಣೆಗೆ ಹಾಗೂ ಹಳೆಯ ಬಂಡವಾಳದ ವರ್ಗಾವಣೆಗೆ ನೆರವಾಗುವ ಪ್ರವರ್ತಕರು, ನೀಡಿಕೆ ಮನೆಗಳು, ಮತ್ತು ಸ್ಟಾಕ್ ವಿನಿಮಯ ಕೇಂದ್ರಗಳು ನಿಡುವಾಯಿದೆ ಪೇಟೆಯ ಮುಖ್ಯ ಅಂಗಗಳು. ಹಣದ ಮಾರುಕಟ್ಟೆಯ ಅಂಗಗಳಾದ ಈ ವಿವಿಧ ಮಾರುಕಟ್ಟೆಗಳು ಸುಸಂಘಟಿತವಾಗಿ ಕೇಂದ್ರೀಯ ಬ್ಯಾಂಕಿನ ನೇತೃತ್ವದಲ್ಲಿ ಸಂಯೋಜಿತವಾಗಿ ಕಾರ್ಯ ನಿರ್ವಹಿಸುತ್ತಿದ್ದರೆ ಆಗ ಮಾತ್ರ ಆರ್ಥಿಕ ಸ್ಥಿರತೆ ಸಾಧ್ಯವಾಗುತ್ತದೆ. ಕೇಂದ್ರೀಯ ಬ್ಯಾಂಕಿನ ಬಡ್ಡಿ ದರಕ್ಕೆ ಅನುಗುಣವಾಗಿ ಈ ಎಲ್ಲ ಅಂಗಗಳ ಬಡ್ಡಿ ದರಗಳೂ ಚಲಿಸಬೇಕು. ಇವುಗಳ ಚಲನೆಯಲ್ಲಿ ಅಸಂಬದ್ಧತೆ ಇರಬಾರದು. ಕೇಂದ್ರೀಯ ಬ್ಯಾಂಕಿಂಗ್ ಕಲೆಯ ಮುಖ್ಯ ಸಮಸ್ಯೆಗಳಲ್ಲೊಂದೆಂದರೆ ಈ ವಿವಿಧ ಹಣ ದರಗಳ ಸಂಯೋಜನೆ.

ಆದರೆ ಭಾರತದಲ್ಲಿ ಹಣದ ಪೇಟೆಯ ವಿವಿಧ ಅಂಗಗಳಲ್ಲಿ

ಹೊಂದಾವಣೆಯಿಲ್ಲ. ಸಂಘಟಿತ ವಲಯದ ಜೊತೆಗೇ ಅಸಂಘಟಿತ ವಲಯವೂ ಇದೆ. ದೇಶೀಯ ಹಣ ವ್ಯವಹಾರಿಗಳ ವಲಯವೂ ಸಂಘಟಿತ ವಲಯವೂ ಪರಸ್ಪರ ಹೊಂದಿಕೊಂಡು ವರ್ತಿಸುತ್ತಿಲ್ಲ. ಅಮೆರಿಕದ ಸ್ಟಾಕ್ ದಲಾಲರಂತೆ, ಇಂಗ್ಲೆಂಡಿನ ವಟ್ಟದ ಮನೆಗಳಂತೆ ಚೈತನ್ಯಪೂರ್ಣ ಕರೆ ಹಣ ವಹಿವಾಟುದಾರರು ಇಲ್ಲಿಲ್ಲ. ಹುಂಡಿಗಳು ಪೂರ್ಣ ವಿಕಾಸಗೊಂಡಿಲ್ಲ. ಈ ದೋಷಗಳೆಲ್ಲ ಪರಿಹಾರವಾದಾಗಲೇ ಭಾರತದ ಹಣದ ಪೇಟೆಯಲ್ಲಿ ಜೀವಸತ್ವ ಮಿಡಿಯುವುದು ಸಾಧ್ಯ. ಇದೊಂದು ದೀರ್ಘಕಾಲಿಕ ಸಮಸ್ಯೆ. ಇದರ ಪರಿಹಾರಕ್ಕಾಗಿ ರಿಸರ್ವ್ ಬ್ಯಾಂಕಿನ ಇದುವರೆಗಿನ ಪ್ರಯತ್ನಗಳು ಅಷ್ಟೇನೂ ಫಲ ನೀಡಿಲ್ಲ. ಈಗಿನ ಕಾರ್ಯತಂಡದ ನೇಮಕ ಈ ನಿಟ್ಟಿನಲ್ಲಿ ಇನ್ನೊಂದು ಪ್ರಯತ್ನ. ಹಣದ ಪೇಟೆಯ ಸಂಲೇಖಗಳನ್ನು ಪರಿಶೀಲಿಸಿ ಅವುಗಳ ವಿಕಾಸಕ್ಕಾಗಿ ಯುಕ್ತ ಕ್ರಮಗಳನ್ನು ಸೂಚಿಸುವುದು, ಹಣದ ಪೇಟೆಯ ಬಡ್ಡಿ ದರಗಳ ವಿನ್ಯಾಸ ಹೇಗಿರಬೇಕೆಂಬುದನ್ನೂ, ಈ ದರಗಳನ್ನು ಮೇಲಿನಿಂದ ನಿರ್ವಹಿಸಬೇಕೇ ಅಥವಾ ಮಾರುಕಟ್ಟೆಯ ಬಲಗಳಿಗೆ ಅನುಗುಣವಾಗಿ ಚಲಿಸಲು ಅವನ್ನು ಬಿಡಬೇಕೇ ಎಂಬುದನ್ನೂ ಸೂಚಿಸುವುದು, ಹಣದ ಪೇಟೆಯಲ್ಲಿ ಭಾಗವಹಿಸುವ ವ್ಯಕ್ತಿ ಸಂಸ್ಥೆಗಳನ್ನು ವಿಸ್ತರಿಸುವ ಸಾಧ್ಯತೆಯ ಅಧ್ಯಯನ ಮಾಡುವುದು, ನಗದುದರಿ ವ್ಯವಸ್ಥೆಯಿಂದ ಹಣದ ಪೇಟೆಯ ಮೇಲೆ ಆಗುವ ಪರಿಣಾಮಗಳನ್ನು ನಿರ್ಧರಿಸುವುದು, ವಟ್ಟದ ಮನೆಗಳಂಥ ವಿಶೇಷ ಸಂಸ್ಥೆಗಳನ್ನು ರೂಪಿಸುವುದರ ಬಗ್ಗೆ ಶಿಫಾರಸು ಮಾಡುವುದು, ಇದಕ್ಕೆ ಸಂಬಂಧಿಸಿದಂತೆ ಅಂತರ ಸಾಂಸ್ಥಿಕ ಪೇಟೆ ಹಾಗೂ ವಿಸ್ತೃತ ಹಣದ ಪೇಟೆಯ ಪರಸ್ಪರ ಪ್ರಕ್ರಿಯೆಗಳನ್ನು ಪರಿಶೀಲಿಸುವುದು, ಹಣದ ಪೇಟೆಗೆ ಸಂಬಂಧಿಸಿದ ಬೇರೆ ಯಾವುದೇ ಅಂಶದ ಬಗ್ಗೆ ವರದಿ ನೀಡುವುದು – ಇವು ಈ ತಂಡಕ್ಕೆ ಒಪ್ಪಿಸಲಾದ ವಿಷಯಗಳು. ಈ ತಂಡದ ಅಧ್ಯಯನದಿಂದ ಭಾರತದ ಹಣದ ಪೇಟೆಯ ಸುಧಾರಣೆ ಹಾಗೂ ವಿಕಾಸ ಆಗುವುದಾದರೆ ಅದೊಂದು ಮಹತ್ವದ ಸಾಧನೆಯೇ ಎನಿಸೀತು.

13.

ಡಿಸೆಂಬರ್ 1986
ಮೇಳದ ಅಪಸ್ವರ

ನಮ್ಮಲ್ಲಿ ಆದರ್ಶಗಳಿಗೇನೂ ಕೊರತೆಯಿಲ್ಲ. ನಾವು ಏನನ್ನೇ ಮಾಡಲಿ, ಅದರ ಹಿಂದಣ ಸದುದ್ದೇಶಗಳನ್ನು ಜಗತ್ತಿಗೆ ಘೋಷಿಸಿಕೊಳ್ಳುವುದು ನಮಗೆ ಹಿಂದಿನಿಂದ ಬಂದಿರುವ ಅಭ್ಯಾಸ. ಇದರಲ್ಲೇನೂ ತಪ್ಪಿಲ್ಲ. ನಮ್ಮ ಎಲ್ಲ ಯೋಜನೆಗಳೂ ಸದುದ್ದೇಶಪೂರಿತವೇ. ನರಕದ ನಿರ್ಮಾಣವಾಗಿರತಕ್ಕದ್ದು ಕೂಡ ಒಳ್ಳೆಯ ಉದ್ದೇಶಗಳಿಂದಲೇ. ನರಕದ ನೆಲಗಟ್ಟು ಒಳ್ಳೆಯ ಉದ್ದೇಶಗಳೇ ಎಂಬುದು ಸಂತ ಬರ್ನಾರ್ಡನ ವಾಣಿ,

ಆದರೆ ಉದ್ದೇಶ ಒಳ್ಳೆಯದಾಗಿದ್ದ ಮಾತ್ರಕ್ಕೆ ಫಲವೂ ಒಳ್ಳೆಯದಾಗಿರಬೇಕೆಂದೇನೂ ಅಲ್ಲ. ಉದ್ದೇಶಕ್ಕೂ ಫಲಕ್ಕೂ ಇರುವ ಅಂತರ ಬಲು ದೊಡ್ಡದು. ಉದ್ದೇಶವೇನೇ ಇರಲಿ, ಅದನ್ನು ಸಾಧಿಸಲು ಯಾವ ಮಾರ್ಗ ಅನುಸರಿಸುತ್ತೇವೆಂಬುದೂ ಮುಖ್ಯವೇ. ಅನೇಕ ವೇಳೆ ನಾವು ಅನುಸರಿಸುವ ಮಾರ್ಗವೇ ಗುರಿಯನ್ನು ದೂರ ಮಾಡಬಹುದು. ಆದ್ದರಿಂದ ಗುರಿ ತಪ್ಪಲೂಬಹುದು. ನಾವು ಬಯಸದ, ನಾವು ನಿರೀಕ್ಷಿಸದ ಏನೇನೋ ಆಗಿಬಿಡಬಹುದು.

ಬಡ ಜನರ ಉದ್ಧಾರಕ್ಕಾಗೆಂದು ನಮ್ಮ ದೇಶದಲ್ಲಿ ಏರ್ಪಡಿಸಲಾಗುತ್ತಿರುವ ಸಾಲ ಮೇಳಗಳನ್ನು ನೋಡಿದಾಗ ಈ ಭಾವ ಮೂಡುವುದು ಸಹಜ. ಸಾಲಮೇಳಗಳನ್ನೇರ್ಪಡಿಸುವುದರಲ್ಲಿ ಏನು ತಪ್ಪಿದೆ ಎಂಬ ಪ್ರಶ್ನೆಗೆ ಯಾರೂ ಏನನ್ನೂ ಹೇಳಲಾರರು. ಮೇಳದ ಕಲ್ಪನೆ ನಮಗೇನೂ ಹೊಸದಲ್ಲ. ಯಾವುದೇ ವಿಚಾರ ಅಥವಾ ಚಳವಳಿ ದೇಶವ್ಯಾಪಿಯಾಗಲು ಮೇಳ ಒಂದು ಸಾಧನ. ನೇತ್ರ ಚಿಕಿತ್ಸಾ ಶಿಬಿರಗಳೂ ಕುಟುಂಬ ಯೋಜನಾ ಶಿಬಿರಗಳೂ ನಿದರ್ಶನಗಳು. ಜನಸಾಮಾನ್ಯರನ್ನು ದಾರಿದ್ರ, ರೇಖೆಯಿಂದ ಮೇಲಕ್ಕೆತ್ತಲು ಈಗ ಸಾಲ ಮೇಳೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಯಥಾಕ್ರಮದಿಂದ ಯಾವುದನ್ನು ವ್ಯಾಪಕವಾಗಿ ಸಾಧಿಸಲಾಗುವುದಿಲ್ಲವೋ, ಯಾವುದನ್ನು ಶೀಘ್ರಾತಿಶೀಘ್ರವಾಗಿ ಸಾಧಿಸಬೇಕೋ ಅದನ್ನು ಮೇಳದ ಮೂಲಕ ಸಾಧಿಸಬೇಕೆಂದು ಹೊರಟಿರುವುದರಲ್ಲಿ ನಾವೀನ್ಯವೇನೂ ಇಲ್ಲ. ಇದು ಜನಮನವನ್ನು ತಟ್ಟಬಲ್ಲುದು; ಜಡತೆಯನ್ನು ನೀಗಿಸಿ ಕಾರ್ಯದಲ್ಲಿ ತೊಡಗುವಂತೆ ಸಂಬಂಧಪಟ್ಟವರನ್ನು ಪ್ರಚೋದಿಸಬಲ್ಲುದು. ಆರನೆಯ ಯೋಜನೆಯ ಅಡಿಯಲ್ಲಿ ಆರಂಭಿಸಿದ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಫಲ 150 ಲಕ್ಷ ಕುಟುಂಬಗಳಿಗೆ ದೊರಕಬೇಕೆಂಬುದು ಗುರಿಯಾಗಿತ್ತು; ಅಧಿಕೃತ ಅಂಕಿಅಂಶಗಳ ಪ್ರಕಾರ ಇದು 164 ಲಕ್ಷ ಕುಟುಂಬಗಳಿಗೆ ದೊರಕುವಂತಾದ್ದು ಸಾಲ ಮೇಳಗಳಿಂದ

ಎಂಬುದು ನಮ್ಮ ಕೇಂದ್ರದ ಹಣಕಾಸು ರಾಜ್ಯ ಮಂತ್ರಿಗಳ ವಾದ. ಉದರಿ ನೀಡಿಕೆಗಾಗಿ ಮೇಳಗಳನ್ನಾರಂಭಿಸಿದ ಮೇಲೆಯೇ ಇದು ವೇಗವಾಗಿ ಸಾಗತೊಡಗಿದ್ದು; ಸಾಲ ಮೇಳಗಳನ್ನೇರ್ಪಡಿಸದಿದ್ದರೆ ಆರನೆಯ ಯೋಜನೆಯ ಗುರಿಯ ಸಾಧನೆಯಾಗದೆಯೇ ಹೋಗುತ್ತಿತ್ತು ಎಂಬುದು ಅವರ ನಂಬಿಕೆ.

ವಾದದ ಸುಳಿ

ನಮ್ಮ ಬಡಜನರ ನಿಜವಾದ ಸಮಸ್ಯೆಯೆಂದರೆ ಹಣದ್ದೇ ಎಂಬುದು, ಹಣವನ್ನು ಕೊಟ್ಟರೆ ಎಲ್ಲವೂ ಸರಿಹೋಗಿಬಿಡುತ್ತದೆ ಎಂಬುದು ಪ್ರಶ್ನಾರ್ಹವಾದ್ದು. ಕೊಟ್ಟ ಸಾಲ ವಸೂಲಾಗುವುದೆಂದು ದೃಢಪಡಿಸಿಕೊಂಡೇ ಅದಕ್ಕೆ ಯಥೋಚಿತ ಆಧಾರ ಪಡೆದೇ ಸಾಲ ನೀಡುವುದು ಬ್ಯಾಂಕಿಂಗ್ ವ್ಯವಹಾರದಲ್ಲಿ ಲಾಗಾಯ್ತಿನಿಂದ ಬೆಳೆದು ಬಂದಿರುವ ಒಂದು ಪರಿಕಲ್ಪನೆ. ಕೊಟ್ಟ ಸಾಲದ ವಸೂಲಿಗೆ ಬೆಂಬಲವಾಗಿ ಆಧಾರ ಇರಬೇಕೆಂಬುವುದಕ್ಕಿಂತ, ಕೊಟ್ಟ ಸಾಲದಿಂದ ಸಾಲಗಾರ ಸ್ವಾವಲಂಬಿಯಾಗಿ ಬೆಳೆದು ಆ ಸಾಲವನ್ನು ತೀರಿಸುವ ಸಾಮರ್ಥ್ಯ ಗಳಿಸಬೇಕೆಂಬುದು ಸ್ವೀಕಾರಾರ್ಹ ಪರಿಕಲ್ಪನೆ ಎಂಬುದನ್ನು ಒಪ್ಪಬಹುದು. ಆದರೆ ಈಗ ಮೇಳಗಳ ಮೂಲಕ ನೀಡುತ್ತಿರುವ ಸಾಲದಿಂದ ಈ ಉದ್ದೇಶ ಎಷ್ಟರಮಟ್ಟಿಗೆ ಸಾಧಿತವಾಗುತ್ತಿದೆ, ಈ ಗುರಿ ಸಾಧನೆಗೆ ಅನುಗುಣವಾಗಿ ಸಾಲ ನೀಡಿಕೆಯ ವಿಧಾನಗಳನ್ನೂ ಅದರ ಉಪಯೋಗದ ಉಪಾಯಗಳನ್ನೂ ರೂಪಿಸಲಾಗಿದೆಯೆ, ನೀಡಿದ ಸಾಲದ ಸದುಪಯೋಗವಾಗುವುದೆಂದು ಖಾತರಿಪಡಿಸಿಕೊಳ್ಳಲು ಏನು ಮಾರ್ಗ ಅನುಸರಿಸಲಾಗುತ್ತಿದೆ, ಮತ್ತು ಈ ಎಲ್ಲ ಹೊಣೆ ಹೊರಬೇಕಾದ ಬ್ಯಾಂಕ್ ವ್ಯವಸ್ಥೆ ಹಾಗೂ ಅದರ ಸಿಬ್ಬಂದಿಯಲ್ಲಿ ಎಷ್ಟರ ಮಟ್ಟಿಗೆ ಈ ಕಾರ್ಯಕ್ಕೆ ತನ್ನ ಸಾಮರ್ಥ್ಯ ಇದೆ, ಎಷ್ಟರ ಮಟ್ಟಿಗೆ ಈ ನಿಟ್ಟಿನಲ್ಲಿ ಸ್ವತಂತ್ರವಾಗಿ ವರ್ತಿಸಲು ಯುಕ್ತವಾದ ವಾತಾವರಣ ಸೃಷ್ಟಿಯಾಗಿದೆ ಎಂಬ ಹಲವು ಹನ್ನೊಂದು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳಿಲ್ಲ. ಅಂತೆಯೆ ಸಾಲಮೇಳಗಳು ಆರಂಭವಾದಾಗಿನಿಂದಲೂ ಇವುಗಳ ಬಗ್ಗೆ ಹಲವಾರು ಟೀಕೆಗಳು ಬರುತ್ತಲೇ ಇವೆ. ಕೆಲವರು ಈ ಪರಿಕಲ್ಪನೆಯ ಬಗೆಗೆ ಸಂದೇಹ ವ್ಯಕ್ತಪಡಿಸಿದರೆ, ಇನ್ನು ಕೆಲವರು ಇವುಗಳ ಸಂಘಟನೆಯ ವಿಧಾನವನ್ನು ಪ್ರಶ್ನಿಸುತ್ತಿದ್ದಾರೆ. ಒಟ್ಟಿನಲ್ಲಿ ಸಾಲಮೇಳಗಳು ಭಾರಿ ವಾದ ಪ್ರತಿವಾದಗಳ ಕೋಲಾಹಲವನ್ನೇ ಎಬ್ಬಿಸಿವೆ.

ಸಾಲ ಮೇಳಗಳ ಫಲಾನುಭವಿಗಳ ಗುರುತಿಸುವಿಕೆ, ಸಾಲದ ಹಂಚಿಕೆ ಮುಂತಾದವು ದೋಷದೂರವಾಗಿ ನಡೆಯುತ್ತಿವೆ ಎಂದ ಹೇಳಲಾಗುವುದಿಲ್ಲ. ಇವುಗಳಲ್ಲಿ ಬಹಳಷ್ಟು ರಾಜಕೀಯ ಬೆರೆತಿದೆ. ಸಾಲಕ್ಕೆ ಅರ್ಹರಾದವರು ಯಾರೆಂಬುದನ್ನು ಗುರುತಿಸುವಲ್ಲಿ

ಕೇಂದ್ರ ಸರ್ಕಾರ ಸಂಬಂಧಪಟ್ಟ ರಾಜ್ಯ ಸರ್ಕಾರಗಳನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲವೆಂಬ ದೂರುಗಳು ಬರುತ್ತಲೇ ಇವೆ. ಕರ್ನಾಟಕದಲ್ಲಂತೂ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಬಹಳ ಅಸಮಾಧಾನಗೊಂಡಿದೆ. ಸಾಲ ಮೇಳಗಳಲ್ಲಿ ತನ್ನ ಅಧಿಕಾರಿಗಳು ಭಾಗವಹಿಸಬಾರದೆಂದು ರಾಜ್ಯ ಸರ್ಕಾರ ಸೂಚನೆ ನೀಡಿದೆಯೆಂದು ವರದಿಯಾಗಿದೆ. ಈಚೆಗೆ ರಾಜ್ಯದಲ್ಲಿ ನಡೆದ ಉಪ ಚುನಾವಣೆಗಳ ಸಮಯದಲ್ಲಿ ರಾಜ್ಯದಲ್ಲಿ ಭಾರಿ ಸಾಲಮೇಳಗಳನ್ನು ಸಂಘಟಿಸಿದ್ದುಂಟು. ಸಾಲ ಮೇಳಗಳು ಬೇಕೆಂದರೆ ಜನ ನಮಗೆ ಮತ ಕೊಡುತ್ತಾರೆ ಎಂಬ ರೀತಿಯಲ್ಲಿ ಕೇಂದ್ರದ ವರಿಷ್ಠರು ಸವಾಲು ಹಾಕಿದರೆಂದೂ ಹೇಳಲಾಗಿದೆ. ಯಾವುದು ನಿಜವಾಗಿ ಆರ್ಥಿಕೋದ್ದೇಶದಿಂದ ಸಂಘಟಿತವಾಗಬೇಕೋ ಅದು ರಾಜಕೀಯವಾದದ ಸುಳಿಯಾಗಿರುವುದು ಅತ್ಯಂತ ದುರ್ದೈವದ ಸಂಗತಿ.

ಸರ್ವಾಧಿಕಾರದ ಧ್ವನಿ

ಬ್ಯಾಂಕುಗಳ ವ್ಯವಸ್ಥಾಪಕವರ್ಗವೂ, ಬ್ಯಾಂಕ್ ಸಿಬ್ಬಂದಿಯಲ್ಲಿ ಒಂದು ಭಾಗವೂ ಸಾಲ ಮೇಳದಲ್ಲಿ ಮನಃಪೂರ್ವಕವಾಗಿ ಭಾಗವಹಿಸುತ್ತಿಲ್ಲವೆಂದು ನಮ್ಮ ರಾಜಕೀಯ ಧುರೀಣರಿಗೆ ಅಸಮಾಧಾನ. ಗ್ರಾಮೀಣ ಹಾಗೂ ಪಟ್ಟಣದ ಬಡಜನರ ಉದ್ಧಾರದಲ್ಲಿ ಈ ವರ್ಗಗಳ ಜನಕ್ಕೆ ಆಸಕ್ತಿಯಿಲ್ಲ ಎಂದು ಆಕ್ಷೇಪಿಸಲಾಗಿದೆ. ಈ ನಿಟ್ಟಿನಲ್ಲಿ ಮನಃಪೂರ್ವಕವಾಗಿ ಸಹಕರಿಸಿದವರನ್ನು ಪಂಜಾಬಿಗೆ ವರ್ಗ ಮಾಡುವುದಾಗಿ ಬೆದರಿಕೆ ಬಂದಿದೆ. ಪಂಜಾಬು ಭಾರತದ ಭಾಗವಲ್ಲ; ಅಲ್ಲಿಗೆ ವರ್ಗ ಮಾಡುವುದು ಒಂದು ರೀತಿಯಲ್ಲಿ ಗಡೀಪಾರು ಶಿಕ್ಷೆ ಎಂಬ ರೀತಿಯಲ್ಲಿ ಈ ಪರಿಷ್ಕರು ಭಾವಿಸುವಂತಿದೆ. ತಮ್ಮ ಮಾತಿನ ಅರ್ಥವೇನೆಂಬುದನ್ನು, ಅದರಲ್ಲಿ ಅಡಗಿರುವ ಧ್ವನಿಯ ಅಪಾಯವನ್ನು ಅವರೇ ಅರಿತಿಲ್ಲದಿರುವುದು ವಿಷಾದಕರ. ಕರ್ನಾಟಕಕ್ಕೆ ಭಾರತೀಯ ಬ್ಯಾಂಕಿನ ವಲಯ ಕಛೇರಿ ಬಂದದ್ದು ತಮ್ಮಿಂದಾಗಿ; ಈಗ ಇದನ್ನು ಮುಚ್ಚಿಬಿಡಲು ತಾವು ತೀರ್ಮಾನ ತೆಗೆದುಕೊಳ್ಳಬಲ್ಲರು ಎಂಬ ಮಾತಿನಲ್ಲಿ ಸರ್ವಾಧಿಕಾರದ ಧ್ವನಿಯಿದೆ. ಯಾರೊಬ್ಬರನ್ನು ಅಥವಾ ಯಾವೊಂದು ವರ್ಗವನ್ನು ಒಲಿಸಲು ಅಥವಾ ಮಣಿಸಲು ಒಬ್ಬ ಮಂತ್ರಿ ಇಂಥ ತೀರ್ಮಾನಗಳನ್ನು ತೆಗೆದುಕೊಳ್ಳ ಬಲ್ಲರೆಂಬುದಾದರೆ, ಇಡೀ ರಾಜ್ಯದ ಹಿತದ ಪ್ರಶ್ನೆಯನ್ನು ಕಡೆಗಣಿಸಬಲ್ಲರೆಂದಾದರೆ, ಅದು ನಮ್ಮ ಪ್ರಜಾಪ್ರಭುತ್ವದ ನಿಜಸ್ಥಿತಿಗೆ, ಅದರಲ್ಲಿ ನಮ್ಮ ನಾಯಕರು ಎಂಥ ಪಾತ್ರವಹಿಸುತ್ತಾರೆಂಬುದಕ್ಕೆ ಸಾಕ್ಷಿಯಾಗಿದೆ. ಇದು ಆರೋಗ್ಯಕರ ಚಿಹ್ನೆಯಲ್ಲ. ಇಂಥ ಭಾವನೆಗಳನ್ನು ವ್ಯಕ್ತಪಡಿಸಲು ನಮ್ಮ ನಾಯಕರು ನಾಚಬೇಕು,

ಕಂಚಿನ ಅಂಗಡಿಯಲ್ಲಿ ಆನೆ

ಹೀಗೆಂದರೆ ಅಸಹಕಾರಿ ಮನೋಭಾವದ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ವರ್ಗದ ಪರವಾಗಿ ಈ ಮಾತು ಬರೆಯಲಾಗುತ್ತಿದೆಯೆಂದು ಯಾರೂ ತಿಳಿಯಬಾರದು. ನಮ್ಮ ವರಿಷ್ಠರು ಯಾವುದೇ ಹೇಳಿಕೆ ನೀಡುವ ಮೊದಲು ಅದರ ಪರಿಣಾಮಗಳೇನೆಂಬುದನ್ನು ಕುರಿತು ಚಿಂತಿಸುವುದು ಅಗತ್ಯ. ಬಡ ಜನಕ್ಕೆ ಬ್ಯಾಂಕುಗಳಿಂದ ಉಪಕಾರವಾಗಬೇಕು ಎಂಬುದಕ್ಕೆ ಯಾರೂ ವಿರೋಧ ವ್ಯಕ್ತಪಡಿಸಲಾರರು. ಆದರೆ, ಈಗ ಅನುಸರಿಸುತ್ತಿರುವ ವಿಧಾನಗಳಿಂದ ಆ ಉದ್ದೇಶ ಸಫಲವಾಗುತ್ತಿದೆಯೇ ಎಂಬುದನ್ನು ನೋಡಬೇಕು, ಸಾಲ ಮೇಳಗಳು ಕೇವಲ ಪ್ರಚಾರದ ಅಥವಾ ಅಪಪ್ರಚಾರದ ಸಾಧನಗಳಾಗಬಾರದು. ಯಾರ ಮೂಲಕ ಈ ಸಾಲ ಮೇಳಗಳು ಯಶಸ್ವಿಯಾಗಬೇಕೋ ಅವರ ಬಹಿರಂಗ ಅವಹೇಳನಗಳಿಂದ ಖಂಡಿತ ಅವು ಸಫಲವಾಗವು. ಬ್ಯಾಂಕುಗಳು ಸಾರ್ವಜನಿಕ ಸಂಸ್ಥೆಗಳು. ಜನತೆಯ ಠೇವಣಿಗಳಿಂದ ಅವು ಬದುಕಬೇಕಾದವು, ಬೆಳೆಯಬೇಕಾದವು. ಜನತೆಯ ಉಳಿತಾಯಗಳ ಸಂಗ್ರಹಣೆ ವಿತರಣೆಗಳನ್ನು ನಿರ್ವಹಿಸುವ, ಉಳ್ಳವರಿಂದ ಪಡೆದದ್ದನ್ನು ಇಲ್ಲದವರಿಗೆ ಹಂಚುವ, ತನ್ಮೂಲಕ ಬಂಡವಾಳ ಶೇಖರಣೆಗೆ ಹಾಗೂ ಉತ್ಪಾದಕ ಕಲಾಪಗಳಲ್ಲಿ ಅದನ್ನು ತೊಡಗಿಸುವುದಕ್ಕೆ ಸಾಧನವಾಗಿರುವ, ಈ ಪ್ರಕ್ರಿಯೆಯಲ್ಲಿ ಹಣ ನಿರ್ಮಾಣದ ಸಾಮರ್ಥ್ಯವನ್ನು ಕೂಡ ಪಡೆದಿರುವ ಬ್ಯಾಂಕುಗಳು ಉದ್ಯಮ ಸಂಸ್ಥೆಗಳಾದ್ದರಿಂದ ತಮ್ಮ ಸಾಂಸ್ಥಿಕೋದ್ದೇಶಗಳಿಗೂ, ಅವನ್ನು ಸಾಧಿಸಲು ನಿಯೋಜಿಸಲಾದ ವಿಧಿವಿಧಾನಗಳಿಗೂ ಬದ್ಧವಾಗಿ ಅವು ಕಾರ್ಯ ನಿರ್ವಹಿಸಬೇಕು. ಬ್ಯಾಂಕುಗಳು ಆದಿಕಾಲದಿಂದ ಬೆಳೆದುಕೊಂಡು ಬಂದ ಪರಂಪರೆ ಹಾಗೂ ಪದ್ಧತಿಗಳನ್ನೂ ಬಿಡಲಾರವು. ಇವನ್ನು ರಾಷ್ಟ್ರೀಕರಿಸಿ, ಇವಕ್ಕೆ ಸಾಮಾಜಿಕೋದ್ದೇಶವನ್ನೇನೋ ಜೋಡಿಸಲಾಯಿತು.

ರಾಷ್ಟ್ರೀಕರಣವೆಂದರೆ ಯಾರೋ ಕೆಲವರ ಸ್ವತ್ತಾಗಿರುವುದನ್ನು ರಾಷ್ಟ್ರದ ಸ್ವತ್ತಾಗಿಸುವುದು. ಅದರ ಫಲಾನುಭವ ಎಲ್ಲರಿಗೂ ಸಾಮಾನ್ಯವಾಗಿ ದೊರಕುವಂತೆ ಮಾಡುವುದು. ಅದು ಯಾವುದೇ ಆಳುವ ಪಕ್ಷದ ಅಥವಾ ವರ್ಗದ ಸ್ವತ್ತಾಗತಕ್ಕದ್ದಲ್ಲ. ಬ್ಯಾಂಕುಗಳು, ಸರ್ಕಾರಿ ಬ್ಯಾಂಕುಗಳಲ್ಲ. ಹಾಗಾದರೆ ಸರ್ಕಾರಿ ಇಲಾಖೆಗಳಿಗೂ ಅವಕ್ಕೂ ವ್ಯತ್ಯಾಸ ಇರಲಾರದು. ಬ್ಯಾಂಕುಗಳು ಸ್ವತಂತ್ರ ಉದ್ಯಮ ಸಂಸ್ಥೆಯ ಎಲ್ಲಾ ಲಕ್ಷಣಗಳನ್ನೂ ಉಳಿಸಿಕೊಂಡು ಸಾರ್ವಜನಿಕ ಉದ್ದೇಶಗಳನ್ನೂ ಸಾಧಿಸುವಂತೆ ಕೆಲವು ಮಾನದಂಡಗಳನ್ನು ರೂಪಿಸಬೇಕು. ಅವಕ್ಕೆ ಅನುಗುಣವಾಗಿ ಬ್ಯಾಂಕುಗಳು ನಡೆದುಕೊಳ್ಳುವಂತೆ ಮಾಡಬೇಕು. ಬ್ಯಾಂಕುಗಳು ಹಳೆಯ ರೀತಿಯಲ್ಲೇ ನೀಡಿದ ಸಾಲಕ್ಕೆ ಆಧಾರ ಇರುವಂತೆ, ನಡೆಯಬೇಕೆಂದು ಹೇಳದಿರಬಹುದು. ಆದರೆ ಅವು ನೀಡಿದ ಸಾಲ

ಉತ್ಪಾದಕವಾಗಿರಬೇಕು. ಸಾಲ ಪಡೆದಾತ ಅದನ್ನು ಬಳಸಿಕೊಂಡು ಜೀವನ ಗುಣಮಟ್ಟವನ್ನು ಸುಧಾರಿಸಿಕೊಂಡು ಸ್ವಾವಲಂಬಿಯಾಗಿ ಪರಿವರ್ತನೆಗೊಳ್ಳುವಂತೆ ಪಡೆದ ಸಾಲವನ್ನು ಪಾವತಿ ಮಾಡುವ ಸಾಮರ್ಥ್ಯ ಗಳಿಸಿಕೊಳ್ಳುವಂತೆ ನೋಡಿಕೊಳ್ಳಬೇಕಲ್ಲವೆ? ಈ ಮಾನಗಳನ್ನು ಸಾಧಿಸಲು ಬ್ಯಾಂಕುಗಳಲ್ಲಿ ಯಾವ ಅಧೋರಚನೆಯ ನಿರ್ಮಾಣವಾಗಿದೆ? ಬ್ಯಾಂಕುಗಳಲ್ಲಿ ಇದಕ್ಕೆ ತಕ್ಕ ವ್ಯವಸ್ಥೆಯಾಗಲಿ ತಜ್ಞತೆಯಾಗಲಿ ರೂಪುಗೊಂಡಿದೆಯೆ? ತಕ್ಕ ಸಿಬ್ಬಂದಿಯ ನೇಮಕವಾಗಿದೆಯೆ? ಉಗುರು ಕತ್ತರಿಸುವ ಕತ್ತರಿಯಿಂದ ಶಸ್ತ್ರಕ್ರಿಯೆ ನಡೆಸುವುದಾಗಲಿ, ಕೊಡಲಿಯಿಂದ ಉಗುರ ಕತ್ತರಿಸಲು ಯತ್ನಿಸುವುದಾಗಲಿ ಹಾಸ್ಯಾಸ್ಪದವಷ್ಟೇ ಅಲ್ಲ, ಮಹಾ ಅಪಾಯಕರ. ಬ್ಯಾಂಕುಗಳು ಇತರರ ಹಣದಲ್ಲಿ ವ್ಯವಹರಿಸುವ ಸಂಸ್ಥೆಗಳಾದ್ದರಿಂದ ಅವು ತಮಗೆ ಅನೂಚಾನವಾಗಿ ಬಂದ ವಿಧಿ ಪದ್ಧತಿಗಳ ಚೌಕಟ್ಟಿನೊಳಗೆ ಹೊಸ ಗುರಿಗಳನ್ನು ಸಾಧಿಸುವುದು ಹೇಗೆಂಬುದನ್ನು ಕುರಿತು ಚಿಂತಿಸುವುದು ಅಗತ್ಯವಾಗಿದೆ. ಕೊಟ್ಟ ಸಾಲಕ್ಕೆ ಅಂತಿಮವಾಗಿ ಸಿಬ್ಬಂದಿಯೇ ಹೊಣೆಯಾದ್ದರಿಂದ, ಸಾಲದ ಪ್ರತಿಯೊಂದು ಅರ್ಜಿಯನ್ನೂ ಪ್ರಕ್ರಮೀಕರಿಸಿ, ಸಾಂಸ್ಥಿಕೋದ್ದೇಶಗಳು (corporate objectives) ಸಾಮಾಜಿಕೋದ್ದೇಶಗಳು (social objectives) ಸಾಧಿಸುವಂತೆ, ಜೊತೆಗೆ ಬ್ಯಾಂಕಿಂಗಿನ ಸಾರಭೂತ ತತ್ವಗಳಾದ ಸುಭದ್ರತೆ (Safety) ದ್ರವತ್ವ (liquidity)ಗಳೂ ಸಾಧಿತವಾಗುವಂತೆ, ಪರಸ್ಪರ ವಿರುದ್ಧವಾದ ಈ ಧ್ಯೆಯೋದ್ದೇಶಗಳ ಸಮನ್ವಯ ಸಾಧಿಸಬೇಕಾಗಿದೆ. ಇದೂ ಒಂದು ಕಲೆ. ಇದನ್ನರಿಯದ ರಾಜಕಾರಣಿಗಳು ಕಂಚಿನ ಅಂಗಡಿಗೆ ನುಗ್ಗಿದ ಆನೆಯಂತೆ ಎಲ್ಲವನ್ನೂ ನಾಶಪಡಿಸತೊಡಗಿದ್ದಾರೆ. ದೇವತೆಗಳು ಹೆಜ್ಜೆ ಇಕ್ಕಲು ಅಂಜುವೆಡೆಯಲ್ಲಿ ಮೂರ್ಖರು ಮುನ್ನುಗ್ಗುತ್ತಾರೆ! ಇದರಿಂದಾಗುವ ಅನಾಹುತ ಅಷ್ಟಿಷ್ಟಲ್ಲ! ಚಿನ್ನದ ತತ್ತಿ ಇಡುವ ಕೋಳಿಯ ಹೊಟ್ಟೆಯನ್ನೇ ಬಗೆಯುವುದು ಮಹಾಪರಾಧ!

ಪ್ರಥಮ ಪಾಠಗಳು

ಬ್ಯಾಂಕುಗಳಂಥ ಸಂಸ್ಥೆಗಳನ್ನು ಸಮಾಜಕಲ್ಯಾಣ ಕಾರ್ಯಗಳಿಗೆ ಆರ್ಥಿಕ ಪ್ರಗತಿಯ ಉದ್ದೇಶಗಳಿಗೆ ಬಳಸಿಕೊಳ್ಳಬಯಸುವ ರಾಜಕಾರಣಿಗಳು ಈ ಬಗ್ಗೆ ಕೆಲವು ಪ್ರಥಮ ಪಾಠಗಳನ್ನು ಕಲಿಯಬೇಕಾಗಿದೆ. ಅವನ್ನು ಈ ರೀತಿ ಪಟ್ಟಿ ಮಾಡಿ ಹೇಳಬಹುದು

1. ರಾಷ್ಟ್ರೀಕೃತ ಸಂಸ್ಥೆಗಳು ರಾಷ್ಟ್ರದ ಸ್ವತ್ತುಗಳು, ಸರ್ಕಾರದ ಇಲಾಖೆಗಳಲ್ಲ. ಅವಕ್ಕೂ ವ್ಯಕ್ತಿತ್ವಗಳುಂಟು, ಸ್ವರೂಪಗಳುಂಟು. ಅವುಗಳ ಸ್ವರೂಪ ನಾಶವಾಗದ ಹಾಗೆ ಅವನ್ನು ರಾಷ್ಟ್ರ ಕಲ್ಯಾಣಕ್ಕಾಗಿ ದುಡಿಸಿಕೊಳ್ಳುವುದು

ಹೇಗೆಂಬುದನ್ನು ಅರಿಯಬೇಕು, ಅವು ಸರ್ಕಾರಿ ಇಲಾಖೆಗಳಲ್ಲವಾದ್ದರಿಂದ ಇಲಾಖಾ ನಿಯಮಗಳನ್ನು ಅವಕ್ಕೆ ಅನ್ವಯಿಸಿದರೆ ಅವು ಸತ್ತುಹೋಗುತ್ತವೆ.

2. ಹೀಗೆಂದರೆ ಅವು ಸ್ವಚ್ಛಂದವಾಗಿರಬೇಕೆಂದಲ್ಲ. ಸರ್ವಾನುಮತದಿಂದ ರೂಪಿತವಾದ ನೀತಿಸಂಹಿತೆಯೊಂದಕ್ಕೆ ಅನುಗುಣವಾಗಿ ಅವು ಕಾರ್ಯಾಚರಣೆ ನಡೆಸಬೇಕು. ಅವುಗಳ ಮೇಲ್ವಿಚಾರಣೆಯ ಹೊಣೆಯನ್ನು ಸ್ವಾಯತ್ತ ಸಂಸ್ಥೆಗಳಿಗೆ ಬಿಟ್ಟುಕೊಡಬೇಕು. ಉದಾಹರಣೆಗೆ, ಈ ಕೆಲಸ ಮಾಡಲು ನಮ್ಮಲ್ಲಿ ರಿಸರ್ವ್ ಬ್ಯಾಂಕ್ ಇದೆ. ಆದರೆ ರಿಸರ್ವ್ ಬ್ಯಾಂಕಿನಂಥ ಸಂಸ್ಥೆ ಕೂಡ ಇಂದು ಸರ್ಕಾರದ ಇಲಾಖೆಯಂತೆ ಪರಿವರ್ತನೆಗೊಳ್ಳುತ್ತಿದೆ.

3. ಹಣವನ್ನು ಕೊಟ್ಟುಬಿಟ್ಟರೆ ಒಮ್ಮಿಂದೊಮ್ಮೆಲೇ ಪ್ರಗತಿ ಸಾಧಿಸಿಬಿಡುತ್ತದೆ ಎಂಬ ಭ್ರಮೆ ಬಿಡಬೇಕು. ಆ ಹಣವನ್ನು ಹೇಗೆ ಬಳಸಿಕೊಳ್ಳಬೇಕೆಂಬ ಪರಿಜ್ಞಾನವೂ ದೊರಕಬೇಕು. ಅದನ್ನು ದೊರಕಿಸಲು ಯುಕ್ತವಾದ ವ್ಯವಸ್ಥೆ ರೂಪಿತವಾಗಿದೆಯೇ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ಹಣ ನೀಡಿಕೆಗಿಂತ ಇದಕ್ಕೆ ಆದ್ಯತೆ ನೀಡಬೇಕು. ಅಲ್ಲದೆ ನೀಡಿದ ಹಣ ಸಾಕೇ, ಸಾಲದೇ ಎಂಬ ಬಗೆಗೂ ಪರಿಶೀಲನೆ ನಡೆಸಬೇಕು.

4. ಸಾಲ ಕೊಡಿಸುವವರೊಬ್ಬರು, ಹೊಣೆ ಇನ್ನೊಬ್ಬರದು ಎಂಬ ಧೋರಣೆ ಹೋಗಬೇಕು. ಸಾರ್ವಜನಿಕವಾಗಿ ಸಾಲ ವಿತರಣೆ ಮಾಡುವ ಪರಿಪಾಟಿಯೇ ಆರೋಗ್ಯಕರವಲ್ಲ. ಪಡೆಯುವವನ ಕೈ ಯಾವಾಗಲೂ ಕೆಳಗೆ; ನೀಡುವವ ಮೇಲೆ – ಅದೂ ವೇದಿಕೆಯ ಮೇಲೆ! ದೈನ್ಯತೆಯ, ಕ್ಲೈಬ್ಯತೆಯ ವಾತಾವರಣ ಹೋಗಬೇಕು. ನೆರವು ಪಡೆಯುವವನಲ್ಲೂ ಆತ್ಮಗೌರವವನ್ನು ಕುದುರಿಸಬೇಕು.

5. ಇಂಥ ಕಾರ್ಯಕ್ರಮ ಪಕ್ಷಾತೀತವಾಗಿರಬೇಕು. ಎಲ್ಲ ಪಕ್ಷಗಳನ್ನೂ ತೊಡಗಿಸಬೇಕು ಎನ್ನುವುದಕ್ಕಿಂತ ಎಲ್ಲ ಪಕ್ಷಗಳೂ ಇದರಿಂದ ದೂರ ಸರಿಯಬೇಕು. ತಜ್ಞರಿಗೆ ಇದನ್ನು ಬಿಡಬೇಕು.

6. ಇಂದು ಬ್ಯಾಂಕುಗಳಿಗೆ ಮಾಡಲಾಗುತ್ತಿರುವ ನೇಮಕಾತಿಗೂ ಬ್ಯಾಂಕು ಸಿಬ್ಬಂದಿಗಳಿಗೆ ಹೊರಿಸಲಾಗುತ್ತಿರುವ ಹೊಣೆಗಳಿಗೂ ಯಾವುದೇ ಸಂಬಂಧವಿಲ್ಲ. ಹಳೆಯ ಬ್ರಿಟಿಷ್ ಕಾಲದ ಮಾದರಿಯ – ಕೂಡುವ, ಕಳೆಯುವ, ಒಗಟು ಬಿಡಿಸುವ, ಜ್ಞಾಪಕಶಕ್ತಿಯನ್ನಳೆಯುವ, ಉರುಹಚ್ಚುವ ಪ್ರವೃತ್ತಿಯನ್ನು ಬೆಳೆಸುವ, ಒಂದು ರೀತಿಯಲ್ಲಿ ಕೇವಲ ಲಾಟರಿಯ ರೀತಿಯದಾಗಿರುವ ಪರೀಕ್ಷಾ ಪದ್ಧತಿಯನ್ನು ಬಿಟ್ಟುಕೊಟ್ಟು, ಅಭ್ಯರ್ಥಿಗಳ ಮಾನಸಿಕ ಧೋರಣೆ,

ಮೌಲ್ಯಗಳ ಅರಿವು, ಸಾಮಾಜಿಕ ಕಾಳಜಿ, ಬ್ಯಾಂಕಿಂಗ್ ವ್ಯವಹಾರದ ಸ್ವರೂಪದ ಹಾಗೂ ಆರ್ಥಿಕ ಪರಿಸ್ಥಿತಿಯ ಜ್ಞಾನ, ಸಂಘಟನಾ ಚಾತುರ್ಯ, ಸಾರ್ವಜನಿಕರೊಂದಿಗೆ ಮಿಳಿಯುವ ಸಾಮರ್ಥ್ಯ ಮುಂತಾದವನ್ನು ಪರೀಕ್ಷಿಸಿ, ಅದರ ಆಧಾರದ ಮೇಲೆ ಸಿಬ್ಬಂದಿಯನ್ನು ಆಯ್ಕೆ ಮಾಡುವ ವಿಧಾನ ರೂಪಿತವಾಗಬೇಕು. ವಿವಿಧ ಕ್ಷೇತ್ರಗಳಲ್ಲಿ ತಜ್ಞರಾದವರನ್ನು ನೇಮಿಸಬೇಕು. ಸಿಬ್ಬಂದಿ ಸಾಕಷ್ಟಿರಬೇಕು.

7 ಯಾವುದೇ ಅಭಿವೃದ್ಧಿ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಅಧಿಕಾರದ ವಿಕೇಂದ್ರೀಕರಣವಾಗಬೇಕು. ಪ್ರಥಮತಃ ಬ್ಯಾಂಕುಗಳನ್ನು ಪ್ರಾದೇಶಿಕವಾಗಿ ಒಡೆಯಬೇಕು. ಅನರ್ಥಕಾರಿ ಸ್ಪರ್ಧೆ ಕೊನೆಗೊಳ್ಳಬೇಕು. ಸ್ಥಳೀಯವಾಗಿ ಯೋಜನೆಗಳನ್ನು ರೂಪಿಸಬೇಕು. ಇವನ್ನು ಕಾರ್ಯಗತ ಮಾಡುವ ವಿವಿಧ ಅಭಿಕರಣಗಳ (agencies) ನಡುವೆ ಹೊಂದಾಣಿಕೆ ಇರಬೇಕು. ಈಗ ಇರುವ ವ್ಯವಸ್ಥೆ ಕೇವಲ ತೋರಿಕೆಯದು. ವಾಸ್ತವವಾಗಿ ಈ ಆಭಿಕರಣಗಳ ನಡುವೆ ಯಾವ ಸಹಯೋಗವೂ ಇಲ್ಲ. ಹಲವು ಕುರುಡರು ತಮ್ಮ ಕಾಲುಗಳನ್ನು ಪರಸ್ಪರವಾಗಿ ಕಟ್ಟಿಕೊಂಡು ಓಟದ ಸ್ಪರ್ಧೆಯಲ್ಲಿ ತೊಡಗಿ, ಒಬ್ಬರಿಗೆ ಇನ್ನೊಬ್ಬರು ಕಾಲ್ತೊಡಕಾಗಿದ್ದಾರೆಂದು ಅಪಾದಿಸುತ್ತ, ಪರಸ್ಪರ ಗುದ್ದಾಟದಲ್ಲಿ ನಿರತರಾಗಿದ್ದಂತಿದೆ, ಈಗಿನ ಪರಿಸ್ಥಿತಿ.

8. ಸಾರ್ವಜನಿಕವಾಗಿ ಬ್ಯಾಂಕ್ ಉದ್ಯೋಗಿಗಳನ್ನಾಗಲಿ ಇತರೆ ರಾಜಕೀಯ ಪಕ್ಷಗಳನ್ನಾಗಲಿ ಅವಹೇಳನ ಮಾಡುವುದು ನಿಲ್ಲಬೇಕು. ಸಾಲ ಮೇಳಗಳು ಯಶಸ್ವಿಯಾಗಲಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ವೇದಿಕೆಯ ಮೇಲೆ ಬರಮಾಡಿ, ಅವರಿಗೆಷ್ಟು ಸಂಬಳ ಏನೇನು ಸೌಲಭ್ಯಗಳಿವೆಯೆಂದೂ, ನಿರ್ಗತಿಕರ ಸ್ಥಿತಿ ಎಂಥದೆಂದೂ ಬಣ್ಣಿಸುವ ಮಂತ್ರಿಗಳೇ ಸ್ವತಃ ಏನೇನು ಸೌಲಭ್ಯಗಳನ್ನೂ ಭೋಗಗಳನ್ನೂ ಅನುಭವಿಸುತ್ತಿದ್ದಾರೆಂಬುದನ್ನು ಯೋಚಿಸಬೇಕು. ಎಲ್ಲರ ಸಹಕಾರ ಪಡೆಯುವ ವಿಧಾನ ಇದಲ್ಲ. ಅವಮಾನಿತನಾದವನು ಶಾಶ್ವತ ವಿರೋಧಿಯಾಗುತ್ತಾನೆ. ಅವನ ಮನಸ್ಸು ಮುರಿದು ಹೋದಮೇಲೆ ಯಾವುದರಿಂದಲೂ ಅದು ಬೆಸೆಯದು. ಸಾಲಮೇಳವೊಂದರಲ್ಲಿ ಮಂತ್ರಿಯೊಬ್ಬರು ಸಂಬಂಧಪಟ್ಟ ಅಧಿಕಾರಿಯೊಬ್ಬರನ್ನು ಕರೆದು ಅವರ ಕನ್ನಡ ಅಭಿಮಾನವನ್ನು ಅವಹೇಳನ ಮಾಡಿ, 'ಕನ್ನಡವನ್ನು ಪ್ರೀತಿಸುವ, ಆದರೆ ಬಡವರಿಗೆ ಸಹಾಯಕರಾಗಿರದ ಇಂಥ ಅಧಿಕಾರಿ ಬೇಕೋ, ಕನ್ನಡಿಗರಲ್ಲದಿದ್ದರೂ ಬಡವರಿಗೆ ನೆರವು ನೀಡುವವರು ಬೇಕೋ' ಎಂದು ನೆರೆದವರನ್ನು ಕೇಳಿ ಅವರಿಂದ ಧಿಕ್ಕಾರಗಳನ್ನು ಕೂಗಿಸಿದ್ದು ಅನೌಚಿತ್ಯದ ಪರಮಾವಧಿ. ಕನ್ನಡಕ್ಕೂ ಸಾಲಮೇಳಕ್ಕೂ ತೆಕ್ಕೆ ಹಾಕಬಾರದು.

ಅಥವಾ ಈ ವಿರೋಧ ಕನ್ನಡಿಗರಿಗೇ ಸೀಮಿತವಾದ್ದೆಂದೂ ಬಗೆಯಬಾರದು. ಬ್ಯಾಂಕ್ ಕನ್ನಡ ಸಂಘಗಳು ಬಡಜನ ವಿರೋಧಿ ಎಂದು ಪ್ರಚಾರ ಮಾಡುವುದು ಅರಿಯದ ಜನರನ್ನು ಕನ್ನಡದ ವಿರುದ್ಧ ಎತ್ತಿಕಟ್ಟುವುದೂ ದೌಷ್ಟ್ಯದ ತುತ್ತತುದಿ. ಇಂಥ ಯತ್ನದಲ್ಲಿ ತೊಡಗಿರುವವರು ಮಾನಸಿಕವಾಗಿ ಅಸ್ವಸ್ಥರಾಗಿರಬೇಕೆಂದು ತೋರುತ್ತದೆ. ತಾವು ಎಂದುಕೊಂಡಂತೆಯೇ ಎಲ್ಲವೂ ಆಗುತ್ತಿಲ್ಲವೆಂದು ಅವರ ಕೋಪ ಎತ್ತೆತ್ತಲೋ ತಿರುಗುತ್ತಿದೆ. ಸಾಮಾನ್ಯ ಜನರನ್ನು ಮೇಲೆತ್ತುವ ಯಾವುದೇ ಕಾರ್ಯವನ್ನಾದರೂ ಆ ಜನರ ಭಾಷೆಯ ಮೂಲಕವೇ – ಕರ್ನಾಟಕದಲ್ಲಿ ಕನ್ನಡದ ಮೂಲಕವೇ – ಸಾಧಿಸಬೇಕು. ಆಗಲೇ ಅದು ಸಾರ್ಥಕವಾದೀತು. ಇದನ್ನು ಎಲ್ಲರೂ ಅರಿಯಬೇಕು.

ಆದ್ದರಿಂದ ಮಂತ್ರಿಗಳಾಗಲಿ ಉನ್ನತ ವ್ಯವಸ್ಥಾಪಕ ವರ್ಗದವರಾಗಲಿ ವೃಥಾ ಗೊಂದಲಗಳನ್ನು ಸೃಷ್ಟಿಸದೆ, ನಿಜಕ್ಕೂ ಆರ್ಥಿಕ ಸಾಮಾಜಿಕ ಪರಿವರ್ತನೆಯನ್ನು ಸಾಧಿಸಲು ಏನು ಮಾಡಬೇಕೆಂಬುದನ್ನು ಕುರಿತು ಯೋಚಿಸಲೂ ಯೋಜಿಸಲೂ ತೊಡಗಬೇಕು. ಅದಕ್ಕಾಗಿ ಕಾರ್ಯಪ್ರವೃತ್ತರಾಗಬೇಕು. ಅವರಲ್ಲಿ ಈಗಲಾದರೂ ಇಂಥ ವಿವೇಕ ಮೂಡಲಿ.

14.

ಮಾರ್ಚ್ 1987
ಕನ್ನಡವ ಕಾಪಿಡಲು ಸಂಕಲ್ಪ ಬೋಧಿಸಯ್ಯ

"ಬ್ಯಾಂಕಿಂಗ್ ಪ್ರಪಂಚದ" ಎಂಟನೆಯ ಸಂಪಟದ ಮೊದಲ ಸಂಚಿಕೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಏಳು ವರ್ಷಗಳ ಹಿಂದೆ ಅರ್ಧವಾರ್ಷಿಕವಾಗಿ ಆರಂಭವಾದ ಈ ಪತ್ರಿಕೆ ಕಳೆದ ವರ್ಷದಿಂದ ತ್ರೈಮಾಸಿಕವಾಗಿ ಹೊರಬರುತ್ತಿದೆ. ಇಂಥ ಪತ್ರಿಕೆಯೊಂದನ್ನು ಹೊರತರುವುದರ ಕಷ್ಟಗಳೇನೆಂಬುದರ ಅನುಭವದೊಂದಿಗೆ ನಮಗೆ ಹೆಮ್ಮೆಯೂ ಆಗುತ್ತಿದೆ. ಬೇರಾವ ಭಾರತೀಯ ಭಾಷೆಯಲ್ಲೂ ಹಣ–ಬ್ಯಾಂಕಿಂಗ್ ವಿಚಾರಗಳಿಗೆಂದೇ ಮೀಸಲಾದ ಪತ್ರಿಕೆ ಇಲ್ಲವೆಂಬುದೇ ನಮಗೆ ಹೆಚ್ಚಿನ ಹೆಮ್ಮೆಯ ಸಂಗತಿ. ಈ ಬಗೆಯ ಪತ್ರಿಕೆ ಏಳು ವರ್ಷಗಳನ್ನು ದಾಟಿ ಮುನ್ನಡೆದಿದೆಯೆಂಬುದೂ ಹೆಮ್ಮೆಗೆ ಕಾರಣ. ಇಂಥ ಪ್ರಯತ್ನಗಳಿಗೆ ಕನ್ನಡಿಗರಿಂದ ಎಂಥ ಸ್ವಾಗತ ಪುರಸ್ಕಾರಗಳು ದೊರಕುವುವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಈಚೆಗೆ ತಮ್ಮ ತುಂಬು ವಯಸ್ಸಿನಲ್ಲಿ ತೀರಿಕೊಂಡ ಡಾ. ಎಸ್. ವಿ. ರಂಗಣ್ಣ ಅವರು ಕನ್ನಡಿಗರ ಸ್ವಭಾವವನ್ನು ವಚನವೊಂದರಲ್ಲಿ ಬಹಳ ಚೆನ್ನಾಗಿ ಹೀಗೆ ಬಣ್ಣಿಸಿದ್ದಾರೆ: 'ಕರ್ನಾಟ ಜನಪದವಿಂದು ನರಿಬಳಗೆ, ಕುರಿಮಂದೆ, ಹೆಬ್ಬಾವುಸಂಸಾರ, ಎಮ್ಮೆದೊಡ್ಡಿ, ತಟ್ಟುಕೊಟ್ಟಿಗೆ, ಇರುವೆಗೂಡು, ನೋಡಯ್ಯ; ಎಲ್ಲರನು ಎಲ್ಲವನು ಎಚ್ಚರಿಸಿ ಇದಿರು ನಿಲ್ಲಿಸಿಕೊಂಡು ನಿಯಮಗಳ ವಿಧಿಸಯ್ಯ ಕನ್ನಡದ ಕಾಪಿಡಲು ಸಂಕಲ್ಪ ಬೋಧಿಸಯ್ಯ, ಸಾಹಸವ ಕುದುರಿಸಯ್ಯ.' ಒಂದು ಕಾಲದಲ್ಲಿ ಸಾಹಸಕ್ಕೆ ಹೆಸರಾಗಿದ್ದ ಕನ್ನಡಿಗರು ಇಂದು ಅಭಿಮಾನಶೂನ್ಯರಾಗಿದ್ದಾರೆ ಎಂದು ಸಾಧಿಸಲು ಪುರಾವೆಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯನ್ನು ಹೊರಡಿಸಲು ಬೆಟ್ಟಕ್ಕೆ ಕಲ್ಲು ಹೊರುವಷ್ಟು ಪ್ರಯಾಸಪಡಬೇಕಾಗುತ್ತಿರಲಿಲ್ಲ. ಇದರ ಉಪಯುಕ್ತತೆಯನ್ನು ಅರಿಯಲಾರದಷ್ಟು ದಡ್ಡರೇನೂ ಕನ್ನಡಿಗರಲ್ಲ. ಆದರೆ ಅರಿಯುವ ಮನಸ್ಸು ಇಲ್ಲ. ಅಧಿಕಾರಷಾಹಿಯಲ್ಲಿ ಮೇಲಿನಿಂದ ಆಜ್ಞಾರೂಪದಲ್ಲಿ ಬಂದದ್ದಕ್ಕೆ ಮಾತ್ರವೇ ಪುರಸ್ಕಾರ. ಮೇಲಿನವರು ಈ ಪತ್ರಿಕೆಯ ಬಗ್ಗೆ ಅಂಥ ಆಜ್ಞೆ ಹೊರಡಿಸುವುದರಿಂದ ಅವರಿಗೆ ಪ್ರಯೋಜನವಾದರೂ ಏನು? ಇಂಥ ಪರಿಸ್ಥಿತಿ ನಾಡಿಗೆ ಒಳ್ಳೆಯದಲ್ಲ.

ಧನ್ಯವಾದ

ಆದರೆ 'ಬ್ಯಾಂಕಿಂಗ್ ಪತ್ರಿಕೆ' ಈ ಪರಿಸ್ಥಿತಿಯಿಂದಾಗಿ ನಿಲ್ಲುವುದಿಲ್ಲ. ಕನ್ನಡದಲ್ಲಿ ಆಸಕ್ತಿ ಇರುವವರ ಸಂಖ್ಯೆ ಎಷ್ಟೇ ಅಲ್ಪವಾದರೂ ಅವರ ಸಂಕಲ್ಪ ಶಕ್ತಿ ಅಲ್ಪವಲ್ಲ. 'ನೆಚ್ಚಿದನೆಂದರೆ, ಮೆಚ್ಚಿದನೆಂದರೆ, ಸಲೆ ಮಾರುವೋದೆನೆಂದರೆ ತನುವನಲ್ಲಾಡಿಸಿ

ನೋಡುವ ನೀನು, ಮನವನಲ್ಲಾಡಿಸಿ ನೋಡುವ ನೀನು, ಧನವನಲ್ಲಾಡಿಸಿ ನೋಡುವ ನೀನು, ಇವೆಲ್ಲಕ್ಕಂಜದಿದ್ದಡೆ ಭಕ್ತಿ ಕಂಪಿತ ನಮ್ಮ ಕೂಡಲಸಂಗಮದೇವ', ಎಂಬ ಬಸವಣ್ಣನವರ ವಚನ ಸುಳ್ಳಲ್ಲ. ತನುಮನಧನಗಳನ್ನೂ ಅರ್ಪಿಸಲು ಸಿದ್ಧವಾದ ಇಂಥ ಉತ್ಸಾಹಿಗಳ ತಂಡ ಇದರ ಬೆಂಗಡೆಯಲ್ಲಿ ನಿಂತಿದೆಯಾದ್ದರಿಂದ ಇದು ಮುಂದುವರಿದೇತೀರುತ್ತದೆ. 'ಬ್ಯಾಂಕಿಂಗ್ ಪ್ರಪಂಚ'ದಿಂದಾಗಿ ಇಂದು ಈ ವಿಚಾರವನ್ನು ಕುರಿತು ಕನ್ನಡದಲ್ಲಿ ಸಮರ್ಥವಾಗಿ ಬರೆಯಬಲ್ಲವರ ಪಡೆಯೊಂದು ನಿರ್ಮಿತವಾಗಿದೆ. 'ಬ್ಯಾಂಕಿಂಗ್ ಪ್ರಪಂಚ' ಆರ್ಥಿಕವಾಗಿ ಕಂಗೆಡದಂತೆ ಅನೇಕ ಉದ್ಯಮ ಸಂಸ್ಥೆಗಳು, ಜಾಹೀರಾತುಗಳನ್ನು ನೀಡಿ ಪ್ರೋತ್ಸಾಹಿಸುತ್ತಿವೆ. ಇದರ ಚಂದಾದಾರರ ಸಂಖ್ಯೆಯೂ ನಿಧಾನವಾಗಿ ಬೆಳೆಯುತ್ತಿದೆ. ಈ ಪತ್ರಿಕೆಯ ಮುದ್ರಕರಂತೂ ಇದು ತಮ್ಮದೇ ಪ್ರಕಾಶನವೆಂಬ ರೀತಿಯಲ್ಲಿ ಇದರ ವಿನ್ಯಾಸವನ್ನು ಉತ್ತಮಪಡಿಸುವುದರಲ್ಲಿ ವಿಶೇಷವಾದ ಆಸ್ಥೆವಹಿಸುತ್ತಿದ್ದಾರೆ. ಇವರೆಲ್ಲರ ಬೆಂಬಲದಿಂದಾಗಿ 'ಬ್ಯಾಂಕಿಂಗ್ ಪ್ರಪಂಚ' ನಿಧಾನವಾದರೂ ದೃಢವಾಗಿ ಬೆಳೆಯುತ್ತಿದೆ. ಇವರಿಗೆಲ್ಲ 'ಬ್ಯಾಂಕಿಂಗ್ ಪ್ರಪಂಚ' ಧನ್ಯವಾದ ಅರ್ಪಿಸುತ್ತಿದೆ.

ಆತ್ಮವಂಚನೆ ಪರವಂಚನೆ

ಕರ್ನಾಟಕ ರಾಜ್ಯ ಅಖಿಲ ಭಾರತ ಖ್ಯಾತಿಯ ಅನೇಕ ಬ್ಯಾಂಕಿಂಗ್ ಸಂಸ್ಥೆಗಳ ತವರು. ಬೇರಾವ ರಾಜ್ಯದಲ್ಲಿ ಕರ್ನಾಟಕದಲ್ಲಿ ಹುಟ್ಟಿದಷ್ಟು ಸಂಖ್ಯೆಯಲ್ಲಿ ಬ್ಯಾಂಕುಗಳು ಹುಟ್ಟಲಿಲ್ಲ. ಆದರೆ ಕನ್ನಡದ ಮಾತು ಬಂದಾಗ ಕರ್ನಾಟಕದಲ್ಲಿ ಹುಟ್ಟಿದ ಬ್ಯಾಂಕುಗಳೇ ಉಳಿದ ಬ್ಯಾಂಕುಗಳಿಗಿಂತ ತಾತ್ಸಾರದ ಧೋರಣೆ ತಳೆಯುತ್ತಿವೆ. ಹಿಂದಿ ನಮ್ಮ ಒಕ್ಕೂಟ ಸರ್ಕಾರದ ಭಾಷೆ ನಿಜ, ವಿವಿಧ ರಾಜ್ಯಗಳ ನಡುವೆ ಸಂಪರ್ಕ ಸಾಧನೆಯ ದೃಷ್ಟಿಯಿಂದ ಕ್ರಮೇಣ ಹಿಂದಿಯ ಬಳಕೆಯ ತರ್ಕಬದ್ಧತೆಯನ್ನು ಎತ್ತಿಹಿಡಿಯುವವರನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಕನ್ನಡಕ್ಕೆ ನ್ಯಾಯವಾಗಿ ದೊರಕಬೇಕಾದ ಸ್ಥಾನವನ್ನು ಚ್ಯುತಿಗೊಳಿಸಿ ಅಲ್ಲಿ ಹಿಂದಿಯನ್ನು ಸ್ಥಾಪಿಸುವುದು ಸರಿಯೆನಿಸುವುದಿಲ್ಲ. ಪ್ರತಿಯೊಂದು ರಾಜ್ಯದಲ್ಲಿ ಬ್ಯಾಂಕಿಂಗ್ ಕಛೇರಿಗಳು ಅಲ್ಲಿಯ ಜನರ ಭಾಷೆಯಲ್ಲೇ ವ್ಯವಹರಿಸಬೇಕೆಂಬ ತತ್ವವನ್ನು ಮಾನ್ಯ ಮಾಡದಿದ್ದರೆ ಅದರಿಂದ ಬ್ಯಾಂಕುಗಳು ತಮ್ಮ ಘನೋದ್ದೇಶವನ್ನು ಸಾಧಿಸಲಾಗದೆ ವಿಫಲಗೊಳ್ಳುವುದು ಸ್ವತಸ್ಸಿದ್ಧ. ಹಿಂದಿಯನ್ನು ಮುಂದೆ ತರುವ ಉತ್ಸಾಹದಲ್ಲಿ ನಮ್ಮ ರಾಜ್ಯದ ಹಲವು ಬ್ಯಾಂಕುಗಳು ಕನ್ನಡವನ್ನು ತುಳಿಯಹತ್ತಿವೆ. ಕನ್ನಡದಲ್ಲಿ ವ್ಯವಹಾರ ಮಾಡುವ ಮಾತೆತ್ತುವುದೂ ರಾಷ್ಟ್ರದ್ರೋಹ ಎಂಬ ರೀತಿಯಲ್ಲಿ

ಕೆಲವರು ವರ್ತಿಸುತ್ತಿದಾರೆ. ಕನ್ನಡವನ್ನು ಪುರಸ್ಕರಿಸಿದರೆ ತಮ್ಮ ಪದೋನ್ನತಿಗೆ ಧಕ್ಕೆ ಬಂದೀತೆಂಬ ಭಯ ಅನೇಕರಿಗೆ. ಇಂಥವರು ನಿಜಕ್ಕೂ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ, ಜನರನ್ನು ವಂಚಿಸುತ್ತಿದ್ದಾರೆ ಎಂದು ಎಚ್ಚರಿಸದೆ ವಿಧಿಯಿಲ್ಲ.

ಭಾಷಾಪ್ರೇಮದ ವೈಖರಿ

ಕೆಲವು ದಿನಗಳ ಹಿಂದೆ ಕರ್ನಾಟಕದಲ್ಲಿ ಸ್ಥಾಪಿತವಾದ ಬ್ಯಾಂಕೊಂದರ ಮುಖ್ಯರ ನಿವೃತ್ತಿಯ ಸಂದರ್ಭದಲ್ಲಿ ಅವರಿಗೆ ಬೀಳ್ಕೊಡುಗೆಯ ಸಮಾರಂಭವೊಂದು ಏರ್ಪಾಡಾಗಿತ್ತು. ಅಚ್ಚ ಕನ್ನಡದ ಊರೊಂದರಲ್ಲಿ, ಕನ್ನಡಿಗರೇ ಇದ್ದ ಆ ಸಭೆಯಲ್ಲಿ ಮಾತಾಡಿದವರೆಲ್ಲ, ಒಬ್ಬರನ್ನು ಬಿಟ್ಟು, ಕನ್ನಡಿಗರೇ. ಅವರೆಲ್ಲ ಇಂಗ್ಲಿಷಿನಲ್ಲೇ ಅದೂ ತಪ್ಪು ತಪ್ಪಾಗಿ ಮಾತಾಡಿದರು. ಕನ್ನಡಿಗರಲ್ಲದ ಒಬ್ಬರು ಬಂಗಾಲಿ, ಅವರೂ ಬ್ಯಾಂಕ್ ಅಧಿಕಾರಿಯೇ. ಅವರು ಇಂಗ್ಲಿಷಿನಲ್ಲೇ ಮಾತಾಡುವುದು ಅನಿವಾರ್ಯವಾಗಿತ್ತು. ಆದರೆ ಉಳಿದ ಎಲ್ಲರೂ ಕನ್ನಡದಲ್ಲಿ ಮಾತಾಡದಿದ್ದುದು ಅವರಿಗೆ ಅಶ್ಚರ್ಯವಾಗಿತ್ತು. ತಮ್ಮ ರಾಜ್ಯದಲ್ಲಿ ಹೀಗಾಗುತ್ತಿರಲಿಲ್ಲ ಎಂದು ಅವರು ಹೇಳಿದರು. ಅವರ ಅನಂತರ ವಾತಾಡಿದವರು ತಾವು ಕನ್ನಡಿಗರಾದರೂ ಕನ್ನಡದಲ್ಲಿ ಮಾತಾಡಿ ಅಭ್ಯಾಸ ಇಲ್ಲವೆಂದು ಹೇಳಿ ಅವರೂ ಇಂಗ್ಲಿಷಿನಲ್ಲೇ ಭಾಷಣ ಮಾಡಲು ತೊಡಗಿದರು. ಇದು ಕರ್ನಾಟಕದಲ್ಲಿರುವ ಬ್ಯಾಂಕುಗಳ ಅನೇಕ ಕನ್ನಡಿಗ ಅಧಿಕಾರಿಗಳ ಭಾಷಾ ಪ್ರೇಮದ ವೈಖರಿ! ಇದು ನಮ್ಮ ಪತ್ರಿಕೆಯೊಂದರಲ್ಲಿ ವರದಿಯಾಗಿತ್ತು. ಇಂಥ ಭ್ರಮಾಲೋಕದಲ್ಲಿ ವಿಹರಿಸುತ್ತಿರುವ ಬ್ಯಾಂಕ್ ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಅವರಿಂದ ನಾಡಿಗೂ ತಮಗೂ ಪ್ರಮಾದವೇ ತಟ್ಟುತ್ತದೆ. ಹೀಗಾಗಬಾರದು.

ಕರ್ತವ್ಯವೇನು?

ಹಾಗಾದರೆ ಕನ್ನಡಿಗರ ಕರ್ತವ್ಯವೇನು? ಎಸ್. ವಿ. ರಂಗಣ್ಣನವರೇ ಹೀಗೆಂದು ಹೇಳಿದ್ದಾರೆ: 'ಈಗ ಯಾವುದು, ಏನು, ಎಷ್ಟು ಕನ್ನಡಿಗರ ಕರ್ತವ್ಯ, ರಂಗೇಶ? ಏಳನೆಯ ಮಾಸದಲ್ಲಿ ಬಸುರಿ ಬಲಬಾಹುವಿಗೆ ಕನ್ನಡ ರಕ್ಷೆ ಕಟ್ಟತಕ್ಕದ್ದು. ಶಿಶು ಜನಿಸಿದೊಡನೆ ತಿನ್ನಿಸುವ ಬಜೆ ಬೆಣ್ಣೆಯ ಜೊತೆಗೆ ಕನ್ನಡವ ಬೆರಸುವುದು ಮರೆಯಬಾರದು. ಅನ್ಯಭಾಷೆಯ ಅತ್ಯಧಿಕ ಮೋಹವೆನ್ನುವ ಅಂಟುಜಾಡ್ಯ ಸೋಂಕದಿರಲು ಆರು ತಿಂಗಳು ತೀರುವುದರೊಳಗೆ ಕನ್ನಡ ಸಿಡುಬು ಹಾಕಿಸಬೇಕು. ತರುವಾಯ ಸಮ ಸಂವತ್ಸರ ನಡೆಯುವಾಗ ಕತ್ತರಿಸಲಯ್ಯ ಕನ್ನಡಕ್ಕೆ ಮುಡಿಯ, ಓನಾಮ ಹಬ್ಬಕ್ಕೆ ಅರ್ಚಾಮೂರ್ತಿ ಆಗಲಿ ಕನ್ನಡದಿಂದ ತಯಾರಿಸಿದ ಸಿದ್ಧಿವಿನಾಯಕ. ವಿದ್ಯಾಭ್ಯಾಸ ಜರುಗತಕ್ಕದ್ದೂ ಕನ್ನಡ ಹಲಗೆ ಬಳಪ ಬಾಲಬೋಧೆ ಮಗ್ಗಿಕೋಷ್ಟಕ ಪಾಠ ಪುಸ್ತಕಗಳ ಮೂಲಕ. ಉಪನಯನ

ಶಿವದೀಕ್ಷೆ ಇತ್ಯಾದಿಗಳಲ್ಲಿ ಕನ್ನಡ ಪರಿಕರ, ಕನ್ನಡ ಮಂತ್ರ ಕನ್ನಡ ಶೃಂಗಾರ, ಮದುವೆಯಲ್ಲಿ ಕನ್ನಡ ಭಾಸಿಂಗ ಸಂಕಲಿಕೆ ಧೋತ್ರ ಸೀರೆ, ಆಮೇಲೆ ಮನೆ ಕಟ್ಟಿತಕ್ಕದ್ದು ಕನ್ನಡ ಇಟ್ಟಿಗೆ ದೂಲ ಹೆಂಚುಗಳಿಂದ; ಮಾಳಿಗೆ ಮೇಲೆ ಹಾರಿಸಬೇಕು ಕನ್ನಡ ಬಾವುಟವ, ದಿನದಿನವು ಕನ್ನಡ ಆಹಾರ, ಕನ್ನಡ ವಿಹಾರ, ಕನ್ನಡ ನಿದ್ದೆ; ಎದ್ದೊಡನೆ ಕನ್ನಡ ಸ್ಮರಣೆ, ಮಧ್ಯಾಹ್ನ ಕನ್ನಡ ಪೂಜೆ, ಸದಾ ಕನ್ನಡ ಧ್ಯಾನ, ಚಿಂತೆ, ಹಂಗು; ಆ ನಾಡು ಈ ನಾಡು ನುಡಿಗಳೆಲ್ಲ ವಿಧೇಯ ದಾಸದಾಸಿಯರಾಗಿ ಓಡಾಡಿ ಗೆಯ್ಮೆ ಗೈದು ತಂದು ತುಂಬಿಸಲಿ ಕನ್ನಡದ ಉಗ್ರಾಣವನ್ನ! ಕನ್ನಡ ಸಿರಿಗನ್ನಡವಾಗಿ ಗೆದ್ದು ನಿಲ್ಲಲಿ !'

ಅಂತೆಯೇ ಕರ್ನಾಟಕದಲ್ಲಿ ಬ್ಯಾಂಕ್ ಸೇವೆಗೆ ಸೇರಿದವರೆಲ್ಲ ಕನ್ನಡದಲ್ಲಿ ವ್ಯವಹರಿಸಲಿ. ಪ್ರೊಬೇಷನರಿಯಲ್ಲಿ ಕನ್ನಡ ರಕ್ಷೆ ಕಟ್ಟತಕ್ಕದ್ದು. ಸ್ಥಿರೀಕರಿಸುವ ಅಜ್ಞೆ, ಉತ್ತರ ಕನ್ನಡದಲ್ಲಿ. ಚೆಕ್ಕು ಚಲನ್ನು ಡ್ರಾಫ್ಟುಗಳು ಕನ್ನಡದಲ್ಲಿ – ಕನ್ನಡದಲ್ಲೂ – ನಲಿಯಲಿ. ವಹಿವಾಟು ಲೆಕ್ಕಗಳ ಋಣ ಧನಗಳ ರಿಂಗಣ ಗುಣಿತವಾಗಲಿ ಕನ್ನಡದಲ್ಲಿ. ಚರ್ಚೆ ವಿವರಣೆ ವರದಿ ಅರ್ಜಿ ಪುರಸ್ಕಾರ ನವೀಕರಣವೆಲ್ಲವೂ ಕನ್ನಡದಲ್ಲಾದರೆ ಏಕಾದೀತು ನಿಯಮಬಾಹಿರ? ನಿಯಮ ನಿಬಂಧನೆಗಳೂ ಕನ್ನಡದಲ್ಲೇ ಇದ್ದರೆ ಎಲ್ಲರಿಗೂ ಅರ್ಥವಾಗುವುವಲ್ಲವೆ? ಇನ್ನು ನಮೂನೆ ಕನ್ನಡದಲ್ಲೇ ಇದ್ದರೆ ಅರ್ಥವಾಗದೆಯೇ ರುಜು ಹಾಕುವ ಹವ್ಯಾಸ ನಿಂತೀತಲ್ಲವೆ?

15.

ಸೆಪ್ಟೆಂಬರ್ 1987
ಒಂದು ಚಿಟಿಕೆ ಉಪ್ಪಿನೊಂದಿಗೆ

ವಿಜಯಾ ಬ್ಯಾಂಕಿನ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಈಚೆಗೆ ನಡೆದ ಹತ್ತನೆಯ ಬ್ಯಾಂಕ್ ಅರ್ಥಶಾಸ್ತ್ರಜ್ಞರ ಸಮ್ಮೇಳನ ಅರ್ಥಪೂರ್ಣವಾದ್ದು. ಬ್ಯಾಂಕುಗಳು ಕೇವಲ ಹಣದ ಮನೆಗಳೆಂಬ, ನಿರಂತರವಾಗಿ ಹರಿದು ಬರುವ ಠೇವಣಿಗಳ ಹಣವನ್ನು ಎಣಿಸಿ ಪಡೆದುಕೊಳ್ಳುವುದೂ, ಬೇಡಿಕೆಗೆ ಅನುಗುಣವಾಗಿ ಇದನ್ನು ವಿತರಿಸುವುದೂ, ಸರ್ಕಾರದ ಹಾಗೂ ರಿಸರ್ವ್ ಬ್ಯಾಂಕಿನ ನಿಯಮ ನಿಬಂಧನೆ ಕಾನೂನುಗಳಿಗೆ ಒಳಪಟ್ಟು ಹೆಚ್ಚುವರಿ ನಿಧಿಗಳನ್ನು ಪ್ರವಿಸ್ತರಣೆಗೊಳಿಸುವುದೂ ಬ್ಯಾಂಕುಗಳ ನಿತ್ಯಚರ್ಯೆಯೆಂಬ, ಈ ಕಾರ್ಯಗಳನ್ನು ಯಾರೂ ಸುಲಭವಾಗಿ ಮಾಡಬಹುದೆಂಬ ಭಾವನೆ ಸಾಮಾನ್ಯವಾಗಿರುವಲ್ಲಿ, ಬ್ಯಾಂಕಿಂಗಿನ ವಿಸ್ತೃತ ಹಾಗೂ ಸಂಕೀರ್ಣ ವ್ಯವಹಾರಗಳತ್ತ, ಇದು ಎದುರಿಸುವ ಸಮಸ್ಯೆಗಳತ್ತ, ಇವುಗಳ ಪರಿಹಾರದತ್ತ ವಿದ್ವಾಂಸರ ಗಮನ ಸೆಳೆಯುವ ಇಂಥ ಪ್ರಯತ್ನ ಸ್ತುತ್ಯರ್ಹವಾದ್ದು. ಇಂಥ ಸಮ್ಮೇಳನಗಳು ಅನೇಕ ವೇಳೆ ಆಡಂಬರದ ಸಮಾರಂಭಗಳಾಗುವುದುಂಟು. ವಾಸ್ತವವಾಗಿ ಆಗುವ ಗಟ್ಟಿ ಕೆಲಸ ಬಹಳ ಕಡಿಮೆ. ಆದರೆ ಈ ಸಮ್ಮೇಳನವನ್ನು ಕುರಿತ ಪತ್ರಿಕಾ ವರದಿಗಳಿಂದ ಹೇಳುವುದಾದರೆ ಇದು ಅನೇಕ ಮಹತ್ವದ ವಿಚಾರಗಳನ್ನು ಕುರಿತು ಚರ್ಚೆ ನಡೆಸಿದೆಯೆನ್ನಬಹುದು. ಇಂದಿನ ಅರ್ಥವ್ಯವಸ್ಥೆಯಲ್ಲಿ ಹಾಗೂ ಜನಜೀವನದಲ್ಲಿ ಬ್ಯಾಂಕುಗಳು ವಹಿಸುತ್ತಿರುವ ಪಾತ್ರದ ದೃಷ್ಟಿಯಿಂದ ಇವುಗಳ ಸಂಘಟನೆ, ವ್ಯವಹಾರ ಮುಂತಾದವುಗಳ ನಾನಾ ಮುಖಗಳ ಸಾರ್ವಜನಿಕ ಚರ್ಚೆ ಬಹಳ ಅಗತ್ಯ, ಭಾರತದ ಪ್ರಮುಖ ಬ್ಯಾ0ಕುಗಳೆಲ್ಲ ರಾಷ್ಟ್ರೀಕೃತವಾಗಿರುವಾಗ ಇಂಥ ಚರ್ಚೆಗೆ ಇನ್ನೂ ಹೆಚ್ಚಿನ ಮಹತ್ವ ಉಂಟಾಗಿದೆ.

ಭಾರತದ ಬ್ಯಾಂಕುಗಳು ಇಂದು ಬಹುತೇಕ ನಷ್ಟದ ಮನೆಗಳಾಗಿವೆಯೆಂಬುದು ಸಾರ್ವತ್ರಿಕವಾಗಿ ಹಬ್ಬಿರುವ ನಂಬಿಕೆ. ಅತಿಯಾದ ವಿಸ್ತರಣೆ, ಅದಕ್ಷತೆ, ಹೊಣೆಗೇಡಿತನ, ವಂಚನೆ, ವ್ಯರ್ಥ ವಲಯಗಳಲ್ಲಿ ಹಣದ ಚೆಲ್ಲಾಟ ಮುಂತಾದ ಅನೇಕ ದೋಷಾರೋಪಣೆಗಳು ಬ್ಯಾಂಕುಗಳ ಮೇಲಿವೆ. ಬ್ಯಾಂಕುಗಳು ತಮ್ಮ ನಿಶ್ಚಿತ ಕಾರ್ಯಭಾರವನ್ನು ಅವು ಬ್ಯಾಂಕುಗಳೆನ್ನಿಸಿಕೊಳ್ಳಬೇಕಾದರೆ ಏನು ಮಾಡಬೇಕೋ ಅದನ್ನು ಕಡೆಗಣಿಸಿ ತಮ್ಮವಲ್ಲದ ಕ್ಷೇತ್ರಗಳನ್ನು ಪ್ರವೇಶಿಸಿ ಅರ್ಥವ್ಯವಸ್ಥೆಯ ಮೇಲೆ ಅನಾಹುತಕಾರಿ ಪರಿಣಾನುಗಳನ್ನುಂಟುಮಾಡುತ್ತಿವೆಯೆಂದೂ, ಠೇವಣಿದಾರರ ಹಿತಗಳನ್ನು ದುರ್ಲಕ್ಷಿಸುತ್ತಿವೆಯೆಂದೂ ಅನೇಕರು ಆತಂಕಗೊಂಡಿದ್ದಾರೆ. ಈ ಆತಂಕ

ಬಹುತೇಕ ಸಾರ್ವತ್ರಿಕವೆನ್ನಬಹುದು. ಭಾರತದಲ್ಲಿ ಬ್ಯಾಂಕಿಂಗು ಇಂದು ಕವಲುದಾರಿಯ ಬಳಿಯಲ್ಲಿ ನಿಂತಿದೆ. ಆದ್ದರಿಂದ ಈ ಸಂದರ್ಭದಲ್ಲಿ ಬ್ಯಾಂಕಿಂಗನ್ನು ಕುರಿತ ವೈಜ್ಞಾನಿಕ ಸಮಾಲೋಚನೆ ಅತ್ಯಂತ ಸಮಯೋಚಿತವಾದ್ದು.

ಇದೇ ಸಂದರ್ಭದಲ್ಲಿ ಸರ್ಕಾರಿ ಒಡೆತನದ ಬ್ಯಾಂಕುಗಳನ್ನು ಕುರಿತು ಈಚೆಗೆ ನಡೆದ ಒ0ದು ಅಧ್ಯಯನ ಅನೇಕ ಸ್ವಾರಸ್ಯಕರವಾದ ಹಾಗೂ ಇದುವರೆಗೆ ಹೆಚ್ಚಾಗಿ ಗೊತ್ತಿರದಿದ್ದ ಅಂಶಗಳನ್ನು ಹೊರಗೆಡಹಿದೆ. ಯಾವುದೇ ಪತ್ರಿಕೆಯ ಇದು ನಿಮಗೆ ಗೊತ್ತೆ?' ಶೀರ್ಷಿಕೆಯಡಿ ಪ್ರಕಟಿಸಬಹುದಾದ, ವಿಚಿತ್ರ ಹಾಗೂ ನಿಜ' ಎನ್ನಬಹುದಾದ ಸಂಗತಿಗಳು ಹೊರಬಿದ್ದಿವೆ.

ಕಾಗೆ ಲೆಕ್ಕ?

ಸರ್ಕಾರಿ ಒಡೆತನದ ಬ್ಯಾಂಕುಗಳು ಕಳೆದ ವರ್ಷ ಒಟ್ಟು ರೂ. 192 ಕೋಟಿ ಲಾಭ ಗಳಿಸಿದುವು ಎಂಬುದು ಒಂದು ಸಂಗತಿ. 'ಸಂಶಯಾತ್ಮರು' ಇದನ್ನು ನಂಬಲಾರದೆ, ನಂಬಲೊಲ್ಲದೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವುದು ಸಹಜ. ಅನೇಕ ಶಾಖೆಗಳು ತಲೆಭಾರದಿಂದ ಮುಲುಗುತ್ತಿರುವಾಗ, ಅದಕ್ಷತೆ ಹೆಚ್ಚಿರುವಾಗ, ನಿಯಂತ್ರಣ ಸಾಧ್ಯವಿಲ್ಲದಾಗ, ಅಂತರ ಶಾಖಾ ಹಾಗೂ ಶಾಖಾ – ಮುಖ್ಯ ಕಛೇರಿ ವಹಿವಾಟುಗಳ ತಾಳೆಯಿನ್ನೂ ಆಗದಿರುವಾಗ ಈ ಲಾಭದ ಲೆಕ್ಕಾಚಾರ ಬರೀ ಕಾಗೆ ಲೆಕ್ಕದ ಹಾಗೆ ಎನ್ನುವವರಿದ್ದರೂ ಆಶ್ಚರ್ಯವಿಲ್ಲ. ಮಾನವಸಾಧ್ಯವಿಲ್ಲದ ಮಟ್ಟಿಗೆ ವಹಿವಾಟುಗಳು ತೊಡಕಾಗಿವೆ. ಈ ಕಗ್ಗಂಟನ್ನು ದೇವರು ಬಿಡಿಸಬೇಕು, ಇಲ್ಲವೇ ಕಂಪ್ಯೂಟರುಗಳು ಪರಿಹರಿಸಬೇಕು. ದೇವರು ಬರುವಂತಿಲ್ಲ, ಕಂಪ್ಯೂಟರ್‌ಗಳು ಇನ್ನೂ ಬಂದಿಲ್ಲ. ಅದಕ್ಕೆ ನಾನಾರೀತಿಯ – ಮಾನಸಿಕ, ಆರ್ಥಿಕ ಹಾಗೂ ತಾಂತ್ರಿಕ – ಅಡಚಣೆಗಳುಂಟು. ಬ್ಯಾಂಕುಗಳು ಲಾಭ ತೋರಿಸುವ ತರಾತುರಿಯಲ್ಲಿ ಉದ್ಯೋಗಿಗಳನ್ನು ಬರ್ತಫ್‌ಮಾಡಿ, ಇಲ್ಲವೇ ಉದ್ಯೋಗಾವಕಾಶಗಳನ್ನು ಮೊಟಕು ಮಾಡಿ ಕಂಪ್ಯೂಟರ್‌ಗಳನ್ನು ಅಳವಡಿಸಿಕೊಂಡು ಅನ್ಯಾಯ ಎಸಗಬಹುದೆಂಬ ಭಯ ಇನ್ನೂ ದೂರವಾಗಿಲ್ಲ. ಇಂಥ ಭಯಕ್ಕೆ ಕಾರಣವಿಲ್ಲದಿಲ್ಲ. ರಂಗರಾಜನ್ ಸಮಿತಿಯ ವರದಿಯೇ ಮುಂತಾದವು ಈ ನಾನಾ ಸಮಸ್ಯೆಗಳನ್ನಿನ್ನೂ ಸಮರ್ಪಕವಾಗಿ ಪರಿಹರಿಸಿಲ್ಲ, ವ್ಯವಸ್ಥಾಪನ ಮಾಹಿತಿ ವ್ಯವಸ್ಥೆಯಿನ್ನೂ ಸಮರ್ಪಕವಾಗಿ ಎಲ್ಲ ಮಾಹಿತಿಯನ್ನೂ ಒದಗಿಸುವ ಸ್ಥಿತಿಯಲ್ಲಿಲ್ಲ. ಹೀಗಿದ್ದಾಗ್ಯೂ ಕರಾರುವಾಕ್ಕಾಗಿ ರೂ. 192 ಕೋಟಿ ಲಾಭ ಎಂಬುದು ಹೇಗೆ ಎಂಬುದು ವಿಸ್ಮಯ.

ಒಂದು ಚಿಟಿಕೆ ಉಪ್ಪಿನೊಂದಿಗೆ

ಸಾಮಾಜಿಕ ಬ್ಯಾಂಕಿಂಗ್ ಹಾಗೂ ಸರ್ಕಾರಿ ನಿರ್ದೇಶನದ ಫಲವಾಗಿ ಬ್ಯಾಂಕುಗಳು ಇಂದು ನೀಡುತ್ತಿರುವ ನಾನಾಬಗೆಯ ಸಾಲಗಳು, ಅಸ್ವಸ್ಥ ಕೈಗಾರಿಕೆಗಳಲ್ಲೂ ಇತರ ಉದ್ಯಮಗಳಲ್ಲೂ ತೊಡರಿಕೊಂಡು ವಾಪಸಾಗಲಾಗದಿರುವ ಮುಂಗಡಗಳು – ಇವುಗಳಿಂದಾಗಿ ಬ್ಯಾಂಕುಗಳ ಕಡತಗಳಲ್ಲಿ ಕರಡು ಋಣಗಳು ಬೃಹದಾಕಾರವಾಗಿ ಬೆಳೆದುಕೊಂಡಿವೆಯೆಂಬುದು ಒಂದು ಪುಕಾರು. ಆದ್ದರಿಂದ ಬ್ಯಾಂಕುಗಳ ಲಾಭ ಕುರಿತ ಅಂಕಿಯನ್ನು ಸಾರ್ವಜನಿಕರು ಒಂದು ಚಿಟಿಕೆ ಲವಣದೊಂದಿಗೇ ಸ್ವೀಕರಿಸಿಯಾರು ಕರಡು ಸಾಲಗಳನ್ನು ಕುರಿತಂತೆ ಬ್ಯಾಂಕಿಂಗ್ ಪ್ರಪಂಚ'ದ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನ ತುಂಬ ಸ್ವಾರಸ್ಯಕರವಾಗಿದೆ. 1949ರ ಬ್ಯಾ0ಕಿ0ಗ್ ಕಂಪನಿಗಳ ವಿನಿಯಮನ ಅಧಿನಿಯಮದ ಮೂರನೆಯ ಅನುಸೂಚಿಯಲ್ಲಿ ವಿಧಿಸಲಾಗಿರುವ ಸ್ಥಿತಿವಿವರಣ ಪಟ್ಟಿ ಹಾಗೂ ಲಾಭ ನಷ್ಟ ಲೆಕ್ಕಗಳ ನಮೂನೆಗಳಲ್ಲಿ ಬ್ಯಾಂಕುಗಳು ಕರಡು ಹಾಗೂ ಅನುಮಾನ ಋಣಗಳ ಮೊತ್ತವನ್ನು ತೋರಿಸಬೇಕಾಗಿಲ್ಲ. ಅವುಗಳ ಪರಿನಿಯತ ಲೆಕ್ಕ ಶೋಧಕರಿಗೆ (statutory auditors) ಒಪ್ಪಿಗೆಯಾಗುವಂತೆ ಈ ಸಾಲಗಳಿಗಾಗಿ ಉಪಬಂಧ (provision) ಮಾಡಲಾಗಿದ್ದರೆ ಆ ಬ್ಯಾಂಕುಗಳಿಗೆ ಶಾಸನದ ಅಡಿಯಲ್ಲಿ ಸಂರಕ್ಷಣೆ ನೀಡಲಾಗಿದೆ. ವಸೂಲಿ ಸಂದೇಹ ಎನಿಸುವ ಖಾತೆಗಳ ಶಿಲ್ಕುಗಳನ್ನು ಪ್ರತಿಭಟಿತ ಹುಂಡಿಗಳ ಖಾತೆಗೆ ವರ್ಗಾಯಿಸುವ ಕ್ರಮಗಳನ್ನು ಹಲವು ಸರ್ಕಾರಿ ವಲಯ ಬ್ಯಾಂಕುಗಳು ಅನುಸರಿಸುತ್ತವೆ. ಬ್ಯಾಂಕುಗಳು ಈ ಖಾತೆಗಳನ್ನು ಆಗಿಂದಾಗ್ಗೆ ಪರಿಶೀಲಿಸುತ್ತಿರುತ್ತವೆ. ಕರಡು ಹಾಗೂ ಅನುಮಾನ ಋಣಗಳಿಗಾಗಿ ಉಪಭಬಂಧ ಮಾಡಲಾದ ಮೊಬಲಗು ಈ ಖಾತೆಯಡಿಯ ಶಿಲ್ಕಿಗಿಂತ ಕಡಿಮೆಯೆನಿಸಿದಾಗ, ಪರಿನಿಯತ ಲೆಕ್ಕ ಶೋಧಕರಿಗೆ ಸಮರ್ಪಕವೆನಿಸುವ ರೀತಿಯಲ್ಲಿ ಈ ಉಪಬಂಧವನ್ನು ಹೆಚ್ಚಿಸುತ್ತವೆ. ಸರ್ಕಾರಿ ವಲಯ ಬ್ಯಾಂಕುಗಳು ಈ ಉಪಬಂಧದ ಅಡಿಯಲ್ಲಿ ಕರಡು ಋಣವನ್ನು ತೊಡೆದುಹಾಕುತ್ತವೆ. ಕರಡು ಹಾಗೂ ಅನುಮಾನ ಋಣಗಳಿಗಾಗಿ ಮಾಡಲಾಗಿರುವ ಉಪಬಂಧದ ಮೊತ್ತವೆಷ್ಟು, ಅದರಡಿಯಲ್ಲಿ ತೊಡೆದು ಹಾಕಿದ ಕರಡು ಋಣಗಳ ಮೊತ್ತವೆಷ್ಟು ಎಂಬುದು ಬೆಳಕಿಗೆ ಬರುವುದೇ ಇಲ್ಲ. ಸರ್ಕಾರಿ ವಲಯ ಬ್ಯಾಂಕುಗಳು ಒಂದು ರೀತಿಯಲ್ಲಿ ಏಕಸ್ವಾಮ್ಯ ವ್ಯವಸ್ಥೆಗಳಾದ್ದರಿಂದ, ಲಾಭ ಮಾಡುತ್ತಿವೆಯೆಂಬುದಾಗಿ ತೋರ್ಪಡಿಸುವುದು ಅನೇಕ ದೃಷ್ಟಿಗಳಿಂದ ಉಚಿತವೆನಿಸುವುದರಿಂದ, ಇವುಗಳ ಲಾಭ ಕುರಿತ ಅಂಕಿಗಳು ಕೇವಲ ಸರಸ್ವತೀ ಪ್ರಸನ್ನವಲ್ಲವೆ ಎಂಬ ಸಂದೇಹಕ್ಕೆ ಕಾರಣವಿದ್ದೇ ಇದೆ.

ಮಿತಿಮೀರಿ – ಅಡ್ಡಾದಿಡ್ಡಿ ಎನ್ನುವ ರೀತಿ – ವಿಸ್ತರಿಸಿರುವ ನಮ್ಮ ಬ್ಯಾಂಕುಗಳು ಇತಿಹಾಸ ಪೂರ್ವಯುಗದ ಡಿನೋಸಾರುಗಳಂತೆ ತಲೆ ಬಾಲ ಸಂಬಂಧವಿಲ್ಲದಂತಾಗಿರುವುದರಿಂದ ಈ ಸಂದೇಹವನ್ನು ಸುಲಭವಾಗಿ ಪರಿಹರಿಸುವುದು ಸಾಧ್ಯವಿಲ್ಲ.

'ಸತ್ತ' ಖಾತೆಗಳು

ಇದು ನಿಮಗೆ ಗೊತ್ತೆ?' ಶೀರ್ಷಿಕೆಯಡಿಯಲ್ಲಿ ಪ್ರಕಟಿಸಬಹುದಾದ ಇನ್ನೊಂದು ಸ್ವಾರಸ್ಯಕರವಾದ ಸಂಗತಿಯೆಂದರೆ 'ಸತ್ತ' ಖಾತೆಗಳನ್ನು ಕುರಿತದ್ದು. ರಾಷ್ಟ್ರೀಕರಣಾನಂತರದ ಕಾಲದಲ್ಲಿ ಬ್ಯಾಂಕ್ ಶಾಖೆಗಳೂ, ಖಾತೆಗಳೂ, ಠೇವಣಿಗಳೂ ಅಭೂತಪೂರ್ವವಾಗಿ ಬೆಳೆದಿವೆಯಾದರೂ ಇವುಗಳ ಜೊತೆಜೊತೆಗೇ ಅನೇಕ ಸಮಸ್ಯೆಗಳೂ ಬೆಳೆದಿವೆ. ಆದ್ಯತಾ ವಲಯಕ್ಕೆ ಸಾಲ, ದುರ್ಬಲ ವರ್ಗಗಳಿಗೆ ನೆರವು ಮುಂತಾದ ಕಾರ್ಯಕ್ರಮಗಳಿಂದಾಗಿ ಬೆಳೆದಿರುವ ಖಾತೆಗಳ ನಿರ್ವಹಣೆಯ ವೆಚ್ಚ, ಅದಕ್ಕೆ ಬೇಕಾಗುವ ವ್ಯವಸ್ಥೆ ಅಗಾಧವಾಗಿರುವುದು ಸಹಜ. ಇವೆಲ್ಲವೂ ಬ್ಯಾಂಕುಗಳ ಲಾಭಪ್ರದತೆಯ ಮೇಲೆ ಪರಿಣಾಮ ಉಂಟುಮಾಡುವ ಸಂಗತಿಗಳು. ಖಾತೆಗಳ ಬೆಳವಣಿಗೆಯೊಂದಿಗೆ 'ಸತ್ತ' ಖಾತೆಗಳ ಸಂಖ್ಯೆಯೂ ಬೆಳೆದಿದೆ. ಬೆಳವಣಿಗೆಯ ಲಕ್ಷಣವನ್ನೇ ತೋರದ, ಹತ್ತು ವರ್ಷಗಳಿಗಿಂತ ಹೆಚ್ಚಿನ ಕಾಲ ಅವುಗಳ ಅಡಿಯಲ್ಲಿ ಹಣದ ಎಳೆತ ಅಥವಾ ಜಮೆಯ ಯಾವುದೇ ವಹಿವಾಟು ನಡೆಯದ ಖಾತೆಗಳು 'ಸತ್ತ' ಖಾತೆಗಳು ಎನಿಸಿಕೊಳ್ಳುತ್ತವೆ. ಈ ಖಾತೆಗಳ ಒಡೆಯರು ಸಾಮಾನ್ಯವಾಗಿ ತೀರಿಕೊಂಡಿರುತ್ತಾರೆ. ಅವರ ವಾರಸುದಾರರು ಯಾರೆಂಬುದು ಗೊತ್ತಿರುವುದಿಲ್ಲ. ಈ ಖಾತೆಗಳ ಶಿಲ್ಕುಗಳಿಗೆ ಹಕ್ಕು ದಾವೆಯನ್ನು ಯಾರೂ ಸಲ್ಲಿಸಿರುವುದಿಲ್ಲ. ಯಾರೂ ಕೇಳದ ಈ ಹಣ ಬ್ಯಾಂಕುಗಳ ವಶದಲ್ಲಿ ಮುಂದುವರಿಯುತ್ತವೆ. 1985ರ ಅಂತ್ಯದ ವೇಳೆಗೆ ಒಟ್ಟು 31.5 ಲಕ್ಷ ಸತ್ತ ಖಾತೆಗಳಿದ್ದುವೆಂದೂ ಇವುಗಳ ಅಡಿಯಲ್ಲಿ ಬಿದ್ದಿದ್ದ ಹಣ ರೂ. 27 ಕೋಟಿ ಎಂದೂ ಲೆಕ್ಕಾಚಾರ ಮಾಡಲಾಗಿದೆ. ಇದು ಕೂಡ ಬ್ಯಾಂಕುಗಳಿಗೆ ವಿನಿಯೋಜನೆಗಾಗಿ ಒದಗಿಬಂದಿರುವ ಹಣವೇ. ಇದರ ಮೇಲೂ ಬ್ಯಾಂಕುಗಳು ಲಾಭಗಳಿಸುತ್ತಿವೆ.

ನಗರ – ಹಳ್ಳಿ

ಆದರೆ ಒಟ್ಟಿನಲ್ಲಿ ನಮ್ಮ ಬ್ಯಾಂಕುಗಳು ಅಷ್ಟೇನೂ ಲಾಭಪ್ರದವಾಗಿ ಕೆಲಸ ಮಾಡುತ್ತಿಲ್ಲ ಎಂಬುದಷ್ಟನ್ನಾದರೂ ಎಲ್ಲರೂ ಒಪ್ಪಲೇಬೇಕು. ರಿಸರ್ವ್ ಬ್ಯಾಂಕಿನ ಗವರ್ನರರು ಬ್ಯಾಂಕ್ ಅರ್ಥ ಶಾಸ್ತ್ರಜ್ಞರ ಸಮ್ಮೇಳನವನ್ನು – ಉದ್ಘಾಟಿಸುತ್ತ ಮಾಡಿದ ಭಾಷಣದಲ್ಲಿ ಈ ವಿಚಾರದ ಪ್ರಸ್ತಾಪವಿದೆ. 1986ರ ಅಂತ್ಯದಲ್ಲಿ ದೇಶದ ಅನುಸೂಚಿತ ಬ್ಯಾಂಕುಗಳ ಶಾಖೆಗಳ ಸಂಖ್ಯೆ

53,364. ಇವುಗಳ ಪೈಕಿ 12,814 ಶಾಖೆಗಳು ನಷ್ಟದಲ್ಲಿ ನಡೆಯುತ್ತಿದ್ದುವು. ಐದು ವರ್ಷ ಅಥವಾ ಇನ್ನೂ ಹೆಚ್ಚು ಕಾಲದಿಂದ ಕಾರ್ಯ ನಿರ್ವಹಿಸುತ್ತಿದ್ದು ಕಳೆದ ಮೂರು ವರ್ಷಗಳಿಂದ ನಷ್ಟ ಅನುಭವಿಸುತ್ತ ಬಂದಿರುವ ಶಾಖೆಗಳ ಸಂಖ್ಯೆ 6,228. ಐದು ವರ್ಷಗಳಿಂದ ನಡೆಯುತ್ತಿರುವ ಬ್ಯಾಂಕುಗಳು ನಷ್ಟ ಅನುಭವಿಸಲು ಕಾರಣವಿಲ್ಲ ಎಂಬುದು ಗವರ್ನರರ ಮಾತು. ಗ್ರಾಮೀಣ ಹಾಗೂ ಅರೆಪಟ್ಟಣ ಬ್ಯಾಂಕುಗಳ ಪೈಕಿ ನಷ್ಟ ಅನುಭವಿಸುತ್ತಿರುವವುಗಳ ಸಂಖ್ಯೆ ಅಧಿಕವಾಗಿದ್ದರೂ, ನಷ್ಟ ಅನುಭವಿಸುತ್ತಿರುವ ಬ್ಯಾಂಕುಗಳ ಒಟ್ಟು ನಷ್ಟದಲ್ಲಿ ಶೇಕಡ 70ರಷ್ಟು ಆಗಿರುವುದು ನಗರ ಹಾಗೂ ಮಹಾನಗರಗಳ ಬ್ಯಾಂಕ್ ಶಾಖೆಗಳಲ್ಲಿ ಎಂಬುದಾಗಿ ಅವರು ಹೇಳಿದ್ದಾರೆ. ಅಗತ್ಯಕ್ಕಿಂತ ಹೆಚ್ಚಿನ ಸಿಬ್ಬಂದಿ ಇದಕ್ಕೆ ಕಾರಣ ಎಂದೂ ಅವರು ತಿಳಿಸಿದ್ದಾರೆ. ನಗರ ಶಾಖೆಯಲ್ಲಿ ಹೆಚ್ಚು ಹೆಚ್ಚು ಸಿಬ್ಬಂದಿಯ ತೈನಾತಿಗಾಗಿ ವ್ಯವಸ್ಥಾಪಕ ವರ್ಗದ ಮೇಲೆ ಹಾಕಲಾಗುತ್ತಿರುವ ಒತ್ತಡ ಇದಕ್ಕೆ ಕಾರಣ ಎಂಬುದು ಅವರ ಅಭಿಪ್ರಾಯ. ಈ ಪ್ರವೃತ್ತಿಯನ್ನು ಬದಲಿಸಬೇಕೆಂದಿದ್ದಾರೆ. ಇದು ಗಮನಿಸಬೇಕಾದ ಸಂಗತಿ. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಶಾಖೆಗಳ ಹಾಗೂ ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಶಾಖೆಗಳ ಠೇವಣಿಗಳ ಸಂಗ್ರಹಣೆಯಲ್ಲಿ ಭಾರೀ ಅಂತರ ಇರುವುದರತ್ತ ಅವರು ಗಮನ ಸೆಳೆದಿದ್ದಾರೆ. 1986ರಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ 12838 ಶಾಖೆಗಳ ಒಟ್ಟು ಠೇವಣಿ ಮೊಬಲಗು ರೂ. 1715 ಕೋಟಿಯಾದರೆ, ವಾಣಿಜ್ಯ ಬ್ಯಾಂಕುಗಳ 17000 ಗ್ರಾಮೀಣ ಶಾಖೆಗಳ ಠೇವಣಿಗಳ ಮೊತ್ತ 12660 ಕೋಟಿ. ಈ ಅಂತರದ ಕಾರಣವನ್ನು ಗಂಭೀರವಾಗಿ ವಿಶ್ಲೇಷಿಸಿ ಪರಿಹಾರೋಪಾಯವನ್ನು ರೂಪಿಸಬೇಕಾಗಿದೆ.

ಬ್ಯಾಂಕುಗಳ ಸೀಮೋಲ್ಲಂಘನ

ಬ್ಯಾಂಕಿಗಳ ಠೇವಣಿ ಸಂಗ್ರಹಣೆ ಹಾಗೂ ಧನವಿನಿಯೋಜನೆಯ ಪ್ರವೃತ್ತಿಗಳೂ, ಗ್ರಾಹಕ ಸೇವೆಯ ಅತೃಪ್ತಿಕರ ಪರಿಸ್ಥಿತಿಯೂ ಪರಿಹರಿಸಬೇಕಾದ ಇನ್ನೆರಡು ಅಂಶಗಳು. ಈಚಿನ ವರ್ಷಗಳಲ್ಲಿ ಬ್ಯಾಂಕ್ ಠೇವಣಿಗಳು ಒಟ್ಟಿನಲ್ಲಿ ಗಮನಾರ್ಹವಾಗಿ ಏರಿವೆ. 1983–84ರಿಂದ 1987–88ರ ಅವಧಿಯಲ್ಲಿ ಇವುಗಳ ಮೊತ್ತ ರೂ. 60600 ಕೋಟಿಯಿಂದ ರೂ.107000 ಕೋಟಿಗೆ ಏರಿದೆ. ಇದು 77% ರಷ್ಟು ಹೆಚ್ಚಳ. ಠೇವಣಿಗಳು ವರ್ಷಕ್ಕೆ 17000 – 18000 ಕೋಟಿಯಂತೆ ಅಧಿಕವಾಗುತ್ತಿದೆ. ಉಬ್ಬುತ್ತಿರುವ ನಿಧಿಗಳ ಪ್ರವಿಸ್ತರಣ ವಿಚಾರದಲ್ಲಿ ಬ್ಯಾಂಕುಗಳು ಹೆಚ್ಚಿನ ಎಚ್ಚರದಿಂದ ವರ್ತಿಸಬೇಕೆಂಬುದು ರಿಸರ್ವ ಬ್ಯಾಂಕ್ ಗವರ್ನರರು ನೀಡಿರುವ ಇನ್ನೊಂದು ಬುದ್ಧಿವಾದ. ಬ್ಯಾಂಕುಗಳು ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ನಾನಾ ಬಗೆಯ ಪ್ರತಿಭೂತಿಗಳಲ್ಲಿ –

ಸೆಕ್ಯೂರಿಟಿಗಳಲ್ಲಿ ಹಣವನ್ನು ತೊಡಗಿಸುವ ಪ್ರವೃತ್ತಿಯನ್ನು ಅವರು ಗಂಭೀರವಾಗಿ ಪರಿಗಣಿಸಿದ್ದಾರೆ. ದುಡಿಯುವ ಬಂಡವಾಳವನ್ನೊದಗಿಸುವುದೇ ಬ್ಯಾಂಕುಗಳ ಆದ್ಯ ಕಾರ್ಯಭಾರ. ಈ ಕರ್ತವ್ಯವನ್ನು ಮಸುಳಿಸುವ ಮಟ್ಟಿಗೆ ಅವು ಇತರ ಕಲಾಪಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದು. ದಕ್ಷತೆ ಹಾಗೂ ಲಾಭಪ್ರದತೆಯನ್ನು ಹೆಚ್ಚಿಸುವ ಸಲುವಾಗಿ ನಾನಾ ಬಗೆಯ ವಿನಿಯೋಜನೆಗಳಲ್ಲಿ ಹಣ ತೊಡಗಿಸುವ ಬದಲು, ಈಗ ಬ್ಯಾಂಕುಗಳು ಸಾಧಿಸಿರುವ ವಿಸ್ತರಣೆಯನ್ನು ಕ್ರೋಢೀಕರಿಸಿ ದೃಢಪಡಿಸುವುವರತ್ತ ಗಮನ ಹರಿಸಬೇಕು. ವಣಿಕ ಬ್ಯಾಂಕಿಂಗ್, ಗುತ್ತಿಗೆ ವ್ಯವಹಾರ, ಬಂಡವಾಳ ಮಾರುಕಟ್ಟೆ ಇತ್ಯಾದಿ ಅತ್ಯಂತ ವಿಶೇಷೀಕೃತ ಹಾಗೂ ಆತಿ ನಾಜೂಕಿನ ಕಲಾಪಗಳಲ್ಲಿ ತೊಡಗುವ ಮುನ್ನ ಯೋಚಿಸಬೇಕು. ಸರ್ಕಾರಿ ವಲಯದ ಬ್ಯಾ0ಕುಗಳು ಈ ವಿಚಾರದಲ್ಲಿ ತಂತಮ್ಮಲ್ಲೇ ಮೇಲಾಟದಲ್ಲಿ ತೊಡಗಿರುವುದನ್ನು ಕಾಣಬಹುದು. ಎಷ್ಟು ಮಾತ್ರಕ್ಕೂ ವಾಣಿಜ್ಯ ಬ್ಯಾಂಕುಗಳು ತಮ್ಮ ಪ್ರಾಥಮಿಕ ಬ್ಯಾಂಕಿಂಗ್ ವ್ಯವಹಾರ ಧರ್ಮವನ್ನು ಬಿಟ್ಟು ಕೊಡತಕ್ಕದ್ದಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಬ್ಯಾಂಕುಗಳು ನಾನಾ ಬಗೆಯ ಶೇರು, ಬಾಂಡು ಇತ್ಯಾದಿಗಳಲ್ಲಿ ವಿನಿಯೋಜಿಸುವ ಹಣಕ್ಕೆ ಮಿತಿಯನ್ನು ವಿಧಿಸಲಾಗಿದೆಯಾದರೂ ಈ ವಿಚಾರದಲ್ಲಿ ವಿವೇಚನೆಯಿಂದ ವರ್ತಿಸದಿದ್ದರೆ ಅವುಗಳ ನಿಧಿಗಳು ಕೆಲವೇ ವಲಯಗಳಲ್ಲಿ ಸಿಲುಕಿಕೊಂಡು ಕಷ್ಟ ನಷ್ಟ ಅನುಭವಿಸಬೇಕಾಗಿ ಬರಬಹುದು. 1986–87ರಲ್ಲಿ ಕಂಪನಿಗಳ ರೂ, 5843 ಕೋಟಿಯಷ್ಟು ಹೊಸ ಬಂಡವಾಳ ನೀಡಿಕೆಗೆ ಅನುಮತಿ ನೀಡಲಾಗಿದೆ. ಬ್ಯಾಂಕುಗಳು ಮುಂದಾಲೋಚನೆಯಿಲ್ಲದೆ ಅವುಗಳಲ್ಲಿ ಹಣ ತೊಡಗಿಸಿದರೆ, ಕೊಳ್ಳಿಕೆ ಭರವಸೆ ವ್ಯವಹಾರವೇ ಮುಂತಾದವಲ್ಲಿ ಹೆಚ್ಚಾಗಿ ನಿರತವಾದರೆ ತೊಂದರೆಗೆ ಸಿಲುಕಿಕೊಳ್ಳಬಹುದು. ಇವುಗಳಲ್ಲಿ ಹಲವು ಉದ್ಯಮಗಳು ಶೀಘ್ರ ಫಲದಾಯಕವಾಗದಿರಬಹುದು. ಬ್ಯಾಂಕ್ ಹಣ ದೀರ್ಘಕಾಲ ಇವುಗಳ ಷೇರುಗಳಲ್ಲಿ, ಇತರ ಪ್ರತಿಭೂತಿಗಳಲ್ಲಿ ತೊಡರಿಕೊಂಡಿದ್ದರೆ ಬ್ಯಾಂಕುಗಳ ದ್ರವತ್ವಕ್ಕೆ ಧಕ್ಕೆ ಉಂಟಾಗಬಹುದು. ಪರಿನಿಯತ ದ್ರವತ್ವ ಆನುಪಾತದ ನಿಬಂಧನೆಗಳಿಂದಾಗಿ ಮತ್ತು ಸ್ವಂತ ಇಚ್ಛೆಯಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಮತ್ತು ಇತರ ಆನುಮೋದಿತ ಪ್ರತಿಭೂತಿಗಳಲ್ಲಿ ಬ್ಯಾಂಕುಗಳ ವಿನಿಯೋಜನೆ ರೂ 21200 ಕೋಟಿಯಿಂದ ರೂ. 42200 ಕೋಟಿಗೆ ಏರಿದೆ. ಅನುಮೋದಿತ ಪ್ರತಿಭೂತಿಗಳಲ್ಲಿ ಹೂಡಿದ ಹಣವೇ ರೂ. 7,700 ಕೋಟಿಯಿಂದ ರೂ.14500 ಕೋಟಿಗೆ ಏರಿದೆ. ನೇರವಾಗಿ ಠೇವಣಿಗಳನ್ನು ಸಂಗ್ರಹಿಸುವುದೇ ಮುಂತಾದ ವಿಧಾನಗಳಿಂದ ಕಂಪನಿಗಳು ತಮಗೆ ಅಗತ್ಯವಾದ ಹಣವನ್ನು ಪಡೆಯುತ್ತಿರುವುದರಿಂದ

ಬ್ಯಾಂಕುಗಳು ಸ್ವಂತ ವಿವೇಚನೆಗೆ ಒಳಪಟ್ಟು ವಿನಿಯೋಜಿಸಬಹುದಾದ ನಿಧಿಗಳ ಮೊತ್ತವೂ ಏರುತ್ತಿರುವುದು ನಿಜ. ಆದರೂ ವಿವೇಚನಾರಹಿತವಾಗಿ ಹಣವನ್ನು ಹೂಡುವ ಪ್ರವೃತ್ತಿ ತಪ್ಪಬೇಕು. ಗವರ್ನರರ ಎಚ್ಚರಿಕೆಯ ನುಡಿ ಗ್ರಾಹ್ಯ.

ನಿಧಿಗಳ ಪರಿಣಾಮಕಾರಿ ಪ್ರವಿಸ್ತರಣಕ್ಕೆ ಸಂಬಂಧಿಸಿದಂತೆ ಹೊಸ ತಂತ್ರ ವ್ಯೂಹವನ್ನು ರಚಿಸಿಕೊಳ್ಳಲು ಎಲ್ಲ ಬ್ಯಾಂಕುಗಳೂ ರಿಸರ್ವ್ ಬ್ಯಾಂಕೂ ಸಮಾಲೋಚನೆ ನಡೆಸಬೇಕಾದ ಕಾಲ ಸನ್ನಿಹಿತವಾಗಿದೆ. ಈ ವಿಷಯಕ್ಕೆ ನೇರವಾಗಿ ಸಂಬಂಧಿಸದಿದ್ದರೂ, ಬ್ಯಾಂಕುಗಳು ತಮ್ಮ ನಗದು ಹರಿವಿನಮೇಲೆ ಕಣ್ಣಿಟ್ಟು, ಅದನ್ನು ಸದಾ ಅನುಕೂಲತಮ ರೀತಿಯಲ್ಲಿ ಬಳಸಿಕೊಳ್ಳವ ಬಗ್ಗೆ ಹೇಗೆ ಯೋಜನೆ ರೂಪಿಸಬೇಕೆಂಬ ವಿಚಾರವಾಗಿ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ 'ನಗದು ಪ್ರತೀಕ್ಷೆ' ಎಂಬ ಲೇಖನ ಕುತೂಹಲ ಹುಟ್ಟಿಸುವಂಥದು.

ಇನ್ನು, ಗ್ರಾಹಕ ಸೇವೆಯ ಅತೃಪ್ತಿ ಕರ ಪರಿಸ್ಥಿತಿ ಎಂಬುದು ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಸದಾ ಜೀವಂತವಾಗಿರುವ ಪ್ರಶ್ನೆ. ಗ್ರಾಹಕ ಸೇವೆ ಎಂಬುದು ಎಂದೂ ಸಂಪೂರ್ಣ ತೃಪ್ತಿಕರ ಎಂದು ಹೇಳುವ ಹಾಗೆಯೇ ಇಲ್ಲ. ನಿಲುಕಲು ಸದಾ ಯತ್ನಿಸುತ್ತಿರಬೇಕಾದ, ಆದರೆ ಕೈಗೆಟುಕದೆ, ಮಾಯಾ ಮೃಗದಂತೆ ಪದೇ ಪದೇ ಮುಂದೂಡುವ ಆದರ್ಶವಿದು. 'ಗ್ರಾಹಕ ಸೇವೆ' ಕುರಿತು ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನವೂ, ಇನ್ನೊಂದು ಚಿರಂಜೀವಿ ವಿಷಯವಾದ 'ಸಾಲ ಮೇಳ' ಕುರಿತ ಲೇಖನವೂ ಓದಬೇಕಾದವೇ.

16.

ಸೆಪ್ಟೆಂಬರ್ 1988
ಸಮನ್ವಯ ಸಮಿತಿ

ಈ ನವೆಂಬರ್ ಎಂಟರಂದು ಸಮನ್ವಯ ಸಮಿತಿಗೆ ಹತ್ತು ವರ್ಷ ತುಂಬಿ ಅದು ಹನ್ನೊಂದನೆಯ ವರ್ಷದಲ್ಲಿ ಕಾಲಿಕ್ಕುತ್ತದೆ. ಒಂದು ಸಂಸ್ಥೆಯ ಬದುಕಿನಲ್ಲಿ ಹತ್ತು ವರ್ಷ ಹೆಚ್ಚೇನೂ ಅಲ್ಲ ಎಂಬುದು ಇಂಥ ಸಂದರ್ಭದಲ್ಲೆಲ್ಲ ಸಾಮಾನ್ಯವಾಗಿ ಹೇಳುವ ಮಾತು. ಇದು ಈಗ ಒಂದು ಕ್ಲೀಷೆಯಾಗಿಬಿಟ್ಟಿದೆ. ಆದರೂ ಈ ಮಾತಿನಿಂದಲೇ ಆರಂಭಿಸುವುದು ಸುಲಭ. ಇದು ಮುಂದಿನ ಮಾತುಗಳಿಗೆ ಒಂದು ಚಿಮ್ಮುಹಲಗೆ.

ವ್ಯಕ್ತಿಯ ಮತ್ತು ಸಂಸ್ಥೆಯ ಹೋಲಿಕೆಯನ್ನೇ ಮುಂದುವರಿಸೋಣ. ಎರಡರ ಬದುಕುಗಳಲ್ಲೂ ಹುಟ್ಟುಹಬ್ಬದ ದಿನ ಸಂತೋಷದ ಸಂದರ್ಭ. ಆದರೆ ಇವೆರಡಕ್ಕೂ ಒಂದು ಮುಖ್ಯ ವ್ಯತ್ಯಾಸವಿದೆ. ವ್ಯಕ್ತಿಯ ಆಯುಸ್ಸು ಸೀಮಿತ. ಅವನ ಸಾವು ನಿಶ್ಚಿತ. 'ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬಾ ಅಗ್ಗ.' ಇಡಿಯ ಬದುಕೇ ಸಾವಿನೆಡೆಗೆ ನಿಲ್ಲದೆ ನಡೆದ ಪ್ರಯಾಣ. ವ್ಯಕ್ತಿಗೆ ಒಂದೊಂದು ವರ್ಷ ತುಂಬಿದಾಗಲೂ ಅಷ್ಟಷ್ಟು ಮಟ್ಟಿಗೆ ಸಾವಿಗೆ ಹತ್ತಿರ. ಆದ್ದರಿಂದ ಹುಟ್ಟುಹಬ್ಬದ ಸಂತೋಷ ಸಂಭ್ರಮಗಳ ಅಂಚಿನಲ್ಲೇ ನೋವೂ ಇಣಿಕಿ ಹಾಕುತ್ತಿರುತ್ತದೆ. ಆದರೆ ನಡೆದುಬಂದ ಹಾದಿಯಲ್ಲಿ ಸಾರ್ಥಕವಾದ್ದೇನನ್ನಾದರೂ ಮಾಡಿದ್ದರೆ ಮಾತ್ರ ಅಂಥ ವ್ಯಕ್ತಿ ಸಮಾಧಾನದ ನಿಟ್ಟುಸಿರು ಬಿಡಬಹುದಾಗುತ್ತದೆ. ತನ್ನನ್ನೂ ದಾಟಿ ಈ ಕೆಲಸ ನಿಲ್ಲುವುದೆಂಬುದರಿಂದ ಅವನು ಸ್ವಲ್ಪ ನೆಮ್ಮದಿ ಪಡೆದುಕೊಳ್ಳುವಂತಾಗುತ್ತದೆ.

ಸಂಸ್ಥೆಯ ಬದುಕು ಸೀಮಿತವಾಗಬೇಕಾದ್ದಿಲ್ಲ. ಅದರ ಉದ್ದೇಶದ ಪೂರೈಕೆಯ ಅಗತ್ಯ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಅದು ಜೀವಂತವಾಗಿ ಉಳಿದು ಬೆಳೆಯುವುದು ಅಗತ್ಯವೆನಿಸುತ್ತದೆ. ವ್ಯಕ್ತಿಯ ದೇಹದ ಜೀವಕಣಗಳ ನವೀಕರಣ ಪ್ರಕ್ರಿಯೆ ಸ್ವಲ್ಪಕಾಲದ ಮೇಲೆ ನಿಂತುಹೋಗುತ್ತದೆ. ಆಗ ಸಾವಿನೆಡೆಗೆ ಜಾರಿಕೆ ಆರಂಭವಾಗುತ್ತದೆ. ಸಂಸ್ಥೆಯ ಶರೀರದ ಜೀವಕಣಗಳೆಂದರೆ ಅದರ ಸದಸ್ಯ ಸಂಪತ್ತು. ಈ ಜೀವಕಣಗಳ ನವೀಕರಣ ಪ್ರಕ್ರಿಯೆಗೆ ನಿಲುಗಡೆ ಇರಬೇಕಾದುದಿಲ್ಲ. ಈ ಪ್ರಕ್ರಿಯೆ ನಿರಂತರವಾಗಿ ನಡೆದುಕೊಂಡು ಹೋಗುವಂತೆ ಯಾವ ಸಂಸ್ಥೆ ಎಚ್ಚರವಹಿಸುತ್ತದೋ ಅದು ಅನಂತ ಕಾಲದವರೆಗೂ ಜೀವಂತವಾಗಿರಬಹುದು. ಆದರೆ ಆಂತರಿಕ ವೈರುಧ್ಯಗಳು ಅದರ ಬದುಕನ್ನು ಮೊಟಕು ಮಾಡಬಹುದು. ಉತ್ಕರ್ಷೆಯ ಬಲಗಳೇ ಅವನತಿಗೆ ಹಾದಿ ಮಾಡಬಹುದು. ಆದ್ದರಿಂದ ಹೀಗಾಗದಂತೆ ಎಚ್ಚರ ವಹಿಸುವುದೂ ಅಗತ್ಯವಾಗುತ್ತದೆ. ಸಂಸ್ಥೆಯನ್ನು

ದೃಢವಾಗಿ ಕಟ್ಟಿ ಬೆಳಸುವುದಕ್ಕೆ ಬೇಕಾಗುವ ಅಂಶಗಳೇ ಅದಕ್ಕೆ ಜಡತ್ವವನ್ನೂ ಜರತ್ವವನ್ನೂ ಮರಣತ್ವವನ್ನೂ ತರಬಹುದು. ಭದ್ರತೆ, ಉದ್ದೇಶದ ಮಸುಳಿಕೆ, ಸಂಸ್ಥೆಯಿಂದ ಲಾಭ ಪಡೆಯಬಹುದೆಂದು ಅಧಿಕಾರಾಭಿಲಾಷಿಗಳ ಅನಿಸಿಕೆ – ಇಂಥ ಯಾವುದೇ ಅಥವಾ ಯಾವುವೇ ಕಾರಣ ಅಥವಾ ಕಾರಣಗಳಿಂದಾಗಿ ಸಂಸ್ಥೆ ಇಳಿಮೆಯ ಹಾದಿ ಹಿಡಿಯಬಹುದು. ಯಾವುದೇ ಸಂಸ್ಥೆಗೆ ಅತೀವ ಭದ್ರತೆ ಬರಬಾರದೆಂದು ಗಾಂಧೀಜಿ ಹೇಳುತ್ತಿದ್ದರು. ಸಾಂಸ್ಥಿಕರಣದ ವಿರುದ್ಧ ಅವರು ಸೊಲ್ಲೆತ್ತಿದ್ದರು. ಅವರ ಸಾವಿನ ಅನಂತರ ಗಾಂಧೀವಾದವೇ ಒಂದು ಸಂಸ್ಥೆಯಾಗಿಬಿಟ್ಟಿದ್ದು ಅದರ ಜೀವಂತಿಕೆ ನಷ್ಟಕ್ಕೆ ಕಾರಣವಾಯಿತೋ ಏನೋ.

ಸ್ಥಾಪನೆಯ ಉದ್ದೇಶ

ಹತ್ತು ವರ್ಷಗಳ ಹಿಂದೆ ಸಮನ್ವಯ ಸಮಿತಿಯ ಸ್ಥಾಪನೆಯಾದಾಗ ಅದಕ್ಕೆ ಒಂದು ಗುರಿ ಇತ್ತು. ಭಾರತೀಯ ಸ್ಟೇಟ್ ಬ್ಯಾಂಕಿನ ಹಲವು ಶಾಖೆಗಳಲ್ಲಿ ಆರಂಭವಾದ ಕನ್ನಡ ಸಂಘಗಳು ತಮತಮಗೆ ತೋರಿದಂತೆ ಕನ್ನಡದ ಕೆಲಸ ನಡಸುತ್ತಿದ್ದುವು. 'ತಮತಮಗೆ ತೋರಿದಂತೆ' ಎಂಬ ಮಾತನ್ನು ಇಲ್ಲಿ ಕೆಟ್ಟ ಅರ್ಥದಲ್ಲಿ ಬಳಸಿಲ್ಲ. ಅವೆಲ್ಲ ಒಳ್ಳೆಯ ಕೆಲಸವನ್ನೇ ಮಾಡುತ್ತಿದ್ದುವು. ಆದರೆ ಕನ್ನಡದ ಅಭಿಮಾನ ಹೊಂದಿದವರ ಮಿತವಾದ ಸಾಮರ್ಥ್ಯ ಹಾಗೂ ಸಾಧನ ಸಂಪತ್ತುಗಳನ್ನು ಅನುಕೂಲತಮ ರೀತಿಯಲ್ಲಿ ಬಳಸಿಕೊಳ್ಳುವಂತಾಗಲು, ಪ್ರತಿಕೂಲ ಪರಿಸರದಲ್ಲಿ ಕನ್ನಡದ ಹಣತೆ ಆರದೆ ದೃಢವಾಗಿ ಬೆಳಗುವಂತಾಗಲು ಈ ಎಲ್ಲ ಕೆಲಸವನ್ನು ಕ್ರೋಡೀಕರಿಸುವ, ಒಂದು ವ್ಯವಸ್ಥೆಗೆ ಒಳಪಡಿಸುವ, ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಕನ್ನಡವನ್ನು ನೆಲೆಗೊಳಿಸುವ ಕಾರ್ಯವನ್ನು ಸುಸೂತ್ರಗೊಳಿಸುವ ಉದ್ದೇಶದಿಂದ ಆ ಕಾರ್ಯಕರ್ತರು ಹಿಂದೆಡೆ ಸೇರಿ ಸಮನ್ವಯ ಸಮಿತಿಯನ್ನು ಸ್ಥಾಪಿಸಿದರು. ಕನ್ನಡ ಪತ್ರಿಕೆಗಳನ್ನು ತರಿಸುವುದು, ವಾಚನಾಲಯ ನಡೆಸುವುದು, ಗ್ರಂಥಾಲಯ ಸ್ಥಾಪಿಸಿ ನಿರ್ವಹಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮುಂತಾದವೆಲ್ಲ ಕನ್ನಡದ ಅಭಿಮಾನವನ್ನು ಬೆಳಸುವುದೆಂಬುದು ನಿಜ. ಆದರೆ ಅವುಗಳ ಚಟುವಟಿಕೆಗಳು ಇಷ್ಟಕ್ಕೇ ನಿಲ್ಲಬಾರದು. ಬ್ಯಾಂಕುಗಳು ಸಾರ್ವಜನಿಕರಿಗಾಗಿ ಇರುವ ಸೇವಾ ಸಂಸ್ಥೆಗಳು. ಈ ಸಂಸ್ಥೆಗಳ ವ್ಯವಹಾರ ಸಾರ್ವಜನಿಕರ ಭಾಷೆಯಲ್ಲಿ ನಡೆಯಬೇಕು. ಇದನ್ನು ಬ್ಯಾಂಕ್ ವ್ಯವಸ್ಥಾಪಕ ವರ್ಗಕ್ಕೂ ಗ್ರಾಹಕ ವರ್ಗಕ್ಕೂ ಸರ್ಕಾರಕ್ಕೂ ಮನವರಿಕೆ ಮಾಡಿಕೊಡಬೇಕು. ಸಮಗ್ರತೆಯ, ಒಗ್ಗಟ್ಟಿನ ಅನುಕೂಲತೆಯ ಹೆಸರಿನಲ್ಲಿ ಜನದ್ದಲ್ಲದ ಯಾವುದೇ ಭಾಷೆಯನ್ನು ಹೇರುವ ಪ್ರಯತ್ನವನ್ನು ತಡೆಗಟ್ಟಬೇಕು. ಬ್ಯಾಂಕುಗಳಿಗೆ ಕೇಂದ್ರ ಕಛೇರಿಗಳು ಇರುವುದು ನಿಜ. ಅವುಗಳ ಮೇಲೆ

ರಿಸರ್ವ್ ಬ್ಯಾಂಕೂ ಸರ್ಕಾರವೂ ಇರುವುದೆಂಬುದನ್ನೂ ಅಲ್ಲಗಳೆಯುವಂತಿಲ್ಲ. ಭಾರತೀಯ ಬ್ಯಾಂಕುಗಳ ಸಂಘವಿರುವುದೂ ಸತ್ಯಸಂಗತಿ. ಇವೆಲ್ಲ ಅತಿ ಕೇಂದ್ರೀಕರಣದ, ಸಾಂದ್ರೀಕರಣದ ಸಾಧನಗಳು. ಸಂಘಟನೆ, ದಕ್ಷತೆ, ಏಕರೂಪತೆ, ಯುಕ್ತ ನೀತಿನಿರೂಪಣೆ – ಇವುಗಳ ದೃಷ್ಟಿಯಿಂದ ಇವು ಅಗತ್ಯವಿರಬಹುದು. ಆದರೆ ಇಡೀ ಬ್ಯಾಂಕಿಂಗ್ ವ್ಯವಸ್ಥೆ ಪಿರಮಿಡಿನಂತೆ ತಳದಲ್ಲಿ – ಶಾಖೆಗಳ ಮಟ್ಟದಲ್ಲಿ – ನಡೆಯುವ ವ್ಯವಹಾರಗಳೇ ಅದಕ್ಕೆ ಆಧಾರ. ಈ ವ್ಯವಹಾರಗಳು ಮೇಲಿನ ಆಡಳಿತಗಾರರಿಗೆ ಅರ್ಥವಾಗಬೇಕು ಎಂಬುದಕ್ಕಿಂತ, ಯಾರು ವ್ಯವಹಾರ ನಡೆಸುತ್ತಾರೋ ಅವರಿಗೆ ಅರ್ಥವಾಗಬೇಕು ಎಂಬುದು ಮುಖ್ಯ. ಮೇಲಿನವರು ಪ್ರಯತ್ನಪಟ್ಟು ಅರ್ಥ ಮಾಡಿಕೊಳ್ಳಬಲ್ಲರು. ಕೆಳಗಿನ ಸ್ತರಗಳವರು–ಬ್ಯಾಂಕುಗಳ ಜೀವನಾಡಿಗಳಾದ ಗ್ರಾಹಕರು – ತಮ್ಮದಲ್ಲದ ಭಾಷೆಯನ್ನು ಅರ್ಥಮಾಡಿಕೊಳ್ಳಲಾರರು. ಸೇವಾ ಸಂಸ್ಥೆಗಳೆಂದು ಕರೆದುಕೊಳ್ಳುವ ಬ್ಯಾಂಕುಗಳ ತಲೆಯಾಳುಗಳೂ ಶಿರಪ್ರಾಯ ಸಂಸ್ಥೆಗಳೂ ಸರ್ಕಾರವೂ ಇದನ್ನರ್ಥಮಾಡಿಕೊಳ್ಳದಿರುವುದು ದುರ್ದೈವದ ಸಂಗತಿ. ಇದು ಮಹಾಪರಾಧ. ಆದ್ದರಿಂದ ಸಮನ್ವಯ ಸಮಿತಿಯ ನಿರ್ದೇಶನದಲ್ಲಿ ಕನ್ನಡ ಸಂಘಗಳು ಈ ಪರಿಸ್ಥಿತಿಯನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಕಲಾಪಗಳನ್ನು ನಡೆಸಬೇಕು ಎಂಬುದು ಸ್ಥೂಲವಾಗಿ ಸಮನ್ವಯ ಸಮಿತಿಯ ಸ್ಥಾಪನೆಯ ಹಿಂದಿದ್ದ ಉದ್ದೇಶ ಎನ್ನಬಹುದು.

ದ್ವಿಮುಖ ಕಾರ್ಯ

ಸಮನ್ವಯ ಸಮಿತಿ ಸಹಜವಾಗಿಯೇ ತನ್ನ ಕಲಾಪಗಳನ್ನು ಎರಡು ದಿಕ್ಕುಗಳಲ್ಲಿ ರೂಪಿಸುವುದು ಅಗತ್ಯವಾಯಿತು. ಮೊದಲನೆಯದಾಗಿ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಕನ್ನಡ ಸಂಘಗಳ ಸ್ಥಾಪನೆಗೆ ನೆರವಾಗಿ, ಅಲ್ಲೆಲ್ಲ ಕನ್ನಡ ವಾತಾವರಣ ಮೂಡುವಂತೆ ಮಾಡಿ, ಕನ್ನಡದ ಬಗ್ಗೆ ಇರುವ ವಿರೋಧ, ತಾತ್ಸಾರ, ಅಜ್ಞಾನಗಳ ನಿವಾರಣೆಗಾಗಿ ಶ್ರಮಿಸುವುದು; ಇಂಗ್ಲಿಷಿನ ಸ್ಥಾನದಲ್ಲಿ ಶೀಘ್ರಾತಿಶೀಘ್ರವಾಗಿ ಹಿಂದಿಯನ್ನು ತಂದು ಹೇರಿ ಒಂದು ಅಪರಿಚಿತ ಭಾಷೆಯ ಬದಲು ಇನ್ನೊಂದು ಅಪರಿಚಿತ ಭಾಷೆಯನ್ನು ಸ್ಥಾಪಿಸುವವರ ಪ್ರಯತ್ನವನ್ನು ವಿರೋಧಿಸಿ, ಜನರು ಆಡುವ ಭಾಷೆಯಲ್ಲಿ ವ್ಯವಹರಿಸುವುದು ಸಹಜವೂ ಪ್ರಜಾಸತ್ತಾತ್ಮಕವೂ ಆಗಿರುವುದಲ್ಲದೆ, ಸಮಗ್ರತೆಗೆ ಹಾನಿಕಾರಕವಲ್ಲವೆಂದೂ ಪ್ರತಿಯಾಗಿ ಅದಕ್ಕೆ ಪೋಷಕವೆಂದೂ ತೋರಿಸಿಕೊಡುವುದು. ಇದು ಒಂದು ರೀತಿಯಲ್ಲಿ ಹೋರಾಟದ ಮುಖ.

ಎರಡನೆಯದಾಗಿ ರಚನಾತ್ಮಕ ಕಾರ್ಯ, ಬ್ಯಾಂಕುಗಳು ಕನ್ನಡದಲ್ಲಿ ವ್ಯವಹಾರ ಮಾಡುವುದು ಸುಲಭಸಾಧ್ಯವಾಗುವಂತೆ

ಕನ್ನಡವನ್ನು ಅದಕ್ಕಾಗಿ ಅನುಗೊಳಿಸುವುದು; ಇಂಗ್ಲಿಷಿನಲ್ಲಿರುವ ಬ್ಯಾಂಕಿಂಗ್ ಪರಿಕಲ್ಪನೆಗಳನ್ನು ಕನ್ನಡದಲ್ಲಿ ಅಭಿವ್ಯಕ್ತಿಸುವುದು; ಕನ್ನಡದಲ್ಲಿ ಚಿಂತನೆ, ಭಾಷಣ, ಬರವಣಿಗೆ: ಒಟ್ಟಿನಲ್ಲಿ ಕನ್ನಡದಲ್ಲಿ ಬ್ಯಾಂಕಿಂಗ್ ಸಾಹಿತ್ಯ ಸೃಷ್ಟಿ, ಪರಿಭಾಷೆಯ ಸೃಷ್ಟಿ – ಹೋರಾಟಕ್ಕೆ ದಿಟ್ಟ ತಂಡದ ಅಗತ್ಯವಾಗಿರುವಂತೆ, ಬ್ಯಾಂಕಿಂಗ್ ಸಾಹಿತ್ಯ ರಚನೆಗೂ ಸಮರ್ಥರ ತಂಡ ಅಗತ್ಯ. ಈ ಸಾಹಿತ್ಯ ಸೃಷ್ಟಿ ಬ್ಯಾಂಕಿಂಗ್ ಪರಿಸರದಲ್ಲೇ, ಅದರ ವ್ಯವಸ್ಥೆಯ ಒಳಗಿನಿಂದಲೇ ಬರಬೇಕು. ಇದಕ್ಕೆ ಒಂದು ಮಾಧ್ಯಮವೂ ಬೇಕು. ಈ ದೃಷ್ಟಿಯಿಂದ 8 ವರ್ಷ ಹಿಂದೆ "ಬ್ಯಾಂಕಿಂಗ್ ಪ್ರಪಂಚ"ವನ್ನು ಹುಟ್ಟುಹಾಕಲಾಯಿತು.

ಅರ್ಧವಾರ್ಷಿಕೆಯಾಗಿ ಆರಂಭವಾದ ಈ ಪತ್ರಿಕೆ ಈಗ ತ್ರೈಮಾಸಿಕವಾಗಿರುವುದು ಓದುಗರಿಗೆ ಗೊತ್ತಿರುವ ಸಂಗತಿ. ಪ್ರತಿ ಆರು ತಿಂಗಳಿಗೆ ಒಮ್ಮೆ ಒಂದೊಂದು ಜಿಲ್ಲೆಯ ಸ್ಥಳದಲ್ಲಿ ನಡೆಸುತ್ತಿರುವ ಬ್ಯಾಂಕಿಂಗ್ ಕಮ್ಮಟ ಬ್ಯಾಂಕಿಂಗ್ ಸಾಹಿತ್ಯ ಸೃಷ್ಟಿಯಲ್ಲೂ ಪರಿಭಾಷೆಯ ಸೃಷ್ಟಿಯಲ್ಲೂ ನೆರವಾಗಿರುವಂತೆ, 'ಬ್ಯಾಂಕಿಂಗ್ ಪ್ರಪಂಚ'ಕ್ಕೆ ಸಾಮಗ್ರಿ ಒದಗಿಸುವ ಸಾಧನವೂ ಆಗಿದೆ. 'ಬ್ಯಾಂಕಿಂಗ್ ನಿಘಂಟು' ಈ ಕಮ್ಮಟದ ಒಂದು ಮುಖ್ಯ ಉಪೋತ್ಪನ್ನ. ಸಮನ್ವಯ ಸಮಿತಿ ಆಗಾಗ ಏರ್ಪಡಿಸುತ್ತಿರುವ ವಿಚಾರಸಂಕಿರಣಗಳೂ ಭಾಷಣ ಮಾಲೆಗಳೂ ಈ ಉದ್ದೇಶವನ್ನು ಪೂರೈಸಲು ಯತ್ನಿಸುತ್ತಿವೆ.

ಉದ್ದೇಶ ಪೂರೈಸಿಲ್ಲ

ಸಮನ್ವಯ ಸಮಿತಿ ಸಮಾಧಾನಪಟ್ಟುಕೊಳ್ಳುವಷ್ಟು ಕೆಲಸ ಮಾಡಿದೆಯೆಂದು ಹೇಳುವುದರಲ್ಲಿ ತಪ್ಪಾಗದು. ಬ್ಯಾಂಕಿಂಗ್ ಕಮ್ಮಟ, ಬ್ಯಾಂಕಿಂಗ್ ಪ್ರಪಂಚ, ಬ್ಯಾಂಕಿಂಗ್ ನಿಘಂಟು – ಇವು ಭಾರತದ ಬೇರೆ ಯಾವ ಭಾಷೆಯಲ್ಲೂ ಆಗಿಲ್ಲವೆಂದು ಅದು ಹೆಮ್ಮೆಪಟ್ಟುಕೊಳ್ಳಲೂಬಹುದು. ಪ್ರಭುತ್ವದ ದೈತ್ಯಬಲದ ನೆರವಿನಿಂದ, ರಾಜ್ಯ ಸರ್ಕಾರದ ನಿರ್ವೀರ್ಯತೆ ನಿರಾಸಕ್ತಿಗಳ ನಡುವೆ ನುಗ್ಗಿ ಬರುತ್ತಿರುವ ಹಿಂದೀ ಭಾಷೆ ಈ ಎಲ್ಲ ಕಾರ್ಯವನ್ನೂ ನೆಕ್ಕಿ ನೊಣೆಯಬಹುದು; ಹೆಮ್ಮೆಯನ್ನೆಲ್ಲ ಅಳಿಸಿಹಾಕಬಹುದು. ಒಂದು ಕಾಲದಲ್ಲಿ ಸಮನ್ವಯ ಸಮಿತಿ ಇಂಥ ಕೆಲಸ ಮಾಡಿತು. ಪಾಪ !' ಎಂದು ಹೇಳುವಷ್ಟಕ್ಕೆ ಮಾತ್ರ ಇದರ ನೆನಪು ಉಳಿಯಬಾರದು. ಈ ಅಂಜಿಕೆ ಎಲ್ಲರ ಬೆನ್ನಹುರಿಯನ್ನೂ ನಡುಗಿಸುತ್ತಿದೆ.

ಸಮನ್ವಯ ಸಮಿತಿಯ ಉದ್ದೇಶ ಪೂರೈಸಿಲ್ಲ. ಆದ್ದರಿಂದ ಅದು ಮುಂದುವರಿಯಲೇಬೇಕು. ಅದಕ್ಕೆ ಭದ್ರತೆಯ ಬೊಜ್ಜು ಬೆಳೆದಿಲ್ಲ. ಅದರಲ್ಲಿ ಅಧಿಕಾರ ಗ್ರಹಿಸುವುದು ಪ್ರತಿಷ್ಠೆಯ, ಲಾಭದ ಸಂಗತಿ ಎಂಬ ಭಾವನೆಯೂ ಇಲ್ಲ. ಆದ್ದರಿಂದ ಅದು ಜೀವಂತವಾಗಿ ಮುಂದುವರಿಯಬಲ್ಲುದು. ಜೀವಕಣಗಳ

ಪುನರ್ನವೀಕರಣವೂ ಬೆಳವಣಿಗೆಯ ಲಕ್ಷಣ ಬೆಳವಣಿಗೆಗೆ, ಅಗತ್ಯ. ಇತ್ತಕಡೆ ಸಮನ್ವಯ ಸಮಿತಿ ಲಕ್ಷ್ಯ ಹರಿಸಬೇಕು. ಹಳೆಯ ಕೆಲವೇ ಕೆಲಸಗಾರರ ಜೊತೆಗೆ ಹೊಸ ಹುರುಪಿನ ತಂಡ ಸೇರಿಕೊಳ್ಳುತ್ತಲೇ ಇರಬೇಕು. ನಿರಂತರವಾಗಿ ನಡೆಯುತ್ತಿರಬೇಕಾದ ಪ್ರಕ್ರಿಯೆಯಿದು.

17.

ಡಿಸೆಂಬರ್ 1988
ಹೊಸ ಉದರಿ ನೀತಿ

ನಮ್ಮ ಕೇಂದ್ರೀಯ ಬ್ಯಾಂಕಾದ ಭಾರತೀಯ ರಿಸರ್ವ್ ಬ್ಯಾಂಕು ವರ್ಷಕ್ಕೆ ಎರಡು ಬಾರಿ ತನ್ನ ಉದರಿ ನೀತಿ ಘೋಷಿಸುತ್ತದೆ: ಒಂದು ತೀವ್ರ ಆರ್ಥಿಕ ಚಟುವಟಿಕೆಯ ತೇಜಿ ಹಂಗಾಮಿಗಾಗಿ (busy season); ಇನ್ನೊಂದು, ಮಂದ ಚಟುವಕೆಯ ಮಂದಿ ಹಂಗಾಮಿಗಾಗಿ (Slack Season). ತೇಜಿ ಹಂಗಾಮು ನವೆಂಬರಿನಿಂದ ಮಾರ್ಚ್ ವರೆಗೆ; ಮಂದಿ ಹಂಗಾಮು ಏಪ್ರಿಲಿನಿಂದ ಅಕ್ಟೋಬರ್ ವರೆಗೆ. ಮುಂಗಾರು ಮಳೆಯಾಗಿ, ಫಸಲು ತುಂಬಿ ಬಂದು, ಆರ್ಥಿಕ ಚಟುವಟಿಕೆ ಕುದುರಿದಾಗ ವಹಿವಾಟುಗಳಿಗಾಗಿ ಹೆಚ್ಚು ಹಣ, ಅಧಿಕ ಉದರಿ ಅಗತ್ಯ. ಮಂದಿ ಸಮಯದಲ್ಲಿ ಅಗತ್ಯಕ್ಕಿಂತ ಹೆಚ್ಚು ಹಣ, ಹೆಚ್ಚು ಉದರಿ ಇದ್ದರೆ ಅದರಿಂದ ಪ್ರತಿಕೂಲ ಪರಿಣಾಮವಾಗಬಹುದಾದ್ದರಿಂದ ಆಗ ಅದನ್ನು ಹಿಡಿತಕ್ಕೊಳಪಡಿಸುವುದು ಅನಿವಾರ್ಯ. ರಿಸರ್ವ್ ಬ್ಯಾಂಕಿನೊಂದಿಗೆ ನೇರ ಸಂಬಂಧ ಹೊಂದಿರುವ ವಾಣಿಜ್ಯ ಬ್ಯಾಂಕುಗಳ ಆಸ್ತಿಗಳ ವಿನ್ಯಾಸವನ್ನು ನಿಯಂತ್ರಣಕ್ಕೊಳಪಡಿಸುವುದರ ಮೂಲಕ ರಿಸರ್ವ್ ಬ್ಯಾಂಕು ಈ ಉದ್ದೇಶ ಸಾಧಿಸುತ್ತದೆ. ಆದ್ದರಿಂದ ಶ್ರಾಯೀಣವಾಗಿ (Seasonally) ರಿಸರ್ವ್ ಬ್ಯಾಂಕ್ ಘೋಷಿಸುವ ಉದರಿ ನೀತಿ ಇಡೀ ದೇಶದ ಅರ್ಥ ವ್ಯವಸ್ಥೆಯ ಸಮಧಾತುವಿನ ದೃಷ್ಟಿಯಿಂದ ಅತ್ಯಂತ ಪ್ರಾಮುಖ್ಯ ಗಳಿಸಿದೆಯೆನ್ನಬಹುದು.

ಈ ಹಣಕಾಸು ವರ್ಷದ ದ್ವಿತೀಯಾರ್ಧಕ್ಕಾಗಿ, ತೇಜಿ ಹಂಗಾಮಿಗಾಗಿ, ರಿಸರ್ವ್ ಬ್ಯಾಂಕ್ ಘೋಷಿಸಿರುವ ನೀತಿ ಅನೇಕ ದೃಷ್ಟಿಗಳಿಂದ ಗಮನಾರ್ಹವಾದ್ದು. ರಿಸರ್ವ್ ಬ್ಯಾಂಕ್ ಸಾಮಾನ್ಯವಾಗಿ ತೋರಿಸದ ದಿಟ್ಟತನವನ್ನು ಇದರಲ್ಲಿ ಪ್ರದರ್ಶಿಸಿದೆ ಎಂದು ಕೆಲವರ ಅಭಿಪ್ರಾಯ. ಈ ಶತಮಾನದ ಅತ್ಯುಗ್ರ ಅಭಾವ ಪರಿಸ್ಥಿತಿಯ ಅನಂತರ ಈ ವರ್ಷ ಒಳ್ಳೆಯ ಮಳೆಯಾಗಿರುವುದರಿಂದ ಕೃಷಿ ಹಾಗೂ ವಿದ್ಯುತ್ ಪರಿಸ್ಥಿತಿ ಬಹಳಷ್ಟು ಚೇತರಿಸಿಕೊಂಡಿದೆ. ಕಣಜಗಳು ತುಂಬುತ್ತವೆ. ಮಂಡಿಗಳಲ್ಲಿ ಚಟುವಟಿಕೆ ಕುದುರುತ್ತದೆ. ಕೈಗಾರಿಕೆಗಳು ಚುರುಕಾಗುತ್ತವೆ. ಈ ಎಲ್ಲ ಅನುಕೂಲಕರ ಪ್ರವೃತ್ತಿಗಳಿಂದಾಗಿ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಚಾಲನೆ ದೊರಕುವುದು ಸ್ವತಃಸಿದ್ಧ. ಈ ಸಂದರ್ಭದಲ್ಲಿ ಅದಕ್ಕೆ ಪೋಷಕವಾಗಿ ಅರ್ಥವ್ಯವಸ್ಥೆಗೆ ಹೆಚ್ಚಿನ ಉದರಿ ಲಭ್ಯವಾಗುವಂತೆ ಮಾಡುವುದು ರಿಸರ್ವ್ ಬ್ಯಾಂಕಿನ ಇಚ್ಛೆ. ಆದರೆ ಅದೇ ಸಮಯದಲ್ಲಿ ಅರ್ಥವ್ಯವಸ್ಥೆಯಲ್ಲಿನ ಅಪಾಯಕಾರಿ ಪ್ರವೃತ್ತಿಗಳನ್ನೂ ಕಡೆಗಣಿಸುವಂತಿಲ್ಲ. ಬ್ಯಾಂಕುಗಳ ಠೇವಣಿಗಳು ಬೆಳೆಯುತ್ತಿವೆ. ಸರ್ಕಾರದ

ವೆಚ್ಚ ಅಸಾಧಾರಣವಾಗಿ ಏರುತ್ತಿರುವುದರಿಂದ ಹಣದ ಸೃಷ್ಟಿ ಬೆಳೆಯುತ್ತಿದೆ. ಆದು ಬೆಲೆಗಳ ಮೇಲೆ ಹೆಚ್ಚಿನ ಒತ್ತಡ ಹೇರದಂತೆ ಎಚ್ಚರಿಕೆ ವಹಿಸಬೇಕಾದ್ದೂ ಅತ್ಯವಶ್ಯ. ಹೀಗೆ, ಬೆಳವಣಿಗೆಗೆ ಪ್ರೋತ್ಸಾಹ ದೊರಕುವಂತೆ, ಆದರೆ ಬೆಲೆಗಳ ಏರಿಕೆಗೆ ಪ್ರಚೋದನೆ ಉಂಟಾಗದಂತೆ ರಿಸರ್ವ್ ಬ್ಯಾಂಕು ತನ್ನ ಅಸ್ತ್ರಕ್ಕೆ ದ್ವೈತೋದ್ದೇಶಗಳನ್ನು ತೊಡಿಸಬೇಕಾಗುತ್ತದೆ: ಎರಡು ಗುರಿಗಳನ್ನು ಹೊಂದಿರಬೇಕಾಗುತ್ತದೆ. ಆದರೆ ಒಂದು ಗುರಿಯನ್ನು ಸಾಧಿಸಹೊದರೆ ಇನ್ನೊಂದು ಗುರಿಗೆ ವಿಘ್ನ. ಈ ವೈರುಧ್ಯವನ್ನು ಹೋಗಲಾಡಿಸುವುದು ಹೇಗೆ? ಇದು ರಿಸರ್ವ್ ಬ್ಯಾಂಕಿನ ಉಭಯಸಂಕಟ. ಈ ಉಭಯ ಸಂಕಟದಿಂದ ಪಾರಾಗುವ ಉಪಾಯವೇ ಈಗ ಘೋಷಿಸಲಾಗಿರುವ – ಈಗಾಗಲೇ ಜಾರಿಗೆ ಬಂದಿರುವ – ರಿಸರ್ವ್ ಬ್ಯಾಂಕಿನ ಉದರಿ ನೀತಿಯ ಮುಖ್ಯ ಲಕ್ಷಣ.

ಹಳೆಯ ನೀತಿ

ರಿಸರ್ವ್ ಬ್ಯಾಂಕಿನ ಈಗಿನ ಉದರಿ ನೀತಿ ಒಂದು ದೃಷ್ಟಿಯಲ್ಲಿ ಈ ಹಿಂದೆ ಅದು ಜಾರಿಗೆ ತಂದ ನೀತಿಯ ಮುಂದುವರಿಕೆಯೆಂದೇ ಹೇಳಬೇಕು. ತೀವ್ರ ಅಭಾವ ಪರಿಸ್ಥಿತಿಯ ಫಲವಾಗಿ ದೇಶದಲ್ಲಿ ಈ ವರ್ಷದ ಆದಿಯಲ್ಲಿ ಬೆಲೆಗಳು ತೀವ್ರವಾಗಿ ಏರುವ ಪ್ರವೃತ್ತಿ ಪ್ರಬಲವಾಗಿತ್ತು. (ಈಗಲೂ ಆ ಅಪಾಯ ತಪ್ಪಿಲ್ಲ.) ಇಡೀ ವರ್ಷದಲ್ಲಿ ಬ್ಯಾಂಕ್ ಠೇವಣಿಗಳು ಶೇ.17ರಷ್ಟು ಅಧಿಕವಾಗಬಹುದೆಂದು ಮೊದಲು ಅಂದಾಜು ಮಾಡಲಾಗಿತ್ತು. ಆದರೆ ಈ ನಿರೀಕ್ಷೆಯನ್ನೂ ಮೀರಿ ಠೇವಣಿಗಳು ಬೆಳೆದುವು. ಮೊದಲೇ ಹಣದುಬ್ಬರ ಪರಿಸ್ಥಿತಿ ಇರುವಾಗ ಠೇವಣಿಗಳೂ ಮೇರೆ ಮೀರಿ ಬೆಳೆದರೆ, ಇವನ್ನು ತೊಡಗಿಸಲು ಯೋಗ್ಯ ಮಾರ್ಗಗಳು ಇರದಿದ್ದರೆ, ಅನುತ್ಪಾದಕ ಹಾಗೂ ಅನರ್ಥಕಾರಿ ಚಟುವಟಿಕೆಗಳಿಗೆ ಇವು ಒದಗಿಬರುವಂತಾದರೆ ಆಗಬಹುದಾದ ಅಪಾಯವನ್ನು ಮುಂಗಂಡ ರಿಸರ್ವ್ ಬ್ಯಾಂಕು ಕಳೆದ ಜುಲೈನಲ್ಲೇ ಇದರ ನಿವಾರಣೆಗಾಗಿ ತೀವ್ರಕ್ರಮ ಕೈಗೊಂಡಿತ್ತು. ಬ್ಯಾಂಕುಗಳ ನಗದು ಮೀಸಲು ಅನುಪಾತ (cash reserve ratio) ಜುಲೈ 30ರಿಂದ ಶೇ.10ರಿಂದ ಶೇ.10.5ಕ್ಕೆ ಏರಬೇಕೆಂದಿದ್ದುದನ್ನು ಬದಲಿಸಿ, ಜುಲೈ 2ರಿಂದಲೇ ಅದು ಜಾರಿಗೆ ಬರುವಂತೆ ಮಾಡಿತಲ್ಲದೆ, ಜುಲೈ 30ರಿಂದ ಇದನ್ನು ಶೇ.11ಕ್ಕೆ ಏರಿಸಿತು. ಬ್ಯಾಂಕುಗಳು ತಮ್ಮ ಠೇವಣಿಗಳ ಮೊಬಲಗಿನಲ್ಲಿ ಈ ಶತಾಂಶವನ್ನು ಕಡ್ಡಾಯವಾಗಿ ರಿಸರ್ವ್ ಬ್ಯಾಂಕಿನಲ್ಲಿ ನಗದಾಗಿ ಇರಿಸಬೇಕಾಗಿ ಬರುವುದರಿಂದ ಅವುಗಳ ಉದರಿ ಸೃಷ್ಟಿಯ (ಮುಂಗಡ ನೀಡಿಕೆಯ) ಸಾಮರ್ಥ್ಯ ಅಷ್ಟರ ಮಟ್ಟಿಗೆ ಮೊಟಕಾಗುವುದು ಸಹಜ. ಇದಲ್ಲದೆ ಬ್ಯಾಂಕುಗಳು ಸುಲಭವಾಗಿ ನಗದಾಗಿ ಪರಿವರ್ತಿಸಬಹುದಾದ ಪ್ರತಿಭೂತಿಗಳಲ್ಲಿ (Securities) ಕಡ್ಡಾಯವಾಗಿ ತೊಡಗಿಸಬೇಕಾದ ಮೊಬಲಗಿನ

ಪ್ರಮಾಣವನ್ನೂ – ಪರಿನಿಯತ ದ್ರವತ್ವ ಅನುಪಾತವನ್ನೂ (Statutory liquidity ratio) – ಶೇ.38ರಷ್ಟು ಉನ್ನತ ಮಟ್ಟದಲ್ಲಿ ಇರಿಸಿದ್ದರಿಂದ ಮತ್ತೆ ಬ್ಯಾಂಕುಗಳ ಉದರಿ ಸೃಷ್ಟಿ ಸಾಮರ್ಥ್ಯ ಅಷ್ಟರಮಟ್ಟಿಗೆ ಮೊಟಕಾಗುವುದೂ ಸ್ವಯಂವೇದ್ಯ. ಇವೆರಡೂ ಅಸ್ತ್ರಗಳು ಉಬ್ಬರ ಪರಿಸ್ಥಿತಿಯನ್ನು ತಮಗೆ ತಾವೇ ವಿಚಾರಿಸಿಕೊಂಡಾವು ಎಂಬುದು ರಿಸರ್ವ್ ಬ್ಯಾಂಕಿನ ಅಕ್ಕರೆಯ ಹಾರೈಕೆಯಾಗಿತ್ತು (fond hope).

ಆತಂಕ

ರಿಸರ್ವ್ ಬ್ಯಾಂಕ್ ಈ ಅಸ್ತ್ರಪ್ರಯೋಗ ಮಾಡಿದಾಗ ದೇಶದ ಆರ್ಥಿಕ ಪರಿಸ್ಥಿತಿ ಉತ್ಕಟವಾಗಿಯೇ ಇತ್ತು. ಮಳೆ ಬೆಳೆ ಹೇಗಾದಾವೋ ಎಂಬುದಿನ್ನೂ ಗೊತ್ತಿರಲಿಲ್ಲ. ಮತ್ತೆ ಮುಂಗಾರು ಕೈಕೊಟ್ಟರೆ? – ಎಂಬ ಭಯವಿತ್ತು. ದೇಶದಲ್ಲಿದ್ದ ಧಾನ್ಯ ದಾಸ್ತಾನು ಕರಗುತ್ತಿತ್ತು. ಕಳೆದ ವರ್ಷದ ಫಸಲು ಕಡಿಮೆಯಾಗಿದ್ದರೂ ಅಂಜಿದ್ದಷ್ಟು ಕಡಿಮೆಯಾಗಿರಲಿಲ್ಲ. ಆದ್ದರಿಂದ ಧಾನ್ಯ ಸಂಗ್ರಹಣೆಯ ಕಾರ್ಯ ತುಂಬ ಹಿಂದೆ ಬೀಳಲಾರದೆಂಬ ಆಶೆಯ ಕಿರಣವೂ ಹೊಳೆಯದಿರಲಿಲ್ಲ. ಆದರೂ ಸರ್ಕಾರಿ ಮಳಿಗೆಗಳಿಂದ ಹರಿದು ಹೋಗುತ್ತಿದ್ದ ಧಾನ್ಯದ ಬದಲು ಹೊಸ ಧಾನ್ಯವೇನೂ ಹೆಚ್ಚಾಗಿ ತುಂಬಿಕೊಳ್ಳಲಿಲ್ಲ. ಒಂದು ವೇಳೆ ಧಾನ್ಯ ಸಂಗ್ರಹಣ ಕಾರ್ಯ ತಕ್ಕ ಮಟ್ಟಿಗೆ ಸಮಾಧಾನಕರವಾಗಿದ್ದರೆ ಅದಕ್ಕಾಗಿ ಬ್ಯಾಂಕು ಉದರಿ ನೀಡಲು ತೊಂದರೆಯೇನೂ ಇರಲಿಲ್ಲ. ಹಿಂದೆ (1977ರಿಂದ 1980ರ ವರೆಗೆ) ಸ್ಥಗಿತಗೊಳಿಸಿದ್ದ – ತನ್ನ ಬಳಿ ಇಟ್ಟುಕೊಂಡಿದ್ದ – ರೂ.144 ಕೋಟಿಯಷ್ಟು ವೃದ್ಧಿಶೀಲ ನಗದು ಮೀಸಲನ್ನು (incremental cash reserve) ರಿಸರ್ವ್ ಬ್ಯಾಂಕು ಬಿಡುಗಡೆ ಮಾಡಿದ್ದರಿಂದ ಬ್ಯಾಂಕುಗಳು ಧಾನ್ಯಸಂಗ್ರಹಣೆಗಾಗಿ ಸಾಲ ನೀಡಲು ಈ ಹಣವನ್ನು ಬಳಸಿಕೊಳ್ಳಬಹುದೆಂದು ಆಶಿಸಲಾಗಿತ್ತು. ಆದರೆ ಧಾನ್ಯ ಸಂಗ್ರಹಣೆ ಸಮರ್ಪಕವಾಗಿ ಆಗಲಿಲ್ಲ. ಬೆಲೆಗಳು ಏರಬಹುದೆಂಬ ನಿರೀಕ್ಷೆಯಿಂದ ರೈತರು ಧಾನ್ಯ ಒಪ್ಪಿಸದೆ ತಡೆಹಿಡಿದರು. ಮಾರುಕಟ್ಟೆಯಲ್ಲಿ ತಮ್ಮ ಧಾನ್ಯಕ್ಕೆ ಹೆಚ್ಚು ಬೆಲೆ ದೊರಕೀತೆಂಬ ಆಸೆ ಅವರಿಗೆ. ಈ ಪರಿಸ್ಥಿತಿಯಿಂದಾಗಿ ಹಾಗೂ ಬೆಲೆಗಳು ಏರುತ್ತಿದ್ದುದರಿಂದಾಗಿ ರಿಸರ್ವ್ ಬ್ಯಾಂಕು ಮುಂದಿನ ತಿಂಗಳುಗಳನ್ನು ಬಹಳ ಆತಂಕದಿಂದಲೇ ಕಳೆಯಿತೆನ್ನಬೇಕು. ಈ ಆತಂಕ ಅದರ ವಾರ್ಷಿಕ ವರದಿಯಲ್ಲೂ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು.

ಸದ್ಯದ ಸ್ಥಿತಿ

ಒಳ್ಳೆಯ ಮಳೆಯಿಂದಾಗಿ ಪರಿಸ್ಥಿತಿ ಸುಧಾರಿಸುವುದರಿಂದ ಆರ್ಥಿಕ ಪರಿಸ್ಥಿತಿ ಚೇತರಿಸಿಕೊಳ್ಳುವಂತೆ ಮಾಡಲು ’ರಿಸರ್ವ್ ಬ್ಯಾಂಕು ಉಜ್ಜುಗಿಸಿದೆ. ಅದರೊಂದಿಗೆ ಹಣದುಬ್ಬರಕ್ಕೆ ಹೆಚ್ಚಿನ ಒತ್ತಡ ಬಾರದಂತೆ ತಡೆಯುವುದೂ ಉದ್ದೇಶವಾಗಿದೆ. ಆದ್ದರಿಂದ ಅದು

ನಗದು ಮೀಸಲು ಹಾಗೂ ಪರಿನಿಯತ ದ್ರವತ್ವ ಅನುಪಾತಗಳ ತಂಟೆಗೆ ಹೋಗದೆ ಅವನ್ನು ಹಾಗೆಯೇ ಇರಗೊಟ್ಟು, ಬ್ಯಾಂಕುಗಳು ಉದರಿ ಸೃಷ್ಟಿಯ ಹಂಬಲಕ್ಕೆ ಒಳಗಾಗದಂತೆ ಮಾಡಲು ಎಚ್ಚರ ವಹಿಸಿದೆ. ಬ್ಯಾಂಕುಗಳ ಠೇವಣಿಗಳು ಈ ವರ್ಷ ನಿರೀಕ್ಷಿತ ರೂ.20,500 ಕೋಟಿಯ ಏರಿಕೆ ಸಾಧಿಸುವ ಭರವಸೆ ಇದೆ. ಅಧಿಕ ಠೇವಣಿಗಳಿಂದ ಬ್ಯಾಂಕುಗಳ ಪ್ರಸಾಮಾನ್ಯ (normal) ಉದರಿ ನೀಡಿಕೆಯ ಕಲಾಪಕ್ಕೆ ಅಡ್ಡಿಯುಂಟಾಗದು. ಅವು ತಮ್ಮ ಅಧಿಕ ಬೇಡಿಕೆ ಪೂರೈಸಲು ರಿಸರ್ವ್ ಬ್ಯಾಂಕಿನ ನೆರವಿಗಾಗಿ ಕೈ ಚಾಚುವ ಪ್ರಮೇಯ ಬರಲಾರದು. ಬ್ಯಾಂಕುಗಳು ಸಾಲ ನೀಡಬಹುದಾದ ನಿವ್ವಳ ಸಂಪನ್ಮೂಲಗಳಲ್ಲಿ ಅತೀವ ಏರಿಕೆಯಾದೀತೆಂಬ ಭಯವೂ ಇಲ್ಲ. ಏಕೆಂದರೆ ಅಧಿಕ ನಗದು ಮೀಸಲು ಅನುಪಾತ (11%) ಹಾಗೂ ಪರಿನಿಯತ ದ್ರವತ್ವ ಅನುಪಾತ (38%) – ಇವುಗಳಿಂದಾಗಿ, ಬ್ಯಾಂಕುಗಳು ಸಾಲ ನೀಡಲು ಒದಗಿಬರಬಹುದಾದ ಸಂಪನ್ಮೂಲಗಳಲ್ಲಿ ರೂ.2,000 ಕೋಟಿಯಷ್ಟು ಕಡಿತ ಬೀಳುತ್ತದೆ. ಕಳೆದ ವರ್ಷದ ತೇಜಿ ತಿಂಗಳುಗಳಲ್ಲಿ ಬ್ಯಾಂಕುಗಳು ಆಹಾರಧಾನ್ಯಗಳ ಮೇಲೆ ನೀಡಿದ ಉದರಿಯಲ್ಲಿ ರೂ.1,522 ಕೋಟಿಯಷ್ಟು ಇಳಿತವಾಗಿತ್ತು. ಈ ವರ್ಷದ ತೇಜಿ ಶ್ರಾಯದಲ್ಲಿ ರೂ.1,000 ಕೋಟಿಯಷ್ಟು ನಿವ್ವಳ ಏರಿಕೆಯಾಗುವುದೆಂಬ ನಿರೀಕ್ಷೆಯಿದೆ. ಬ್ಯಾಂಕುಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳು ಈ ಅಗತ್ಯವನ್ನು ವಿಚಾರಿಸಿಕೊಳ್ಳಬಹುದೆಂಬುದು ರಿಸರ್ವ್ ಬ್ಯಾಂಕಿನ ನಂಬಿಕೆ.

ಉದರಿ ಪ್ರಾಧಿಕರಣ

ಸದ್ಯದ ಉದರಿ ನಿರ್ಬಂಧಗಳನ್ನು ಹಾಗೆ ಮುಂದುವರಿಯಗೊಟ್ಟು, ಸುವೃಷ್ಟಿಯು ಫಲದ ಆರ್ಥಿಕ ಚೇತರಿಕೆಗೆ ಎಲ್ಲ ಉತ್ತೇಜನವನ್ನೂ ದೊರಕಿಸಿಕೊಡುವುದಲ್ಲದೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮನೆಮಾಡಿಕೊಂಡಿರುವ ಕೆಲವು ಜಡತೆಯ ಪ್ರವೃತ್ತಿಗಳನ್ನು ತೊಡೆದುಹಾಕಲೂ ರಿಸರ್ವ್ ಬ್ಯಾಂಕ್ ಇದೀಗ ಕ್ರಮ ತೆಗೆದುಕೊಂಡಿದೆ. ಕೃಷಿ ಚೇತರಿಸಿಕೊಂಡಿರುವುದರಿಂದ ಸಹಜವಾಗಿಯೇ ಕೈಗಾರಿಕೆಯೂ ಹೆಚ್ಚು ಚುರುಕಾಗುತ್ತದೆ. ಕೈಗಾರಿಕೆಯ ಬೆಳವಣಿಗೆ ಸುಸೂತ್ರವಾಗಿ ಸಾಗುವಂತಾಗಲು ಅದಕ್ಕೆ ಹೆಚ್ಚಿನ ನೆರವು ಅಗತ್ಯ. ಬ್ಯಾಂಕ್ ರಾಷ್ಟ್ರೀಕರಣ ಆದಮೇಲೆ ಆದ್ಯತಾ ವಲಯಕ್ಕೆ ಹೆಚ್ಚಿನ ಉದರಿ ಹರಿಯುವಂತೆ ಮಾಡಲು, ಲಭ್ಯವಿರುವ ವಿರಳ ಸಂಪನ್ಮೂಲ ಪೋಲಾಗದಂತೆ ತಡೆಯಲು ರಿಸರ್ವ್ ಬ್ಯಾಂಕ್ ಕೈಗೊಂಡ ಕ್ರಮಗಳ ಪೈಕಿ ಉದರಿ ಪ್ರಾಧಿಕರಣ ಯೋಜನೆಯೂ (Credit authorisation Scheme) ಒಂದು. ಹೆಚ್ಚಿನ ಮೊತ್ತದ ಸಾಲಗಳನ್ನು ಕೈಗಾರಿಕೆಗಳಿಗೆ ನೀಡುವ ಮೊದಲು ಆ ಬಗ್ಗೆ ರಿಸರ್ವ್ ಬ್ಯಾಂಕಿಗೆ ಪೂರ್ವಭಾವಿಯಾಗಿ ಪ್ರಸ್ತಾವವನ್ನೊಪ್ಪಿಸಿ

ಅದರಿಂದ ಮಂಜೂರಾತಿ ಪಡೆದ ಮೇಲೇ ಅಂಥ ಉದರಿಗಳನ್ನು ನೀಡಬೇಕೆಂಬುದು ಇದರ ಕಟ್ಟುಪಾಡು. ಆದರೆ ಆಚರಣೆಯಲ್ಲಿ ಈ ಯೋಜನೆಯಿಂದ ಅನುಕೂಲವಾಗುವ ಬದಲು ಬಹಳ ತೊಂದರೆಯೇ ಆಗುತ್ತಿತ್ತು. ಬ್ಯಾಂಕ್ ಕಳಿಸಿದ ಯಾವುದೇ ಪ್ರಸ್ತಾವವಾಗಲಿ (proposal) ಮಂಜೂರಾಗದೆ ಇರುತ್ತಿರಲಿಲ್ಲವಾದರೂ, ಅತಿಯಾದ ವಿಳಂಬದಿಂದ ಸಂಬಂಧಪಟ್ಟ ಉದ್ಯಮಗಳಿಗೆ ಅಪಾರ ಹಿಂಸೆಯಾಗುತ್ತಿತ್ತು. ಬ್ಯಾಂಕ್ ಉದರಿಯ ಬದಲು ಅನ್ಯ ಮೂಲಗಳತ್ತ ಅವು ಕೈ ಚಾಚುವ ಪ್ರಮೇಯ ಬಂದಿತ್ತು. ಇದರ ದೋಷಗಳತ್ತ ಅನೇಕರು ರಿಸರ್ವ್ ಬ್ಯಾಂಕಿನ ಗಮನ ಸೆಳೆದಿದ್ದರು. ಈ ಯೋಜನೆಯನ್ನು ರದ್ದು ಮಾಡಿ, ಬ್ಯಾಂಕುಗಳಿಗೆ ಸ್ವಾತಂತ್ರ್ಯ ನೀಡುವುದು ಮೇಲೆಂದು ಒಂದು ದಶಕದ ಹಿಂದೆ ದಾಗ್ಲಿ ಸಮಿತಿ ಸಲಹೆ ಮಾಡಿತ್ತು. ಆದರೂ ಈ ಯೋಜನೆ ರದ್ದಾಗಿರಲಿಲ್ಲ. ತುಂಬ ಅರ್ಹ ಸಂದರ್ಭಗಳಲ್ಲಿ ಈ ವಿಳಂಬ ತಪ್ಪಿಸಲು ವೇಗಪಥ (fast track) ಎಂಬ ಯೋಜನೆಯನ್ನು ತರಲಾಗಿತ್ತು. ಇದೆಲ್ಲ ಕೇವಲ ವ್ಯರ್ಥಪ್ರಯತ್ನವಾಗಿತ್ತು. ಒಟ್ಟಿನಲ್ಲಿ ಇಡೀ ಉದರಿ ಪ್ರಾಧಿಕರಣ ಯೋಜನೆಯೇ ನಗೆಪಾಟಲಿಗೆ ಈಡಾಗಿತ್ತು.

ಈಗ ಕೈಗಾರಿಕಾ ಚೇತರಿಕೆಗೆ ಬೆಂಬಲ ನೀಡಬೇಕೆಂದು ಸಂಕಲ್ಪ ಮಾಡಿರುವ ರಿಸರ್ವ್ ಬ್ಯಾಂಕು ಈ ಯೋಜನೆಯನ್ನು ರದ್ದು ಮಾಡಿದೆ. ಎಂದರೆ ಇಂಥ ಸಾಲಗಳನ್ನು ನೀಡುವ ಮುನ್ನ ರಿಸರ್ವ್ ಬ್ಯಾಂಕಿನ ಒಪ್ಪಿಗೆ ಪಡೆಯಬೇಕಾದ ಅಗತ್ಯವಿಲ್ಲ. ಆದ್ಯತಾ ವಲಯದ ಉದರಿ ಬೇಡಿಕೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವುದರಿಂದ ಇನ್ನು ಮುಂದೆ ಉದರಿಗೆ ಈ ಬಗೆಯ ಪಡಿತರ ವಿಧಿಸಬೇಕಾದ ಅಗತ್ಯವಿಲ್ಲ ಎಂದು ಅದು ತನ್ನ ಹಿಂದಿನ ನಿಲುವನ್ನು ಸಮರ್ಥಿಸಿಕೊಂಡಿದೆ. ಈಗ ಅದನ್ನು ರದ್ದು ಮಾಡಲು ಒಂದು ಕಾರಣ ಹುಡುಕಿಕೊಂಡಿದೆ. ಆದರೂ ಉದರಿಯ ಅಪವ್ಯಯವಾಗದಂತೆ ತಡೆಯುವ ಉದ್ದೇಶ ಬಿಟ್ಟುಕೊಟ್ಟಿಲ್ಲವೆಂದೂ ಹೇಳಿಕೊಂಡಿದೆ. ರೂ.ಐದು ಕೋಟಿಯನ್ನು ಮೀರಿದ ಉದರಿಗೆ ಸಂಬಂಧಿಸಿದಂತೆ, ಅದನ್ನು ನೀಡುವ ಮುನ್ನ ಅಲ್ಲದಿದ್ದರೂ ಆಮೇಲೆ, ಆ ಬಗ್ಗೆ ಪರತ ಮಾಹಿತಿಯನ್ನು ರಿಸರ್ವ್ ಬ್ಯಾಂಕಿಗೆ, ಅದರ ಅವಗಾಹನೆಗಾಗಿ, ಒಪ್ಪಿಸುವುದು ಬ್ಯಾಂಕುಗಳ ಕರ್ತವ್ಯ. ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಜೋಕೆ ಎಂಬ ಧ್ವನಿಯೂ ಇದರ ಹಿಂದೆ ಇದೆ. ಆದರೆ ಉದರಿ ನೀಡಿಕೆಗೆ ಮುನ್ನ ಕಳಿಸಿದ ಪ್ರಸ್ತಾವವನ್ನೇ ಸಕಾಲದಲ್ಲಿ ನೋಡಲಾಗದೆ, ಅದರ ಮೇಲೆ ಧೂಳು ಕೂರಲು ಅವಕಾಶ ಮಾಡಿ ಕೊಟ್ಟಿದ್ದ ರಿಸರ್ವ್ ಬ್ಯಾಂಕು ಈಗ ಚುರುಕಾಗಿ ಈ ಪರತ ಮಾಹಿತಿಯ ಕಡತವನ್ನು ಬಿಚ್ಚಿ ನೋಡಿ, ಆಗಿರಬಹುದಾದ ಅಕ್ರಮವನ್ನು ಸಕಾಲದಲ್ಲಿ ಗಮನಿಸಿ ಯುಕ್ತ

ರೀತಿಯಲ್ಲಿ ವರ್ತಿಸುವುದೆಂದು ಹೇಳಲಾಗದು. ಒಟ್ಟಿನಲ್ಲಿ ಬ್ಯಾಂಕುಗಳಿಗೆ ಹೊಣೆಗಾರಿಕೆ ನೀಡಿ, ಸರಿಕಂಡಂತೆ ಅವು ವರ್ತಿಸುವಂತೆ ನೋಡಿಕೊಳ್ಳುವುದೇ ಒಳಿತು ಎಂಬುದು ಈ ಪ್ರಕರಣದಿಂದ ರಿಸರ್ವ್ ಬ್ಯಾಂಕ್ ಕಲಿತಿರುವ ನೀತಿಪಾಠ.

ಭಾಗೀದಾರಿಕೆ ಪತ್ರ

ರಿಸರ್ವ್ ಬ್ಯಾಂಕ್ ತೆಗೆದುಕೊಂಡಿರುವ ಇನ್ನೊಂದು ಸ್ವಾಗತಾರ್ಹ ಕ್ರಮವೆಂದರೆ, ಭಾಗೀದಾರಿಕೆ ಪತ್ರ ಗಳನ್ನು (participation Certificate) ಮತ್ತೆ ಜೀವಂತಗೊಳಿಸಿರುವುದು. ಭಾರತದ ಹಣ ಪೇಟೆಯ ವಿಕಾಸಕ್ಕೆ ಉಚಿತವಾದ ಕ್ರಮಗಳನ್ನು ಸೂಚಿಸಲು 1986ರಲ್ಲಿ ನೇಮಕಗೊಂಡಿದ್ದ ವಾಘುಲ್ ಸಮಿತಿ ಈ ಬಗ್ಗೆ ಶಿಫಾರಸು ನೀಡಿತ್ತು. ಬ್ಯಾಂಕುಗಳ ದ್ರವತ್ವದ ಅತಿವ್ಯಾಪ್ತಿ ಹಾಗೂ ಅವ್ಯಾಪ್ತಿಯ ತೊಡಕುಗಳನ್ನು ನಿವಾರಿಸಿ, ಅದು ಸಮವಾಗಿ ಹರಿಯುವಂತೆ ಮಾಡಲು ಇವು ಸಹಾಯಕ. ಮುಂಗಡಗ ಳಲ್ಲಿ ಬ್ಯಾಂಕುಗಳು ಪಾಲ್ಗೊಳ್ಳಲು, ಬ್ಯಾಂಕು–ಬ್ಯಾಂಕುಗಳ ನಡುವೆ ಹಣದ ಕೊಡು – ಕೊಳು ಸಾಧ್ಯವಾಗುವಂತಾಗಲು ಇವು ನೆರವಾಗುತ್ತವೆ. ಭಾಗೀದಾರಿಕೆ ಪತ್ರಗಳ ಅವಧಿ, ಬಡ್ಡಿ ದರ ಇತ್ಯಾದಿಗಳನ್ನು ವಿಧಿಸಲಾಗಿದೆ. ಹಿಂದೆ ಈ ಸೌಲಭ್ಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದದ್ದರಿಂ ದ 1979 ರಲ್ಲಿ ರಿಸರ್ವ್ ಬ್ಯಾಂಕು ಇದನ್ನು ಬ್ಯಾಂಕಿನ ತಗಾದೆ ಹಾಗೂ ಸಾವಧಿ ಹೊಣೆಯೆಂದು ಪರಿಗಣಿಸಿ, ಇದೂ ಮೀಸಲಿನ ಕಟ್ಟುಪಾಡಿಗೆ ಒಳಪಡಬೇಕೆಂದು ವಿಧಿಸಿತ್ತು. ಈಗ ಎಲ್ಲ ಭಾಗೀದಾರಿ ಪತ್ರಗಳಿಗೂ ಈ ನಿರ್ಬಂಧವಿಲ್ಲ. ನಷ್ಟ ಸಂಭವದ ಪಾಲುದಾರಿಕೆ (risk-sharing) ಇಲ್ಲದ ಪತ್ರಗಳಿಗೆ ಮಾತ್ರ ಈ ನಿರ್ಬಂಧ ಅನ್ವಯವಾಗುತ್ತದೆ.

ಗ್ರಾಹಕರಿಗೆ ಆಯ್ಕೆ ಸ್ವಾತಂತ್ರ್ಯ

ಬ್ಯಾಂಕುಗಳಿಗೆ ತಮ್ಮ ಹೊಣೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಈಗ ಅವಕಾಶ ಇರುವಂತೆ ಗ್ರಾಹಕರಿಗೂ ವ್ಯವಹಾರದಲ್ಲಿ ಈಗ ಆಯ್ಕೆಯ ಸ್ವಾತಂತ್ರ್ಯ ದೊರಕುತ್ತದೆ. ಖಾತೆಗಳನ್ನು ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿಗೆ ವರ್ಗಾಯಿಸಿಕೊಳ್ಳುವುದು ಈಗ ಸಾಧ್ಯ. ಹೀಗೆ ಬ್ಯಾಂಕಿಂಗಿನಲ್ಲಿ ಸ್ಪರ್ಧೆಯ ಅಂಶ ಪ್ರವೇಶಮಾಡಿದೆ. ಆದರೆ ಈ ಪ್ರಕ್ರಿಯೆಯಲ್ಲಿ ದುರ್ಬಲ ಬ್ಯಾಂಕುಗಳು ನಷ್ಟ ಅನುಭವಿಸುವ ಅಪಾಯವೂ ಉಂಟು. ಇದನ್ನು ನಿವಾರಿಸಲು ಎಚ್ಚರಿಕೆ ವಹಿಸುವುದು ಅಗತ್ಯ.

ದರಗಳಲ್ಲಿ ನಮ್ಯತೆ

ದ್ರವ ಸಂಪನ್ಮೂಲಗಳು ಬ್ಯಾಂಕುಗಳ ಬಳಿ ಸಾಕಷ್ಟು ಇರುವುದರಿಂದ ಸಾಲ ನೀಡಿಕೆ ದರಗಳ ವಿಚಾರದಲ್ಲಿ ಅವು ಒಂದಿಷ್ಟು ನಮ್ಯತೆ (flexibility) ಸಾಧಿಸಲು ಅವಕಾಶವುಂಟು.

'ವ್ಯವಹಾರ ಸ್ಥಿತಿಯಲ್ಲಿ ಏರಿಳಿತಗಳಾದಂತೆ, ತಮ್ಮ ನಿಧಿಗಳ ವೆಚ್ಚಗಳಿಗೆ ಅನುಗುಣವಾಗಿ ಸಾಲದ ಬಡ್ಡಿ ದರಗಳನ್ನು ವ್ಯತ್ಯಾಸಗೊಳಿಸಲು ಬ್ಯಾಂಕುಗಳಿಗೆ ಅವಕಾಶ ಇರಬೇಕು' ಎಂಬ ಚಕ್ರವರ್ತಿ ಸಮಿತಿಯ ಶಿಫಾರಸನ್ನು ರಿಸರ್ವ್ ಬ್ಯಾಂಕ್ ಗಮನಿಸಿದೆಯೆಂಬುದಕ್ಕೆ ದ್ಯೋತಕವಾಗಿ, ಬಡ್ಡಿ ದರಗಳನ್ನು ಆಯಾ ಗ್ರಾಹಕರ ಪ್ರತ್ಯಯಗಳಿಗೆ ಅನುಗುಣವಾಗಿ ವಿಧಿಸಲು ಬ್ಯಾಂಕುಗಳಿಗೆ ಅದು ಸ್ವಾತಂತ್ರ್ಯ ನೀಡಿದೆ. ಆದರೆ ಕನಿಷ್ಠ ದರ ಶೇಕಡ 16 ಎಂದು ವಿಧಿಸಿದೆ. ಉತ್ಕೃಷ್ಟ ಸಾಲಕ್ಕೆ ಈ ದರ. ಹೀಗೆ ತಳ ದರವನ್ನು (floor rate) ಸ್ಥಿರವಾಗಿರಿಸಿರುವುದರಿಂದ ಈ ಸ್ವಾತಂತ್ರ್ಯ ಮೇಲ್ತುದಿಗೆ ಮಾತ್ರ ಅನ್ವಯಿಸುತ್ತದೆ; ಕೆಳತುದಿಗೆ – ತಳಕ್ಕೆ – ಅಲ್ಲ. ಒಂದು ವೇಳೆ ಈ ತಳವನ್ನು ರಿಸರ್ವ್ ಬ್ಯಾಂಕ್ ಸ್ಥಿರಗೊಳಿಸದಿದ್ದರೂ ಬ್ಯಾಂಕುಗಳೆಲ್ಲ ಸೇರಿ ಮಾತಾಡಿಕೊಂಡು ಒಂದು ನಿಶ್ಚಿತ ತಳ ನಿರ್ಧರಿಸಿಕೊಳ್ಳುತ್ತಿದ್ದುವು. ಸಂಪೂರ್ಣ ಅನಿರ್ಬಂಧ ಪರಿಸ್ಥಿತಿಗೆ ಅವು ಇನ್ನೂ ಸಿದ್ಧವಾಗಿಲ್ಲವೆನಿಸುತ್ತದೆ.

ಗೃಹನಿರ್ಮಾಣ ಧನ

ಗೃಹನಿರ್ಮಾಣ ಕಾರ್ಯಕ್ಕಾಗಿ ಬ್ಯಾಂಕ್ ಹಣಕಾಸು ಹೆಚ್ಚಾಗಿ ಒದಗಿ ಬರುವಂತೆ ಮಾಡಲೂ ರಿಸರ್ವ್ ಬ್ಯಾಂಕ್ ಕ್ರಮ ಕೈಗೊಂಡಿದೆ. ಇದಕ್ಕಾಗಿ ನೀಡಿದ ಸಾಲದ ಮರುಪಾವತಿಯ ಅವಧಿಯನ್ನು 10 ವರ್ಷಗಳಿಂದ 15 ವರ್ಷಗಳಿಗೆ ವಿಸ್ತರಿಸಲಾಗಿದೆ. ಇಂಥ ಹಣಕಾಸು ಪೂರೈಕೆಯಲ್ಲಿ ಸಾಲಗಾರನ ಸ್ವಭಾಗದ (margin) ಮಿತಿಯನ್ನು ಕುಗ್ಗಿಸಲಾಗಿದೆ. ಬಡ್ಡಿ ದರಗಳನ್ನೂ ಪುನರ್ವಿಮರ್ಶಿಸಲಾಗಿದೆ. ಈ ಬದಲಾವಣೆಗಳಿಂದ ಗೃಹನಿರ್ಮಾಣಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕುವಂತಾಗಿದೆ. ಈ ಉದ್ದೇಶಕ್ಕಾಗಿ ಕೆಲವು ಬ್ಯಾಂಕುಗಳು ಹಿಂದೆಯೇ ಸಹಾಯಕ ಸಂಸ್ಥೆಗಳನ್ನು ಆರಂಭಿಸಿದ್ದರೂ ಈ ಕ್ಷೇತ್ರದಲ್ಲಿ ಚಟುವಟಿಕೆ ಇದುವರೆಗೂ ಚುರುಕಾಗಿರಲಿಲ್ಲ. ಈ ಬಗ್ಗೆ ಅನುಸರಿಸಬೇಕಾಗಿದ್ದ ವಿಧಿವಿಧಾನಗಳು ತುಂಬ ಗಡುಸಾಗಿದ್ದುದು ಒಂದು ಕಾರಣ. ಅಲ್ಲದೆ ಹಣಕಾಸು ಸುಲಭವಾಗಿ ಲಭ್ಯವಿರಲಿಲ್ಲ. ಇನ್ನು ಮುಂದೆ ಈ ತೊಡಕುಗಳ ನಿವಾರಣೆಯಾದೀತು.

ಒಟ್ಟಿನಲ್ಲಿ ರಿಸರ್ವ್ ಬ್ಯಾಂಕ್ ಮೊತ್ತಮೊದಲ ಬಾರಿಗೆ ಹಲವು ಪ್ರಯೋಗಗಳನ್ನು ಮಾಡುತ್ತಿದೆ. ಉದರಿ ನೀತಿಯ ಸಂರಚನೆಯಲ್ಲೇ ಕೆಲವು ಬದಲಾವಣೆಗಳನ್ನು ತರುತ್ತಿದೆ. ಆದರೆ ಸರ್ಕಾರ ಮಾಡುತ್ತಿರುವ ಅಗಾಧ ಅನುತ್ಪಾದಕ ಹಾಗೂ ಯೋಜನೇತರ ವೆಚ್ಚಗಳು ರಿಸರ್ವ್ ಬ್ಯಾಂಕಿನ ಈ ಪ್ರಯತ್ನಗಳನ್ನೆಲ್ಲ ತಲೆಕೆಳಗು ಮಾಡುವ ಸಾಧ್ಯತೆಯೂ ಇಲ್ಲದಿಲ್ಲ. ಸರ್ಕಾರದ ಈ ನೀತಿಯಿಂದಾಗಿ ಹಣದ ಹುಚ್ಚು ಹೊಳೆ ಹರಿದು ಬೆಲೆಗಳ ಅತೀವ ಅಸ್ಥಿರತೆಗೆ ಹಾದಿಮಾಡಿಕೊಡುವ ಅಪಾಯವಿದ್ದೇ ಇದೆ. ರಿಸರ್ವ್ ಬ್ಯಾಂಕ್ ಈ ವಿಚಾರದಲ್ಲಿ ನಿಸ್ಸಹಾಯಕ. ಹಾಗಾಗದಿರಲೆಂದು ಆಶಿಸಬೇಕಾಗಿದೆ.

18.

ಮಾರ್ಚ್ 1989
ಭಾರತೀಯ ಬ್ಯಾಂಕಿಂಗ್ 2001

ಭವಿಷ್ಯ ನುಡಿಯುವುದು ಮಹಾ ಅಪಾಯಕಾರಿ ಹವ್ಯಾಸ. ಹೇಳಿದಂತೆಯೇ ಆದೀತೆಂಬ ಭರವಸೆಯಿಲ್ಲ. ಹೇಳಿದ ದಿಕ್ಕಿನಲ್ಲಿ ಘಟನೆಗಳು ಸಂಭವಿಸುವ ಪ್ರವೃತ್ತಿ ತೋರಿದರೂ ಸಾಕು, ಮಿಥ್ಯೆಯ ಆರೋಪಕ್ಕೆ ಗುರಿಯಾಗದಿರಬಹುದು. ಕರಾರುವಾಕ್ಕಾಗಿ ಭವಿಷ್ಯ ನುಡಿಯುವುದಂತೂ ಯಾರಿಗೂ ಸಾಧ್ಯವಾಗದು. ಆದರೆ ಇದುವರೆಗೆ ನಡೆದುಬಂದ ಹಾದಿ ಎಂಥದು, ಯಾವಯಾವ ಬಗೆಯ ಪ್ರಕ್ರಿಯೆಗಳುಂಟಾಗುತ್ತಿವೆ, ಇವೆಲ್ಲವನ್ನೂ ಅನುಲಕ್ಷಿಸಿದಾಗ ಮುಂದಿನ ಬೆಳವಣಿಗೆ ಯಾವ ರೀತಿಯಲ್ಲಾಗಬಹುದು, ಆ ಹಾದಿಯಲ್ಲಿ ಎದುರು ನಿಲ್ಲುವ ಸವಾಲುಗಳು ಎಂಥವು, ಅವನ್ನು ಎದುರಿಸುವ ಬಗೆ ಹೇಗೆ, ಸದಾ ಪ್ರವರ್ತನಶೀಲವಾಗಿರುವ ನಾನಾ ಕ್ರಿಯೆ – ಪ್ರತಿಕ್ರಿಯೆಗಳ ಫಲವಾಗಿ ಮುಂದೆ ಪರಿಸ್ಥಿತಿಯಲ್ಲಿ ಎಂಥ ಬದಲಾವಣೆಯನ್ನು ನಿರೀಕ್ಷಿಸಬಹುದು – ಎಂಬುದನ್ನಂತೂ ಹೇಳಲು ಯತ್ನಿಸಬಹುದು. ಇದು ಗ್ರಹಗಳನ್ನು ಗುಣಿಸಿ ಹೇಳುವ ಹವ್ಯಾಸವಲ್ಲ. ವ್ಯಾಪಕ ಹಾಗೂ ಸೂಕ್ಷ್ಮ ಅವಲೋಕನ ಅಧ್ಯಯನ ಚಿಂತನಗಳ ಆಧಾರದ ಮೇಲೆ ಭವಿಷ್ಯದ ಒಂದು ಸ್ಥೂಲಚಿತ್ರಣ. ಈ ಬಗೆಯ ಪ್ರಯತ್ನದ ಫಲವಾಗಿ ಭವಿಷ್ಯ ವಿಜ್ಞಾನ (futurology) ಎಂಬ ಒಂದು ಶಾಸ್ತ್ರವೇ ಇಂದು ರೂಪುದಳೆದಿದೆ.

ನಿರೀಕ್ಷೆ, ಸವಾಲು

ಭಾರತದಲ್ಲಿ ಬ್ಯಾಂಕಿಂಗು ಇದುವರೆಗೆ ಬೆಳೆದು ಬಂದಿರುವ ರೀತಿಯನ್ನೂ, ಇಂದು ನಡೆಯುತ್ತಿರುವ ನಾನಾ ಪ್ರಯೋಗಗಳನ್ನೂ, ಅದು ತಳೆಯುತ್ತಿರುವ ಅವಸ್ಥೆಯನ್ನೂ ಗಮನಿಸಿ, ಇನ್ನು ಹತ್ತು ಹನ್ನೆರಡು ವರ್ಷಗಳಲ್ಲಿ – ಎಂದರೆ ಇಪ್ಪತ್ತೊಂದನೆಯ ಶತಮಾನದ ಆರಂಭದ ವೇಳೆಗೆ – ಅದು ಹೇಗಿರುತ್ತದೆ? ಹೇಗೆ ವರ್ತಿಸುತ್ತದೆ? ಕಾ ಭಾಷಾ? ಕಿಂ ಪ್ರಭಾಷೇತ? ಕಿಮಾಸೀತ? ವ್ರಜೇತ ಕಿಮ್? ಎಂಬುದನ್ನು ಹೇಳಬಹುದೆ?

ಇನ್ನು ಹತ್ತು–ಹನ್ನೆರಡು ವರ್ಷಗಳಲ್ಲಿ ಬ್ಯಾಂಕಿಂಗ್ ಹೇಗಿರುತ್ತದೆ. ಅದರ ಮುಂದೆ ಇಡಲಾದ ನಿರೀಕ್ಷೆ ಎಂಥದು, ಸವಾಲುಗಳು ಯಾವುವು, ಪರಿಹಾರಗಳು ಹೇಗೆ, ಈ ಸವಾಲುಗಳನ್ನೇ ಸದವಕಾಶಗಳಾಗಿ ಪರಿವರ್ತಿಸಿಕೊಳ್ಳುವ ಬಗೆಯೆಂತು ಎಂಬುದನ್ನು ಕುರಿತು ಚಿಂತಿಸುವ ಮೊದಲು ಕಳೆದ ಎರಡು ದಶಕಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಾಗಿರುವ ಮಾರ್ಪಾಟುಗಳನ್ನು ನೋಡಬೇಕು. ಎರಡು ದಶಕಗಳ ಹಿಂದೆ ದೇಶದ

ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದಾಗ ಮುಂದಿನ ಹತ್ತು ವರ್ಷಗಳಲ್ಲಿ ಏನೇನಾಗಬಹುದೆಂಬುದರ ಕಲ್ಪನೆ ಯಾರಿಗೂ ಅಷ್ಟಾಗಿ ಇರಲಿಲ್ಲ. ಅಲ್ಲಿಂದ ಮುಂದಿನ ಹತ್ತು ವರ್ಷಗಳಲ್ಲಿ ಆಗುವ ಬದಲಾವಣೆಗಳನ್ನು ಮೊದಲ ಹತ್ತು ವರ್ಷಗಳಲ್ಲಿ ಊಹಿಸಿರಲಿಲ್ಲ. ಇಡೀ ಬ್ಯಾಂಕಿಂಗ್ ವ್ಯವಸ್ಥೆಯಲ್ಲೇ ಸಾಗರ ಸದೃಶ ಪರಿವರ್ತನೆ ಆಗಿದೆಯೆಂಬುದಂತೂ ನಿಜ. ಈ ಎರಡು ದಶಕಗಳ ಅನುಭವದ ಮೇಲೆ ಹೇಳುವುದಾದರೆ, ಮುಂದಿನ ಹತ್ತು ವರ್ಷಗಳ ಬದಲಾವಣೆಯ ಸ್ವರೂಪ ಕಳೆದ ಎರಡು ದಶಕಗಳಕ್ಕಿಂತ ತೀರ ಭಿನ್ನವಾಗಿರುತ್ತದೆಯೆನ್ನಬಹುದು. ಈ ಮೂರೂ ದಶವಾರ್ಷಿಕ ಅವಧಿಗಳಿಗೆ ಸಮಾನವಾದ ಒಂದು ಲಕ್ಷಣವೆಂದರೆ ಬದಲಾವಣೆಯೇ.

ಎರಡು ದಶಕ

ಕಳೆದ ಎರಡು ದಶಕಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯನ್ನು ಇಲ್ಲಿ ಗುರುತಿಸಬಹುದು. ಬ್ಯಾಂಕ್ ಶಾಖೆಗಳ ಸಂಖ್ಯೆ ಸುಮಾರು ಎಂಟೂ ಕಾಲು ಸಾವಿರ ಇದ್ದದ್ದು ಈಗ ಐವತ್ತಾರು ಸಾವಿರವಾಗಿದೆ. ಅಂತೆಯೇ ಒಟ್ಟು ಠೇವಣಿಗಳೂ ಮುಂಗಡಗಳೂ ಬೆಳೆದಿವೆ. ಬ್ಯಾಂಕುಗಳ ಕಾರ್ಯನಿರತ ನಿಧಿಗಳು ಇಪ್ಪತ್ತರಷ್ಟು, ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಅವುಗಳ ನಗದು ಶಿಲ್ಕು ಮೂವತ್ತರಷ್ಟು, ಪ್ರತಿಭೂತಿಗಳ ಪೋರ್ಟ್‌ಫೋಲಿಯೋ ಮುವತ್ತೈದರಷ್ಟು, ಮುಂಗಡಗಳ ಪೋರ್ಟ್ಫೋಲಿಯೋ ಹದಿನೆಂಟು ಪಟ್ಟು ಆಗಿವೆ. ಉದರಿ ಠೇವಣಿ ಅನುಪಾತ 70 – 90ರ ನಡುವೆ ಇದ್ದದ್ದು ಈಗ 50 – 60 ರಲ್ಲಿದೆ. ನಿಧಿಗಳ ಪ್ರವಿಸ್ತರಣದ (deployment) ಪ್ರಾಮುಖ್ಯವೂ ಹೆಚ್ಚಿದೆ. ಮುಂಗಡಗಳೊಂದಿಗೆ ವಿನಿಯೋಜನೆ (investment) ಸ್ಪರ್ಧಿಸುತ್ತಿದೆ. ಠೇವಣಿಗಳು, ಮುಂಗಡಗಳು, ವಿನಿಯೋಜನೆಗಳು, ಎತ್ತಿದ ಸಾಲಗಳು ಮುಂತಾದವುಗಳ ಮಿಶ್ರಣಗಳಲ್ಲೂ (mixes) ಬಹಳಷ್ಟು ಬದಲಾವಣೆಗಳಾಗಿವೆ. ಬ್ಯಾಂಕಿಂಗ್ ಉದ್ಯಮದ ದುಡಿಯುವ ನಿಧಿಗಳ ಗಾತ್ರ, ಸ್ವರೂಪ, ಮೂಲ, ಬಳಕೆ ಮುಂತಾದ ಎಲ್ಲ ವಿಚಾರಗಳಲ್ಲೂ ಅಗಾಧವಾದ ಬದಲಾವಣೆಗಳು ಸಂಭವಿಸಿವೆ. ಇಷ್ಟೆಲ್ಲ ಪರಿಮಾಣಾತ್ಮಕ ಪರಿವರ್ತನೆಗಳಾಗಿದ್ದರೂ ಬ್ಯಾಂಕಿಂಗ್ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಿಲ್ಲ. ಹೊಸ ಬ್ಯಾಂಕುಗಳ ಸ್ಥಾಪನೆಯಾಗಿಲ್ಲ. ಹಳೆಯವೇ ವಿಸ್ತರಿಸಿವೆ, ಶಾಖೆಗಳನ್ನು ಹೆಚ್ಚಿಸಿಕೊಂಡಿವೆ. ಆದರೆ ಗಾತ್ರದೊಂದಿಗೆ ಗುಣದಲ್ಲಿ ಸುಧಾರಣೆಯಾಗಿದೆಯೆ? ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ದೊರಕಲಾರದೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಊಹಾಂದಾಜು

ಈ ಶತಮಾನದ ಕೊನೆಯ ವೇಳೆಗೆ ಆಗಬಹುದಾದ ಬೆಳವಣಿಗೆಯ ಬಗ್ಗೆ ಈಗಾಗಲೇ ಊಹಾಂದಾಜುಗಳನ್ನು

(guesstimates) ಮಾಡಲಾಗುತ್ತಿದೆ. ಬ್ಯಾಂಕ್ ಶಾಖೆಗಳ ಸಂಖ್ಯೆ ಒಂದು ಲಕ್ಷವಾದರೂ ಆಗಬಹುದು. ದೇಶದ ಜನಸಂಖ್ಯೆಯೂ ಈ ಅವಧಿಯಲ್ಲಿ ಅಗಾಧವಾಗಿ ಬೆಳೆದರೂ ಸರಾಸರಿಯಲ್ಲಿ ಪ್ರತಿ 10.000 ಜನಕ್ಕೆ ಒಂದು ಬ್ಯಾಂಕ್ ಶಾಖೆ ಇರುತ್ತದೆ. ಬ್ಯಾಂಕ್ ಠೇವಣಿಗಳು ರೂ. 2,60,000 ಕೋಟಿಗೂ, ಮುಂಗಡಗಳು ರೂ.1,66,000 ಕೋಟಿಗೂ ಏರಬಹುದೆಂದು ಪ್ರಕ್ಷೇಪಿಸಲಾಗಿದೆ. ಈಗ ಅವು ಏರುತ್ತಿರುವ ಗತಿಯನ್ನು ನೋಡಿದರೆ ಈ ಅಂಕಿಗಳನ್ನು ದಾಟಿ ಮುನ್ನಡೆಯುವುವೆಂದೇ ತೋರುತ್ತದೆ. ಆದ್ಯತಾವಲಯಗಳಿಗೆ ನೀಡಿದ ಸಾಲ 1969ರಲ್ಲಿ ರೂ.505 ಕೋಟಿಯಾಗಿದ್ದುದು 1984ರ ವೇಳೆಗೆ ರೂ. 21420 ಕೋಟಿಗೆ ಏರಿತು. ಈ ಶತಮಾನದ ಅಂತ್ಯದ ವೇಳೆಗೆ ಇದು ರೂ.83,000 ಕೋಟಿಗೆ ನೆಗೆಯುವುದೆಂದೂ, ಇದು ಒಟ್ಟು ಮುಂಗಡಗಳ ಅರ್ಧದಷ್ಟು ಆಗಿದ್ದೀತೆಂದೂ ನಿರೀಕ್ಷಿಸಲಾಗಿದೆ. ಇದು ಅಸಂಭವವೇನೂ ಅಲ್ಲ.

ಬ್ಯಾಂಕಿಂಗ್ ವಲಯದಲ್ಲಿ ಆಗುತ್ತಿರುವ, ಆಗಲಿರುವ ಈ ಅಗಾಧ ವಿಸ್ತರಣೆಯೇ ಹಲವಾರು ಸವಾಲುಗಳನ್ನೂ ಸಮಸ್ಯೆಗಳನ್ನೂ ಸೃಷ್ಟಿಸುತ್ತದೆಂಬುದು ನಿರ್ವಿವಾದ. ವ್ಯವಸ್ಥೆಯಲ್ಲೇ, ಸಂರಚನೆಯಲ್ಲೇ ಮಹಾಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಬ್ಯಾಂಕಿಂಗ್ ಕಲಾಪಗಳ ಸ್ವರೂಪಗಳನ್ನೂ ಬಹಳಷ್ಟು ಬದಲಿಸುವುದು ಅನಿವಾರ್ಯ. ಗ್ರಾಹಕ ಸೇವಾ ಮಟ್ಟ, ಹೊಸ ಮಾಹಿತಿ ತಂತ್ರಜ್ಞಾನ, ಕಲಾಪಗಳ ವಿಶೇಷೀಕರಣ, ಕೃಷಿ ಚಟುವಟಿಕೆ, ಸಾಂಸ್ಥಿಕ ವಲಯ, ಸಣ್ಣ ಉದ್ಯಮ – ಹೀಗೆ ಎಲ್ಲ ನಿಟ್ಟುಗಳಲ್ಲಿ ಕ್ರಾಂತಿಯನ್ನೇ ತರಬೇಕಾಗುತ್ತದೆ.

ಸದ್ಯದ ಪರಿಸ್ಥಿತಿ

ದಶಕದಾಚೆಗಿನ ದೃಶ್ಯದತ್ತ ನೋಟ ಹರಿಸುವ ಮುನ್ನ ಸದ್ಯದ ಪರಿಸ್ಥಿತಿಯನ್ನಷ್ಟು ವಿವರವಾಗಿ ಪರಿಶೀಲಿಸೋಣ. ರಾಷ್ಟ್ರೀಕರಣದ ಅನಂತರ ಆಗಿರುವ ಮಹತ್ವದ ಬದಲಾವಣೆಯೆಂದರೆ ಬ್ಯಾಂಕುಗಳ ಕಾರ್ಯಭಾರದ ವಿಸ್ತರಣೆ. ಅವು ಇಂದು ಇಬ್ಬಗೆಯ ಕಾರ್ಯಭಾರ ನಿರ್ವಹಿಸುತ್ತಿವೆ. ಪರಂಪರೆಯಾಗಿ ಬಂದ, ಠೇವಣಿ ಸ್ವೀಕರಣೆ ಮತ್ತು ಮುಂಗಡ ನೀಡಿಕೆಯ ಕಾರ್ಯಭಾರವಂತೂ ಮುಂದುವರಿದೇ ಇದೆ. ಕೇಳಿದಾಗ ಹಿಂದಿರುಗಿಸಬೇಕೆಂಬ ಷರತ್ತಿನ ಮೇಲೆ ಬ್ಯಾಂಕು ಸ್ವೀಕರಿಸಿದ ಠೇವಣಿಗಳನ್ನು ಕೇವಲ ಸುರಕ್ಷಿತವಾಗಿ ಇಡುವುದಲ್ಲದೆ ಅಗತ್ಯ ಇರುವವರಿಗೆ ಆ ಮೊಬಲಗನ್ನು ಸಾಲವಾಗಿ ನೀಡಿ ಬಡ್ಡಿ ಸಂಪಾದನೆ ಮಾಡುವುದೇ ಪ್ರಧಾನವಾಗಿದ್ದ ಕಾಲದಲ್ಲಿ ಬ್ಯಾಂಕು ಈ ದೃಷ್ಟಿಯಿಂದಲೇ ತನ್ನ ಆಸ್ತಿಗಳನ್ನು – ನಿಧಿಗಳನ್ನು – ಪ್ರವಿಸ್ತರಣಗೊಳಿಸಬೇಕಾಗಿತ್ತು. ದ್ರವತ್ವ,

ಭದ್ರತೆ, ಲಾಭಪ್ರದತೆ ಈ ಮೂರರ ನಡುವೆ ಯಾವ ರೀತಿಯ ಸಮತೋಲ ಸಾಧಿಸಬೇಕೆಂಬುದೇ ಬ್ಯಾಂಕರನ ಮಹಾ ಕಲೆಯಾಗಿತ್ತು. ಪರಸ್ಪರ ವಿರುದ್ಧವೆನಿಸಬಹುದಾದ ಈ ಉದ್ದೇಶಗಳನ್ನು ಸಮನ್ವಯಗೊಳಿಸುವುದು ಚಲನಶೀಲ ವ್ಯವಸ್ಥೆಯಲ್ಲಿ ಬ್ಯಾಂಕರನ ಸಾಮರ್ಥ್ಯಕ್ಕೊಂದು ಸವಾಲಾಗಿತ್ತು. ರಾಷ್ಟ್ರೀಕರಣದ ಅನಂತರ ಇದು ಸ್ವಲ್ಪ ಮಸಕಾಗಿದೆ ಯೇನೋ ಎನಿಸುತ್ತದೆ. ವಾಣಿಜ್ಯ ಬ್ಯಾಂಕಿಂಗಿನ ಈ ಪ್ರಮುಖ ಕಾರ್ಯಭಾರದ ಜೊತೆಗೆ ಇನ್ನೊಂದು ಕಾರ್ಯಭಾರವನ್ನು – ಮಹಾ ಹೊಣೆಯನ್ನು – ಅದಕ್ಕೆ ಲಗತ್ತಿಸಲಾಗಿದೆ. ಅದು ಅಭಿವೃದ್ಧಿ ಸಾಧನೆ. ಇಂದು ನಮ್ಮ ಬ್ಯಾಂಕುಗಳು ವಾಣಿಜ್ಯ ಕಲಾಪಗಳನ್ನಷ್ಟೇ ಮಾಡುತ್ತಿಲ್ಲ, ಅಭಿವೃದ್ಧಿ ಬ್ಯಾಂಕಿಂಗ್ ಎಂಬ ಕಾರ್ಯಭಾರವೂ ಅವಕ್ಕೆ ಕೂಡಿಕೊಂಡಿದೆ. ಇದು ಪರಂಪರಾಗತ ಬ್ಯಾಂಕಿಂಗಿಗಿಂತ ತೀರ ಭಿನ್ನವಾದ್ದು. ಬ್ಯಾಂಕಿಗೆ ಲಾಭ ತಂದುಕೊಡುವುದರ, ತಾವೂ ಲಾಭ ಸಂಪಾದಿಸುವುದರ, ಉತ್ಪಾದಕವೆನಿಸುವ ಕಲಾಪಗಳಲ್ಲಿ ನಿರತರಾದ ಗ್ರಾಹಕರ ಅಗತ್ಯಗಳನ್ನು ಪೂರೈಸುವುದರ ಜೊತೆಗೆ, ಉತ್ಪಾದಕವೆನಿಸದ, ಸದ್ಯಕ್ಕೆ ಜಡವಾದ, ಆದರೆ ಅಗಾಧ ಭವಸಾಮರ್ಥ್ಯವುಳ್ಳ, ಅನಾರ್ಥಿಕವೂ ಅಸಹಾಯಕವೂ ನಿರಾಶಾಪೂರಿತವೂ ಆದ ವಲಯವೊಂದಕ್ಕೆ ಚೈತನ್ಯ ಮೂಡಿಸುವ – ಒಂದು ಬಗೆಯಲ್ಲಿ ಅಹಲ್ಯೋದ್ಧಾರ ಸದೃಶವಾದ – ಕಾರ್ಯಭಾರವನ್ನು ಅದು ನಿರ್ವಹಿಸಬೇಕಾಗಿದೆ. ಅಶಕ್ತರಿಗೆ ಆರ್ಥಿಕ ಶಕ್ತಿದಾನ, ಅವರಿಗೆ ಉತ್ಪಾದಕತೆಯ ಸಾಮರ್ಥ್ಯದ ನೀಡಿಕೆ, ಜೀವನಮಟ್ಟದ ಸುಧಾರಣೆ, ಅದರ ಜೊತೆ ಜೊತೆಗೇ – ಬಹುಶಃ ಅದಕ್ಕೂ ಮಿಗಿಲಾಗಿ – ಜೀವನದ ಗುಣದಲ್ಲೇ ಸುಧಾರಣೆ – ಇದೂ ಬ್ಯಾಂಕಿನ ಹೊಣೆ. ಗ್ರಾಮೀಣ ಆರ್ಥಿಕ ಅಭಿವೃದ್ಧಿ, ಕೊಳಚೆ ಪ್ರದೇಶದ ಸುಧಾರಣೆ ಮುಂತಾದ ಹಲವಾರು ಕಾರ್ಯಭಾರಗಳನ್ನು ಅದು ಹಮ್ಮಿಕೊಳ್ಳಬೇಕಾಗಿದೆ. ಜೊತೆಗೆ ವೈಜ್ಞಾನಿಕ ತಂತ್ರವಿದ್ಯಾತ್ಮಕ ವಿಕಾಸಕ್ಕೂ ಅದು ಪ್ರೋತ್ಸಾಹ ನೀಡಬೇಕಾಗಿದೆ. ಆರ್ಥಿಕ ಸ್ವಾವಲಂಬನೆಗೆ ಇದು ಅತ್ಯಾವಶ್ಯಕ. ಒಟ್ಟಿನಲ್ಲಿ ಬ್ಯಾಂಕುಗಳು ಪರಿವರ್ತನೆಯ ಹರಿಕಾರರರಂತಾಗಬೇಕಾಗಿದೆ, ಬದಲಾವಣೆಯ ಸಾಧನಗಳಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಬೆಳವಣಿಗೆಯ ಹಾಗೂ ಅಭಿವೃದ್ಧಿಯ ವೇಗವರ್ಧಕಗಳ ಪಾತ್ರವನ್ನೂ ವಹಿಸಬೇಕಾಗಿದೆ. ಅವು ಅಭಿವೃದ್ಧಿ ಆಡಳಿತಗಾರರ ಕೆಲಸ ಮಾಡುತ್ತಿವೆ. ಆರ್ಥಿಕ ಪರಿವರ್ತನೆಯ ಸಾಧನಗಳಾಗಿರುವ ಬ್ಯಾಂಕುಗಳಿಗೆ ಲಾಭವೇ ಮುಖ್ಯವಲ್ಲ ಎಂಬುದು ನಿಜ. ಆದರೆ ಲಾಭದೃಷ್ಟಿ ಮರೆಯಾಗತಕ್ಕದ್ದಲ್ಲ. ವ್ಯವಹಾರದಲ್ಲಿ ಉಳಿದು ಬೆಳೆಯಲು ಅಗತ್ಯವಾದಷ್ಟು ಲಾಭವನ್ನಂತೂ ಅವು ಗಳಿಸಲೇಬೇಕು ಎಂಬುದು ನಿರ್ವಿವಾದ. ಸಹಜವಾಗಿಯೇ ಈ ಪಾತ್ರನಿರ್ವಹಣೆಯಲ್ಲಿ ಅವು ಹಲವಾರು

ಸವಾಲುಗಳನ್ನೆದುರಿಸಬೇಕಾಗಿದೆ. ವ್ಯವಸ್ಥಾಪನಾತ್ಮಕ ಹಾಗೂ ಸಂರಚನಾತ್ಮಕ ಸವಾಲುಗಳು ಒಂದು ಬಗೆಯಾದರೆ, ನಿರ್ವಹಣೆಯ, ಪರಿಚಾಲನೆಯ ವೆಚ್ಚಗಳನ್ನು ತಗ್ಗಿಸುವುದು ಇನ್ನೊಂದು ಬಗೆಯ ಸವಾಲು. ಉತ್ಪಾದಕತೆ ಹಾಗೂ ಲಾಭಪ್ರದತೆಯನ್ನು ಹೆಚ್ಚಿಸುವತ್ತಲೂ ಬ್ಯಾಂಕುಗಳು ಗಮನ ಹರಿಸಬೇಕಾಗಿದೆ. ತಾಂತ್ರಿಕ ಹಾಗೂ ಇತರ ಬಗೆಯ ಪ್ರವೀಣರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬ್ಯಾಂಕುಗಳು ನೇಮಿಸಿಕೊಳ್ಳಬೇಕಾಗಿ ಬರಬಹುದು. ಇದು ತನ್ನದೇ ಆದ ಸವಾಲುಗಳನ್ನೊಡ್ಡುತ್ತದೆ.

ಹೊಸ ಬಗೆಯ ಗ್ರಾಹಕರು

ಕಳೆದ ಇಪ್ಪತ್ತು ವರ್ಷಗಳಲ್ಲಿ ಬ್ಯಾಂಕುಗಳು ನಡೆದು ಬಂದ ಹಾದಿಯನ್ನು ಗಮನಿಸಿದಾಗ, ಅನೇಕ ಹೊಸ ಬಗೆಯ ಗ್ರಾಹಕರು ಹುಟ್ಟಿಕೊಂಡಿರುವುದನ್ನು ಕಾಣಬಹುದು. ಆದ್ಯತಾ ವಲಯದ ಗ್ರಾಹಕರದು ಒಂದು ಬಗೆ, ಹೆಚ್ಚಿನ ಪ್ರಾಮುಖ್ಯಗಳಿಸುತ್ತಿರುವ ಗ್ರಾಹಕವರ್ಗವೆಂದರೆ ಸರ್ಕಾರಿ ವಲಯದ ಉದ್ಯಮಗಳದು. ಸರ್ಕಾರಿ ವಲಯದ ಉದ್ಯಮಗಳನ್ನು ಕಡೆಗಣಿಸುವಂತಿಲ್ಲ. ಆದರೆ ಖಾಸಗಿ ವಲಯದ ಉದ್ಯಮಗಳಿಗೂ ಇವಕ್ಕೂ ಬಹಳ ವ್ಯತ್ಯಾಸವಿರುವುದನ್ನು ಬ್ಯಾಂಕುಗಳು ಗಮನಿಸಬೇಕು. ಎರಡೂ ಒಂದೇ ಎಂದು ಬ್ಯಾಂಕುಗಳು ಬಗೆಯುವಂತಿಲ್ಲ. ತಂತ್ರವ್ಯೂಹ, ನಿಯಂತ್ರಣಕ್ರಮ, ಮಾನಗಳು (norms) ಎಲ್ಲ ದೃಷ್ಟಿಯಿಂದಲೂ ಅವು ಭಿನ್ನ. ಈ ಶತಮಾನದ ಅಂತ್ಯದ ವೇಳೆಗೆ – ಸರ್ಕಾರಿ ಕಂಪನಿಗಳ ಖಾಸಗೀಕರಣದ ಮಾತು ಬಹಳಷ್ಟು ಕೇಳಿಬರುತ್ತಿದ್ದರೂ ಸರ್ಕಾರಿ ವಲಯ ಬಹಳಷ್ಟು ಬೆಳೆದೆ ಇರುತ್ತದೆ ಎಂಬುದನ್ನು ಮರೆಯಬಾರದು. ರಾಜ್ಯ ಹಾಗೂ ಕೇಂದ್ರ ಸರ್ಕಾರಿ ಅಭಿಕರಣಗಳೊಂದಿಗೆ – ಬ್ಲಾಕ್, ಜಿಲ್ಲಾ, ರಾಜ್ಯ ಹಾಗೂ ಕೇಂದ್ರ ಮಟ್ಟಗಳಲ್ಲಿ – ವ್ಯವಹರಿಸಲು ಬ್ಯಾಂಕುಗಳು ವಿಶಿಷ್ಟವಾದ ವಿಧಿ, ವಿಧಾನ, ವ್ಯವಸ್ಥೆ, ಕೌಶಲಗಳನ್ನೇ ಬೆಳಸಿಕೊಳ್ಳಬೇಕಾಗತ್ತದೆ. ಇದೂ ಒಂದು ಭಾರಿ ಸವಾಲು. ಈ ಶತಮಾನದ ಅಂತ್ಯದ ವೇಳೆಗೆ ಇನ್ನೂ ಹಲವಾರು ವಲಯಗಳು ಉದ್ಭವವಾಗಿರುತ್ತವೆ. ಹತ್ತು ವರ್ಷ ಹಿಂದೆ ನಾವು ಊಹಿಸಿಕೂಡ ಇರದಿದ್ದ ಹಲವು ವಲಯಗಳೂ ಕಲಾಪಗಳೂ ಇಂದು ಮೈತೆಳೆದಿವೆ. ಇನ್ನು ಹತ್ತು ವರ್ಷಕ್ಕೆ ಬೇರೆ ಯಾವುವು ಹುಟ್ಟಿಕೊಳ್ಳುತ್ತವೆ ಎಂಬುದನ್ನು ಇಂದು ಯಾರೂ ಊಹಿಸಲಾರರು. ಈ ಅನೂಹ್ಯ ಪ್ರಪಂಚದಲ್ಲಿ ದೃಢವಾಗಿ ಹೆಜ್ಜೆಯಿಟ್ಟು ಮುನ್ನಡೆಯಲು ಬ್ಯಾಂಕುಗಳು ಈಗಿಂದೀಗಲೇ ತಯಾರಾಗಬೇಕು. ಕಪ್ಪನೆಯ ಕತ್ತಲಲ್ಲಿ ಕಣ್ಣಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು, ಎದುರಾಗಬಹುದಾದ ಕಪ್ಪನೆಯ ವಿಚಿತ್ರ ಪ್ರಾಣಿಯನ್ನು ಎದುರಿಸಬೇಕಾಗುವಂಥ ಪರಿಸ್ಥಿತಿಯಿದು.

ಈ ಅಗತ್ಯದ ಪೂರೈಕೆಗಾಗಿ, ಬ್ಯಾಂಕಿನ ಬಗ್ಗೆ ಜನಸಮುದಾಯ ಹಾಗೂ ಆಡಳಿತವರ್ಗ ತಳೆದಿರುವ ನಿರೀಕ್ಷೆಗಳನ್ನು ಸಾರ್ಥಕಗೊಳಿಸಲು, ಉದ್ಯಮ ಹಾಗೂ ಸಾಂಸ್ಥಿಕ ಮಟ್ಟದಲ್ಲಿ ಹಲವಾರು ಸಂರಚನಾತ್ಮಕ ಹಾಗೂ ವ್ಯವಸ್ಥಾಪನಾತ್ಮಕ ನವೋನ್ಮೇಷಗಳು ಅಗತ್ಯವಾಗುತ್ತವೆ. ವ್ಯವಸ್ಥಾಪನ ವ್ಯವಸ್ಥೆಯಲ್ಲಿ ಹಲವಾರು ಘಟಕಗಳ ನಿರ್ಮಾಣ ಅಗತ್ಯವಾಗುತ್ತದೆ. ಅಧಿಕಾರದ ನಿಯೋಜನೆ ನಿಯಂತ್ರಣದ ವಿಧಾನಗಳು ಮುಂತಾದವನ್ನೆಲ್ಲ ರೂಪಿಸಬೇಕಾಗುತ್ತದೆ. ಸಂಘಟನೆಯು ನಾನಾ ಸ್ಥರಗಳ ನಡುವೆ ಎಂಥ ಸಂಬಂಧ ಇರಬೇಕು ಎಂಬುದರ ಸ್ಪಷ್ಟ ಪರಿಜ್ಞಾನ ಇರುವುದು ಅಗತ್ಯ.

ಪರಂಪರಾಗತ ಗ್ರಾಹಕ ವರ್ಗ

ಅಭಿವೃದ್ಧಿ ಬ್ಯಾಂಕಿಂಗ್ ಕಾರ್ಯಭಾರ ನಿರ್ವಹಣೆಗಾಗಿ ಅಧಿಕಾಧಿಕ ನಿಧಿಗಳು ಅಗತ್ಯವಾಗುವುದರಿಂದ ಪರಂಪರಾಗತ ಗ್ರಾಹಕ ವರ್ಗಕ್ಕೆ ಲಭ್ಯವಿರುವ ಸಂಪನ್ಮೂಲಗಳು ವಿರಳವಾಗುತ್ತವೆ. ಆದರೆ ಬ್ಯಾಂಕಿಗೆ ಲಾಭ ತರುವ ವಿಭಾಗವೇ ಇದು. ಇದರಿಂದಲೇ ಬ್ಯಾಂಕು ಮೈತುಂಬಿಕೊಂಡು ಬೆಳೆಯ ಬೇಕು. ಬ್ಯಾಂಕುಗಳ ನಡುವೆ ಸ್ಪರ್ಧೆ ಬೆಳೆಯುತ್ತಿರುವುದು ಈ ಗ್ರಾಹಕ ವರ್ಗಕ್ಕಾಗಿಯೇ. ಈ ವಿಭಾಗದ ದಕ್ಷ ನಿರ್ವಹಣೆಯೇ ಬ್ಯಾಂಕಿಂಗ್ ಉದ್ಯಮದ ಉತ್ಪಾದಕತೆಗೆ ಆಧಾರ. ಇದು ಆಧುನಿಕ ಬ್ಯಾಂಕಿಂಗ್ ವಿಭಾಗ. ವಿದ್ಯುನ್ಮಾನ ಬ್ಯಾಂಕಿಂಗ್, ಕ್ಷಿಪ್ರಗತಿ ವ್ಯವಸ್ಥೆ, ಆಧುನಿಕ ಸಲಕರಣೆಗಳು – ಎಲ್ಲವೂ ಈ ವರ್ಗದ ಸಂಪ್ರೀತಿಗಾಗಿ. ಹೆಚ್ಚು ದಕ್ಷವಾದ, ಹೆಚ್ಚು ಕ್ಷಿಪ್ರವಾದ ಸೇವೆ ಸಲ್ಲಿಸಲು ಮಾತ್ರವೇ ಅಲ್ಲದೆ ಬೆಳೆಯುತ್ತಿರುವ ವ್ಯವಹಾರವನ್ನು ನಿರ್ವಹಿಸಲೂ, ಹೊಸ ಹೊಸ ಗ್ರಾಹಕರನ್ನು ಆಕರ್ಷಿಸಲೂ ಇವು ಅಗತ್ಯವಾಗುತ್ತವೆ. ವ್ಯವಸ್ಥಾಪನ ಮಾಹಿತಿವ್ಯವಸ್ಥೆ, ದೂರ ಸಂಪರ್ಕ, ಗಣಕೀಕರಣ ಎಲ್ಲವೂ ಪ್ರಾಮುಖ್ಯ ತಳೆಯುತ್ತವೆ.

ಜಾಲದ ಸಮಸ್ಯೆ

ಆದ್ಯತಾ ವಲಯಕ್ಕೆ ಸಾಲ ನೀಡಿಕೆ ಸೇವಾಕ್ಷೇತ್ರ ಅಭಿಗಮನ ಮುಂತಾದ ಕಲಾಪಗಳು ಬೆಳೆದಂತೆ ಬ್ಯಾಂಕುಗಳು ದೇಶದ ಮೂಲೆಮೂಲೆಗೂ ತಮ್ಮ ಜಾಲವನ್ನು ಹಬ್ಬಿಸುತ್ತವೆ. ನಿಯಂತ್ರಣ ಸಮಸ್ಯೆ ದೈತ್ಯಾಕಾರ ತಳೆಯುತ್ತದೆ. ಗುಣಮಟ್ಟ ಇಳಿಯು ವುದು ಸಹಜ. ವಿಶೇಷ ಪರಿಣತರ ಅಗತ್ಯ ಹೆಚ್ಚು ಇದೆ. ಮಾರ್ಗದರ್ಶನ, ಪ್ರವರ್ತನೆ, ನಿಯಂತ್ರಣ ಈ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಸಂಘಟನಾತ್ಮಕ ಸಂರಚನೆ – ಪ್ರಾದೇಶಿಕ ಹಾಗೂ ಇತರ ಹಂತಗಳಲ್ಲಿ ಲಭ್ಯವಿರುವುದಿಲ್ಲ. ಈ ಸಮಸ್ಯೆಯ ಪರಿಹಾರ ಸುಲಭವಲ್ಲ.

ಸಿಬ್ಬಂದಿ

ಸಿಬ್ಬಂದಿಯದೊಂದು ದೊಡ್ಡ ಸಮಸ್ಯೆ. ಬ್ಯಾಂಕುಗಳಿಗೆ ಸೇರುವ ಉದ್ಯೋಗಿಗಳ ಸಂಖ್ಯೆ ಅಗಾಧ. ತಳ ವಿಸ್ತರಿಸುತ್ತಿದೆ. ಆದರೆ ಮೇಲಣ ಸ್ತರಗಳಿಗೆ ಬಡ್ತಿಯ ಅವಕಾಶಗಳು ಅದೇ ದರದಲ್ಲಿ ಬೆಳೆಯುವುದಿಲ್ಲ, ಇದು ಹತಾಶೆಗೆ ಕಾರಣವಾಗುತ್ತದೆ. ಬ್ಯಾಂಕಿಂಗ್ ವ್ಯವಹಾರದ ಸ್ವರೂಪದ ಕಲ್ಪನೆಯೂ ಇಲ್ಲದ ಸಿಬ್ಬಂದಿ ನಾನಾ ಬಗೆಯ (ರಾಜಕೀಯ ಹಾಗೂ ಇತರ) ಒತ್ತಡಗಳನ್ನೆದುರಿಸಬೇಕಾಗುತ್ತದೆ. ವರ್ತನಾತ್ಮಕ (behavioural) ಪರಿಹಾರೋಪಾಯಗಳತ್ತ ಬ್ಯಾಂಕುಗಳು ದೃಷ್ಟಿ ಹರಿಸುವುದು ಅಗತ್ಯವೆನಿಸೀತು. ತರಬೇತಿ, ವ್ಯವಸ್ಥಾಪನ ವಿಕಾಸ, ಯಥೋಚಿತ ಮಾನವಶಕ್ತಿ ಯೋಜನೆ ಎಲ್ಲವೂ ಪ್ರಾಮುಖ್ಯಗಳಿಸುತ್ತವೆ. ಸರಿಯಾದ ಮನೋಧರ್ಮವುಳ್ಳವರ ಆಯ್ಕೆ ಮತ್ತು ನೇಮಕಕ್ಕೆ ಹೆಚ್ಚಿನ ಗಮನ ಸಲ್ಲುವುದು ಅಗತ್ಯ. ಪರೀಕ್ಷಾ ವಿಧಾನವೇ ಮೂಲಭೂತವಾಗಿ ಬದಲಾಗಬೇಕು. ಸೇವಾಕ್ಷೇತ್ರ ರ ಯೋಜನೆ ಯಶಸ್ವಿಯಾಗಲು ಬೇಕಾಗುವ ಸಾಮರ್ಥ್ಯ, ಮನೋಧರ್ಮ ಅಗಾಧ.

ಸಂಶೋಧನೆಗೂ ಹೆಚ್ಚಿನ ಗಮನ ಸಲ್ಲಬೇಕು. ಪರಿಸರದ ಸ್ಪಷ್ಟ ಜ್ಞಾನ, ಸಮಸ್ಯೆಯ ಸ್ವರೂಪದ ಅರಿವು ಇವೆಲ್ಲ ಬೆಳೆದಾಗ ಸಂಘಟನಾತ್ಮಕ ನವೀಕರಣಕ್ಕಾಗಿ ಹೊಸಹೊಸ ಉಪಾಯಗಳು ತಾವಾಗಿಯೇ ಹೊಳೆಯುತ್ತವೆ. ಶಾಖಾಮಟ್ಟದಲ್ಲಿ ಸೇವೆಯ ವೆಚ್ಚದ ನಿರ್ಣಯಕ್ಕೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ.

ಆಕ್ರಮಣಶೀಲ ಬ್ಯಾಂಕಿಂಗ್

ಬ್ಯಾಂಕುಗಳು ಒಂದು ಕಾಲದಲ್ಲಿ ಸಂಪ್ರದಾಯದ ಭದ್ರ ಕೋಟೆಗಳಾಗಿದ್ದುವು. ಅವುಗಳಲ್ಲಿ ವಿಶೇಷೀಕರಣ ಪ್ರಧಾನವಾಗಿತ್ತು. ಅವುಗಳ ನಡುವೆ ವಾಣಿಜ್ಯ ಬ್ಯಾಂಕಿಂಗ್ ಮುಂತಾಗಿ ಕಟ್ಟುನಿಟ್ಟಾದ ವಿಭಜನೆಯಿತ್ತು. ಈಗ ಈ ನಡುಗೋಡೆಗಳು ಉರುಳುತ್ತಿವೆ. ಸಂಪ್ರದಾಯಜಡತೆ, ಪರಂಪರಾಗತ ವಿಧಾನಗಳಿಗೆ ಮಾನ್ಯತೆ – ಇವು ಹೋಗುತ್ತಿವೆ. ಬ್ಯಾಂಕುಗಳು ಹೆಚ್ಚು ಹೆಚ್ಚು ಆಕ್ರಮಣಶೀಲವೂ ಚೈತನ್ಯಪೂರಿತವೂ ಆಗುತ್ತಿವೆ. ಉಳಿತಾಯದಾರರ, ವಿನಿಯೋಜನದಾರರ ಹಣದ ಮೇಲೆ ಅವುಗಳ ಕಣ್ಣು ಬಿದ್ದಿದೆ. ಇದಕ್ಕಾಗಿ ಅವುಗಳಲ್ಲೇ ಸ್ಪರ್ಧೆ ತೀವ್ರವಾಗಿದೆ. ಇದುವರೆಗೆ ಗುರುತಿಸದಿದ್ದ, ಪರಿಚಯವಿಲ್ಲದ ಸೀಮೆಗಳಿಗೆ ಅವು ಪ್ರವೇಶಮಾಡುತ್ತಿವೆ. ಬಳಕೆದಾರ ಉದರಿ, (Consumer Credit) ಪ್ರವರ್ತನ ಬಂಡವಾಳ(venture Capital), ಗುತ್ತಿಗೆ ವ್ಯವಹಾರ (leasing), ಗೃಹನಿರ್ಮಾಣ ಮುಂತಾದ ಕ್ಷೇತ್ರಗಳಲ್ಲಿ ಅವು ಕಾರ್ಯನಿರ್ವಹಿಸತೊಡಗಿವೆ. ಇಪ್ಪತ್ತೊಂದನೆಯ ಶತಮಾನಕ್ಕೆ ಧಾವಿಸುವಾಗ ಬ್ಯಾಂಕುಗಳ ಹಣಕಾಸಿನ

ಮೇರೆಗಳೇ ಬಹಳಷ್ಟು ಬದಲಾಗಿರುತ್ತವೆ. ಯಕ್ಷಿಣಿ ದಂಡವನ್ನು ಪ್ರಯೋಗಿಸಿದಂತೆ ಬ್ಯಾಂಕಿಂಗ್ ವಲಯದ ಸ್ವರೂಪದಲ್ಲೇ ಮಹಾ ಪರಿವರ್ತನೆಯಾಗಿರುತ್ತದೆ. ಬಂಡವಾಳ ಮಾರುಕಟ್ಟೆಯ ಪ್ರಾಮುಖ್ಯ, ಖಾಸಗಿ ಹಣಕಾಸು ಸಂಸ್ಥೆಗಳ ಬೆಳವಣಿಗೆ – ಇವೆಲ್ಲವನ್ನೂ ಅವು ಎದುರಿಸಬೇಕಾಗುತ್ತದೆ.

ಸುಮಾರು ಎರಡು ದಶಕಗಳ ಇತಿಹಾಸವುಳ್ಳ ಉದರಿ ಕಾರ್ಡ್ ವ್ಯವಹಾರ ಭಾರತದಲ್ಲೂ ಬ್ಯಾಂಕುಗಳ ಕಣ್ಣು ಕೋರೈಸತೊಡಗಿದೆ. ಅನೇಕ ಬ್ಯಾಂಕುಗಳು ಇದರಲ್ಲಿ ತೊಡಗಿವೆ. ಇದರ ಸಾಧ್ಯತೆಗಳ ವೈಜ್ಞಾನಿಕ ವಿವೇಚನೆಯಿನ್ನೂ ಆಗಿಲ್ಲ. ಸ್ವಯಂ ಚಲೀ ಷರಾಫ್ ಯಂತ್ರದ ಫ್ಯಾಶನ್ ಬೆಳೆಯುತ್ತಿದೆ. ಬಳಕೆದಾರ ಉದರಿಯೇನೂ ಬ್ಯಾಂಕುಗಳಿಗೆ ಇಂದು ನಿಷಿದ್ಧವಲ್ಲ. ಭಾರತೀಯ ಸ್ಟೇಟ್ ಬ್ಯಾಂಕಿನ ಬೃಹತ್ ಖರೀದಿ ಯೋಜನೆ ಇದಕ್ಕೆ ನಿದರ್ಶನ. ಪರಸ್ಪರ ನಿಧಿ ಸ್ಥಾಪಿಸಲು ಬ್ಯಾಂಕುಗಳು ಹಾತೊರೆಯುತ್ತಿವೆ. ಉಪಕ್ರಮ ಬಂಡವಾಳ ಅನೇಕ ಹಾನಿ ಭಯಗಳಿಂದ ಕೂಡಿದ್ದು, ಆದರೆ ಬ್ಯಾಂಕುಗಳು ಈ ಕ್ಷೇತ್ರದಲ್ಲಿ ದಾಪುಗಾಲು ಇಡತೊಡಗಿವೆ. ಇದಕ್ಕಾಗಿ ಸಹಾಯಕ ಸಂಸ್ಥೆಗಳನ್ನು ಸ್ಥಾಪಿಸುತ್ತಿವೆ. ಸಾಂಸ್ಥಿಕ ಗ್ರಾಹಕರಿಗೆ ಅಲ್ಪಾವಧಿಯ ಉದರಿ ನೀಡುವಲ್ಲಿ ಹೊಸ ಹೊಸ ಪ್ರಯೋಗಗಳಾಗುತ್ತಿವೆ. 180 ದಿನಗಳ ವಾಣಿಜ್ಯ ಪತ್ರ ನೀಡಿಕೆಯ ಸಲಹೆ ಇಂಥದು. ಬ್ಯಾಂಕುಗಳ ಧೋರಣೆಯೇ ಬದಲಾಗುತ್ತಿದೆ. ಸರ್ಕಾರಿ ಹಾಗೂ ಇತರ ವಲಯಗಳ ಸಂಸ್ಥೆಗಳು ನೇರವಾಗಿ ತಮಗೆ ಬೇಕಾದ ಹಣ ಎತ್ತತೊಡಗಿರುವುದರಿಂದ ಬ್ಯಾಂಕುಗಳು ಉಳಿತಾಯದಾರರ ಹಾಗೂ ವಿನಿಯೋಜನದಾರರ ನಡುವಣ ಕೊಂಡಿಯಾಗಿರುವ ಪಾತ್ರ – ಮಧ್ಯವರ್ತಿಯ ಕಾರ್ಯಭಾರ – ಕರಗುತ್ತಿದೆ. ಆದ್ದರಿಂದಲೇ ಈ ಎಲ್ಲ ಹೊಸ ಹೊಸ ಪ್ರಯೋಗ.

ಠೇವಣಿ

ಅಭಿವೃದ್ಧಿ ಪ್ರಯತ್ನದಲ್ಲಿ ಮಹತ್ತರ ಪಾತ್ರ ವಹಿಸಬೇಕಾಗಿಬಂದಿರುವ ಭಾರತೀಯ ಬ್ಯಾಂಕುಗಳು ಇದರಿಂದಾಗಿ ಹೊಸ ಪರಿಸ್ಥಿತಿಯನ್ನೆದುರಿಸುತ್ತಿವೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಬಂಡವಾಳ ವಿರಳವೆನಿಸುತ್ತಿದೆ. ಸಂಪನ್ಮೂಲಗಳನ್ನು ಕ್ರೋಡೀಕರಿಸಿ, ಇಚ್ಛಿತ ದಿಕ್ಕುಗಳಲ್ಲಿ ಅವನ್ನು ಹರಿಯಿಸಬೇಕಾಗಿರುವ ಬ್ಯಾಂಕುಗಳು ಠೇವಣಿಗಳಿಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಅವು ಪರಂಪರಾಗತ ಸ್ಥಿರ ಠೇವಣಿಗಳನ್ನು ಪುನರ್ವಿನ್ಯಾಸಗೊಳಿಸುತ್ತಿವೆ. ಸಾಲ ಜೋಡಣೆಯ ಠೇವಣಿ, ಅಸ್ಥಿರವಾದ ಸ್ಥಿರಠೇವಣಿ (ಸ್ಥಿರಠೇವಣಿ ಆಧಾರದ ಮೀರೆಳೆತ), ಪ್ರವಾಸಿ ಚೆಕ್ಕುಗಳ ಹಣದ ಮೇಲೆ ಬಡ್ಡಿ ನೀಡಿಕೆ ಮುಂತಾದ ಪ್ರಯೋಗಗಳು ನಡೆದಿವೆ. ಠೇವಣಿಗಾಗಿ ನಡೆದಿರುವ ಸ್ಪರ್ಧೆ ಬಲು ತೀವ್ರ. ವಿವಿಧ ಬಗೆಯ ಠೇವಣಿಗಳ ಬದಲು,

ಬೇಗಬೇರೆ ದಿನಾಂಕಗಳಂದು ಪಕ್ವಗೊಳ್ಳುವ ಠೇವಣಿಗಳ ಬದಲು, ಚಾಲ್ತಿ ಉಳಿತಾಯ ಹಾಗೂ ನಿರಕು ಠೇವಣಿಗಳ ಉದ್ದೇಶಗಳನ್ನೆಲ್ಲ ಪೂರೈಸಬಲ್ಲ ಒಂದೇ ಬಗೆಯ ಠೇವಣಿ ಖಾತೆಯನ್ನು ರೂಪಿಸುವತ್ತ ವಿಚಾರ ಹರಿಯುತ್ತಿದೆ. ಠೇವಣಿ ಖಾತೆಯಲ್ಲಿ ಹಣದ ಶಿಲ್ಕು ಎಷ್ಟು ದೀರ್ಘಕಾಲ ಇರುತ್ತದೋ ಅದಕ್ಕನುಗುಣವಾದ ದರದಲ್ಲಿ ಬಡ್ಡಿ ನೀಡುವುದೊಂದು ಕ್ರಾಂತಿಕಾರಿ ಯೋಜನೆ. ಈ ಶತಮಾನದ ಅಂತ್ಯದ ವೇಳೆಗೆ ಇಂಥವೆಲ್ಲ ನನಸಾಗಬಹುದು.

ಭಾಷಾನುಗುಣ ವಿಕೇಂದ್ರೀಕರಣ

ಬ್ಯಾಂಕುಗಳ ಸಂರಚನೆಯನ್ನು ಪುನಃ ರೂಪಿಸುವುದಕ್ಕೂ ಗಮನ ಹರಿಸಬೇಕಾಗುತ್ತದೆ. ಹಲವು ಬ್ಯಾಂಕುಗಳು ದೇಶಾದ್ಯಂತ ಜಾಲ ಹಬ್ಬಿಸುವ ಬದಲು ಅವನ್ನು ವಿಕೇಂದ್ರೀಕರಿಸಬಹುದೆ? ಪ್ರಾದೇಶಿಕವಾಗಿ ಒಡೆಯಬಹುದೆ? ಕಾರ್ಯಭಾರಾನುಗುಣವಾಗಿ ಅವನ್ನು ಪುನವ್ಯವಸ್ಥೆಗೊಳಿಸಬಹುದೆ? ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯ ನೀಡಬೇಡವೆ? ಇವೆಲ್ಲ ಪ್ರಮುಖ ಪ್ರಶ್ನೆಗಳೇ.

ಯಕ್ಷಪ್ರಶ್ನೆ

ಬ್ಯಾಂಕು ಸಾಲಗಳ ಮರುಪಾವತಿಯ ಅಸಮರ್ಪಕತೆ, ಅಸ್ವಸ್ಥ ಉದ್ಯಮ ಘಟಕಗಳು – ಇವೆಲ್ಲ ಮುಂದಿನ ಶತಮಾನದ ವೇಳೆಗೆ ಪ್ರಮುಖ ಸಮಸ್ಯೆಗಳಾಗುತ್ತವೆ. ಈ ಸವಾಲುಗಳನ್ನೆದುರಿಸಲು ಬ್ಯಾಂಕು ತೊಡಗಬೇಕಾಗುತ್ತದೆ. ವಿನಿಯೋಜನೆ, ದ್ರವತ್ವ ಅನುಪಾತ, ಸರ್ಕಾರಿ ವ್ಯವಹಾರ, ಬ್ಯಾಂಕುಗಳ ಸ್ವಾಯತ್ತತೆ ಹಾಗೂ ಹೊಣೆಗಾರಿಕೆ – ಇವುಗಳಿಗೂ ಗಮನಹರಿಸುವುದು ಅಗತ್ಯ. ಬರಲಿರುವ ಶತಮಾನವನ್ನು ದಿಟ್ಟತನದಿಂದ ಎದುರಿಸಲು ಬ್ಯಾಂಕುಗಳು ಎಷ್ಟರಮಟ್ಟಿಗೆ ಸಿದ್ದವಾಗುತ್ತಿವೆ? ಅವಕ್ಕೆ ಈ ಸ್ವಾತಂತ್ರ್ಯ ನೀಡಲು ಸರ್ಕಾರ ಎಷ್ಟರ ಮಟ್ಟಿಗೆ ಸಿದ್ಧವಾಗಿದೆ? ಇದು ಯಕ್ಷಪ್ರಶ್ನೆ.

19.

ಜೂನ್ 1989
ಅಕ್ಷತ ಭೂಮಿ

ಭಾರತದ ಬ್ಯಾಂಕುಗಳು ಇನ್ನೊಂದು ಅವಧಿ ಮುಗಿಸಿವೆ. 'ಇನ್ನೊಂದು ಅವಧಿ' ಎಂದರೆ ಇನ್ನೊಂದು ವರ್ಷವಲ್ಲ, ಹದಿನೈದು ತಿಂಗಳು. ಬ್ಯಾಂಕುಗಳು ಇನ್ನು ಮುಂದೆ ತಮ್ಮ ವಾರ್ಷಿಕ ಲೆಕ್ಕಗಳನ್ನು ಪ್ರತಿ ಮಾರ್ಚ್ 31ಕ್ಕೆ ಮುಕ್ತಾಯಗೊಳಿಸಬೇಕೆಂಬ ನಿಯಮ ಜಾರಿಗೆ ಬಂದ ಫಲವಾಗಿ ಈ ಬದಲಾವಣೆಯ ಮೊದಲ ಅವಧಿ ಹದಿನೈದು ತಿಂಗಳು. ಈ ಹದಿನೈದು ತಿಂಗಳುಗಳಲ್ಲಿ ಬ್ಯಾಂಕುಗಳ ಒಟ್ಟು ಠೇವಣಿಗಳಲ್ಲಿ ರೂ. 25,000 ಕೋಟಿಯನ್ನೂ ಮೀರಿದ ಏರಿಕೆಯಾಗಿದೆ. ಠೇವಣಿಗಳ ಬೆಳವಣಿಗೆಯ ದರ ಶೇ.22. ಹಿಂದಿನ ವರ್ಷದ ಏರಿಕೆಯ ದರ ಶೇ.15. ಕಳೆದ ವರ್ಷದ ಪ್ರಥಮಾರ್ಧಕ್ಕೆ ರಿಸರ್ವ್ ಬ್ಯಾಂಕು ಉದರಿ ನೀತಿಯನ್ನು ರೂಪಿಸುವಾಗ ನಿರೀಕ್ಷಿಸಿದ್ದ ಏರಿಕೆಯಾದ ರೂ.20,500 ಕೋಟಿಗಿಂತ ಇದು ಅಧಿಕ. ಸಾವಧಿ ಮತ್ತು ತಗಾದೆ ಠೇವಣಿಗಳೆರಡೂ ಏರಿಕೆ ಸಾಧಿಸಿವೆಯಾದರೂ ತಗಾದೆ ಠೇವಣಿಗಳ ಏರಿಕೆ ತೀವ್ರತರ. ಕಳೆದ ವರ್ಷ ಫಸಲು ಚೆನ್ನಾಗಿ ಬಂದದ್ದರಿಂದ ಗ್ರಾಮೀಣ ವರಮಾನಗಳು ಗಮನಾರ್ಹವಾಗಿ ಏರಿವೆ. ಇದು ತಗಾದೆ ಠೇವಣಿಗಳ ಏರಿಕೆಯಲ್ಲಿ ವ್ಯಕ್ತಪಟ್ಟಿದೆಯೆನ್ನಬಹುದು. 1988–89 ರಲ್ಲಿ ಬ್ಯಾಂಕುಗಳ ಮುಂಗಡಗಳೂ ವಿಕ್ರಮ ಸಾಧಿಸಿವೆ. ಹಿಂದಿನ ವರ್ಷದಲ್ಲಿ ಮುಂಗಡಗಳ ಏರಿಕೆಯ ಪ್ರಮಾಣ ಶೇ. 11.4 ಆಗಿದ್ದರೆ, ಕಳೆದ ವರ್ಷ ಶೇ.23.1. ಕಳೆದ ವರ್ಷ ಆಹಾರ ದಾಸ್ತಾನು ಕರಗುತ್ತಿದ್ದ ಫಲವಾಗಿ ಬ್ಯಾಂಕುಗಳು ಆಹಾರ ಧಾನ್ಯಗಳಿಗಾಗಿ ನೀಡಿದ ಮುಂಗಡ ಇಳಿಯುತ್ತಿದ್ದರೂ ಒಟ್ಟು ಮುಂಗಡಗಳಲ್ಲಿ ಗಮನಾರ್ಹ ಏರಿಕೆಯಾಗಿದ್ದದ್ದರ ಅರ್ಥವೆಂದರೆ, ಆಹಾರೇತರ ಮುಂಗಡಗಳು ಹೆಚ್ಚುತ್ತಿವೆಯೆಂಬುದು. ಇದರಿಂದ ಅನೇಕ ಬ್ಯಾಂಕುಗಳ ಲಾಭಪ್ರದತೆ ಸುಧಾರಿಸಿದೆ. ಹಿಂದಿನ ಎರಡು ವರ್ಷಗಳಲ್ಲಿ ಕಂಡುಬಂದ ಲಾಭದ ಏರಿಕೆಯ ಪ್ರವೃತ್ತಿ, 1988–89ರಲ್ಲೂ ಮುಂದುವರಿಯುವುದೆಂದು ನಿರೀಕ್ಷಿಸಲಾಗಿದೆ. ಬ್ಯಾಂಕುಗಳ ದೃಷ್ಟಿಯಿಂದ ಇದು ಸಮಾಧಾನಪಡಬೇಕಾದ ಸಂಗತಿ.

ಇಪ್ಪತ್ತು ವರ್ಷ

ಭಾರತದ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾಗಿ ಇಷ್ಟರಲ್ಲೇ ಇಪ್ಪತ್ತು ವರ್ಷಗಳು ತುಂಬಲಿವೆ. ನಮ್ಮ ಬ್ಯಾಂಕಿಂಗ್ ವಲಯ ಈಗ ಮಹಾ ಪರಿವರ್ತನೆಯ ಹಂತದಲ್ಲಿದೆ. ಅದು ದಿಗಂತದತ್ತ ಕಣ್ಣು ಹಾಯಿಸಬೇಕಾದ ಕಾಲ ಬಂದಿದೆ. ರಾಷ್ಟ್ರೀಕರಣದ ವಿಂಶತಿತಮ ವಾರ್ಷಿಕೋತ್ಸವವನ್ನು ಬ್ಯಾಂಕುಗಳು ಮುಂದಿನ ತಿಂಗಳು

ಅತ್ಯಂತ ಸಂಭ್ರಮದಿಂದ ಆಚರಿಸಲಿವೆ. ಇದಕ್ಕಾಗಿ ಅಗಾಧ ಹಣ ವೆಚ್ಚವಾಗುವುದೆಂಬುದು ನಿರ್ವಿವಾದ. ಹಾಗೆ ವೆಚ್ಚ ಮಾಡಿದಾಗ ಮಾತ್ರವೇ ಯಾವುದೇ ಹಬ್ಬವನ್ನು "ಅರ್ಥವತ್ತಾಗಿ' ಆಚರಿಸಿದಂತೆ. 'ಅರ್ಥ' ಎಂಬುದಕ್ಕೆ 'ಸಂಪತ್ತು' ಎಂಬ ಅರ್ಥವೂ ಇದೆಯಲ್ಲವೆ?

ಆದರೆ ವಾಸ್ತವವಾಗಿ ಇದು ಬ್ಯಾಂಕುಗಳ ಆತ್ಮ ನಿರೀಕ್ಷಣೆಯ ಸಂದರ್ಭವಾಗಬೇಕು. ಈ ಇಪ್ಪತ್ತು ವರ್ಷಗಳಲ್ಲಿ ಬ್ಯಾಂಕುಗಳ ಗಾತ್ರ ಬಹಳಷ್ಟು ಬೆಳೆದಿದೆ. ಶಾಖೆಗಳ ಸಂಖ್ಯೆಯೂ ಠೇವಣಿಗಳೂ ಮುಂಗಡಗಳೂ ಹಲವು ಮಡಿ ಅಧಿಕವಾಗಿವೆ. ಸಮಾಜದಲ್ಲಾಗುತ್ತಿರುವ ಬದಲಾವಣೆಗಳಿಗೂ ಅಗತ್ಯಗಳಿಗೂ ಆಕಾಂಕ್ಷೆಗಳಿಗೂ ಅನುಗುಣವಾಗಿ ಬ್ಯಾಂಕುಗಳ ಉಳಿತಾಯ ಯೋಜನೆಗಳೂ ಸೇವಾ ಕಾರ್ಯಗಳೂ ವೈವಿಧ್ಯಮಯವಾಗಿ ಬೆಳೆದಿವೆ. ಈ ಬಗ್ಗೆ ವಿಪುಲವಾಗಿ ಅಂಕಿ ಅಂಶಗಳ ಸುರಿಮಳೆಯೇ ಆಗಲಿದೆ. ಎಪ್ಪತ್ತು–ಎಂಬತ್ತರ ದಶಕಗಳಲ್ಲಿ ಆಗಿರುವ ಪರಿಮಾಣಾತ್ಮಕ ಬೆಳವಣಿಗೆಯ ಜೊತೆಗೆ, ಬ್ಯಾಂಕುಗಳು ತಮ್ಮ ಮುಂದೆ ಸರ್ಕಾರ ಇಟ್ಟ ಸಾಮಾಜಿಕಾರ್ಥಿಕ ಧ್ಯೆಯೋದ್ದೇಶಗಳನ್ನೂ ಪೂರೈಸುವತ್ತ ದಾಪುಗಾಲಿಡುತ್ತಿವೆ. ಈಗ ಬ್ಯಾಂಕುಗಳು ಕೂಗತೊಡಗಿರುವ ಘೋಷಣೆಯೆಂದರೆ ಗುಣಾತ್ಮಕ ಮುನ್ನಡೆ. ಕಾರ್ಯತಂತ್ರದಲ್ಲಿ ಸುಧಾರಣೆ, ದಕ್ಷತೆಯ ಹೆಚ್ಚಳ, ಗ್ರಾಹಕ ಸೇವೆಯ ಉತ್ತಮಿಕೆ, ಋಣೋತ್ಪಾದಿತ ಆಸ್ತಿಗಳ ಗುಣ ಮಟ್ಟದ ಏರಿಕೆ, ಮನೆವಾರ್ತೆಯಲ್ಲಿ ಸಮರ್ಪಕತೆಯ ಸಾಧನೆ, ಆಂತರಿಕ ನಿಯಂತ್ರಣದಲ್ಲಿ ಪರಿಣತಿಯ ಪ್ರಾಪ್ತಿ, ಲಾಭಪ್ರದತೆಯ ದೃಷ್ಟಿ – ಇವಕ್ಕೆಲ್ಲ ಈಗ ಬ್ಯಾಂಕುಗಳು ಹೆಚ್ಚಿನ ಗಮನ ಹರಿಸತೊಡಗಿವೆ.

ಹೊಸ ನಿಟ್ಟು

ಬ್ಯಾಂಕುಗಳು ಈಗೀಗ ಹೊಸ ಹೊಸ ವಿನಿಯೋಜನ ಮಾರ್ಗಗಳ ಅನ್ವೇಷಣೆಯಲ್ಲಿ ತೊಡಗಿವೆ. ಅವುಗಳ ನಿಧಿಗಳಲ್ಲಿ ಅರ್ಧದಷ್ಟು ಭಾಗ ನಗದು ಮೀಸಲು ಮತ್ತು ಪರಿನಿಯತ ದ್ರವತ್ವ ಅನುಪಾತ ಗಳಿಂದಾಗಿ ಲಭ್ಯವಿಲ್ಲದಿರುವುದರಿಂದಲೂ ಸಾಲ ನೀಡಬಹುದಾದ ಉಳಿದದ್ದರಲ್ಲಿ ನೂರಕ್ಕೆ ನಲವತ್ತು ಪಾಲು ಆದ್ಯತಾ ವಲಯಕ್ಕೆ ಮುಡಿಪಾಗಿರುವುದರಿಂದಲೂ, ವಾಣಿಜ್ಯಕ ಬಡ್ಡಿ ದರಗಳಲ್ಲಿ ನೀಡಬಹುದಾಗಿ ಉಳಿದಿರುವುದು ಶೇ. 20 ರಷ್ಟು ಮಾತ್ರ. ಪರಂಪರಾಗತ ವ್ಯವಹಾರಗಳಿಂದ ಪಡೆಯಬಹುದಾದ ಪ್ರತಿಫಲಗಳಿಗೆ ಇತಿಮಿತಿಗಳುಂಟು. ಕಂಪನಿ ವಲಯದ ಉದ್ಯಮ ಸಂಸ್ಥೆಗಳು ಬ್ಯಾಂಕಿನ ಮಧ್ಯಸ್ಥಿಕೆ ಪಡೆಯುವುದನ್ನು ಬಿಟ್ಟು ನೇರವಾಗಿಯೇ ತಮಗೆ ಅಗತ್ಯವಾದ ನಿಧಿಗಳನ್ನು ಪಡೆಯತೊಡಗಿವೆ. ಇದರಿಂದಾಗಿ ಬ್ಯಾಂಕುಗಳು ಅನ್ಯ ವಿನಿಯೋಜನ ಮಾರ್ಗಗಳನ್ನು ಅರಸಬೇಕಾಗಿದೆ. ಸರಕಾರದ ರೀತಿ ನೀತಿಗಳಲ್ಲಿ

ಆಗುತ್ತಿರುವ ಮಾರ್ಪಾಟುಗಳಿಂದಾಗಿ ಬ್ಯಾಂಕುಗಳು ಹೊಸ ಹೊಸ ನಿಟ್ಟುಗಳಲ್ಲಿ ಚಟುವಟಿಕೆಗಳಲ್ಲಿ ತೊಡಗುವ ಅವಕಾಶಗಳು ಉದಿಸುತ್ತಿವೆ.

ಇತರ ದೇಶಗಳಲ್ಲಿ ಆಗುತ್ತಿರುವ ಬದಲಾವಣೆಗಳು ನಮ್ಮ ಬ್ಯಾಂಕುಗಳಿಗೂ ಹೊಸ ದಿಗಂತಗಳನ್ನು ತೆರೆದು ತೋರಿಸುತ್ತಿವೆ. ಅನ್ಯ ದೇಶಗಳಲ್ಲಿ ಬ್ಯಾಂಕುಗಳು ಪರಂಪರಾಗತ ಬ್ಯಾಂಕಿಂಗ್ ವ್ಯವಹಾರಕ್ಕೆ ಜೋತುಬೀಳದೆ ಹೊಸ ಹೊಸ ಸೇವೆಗಳನ್ನು ನೀಡ ತೊಡಗಿವೆ. ಅವು ಒಂದು ರೀತಿಯಲ್ಲಿ ಮಹಾ ಮಾರುಕಟ್ಟೆಗಳಾಗಿವೆ. ಭಾರತದಲ್ಲೂ ಗ್ರಾಹಕರ ಅಗತ್ಯಗಳು ವೈವಿಧ್ಯಮಯವಾಗುತ್ತಿವೆ. ಹೆಚ್ಚು ಹೆಚ್ಚು ನಾಜೂಕಿನವಾಗುತ್ತಿವೆ, ಸಂಕೀರ್ಣವಾಗುತ್ತಿವೆ. ಅವರ ರುಚಿಗಳಲ್ಲಿ ವ್ಯತ್ಯಾಸಗಳಾಗುತ್ತಿವೆ. ಹಣಪೇಟೆ, ಬಂಡವಾಳಪೇಟೆ, ಬ್ಯಾಂಕಿಂಗ್ – ಇವುಗಳ ನಡುವಣ ಗೆರೆಗಳು ಮಸುಕಾಗುತ್ತಿವೆ. ಬ್ಯಾಂಕುಗಳು ತಮ್ಮ ಮಡಿವಂತಿಕೆಯನ್ನು ತೊರೆದು ವಿವಿಧೋದ್ದೇಶ ಹಣಕಾಸು ಸಂಸ್ಥೆಗಳಂತೆ ಕಾರ್ಯಾಚರಣೆ ಮಾಡತೊಡಗಿವೆ. ಭಾರತದ ಬ್ಯಾಂಕುಗಳಾದರೂ ಈ ಬದಲಾವಣೆಗಳಿಗೆಲ್ಲ ಕಣ್ಣುಮುಚ್ಚಿ ಕೂರುವಂತಿಲ್ಲ. ಇಲ್ಲಿ ಕೂಡ ಪಾರಂಪರಿಕ ಬ್ಯಾಂಕಿಂಗ್ ಕಲಾಪ ಗೌಣವಾಗಿ, ಹೆಚ್ಚು ಆಕರ್ಷಕವಾದ ಮತ್ತು ಹೆಚ್ಚು ಲಾಭತರುವಂಥವೆನಿಸುವ ಕಲಾಪಗಳು ಪ್ರಮುಖವಾಗುತ್ತಿವೆ. ವಣಿಕ ಬ್ಯಾಂಕಿಂಗ್, ಗುತ್ತಿಗೆ ವ್ಯವಹಾರ, ಪರಸ್ಪರ ನಿಧಿ, ಋಣಾಭಿಕರಣ, ಉಪಕ್ರಮ ಬಂಡವಾಳ, ಉದರಿ ಕಾರ್ಡ್, ವಸತಿ ಹಣಕಾಸು ಮುಂತಾದ ಕ್ಷೇತ್ರಗಳಲ್ಲಿ ಬ್ಯಾಂಕುಗಳು ತೊಡಗುತ್ತಿವೆ. ಇವಕ್ಕಾಗಿಯೇ ಅವು ಪ್ರತ್ಯೇಕ ಸಹಾಯಕ ಸಂಸ್ಥೆಗಳನ್ನು ಸ್ಥಾಪಿಸುತ್ತಿವೆ.

ಮಾರಕ ಸ್ಪರ್ಧೆ

ಈ ಬಹುವಿಧ ಕಲಾಪಗಳ ಹವ್ಯಾಸದಿಂದಾಗಿ ಬ್ಯಾಂಕುಗಳು ಪರಸ್ಪರ ಮಾರಕ ಸ್ಪರ್ಧೆಯಲ್ಲಿ ತೊಡಗುವಂತಾಗಿದೆಯೆನಿಸುತ್ತದೆ, ಈ ಬ್ಯಾಂಕುಗಳು – ಹುಟ್ಟು ಹಾಕಿರುವ ಸಹಾಯಕ ಸಂಸ್ಥೆಗಳ ಕಲಾಪಗಳ ಬಗ್ಗೆ ಟೀಕೆಗಳು ಕೇಳಿಬರುತ್ತಿವೆ. ಉದಾಹರಣೆಗೆ ವಣಿಕ ಬ್ಯಾಂಕಿಂಗ್, ವಾಡಿಕೆಯಾಗಿ ಬಂದ ವ್ಯವಹಾರಕ್ಕಿಂತ ಬೇರೆಯಾದ ಈ ಕಲಾಪದಲ್ಲಿ ಬ್ಯಾಂಕುಗಳು ಸಾಕಷ್ಟು ಕಾಲದಿಂದ ತೊಡಗಿವೆ. ಆದರೆ ಇದಕ್ಕೆ ಅಗತ್ಯವಾದ ಪರಿಣತಿ ಇಲ್ಲವೆಂಬುದು ಪದೇ ಪದೇ ಮನವರಿಕೆಯಾಗುತ್ತಿದೆ. ಎಲ್ಲ ಬ್ಯಾಂಕುಗಳೂ ಎಲ್ಲ ಬಗೆಯ ಕ್ಷೇತ್ರಗಳಲ್ಲೂ ತೊಡಗುವ ಬದಲು, ಕೆಲಕೆಲವಕ್ಕೇ ಸೀಮಿತಗೊಂಡು ಆ ಕ್ಷೇತ್ರಗಳಲ್ಲಿ ಪ್ರಾವೀಣ್ಯ ಸಾಧಿಸಲು ಯತ್ನಿಸುವ ಚಿಂತನೆ ಹರಿಸಬೇಕಾಗಿದೆ. ಹೊಸದಾಗಿ ಸ್ಥಾಪಿತವಾಗುತ್ತಿರುವ ಉದ್ಯಮ ಕಂಪನಿಯೊಂದರ ಹಾಗೂ ಅದರ ಪ್ರವರ್ತಕರ ಬಗ್ಗೆ ಸಾಕಷ್ಟು

ಮಾಹಿತಿ ಸಂಗ್ರಹಿಸದೆ, ಹಣ ಹೂಡುವ ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆದು ನಷ್ಟಕ್ಕೆ ಗುರಿಪಡಿಸಿದ ನಿದರ್ಶನಗಳೂ ಉಂಟು. ಹೀಗಾಗದಂತೆ ಬ್ಯಾಂಕುಗಳು ಎಚ್ಚರ ವಹಿಸಬೇಕಾಗಿದೆ. ಪರಸ್ಪರ ನಿಧಿಯೂ ಬ್ಯಾಂಕುಗಳ ಆಸಕ್ತಿ ಕೆರಳಿಸಿರುವ ಒಂದು ವ್ಯವಹಾರ. ಇದು ಈಗ ಭದ್ರವಾಗಿ ಬೆಳೆಯುತ್ತಿದೆ. ಆದರೆ ಇದಕ್ಕೆ ಅನ್ವಯಿಸುವ ಒಂದು ವಿಶಿಷ್ಟ ಕಾನೂನು ಚೌಕಟ್ಟು, ಇನ್ನೂ ರೂಪಿತವಾಗಿಲ್ಲ. ಎಲ್ಲರಿಗೂ ಸಮಾನ ಅವಕಾಶ ದೊರಕುವಂತೆ ಮಾಡಲು ಇಂಥ ಚೌಕಟ್ಟು ಅಗತ್ಯವೆನಿಸುತ್ತದೆ.

ಅಕ್ಷತ ಭೂಮಿ

ಎಲ್ಲ ಚಟುವಟಿಕೆಗಳೂ ಬಹುತೇಕ ಪಟ್ಟಣಿಗರನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿತವಾಗುತ್ತಿರುವಂಥವು. ವ್ಯಾಪಕವಾದ ಗ್ರಾಮೀಣ ಪ್ರದೇಶವಿನ್ನೂ ನಿಜವಾದ ಅರ್ಥದಲ್ಲಿ ಅಕ್ಷತ ಭೂಮಿಯಾಗಿಯೇ ಉಳಿದಿದೆ. ವಿಸ್ತೃತ ಶಾಖಾ ಜಾಲಗಳೂ ಬಹುಕೃತ ಸೇವಾಯೋಜನೆಗಳೂ ಇದ್ದರೂ ಬ್ಯಾಂಕುಗಳು ಇನ್ನೂ ಈ ನೆಲವನ್ನು ಮುಟ್ಟಿಲ್ಲ, ತಟ್ಟಿಲ್ಲ. ಇಲ್ಲಿ ಸಾಧನೆಗಿಂತ ಗೊಂದಲವೇ ಜಾಸ್ತಿ. ರಾಜಕೀಯ ರಾಡಿಯೇ ಅಧಿಕ. ಈಚೆಗೆ ಜಾರಿಗೆ ತರಲಾಗಿದೆಯೆನ್ನಲಾದ ಸೇವಾಕ್ಷೇತ್ರ ಅಭಿಗಮನವೆಂಬುದು ತಾತ್ವಿಕವಾಗಿ ಒಂದು ಪ್ರಾಮಾಣಿಕ ಪ್ರಯತ್ನ. ಶಾಖೆಗಳ ಕಾರ್ಯಭಾರಕ್ಕೆ ವಿಕಾಸ ದೃಷ್ಟಿ ಜೋಡಿಸಲು, ಆ ರೀತಿ ಅವನ್ನು ಅನುಸ್ಥಾಪಿಸಲು, ಗ್ರಾಮೀಣ ಉದರಿ ಹೆಚ್ಚು ಉತ್ಪಾದಕವಾಗುವಂತೆ ಮಾಡಲು, ಬ್ಯಾಂಕ್ ನಿಧಿಗಳ ಆವರ್ತನೆ ಸಾಧಿಸಲು ಇದು ನೆರವಾಗಬಲ್ಲುದು. ಆದರೆ ಸರಿಯಾದ ನಾಯಕತ್ವ, ಧೋರಣೆ, ಕೌಶಲ, ಕಾಳಜಿ, ನಿಷ್ಠೆ ಇಲ್ಲದೆ ಇದು ಕೂಡ ಸತ್ತು ಹುಟ್ಟಿದ – ಅಥವಾ ಹುಟ್ಟುವಾಗಲೇ ಸತ್ತ– ಯೋಜನೆಯಾಗುವ ಅಪಾಯವುಂಟು. ಹೀಗಾಗದಂತೆ ಎಚ್ಚರ ವಹಿಸಬೇಕು.

ತಂತ್ರಜ್ಞಾನ

ಬ್ಯಾಂಕುಗಳು ನಾನಾ ಬಗೆಯ ಕಲಾಪಗಳಲ್ಲಿ ತೊಡಗಿರುವುದರಿಂದಾಗಿ ಅವುಗಳ ಕೆಲಸದಲ್ಲಿ ತಂತ್ರಜ್ಞಾನದ ಪ್ರವೇಶನ ಅನಿವಾರ್ಯವೆನಿಸಿದೆ. ಗಣಕೀಕರಣ, ಮಾಹಿತಿ ಮತ್ತು ಸಂವಹನ ತಂತ್ರವಿದ್ಯೆ, ವಿದ್ಯುನ್ಮಾನೀಯ ನಿಧಿ ರವಾನೆ ವ್ಯವಸ್ಥೆ ಮುಂತಾದ ನಿಟ್ಟುಗಳಲ್ಲಿ ಹೆಚ್ಚಿನ ಮುನ್ನಡೆ ಸಾಧಿಸಬೇಕಾಗಿದೆ. ಬ್ಯಾಂಕುಗಳಲ್ಲಿ ಮಾನವ ಉದ್ಯೋಗಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಇದನ್ನು ಹೇಗೆ ಸಾಧಿಸಬೇಕೆಂಬುದು ಪ್ರಶ್ನೆ. ಸಮಷ್ಟಿಯ ಹಂತದಲ್ಲಿ ಈಗಾಗಲೇ ಕೆಲವು ಯಶಸ್ವಿ ಪ್ರಯತ್ನಗಳಾಗಿವೆ. ಬ್ಯಾಂಕುಗಳ ಸಂವಹನ ಜಾಲ (ಬ್ಯಾಂಕ್‌ನೆಟ್), ವಿಶ್ವವ್ಯಾಪಿ ಅಂತರ ಬ್ಯಾಂಕ್ ಹಣಕಾಸು ದೂರ ಸಂವಹನ ಸಂಘ (ಸ್ವಿಫ್ಟ್) – ಇವು ಆಶಾದಾಯಕ ಬೆಳವಣಿಗೆಗಳು. ಬದಲಾದ ಪರಿಸರಕ್ಕೆ ಬ್ಯಾಂಕುಗಳು

ಹೊಂದಿಕೊಳ್ಳುವುದರ ಜೊತೆಗೆ ತಮ್ಮ ಗುರಿ ಸಾಧನೆಯ ಯತ್ನವನ್ನೂ ಮಾಡಬೇಕಾಗಿದೆ ಬ್ಯಾಂಕಿಂಗ್ ಸಂಸ್ಥೆಗಳ ಸಂಘಟನೆಗಳಲ್ಲಿ ಮೂಲಭೂತ ಬದಲಾವಣೆಗಳಾಗಬೇಕಾಗಿದೆ.

ಬ್ಯಾಂಕುಗಳನ್ನು ಜನರ ಬಳಿಗೆ ಕೊಂಡೊಯ್ಯಲು ಅವಕ್ಕೆ ಪ್ರಾದೇಶಿಕತೆಯ ಲಕ್ಷಣ ದೊರಕಿಸಬೇಕಾಗಿದೆ. ನಿಜವಾದ ಅರ್ಥದಲ್ಲಿ ವಿಕೇಂದ್ರೀಕರಣ, ಜನರ ಭಾಷಯಲ್ಲಿ ವ್ಯವಹಾರ – ಇವೆಲ್ಲ ಸಾಧಿಸಬೇಕಾಗಿದೆ. ಆದರೆ ಈ ನಿಟ್ಟಿನಲ್ಲಿ ಯಾರೂ ಚಿಂತನೆ ನಡೆಸುತ್ತಲೇ ಇಲ್ಲ. ಇಂದು ನಮ್ಮ ಪ್ರಮುಖ ಬ್ಯಾಂಕುಗೆಳು ಅಖಿಲ ಭಾರತ ವ್ಯಾಪ್ತಿಯುಳ್ಳವು. ಶಾಖೆಗಳ ವಿಸ್ತರಣೆಯಲ್ಲಿ ಯಾವುದೇ ವೈಜ್ಞಾನಿಕ ದೃಷ್ಟಿಯಿಲ್ಲ. ಅತಿವ್ಯಾಪ್ತಿ ಹಾಗೂ ಅವ್ಯಾಪ್ತಿ ದೋಷಗಳು ಮುಂದುವರಿದಿವೆ. ಬ್ಯಾಂಕುಗಳನ್ನು ಪ್ರಾದೇಶಿಕ ಅಥವಾ ಕಾರ್ಯಭಾರಾನುಗುಣವಾಗಿ ಪುನರ್ವ್ಯವಸ್ಥೆಗೆ ಒಳಪಡಿಸುವ, ಅವುಗಳ ಸಂರಚನೆಗಳನ್ನು ಬದಲಿಸುವ ಯತ್ನ ನಡೆದಿಲ್ಲ. ಪ್ರಮುಖ ಬ್ಯಾಂಕುಗಳು ಕೇಂದ್ರ ಸರ್ಕಾರದ ಒಡೆತನ ಸಂಸ್ಥೆಗಳಾದ್ದರಿಂದ, ಒಕ್ಕೂಟ ಸರ್ಕಾರದ ಭಾಷೆಯಾದ ಹಿಂದಿಯನ್ನೇ ಇವು ಬಳಸಬೇಕೆಂಬ ಜನಹಿತದೂರವಾದ ನೀತಿಯನ್ನು ಮೊಂಡುತನದಿಂದ ಹಾಗೂ ಹಿಂಸಾತ್ಮಕವಾಗಿ ಅನುಷ್ಠಾನಗೊಳಿಸಲು ಯತ್ನಿಸಲಾಗುತ್ತಿದೆ. ದ್ವಿದಶಮಾನೋತ್ಸವ ಕಾರ್ಯಕ್ರಮಗಳಲ್ಲಿ ಬರೀ ಘೋಷಣೆಗಳನ್ನು ಕೂಗುತ್ತ, ಬೆನ್ನು ತಟ್ಟಿಕೊಳ್ಳುವ ಬದಲು ನಿಜವಾದ ಮುನ್ನಡೆ ಸಾಧಿಸುವುದು ಹೇಗೆಂಬ ಚಿಂತನೆ ನಡೆಸುವುದು ಒಳ್ಳೆಯದು.

20.

ಸೆಪ್ಟೆಂಬರ್ 1989
ವಿದೇಶಿ ಬ್ಯಾಂಕುಗಳು

ಪರದೇಶಗಳಲ್ಲಿ ಭಾರತೀಯ ಬ್ಯಾಂಕುಗಳ ಚಟುವಟಿಕೆಗಳನ್ನು ಕುರಿತಂತೆ "ಬ್ಯಾಂಕಿಂಗ್ ಪ್ರಪಂಚ'ದ ಈ ಸಂಚಿಕೆಯಲ್ಲಿ ಎರಡು ಲೇಖನಗಳು ಪ್ರಕಟವಾಗಿವೆ. ಮೊದಲನೆಯದರ – ಲೇಖಕರು ಭಾರತೀಯ ಸ್ಟೇಟ್ ಬ್ಯಾಂಕಿನ ಒಬ್ಬ ಕಿರಿಯ ಉದ್ಯೋಗಿ, ಎರಡನೆಯದರ ಲೇಖಕರು ಬ್ಯಾಂಕಿನ ಬೆಂಗಳೂರು (ಕರ್ನಾಟಕ) ವಲಯದ ಪ್ರಧಾನ ವ್ಯವಸ್ಥಾಪಕರು. ಹೀಗೆ, ಕಿರಿಯ ಹಾಗೂ ಹಿರಿಯ – ಎರಡು ಸ್ತರಗಳ ಇಬ್ಬರು ಬರೆದಿರುವ ಲೇಖನಗಳು ವಿಶೇಷ ಕುತೂಹಲ ಕೆರಳಿಸುವಂಥವಾಗಿವೆ. ಮೊದಲನೆಯ ಲೇಖನದಲ್ಲಿ ವಿದೇಶದಲ್ಲಿರುವ ಭಾರತೀಯ ಬ್ಯಾಂಕುಗಳು ಎದುರಿಸಬೇಕಾಗಿರುವ ಕಷ್ಟ ನಷ್ಟಗಳ ಹಾಗೂ ಅವುಗಳ ಕುಂದುಕೊರತೆಗಳ ವಿವೇಚನೆಯಿದೆ. ಅನ್ಯ ದೇಶಗಳಲ್ಲಿ ಭಾರತೀಯ ಬ್ಯಾಂಕಿಂಗ್ ವ್ಯವಹಾರವರ್ಧನೆಗೆ ಕೈಗೊಳ್ಳಬೇಕಾದ ಕ್ರಮಗಳನ್ನೂ ಸೂಚಿಸಲಾಗಿದೆ. ಭಾರತೀಯ ಬ್ಯಾಂಕುಗಳ ವಿದೇಶಿ ಶಾಖೆಗಳು ಆರಂಭದಲ್ಲಿ ಪ್ರಧಾನವಾಗಿ ಪರಂಪರಾಗತ ವ್ಯವಹಾರವನ್ನೇ ಮಾಡುತ್ತಿದ್ದರೂ, ಮುಖ್ಯವಾಗಿ ಭಾರತೀಯ ಸಂಜಾತ ಗ್ರಾಹಕರಿಗೇ ಹೆಚ್ಚಿನ ಗಮನ ನೀಡುತ್ತಿದ್ದರೂ, ಈಚೆಗೆ ಅವುಗಳ ವ್ಯವಹಾರಕ್ಕೆ ಹೊಸ ಹೊಸ ಆಯಾಮಗಳು ಮೂಡಿರುವುದನ್ನು ಎರಡನೆಯ ಲೇಖನದಲ್ಲಿ ಗುರುತಿಸಲಾಗಿದೆ. ಅವುಗಳ ವಾಣಿಜ್ಯ ಉದರಿ ವ್ಯವಹಾರಕ್ಕೆ ಸಂಬಂಧಿಸಿದ ನಷ್ಟಸಂಭಾವ್ಯತೆಯನ್ನು ವಿಶ್ಲೇಷಿಸುವ ಈ ಲೇಖನ, ಸಮರ್ಥ ಹಾಗೂ ಅನುಭವಿ ಅಧಿಕಾರಿಯೊಬ್ಬರ ಬಹುಮುಖ ಚಿಂತನದ ವಿಶಿಷ್ಟ ಫಲವಾಗಿದೆ.

ನಮ್ಮ ಬ್ಯಾಂಕುಗಳು ವಿದೇಶಗಳಲ್ಲಿ ತಮ್ಮ ರೆಕ್ಕೆ ಪುಕ್ಕ ಬಲಿಸಿಕೊಂಡು ಉಡ್ಡಯನ ನಿರತವಾಗಿರುವುದರ ವಿವೇಚನೆಯೊಂದಿಗೆ, ಭಾರತದಲ್ಲಿ ವಿದೇಶಿ ಬ್ಯಾಂಕುಗಳ ಕಲಾಪಗಳ ಒಳಿತು – ಕೆಡುಕುಗಳನ್ನೂ, ಅವುಗಳ ಮೇಲೆ ಎಷ್ಟರ ಮಟ್ಟಿನ ನಿಯಂತ್ರಣ ಅಗತ್ಯವೆಂಬುದನ್ನೂ, ಅವುಗಳ ಭವಿಷ್ಯವನ್ನೂ ಕುರಿತು ಚಿಂತನೆ ನಡೆಸಬೇಕಾದ ಕಾಲವೀಗ ಬಂದಿದೆ. ಭಾರತದಲ್ಲಿರುವ ವಿದೇಶಿ ಬ್ಯಾಂಕುಗಳು ಒಂದು ರೀತಿಯಲ್ಲಿ ಗತಕಾಲದ ಸಾಮ್ರಾಜ್ಯಶಾಹಿಯ ಪಳೆಯುಳಿಕೆಗಳನ್ನಬೇಕು. ಪಳೆಯುಳಿಕೆಗಳಾದರೂ ಅವೇನೂ ಫಾಸಿಲುಗಳಾಗಿಲ್ಲ; ಗಳಿಕೆಯಲ್ಲಿ ಹಿಂದೆ ಬಿದ್ದೂ ಇಲ್ಲ. ಅವು ಅತ್ಯಂತ ಜೀವಂತವಾಗಿ, ಕೈಕಾಲು ಆಡಿಸುತ್ತ, ತಮ್ಮ ಇರವನ್ನು ಎಲ್ಲರಲ್ಲೂ ಪ್ರಚುರಪಡಿಸುತ್ತಿವೆ. ವಿದೇಶಿ ಬ್ಯಾಂಕುಗಳಲ್ಲೊಂದಾದ ಸಿಟಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈಚೆಗೆ ಹೇಳಿರುವಂತೆ,

ಭಾರತದಲ್ಲಿರವ ವಿದೇಶಿ ಬ್ಯಾಂಕುಗಳು ಇಲ್ಲಿಯ ಇಡೀ ಬ್ಯಾಂಕಿಂಗ್ ವ್ಯವಸ್ಥೆಯ ಕೇವಲ ಶೇ2ರಷ್ಟು ಮಾತ್ರವಾದರೂ, ಈ ಅಲ್ಪಗಾತ್ರಕ್ಕೆ ಮೀರಿದ ಪ್ರಮಾಣದಲ್ಲಿ ಅವಕ್ಕೆ ಪ್ರಚಾರ ಸಿಗುತ್ತಿದೆ. ಅವು ಮುಖ್ಯವಾಗಿ ನಮ್ಮ ಮಹಾ ನಗರಗಳಲ್ಲಿ ಕಲಾಪ ನಡೆಸುತ್ತಿರುವುದು ಈ ಆತಿ ಪ್ರಚಾರಕ್ಕೆ ಮುಖ್ಯ ಕಾರಣ.

ನಡುಗಡ್ಡೆಗಳು

ಭಾರತದಲ್ಲಿ ಬ್ಯಾಂಕಿಂಗ್ ಪ್ರಧಾನವಾಗಿ ಸಾರ್ವಜನಿಕ ವಲಯಕ್ಕೆ ಸೇರಿದ್ದು. ಇದರ ನಡುವೆ ಖಾಸಗಿ ಬ್ಯಾಂಕುಗಳು ಸಣ್ಣ ನಡುಗಡ್ಡೆಗಳಿದ್ದ ಹಾಗೆ. ಸುತ್ತಲೂ ಬಡಿಯುತ್ತಿರುವ ಸಾರ್ವಜನಿಕ ಬ್ಯಾಂಕಿಂಗಿನ ಅಲೆಗಳಿಂದಾಗಿ ಅವುಗಳ ದಡಗಳು ಕ್ರಮಕ್ರಮವಾಗಿ ಕೊಚ್ಚಿ ಹೋಗುತ್ತಿವೆ. ಒಂದೊಂದಾಗಿ ಅವು ಈ ಮಹಾ ಸಮುದ್ರದಲ್ಲಿ ಲೀನವಾಗಿ ಹೋಗುತ್ತಿವೆ. ಒಂದು ವೇಳೆ ಅವು ಈ ಮಹಾ ವೀಚಿರಾಶಿಯನ್ನೆದುರಿಸಿ ಗೆದ್ದು ನಿಂತು ಬೆಳೆದರೂ, ಕಡಲಿನ ಕಪ್ಪೆಚಿಪ್ಪುಗಳೇ ಮುಂತಾದವನ್ನು ಕೂಡಿಸಿಕೊಂಡು ದೊಡ್ಡ ಹವಳದ್ವೀಪಗಳಾಗಿ ಪರಿಣಮಿಸಬಹುದಾದರೂ ಸ್ವತಂತ್ರ ಅಸ್ತಿತ್ವ ಉಳ್ಳವುಗಳಾಗಿಯೇ ಉಳಿಯುವುವೆಂದು ಹೇಳಲಾಗದು. ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭ. ಒಂದು ಮಿತಿಯನ್ನು ಮೀರಿ ಬೆಳೆದ ಕೂಡಲೇ ಅವು ಖಾಸಗಿ ವಲಯದಲ್ಲಿ ಮುಂದುವರಿಯತಕ್ಕದ್ದಲ್ಲ. ಎಂದು ಸರ್ಕಾರ ಬಗೆದು ಅವನ್ನು ರಾಷ್ಟ್ರೀಕರಿಸಬಹುದು. ಎರಡನೆಯ ಒಬ್ಬೆಯಲ್ಲಿ ಸರ್ಕಾರ ಕೆಲವು ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ್ದನ್ನು ಇಲ್ಲಿ ನೆನೆಯುಬಹುದು. ಈ ನೀತಿ ಒಳ್ಳೆಯದೇ, ಅಲ್ಲವೇ ಎಂಬುದನ್ನು ಚರ್ಚಿಸುವುದು ಈಗ ನಮ್ಮ ಉದ್ದೇಶವಲ್ಲ.

ಭಾರತದಲ್ಲಿರುವ ವಿದೇಶಿ ಬ್ಯಾಂಕುಗಳೂ ಖಾಸಗಿ ಬ್ಯಾಂಕುಗಳೇ. ಇವೂ ನಡುಗಡ್ಡಗಳೇ. ಇವು ನಮ್ಮದೇ ಆದ ಬಹುತೇಕ ಖಾಸಗಿ ಬ್ಯಾಂಕುಗಳ ಹಾಗೆ ಕ್ರಮಕ್ರಮವಾಗಿ ಕೊಚ್ಚಿ ಹೋಗುವ ಪ್ರಶ್ನೆಯಿಲ್ಲ. ಇವು ರಾಷ್ಟ್ರೀಕೃತ ಸಂಸ್ಥೆಗಳ ಕಡಲಿನ ನಡುವೆ ಸಡ್ಡು ಹೊಡೆದು ನಿಂತು ಬೆಳೆಯುವ ಸಾಮರ್ಥ್ಯ ಉಳ್ಳವು. ಇದಕ್ಕೆ ಮುಖ್ಯ ಕಾರಣವೆಂದರೆ, ಇವುಗಳ ಒಡೆತನ ಇರುವುದು ಇಲ್ಲಿಲ್ಲ, ಅನ್ಯ ದೇಶಗಳಲ್ಲಿ. ಇವೆಲ್ಲ ಮುಂದುವರಿದ ದೇಶಗಳಲ್ಲಿ ಸ್ಥಾಪಿತವಾದ ಬ್ಯಾಂಕುಗಳ ಶಾಖೆಗಳು. ಭಾರತದಲ್ಲಿಂದು ಇಪ್ಪತ್ತೊಂದು ವಿದೇಶಿ ಬ್ಯಾಂಕುಗಳ ನೂರನಲವತ್ತು ಶಾಖೆಗಳು ಕೆಲಸ ಮಾಡುತ್ತಿವೆ. ಇವು ಭಾರತೀಯ ಬ್ಯಾಂಕುಗಳಿಗಿಂತ ಹೆಚ್ಚು ದಕ್ಷವಾಗಿವೆಯೆಂಬುದರಲ್ಲಿ ಸಂದೇಹವಿಲ್ಲ. ಈ ಬ್ಯಾಂಕುಗಳು ಒಳ್ಳೆಯ ಲಾಭಗಳನ್ನೂ ಗಳಿಸುತ್ತಿವೆ. 1984ರಲ್ಲಿ ಇವು ಗಳಿಸಿದ ಒಟ್ಟು ಲಾಭ ರೂ.27 ಕೋಟಿಯಾದರೆ, 1987ರ ವೇಳೆಗೆ ಇದು ರೂ.66.49 ಕೋಟಿಗೆ ಏರಿತು. ಈ ಬೆಳವಣಿಗೆ ಗಮನಾರ್ಹ.

ವಿದೇಶಿ ಬ್ಯಾಂಕುಗಳ ಉದರಿತೇವಣಿ ಅನುಪಾತ, ಸರಾಸರಿ ಭಾರತೀಯ ವಾಣಿಜ್ಯ ಬ್ಯಾಂಕಿನದಕ್ಕಿಂತ ಅಧಿಕ. ವಿದೇಶಿ ಬ್ಯಾಂಕೊಂದರ ಗ್ರಾಹಕರೆಂದುಕೊಳ್ಳುವುದು ಅನೇಕರಿಗೆ ಹೆಮ್ಮೆಯ ಸಂಗತಿ.

ಒಳಿತು–ಕೆಡುಕು

ತಮ್ಮ ವಿದೇಶಿ ಒಡೆತನದಿಂದಾಗಿ ಇವು ಭಾರತದಲ್ಲಿ ಸಂಪಾದಿಸಿದ ಲಾಭದ ಗಮನಾರ್ಹ ಭಾಗ ಇಲ್ಲಿಂದ ಹರಿದುಹೋಗುತ್ತಿದೆಯೆಂಬುದು ಇವುಗಳ ಬಗ್ಗೆ ಒಂದು ಟೀಕೆ. ಇವು ವಿದೇಶಿ ಹಿತಗಳನ್ನು ಬೆಳಸುವ ಸಾಧನಗಳಾಗಿವೆಯೆಂದೂ ಆರೋಪ. ಭಾರತೀಯ ವಾಣಿಜ್ಯ ಬ್ಯಾಂಕುಗಳೊಂದಿಗೆ ಸ್ಪರ್ಧಿಸಿ ಅವುಗಳ ವ್ಯವಹಾರ ವೆಷ್ಟನ್ನೋ ಇವು ಗಿಟ್ಟಿಸಿಕೊಳ್ಳುತ್ತಿವೆಯೆಂಬುದೂ ಅಸಮಾಧಾನಕ್ಕೆ ಕಾರಣ.

ವಿದೇಶಿ ಬ್ಯಾಂಕುಗಳು ಭಾರತೀಯ ಬ್ಯಾಂಕುಗಳಿಗೆ ಇಲ್ಲದ ಅನೇಕ ಅನುಕೂಲಗಳನ್ನು ಹೊಂದಿವೆಯೆಂಬುದು ಒಂದು ಆಕ್ಷೇಪ. ವಿದೇಶಿ ಬ್ಯಾಂಕುಗಳ ಒಂದು ದೊಡ್ಡ ಅನುಕೂಲವೆಂದರೆ, ತೀರ್ಮಾನವನ್ನು ತೆಗೆದುಕೊಳ್ಳುವುದರಲ್ಲಿ ಇವಕ್ಕಿರುವ ಸ್ವಾತಂತ್ರ್ಯ. ಇವು ಹೆಚ್ಚಿನ ಸ್ವಾಯತ್ತತೆ ಪಡೆದ ಸಂಸ್ಥೆಗಳು, ಭಾರತದ ರಾಷ್ಟ್ರೀಕೃತ ಬ್ಯಾಂಕುಗಳು ಎಷ್ಟೇ ದಕ್ಷವಾಗಿರಲಿ, ಸರ್ಕಾರ ಹಾಕಿದ ಗೆರೆಯನ್ನು ಅವು ದಾಟಲಾರವು. ಸಾಮಾಜಿಕ ಗುರಿಗಳ ಹೆಸರಿನಲ್ಲಿ ಅನೇಕವೇಳೆ ಬೇ–ಬ್ಯಾಂಕಿಂಗ್ ರೀತಿಯಲ್ಲಿ ಅವು ಕಾರ್ಯಪ್ರವೃತ್ತವಾಗಬೇಕಾಗುತ್ತದೆ. ಲಕ್ಷ್ಮಣ ರೇಖೆಯಂತೆಯೇ ಇದು ಕೂಡ ಅಪಾಯವನ್ನು ತಂದೊಡ್ಡಬಲ್ಲುದು. ವಿದೇಶಿ ಬ್ಯಾಂಕುಗಳ ವಿಚಾರದಲ್ಲಿ ಭಾರತೀಯ ಬ್ಯಾಂಕುಗಳು ಅಸೂಯೆ ಪಡುವುದರಲ್ಲಿ, ಬಲು ಅಗ್ಗವಾಗಿ ಹೊಲ ಮೇಯಲು ಇವನ್ನು ಬಿಡಲಾಗಿದೆಯೆಂದು ಆಕ್ಷೇಪಿಸುವುದರಲ್ಲಿ, ಅರ್ಥವಿಲ್ಲದೆ ಇಲ್ಲ. ವಿದೇಶಿ ಎಂಬ ಒಂದೇ ಕಾರಣದಿಂದಾಗಿ ಇವು ಕೆಲವು ಕಟ್ಟುಪಾಡುಗಳಿಂದ ಮುಕ್ತವಾಗಿ ನಡೆಯಲು ಅವಕಾಶ ನೀಡುವುದು, ಮಾತು ಮಾತಿಗೂ ಇವು ಹೆಚ್ಚು ದಕ್ಷವೆಂದೂ ಲಾಭದಾಯಕವಾಗಿ ಕೆಲಸ ಮಾಡುತ್ತಿವೆಯೆಂದೂ ಹೇಳುವುದು ಸರಿಯೆ? ಎಂಬುದು ಯೋಚಿಸಬೇಕಾದ ಸಂಗತಿ. ರಾಷ್ಟ್ರೀಕೃತ ಬ್ಯಾಂಕುಗಳು ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಹೆಚ್ಚಿನ ಪಾತ್ರವಹಿಸಬೇಕೆಂದು ನಿಬಂಧಿಸಿ, ಹಾಗಿದ್ದೂ ಅವು ಲಾಭ ಸಂಪಾದಿಸಬೇಕೆಂದು ನಿರೀಕ್ಷಿಸಲಾಗುತ್ತಿದೆ. ವಿದೇಶಿ ಬ್ಯಾಂಕುಗಳಿಗೆ ಆ ನಿರ್ಬಂಧವಿಲ್ಲ. ಅಂತೆಯೇ ಇವು ಹೆಚ್ಚು ಲಾಭ ಗಳಿಸುತ್ತಿವೆ ಎನ್ನಬಹುದು. ಭಾರತೀಯ ಬ್ಯಾಂಕುಗಳು ಗ್ರಾಮ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯಬೇಕಾಗಿದೆ. ಹೆಚ್ಚು ಲಾಭ ತರುವ ಪಟ್ಟಣ ಪ್ರದೇಶಗಳಿಗೆ

ವಿದೇಶಿ ಬ್ಯಾಂಕುಗಳು ಸೀಮಿತ. ನಷ್ಟ ಎದುರಿಸಬೇಕಾದ ತೊಂದರೆಯಿಲ್ಲ. ಪ್ರತಿಯಾಗಿ, ಭಾರತೀಯ ಬ್ಯಾಂಕುಗಳ ಲಾಭವನ್ನು ಇವು ಪಡೆದುಕೊಳ್ಳುತ್ತಿವೆ. ಭಾರತೀಯ ಬ್ಯಾಂಕುಗಳ ಪ್ರಗತಿಗೆ ಅನುಗುಣವಾಗಿ ಇವು ಪ್ರಗತಿ ಹೊಂದಲು ಅವಕಾಶ ನೀಡಬೇಕೇ ವಿನಾ, ಇವನ್ನು ಅನಿರ್ಬಂಧಿತವಾಗಿ ಮುಂದುವರಿಯಗೊಡಬಾರದೆಂದು ಹೇಳಲಾಗಿದೆ. ಇದು ನ್ಯಾಯವೇ. ವಿದೇಶಿ ಹಾಗೂ ಭಾರತೀಯ ಬ್ಯಾಂಕುಗಳ ನಡುವೆ ಹಲವು ಕ್ಷೇತ್ರಗಳಲ್ಲಿ ಸಹಯೋಗ ಏರ್ಪಡಿಸಬೇಕೆಂದೂ ವಾದಿಸಲಾಗಿದೆ. ಗುತ್ತಿಗೆ ವ್ಯವಹಾರ, ಋಣಾಭಿಕರಣ ಮುಂತಾದ ಕ್ಷೇತ್ರಗಳಲ್ಲಿ ವಿದೇಶಿ ಬ್ಯಾಂಕುಗಳು ತೊಡಗಬೇಕಾದರೆ ಸ್ಥಳೀಯ ಬ್ಯಾಂಕುಗಳೊಂದಿಗೆ ಜಂಟಿ ಉದ್ಯಮಕ್ಕೆ ಒಪ್ಪಬೇಕೆಂಬುದು ಸೂಚಿಸಲಾಗಿರುವ ಒಂದು ಷರತ್ತು. ವಿದೇಶಿ ಬ್ಯಾಂಕುಗಳು ಇಂಥ ಪ್ರಯೋಗಕ್ಕೆ ಒಪ್ಪಲು ಸಿದ್ಧವಾಗಿದ್ದಾವು. ಆವುಗಳ ಮುಖ್ಯ ಗುರಿ ಲಾಭ ಎನ್ನುವುದಾದರೆ ಲಾಭ ದೊರಕಿಸಿಕೊಡುವ ಯಾವುದೇ ವ್ಯವಸ್ಥೆಯನ್ನು ಅವು ಬೇಡವೆನ್ನಲು ಕಾರಣರವಿರಲಾರದು.

ನಿಯಂತ್ರಣ

ಭಾರತೀಯ – ಬ್ಯಾಂಕುಗಳು ತಮ್ಮ ನಿಧಿಗಳಲ್ಲಿ ಗಮನಾರ್ಹ ಭಾಗವನ್ನು ಅದ್ಯತಾವಲಯಕ್ಕೆಂದು ತೆಗೆದಿಡಬೇಕೆಂಬ ನಿಬಂಧನೆ ಇರುವಾಗ, ವಿದೇಶಿ ಬ್ಯಾಂಕುಗಳು ಏಕೆ ಇಂಥ ಹೊಣೆಯಿಂದ ವಿನಾಯಿತಿ ಪಡೆಯಬೇಕು? ಎಂಬ ಪ್ರಶ್ನೆ ಸಹಜವೇ. ಇಲ್ಲಿಯ ವ್ಯವಹಾರದ ಲಾಭ ಇವಕ್ಕೆ ಬೇಕಾದರೆ ಇಲ್ಲಿಯವರ ಆರ್ಥಿಕ ಪ್ರಗತಿಯಲ್ಲೂ, ದೇಶದ ಅಭ್ಯುದಯ ಕಾರ್ಯದಲ್ಲೂ ಇವು ಪಾಲ್ಗೊಳ್ಳಬೇಕು ಎಂದು ನಿರೀಕ್ಷಿಸುವುದು ತಪ್ಪಲ್ಲ. ಆದರೆ ಭಾರತೀಯ ಬ್ಯಾಂಕುಗಳಿಗೆ ನಿಗದಿಪಡಿಸಲಾಗಿರುವಷ್ಟು ತ್ಯಾಗವನ್ನು ಇವುಗಳಿಂದ ನಿರಿಕ್ಷಿಸಬಾರದೆಂಬ ವಾದವೂ ಇದೆ. ತಮ್ಮ ಒಟ್ಟು ಸಾಲ ನೀಡಿಕೆಯಲ್ಲಿ ಶೇ. 10ರಷ್ಟನ್ನು ಇವು ಆದ್ಯತಾವಲಯಕ್ಕೆ ಮೀಸಲಿಡಬೇಕೆಂಬ ನಿಯಮವು ಮಾಡಲಾಗಿದೆ. ಈಗ ಇದನ್ನು ಶೇ.15ಕ್ಕೆ ಏರಿಸುವ ನಿರ್ಣಯವಾಗಿದೆ. ಇದಕ್ಕೆ ಕಾಲ ನಿಗದಿಯೇನನ್ನೂ ಮಾಡದಿದ್ದರೂ, ಇನ್ನು ಮೂರು ವರ್ಷಗಳಲ್ಲಿ ಈ ಮಟ್ಟ ಸಾಧಿಸಲಾದೀತೆಂಬುದು ನಿರೀಕ್ಷೆ.

ಭಾರತೀಯ ಬ್ಯಾಂಕುಗಳ ಬಂಡವಾಳ ತಳವನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಕಳೆದ ವರ್ಷ ರಾಷ್ಟ್ರೀಕೃತ ಬ್ಯಾಂಕುಗಳ ಪಾವತಿಯಾದ ಬಂಡವಾಳವನ್ನು ರೂ.200 ಕೋಟಿಯಷ್ಟು ಏರಿಸಲಾಯಿತು. ಈ ವರ್ಷ ಇದನ್ನು ಇನ್ನೂ ರೂ.400 ಕೋಟಿಯಷ್ಟು ಹೆಚ್ಚಿಸಬೇಕೆಂದು ಆಲೋಚಿಸಲಾಗಿದೆ. ವಿದೇಶಿ ಬ್ಯಾಂಕುಗಳ ಒಟ್ಟು ಋಣಗಳ ಬಂಡವಾಳದ ಭಾಗ ಶೇ.2ರಷ್ಟು, ಇದನ್ನು ಶೇ.4ಕ್ಕೆ ಏರಿಸಬೇಕೆಂಬುದು

ಸರ್ಕಾರದ ಅಪೇಕ್ಷೆ. ವಿದೇಶಿ ಬ್ಯಾಂಕುಗಳು ಇದಕ್ಕೆ ಒಪ್ಪಿಕೊಂಡಿವೆ. ಈ ಏರಿಕೆಗೂ ಸುಮಾರು ಮೂರು ವರ್ಷ ಅವಕಾಶ ಇದ್ದಿತೆನ್ನಲಾಗಿದೆ.

ರಾಷ್ಟ್ರೀಕರಣ?

ಪ್ರಮುಖ ಭಾರತೀಯ ಬ್ಯಾ0ಕುಗಳನ್ನು ರಾಷ್ಟ್ರೀಕರಿಸಿದಾಗ ವಿದೇಶಿ ಬ್ಯಾಂಕುಗಳನ್ನೂ ರಾಷ್ಟ್ರೀಕರಿಸಬೇಕೆಂಬ ಸಲಹೆ ಬಂದಿತ್ತು. ಆದರೆ ಸರ್ಕಾರ ಹಾಗೆ ಮಾಡಲಿಲ್ಲ. ವಿಮೆ ಸಂಪೂರ್ಣವಾಗಿ ರಾಷ್ಟ್ರೀಕೃತವಾಗಿದ್ದರೂ ಬ್ಯಾಂಕಿಂಗ್ ಹಾಗಾಗಿಲ್ಲ. ಸ್ಪರ್ಧೆಯ ಅಂಶವನ್ನು ಉಳಿಸಬೇಕೆಂಬುದೂ ಒಂದು ಉದ್ದೇಶವಾಗಿರಬಹುದು. ಭಾರತದ ಹಲವು ಕ್ಷೇತ್ರಗಳನ್ನು ವಿದೇಶಿ ಹಿತಗಳಿಗೆ ತೆರೆಯಬೇಕೆಂಬ ಅಂತರರಾಷ್ಟ್ರೀಯ ಒತ್ತಡ ಈಗ ಅಧಿಕವಾಗಿದೆ. ಅಮೆರಿಕ ಸರ್ಕಾರ ತನ್ನ ವ್ಯಾಪಾರ ಮತ್ತು ಸ್ಪರ್ಧಾತ್ಮಕತಾ ಅಧಿನಿಯಮದ 301ನೆಯ ಮಹಾ ಪ್ರಕರಣದ ಗದೆಯನ್ನು ಎತ್ತಿ ಹಿಡಿದು, ವಿಮೆ ಮುಂತಾದ ಕೆಲವು ಕ್ಷೇತ್ರಗಳನ್ನು ಭಾರತ ಇತರ ದೇಶಗಳ ಸಂಸ್ಥೆಗಳಿಗೆ ತೆರೆಯದಿದ್ದರೆ ಪ್ರತೀಕಾರ ಕ್ರಮ ತೆಗೆದುಕೊಳ್ಳುವುದಾಗಿ ಹೆದರಿಸಿದ ಪರಿಸ್ಥಿತಿಯಲ್ಲಿ ಭಾರತ ಸರ್ಕಾರ ವಿದೇಶಿ ಬ್ಯಾಂಕುಗಳನ್ನು ರಾಷ್ಟ್ರೀಕರಿಸುವ ಯೋಚನೆ ಮಾಡಲಾರದು. ಇವನ್ನು ಇನ್ನಷ್ಟು ನಿಯಂತ್ರಣಕ್ಕೊಳಪಡಿಸಿ ಸ್ಪರ್ಧೆಯ ವಾತಾವರಣವನ್ನು ಮುಂದುವರಿಯಗೊಟ್ಟು, ಇವುಗಳ ನವೋನ್ಮೇಷ ಪ್ರಯೋಗಗಳ ಭಾರತೀಯ ಬ್ಯಾಂಕುಗಳಿಗೂ ಹರಿಯುವ ಅವಕಾಶ ಮಾಡಿಕೊಡಬಹುದಾಗಿದೆ. ಅಂತೂ ಭಾರತದ ಜನಜೀವನದ ಮಹಾಪ್ರವಾಹದಿಂದ ವಿದೇಶಿ ಬ್ಯಾಂಕಗಳನ್ನು ಹೊರಗುಳಿಯಬಿಟ್ಟು ನಮ್ಮ ಹಿತಗಳನ್ನು ದುರ್ಲಕ್ಷಿಸುವ ಪರಿಸ್ಥಿತಿಯನ್ನು ಮಾತ್ರ ನಾವು ತಂದುಕೊಳ್ಳಬಾರದು.

21.

ಡಿಸೆಂಬರ್ 1989
ಹತ್ತು ಸಂಪುಟ

ಈ ಸಂಚಿಕೆಯೊಂದಿಗೆ 'ಬ್ಯಾಂಕಿಂಗ್ ಪ್ರಪಂಚ ಹತ್ತು ಸಂಪುಟಗಳನ್ನು ಮುಗಿಸುತ್ತಿದೆ. 'ಬ್ಯಾಂಕಿಂಗ್ ಪ್ರಪಂಚ'ದ ಮೊದಲ ಸಂಚಿಕೆಯ ಬಿಡುಗಡೆಯಾದದ್ದು 1980ರ ಜೂನ್ ತಿಂಗಳಿನಲ್ಲಿ. ಆದ್ದರಿಂದ ಮುಂದಿನ ವರ್ಷದ ಜೂನ್‌ನಲ್ಲಿ ಅದು ವಾಸ್ತವವಾಗಿ ಹನ್ನೊಂದನೆಯ ವರ್ಷದಲ್ಲಿ ಕಾಲಿಡುತ್ತದೆಯೆನ್ನಬಹುದು. ಆದರೆ ನಮ್ಮ ಎಣಿಕೆ ಚಾಂದ್ರ ಅಥವಾ ಸೌರಮಾಸಗಳನ್ನು ಅವಲಂಬಿಸಿದ್ದಲ್ಲ. ಈ ಹತ್ತು ವರ್ಷಗಳಲ್ಲಿ ಒಂದೆರಡು ಬಾರಿ ನಾವು ಸಂಚಿಕೆಗಳ ಪ್ರಕಟನೆಯ ಮಾಸಗಳನ್ನು ಬದಲಾಯಿಸಿದ್ದೇವೆ. ಅರ್ಧವಾರ್ಷಿಕವಾಗಿ ಆರಂಭವಾದ ಪತ್ರಿಕೆ 1986ರಲ್ಲಿ ತ್ರೈಮಾಸಿಕವಾಯಿತು. ಅದರ ಪರಿಣಾಮವಾಗಿ ಪತ್ರಿಕೆಯ ಸಂಚಿಕೆಗಳ ಪ್ರಕಟನೆಯ ತಿಂಗಳುಗಳನ್ನು ಮಾರ್ಚ್, ಜೂನ್, ಸೆಪ್ಟೆಂಬರ್ ಮತ್ತು ಡಿಸೆಂಬರ್ ಎಂದು ನಿರ್ಧರಿಸಲಾಯಿತು. ಈ ಲೆಕ್ಕಾಚಾರದಂತೆ ಹತ್ತನೆಯ ಸಂಪುಟದ ನಾಲ್ಕನೆಯ ಸಂಚಿಕೆಯನ್ನು ಈ ಡಿಸೆಂಬರ್ ತಿಂಗಳಿನ ಸಂಚಿಕೆಯೊಂದಿಗೆ ಕೊಟ್ಟಂತಾಗುತ್ತದೆ. ಮುಂದಿನ ಮಾರ್ಚ್ ತಿಂಗಳಿನದು ಹನ್ನೊಂದನೆಯ ಸಂಪುಟದ ಮೊದಲನೆಯ ಸಂಚಿಕೆ.

ಬ್ಯಾಂಕಿಂಗ್ ಪ್ರಪಂಚವನ್ನು ಆರಂಭಿಸಿದಾಗ ಈ ಪತ್ರಿಕೆ ಎಷ್ಟು ಕಾಲ ನಡೆದೀತೋ ಎಂಬ ಆತಂಕ ನಮ್ಮಲ್ಲಿತ್ತು. ಮೊದಲನೆಯದಾಗಿ ಲೇಖಕರ ಕೊರತೆ. ಹಣ ಮತ್ತು ಬ್ಯಾಂಕಿಂಗ್ ವಿಚಾರಗಳಿಗೇ ಮೀಸಲಾದ ಈ ಪತ್ರಿಕೆಗಾಗಿ ಈ ವಿಷಯಗಳನ್ನು ಕುರಿತು ಲೇಖನಗಳನ್ನು ಬರೆಯಬಲ್ಲವರು ಎಷ್ಟು ಮಂದಿ ಸಿಕ್ಕಾರು, ಅವರು ಎಷ್ಟು ಕಾಲ ನಮ್ಮೊಂದಿಗೆ ಸಹಕರಿಸಿಯಾರು ಎಂಬ ಬಗ್ಗೆ ಸಂದೇಹವಿತ್ತು. ಈ ಕ್ಷೇತ್ರ ಬಹಳ ಕಿರಿದಾದದ್ದಾದ್ದರಿಂದ ಇದನ್ನು ಅರ್ಥಶಾಸ್ತ್ರ ಕುರಿತ ಪತ್ರಿಕೆಯಾಗಿ ಮಾಡಿ ಇದರ ವ್ಯಾಪ್ತಿಯನ್ನು ವಿಸ್ತರಿಸುವುದು ಒಳ್ಳೆಯದು ಎಂದು ನಮಗೆ ಬುದ್ಧಿವಾದ ಹೇಳಿದವರೂ ಉಂಟು. ಆಗ ವಿಷಯಗಳ ಕೊರತೆ ಇರದು; ಹೆಚ್ಚಿನ ವಿಷಯಗಳನ್ನು ಕುರಿತು ಲೇಖನಗಳನ್ನು ಬರೆಯಬಹುದು,
ಬರೆಸಬಹುದು; ಹೆಚ್ಚು ಮಂದಿ ಓದುಗರನ್ನು ಇದು ತಲಪುವ ಹಾಗೆ ಮಾಡಬಹುದು; ಹೆಚ್ಚು ಜನರ ಬೆಂಬಲ ಪ್ರೋತ್ಸಾಹ ಪಡೆಯಬಹುದು ಎಂದು ಹೇಳಲಾಗುತ್ತಿತ್ತು.

ಪತ್ರಿಕೆಯ ಅಗತ್ಯ

ಅರ್ಥಶಾಸ್ತ್ರವನ್ನು ಕುರಿತಂತೆ ಕನ್ನಡದಲ್ಲಿ ಯಾವುದೇ ಪತ್ರಿಕೆ ಇಲ್ಲವೆಂಬುದು ನಿಜ. ಅಂಥ ಪತ್ರಿಕೆಯೊಂದರ ಅಗತ್ಯ ಬಹಳವಾಗಿದೆ ಎಂಬುದನ್ನೂ ನಾವು ಒಪ್ಪುತ್ತೇವೆ. ಆದರೆ ಬ್ಯಾಂಕಿಂಗ್ ಪ್ರಪಂಚ' ಹುಟ್ಟಿಕೊಂಡಿದ್ದೂ ಒಂದು

ನಿರ್ದಿಷ್ಟವಾದ ಸಂದರ್ಭದಲ್ಲಿ, ಒಂದು ಗೊತ್ತಾದ ಉದ್ದೇಶದ ನಾಧನೆಗಾಗಿ. ಈ ಎರಡು ದಶಕಗಳಲ್ಲಿ ಬ್ಯಾಂಕುಗಳ ಕಛೇರಿಗಳು ದೇಶದ ಉದ್ದಗಲಕ್ಕೂ ಹಬ್ಬಿವೆ. ಗ್ರಾಹಕರಿಗೆ ಪರಂಪರಾಗತ ಸೇವೆ ಸಲ್ಲಿಸುವುದರ ಜೊತೆಗೆ, ಅದನ್ನು ವಿಸ್ತರಿಸುವುದರ ಜೊತೆಗೆ, ಅದಕ್ಕೆ ಹಲವು ಮಗ್ಗಲುಗಳನ್ನು ಜೋಡಿಸುವುದರ ಜೊತೆಗೆ ಬ್ಯಾಂಕುಗಳು ಇಂದು ಜನಜೀವನವನ್ನು ಪರಿವರ್ತಿಸುವ ಮಹತ್ತರವಾದ ಕಾರ್ಯದಲ್ಲಿ ತೊಡಗಿವೆ. ಹೀಗಾಗಿ ಅವು ಇಂದು ಜನಜೀವನದಲ್ಲಿ ಹಾಸುಹೊಕ್ಕಾಗಿವೆ. ಇಂಥ ಸಂಸ್ಥೆಗಳು ಯಾವ ಭಾಷೆಯಲ್ಲಿ ವ್ಯವಹಾರ ಮಾಡಬೇಕು? ಒಂದು ಪ್ರದೇಶದ ಜನರು ಆಡುವ ಭಾಷೆಯಲ್ಲೇ – ಅಥವಾ ಆ ಭಾಷೆಯಲ್ಲೂ – ಅವು ವ್ಯವಹಾರ ನಡೆಸಬೇಕು ಎನ್ನುವುದಾದರೆ, ಅದಕ್ಕೆ ಭಾಷೆಯನ್ನು ಅಣಿಗೊಳಿಸುವ ಕಾರ್ಯವನ್ನು ಯಾರು ಮಾಡಬೇಕು? ಆ ಕ್ಷೇತ್ರದಲ್ಲಿ ನಿರತರಾದವರೇ ಇದರಲ್ಲಿ ಆಸಕ್ತಿ ತಳೆಯಬೇಕು. ಇದೊಂದು ಆಂದೋಲನವಾಗಬೇಕು. ಏಕೆಂದರೆ ಯಾವುವೋ ಕೆಲವು ಗೊತ್ತಾದ ನಮೂನೆಗಳನ್ನು ಆ ಭಾಷೆಗೆ ಅನುವಾದ ಮಾಡಿದರೆ, ಪಾರಿಭಾಷಿಕ ಪದಗಳನ್ನು ಭಾಷಾಂತರಿಸಿದರೆ ಈ ಕೆಲಸ ಮುಗಿದಂತಲ್ಲ. ಬ್ಯಾಂಕಿಂಗ್ ಪರಿಕಲ್ಪನೆ ಸದಾ ವಿಸ್ತರಿಸುತ್ತಿದೆ. ಅದು ಹೊಸ ಹೊಸ ಆಯಾಮಗಳನ್ನು ಕೂಡಿಸಿಕೊಳ್ಳುತ್ತಿದೆ. ಅದರ ಕ್ಷಿತಿಜಗಳು ದೂರದೂರ ಜಾರುತ್ತಿವೆ. ಪಾಶ್ಚಾತ್ಯ ಲೋಕದಲ್ಲಂತೂ ಬ್ಯಾಂಕಿಂಗ್ ಕ್ಷೇತ್ರ ಸ್ಫೋಟಗೊಳ್ಳುತ್ತಿದೆ; ಆದರೆ ಈ ಸ್ಫೋಟ ವಿನಾಶಕಾರಕವಲ್ಲ. ಇದೊಂದು ವಿನೂತನ ಹಾಗೂ ಅನುಸ್ಯೂತ ಸೃಷ್ಟಿಕಾರ್ಯ. ಇದರೊಂದಿಗೆ ಹೊಸ ಹೊಸ ಪರಿಭಾಷೆ ಸೃಷ್ಟಿಯಾಗುತ್ತಿದೆ. ಜೊತೆಗೆ ದೇಶದ ಆರ್ಥಿಕ ವಿಕಾಸವನ್ನು ಸಾಧಿಸುವ ಸಲುವಾಗಿ ಭಾರತದಲ್ಲಿ ಅನೇಕ ಹೊಸಹೊಸ ಯೋಜನೆಗಳನ್ನೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕ್ರಿಯಾವಿಧಿಗಳನ್ನು ರೂಪಿಸಲಾಗುತ್ತಿದೆ. ಇವನ್ನು ಕುರಿತ ಮೂಲಭೂತ ಅರಿವು ನಮ್ಮ ಭಾಷೆಯಲ್ಲಿ ಮೂಡದಿದ್ದರೆ ಇದನ್ನಾಧರಿಸಿದ ವ್ಯವಹಾರವನ್ನು ನಮ್ಮ ಭಾಷೆಯಲ್ಲಿ ಮಾಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಬ್ಯಾಂಕಿಂಗ್ ಕುರಿತಂತೆ ವಿಪುಲವಾಗಿ ಬೆಳೆಯುತ್ತಿರುವ ವಿಚಾರವೆಲ್ಲ ನಮ್ಮ ಭಾಷೆಯಲ್ಲೂ ಬರಬೇಕು. ಇದೊಂದು ನಿರಂತರ ಸೃಷ್ಟಿ ಕಾರ್ಯ. ಇದಕ್ಕೊಂದು ಕೇಂದ್ರ ಇರಬೇಕು. ಇದಕ್ಕೊಂದು ಮಾಧ್ಯಮವೂ ಇರಬೇಕು. ಇಂಥ ಚಿಂತನೆಯ ಫಲವೇ 'ಬ್ಯಾಂಕಿಂಗ್ ಪ್ರಪಂಚ.'

ಬ್ಯಾಂಕಿಂಗು ಇಂದು ಸಿದ್ಧಾಂತ – ಆಚರಣೆ – ಕಾನೂನುಗಳ ತ್ರಿವೇಣಿ ಸಂಗಮ. ಹಿಂದೆ ಹೇಳಿದ ಹಾಗೆ ಈ ಕ್ಷೇತ್ರದಲ್ಲಿ ಸತತವಾಗಿ ಪ್ರಯೋಗಗಳು ನಡೆಯುತ್ತಲೇ ಇವೆ. ಇದಕ್ಕೆ ಸಂಬಂಧಿಸಿದ ಅಪಾರ ಸಾಹಿತ್ಯ

ಸೃಷ್ಟಿಯ ಕಾರ್ಯ ಈ ಕ್ಷೇತ್ರದಲ್ಲಿ ನಿರತರಾದವರಿಂದಲೇ ನಡೆಯಬೇಕು. ಆದ್ದರಿಂದ ಬ್ಯಾಂಕಿಂಗ್ ಪ್ರಪಂಚಕ್ಕೆ ಲೇಖನಗಳನ್ನು ಬ್ಯಾಂಕಿಂಗ್ ಉದ್ಯೋಗ ನಿರತರೇ ಬರೆಯಬೇಕು. ಈ ಹತ್ತು ವರ್ಷಗಳಲ್ಲಿ ಅನೇಕ ಬ್ಯಾಂಕ್ ಉದ್ಯೋಗಿಗಳು ಬ್ಯಾಂಕಿಂಗ್ ಪ್ರಪಂಚಕ್ಕಾಗಿ ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ಬ್ಯಾಂಕಿಂಗ್ ಪ್ರಪಂಚದ ಲೇಖನದಾರರ ಒಂದು ತಂಡವೇ ಸೃಷ್ಟಿಯಾಗಿದೆ. ಇದರಿಂದ ಬ್ಯಾಂಕಿಂಗ್ ಸಾಹಿತ್ಯ ಸಮೃದ್ಧವಾಗಿರುವುದಷ್ಟೇ ಅಲ್ಲ, ಕನ್ನಡದ ಬೆಳವಣಿಗೆಗೆ ಸಹಾಯ ವಾಗಿದೆ; ವಿಶಿಷ್ಟ ಪರಿಭಾಷೆಯ ಸೃಷ್ಟಿಗೆ ನೆರವಾಗಿದೆ.

ಲೇಖನ ಕಾರಖಾನೆ

ಆದರೆ ಈ ಕೆಲಸ ವ್ಯವಸ್ಥಿತವಾಗಿ ನಡೆಯಬೇಕೆಂಬ ಉದ್ದೇಶದಿಂದ 1983ರಲ್ಲಿ ಬ್ಯಾಂಕಿಂಗ್ ವಿಷಯ ಕುರಿತ ಲೇಖನಾಕಾಂಕ್ಷಿಗಳಿಗೆ ತರಬೇತಿ ನೀಡಲು ಮೈಸೂರಿನಲ್ಲಿ ಒಂದು ಕಮ್ಮಟ ಏರ್ಪಡಿಸಲಾಗಿತ್ತು. ಕಮ್ಮಟದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಹಣ ಬ್ಯಾಂಕಿಂಗ್ ಕುರಿತ ಯಾವುದಾದರೊಂದು ವಿಷಯದಲ್ಲಿ ಲೇಖನ ಬರೆದು ತರಬೇಕೆಂದೂ, ಈ ಲೇಖನಗಳನ್ನು ಕಮ್ಮಟದಲ್ಲಿ ಓದಿ ವಿಮರ್ಶಿಸಿ ಇವಕ್ಕೊಂದು ರೂಪು ಕೊಡಬೇಕೆಂದೂ, ಇವಕ್ಕೆ ಸಂಬಂಧಿಸಿದಂತೆ ಪಾರಿಭಾಷಿಕ ಶಬ್ದಗಳನ್ನು ನಿರ್ಧರಿಸಬೇಕೆಂದೂ, ಇಂಗ್ಲಿಷಿನಲ್ಲಿರುವ ಬ್ಯಾಂಕಿಂಗ್ ಸಾಹಿತ್ಯವನ್ನು ಕನ್ನಡದಲ್ಲಿ ತರುವ ಪ್ರಯತ್ನ ಮಾಡಬೇಕೆಂದೂ, ಒಟ್ಟಿನಲ್ಲಿ ಕನ್ನಡದಲ್ಲಿ ಬ್ಯಾಂಕಿಂಗ್ ವ್ಯವಹಾರ ಮಾಡುವ ಕಾಲ ಬಂದಾಗ ಅದನ್ನು ನಿರ್ವಹಿಸಬಲ್ಲವರ ಪಡೆಯನ್ನು ನಿರ್ಮಿಸಬೇಕೆಂದೂ ಉದ್ದೇಶಿಸಲಾಗಿತ್ತು. ವಿವಿಧ ಬ್ಯಾಂಕುಗಳ ಪ್ರತಿನಿಧಿಗಳಿಂದ ಕೂಡಿದ ಈ ಕಮ್ಮಟ ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಯಶಸ್ವಿಯಾಯಿತು. ಒಂದು ರೀತಿ ಇಲ್ಲಿ ಅತ್ಯಂತ ಪ್ರಜಾತಂತ್ರಾತ್ಮಕವಾದ ಭಾಷೆಯೊಂದಿಗೆ ವಿಷಯದ ಅರಿವನ್ನೂ ಮೂಡಿಸುವ, ಬ್ಯಾಂಕುಗಳಲ್ಲಿ ಕನ್ನಡವನ್ನು ಜಾರಿಗೆ ತರುವುದು ಅವಶ್ಯವೂ ಇಂದಲ್ಲ ನಾಳೆ ಅನಿವಾರ್ಯವೂ ಆದದ್ದೆಂಬ ನಂಬಿಕೆಯನ್ನು ಉಂಟುಮಾಡುವ, ಕನ್ನಡದಲ್ಲಿ ವ್ಯವಹಾರ ಮಾಡಲು ಅಗತ್ಯವಾದ ಆತ್ಮವಿಶ್ವಾಸವನ್ನು ಅವರಲ್ಲಿ ಮೂಡಿಸುವ ಸಾಧನ ಇದೆಂಬುದು ಮನವರಿಕೆಯಾಯಿತು.

ಈ ಮೊದಲನೆಯ ಕಮ್ಮಟ ಮೂಡಿಸಿದ ಉತ್ಸಾಹದಿಂದಾಗಿ ಇನ್ನು ಮುಂದೆ ಪ್ರತಿ ಆರು ತಿಂಗಳುಗಳಿಗೆ ಒಂದರಂತೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಕಮ್ಮಟಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಅಂತೆಯೇ ಇದುವರೆಗೆ ತಪ್ಪದೆ ಕಮ್ಮಟಗಳು ಸರತಿಯಂತೆ ನಡೆಯುತ್ತ ಬರುತ್ತಿವೆ. ಇವು ಬ್ಯಾಂಕಿಂಗ್ ಪ್ರಪಂಚಕ್ಕೆ ತಕ್ಕ ಲೇಖನಗಳನ್ನು ಒದಗಿಸುವಲ್ಲಿ

ನೆರವಾಗಿವೆ. ಈ ಹತ್ತು ವರ್ಷಗಳಲ್ಲಿ ಸೃಷ್ಟಿಯಾಗಿರುವ ಬ್ಯಾಂಕಿಂಗ್ ಸಾಹಿತ್ಯ ವಿಪುಲವಾದ್ದು. ವೈವಿಧ್ಯಮಯವಾದ್ದು ಎಂಬ ನಂಬಿಕೆ ನಮಗಿದೆ. ಜೊತೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬಳಕೆಯಲ್ಲಿರುವ ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲಿ ಸಂವಾದಿಯಾದ ಪದಗಳನ್ನು ಸೃಷ್ಟಿಸುವುದರಲ್ಲಿ, ರೂಪಿಸುವುದರಲ್ಲಿ ಅಥವಾ ನಿರ್ಣಯಿಸುವಲ್ಲಿ ಕಮ್ಮಟಗಳು ನಿರತವಾಗಿವೆ. ಬ್ಯಾಂಕಿಂಗ್ ಕಮ್ಮಟದ ಒಂದು ಉಪೋತ್ಪನ್ನವೆಂದರೆ ಬ್ಯಾಂಕಿಂಗ್ ನಿಘಂಟು. ಇದರಲ್ಲಿ ಸುಮಾರು ಮೂರು ಸಾವಿರ ಇಂಗ್ಲಿಷ್ ಪದಗಳ ಅರ್ಥ, ವ್ಯಾಖ್ಯೆ, ವಿವರಣೆ ಮತ್ತು ಕನ್ನಡದ ಸಮಾನ ಪದಗಳನ್ನು ನೀಡಲಾಗಿದೆ. ವಿಶ್ವಕೋಶ ಸದೃಶವಾದ ಈ ಕೃತಿ ಅಪಾರ ಮನ್ನಣೆ ಪಡೆಯಿತು. ಇದನ್ನು ಪ್ರಕಟಿಸಿದ ಮೇಲೆ (1985) ಕೂಡ ಈ ಕಾರ್ಯ ಅವಿರತವಾಗಿ ಸಾಗಿದೆ. ನಿಘಂಟನ್ನು ಪರಿಷ್ಕರಿಸಿ ವಿಸ್ತರಿಸುವ ಅಗತ್ಯ ಈಗ ಉಂಟಾಗಿದೆ.

ಮೈಲಿಗಲ್ಲು

ಹತ್ತು ವರ್ಷ ತುಂಬುವ ಸಮಯ ಒಂದು ಮುಖ್ಯ ಘಟ್ಟ. ಇದೊಂದು ಮಹತ್ತ್ವದ ಮೈಲಿಗಲ್ಲು (ಕಿಮೀ ಕಲ್ಲು ಎನ್ನುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ). ಈ ಸಂದರ್ಭದಲ್ಲಿ ನಾವು ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕಾಗಿದೆ. ತಪ್ಪು ಒಪ್ಪುಗಳ ತಾಳೆ ನೋಡಬೇಕಾಗಿದೆ. ಗೊತ್ತುಗುರಿಗಳನ್ನು ಪರೀಕ್ಷೆಗೆ ಒಡ್ಡಬೇಕಾಗಿದೆ. ಸರಿಯಾದ ದಿಕ್ಕನ್ನು ತಿದ್ದಿ ನಿಷ್ಕರ್ಷಿಸಿಕೊಳ್ಳಬೇಕಾಗಿದೆ. 'ಬ್ಯಾಂಕಿಂಗ್ ಪ್ರಪಂಚ'ದ ಇದುವರೆಗಿನ ಮಾರ್ಗಕ್ರಮಣವನ್ನು ಪರಿಶೀಲಿಸಿ ಇದನ್ನು ಉತ್ತಮಪಡಿಸಲು ವಾಚಕರೂ ಅಭಿಮಾನಿಗಳೂ ನೀಡುವ ಸಲಹೆಗಳನ್ನು ನಾವು ಅತ್ಯಂತ ಆದರದಿಂದ ಸ್ವೀಕರಿಸುತ್ತೇವೆ. ಅವನ್ನು ಕಾರ್ಯಗತಗೊಳಿಸಲು ಯತ್ನಿಸುತ್ತೇವೆ.

ಉಪಯುಕ್ತ ಕೊಂಡಿ

ಬ್ಯಾಂಕಿಂಗ್ ಪ್ರಪಂಚ'ದ ವಾಚಕವೃಂದವನ್ನು ವಿಸ್ತರಿಸುವ ಪ್ರಶ್ನೆಯನ್ನೂ ಇಲ್ಲಿ ಪರಿಶೀಲಿಸಬಹುದಾಗಿದೆ. ಇದಕ್ಕೆ ಸಂಬಂಧಿಸಿದ್ದೆಂದರೆ 'ಬ್ಯಾಂಕಿಂಗ್ ಪ್ರಪಂಚ'ದ ಲೇಖನಗಳ ಮಟ್ಟದ ಪ್ರಶ್ನೆ. ಬ್ಯಾಂಕಿಂಗ್ ಪ್ರಪಂಚ' ಹೆಚ್ಚು ಜನಪ್ರಿಯವಾಗುವಂತೆ ಮಾಡಲು ಲೇಖನಗಳನ್ನು ಇನ್ನಷ್ಟು ಸರಳಗೊಳಿಸಿ ಅದರ ಸಂದೇಶವನ್ನು ಎಲ್ಲರಿಗೂ ತಲುಪಿಸಲು ಯತ್ನಿಸಬೇಕು ಎಂಬುದಾಗಿ ಹೇಳಲಾಗಿದೆ. ಲೇಖನಗಳನ್ನು ಕ್ಲಿಷ್ಟಗೊಳಿಸುವುದು ನಮ್ಮ ಉದ್ದೇಶವಲ್ಲ. ಆದರೆ ಜನಪ್ರಿಯ ಪತ್ರಿಕೆಗಳೊಂದಿಗೆ ಸ್ಪರ್ಧಿಸುವುದೂ ನಮ್ಮ ಇಚ್ಛೆಯಲ್ಲ. ಹಾಗೆಂದು ಸಂಶೋಧನ ಪತ್ರಿಕೆಯಂತೆ (ರಿಸರ್ಚ್ ಜರ್ನಲ್) ಇದನ್ನು ಹವಾನಿಯಂತ್ರಿತ ಪ್ರಯೋಗಶಾಲೆಗೆ, ಪಂಡಿತವರ್ಯರ ಅವಗಾಹನೆಯಷ್ಟಕ್ಕೆ ಸೀಮಿತಗೊಳಿಸುವುದೂ ನಮ್ಮ ಉದ್ದೇಶವಲ್ಲ. ಬ್ಯಾಂಕಿಂಗಿಗೆ

ಸಂಬಂಧಿಸಿದಂತೆ ಪರಿಭಾಷೆಯನ್ನು ಸೃಷ್ಟಿಸುವುದು, ಬ್ಯಾಂಕಿಂಗ್ ಪರಿಕಲ್ಪನೆಯನ್ನು ಮೂಡಿಸುವುದು, ಈ ಕ್ಷೇತ್ರದಲ್ಲಿ ನಿರತರಾದವರಿಗೆ ಅಗತ್ಯವಾದ ಪೂರಕ ಸಾಹಿತ್ಯವನ್ನು ಒದಗಿಸುವುದು 'ಬ್ಯಾಂಕಿಂಗ್ ಪ್ರಪಂಚ'ದ ಗುರಿ. ಇದು ಇತ್ತ ವಿದ್ವಾಂಸ ಪತ್ರಿಕೆಯೂ ಅಲ್ಲ. ಅತ್ತ ಜನಪ್ರಿಯ ಸಾಹಿತ್ಯ ಸೃಷ್ಟಿನಿರತವೂ ಅಲ್ಲ. ಇವೆರಡಕ್ಕೂ ನಡುವೆ ಅತ್ಯಂತ ಉಪಯುಕ್ತವಾದ ಕೊಂಡಿಯಂತೆ ಕಾರ್ಯ ನಿರ್ವಹಿಸುವುದು ಇದರ ಆಶಯ. ಈ ಅಗತ್ಯವನ್ನು ಪೂರೈಸುವ, ಈ ಕೊರತೆಯನ್ನು ತುಂಬುವ ಉದ್ದೇಶದಿಂದಲೇ ಈ ಪತ್ರಿಕೆಯನ್ನು ಆರಂಭಿಸಿದ್ದು. ಭಾರತದ ಬೇರೆ ಯಾವುದೇ ಭಾಷೆಯಲ್ಲಿ ಹಿಂದಿಯಲ್ಲಿ ಕೂಡ – ಇಂಥ ಕೆಲಸ ಮಾಡಿದ್ದು ನಮ್ಮ ಗಮನಕ್ಕೆ ಬಂದಿಲ್ಲ. ಈ ಅವಶ್ಯ ಕಾರ್ಯವನ್ನು ನಿರ್ವಹಿಸುತ್ತಿದ್ದೇವೆಂದು ನಮಗೆಲ್ಲ ಹೆಮ್ಮೆಯಾಗು ಇದೆ. ಈ ಹೆಮ್ಮೆ ಕ್ಷಮಾರ್ಹವೆಂದುಕೊಂಡಿದ್ದೇವೆ. ಏಕೆಂದರೆ ಇದು ಗರ್ವವಲ್ಲ. ಇದು ಹೇಗೂ ಇರಲಿ, ಹತ್ತನೆಯ ವರ್ಷ ತುಂಬುತ್ತಿರುವ ಈ ಸಂದರ್ಭದಲ್ಲಿ ಧನ್ಯತೆಯ ಭಾವ ನಮ್ಮದು. ಆದರೆ ಇದರೊಂದಿಗೆ ನಮ್ಮ ಅರೆಕೊರೆಗಳ ಅರಿವೂ ನಮ್ಮಲ್ಲಿದೆಯೆಂದು ಹೇಳಬಯಸುತ್ತೇವೆ.

ನೆನಕೆ

ಈ ಪತ್ರಿಕೆ ಇಷ್ಟು ಕಾಲ ನಿಲ್ಲದೆ ನಡೆದುಕೊಂಡು ಬಂದಿರುವುದಕ್ಕೆ ಕಾರಣರಾದವರೆಲ್ಲರ ಉಪಕಾರವನ್ನು ನೆನೆಯುವುದು ನಮ್ಮ ಕರ್ತವ್ಯ. ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಅಧಿಕಾರವರ್ಗದ ಎಲ್ಲರೂ, ಎಲ್ಲ ಸದಸ್ಯರೂ ಇದರಲ್ಲಿ ತಳೆದಿರುವ ಆಸಕ್ತಿ ಅಪಾರ.

22.

ಜೂನ್ 1990
ಬಜೆಟ್ ಮತ್ತು ಬ್ಯಾಂಕುಗಳು

ಪ್ರತಿವರ್ಷವೂ ಕೇಂದ್ರ ಸರ್ಕಾರದ ಬಜೆಟ್ ಮಂಡನೆಯಾದಾಗ ಸಮಾಜದ ವಿವಿಧ ವರ್ಗಗಳೂ ಅರ್ಥವ್ಯವಸ್ಥೆಯ ನಾನಾ ವಲಯಗಳೂ ತಂತಮ್ಮ ದೃಷ್ಟಿಯಿಂದ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸಾಮಾನ್ಯ. ಒಂದಿಲ್ಲೊಂದು ರೀತಿಯಲ್ಲಿ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ, ಅದು ಎಲ್ಲರ ಮೇಲೂ ಪರಿಣಾಮ ಬೀರದೆ ಇರುವುದಿಲ್ಲ.

ಆದರೆ ಬ್ಯಾಂಕಿಂಗ್ ವಲಯದ ಮೇಲೆ ಏನು ಅದರ ಪ್ರಭಾವ? ಅದರ ಪರಿಚಾಲನೆಯ ಮೇಲೂ ಲಾಭಪ್ರದತೆಯ ಮೇಲೂ ಏನದರ ಪರಿಣಾಮ? ಮುಂಗಡಪತ್ರದಲ್ಲಿ ಸೂಚಿತವಾದ ನಾನಾ ಕ್ರಮಗಳ ದೃಷ್ಟಿಯಲ್ಲಿ ಬ್ಯಾಂಕುಗಳು ತಮ್ಮ ರೀತಿನೀತಿಗಳನ್ನು ಹೇಗೆ ರೂಪಿಸಿಕೊಳ್ಳಬೇಕು? ಈ ಬಗ್ಗೆ ಬ್ಯಾಂಕುಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಎಷ್ಟಾದರೂ ಅವು (ಬಹುತೇಕ) ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲವೆ?

ಆಡುವವನೆಸೆದಂತೆ ಬೀಳ್ವ ಚೆಂಡಿಗದೇಕೆ
ಆಟದೊಳಗಣ ಸೋಲು ಗೆಲವುಗಳ ಗೋಜು?
ನಿನ್ನನಾರಿತ್ತಲೆಸೆದಿಹನೊ ಬಲ್ಲವನಾತ
ನೆಲ್ಲ ಬಲ್ಲವನವನು–ಬಲ್ಲನೆಲ್ಲವನು.

ಬ್ಯಾಂಕುಗಳ ಕಲಾಪಗಳಿಗೆ ನೇರವಾಗಿ ಸಂಬಂಧಿಸಿದ ವಿಚಾರಗಳನ್ನು ಹಣಕಾಸು ಮಂತ್ರಿಗಳು ಒಂದು ವೇಳೆ ಪ್ರಸ್ತಾಪಿಸಿದ್ದರೂ, ಅವುಗಳ ಬಗ್ಗೆ ಹೊಸ ಕ್ರಮಗಳನ್ನು ಸೂಚಿಸಿದ್ದರೂ, ಆ ಕುರಿತು ನೇರವಾಗಿ ಕಾರ್ಯ ಪ್ರವೃತ್ತವಾಗುವುದಕ್ಕೂ ಬ್ಯಾಂಕುಗಳಿಗೆ ಸ್ವಾತಂತ್ರ್ಯವಿಲ್ಲ. ವಿತ್ತ ಮಂತ್ರಿಗಳ ಸೂಚನೆಗಳನ್ನು ಆಧರಿಸಿ ರಿಸರ್ವ್ ಬ್ಯಾಂಕು ಸೂಚನೆ ನೀಡಿದಾಗ ಬ್ಯಾಂಕುಗಳು ಥಟ್ಟನೆ ಆ ನಿಟ್ಟಿನಲ್ಲಿ ತೊಡಗುತ್ತವೆ. ಇದು ಕ್ರಮ.

ಚೆಲ್ಲಾಟವಲ್ಲ

ಪ್ರಮುಖ ಬ್ಯಾಂಕಿಂಗ್ ಸಂಸ್ಥೆಗಳು ಸರ್ಕಾರದ ಒಡೆತನಕ್ಕೆ ಸೇರಿದ್ದರೂ ಅವು ಮಹತ್ವಪೂರ್ಣವಾದ ಸಾರ್ವಜನಿಕ ಸಂಸ್ಥೆಗಳೆಂಬ ಅಂಶವನ್ನು ಮರೆಯುವಂತಿಲ್ಲ. ಮಧ್ಯಸ್ಥಗಾರಿಕೆ ಚ್ಯುತಿಯ ಮಾತು ಬಹಳಷ್ಟು ಕೇಳಿ ಬರುತ್ತಿದ್ದರೂ ಇಂದಿಗೂ ಬ್ಯಾಂಕುಗಳು ನಮ್ಮ ಆರ್ಥಿಕ ಕ್ಷೇತ್ರದಲ್ಲಿ ಮಹತ್ತರವಾದ ಪಾತ್ರ ನಿರ್ವಹಿಸುತ್ತಿವೆ. ಅಸಂಖ್ಯಾತ ಜನರಿಂದ ಹಣ ಸಂಗ್ರಹಿಸುತ್ತಿವೆ. ಅಗತ್ಯ ಇರುವವರಿಗೆ ಆ ಹಣವನ್ನು ವಿತರಿಸುತ್ತಿವೆ. ಉಳಿತಾಯ, ಬಂಡವಾಳವಾಗಿ ಅದರ ಪರಿವರ್ತನೆ ಮತ್ತು ವಿನಿಯೋಜನೆಯ ಚಕ್ರವನ್ನು ಪ್ರವರ್ತಿಸುವಲ್ಲಿ ಬ್ಯಾಂಕುಗಳ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಸರ್ಕಾರದ ಇತರ ಇಲಾಖೆಗಳಂತೆ ಬ್ಯಾಂಕುಗಳು ಅಲ್ಲ. ಸರ್ಕಾರಕ್ಕೆ, ತನ್ಮೂಲಕ ಸಂಪತ್ತಿಗೆ, ಅವು

ಉತ್ತರವಾದಿಗಳಾಗಿರುವುವಾದರೂ ವಿಶಾಲ ಜನತೆಯಿಂದ ಹಣವನ್ನು ಪಡೆದು ವಿಶಾಲ ಜನತೆಯಲ್ಲಿ ಅದನ್ನು ಚೆಲ್ಲುವ ಬ್ಯಾಂಕುಗಳು ಸಾರ್ವಜನಿಕ ದೃಷ್ಟಿಯನ್ನು ಬಿಟ್ಟುಕೊಡುವಂತಿಲ್ಲ. 'ಕೆರೆಯ ನೀರನು ಕೆರೆಗೆ ಚೆಲ್ಲುವ ಆಟ ಬರೀ ಚೆಲ್ಲಾಟವಲ್ಲ. ಸರ್ಕಾರವಾಗಲಿ, ಬ್ಯಾಂಕುಗಳ ಈ ಮಹತ್ತ್ವದ ಮುಖವನ್ನು ಮರೆಯುವಂತಿಲ್ಲ. ಬ್ಯಾಂಕುಗಳೂ ಈ ದೃಷ್ಟಿಯಿಂದ ಸರ್ಕಾರದ ಕ್ರಮಗಳನ್ನು ಚಿಕಿತ್ಸಕ ದೃಷ್ಟಿಗೆ ಒಳಪಡಿಸುವ, ಸರ್ಕಾರದೊಂದಿಗೆ ಸಂವಾದ ನಡಸುವ, ತಮ್ಮ ಕಲಾಪಗಳ ದೃಷ್ಟಿಯಿಂದಲೂ ಸಾರ್ವಜನಿಕ ಪರಿಣಾಮ ದೃಷ್ಟಿಯಿಂದಲೂ ಸರ್ಕಾರದ ಮುಂಗಡಪತ್ರದ ಈ ಮುಖವನ್ನು ಕುರಿತು ಬಹಿರಂಗ ಚರ್ಚೆಯಲ್ಲಿ ತೊಡಗುವ ತಮ್ಮ ಹೊಣೆಯನ್ನು ಅರಿಯುವುದು ಅಗತ್ಯ.

ಆಡಳಿತ ಸೂತ್ರವನ್ನು ಕೈಯಲ್ಲಿ ಹಿಡಿದ ಕೆಲವು ರಾಜಕಾರಣಿಗಳು ಬ್ಯಾಂಕ್ ಅಧಿಕಾರಿಗಳನ್ನೂ ಇತರ ಉದ್ಯೋಗಿಗಳನ್ನೂ ಸೂತ್ರದ ಗೊಂಬೆಗಳಂತೆ ಆಡಿಸಲು ಯತ್ನಿಸಿದ್ದುಂಟು. ವ್ಯವಹಾರಯೋಗ್ಯವಲ್ಲದ, ಅನಾರ್ಥಿಕ ಮತ್ತು ಅನಾಹುತಕಾರಿಯಾದ ಯೋಜನೆಗಳನ್ನು ಘೋಷಿಸಿ, ಅವನ್ನು ಕಾರ್ಯಗತಗೊಳಿಸುವಲ್ಲಿ ಉದ್ಭವಿಸಿದ ನಾನಾ ಕೊಡಕುಗಳ ಪರಿಹಾರಕ್ಕೆ ಉಪಾಯ ಸೂಚಿಸದೆ ಬ್ಯಾಂಕ್ ಉದ್ಯೋಗಿಗಳನ್ನು ಬಹಿರಂಗವಾಗಿ ಟೀಕೆಗೆ ಗುರಿಪಡಿಸಿದ್ದೂ ಉಂಟು. ಬ್ಯಾಂಕರರು ಯಾವಾಗಲೂ ಅಗ್ಗದ ಜನಪ್ರಿಯತೆಯ ಮೇಲೆ ಕಣ್ಣಿಟ್ಟು, ಪರಂಪರಾಗತ ರೀತಿ ನೀತಿಗಳನ್ನೂ ಕಾನೂನುಗಳ ಚೌಕಟ್ಟನ್ನೂ ಗಾಳಿಗೆ ಹಾರಿಸಲಾರರು. ವೃತ್ತಿಪರರಾದ ಅವರಿಗೆ ವೃತ್ತಿ ಧರ್ಮವೊಂದುಂಟು. ಈ ವೃತ್ತಿಧರ್ಮಕ್ಕೂ ಲೋಕಧರ್ಮಕ್ಕೂ ವಿರಸ ಉಂಟಾಗದ ರೀತಿಯಲ್ಲಿ ಆಡಳಿತಗಾರರು ತಮ್ಮ ರಾಜಕೀಯ ನೀತಿಗಳನ್ನು ರೂಪಿಸುವುದು ಅತ್ಯಗತ್ಯ. ಇಲ್ಲದಿದ್ದರೆ ಅವರ ಉದ್ದೇಶಗಳೇ ಗಾಳಿಗೆ ತೂರಿ ಹೋಗುವ ಅಪಾಯವುಂಟು. ಇಡೀ ಅರ್ಥವ್ಯವಸ್ಥೆಯ ಹಾಗೂ ವ್ಯವಹಾರ ನೀತಿಯ ಧಾತುವೇ ನಷ್ಟವಾಗಬಹುದು. ಬ್ಯಾಂಕಿಂಗ್ ಕ್ಷೇತ್ರದಲ್ಲಿರುವವರು ಈ ವಿಚಾರ ಕುರಿತಂತೆ ಚಿಂತನೆ ನಡೆಸುವುದು ಅಗತ್ಯ.

ಸಮಾಲೋಚನೆಯ ಅಗತ್ಯ

ಆದರೆ ಇಂದಿನ ಬ್ಯಾಂಕಿಂಗ್ ಸಂದರ್ಭದಲ್ಲಿ ಇಂಥ ಚಿಂತನೆ ಅಪುರೂಪದ ಮಾಲಾಗಿದೆಯೆನಿಸುತ್ತದೆ. ಬಜೆಟ್ ಮಂಡನೆಗೆ ಮುಂಚೆ ವಿತ್ತ ಮಂತ್ರಿಗಳು ಸಾಮಾನ್ಯವಾಗಿ ಅರ್ಥವ್ಯವಸ್ಥೆಯ ವಿವಿಧ ವಲಯಗಳ ಪ್ರತಿನಿಧಿಗಳೊಂದಿಗೆ ಸಂವಾದಗಳಲ್ಲಿ ನಿರತರಾಗುವುದುಂಟು. ಅವರ ಅಭಿಪ್ರಾಯಗಳನ್ನು ಪಡೆದು, ತಾವು ರೂಪಿಸುವ ಮುಂಗಡಪತ್ರದಲ್ಲಿ ಎಷ್ಟರ ಮಟ್ಟಿಗೆ ಅವನ್ನು ಅಳವಡಿಸಬೇಕೆಂದು

ಪರಿಶೀಲಿಸುವುದುಂಟು. ಆದರೆ ಬ್ಯಾಂಕಿಂಗ್ ವಲಯದ ಪ್ರತಿನಿಧಿಗಳೊಂದಿಗಾಗಲಿ, ಸರ್ಕಾರಿ ವಲಯದ ಇತರ ಉದ್ಯಮಗಳ ಪ್ರತಿನಿಧಿಗಳೊಂದಿಗಾಗಲಿ ಆ ರೀತಿಯ ಸಂವಾದ ನಡೆಸುವ ವಾಡಿಕೆಯಿಲ್ಲ. ಕೋಳಿಯನ್ನು ಕೇಳಿ ಮೆಣಸು ಅರೆಯುತ್ತಾರೆಯೆ? ವಿತ್ತ ಮಂತ್ರಿಗಳು ಹಣ ವಲಯಕ್ಕೆ ಸಂಬಂಧಿಸಿದಂತೆ ತಮ್ಮ ಮುಂಗಡ ಪತ್ರದಲ್ಲಿ ನೀಡಿದ ಸೂಚನೆಗಳನ್ನು ಜಾರಿಗೆ ತರಲು ತೊಡುಗುವುದಷ್ಟೇ ಬ್ಯಾಂಕುಗಳ ಕೆಲಸ. ಹಿಂದೆ ಹೇಳಿದ ಹಾಗೆ, ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಕುರಿತಂತೆ ರಿಸರ್ವ್ ಬ್ಯಾಂಕ್ ಆದೇಶ ನೀಡುತ್ತದೆ. ಅದನ್ನನುಸರಿಸುವುದಷ್ಟೇ ಬ್ಯಾಂಕುಗಳ ಕೆಲಸ.

ರಿಸರ್ವ್ ಬ್ಯಾಂಕು ನಮ್ಮ ದೇಶದ ಕೇಂದ್ರ ಬ್ಯಾಂಕು, ಬ್ಯಾಂಕುಗಳ ಬ್ಯಾಂಕು. ಅರ್ಥವ್ಯವಸ್ಥೆಯ ಧಮನಿಗಳು ಆರೋಗ್ಯಕರವಾಗಿರುವಂತೆ ನೋಡಿಕೊಳ್ಳುವ ಹೊಣೆ ರಿಸರ್ವ್ ಬ್ಯಾಂಕಿನದು. ಈ ದೃಷ್ಟಿಯಿಂದ ಅದು ನೀಡುವ ಸೂಚನೆಗಳನ್ನು ಪಾಲಿಸಬೇಕಾದ್ದು ಬ್ಯಾಂಕುಗಳ ಕರ್ತವ್ಯ. ಆದರೆ ಸದಾ ಚಂಚಲವಾದ, ತಳಮಳಿಸುವ ಅರ್ಥವ್ಯವಸ್ಥೆಯ ನಾನಾ ಪ್ರವೃತ್ತಿಗಳ ಬಗ್ಗೆ ಸಂಬಂಧಪಟ್ಟ ಎಲ್ಲ ವಲಯಗಳೊಂದಿಗೂ ಸಮಾಲೋಚನೆಗೆ ಅವಕಾಶವಿದ್ದರೆ, ಸರ್ಕಾರದ ಆದೇಶದಂತೆ ನೀತಿಗಳನ್ನು ರೂಪಿಸುವುದಷ್ಟೇ ರಿಸರ್ವ್ ಬ್ಯಾಂಕಿನ ಹೊಣೆಯಾಗದಿದ್ದರೆ, ಇಡೀ ಪ್ರಕ್ರಿಯೆ ಜನತಂತ್ರಾತ್ಮವಾದ್ದಾದರೆ, ನೀತಿರೂಪಣೆಯಲ್ಲಿ ಬ್ಯಾಂಕುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ, ಅದರಿಂದ ಸಮಸ್ಯೆಗಳ ಪರಿಹಾರ ಎಷ್ಟೋ ಸುಲಭವಾಗಬಹುದು.

ಹೊಸ ಸರ್ಕಾರದ ಹಣಕಾಸು ಮಂತ್ರಿಗಳು ಈ ವರ್ಷದ ಆಯ–ವ್ಯಯ ಪತ್ರ ಮಂಡಿಸುವಾಗ ನಮ್ಮ ಬ್ಯಾಂಕ್ ವ್ಯವಸ್ಥಾಪಕರ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದಾರೆ. ಒಟ್ಟಿನಲ್ಲಿ ಅವರು ಅತ್ಯಂತ ಅರ್ಹತೆಯುಳ್ಳವರು, ಅರ್ಪಣಭಾವದಿಂದ ಕೂಡಿದವರು, ಕಷ್ಟಪಟ್ಟು ದುಡಿಯುವವರು ಎಂದು ಪ್ರಶಂಸಿಸಿದ್ದಾರೆ. ಬ್ಯಾಂಕಿಂಗ್ ಸೇವೆಯ ಬಗ್ಗೆ ಸಾರ್ವಜನಿಕರಲ್ಲಿ ಅಷ್ಟೇನೂ ತೃಪ್ತಿಯಿಲ್ಲ ಎಂದೂ ಅದೇ ಉಸಿರಿನಲ್ಲಿ ಹೇಳಿದ್ದಾರೆ. ವರ್ಷಗಳು ಉರುಳಿದಂತೆ ಕೆಲವು ಸಂರಚನಾತ್ಮಕ ಗಡಸುತನಗಳು ಬೆಳೆದುಕೊಂಡಿವೆಯೆಂದಿದ್ದಾರೆ.
ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೆಚ್ಚಿನ ಸ್ಪರ್ಧೆಯ ಅಗತ್ಯವಿದೆ. ಬ್ಯಾಂಕಿಂಗ್ ಸೇವೆಯ ವಿಚಾರದಲ್ಲಿ ಹೆಚ್ಚಿನ ನಮ್ಯತೆ ಬೆಳೆಯಬೇಕಾಗಿದೆ ಎಂದು ಹೇಳಿದ್ದಾರೆ. ಸಾರ್ವಜನಿಕರ ಅಗತ್ಯಕ್ಕೆ ನಮ್ಮ ಬ್ಯಾಂಕಿಂಗ್ ಸಂಸ್ಕೃತಿ ಹೆಚ್ಚು ಸ್ಪಂದಿಸಬೇಕಾಗಿದೆಯೆನ್ನುವುದು ಅವರ ಅನಿಸಿಕೆ. ಈ ಅಂಶಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸುಗಳನ್ನು ನೀಡಲು ಬ್ಯಾಂಕರುಗಳ, ಬ್ಯಾಂಕ್ ಉದ್ಯೋಗಿಗಳ, ಠೇವಣಿದಾರರ ಮತ್ತು ಸಾಲಗಾರರ ಸಮಿತಿಯೊಂದನ್ನು ರಚಿಸಬೇಕೆಂದು

ರಿಸರ್ವ್ ಬ್ಯಾಂಕನ್ನು ಕೋರುವುದಾಗಿ ಹೇಳಿದ್ದಾರೆ. ಇಂಥ ಸಮಿತಿಯ ಕಾರ್ಯಸ್ವರೂಪ ಹೇಗಿರುವುದೆಂಬುದನ್ನೂ ಅದರ ಮುಂದೆ ಇಡಲಾಗುವ ಉದ್ದೇಶಗಳು ಏನೆಂಬುದನ್ನೂ ಕಾದು ನೋಡಬೇಕಾಗಿದೆ. ನಮ್ಮ ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಪುನರ್ರಚಿಸುವ ಬಗ್ಗೆ ತೀವ್ರವಾಗಿ ಚಿಂತಿಸಬೇಕಾದ ಕಾಲವೀಗ ಬಂದಿದೆ. ಇವೆಲ್ಲ ಸಮಸ್ಯೆಗಳ ಬಗ್ಗೆ ನಮ್ಮ ಬ್ಯಾಂಕಿಂಗ್ ಧುರೀಣರೊಂದಿಗೂ ಇತರ ತಜ್ಞರೊಂದಿಗೂ ಸರ್ಕಾರ ಸಮಾಲೋಚಿಸುವುದು ಅಗತ್ಯವಾಗಿದೆ.

ಸ್ವಾಯತ್ತತೆ

ಇದೇ ಸಂದರ್ಭದಲ್ಲಿ ಹಣಕಾಸು ಮಂತ್ರಿಗಳು ಆಡಿರುವ ಇನ್ನೊಂದು ಮಾತೂ ಗಮನಾರ್ಹ. ದೇಶದ ಹಣಕಾಸು ಸಂಸ್ಥೆಗಳ ಕಾರ್ಯಭಾರದಲ್ಲಿ ಅವಕ್ಕೆ ಸ್ವಾಯತ್ತತೆ ನೀಡಬೇಕು ಎಂಬುದಾಗಿಯೂ ಅವರು ಹೇಳಿದ್ದಾರೆ. ಈ ಹಣಕಾಸು ಸಂಸ್ಥೆಗಳಲ್ಲಿ ಬ್ಯಾಂಕುಗಳೂ ಸೇರಿವೆಯೇ ಎಂಬುದು ಸ್ಪಷ್ಟ ಇಲ್ಲ. ಹಿಂದೆ ಹೇಳಿದ ಹಾಗೆ, ನಮ್ಮ ಬ್ಯಾಂಕುಗಳ ಕಾರ್ಯನಿರ್ವಹಣೆಯಲ್ಲಿ ಅವಕ್ಕೆ ಹೆಚ್ಚಿನ ವಿವೇಚನಾಸ್ವಾತಂತ್ರ್ಯ ಅಗತ್ಯವಾಗಿದೆ. ಸರ್ಕಾರ ಹಾಗೂ ರಿಸರ್ವ್ ಬ್ಯಾಂಕು ನೀಡುವ ಅನೇಕ ನಿರ್ದೇಶನಗಳಿಗೆ ಅನುಗುಣವಾಗಿ ಅವೀಗ ಕಾರ್ಯನಿರ್ವಹಿಸಬೇಕಾಗಿದೆ. ಒಂದು ಕಡೆ ಸೇವಾಕ್ಷೇತ್ರ ಅಭಿಗಮನದಂಥ ಅತ್ಯಂತ ಹೊಣೆಗಾರಿಕೆಯ ಕರ್ತವ್ಯವನ್ನು ಅವುಗಳ ಮೇಲೆ ಹೊರಿಸಲಾಗಿದೆ. ಇನ್ನೊಂದು ಕಡೆ ಅಸಂಖ್ಯಾತ ಕಟ್ಟುಕಟ್ಟಳೆಗಳೂ ರಾಜಕಾರಣಿಗಳ ಹಸ್ತಕ್ಷೇಪಗಳೂ ಅವನ್ನು ನಿರ್ವೀರ್ಯಗೊಳಿಸುತ್ತಿವೆ. ವ್ಯಾಪಕ ಸಮಾಲೋಚನೆಯ ಅನಂತರ ರೂಪಿಸಲಾದ ರೂಪರೇಷೆಗಳ ಒಳಗೆ ವಿವೇಚನಾಯುತವಾಗಿ ಕಾರ್ಯನಿರ್ವಹಿಸಲು ಬ್ಯಾಂಕುಗಳಿಗೆ ಸ್ವಾತಂತ್ರ್ಯ ಇರಬೇಕಾಗಿದೆ. ಬ್ಯಾಂಕುಗಳು ಇಂದು ಎದುರಿಸಬೇಕಾದ ಸ್ಪರ್ಧೆ ಅಗಾಧ. ಹೆಚ್ಚು ಸಂಪನ್ಮೂಲಗಳನ್ನು ಕ್ರೋಡೀಕರಿಸುವುದು ಅವಕ್ಕೀಗ ಕಷ್ಟವಾಗುತ್ತಿದೆ. ಠೇವಣಿದಾರರಲ್ಲಿ ಅರಿವು ಹೆಚ್ಚುತ್ತಿದೆ. ಅವರ ಆವಶ್ಯಕತೆಗಳೂ ಬಹುಮುಖವಾಗುತ್ತಿವೆ. ಅವನ್ನು ಪೂರೈಸುವಂಥ ಹೊಸ ಹೊಸ ಯೋಜನೆಗಳನ್ನು ರೂಪಿಸಲು ಬ್ಯಾಂಕುಗಳಿಗೆ ಅವಕಾಶ ಇರಬೇಕು. ನಗದು ಮೀಸಲು ಅನುಪಾತ, ಪರಿನಿಯತ ದ್ರವತ್ವ ಅನುಪಾತ, ಭಿನ್ನಕ ಬಡ್ಡಿ ದರ, ಆದ್ಯತಾವಲಯ, ಸಾಲ ನೀಡಿಕೆಯ ನೀತಿ ನಿಯಮಗಳು ಮುಂತಾದ ನಾನಾ ಕಟ್ಟುಪಾಡುಗಳ ನಡುವೆ ಅವು ಕಾರ್ಯ ನಡೆಸಬೇಕಾಗಿದೆ. ಬ್ಯಾಂಕುಗಳು ಅಸಂಖ್ಯಾತ ಠೇವಣಿದಾರರಿಂದ ಹಣ ಸಂಗ್ರಹಿಸುತ್ತವೆಂಬುದನ್ನೂ, ಅವು ಒಂದು ರೀತಿಯಲ್ಲಿ ಸಾರ್ವಜನಿಕ ಹಣದ ನ್ಯಾಸಧಾರಿಗಳೆಂಬ ಅಂಶವನ್ನೂ ಕಡೆಗಣಿಸಲಾಗಿದೆ. ಇದೆಲ್ಲವೂ

ಸರ್ಕಾರದ ಹಣ ಎಂಬ ಧೋರಣೆಯಿದೆ. ಪರಿಚಾಲನೆಯ ವೆಚ್ಚ, ಹೆಚ್ಚುತ್ತಿರುವ ಬಾಕಿ, ಬ್ಯಾಂಕಿಗೆ ಲಾಭತರದ (ನಾನ್–ಪರ್ಫಾರ್ಮಿಂಗ್) ಆಸ್ತಿಗಳ ರಾಶಿ – ಇವೆಲ್ಲ ಬ್ಯಾಂಕಿನ ಭಾರವನ್ನು ಹೆಚ್ಚಿಸುತ್ತಿವೆ; ಅವುಗಳ ದಕ್ಷತೆ – ಲಾಭಪ್ರದತೆಗಳನ್ನು ಕುಗ್ಗಿಸುತ್ತಿವೆ. ಇವನ್ನೆಲ್ಲ ಕುರಿತು ಚಿಂತಿಸಬೇಕಾಗಿದೆ.

ಹೀಗೆಂದರೆ ಸಮಾಜಕ್ಕೆ ಬ್ಯಾಂಕುಗಳ ಹೊಣೆಯೇನೂ ಇಲ್ಲ ಎಂದು ಹೇಳಿದಂತಲ್ಲ. ಆದರೆ ಇದನ್ನು ಇನ್ನೂ ದಕ್ಷವಾಗಿ, ಇನ್ನೂ ವ್ಯಾಪಕವಾಗಿ, ನಿರ್ವಹಿಸುವ ಹಾದಿಯನ್ನು ನಾವು ಅನ್ವೇಷಿಸಬೇಕಾಗಿದೆ. ಬ್ಯಾಂಕುಗಳಿಗೆ ಸ್ವಲ್ಪಮಟ್ಟಿನ ಸ್ವಾಯತ್ತತೆಯನ್ನು ನೀಡುವುದರಿಂದ ಹಾಗೂ ನಿರ್ಭೀತವಾದ ಮುಕ್ತವಾತಾವರಣವನ್ನು ಸೃಷ್ಟಿಸುವುದರಿಂದ, ಸಮಾಲೋಚನೆಯ ಮೂಲಕ ತೀರ್ಮಾನಗಳನ್ನು ತೆಗೆದುಕೊಳ್ಳುವುದರಿಂದ ಬ್ಯಾಂಕುಗಳು ಸ್ವಾಮಿಕಾರ್ಯ – ಸ್ವಕಾರ್ಯಗಳೆರಡನ್ನೂ ನಿರ್ವಹಿಸಬಲ್ಲುವು, ಸಮಾಜದ ಋಣವನ್ನು ಇನ್ನೂ ಚೆನ್ನಾಗಿ ತೀರಿಸಬಲ್ಲುವು.

ರೈತ ಋಣ

ಹಣಕಾಸು ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ರೂ.10,000ದ ವರೆಗೆ ರೈತರ ಋಣಗಳನ್ನು ಮನ್ನಾ ಮಾಡುವುದು ಒಂದು ವಿಚಾರ. ಇದು ಮುಖ್ಯವಾಗಿ ಒಂದು ರಾಜಕೀಯ ತೀರ್ಮಾನವೆಂಬುದು ನಿಜ. ಸರ್ಕಾರವೇ ಈ ಹಣವನ್ನು ತುಂಬಿಕೊಡುತ್ತದೆ. ಆದರೆ ಸಂಬಂಧಿಸಿದಂತೆ ಕೆಲವು ಮುಖ್ಯಾಂಶಗಳನ್ನು ವಿವೇಚಿಸಬೇಕಾಗಿದೆ. ಸದಾಕಾಲಕ್ಕೂ ಇಂಥ ಸಾಲಗಳನ್ನು ಮನ್ನಾ ಮಾಡಲಾಗುವುದಿಲ್ಲ ಎಂಬುದು ಮನವರಿಕೆಯಾಗಬೇಕು. ಬ್ಯಾಂಕುಗಳ ವಿಶ್ವಾಸಾರ್ಹತೆಗೆ ಭಂಗ ಉಂಟಾಗಬಾರದು. ಉದ್ದೇಶಪೂರ್ವಕವಾಗಿ ಕಟಬಾಕಿದಾರರಾದವರಿಗೆ ಈ ಸೌಲಭ್ಯವಿಲ್ಲವೆಂಬುದೇನೋ ನಿಜ. ಆದರೆ ಇದನ್ನು ಗುರುತಿಸಲು ಅನುಸರಿಸಬೇಕಾದ ಮಾನದಂಡ ಯಾವುದಿದೆ? ಈ ವಿಚಾರದಲ್ಲಿ ಬ್ಯಾಂಕುಗಳ ಹೊಣೆ ಅಗಾಧವಾಗುತ್ತದೆ. ಈ ಅಗ್ನಿ ಪರೀಕ್ಷೆಯಲ್ಲಿ ಅವು ಗೆದ್ದು ಹೊರಬರಬೇಕಾಗಿದೆ. ಇನ್ನು ಮುಂದೆ ನೀಡಲಾಗುವ ಸಾಲದ ಬಗ್ಗೆ ನೂರು ಸಾರಿ ಯೋಚಿಸಿ ಬೇಕಾಗುತ್ತದೆ. ಇಡೀ ವ್ಯವಹಾರವನ್ನು ಕುರಿತಂತೆ ವೈಜ್ಞಾನಿಕ ಮಾನದಂಡಗಳನ್ನು ರೂಪಿಸುವ ಸಲುವಾಗಿ ಎಲ್ಲ ಬ್ಯಾಂಕುಗಳ ನಡುವೆ ಸಮಾಲೋಚನೆ ಅಗತ್ಯವಾಗಬಹುದು. ಈ ಎಲ್ಲ ಕಾರ್ಯ ನಿರ್ವಹಿಸಲು ಎಲ್ಲ ದೃಷ್ಟಿಗಳಿಂದಲೂ ತಜ್ಞರೂ ನಿಷ್ಣಾತರೂ ಆದವರ ಸಿಬ್ಬಂದಿಯನ್ನು ರೂಪಿಸುವ ಪ್ರಶ್ನೆ ಪ್ರಮುಖವಾದದ್ದು.

ಉದ್ಯೋಗಾನುಸ್ಥಾಪಿತ ಅಭಿವೃದ್ಧಿ

ದಾರಿದ್ರ್ಯನಿವಾರಣೆಗೆ ಹಣಕಾಸು ಮಂತ್ರಿಗಳು ಹೆಚ್ಚಿನ ಪ್ರಾಮುಖ್ಯ ನೀಡಿರುವುದು ಸರಿಯೇ. ಉತ್ಪಾದನೆ ಹೆಚ್ಚಿದರೆ, ಹೆಚ್ಚಿನ ಸಂಪತ್ತು ಉತ್ಪಾದಿತವಾದರೆ ಅದರ ಫಲ ಕೆಳಗಿನವರೆಗೂ ತೊಟ್ಟಿಕ್ಕುತ್ತದೆ ಎಂಬ ಸೂತ್ರಕ್ಕೆ ಅವರು ವಿದಾಯ ಹೇಳಿದ್ದಾರೆ. ಉದ್ಯೋಗಾನುಸ್ಥಾಪಿತ ಗ್ರಾಮೀಣಾಭಿವೃದ್ಧಿ ಯೋಜನೆಗಳಿಗೆ ಇನ್ನು ಮುಂದೆ ಹೆಚ್ಚಿನ ಪ್ರಾಶಸ್ತ್ಯ ದೊರಕುತ್ತದೆ. ಈ ದೃಷ್ಟಿಯಿಂದ ಸೇವಾಕ್ಷೇತ್ರ ಅಭಿಗಮನ ಇನ್ನೂ ಸಮರ್ಪಕವಾಗಬೇಕಾಗಿದೆ. ಹೊಸ ಕಾರ್ಯಕ್ರಮಗಳ ಅನ್ವೇಷಣೆ ಅನಿವಾರ್ಯ. ಗ್ರಾಮಮಟ್ಟದ ಉದರಿ ಯೋಜನೆಗಳನ್ನು ರೂಪಿಸಿ, ಅಗತ್ಯವಿರುವವರಿಗೆ ಉದರಿ ದೊರಕುವಂತೆ ಮಾಡಬೇಕು. ತರಬೇತಿ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು. ಈ ಎಲ್ಲ ವಿಚಾರಗಳಲ್ಲಿ ಬ್ಯಾಂಕುಗಳ ಪಾತ್ರವನ್ನು ಕಡಿಮೆ ಮಾಡುವಂತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕುಗಳು ಇದುವರೆಗೆ ನಿರ್ವಹಿಸಿರುವ ಪಾತ್ರವನ್ನು ಖುಸ್ರೋ ಸಮಿತಿ ಪ್ರಶಂಸಿಸಿದೆ. ಉದರಿ ಬಟವಾಡೆ (ಕ್ರೆಡಿಟ್ ಡೆಲಿವರಿ) ವ್ಯವಸ್ಥೆಯನ್ನು ಇನ್ನಷ್ಟು ಸುದೃಢಗೊಳಿಸಲು ಅದು ಅನೇಕ ಶಿಫಾರಸುಗಳನ್ನು ಮಾಡಿದೆ.

ಸವಲತ್ತುಗಳ ವಿಸ್ತರಣೆ

ಅನೇಕ ಹಣಕಾಸು ಸಂಸ್ಥೆಗಳ ಮಧ್ಯಪ್ರವೇಶದಿಂದಾಗಿ, ಉಳಿತಾಯದಾರರ ವಿಭಿನ್ನ ಆವಶ್ಯಕತೆಗಳನ್ನು ಪೂರೈಸುವ ಹೊಸ ಹೊಸ ಯೋಜನೆಗಳನ್ನು ಅವು ರೂಪಿಸುತ್ತಿರುವುದರಿಂದಾಗಿ, ಸರ್ಕಾರವೂ ಉದ್ಯಮ ಸಂಸ್ಥೆಗಳೂ ನೇರವಾಗಿ ಉಳಿತಾಯಗಳನ್ನು ಸಂಗ್ರಹಿಸುವ ಆಕರ್ಷಕ ವಿಧಾನಗಳನ್ನು ಹಮ್ಮಿಕೊಂಡಿರುವುದರಿಂದಾಗಿ, ಉದ್ಯಮಸಂಸ್ಥೆಗಳು ತಮಗೆ ಬೇಕಾದ ದುಡಿಯುವ ಬಂಡವಾಳಕ್ಕೆ ಬ್ಯಾಂಕುಗಳ ಕೈಕಾಯುವ ಪರಿಪಾಟ ತಗ್ಗುತ್ತಿರುವುದರಿಂದಾಗಿ ಬ್ಯಾಂಕುಗಳ ಮಧ್ಯಸ್ಥಗಾರಿಕೆ ಪಾತ್ರಕ್ಕೆ ಈಚಿನ ವರ್ಷಗಳಲ್ಲಿ ಚ್ಯುತಿ ಉಂಟಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಬ್ಯಾಂಕುಗಳ ಠೇವಣಿ ಹರಿವು ಅಷ್ಟೇನೂ ಕುಗ್ಗಿಲ್ಲವಾದರೂ, ಇತರ ಸಂಸ್ಥೆಗಳಿಗೆ ಸರ್ಕಾರ ನೀಡಿರುವ ಕೆಲವು ಸವಲತ್ತುಗಳನ್ನು ಬ್ಯಾಂಕುಗಳಿಗೆ ನೀಡಿಲ್ಲದಿರುವುದರಿಂದ ಕ್ರಮೇಣ ಬ್ಯಾಂಕುಗಳ ಈ ಕಲಾಪಕ್ಕೆ ಧಕ್ಕೆ ಉಂಟಾಗುವ ಅಪಾಯ ಇಲ್ಲದಿಲ್ಲ. ಠೇವಣಿ – ಉದರಿ ಅನುಪಾತವೂ ಸಮರ್ಪಕವಾಗಿಲ್ಲವೆಂಬುದನ್ನು ಹಣಕಾಸುಮಂತ್ರಿಗಳೇ ತಮ್ಮ ಆಯ – ವ್ಯಯ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಉತ್ಪಾದಕ ಕ್ಷೇತ್ರಗಳಲ್ಲಿ ಬ್ಯಾಂಕ್ ಉದರಿ ಹರಿಯುವ ಅಗತ್ಯವಂತೂ ಇದ್ದೇ ಇದೆ. ಇತರ ಸಂಸ್ಥೆಗಳಲ್ಲಿ ಹಣ ತೊಡಗಿಸುವ

ಉಳಿತಾಯದಾರರಿಗೆ ಸರ್ಕಾರ ನೀಡಿರುವ ಕೆಲವು ಸವಲತ್ತುಗಳನ್ನು ಬ್ಯಾಂಕುಗಳಿಗೂ ವಿಸ್ತರಿಸಬೇಕೆಂದು ಅವು ಒತ್ತಾಯಿಸುವುದು.

ಉದಾಹರಣೆಗೆ ರಾಷ್ಟ್ರೀಯ ಉಳಿತಾಯ ಪತ್ರವೇ ಮುಂತಾದವುಗಳಲ್ಲಿ ತೊಡಗಿಸಲಾದ ಹಣವನ್ನು ವರಮಾನ ತೆರಿಗೆಯಿಂದ ಮನ್ನಾ ಮಾಡಲು ಅವಕಾಶವಿದೆ. ಈ ಉಪಬಂಧವನ್ನು ಬ್ಯಾಂಕುಗಳಲ್ಲಿ ಇರಿಸಿದ ಠೇವಣಿಗಳಿಗೂ ನಿಶ್ಚಿತಮಿತಿಯ ಒಳಗೆ ಅನ್ವಯಿಸಬೇಕೆಂದು ಕೋರಬಹುದಾಗಿದೆ. ಬಂಡವಾಳ ಗಳಿಕೆ ತೆರಿಗೆಯಿಂದಲೂ ವಿನಾಯಿತಿ ದೊರಕಿಸಿಕೊಡಬಹುದಾಗಿದೆ. ಬ್ಯಾಂಕ್ ಠೇವಣಿಯೇ ಮುಂತಾದವುಗಳ ಮೇಲೆ ಗಳಿಸಿದ ಬಡ್ಡಿಗೆ ಒಂದು ಗೊತ್ತಾದ ಮಿತಿಯವರೆಗೆ (ರೂ.7,000) ವರಮಾನ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ. ಆದರೆ ಯೂನಿಟ್ ಟ್ರಸ್ಟ್‌ನಿಂದ ಬಂದ ಗಳಿಕೆಯ ವಿಚಾರದಲ್ಲಿ ಇನ್ನೂ ರೂ.3,000ದವರೆಗೆ ವಿನಾಯಿತಿಯುಂಟು. ಬ್ಯಾಂಕ್ ಠೇವಣಿಗಳಿಗೂ ಇಂಥ ಹೆಚ್ಚಿನ ವಿನಾಯಿತಿಯನ್ನು ಏಕೆ ವಿಸ್ತರಿಸಬಾರದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬ್ಯಾಂಕ್ ಠೇವಣಿಗಳೂ ದೇಶದ ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಜಿತವಾಗುವುದರಿಂದ, ಸರ್ಕಾರವೂ ರಿಸರ್ವ್ ಬ್ಯಾಂಕ್ ಆಗಿಂದಾಗ್ಗೆ ವಿಧಿಸುವ ನಾನಾ ನೀತಿ ಸೂತ್ರಗಳಿಗೆ ಅನುಗುಣವಾಗಿದೆ. ಈ ಹಣದ ವಿನಿಯೋಜನೆಯಾಗುತ್ತಿರುವುದರಿಂದ ಇತರ ಸಂಸ್ಥೆಗಳಲ್ಲಿ ಉಳಿತಾಯ ಮಾಡುವವರಿಗೆ ಲಭಿಸುವ ಸವಲತ್ತುಗಳೆಲ್ಲ ಬ್ಯಾಂಕ್ ಠೇವಣಿದಾರರಿಗೂ ದೊರಕಬೇಕೆಂದು ವಾದಿಸುವುದು ನ್ಯಾಯಸಮ್ಮತ. ರಾಷ್ಟ್ರೀಕೃತ ಮತ್ತು ಇತರ ಬ್ಯಾಂಕುಗಳು ಇಂದು ಕೇವಲ ವಾಣಿಜ್ಯ ಬ್ಯಾಂಕುಗಳಲ್ಲ. ವಾಣಿಜ್ಯ ತತ್ವಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದರೂ ಅವುಗಳ ಸಾಮಾಜಿಕ ಮುಖ ಅಗಾಧವಾಗಿ ಬೆಳೆಯುತ್ತಿದೆ. ಎರಡು ದೋಣಿಗಳ ಮೇಲೆ ಏಕಕಾಲದಲ್ಲಿ ಕಾಲಿಟ್ಟು ಸಾಗಲು ಯತ್ನಿಸುತ್ತಿರುವ ಭಾರತೀಯ ಬ್ಯಾಂಕುಗಳು ವಿವಿಧ ಉದ್ದೇಶಗಳ ಪರಂಪರಾಗತ ಸಾಮರಸ್ಯ ಸಾಧನೆಯ ಜೊತೆಗೆ, ಇನ್ನೊಂದು ಆಯಾಮದಲ್ಲಿ ಈ ಹೊಸ ಬಗೆಯ ಸಾಮರಸ್ಯವನ್ನೂ ಸಾಧಿಸಬೇಕಾಗಿದೆ. ಇದಕ್ಕೆ ತಕ್ಕಂತೆ ಬ್ಯಾಂಕುಗಳು ಹೊಸ ಬಗೆಯ, ವಿಶಿಷ್ಟವಾದ, ಸ್ವರೂಪವನ್ನು ಬೆಳಸಿಕೊಳ್ಳುವಂತೆ ನೋಡಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ.

23.

ಸೆಪ್ಟೆಂಬರ್ 1990

ಬ್ಯಾಂಕಿಂಗ್ ಕಮ್ಮಟ – ನೂರು ದಿನ

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ಈ ತಿಂಗಳ ಕೊನೆಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಬ್ಯಾಂಕಿಂಗ್ ಕಮ್ಮಟ ಮಹತ್ತ್ವಪೂರ್ಣವಾದ್ದು. ಏಕೆಂದರೆ ಅದು ನೂರನೆಯ ದಿನವನ್ನು ದಾಟಿ ಮುನ್ನಡೆಯುತ್ತಿದೆ.

ಹತ್ತು ವರ್ಷಗಳ ಹಿಂದೆ ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಯನ್ನು ಸ್ಥಾಪಿಸಿದಾಗ ನಮಗೆ ಎದುರಾದ ಒಂದು ದೊಡ್ಡ ಸಮಸ್ಯೆಯೆಂದರೆ, ಇದಕ್ಕೆ ಲೇಖನಗಳನ್ನು ಹೊಂದಿಸುವುದು. ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಈ ಪತ್ರಿಕೆಗೆ ಲೇಖನಗಳು ಈ ಕ್ಷೇತ್ರದಲ್ಲಿ ಕಾರ್ಯನಿರತರಾದವರಿಂದಲೇ ಬರಬೇಕೆಂದು ನಿರೀಕ್ಷಿಸುವುದು ಸಹಜವಾಗಿತ್ತು. ಚಪ್ಪಲಿ ಮೆಟ್ಟಿದವನಿಗಷ್ಟೇ ಅದು ಎಲ್ಲಿ ಕಚ್ಚುವುದೆಂಬುದು ಗೊತ್ತಾದೀತು. ಅದರ ನೋವಿನ ಅರಿವಾಗುವುದು ಅವನಿಗೆ ಮಾತ್ರ. ಬ್ಯಾಂಕ್ ಉದ್ಯೋಗಿಗಳು ಮತ್ತು ಬ್ಯಾಂಕಿನಿಂದ ಸೇವೆ ಪಡೆಯುವವರು, ಅದರೊಂದಿಗೆ ನಾನಾಬಗೆಯ ವ್ಯವಹಾರ ನಡಸಬಲ್ಲವರು – ಇವರಲ್ಲದೆ ಬೇರೆ ಯಾರು ತಾನೇ ಇದರ ಸಮಸ್ಯೆಗಳನ್ನೂ ಸ್ವರೂಪವನ್ನೂ ಇವರಿಗಿಂತ ಚೆನ್ನಾಗಿ ಅರಿಯುವುದು ಸಾಧ್ಯ?

ಬ್ಯಾಂಕಿಂಗ್ ಪ್ರಪಂಚಕ್ಕಾಗಿ ಲೇಖನ ಬರೆಯಲು ಎರಡು ಬಗೆಯ ಸಾಮರ್ಥ್ಯಗಳಿರಬೇಕು.
ಮೊದಲನೆಯದಾಗಿ, ಬ್ಯಾಂಕಿಂಗಿನ ಒಳಹೊರಗುಗಳೂ ಅದರ ನಾನಾ ಮುಖಗಳೂ ಚೆನ್ನಾಗಿ ಗೊತ್ತಿರಬೇಕು. ಕೇವಲ ತಾತ್ವಿಕ ಜ್ಞಾನ ಇದ್ದರೆ ಸಾಲದು, ಆಚರಣೆಯನ್ನು ಆಧರಿಸಿದ ಅನುಭವವೂ ಇರಬೇಕು. ಎರಡನೆಯದಾಗಿ, ಇದನ್ನು ಅಭಿವ್ಯಕ್ತಿಸುವ ಸಾಮರ್ಥವೂ ಇರಬೇಕು. ಭಾಷಾಜ್ಞಾನವಿರಬೇಕು. ಭಾಷೆಯನ್ನು ಇದಕ್ಕೆ ಒಗ್ಗಿಸಿಕೊಳ್ಳಬೇಕು. ಇದಕ್ಕೆ ಅಗತ್ಯವಾದ ಪರಿಭಾಷೆಯನ್ನು ಸೃಷ್ಟಿಸಬೇಕು.

ಕನ್ನಡದ ಪ್ರಾಮುಖ್ಯ

ಇದನ್ನೆಲ್ಲ ಯಾವ ಭಾಷೆಯಲ್ಲಿ ಸಾಧಿಸಬೇಕು? ಕರ್ನಾಟಕದಲ್ಲಿ ಕನ್ನಡವಲ್ಲದೆ ಬೇರೆ ಯಾವ ಭಾಷೆ? ಕರ್ನಾಟಕದ ಅಧಿಕೃತ ಭಾಷೆ, ಪರಿಸರದ ಭಾಷೆ, ಕನ್ನಡವೇ. ಕರ್ನಾಟಕದಲ್ಲಿ ಇತರ ರಾಜ್ಯಗಳಲ್ಲಿರುವಂತೆ ಇಲ್ಲಿಯ ಅಧಿಕೃತ ಭಾಷೆ ಅಥವಾ ಪರಿಸರದ ಭಾಷೆಯಲ್ಲದೆ ಇತರ ಭಾಷೆಗಳನ್ನಾಡುವವರೂ ಇರಬಹುದು. ತಮ್ಮ ಮಾತೃಭಾಷೆ ಕನ್ನಡವಲ್ಲ ಎನ್ನುವವರು ಇಲ್ಲಿರಬಹುದು – ತಮಿಳುನಾಡಿನಲ್ಲಿ ತಮಿಳೇ ಮಾತೃಭಾಷೆ

ಆಗಿಲ್ಲದಿರುವವರೂ, ಮಾಹಾರಾಷ್ಟ್ರದಲ್ಲಿ ಮರಾಠಿ ತಾಯಿನುಡಿ ಆಗಿರದಿರುವವರೂ ಇರುವಂತೆ. ಆದರೆ ಕನ್ನಡ ಮಾತೃಭಾಷೆ ಆಗಿರದವರೂ ಮನೆಯಿಂದ ಹೊರಬಿದ್ದ ಕೂಡಲೆ ಅಥವಾ ತಮ್ಮ ಸೀಮಿತ ಪರಿಧಿಯನ್ನು ದಾಟಿದ ಕೂಡಲೆ ಅವರ ಕಿವಿಗೆ ಸಾಮಾನ್ಯವಾಗಿ ಬೀಳುವ ಭಾಷೆ ಕನ್ನಡವೇ. ಇದು ಪರಿಸರದ ಭಾಷೆ, ಅಂಗಡಿ ಮುಂಗಟ್ಟುಗಳಲ್ಲಿ, ಮಾರುಕಟ್ಟೆಯಲ್ಲಿ, ಬಸ್ಸು ರೈಲುಗಳಲ್ಲಿ ಯಾವ ಭಾಷೆ ಕೇಳಿಬರುವುದೋ, ಯಾವ ಭಾಷೆಯನ್ನು ಎಲ್ಲರೂ ಸಾಮಾನ್ಯವಾಗಿ ತಮ್ಮ ವ್ಯವಹಾರಗಳಿಗೆ ಬಳಸುತ್ತಾರೋ, ಆ ಭಾಷೆಯಲ್ಲಿ ಬ್ಯಾಂಕುಗಳೂ ವ್ಯವಹಾರ ನಡೆಸುವುದು ಸಹಜ ಹಾಗೂ ಸಾಧು ಎಂಬುದರಲ್ಲಿ ಸಂದೇಹ ಇರಬಾರದು, ಇರಲಾರದು. ಆದ್ದರಿಂದ ಕರ್ನಾಟಕದಲ್ಲಿ ಬ್ಯಾಂಕಿಂಗಿನ ಭಾಷೆ ಕನ್ನಡವಲ್ಲದೆ ಬೇರೆ ಯಾವುದು ತಾನೇ ಆದೀತು?

ಬ್ಯಾಂಕಿಂಗ್ ಸಾಹಿತ್ಯ ಸೃಷ್ಟಿ

'ಬ್ಯಾಂಕಿಂಗ್ ಪ್ರಪಂಚಕ್ಕೆ ಲೇಖನ ಬರೆಯುವವರ ಪಡೆಯೊಂದನ್ನು ಸೃಷ್ಟಿ ಮಾಡುವುದರ ಜೊತೆಗೆ ಬ್ಯಾಂಕಿಂಗ್ ಸಾಹಿತ್ಯ ಸೃಷ್ಟಿಯನ್ನೂ ಪರಿಭಾಷೆಯ ನಿರ್ಮಾಣವನ್ನೂ ವ್ಯವಸ್ಥಿತವಾಗಿ ಕೈಗೊಳ್ಳುವುದರ ಅಗತ್ಯ ನಮಗೆ ಕಂಡುಬಂತು. ಬ್ಯಾಂಕಿಂಗ್ ಕಮ್ಮಟವನ್ನು ಏರ್ಪಡಿಸಿದ್ದು ಈ ಅಗತ್ಯದ ಪೂರೈಕೆಗಾಗಿಯೇ. ಬ್ಯಾಂಕುಗಳಲ್ಲಿ ಉದ್ಯೋಗನಿರತರಾದವರು, ಬ್ಯಾಂಕಿಂಗಿನಲ್ಲಿ ಆಸಕ್ತಿ ಇರುವವರು, ಯಾರಾದರೂ, ಈ ಕಮ್ಮಟದಲ್ಲಿ ಭಾಗವಹಿಸಲು ಅವಕಾಶ ಇರಬೇಕು ಎಂದು ಆಲೋಚಿಸಲಾಯಿತು. ಕಮ್ಮಟವನ್ನು ಯಾವಾಗಲೋ ಒಮ್ಮೆ ಏರ್ಪಡಿಸಿದರೆ ಸಾಲದು. ಇದನ್ನು ಆಗಿಂದಾಗ್ಗೆ, ರಾಜ್ಯದ ಬೇರೆಬೇರೆಡೆಗಳಲ್ಲಿ, ಏರ್ಪಡಿಸಬೇಕೆಂದೂ ಯೋಚಿಸಲಾಯಿತು. ಅಂತೆಯೇ ಸಾಮಾನ್ಯವಾಗಿ ಪ್ರತಿ ಆರು ತಿಂಗಳುಗಳಿಗೆ ಒಂದರಂತೆ, ಒಂದೊಂದು ಸಾರಿ ಒಂದೊಂದು ಜಿಲ್ಲೆಯ ಪ್ರಮುಖ ಸ್ಥಳವೊಂದರಲ್ಲಿ, ಕಮ್ಮಟ ಏರ್ಪಡಿಸುತ್ತ ಬರಲಾಗುತ್ತಿದೆ. ಮೊದಲನೆಯ ಕಮ್ಮಟ ನಡೆದದ್ದು ಮೈಸೂರಿನಲ್ಲಿ. ಎರಡನೆಯದು ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿ. ಹೀಗೆಯೇ ಇದುವರೆಗೆ ಬೆಂಗಳೂರು ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ಬಿಟ್ಟು ಉಳಿದೆಲ್ಲ ಜಿಲ್ಲೆಗಳಲ್ಲೂ ಕಮ್ಮಟಗಳನ್ನು ಏರ್ಪಡಿಸಲಾಗಿದೆ. ಬೇರೆಬೇರೆ ಜಿಲ್ಲೆಗಳಲ್ಲಿ ಕಮ್ಮಟಗಳನ್ನು ಏರ್ಪಡಿಸುವುದರ ಉದ್ದೇಶಗಳೆಂದರೆ, ಆ ಜಿಲ್ಲೆಗಳ ಜನಕ್ಕೆ ನಮ್ಮ ಕೆಲಸದ ಪರಿಚಯ ಮಾಡಿಕೊಡುವುದು, ಅಲ್ಲಿಯ ಜನಜೀವನ ಹಾಗೂ ಆರ್ಥಿಕ ಸಮಸ್ಯೆಗಳನ್ನು ಅರಿತುಕೊಳ್ಳುವುದು ಮತ್ತು ಅಲ್ಲಿಯ ಭಾಷಾ ವೈಶಿಷ್ಟ್ಯವನ್ನು ತಿಳಿದುಕೊಳ್ಳುವುದು.

ಉದ್ದೇಶ, ಸ್ವರೂಪ

ಕಮ್ಮಟ ಯಾವ ಜಿಲ್ಲೆಯಲ್ಲಿ ನಡೆಯುವುದೋ ಆ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತೊಡಗಿರುವವರೇ ಅದರಲ್ಲಿ ಭಾಗವಹಿಸಬೇಕೆಂದೇನೂ ಇಲ್ಲ. ಭಾರತೀಯ ಸ್ಟೇಟ್ ಬ್ಯಾಂಕಿಗಷ್ಟೇ ಇದು ಸೀಮಿತವಾಗಿರಬಾರದೆಂಬುದೂ ನಮ್ಮ ಉದ್ದೇಶ. ಎಲ್ಲ ಬ್ಯಾಂಕುಗಳವರಿಗೂ ಸಂಬಂಧಿಸಿದ ಕೆಲಸ ಇದು. ಆದ್ದರಿಂದ ಕಮ್ಮಟದಲ್ಲಿ ವಿವಿಧ ಬ್ಯಾಂಕುಗಳ ಉದ್ಯೋಗಿಗಳು ಪಾಲ್ಗೊಳ್ಳುತ್ತ ಬಂದಿದ್ದಾರೆ. ಬ್ಯಾಂಕಿಂಗ್ ಕಮ್ಮಟ ಅರಂಭವಾದ್ದು ಸಂಪೂರ್ಣವಾಗಿ ಕೆಲವು ಆಸಕ್ತರ ಸ್ವಪ್ರೇರಣೆಯಿಂದ. ಇದು ನಡೆಯುತ್ತ ಬರುತ್ತಿರುವುದು ಸಮನ್ವಯ ಸಮಿತಿಯ ಆಶ್ರಯದಲ್ಲಿ. ಇದಕ್ಕೆ ಬ್ಯಾಂಕುಗಳು ಈಗ ಅಧಿಕೃತವಾಗಿ ತಮ್ಮ ಉದ್ಯೋಗಿಗಳನ್ನು ಕಳುಹಿಸುತ್ತಿವೆ. ಈ ಅಧಿಕೃತ ಕಮ್ಮಟಿಗರ ಜೊತೆಗೆ ಹಲವರು ಸ್ವಂತ ಇಚ್ಛೆಯಿಂದ ಬರುತ್ತಿದ್ದಾರೆ. ಕೆಲವರು ಪ್ರತಿಯೊಂದು ಕಮ್ಮಟದಲ್ಲೂ ಭಾಗವಹಿಸುತ್ತ ಬಂದಿದ್ದಾರೆ.

ಪ್ರತಿಯೊಂದು ಕಮ್ಮಟದ ಅವಧಿ ಸಾಮಾನ್ಯವಾಗಿ ಆರು ದಿನ. ಅಧಿಕೃತ ಅಭ್ಯರ್ಥಿಗಳಲ್ಲದೆ ಖಾಸಗಿಯಾಗಿ ಪಾಲ್ಗೊಳ್ಳುವವರೂ ಇರುವುದರಿಂದ, ಹೆಚ್ಚು ರಜಾದಿನಗಳು ಕೂಡಿಬಂದಾಗ ಕಮ್ಮಟವನ್ನು ಏರ್ಪಡಿಸುವುದು ಅನಿವಾರ್ಯವಾಗಿದೆ. ಪ್ರತಿಯೊಂದು ಕಮ್ಮಟದ ಮುಖ್ಯ ಕಾರ್ಯಭಾರಗಳೆಂದರೆ ಪ್ರಬಂಧಗಳ ಮಂಡನೆ ಮತ್ತು ಅನುವಾದ. ಕಮ್ಮಟದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಹಣ ಅಥವಾ ಬ್ಯಾಂಕಿಂಗಿಗೆ ಸಂಬಂಧಿಸಿದ ಯಾವುದಾದರೊಂದು ವಿಷಯವನ್ನು ಕುರಿತು ಕನ್ನಡದಲ್ಲಿ ಒಂದು ಪ್ರಬಂಧವನ್ನು ಬರೆದು ತರಬೇಕು. ಜೊತೆಗೆ ಕಮ್ಮಟದ ಕಾರ್ಯಕರ್ತರು ಸೂಚಿಸಿದ ಇಂಗ್ಲಿಷ್ ಲೇಖನವೊಂದರ ನಿರ್ದಿಷ್ಟ ಭಾಗವನ್ನು ಅನುವಾದ ಮಾಡಿಕೊಂಡು ಬರಬೇಕು. ಪ್ರತಿಯೊಬ್ಬರೂ ತಮ್ಮ ಪ್ರಬಂಧವನ್ನು ಕಮ್ಮಟದಲ್ಲಿ ಮಂಡಿಸುತ್ತಾರೆ. ಆಮೇಲೆ ಕಮ್ಮಟದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಆ ಪ್ರಬಂಧವನ್ನು ವಿಮರ್ಶಿಸುತ್ತಾರೆ. ಇವರ ಪೈಕಿ ಒಬ್ಬರು ಪ್ರಧಾನ ವಿಮರ್ಶಕರು. ಪ್ರಧಾನ ವಿಮರ್ಶಕರು ತಮ್ಮ ವಿಮರ್ಶೆ ನೀಡಿದ ಮೇಲೆ ಇತರರು ತಂತಮ್ಮ ಅನಿಸಿಕೆಗಳನ್ನು ತಿಳಿಸುತ್ತಾರೆ. ವಿಷಯ, ಭಾಷೆ – ಈ ಎರಡೂ ದೃಷ್ಟಿಗಳಿಂದ ಪ್ರಬಂಧವನ್ನು ವಿಮರ್ಶಿಸಲಾಗುತ್ತದೆ. ಪ್ರಬಂಧದಲ್ಲಿ ಬಂದಿರುವ ಪಾರಿಭಾಷಿಕ ಪದಗಳ ಮೇಲೂ ಚರ್ಚೆ ನಡೆಯುತ್ತದೆ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟು ಪ್ರಬಂಧಕಾರರು ಅನಂತರ ತಮ್ಮ ಪ್ರಬಂಧವನ್ನು ಪರಿಷ್ಕರಿಸಿ ಕೊಡುತ್ತಾರೆ. ಪ್ರಬಂಧ ಪ್ರಕಟಣೆಗೆ ಯೋಗ್ಯವಾಗಿದೆಯೆನಿಸಿದರೆ ಅದು 'ಬ್ಯಾಂಕಿಂಗ್ ಪ್ರಪಂಚ'ದ ಮುಂದಿನ ಸಂಚಿಕೆಯೊಂದರಲ್ಲಿ ಪ್ರಕಟವಾಗುತ್ತದೆ.

ಕಮ್ಮಟಿಗರು ಮಾಡಿರುವ ಭಾಷಾಂತರವನ್ನೂ ಕಮ್ಮಟದಲ್ಲಿ ಪರಿಶೀಲಿಸಲಾಗುತ್ತದೆ. ಇಂಗ್ಲಿಷ್ ಮೂಲದ ಪ್ರತಿಯೊಂದು ವಾಕ್ಯವನ್ನೂ ಓದಿ, ಭಾಷಾಂತರವನ್ನೂ ಓದಿ ಚರ್ಚಿಸಿ ಅದನ್ನು ಪರಿಷ್ಕರಿಸಲಾಗುತ್ತದೆ. ಬ್ಯಾಂಕಿಂಗ್ ಕುರಿತ ಯಾವುದೇ ವಿಷಯವನ್ನು ಇಂಗ್ಲಿಷಿನಲ್ಲಿ ಹೇಗೆ ಅಭಿವ್ಯಕ್ತಿಸಲಾಗಿದೆ, ಅದನ್ನು ಅಷ್ಟೇ ಸಮರ್ಪಕವಾಗಿ ಕನ್ನಡದಲ್ಲಿ ತರುವುದು ಹೇಗೆ, ಅಲ್ಲಿ ಬಳಸಲಾಗಿರುವ ಪಾರಿಭಾಷಿಕ ಪದಗಳಿಗೆ ಸಂವಾದಿಯಾಗಿ ಕನ್ನಡದಲ್ಲಿ ಯಾವ ಪದಗಳನ್ನು ಬಳಸಬೇಕು ಎಂಬುದರ ಅರಿವು ಕಮ್ಮಟಿಗರಿಗೆ ಉಂಟಾಗುತ್ತದೆ. ಜೊತೆಗೆ ಹೊಸ ಹೊಸ ವಿಚಾರಗಳನ್ನು ಅಭಿವ್ಯಕ್ತಿಸಲು ಕನ್ನಡ ಭಾಷೆಯನ್ನು ಹೊಂದಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಹೀಗೆ ಸಾಮೂಹಿಕವಾಗಿ ಭಾಷಾಂತರಿಸಲಾದ ಲೇಖನವನ್ನೂ ಬ್ಯಾಂಕಿಂಗ್ ಪ್ರಪಂಚದಲ್ಲಿ ಪ್ರಕಟಿಸಲಾಗುತ್ತದೆ.

ಬ್ಯಾಂಕಿಂಗ್ ಕಮ್ಮಟ ತನ್ನ ಮುಂದೆ ಇಟ್ಟುಕೊಂಡ ಗುರಿಗಳು ಹಲವಾರು. ಮೊದಲನೆಯದಾಗಿ, ಬ್ಯಾಂಕಿಂಗ್ ಕುರಿತ ಲೇಖಕರ ಪಡೆಯೊಂದರ ಸೃಷ್ಟಿಯಾಗಿದೆ. ಬ್ಯಾಂಕಿಂಗ್ ಪ್ರಪಂಚಕ್ಕೆ ಅಗತ್ಯವಾದ ಲೇಖನಗಳ ಪೂರೈಕೆ ಆಗುತ್ತಿದೆ. ಕನ್ನಡದಲ್ಲಿ ಬ್ಯಾಂಕಿಂಗ್ ಸಾಹಿತ್ಯದ ಸೃಷ್ಟಿಯಾಗುತ್ತಿದೆ. ಇಂಗ್ಲಿಷಿನಲ್ಲಿ ಅಭಿವ್ಯಕ್ತಿಸಬಹುದಾದ ಯಾವುದೇ ವಿಷಯವನ್ನು ಕನ್ನಡದಲ್ಲಿ ಅಷ್ಟೇ ಸಮರ್ಥವಾಗಿ ಅಭಿವ್ಯಕ್ತಿಸಬಹುದು ಎಂಬುದನ್ನು ಅದು ಸಿದ್ಧಮಾಡಿ ತೋರಿಸಿಕೊಡುತ್ತದೆ. ಭಾಷೆಗೆ ಹೊಸ ಆಯಾಮವೊಂದನ್ನು ದೊರಕಿಸಿ ಕೊಡುತ್ತದೆ. ಬ್ಯಾಂಕಿಂಗ್ ಕುರಿತ ಪಾರಿಭಾಷಿಕ ಪದಗಳನ್ನು ಟಂಕಿಸುವುದು ಸಾಧ್ಯವಾಗುತ್ತದೆ. ಈಗಾಗಲೇ ಬಳಕೆಯಲ್ಲಿರುವ ಪದಗಳ ಅರ್ಥವನ್ನು ನಿರ್ದಿಷ್ಟವಾಗಿ ನಿರ್ಧರಿಸಲಾಗುತ್ತದೆ.

ಇವೆಲ್ಲದರ ಜೊತೆಗೆ, ಬ್ಯಾಂಕುಗಳಲ್ಲಿ ಕನ್ನಡವನ್ನು ಬಳಸುವುದು ಸಾಧ್ಯವಷ್ಟೇ ಅಲ್ಲ, ಅದು ಅಗತ್ಯ, ಅನಿವಾರ್ಯ ಎಂಬುದು ಭಾಗಿಗಳಿಗೆ ಮನವರಿಕೆಯಾಗುತ್ತದೆ. ಇದೂ ಒಂದು ಮುಖ್ಯವಾದ ಸಾಧನೆ. ಇಂದಲ್ಲ ನಾಳೆ ಬ್ಯಾಂಕುಗಳಲ್ಲಿ ಎಲ್ಲ ಹಂತಗಳಲ್ಲಿ ಕನ್ನಡವನ್ನು ಬಳಸಬೇಕಾಗಿ ಬಂದಾಗ, ಅದಕ್ಕೆ ಅಗತ್ಯವಾದ ಎಲ್ಲ ಸಾಮಗ್ರಿಯೂ ಕನ್ನಡದಲ್ಲಿ ಲಭ್ಯವಿರುವುದಲ್ಲದೆ ಅದನ್ನು ನಿರ್ವಹಿಸಬಲ್ಲವರ ಪಡೆಯು ಸಿದ್ಧವಾಗಿರುತ್ತದೆ. ಬ್ಯಾಂಕ್ ವ್ಯವಹಾರಕ್ಕೆ ಕನ್ನಡ ಅಣಿಗೊಂಡಿಲ್ಲ ಎಂದು ಯಾರೂ ಹೇಳುವಂತಿರುವುದಿಲ್ಲ.

ವಿಶಿಷ್ಟ ತರಬೇತಿ

ಬ್ಯಾಂಕಿಂಗ್ ಕಮ್ಮಟ ಕೇವಲ ಕನ್ನಡ ತರಬೇತಿ ಕಾರ್ಯಕ್ರಮ, ಬ್ಯಾಂಕುಗಳಲ್ಲಿ ಕನ್ನಡ ಬಳಸುವ ಬಗ್ಗೆ ಪ್ರಚಾರ – ಎಂದು ಅನೇಕರು ಅಂದುಕೊಳ್ಳುವುದುಂಟು. ಬ್ಯಾಂಕುಗಳಲ್ಲಿ

ಕನ್ನಡ ಬಳಕೆಗೆ ಬರಬೇಕು ಎಂಬುದು ಆಶಯವಾದರೂ ಇದನ್ನು ಬರೀ ಪ್ರಚಾರದ ಮೂಲಕವೇ ಸಾಧಿಸುವುದು ಉದ್ದೇಶವಲ್ಲ. ಅದರ ಬಳಕೆ ಸಾಧ್ಯವಾಗುವಂತೆ ಅದಕ್ಕೆ ಭೂಮಿಕೆಯನ್ನು ಸೃಷ್ಟಿಸುವುದು ಉದ್ದೇಶ. ಯಾವುದೇ ಅಭಿಪ್ರಾಯವನ್ನು ಇತರರ ಮೇಲೆ ಹೇರುವ ಪ್ರಶ್ನೆಯೂ ಇಲ್ಲ. ಬ್ಯಾಂಕಿಂಗ್ ಕಮ್ಮಟದಲ್ಲಿ ಪ್ರಬಂಧ ಮಂಡನೆಗಾಗಿ, ಅನುವಾದಕ್ಕಾಗಿ, ಎತ್ತಿಕೊಳ್ಳುವ ವಿಷಯಗಳು ಬ್ಯಾಂಕಿಂಗಿಗೆ ಸಂಬಂಧಿಸಿದಂಥವೇ. ಬ್ಯಾಂಕಿಂಗಿನ ವಿವಿಧ ಚಟುವಟಿಕೆಗಳ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳು, ಹೊಸ ಬೆಳವಣಿಗೆಗಳು ಮುಂತಾದವನ್ನು ಕುರಿತು ಸಾಮಾನ್ಯವಾಗಿ ಆಯಾ ಕ್ಷೇತ್ರಗಳಲ್ಲಿ ಕಾರ್ಯನಿರತರಾದರು, ಅವುಗಳಲ್ಲಿ ಆಸಕ್ತರಾದವರು ಅಧ್ಯಯನಪೂರ್ಣವಾದ ಪ್ರಬಂಧಗಳನ್ನು ಮಂಡಿಸುತ್ತಾರೆ. ಆ ವಿಷಯಗಳಲ್ಲಿ ಅಷ್ಟೇ ಸಮರ್ಥರಾದವರು, ಆಸಕ್ತರಾದವರು ಅದನ್ನು ವಿಮರ್ಶಿಸುತ್ತಾರೆ. ಭಾಷಾಂತರಕ್ಕೆ ಆರಿಸಿಕೊಳ್ಳುವ ಲೇಖನಗಳೂ ಅಂಥವೇ. ಹೀಗಾಗಿ, ಇದು ವಾಸ್ತವವಾಗಿ ಬ್ಯಾಂಕಿಂಗನ್ನು ಕುರಿತ ನಾನಾ ಮುಖಗಳ, ಪ್ರವೃತ್ತಿಗಳ ಪರಿಚಯ, ವಿವೇಚನೆ, ವಿಮರ್ಶೆ ಆಗಿರುತ್ತದೆ. ಬ್ಯಾಂಕುಗಳ ಸಿಬ್ಬಂದಿ ತರಬೇತಿ ಕೇಂದ್ರಗಳಲ್ಲಿ ನಡೆಯುವಂಥ ಕೆಲಸವೇ ಇಲ್ಲಿ ನಡೆಯುತ್ತದೆ. ಆದರೆ ಇಲ್ಲಿ ವಿಷಯದ ವಿಚಾರದ ಹರಿವು ಏಕಮುಖವಲ್ಲ, ಬಹುಮುಖ. ಕಮ್ಮಟಿಗರೆಲ್ಲ ಇದರಲ್ಲಿ ಭಾಗವಹಿಸುತ್ತಾರೆ. ಪ್ರಬಂಧಕಾರರು ಮಂಡಿಸಿದ ವಿಷಯ ಚಕ್ರಾಕಾರವಾಗಿ ಕಮ್ಮಟಿಗರ ಮೂಲಕ ಹರಿಯುತ್ತದೆ. ಇಲ್ಲಿ ಯಾರೇ ಒಬ್ಬರು ಬೋಧಕರಲ್ಲ. ಪ್ರತಿಯೊಬ್ಬರೂ ಇತರರಿಗೆ ತಿಳಿಸುತ್ತಾರೆ, ಇತರರಿಂದ ತಿಳಿಯುತ್ತಾರೆ. ಒಂದು ರೀತಿಯಲ್ಲಿ ಇದು ವಿಷಯಚಕ್ರಪ್ರವರ್ತನ ಅಥವಾ ವಿಚಾರಚಕ್ರಪ್ರವರ್ತನ. ಇತ್ತೀಚಿನ ಪ್ರವೃತ್ತಿಗಳೂ ಪರಿಕಲ್ಪನೆಗಳೂ ಸಮಸ್ಯೆಗಳೂ ಇಲ್ಲಿ ಚರ್ಚಿತವಾಗುವುದರಿಂದ ಇದು ಅನನ್ಯವಾದ ರೀತಿಯ ತರಬೇತಿಯಾಗಿ ಪರಿಣಮಿಸಿದೆ. ಇಲ್ಲಿ ಏಕತಾನತೆಯಿಲ್ಲ. ಆದ್ದರಿಂದ ಬೇಸರ ಉಂಟಾಗದು. ಸಮಾನತೆಯ ತಳಹದಿಯ ಮೇಲೆ ಎಲ್ಲ ಕಲಾಪವೂ ನಡೆಯುವುದರಿಂದ, ಎಲ್ಲವೂ ಆನೌಪಚಾರಿಕವಾದ್ದರಿಂದ ಇಲ್ಲಿಯ ಕಲಿಕೆ ಹಾಗೂ ಕಲಿಸುವಿಕೆ ವೇದನಾರಹಿತ – learning without tears. ಇಲ್ಲಿ ನಡೆಯುವುದು ಸ್ವಯಂವಿಮರ್ಶೆ; ಸದ್ದಿಲ್ಲದ ಬೆಳವಣಿಗೆ, 'ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್" ಎಂಬುದು ಇಲ್ಲಿಯ ಕ್ರಮ. ಇನ್ನೊಬ್ಬರ ಮನಸ್ಸು ನೋಯುವುದೆಂದು ಯಾರೂ ಸತ್ಯವನ್ನು ಮರೆಮಾಚಬೇಕಾದ್ದಿಲ್ಲ. ಆದರೆ ಪ್ರಿಯವಾಗುವ ರೀತಿಯಲ್ಲಿ ಸತ್ಯವನ್ನು ನುಡಿಯುವ ಪ್ರಯೋಗ ಇಲ್ಲಿ ನಡೆಯುತ್ತದೆ. ಆತ್ಮನಿಷ್ಠೆಗಿಂತ ವಸ್ತುನಿಷ್ಠೆಯೇ ಗುರಿಯಾದಾಗ ಯಾರು ಯಾರನ್ನೂ ನೋಯಿಸುವ ಪ್ರಶ್ನೆಯೇ ಬರುವುದಿಲ್ಲ. ಇತರರ ವಿಮರ್ಶೆಯನ್ನು

ಹೇಗೆ ತೆಗೆದುಕೊಳ್ಳಬೇಕು ಎಂಬುದೂ ಅಭ್ಯಾಸವಾಗುತ್ತದೆ. ಒಟ್ಟಿನಲ್ಲಿ ಇದೊಂದು ಆದರ್ಶಯುತವಾದ, ವಿಶಿಷ್ಟವಾದ, ತರಬೇತಿಯೆಂದು ಹೇಳಿಕೊಳ್ಳದ ತರಬೇತಿ ಕೇಂದ್ರ. ಈ ಕಾರಣದಿಂದಾಗಿಯೂ ಈ ಕಮ್ಮಟಗಳು ಹೆಚ್ಚು ಪ್ರಿಯವಾಗಿ ಪರಿಣಮಿಸಿವೆ. ಹಲವರು ಪ್ರತಿ ಕಮ್ಮಟಕ್ಕೂ ತಪ್ಪದೆ ಹಾಜರಾಗುವುದು ಇದರಿಂದಾಗಿ. ಈ ಕಮ್ಮಟಗಳಿಗೆ ವಿಷಯದ ದಾಸ್ತಾನಿನ ಕೊರತೆಯಿಲ್ಲ. ಸುಸಂಸ್ಕೃತ ಸರಸವಿನೋದಗಳ ಒರತೆ ಬತ್ತುವುದೇ ಇಲ್ಲ. ಇವೆಲ್ಲವುಗಳ ಜೊತೆಗೆ ತಜ್ಞರ ಉಪನ್ಯಾಸಗಳೂ ವಿಚಾರ ಸಂಕಿರಣಗಳೂ ಕಮ್ಮಟಗಳನ್ನು ವೈವಿಧ್ಯಮಯವಾಗಿ ಮಾಡಿವೆ, ಅವುಗಳ ಉಪಯುಕ್ತತೆಯನ್ನು ಇನ್ನಷ್ಟು ಹೆಚ್ಚಿಸಿವೆ.

ಕಮ್ಮಟದ ಆರು ದಿನಗಳಲ್ಲಿ ಸಾಮಾನ್ಯವಾಗಿ ಪ್ರತಿದಿನವೂ ಎರಡು ಅಧಿವೇಶನಗಳಿರುತ್ತವೆ. ಪ್ರತಿಯೊಂದು ಅಧಿವೇಶನದ ಅವಧಿ ನಾಲ್ಕು ಗಂಟೆ. ಭೋಜನಕ್ಕೆ ಮೊದಲು ಒಂದು ಅಧಿವೇಶನವಾದರೆ ಭೋಜನಾನಂತರ ಇನ್ನೊಂದು. ಅಗತ್ಯವೆನಿಸಿದರೆ ಕಮ್ಮಟಿಗರೇ, ಸ್ವಸಂತೋಷದಿಂದ, ನಿಗದಿಯಾದ ಅವಧಿಗಿಂತ ಹೆಚ್ಚು ಕಾಲ ಕೂರಬಹುದು. ಅನೇಕ ಸಾರಿ ಬೆಳಗ್ಗೆ ಗೊತ್ತಾದ ಕಾಲಕ್ಕಿಂತ ಮೊದಲೇ ಕಮ್ಮಟ ಆರಂಭವಾದದ್ದುಂಟು. ಸಂಜೆ ಅಧಿಕೃತ ಅವಧಿ ಮುಗಿದ ಮೇಲೂ ಮುಂದುವರಿದದ್ದುಂಟು. ಕಾರ್ಯಕ್ರಮವನ್ನು ಮುಗಿಸಿಯೇ ತೀರಬೇಕು ಎಂಬ ಹಠದಿಂದ ರಾತ್ರಿ ಸರಿಹೊತ್ತಿನವರೆಗೂ ಕಮ್ಮಟ ಮುಂದುವರಿದ ಸಂದರ್ಭಗಳೂ ಇಲ್ಲದಿಲ್ಲ. ಕಮ್ಮಟ ಮುಗಿದ ಮೇಲೂ ಕಮ್ಮಟಿಗರು ತಂತಮ್ಮ ಬಿಡಾರಗಳಲ್ಲಿ ಬಿಸಿಯಾದ ಚರ್ಚೆಗಳಲ್ಲಿ ನಿರತರಾಗುವುದಲ್ಲದೆ, ಇಡೀ ರಾತ್ರಿ ಕುಳಿತು ಪ್ರಬಂಧ ಸಿದ್ಧಪಡಿಸುವುದೂ ಅಪರೂಪವೇನಲ್ಲ.

ಉಪಾಂಗಗಳು

ಕಮ್ಮಟದ ಇನ್ನೊಂದು ವೈಶಿಷ್ಟ್ಯವೆಂದರೆ, ಇದರ ಅಂಗವಾಗಿ ಹಮ್ಮಿಕೊಳ್ಳುವ ಇತರ ಕಾರ್ಯಕ್ರಮಗಳು, ಸಾಮಾನ್ಯವಾಗಿ ಪ್ರತಿದಿನವೂ ಕಮ್ಮಟ ಮುಗಿದ ಮೇಲೆ ಕವಿಗೋಷ್ಠಿಯೊ, ರಸಪ್ರಶ್ನೆಯನ್ನೊ, ಆಶುಭಾಷಣ ಸ್ಪರ್ಧೆಯನ್ನೊ ಏರ್ಪಡಿಸುವುದುಂಟು. ಒಂದೊಂದು ದಿನ ಇಂಥ ಒಂದೊಂದು ಕಾರ್ಯಕ್ರಮ ಇರುತ್ತದೆ. ಯಾವುದೇ ಶಾಸ್ತ್ರ ವಿಷಯವನ್ನು ಕುರಿತು ಬರೆಯುವುದರಲ್ಲಿ ಕಲೆಯೇನೂ ಇಲ್ಲ ಎಂದು ಅನೇಕರು ಭಾವಿಸುವುದುಂಟು. ಇಂಥ ಭಾವನೆ ತಪ್ಪು. ಸಾಹಿತ್ಯವನ್ನು ಸೃಜನಾತ್ಮಕ, ಸೃಜನೇತರ ಎಂದು ವಿಂಗಡಿಸುವುದು ಎಷ್ಟರ ಮಟ್ಟಿಗೆ ಸಾಧು, ಸಾಧ್ಯ ಎಂಬುದು ಉತ್ತರಿಸಲಾಗದ ಪ್ರಶ್ನೆ. ಇವೆರಡರ ನಡುವಣ ಗೆರೆ ಬಲು ತೆಳುವಾದ್ದು. ಇದು ಆಚೀಚೆ ಜಾರುತ್ತಲೇ ಇರುತ್ತದೆ. ಬಹುಶಃ ಇಂಗ್ಲಿಷಿನ ಫಿಕ್ಷನ್ ಅಥವಾ ಕ್ರಿಯೇಟಿವ್, ನಾನ–ಫಿಕ್ಷನ್ ಅಥವಾ

ನಾನ್–ಕ್ರಿಯೇಟಿವ್ ಎಂಬ ಪದಗಳಿಂದ ಈ ಪದಗಳು ಬಂದಿರಬಹುದು. ಫಿಕ್ಷನ್ ಅಥವಾ ಕ್ರಿಯೇಟಿವ್ ಸಾಹಿತ್ಯದಲ್ಲಿ ವಸ್ತು ಸಂಪೂರ್ಣವಾಗಿ ಕಲ್ಪಿತ. ಅಲ್ಲಿ ಲೇಖಕನಿಗೆ ಸರ್ವಸ್ವಾತಂತ್ರ್ಯವೂ ಉಂಟು. ನಾನ್–ಫಿಕ್ಷನ್ ಅಥವಾ ಸೃಜನೇತರ ಎನ್ನುವ ಸಾಹಿತ್ಯ ಸಾಮಾನ್ಯವಾಗಿ ವಾಸ್ತವಿಕ ಸಂಗತಿಗಳನ್ನು ಆಧರಿಸಿದ್ದು, ಅಥವಾ ಬೌದ್ಧಿಕವಾದ್ದು; ಆಲೋಚನೆ ಅಥವಾ ಆಲೋಚನೆಯ ಫಲವಾದ್ದು. ಆದ್ದರಿಂದ ಲಭ್ಯವಿರುವ ವಸ್ತುವನ್ನಾಧರಿಸಿ, ಅಥವಾ ಬೌದ್ಧಿಕ ಚಿಂತನೆಯನ್ನು ಕುರಿತು, ಬರೆಯಬೇಕಾದಾಗ, ಸೃಜನಾತ್ಮಕ' ಎನ್ನಲಾದ ಸಾಹಿತ್ಯವನ್ನು ರಚಿಸುವವನಿಗೆ ಇರುವ ಸ್ವಾತಂತ್ರ್ಯ ಇರುವುದಿಲ್ಲ. ಆದರೂ ಸೃಜನಾತ್ಮಕ ಸಾಹಿತ್ಯರಚನಕಾರನ ಪದಸಂಪತ್ತಿ, ಶಕ್ತಿಯುತವಾಗಿ ಬರೆಯುವ ಸಾಮರ್ಥ್ಯ, ಆಕರ್ಷಕವಾಗಿ ಅಭಿವ್ಯಕ್ತಿಸುವ ಕಲೆಗಾರಿಕೆ – ಒಟ್ಟಿನಲ್ಲಿ ಪ್ರತಿಭಾ ಸಂಪನ್ನತೆ – ಇಲ್ಲಿಯೂ ಇರಬೇಕಾಗುತ್ತದೆ. ಹಿತಮಿತ ಮಾತುಗಾರಿಕೆ, ಔಚಿತ್ಯಪ್ರಜ್ಞೆ, ಆಕರ್ಷಕ ಶೈಲಿ, ಕೊನೆಯವರೆಗೂ ಕುತೂಹಲವನ್ನು ಉಳಿಸಿ ಬೆಳಸಿಕೊಂಡು ಹೋಗುವ ಕೌಶಲ ಇಲ್ಲಿ ಕೂಡ ಅಗತ್ಯವಾಗುತ್ತದೆ. ಇಲ್ಲಿ ಲೇಖಕನ ಪ್ರತಿಭೆ, ವ್ಯುತ್ಪತ್ತಿ ಬೇರೆ ರೀತಿ ಕೆಲಸ ಮಾಡಬಹುದು; ಗುರಿ ಬೇರೆ ಇರಬಹುದು. ವಿಷಯದ ಚೌಕಟ್ಟಿನೊಳಗೆ ಸೃಜನಾತ್ಮಕತೆ ಜಾಗರವಾಡಬೇಕಾಗುತ್ತದೆ. ಆದ್ದರಿಂದಲೇ ಶಾಸ್ತ್ರ ಸಾಹಿತ್ಯವನ್ನು ರಚಿಸುವವನೂ ಸೃಜನಾತ್ಮಕವೆನ್ನಲಾದ ಸಾಹಿತ್ಯದ ಪರಿಚಯ, ಅದನ್ನು ರಚಿಸುವ ಸಾಮರ್ಥ್ಯ ದೊರಕಿಸಿಕೊಳ್ಳಬೇಕು. ಭಾಷೆಯ ಸಾಧ್ಯತೆಗಳನ್ನು ಅರಿಯದವನು ಒಳ್ಳೆಯ ಶಾಸ್ತ್ರ ಸಾಹಿತ್ಯಲೇಖಕನಾಗಲಾರ. ಈ ಅರಿವನ್ನೂ ಸಾಮರ್ಥ್ಯವನ್ನೂ ದೊರಕಿಸಿಕೊಡುವ ಉದ್ದೇಶದಿಂದ ಕನ್ನಡಿಗರಿಗಾಗಿ ಏರ್ಪಡಿಸಲಾಗುತ್ತಿರುವ ಕವಿಗೋಷ್ಠಿ, ಆಶುಭಾಷಣ ಮುಂತಾದ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿವೆ. ಕಮ್ಮಟ ನಡೆಯುವ ಊರಿನಲ್ಲಿ ವಾಸಿಸುವ ಕವಿಗಳೂ ಆಸಕ್ತರೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದಾಗಿದೆ. ಇದರಿಂದ ಸಾರ್ವಜನಿಕರೊಂದಿಗೆ ಮುಖಾಮುಖಿ, ಸಂವಾದ ಏರ್ಪಟ್ಟು ಸ್ನೇಹವಲಯ ವಿಸ್ತರಿಸುತ್ತದೆ.

ಕಮ್ಮಟದ ನಾಲ್ಕು ಗೋಡೆಗಳಿಂದಾಚೆಗೆ ಕಣ್ಣು ಹಾಯಿಸುವ ಕಾರ್ಯಕ್ರಮಗಳೂ ಇಲ್ಲದಿಲ್ಲ. ಕಮ್ಮಟದ ಬಿಡುವಿಲ್ಲದ ಕಲಾಪಗಳ ನಡುವೆ ಒಂದು ಅರ್ಧದಿನ ಬಿಡುವು ಮಾಡಿಕೊಂಡು – ಎಂದರೆ ಆ ಅರ್ಧ ದಿನದ ಕೆಲಸವನ್ನು ಉಳಿದ ದಿನಗಳಿಗೆ ಹಂಚಿಕೊಂಡು ಕನ್ನಡಿಗರಿಗಾಗಿ ಸುತ್ತಣ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಏರ್ಪಡಿಸಲಾಗುತ್ತದೆ. ವಿವಿಧ ಜಿಲ್ಲೆಗಳಲ್ಲಿ ಕಮ್ಮಟಗಳಲ್ಲಿ ಭಾಗವಹಿಸಿರುವ ಕನ್ನಡಿಗರು ಕರ್ನಾಟಕದ ಬಹುತೇಕ ಐತಿಹಾಸಿಕ ಸಾಂಸ್ಕೃತಿಕ ಧಾರ್ಮಿಕ ಸ್ಥಳಗಳನ್ನು ಸಂದರ್ಶಿಸುವುದು ಸಾಧ್ಯವಾಗಿದೆ. ಇದು

ಕಮ್ಮಟಿಗರಿಗೆ ಕಮ್ಮಟ ನೀಡುವ ಬೋನಸ್ಸು. ಇದರ ಜೊತೆಗೆ ಆ ಸುತ್ತಿನ ಬ್ಯಾಂಕ್ ಕಛೇರಿಗಳಿಗೆ ಭೇಟಿ ನೀಡಿ, ಅಲ್ಲಿಯ ಉದ್ಯೋಗಿಗಳಿಗೆ ಕಮ್ಮಟದ ಹಾಗೂ ಸಮನ್ವಯ ಸಮಿತಿಯ ಕಲಾಪಗಳ ಪರಿಚಯ ಮಾಡಿಕೊಟ್ಟು, ಕನ್ನಡದ ಬಗ್ಗೆ ಅವರಲ್ಲಿ ಆಸಕ್ತಿ ಮೂಡಿಸುವುದೂ ಸಾಧ್ಯವಾಗಿದೆ. ಹಲವು ಬ್ಯಾಂಕ್ ಶಾಖೆಗಳಲ್ಲಿ ಕನ್ನಡ ಸಂಘಗಳನ್ನು ಹೊಸದಾಗಿ ಹುಟ್ಟುಹಾಕುವುದು ಸಾಧ್ಯವಾಗಿದೆ.

ಸಹಜೀವನದ ಮಹಾಪ್ರಯೋಗ

ಒಟ್ಟಿನಲ್ಲಿ ಕಮ್ಮಟ ಸ್ವಯಂವಿಕಾಸದ ಮಹತ್ವದ ಸಾಧನ; ಜೊತೆಗೆ ಸಹಜೀವನದ ಮಹಾಪ್ರಯೋಗ. ಕಮ್ಮಟದ ಆರು ದಿನಗಳಲ್ಲಿ ಬೇರೆಬೇರೆಡೆಗಳಿಂದ ಬಂದ ಕಮ್ಮಟಿಗರು ವಯಸ್ಸು, ಅಂತಸ್ತು, ಜಾತಿ, ಮತಗಳ ಭೇದವಿಲ್ಲದೆ ಒಂದಾಗಿ ಕಲೆತು ಚಿಂತಿಸುತ್ತಾರೆ; ಸಹಜೀವನ ನಡೆಸುತ್ತಾರೆ. ಅವರವರ ಅಂತಸ್ಥ ಪ್ರತಿಭೆ ಹೊರಬರುತ್ತದೆ, ವಿಕಾಸಗೊಳ್ಳುತ್ತದೆ. ಕಮ್ಮಟದ ಆರು ದಿನಗಳು ಮುಗಿದು, ಸಮಾರೋಪ ಸಮಾರಂಭದ ಅನಂತರ ಕಮ್ಮಟಿಗರು ತಂತಮ್ಮ ಊರುಗಳಿಗೆ ಹೊರಟುನಿಂತಾಗ ಅವರ ಕಣ್ಣಂಚುಗಳಲ್ಲಿ ಹನಿ ತುಳುಕಾಡುತ್ತದೆ, ಹೃದಯ ಭಾರವಾಗುತ್ತದೆ: ಸ್ವರ್ಗದೊಳಗೀ ಸ್ನೇಹ ದೊರೆವುದೇನು? ಈ ಪರಿಯ ಸೌಭಾಗ್ಯ, ಕೆಳೆಯ ವೈಭವವು? ಎಂದು ಕವಿಯೊಂದಿಗೆ ಉದ್ಗರಿಸುವಂತಾಗುತ್ತದೆ.

ಬ್ಯಾಂಕಿಂಗ್ ಕಮ್ಮಟ ಒಂದು ವಿಶಿಷ್ಟ ಅನುಭವ, ಅನನ್ಯ ಪ್ರಯೋಗ. ಅಂತೆಯೇ ಅದು ನೂರು ದಿನ ದಾಟಿ ಮುನ್ನಡೆಯುತ್ತಿದೆ. ವಿಚಾರಚಕ್ರಕ್ಕೆ ಮೊದಲೆಲ್ಲಿ? ಕೊನೆಯಲ್ಲಿ? ಅದು ಅನುಸ್ಯೂತ. ಅದು ಕತ್ತರಿಸಿದಾಗ ಬೆಳವಣಿಗೆ ಕುಂಠಿತವಾದಂತೆ. ಈ ಧಾರೆ ಮುಂದುವರಿಯುವಂತೆ ನೋಡಿಕೊಳ್ಳುವುದು ಸಂಬಂಧಿಸಿದ ಎಲ್ಲರ ಜವಾಬ್ದಾರಿ.

24.

ಡಿಸೆಂಬರ್ 1990
ಮೈಸೂರು ಬ್ಯಾಂಕ್ ಮತ್ತು ಕನ್ನಡ

ಮೈಸೂರು ಬ್ಯಾಂಕು ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಸಂಸ್ಥೆ. ಹಳೆಯ ಮೈಸೂರಿನ ಜೀವಶಿಲ್ಪಿ, ಕೃಷ್ಣರಾಜಸಾಗರದ ನಿರ್ಮಾಪಕ, ಭದ್ರಾವತಿ ಕಬ್ಬಿಣ–ಉಕ್ಕು ಕಾರ್ಖಾನೆಯೇ ಮುಂತಾದ ಅನೇಕ ಅನೇಕ ಕೈಗಾರಿಕೋದ್ಯಮಗಳ ಪಿತ, 'ಕೈಗಾರಿಕೆಯನ್ನು ಬೆಳಸಿ, ಇಲ್ಲವೇ ಅಳಿಯುವಿರಿ!' ಎಂದು ದೇಶವನ್ನೆಚ್ಚರಿಸಿದ ಮಹಾದ್ರಷ್ಟಾರ, ಗ್ರಾಮೀಣ ಅಭಿವೃದ್ಧಿಗಾಗಿ ಅರ್ಧ ಶತಮಾನಕ್ಕೂ ಹಿಂದೆಯೇ ನೀಲನಕ್ಷೆ ತಯಾರಿಸಿ ಜಾರಿಗೆ ತಂದ ರಚನಾತ್ಮಕ ಕಾರ್ಯಕರ್ತ, ಖಾಸಗಿ ಮತ್ತು ಸರ್ಕಾರಿ ವಲಯಗಳೆರಡಕ್ಕೂ ಅವಕಾಶವಿರುವ ಸಂಮಿಶ್ರ ಅರ್ಥವ್ಯವಸ್ಥೆಯ ನೀತಿಯನ್ನು ಪ್ರಪ್ರಥಮವಾಗಿ ಪ್ರಯೋಗ ಮಾಡಿ ತೋರಿಸಿಕೊಟ್ಟ ಕಾರ್ಯಪಟು, ಆಧುನಿಕ ಆರ್ಥಿಕ ಯೋಜನಾ ಪರಿಕಲ್ಪನೆಯ ಕನಸುಗಾರ, ಧೀಮಂತ ಆಡಳಿತಗಾರ ಹಾಗೂ ರಾಜನೀತಿಜ್ಞ, ಭಾರತರತ್ನ ಡಾ.ಎಂ. ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಫಲವಾಗಿ ಸ್ಥಾಪಿತವಾದ ಮೈಸೂರು ಬ್ಯಾಂಕು ಹಳೆಯ ಮೈಸೂರು ಸಂಸ್ಥಾನದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಹೆಮ್ಮೆಯ ಸಂಸ್ಥೆ. 'ಮೈಸೂರೆನ್ನಿ, ಕನ್ನಡವೆನ್ನಿ, ಮಲ್ಲಿಗೆಯೆನ್ನಿ, ಒಂದೆ!' ಎಂಬ ಮೈಸೂರು ಮಲ್ಲಿಗೆಯ ಕವಿ ನರಸಿಂಹಸ್ವಾಮಿಯವರ ಕಲ್ಪನೆಯನ್ನು ಮುಂದುವರಿಸಿ ಈ ಪಟ್ಟಿಯನ್ನು ಬೆಳೆಸುವುದಾದರೆ ಮೈಸೂರು ಬ್ಯಾಂಕನ್ನೂ ಇದರಲ್ಲಿ ಸೇರಿಸಬೇಕು. ಮೈಸೂರಿನ ಶ್ರೀಗಂಧದಂತೆ, ರೇಷ್ಮೆಯಂತೆ ಈ ಬ್ಯಾಂಕಿನ ಕಂಪೂ ವಿಸ್ತಾರವಾದ್ದು.

ಹಳೆಯ ಮೈಸೂರು ಸಂಸ್ಥಾನದಲ್ಲಿ ಸರ್ಕಾರದ ವ್ಯವಹಾರವನ್ನು ನಡೆಸುವ ಪ್ರತಿಷ್ಠೆಯ ಬ್ಯಾಂಕಾಗಿ ಬೆಳೆದ ಮೈಸೂರು ಬ್ಯಾಂಕಿನ ಈ ಮಹತ್ತ್ವಪೂರ್ಣ ಸ್ಥಾನವೇ ಮುಂದೆ ಇದರ ಸಂಘಟನಾತ್ಮಕ ಪರಿವರ್ತನೆಗೆ ಕಾರಣವಾಯಿತು. ಬ್ರಿಟಿಷ್ ಸಾಮ್ರಾಜ್ಯವಾದದ ಕೈಗೂಸಾಗಿ ಬೆಳೆದಿದ್ದ ಇಂಪೀರಿಯಲ್ ಬ್ಯಾಂಕನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಆಗಿ ಪರಿವರ್ತಿಸಿದಾಗ ಇತರ ಹಲವು ಮಾಜಿ ದೇಶೀಯ ಸಂಸ್ಥಾನಗಳ ಪ್ರತಿಷ್ಠಿತ ಬ್ಯಾಂಕುಗಳಂತೆ ಮೈಸೂರು ಬ್ಯಾಂಕ್ ಸ್ಟೇಟ್ ಬ್ಯಾಂಕ್ ಕಕ್ಷೆಯೊಳಕ್ಕೆ ಬಂತು; ಮೊದಲು ಭಾರತೀಯ ಸ್ಟೇಟ್ ಬ್ಯಾಂಕಿನ ಸಹಾಯಕ ಬ್ಯಾಂಕಾಯಿತು; ಅನಂತರ ಅದರ ಸಹವರ್ತಿ ಬ್ಯಾಂಕಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಜಾಲವನ್ನು ವಿಸ್ತರಿಸಬೇಕೆಂಬ ಅಖಿಲ ಭಾರತ ಗ್ರಾಮೀಣ ಉದರಿ ಸರ್ವೇಕ್ಷಣಾ ಸಮಿತಿಯ ಸಲಹೆಗಳಿಗೆ ಅನುಗುಣವಾಗಿ ರೂಪಿತವಾದ ಈ ವ್ಯವಸ್ಥೆಯಲ್ಲಿ ಸ್ಟೇಟ್ ಬ್ಯಾಂಕಿನ ಗುಂಪಿನ ಇತರ

ಬ್ಯಾಂಕುಗಳಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಹೊಣೆಯೂ ಹೆಚ್ಚಿತು; ಸೇವಾವಕಾಶಗಳೂ ವಿಸ್ತರಿಸಿದುವು. ಆದರೆ ಇದರೊಂದಿಗೇ ಇದರ ಸ್ವಾತಂತ್ರ್ಯವೂ ಕುಂಠಿತವಾಯಿತು. ಪ್ರಧಾನ ಕಲಾವಿದನಾಗಿದ್ದವನನ್ನು ಪಕ್ಕವಾದ್ಯಗಾರನಾಗಿ ಮಾಡಿದಂತಾಯಿತು. ಕೆಲವು ವಿಚಾರಗಳಲ್ಲಿ ಅದರ ವೈಶಿಷ್ಟ್ಯ ಕರಗಿಹೋಯಿತು. ಹತ್ತರ ಕೂಡ ಹನ್ನೊಂದು ಎಂಬ ಹಾಗಾಯಿತು. ಅರಳುವ ಗುಲಾಬಿಗೆ ಕಬ್ಬಿಣದ ಚೌಕಟ್ಟು ಹಾಕಿದಂತಾಯಿತು. ಮುಂದೆ ಕೇಂದ್ರ ಸರ್ಕಾರ ಹಲವು ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿ ಅವಕ್ಕೂ ಗ್ರಾಮೀಣ ಆರ್ಥಿಕ ಬದುಕಿನ ಮಹಾ ಪರಿವರ್ತನೆಯ ಹೊಣೆಯನ್ನು ವಹಿಸಿಕೊಟ್ಟಾಗ ಸ್ಟೇಟ್ ಬ್ಯಾಂಕ್ ಗುಂಪಿನ ಅರ್ಥವೇ ಕುಂದಿತೆನ್ನಬೇಕು. ಈ ಬ್ಯಾಂಕುಗಳನ್ನು ಹಿಂದಿನಂತೆ ಸ್ವತಂತ್ರ ಬ್ಯಾಂಕಿಂಗ್ ಸಂಸ್ಥೆಗಳಾಗಿ ಪರಿವರ್ತಿಸುವುದು ಉಚಿತ. ಆದರೆ ಹೊಸ ಹಾದಿ ಹಿಡಿದೂ ಹಳೆಯ ಹಾದಿ ಬಿಟ್ಟುಕೊಡದ ವಿಚಿತ್ರ ರೀತಿ ನಮ್ಮ ಸರ್ಕಾರದ್ದು. ಹೀಗಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಂಥ ಬ್ಯಾಂಕುಗಳು ಇಲ್ಲಿಯೂ ಸಲ್ಲದ, ಅಲ್ಲಿಯೂ ಸಲ್ಲದ ವಿಲಕ್ಷಣ ಸಂಸ್ಥೆಗಳಾಗಿವೆ. ಸ್ಟೇಟ್ ಬ್ಯಾಂಕಿನ ಚೌಕಟ್ಟು ಇಲ್ಲದಿದ್ದರೆ ಬಹುಶಃ ಮೈಸೂರು ಬ್ಯಾಂಕು ಇನ್ನೂ ವೈಶಿಷ್ಟ್ಯ ಪೂರ್ಣವಾಗಿ ವಿಕಾಸ ಹೊಂದುತ್ತಿತ್ತು.

ಆದರೂ ಮೈಸೂರು ಬ್ಯಾಂಕು ಇಂದಿಗೂ ಮುಖ್ಯವಾಗಿ ಕರ್ನಾಟಕದ ಬ್ಯಾಂಕಾಗಿಯೇ ಉಳಿದಿದೆಯೆನ್ನಬೇಕು. ಕರ್ನಾಟಕದಲ್ಲಿ ಮುಖ್ಯವಾಗಿ ಹಳೆಯ ಮೈಸೂರು ಭಾಗದಲ್ಲಿ ಇದರ ಶಾಖೆಗಳ ಜಾಲ ಹೆಚ್ಚಾಗಿ ವಿಸ್ತರಿಸಿದೆ. ಗಂಗೆ–ಯಮುನೆಗಳ ಸಂಗಮವಾದ ಮೇಲೂ ಕಣ್ಣು ಹಾಯುವಷ್ಟು ದೂರ ಅವೆರಡೂ ನದಿಗಳ ಧಾರೆಗಳು ಬೇರೆಬೇರೆಯಾಗಿಯೇ ತೋರುವಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅನೇಕ ಉಸಿರು ಸಿಕ್ಕಿಸುವ ನಿರ್ಬಂಧಗಳ ನಡುವೆಯೂ, ಹೊರಗಿನ ಗಾಳಿಯನ್ನು ಎದುರಿಸಿಯೂ ಇಂದಿಗೂ ತನ್ನ ಕೆಲವು ಪರಂಪರಾಗತ ಸಲ್ಲಕ್ಷಣಗಳನ್ನು ಉಳಿಸಿಕೊಂಡು ಬಂದಿದೆ. ಇದು ಸ್ವಲ್ಪ ಮಟ್ಟಿಗೆ ಆಸೆ ಕೊನರಿಸುವ ಸಂಗತಿ.

ಇಂದು ಭಾರತಾದ್ಯಂತ ಶಾಖಾ ಜಾಲಗಳನ್ನು ಹಬ್ಬಿಸಿಕೊಂಡಿರುವ ಅನೇಕ ಬೃಹತ್ ಬ್ಯಾಂಕಿಂಗ್ ಸಂಸ್ಥೆಗಳು ಕರ್ನಾಟಕದಲ್ಲಿ ಹುಟ್ಟಿ ಬೆಳೆದವೇ ಆದರೂ, ಕನ್ನಡದ ಹೆಸರು ಹೇಳುವುದೂ ಮಹಾ ಪಾಪ, ಅದು ಕಿವಿಯ ಮೇಲೆ ಬಿದ್ದರೆ ಮೈಲಿಗೆ – ಎಂಬುದು ಆ ಬ್ಯಾಂಕುಗಳ ಮನೋಭಾವ. ನಮ್ಮ ಸಂವಿಧಾನದಲ್ಲಿ ಪ್ರತಿ ರಾಜ್ಯಕ್ಕೆ ಸಂಬಂಧಿಸಿದಂತೆ ಮೂರು ಭಾಷೆಗಳನ್ನು ಮಾನ್ಯ ಮಾಡಲಾಗಿದೆಯೆಂಬುದನ್ನು ಅವು ಮರೆತಿವೆ. ಪ್ರತಿ ರಾಜ್ಯದಲ್ಲಿ ಆ ರಾಜ್ಯದ ಭಾಷೆ ಮೊದಲು, ಆಮೇಲೆ ಹಿಂದಿ, ಅನಂತರ ಇಂಗ್ಲಿಷ್ ಎಂಬುದು ಅಂಗೀಕೃತ ಸೂತ್ರವಾಗಿದ್ದರೂ, ಆ

ಬ್ಯಾಂಕುಗಳು ಕನ್ನಡಕ್ಕೆ ಏನೇನೂ ಸ್ಥಾನವನ್ನೇ ನೀಡದಿರುವುದು ದುರ್ದೈವದ ಸಂಗತಿ. ಅವು ಹಿಂದಿಯೊಂದನ್ನೇ ಮುಂದೆ ಚಾಚಲು ಹರಿಹಾಯುತ್ತಿವೆ. ಎತ್ತು ಹಾರುವ ಮುಂಚೆ ಗೋಣಿ ಹಾರಿತು ಎಂಬ ಹಾಗೆ ವರ್ತಿಸುತ್ತಿವೆ. ಹಿಂದಿಯನ್ನು ತಲೆಯ ಮೇಲೆ ಹೊತ್ತು ನಡೆದರೆ ಆಳರಸರನ್ನು ಮೆಚ್ಚಿಸಬಹುದೆಂಬ ಸ್ವಾರ್ಥ ಇವುಗಳದು. ಕನ್ನಡದ ಸೊಲ್ಲೆತ್ತುವುದೇ ಅಪರಾಧ ಎಂಬ ಭೀತಿ ಇವುಗಳ ವ್ಯವಸ್ಥಾಪಕ ವರ್ಗಕ್ಕೆ. ಗುಲಾಮ ಮನೋಭಾವದ ವ್ಯವಸ್ಥಾಪಕ ಸಮೂಹದಿಂದ ನಿಜಕ್ಕೂ ಸಾಮಾಜಿಕ ವಿಕಾಸ ಸಾಧ್ಯವಾಗದು. ಬ್ಯಾಂಕಿಂಗ್ ಒಂದು ವಿಶಿಷ್ಟ ಕಲೆ. ಅದು ಬರೀ ಶುಷ್ಕ ಕಂದಾಚಾರವಲ್ಲ. ಹೇಳಿ ಬರೆಯಿಸಿದ 'ಮಕ್ಕಿಕಾಮಕ್ಕಿ'ಯಲ್ಲ. ಜನಸಾಮಾನ್ಯರು ಆಡುವ ಭಾಷೆಯಲ್ಲಿ ವ್ಯವಹಾರ ಮಾಡುವುದಕ್ಕಿಂತ ಹೆಚ್ಚು ನ್ಯಾಯಬದ್ಧವಾದ, ಸಹಜವಾದ್ದೂ, ಜನಹಿತದೊಂದಿಗೆ ಸ್ವಹಿತವನ್ನೂ ಸಂಸ್ಥಾಪಿತವನ್ನೂ ಸಾಧಿಸುವಂಥದೂ ಬೇರೊಂದಿಲ್ಲ ಎಂಬ ಸತ್ಯದ ಮನವರಿಕೆ ಆಗದಿರುವುದು ದೇಶಕ್ಕೆ ಒಳ್ಳೆಯದಲ್ಲ.

ಪ್ರತಿಕೂಲಕರ ವಾತಾವರಣದಲ್ಲಿ ಪ್ರಾದೇಶಿಕ ಭಾಷೆಯನ್ನು ಕನ್ನಡವನ್ನು ಅಗತ್ಯವಿದ್ದಲ್ಲೆಲ್ಲ ಬಳಸಲು ಮೈಸೂರು ಬ್ಯಾಂಕು ಈಚಿನ ವರ್ಷಗಳಲ್ಲಿ ಯತ್ನಿಸುತ್ತಿರುವುದು ಸ್ವಾಗತಾರ್ಹ. ಸಂವಿಧಾನದಲ್ಲಿ ಲಭ್ಯವಿರುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡರೂ ಸಾಕು. ಮಾಡಬಾರದ್ದನ್ನೇನೋ ಮಾಡುತ್ತಿದ್ದೇವೆಂಬ ಅಂಜಿಕೆ ಯಾರಿಗೂ ಇರಬಾರದು. ಕನ್ನಡವನ್ನು ಬಳಸುವಲ್ಲಿ ಮೈಸೂರು ಬ್ಯಾಂಕು ನಿಧಾನವಾಗಿಯಾದರೂ ದೃಢವಾದ ಹೆಜ್ಜೆ ಹಾಕುತ್ತಿದೆ. ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಕನ್ನಡ ವಿಭಾಗವೊಂದು ಆರಂಭವಾಗಿದೆ. ಉತ್ಸಾಹಿ ಹಾಗೂ ನಿಷ್ಠಾವಂತ ಕಾರ್ಯಕರ್ತರು ಇದನ್ನು ನಿರ್ವಹಿಸುತ್ತ ಬಂದಿದ್ದಾರೆ. ಜನಸಾಮಾನ್ಯರಿಗೆ ಉಪಯುಕ್ತವಾಗುವ ಬ್ಯಾಂಕಿನ ಅನೇಕ ನಮೂನೆಗಳನ್ನು ಇವರು ಕನ್ನಡಕ್ಕೆ ತಂದಿದ್ದಾರೆ. ಇನ್ನೊಂದು ಪ್ರಮುಖ ಕ್ರಮವೆಂದರೆ, ಸಣ್ಣ ವ್ಯವಹಾರಗಳಿಗೆ ಸಂಬಂಧಿಸಿದ ನಾನಾ ನಿಯಮ ನಿಬಂಧನೆಗಳನ್ನೊಳಗೊಂಡ ಕೈಪಿಡಿಯ ಕನ್ನಡ ಅನುವಾದ. ಇದಕ್ಕಾಗಿ 1986ರ ಜುಲೈ ತಿಂಗಳಲ್ಲಿ ಒಂದು ಭಾಷಾಂತರ ಕಮ್ಮಟವನ್ನು ಸಂಘಟಿಸಲಾಗಿತ್ತು. ಅದರಲ್ಲಿ ಭಾಗವಹಿಸಿದ ಸಮರ್ಥ ಉತ್ಸಾಹಿಗಳು ಕಿರೀಟ ಚತುರ್ಥ ಆಕಾರದ ಸುಮಾರು 250 ಪುಟಗಳ ಆ ಕೈಪಿಡಿಯನ್ನು ಕನ್ನಡಿಸಿದರು. ಆ ಅನುವಾದವನ್ನು ಆಮೂಲಾಗ್ರವಾಗಿ ಪರಿಶೋಧಿಸಿ ಇದೀಗ ಪ್ರಕಟಿಸಲಾಗಿದೆ. ಇದರಿಂದ ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಪರಿಭಾಷೆ ಕನ್ನಡಕ್ಕೆ ಲಭ್ಯವಾದಂತಾಗಿದೆ. ಇದನ್ನು ಬ್ಯಾಂಕಿನ ಎಲ್ಲ ಉದ್ಯೋಗಿಗಳೂ ಬಳಸಬೇಕು. ಬಳಕೆಯಿಂದ ಇದು ಹೆಚ್ಚು ಪರಿಚಿತವಾಗುತ್ತದೆ:

ಸ್ವೀಕಾರಯೋಗ್ಯವಾಗುತ್ತದೆ. ಜನರ ನಡುವಿನ ಸಂಸ್ಥೆಯಾದ ಬ್ಯಾಂಕು ಜನರ ಭಾಷೆಯಲ್ಲೇ ವ್ಯವಹರಿಸುವುದರಿಂದ ಅವರ ಸೇವೆ ಸಾರ್ಥಕವೆನಿಸುತ್ತದೆ.

ಮೈಸೂರು ಬ್ಯಾಂಕಿನ ಈ ಮಹತ್ವದ ಕಾರ್ಯ ಮೆಚ್ಚುಗೆಗೆ ಅರ್ಹವಾಗಿದೆ. ಇದನ್ನು ಆಗಮಾಡಿಸಿದ ಎಲ್ಲರನ್ನೂ ನಾವು ಅಭಿನಂದಿಸುತ್ತೇವೆ. ಈ ಕೆಲಸ ಮುಂದುವರಿಯಲಿ. ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ಪ್ರಮುಖ ನಮೂನೆಗಳೂ ನಿಯಮನಿಬಂಧನೆಗಳೂ ಇತರ ಸಾಮಗ್ರಿಯೂ ಕನ್ನಡಕ್ಕೆ ಬರಲಿ ಎಂದು ಹಾರೈಸುತ್ತೇವೆ.

25. ಗುಪ್ತವ್ಯಾಧಿ

ಮಾರ್ಚ್ 1991
ಸೀಸರನ ಹೆಂಡತಿ

'ಸೀಸರನ ಹೆಂಡತಿ ಅಪವಾದಾತೀತೆ' ಮಾತೊಂದುಂಟು. ರೋಮಿನ ಅಧಿಪತಿಯಾಗಿದ್ದ ಸೀಸರನಂಥ ಮಹಾವೀರನ ಹೆಂಡತಿಯನ್ನು ಕೆಣಕುವ ಎದೆಗಾರಿಕೆ ಯಾರಿಗೆ ಇದ್ದೀತು? ಆದ್ದರಿಂದ ಆಕೆಯ ಶೀಲವನ್ನು ಯಾರೂ ಪ್ರಶ್ನಿಸುವಂತಿಲ್ಲ, ಪ್ರಶ್ನಿಸಬಾರದು.

ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳೂ ಸೀಸರನ ಪತ್ನಿಯಂತೆ. ಇವು ಹಣ ಹಂಚುವ ಅಕ್ಷಯಪಾತ್ರೆಗಳು ಪ್ರಭುತ್ವದ ಬೆಳ್ಗೊಡೆಯ ಆಡಿಯಲ್ಲಿ ಹಬ್ಬಿದ ಈ ಸಂಸ್ಥೆಗಳ ಅಭದ್ರತೆಗೆ ಕಾರಣವಾದರೂ ಎಲ್ಲಿ? ಜನಕೋಟಿಯಿಂದ ಠೇವಣಿ ಸಂಗ್ರಹಿಸುವುದು ಇವಕ್ಕೆ ಅನಿವಾರ್ಯವೆನಿಸಿದರೂ ಇದು ಸರ್ಕಾರದ ಒಡೆತನಕ್ಕೆ ಒಳಪಟ್ಟಿದ್ದರಿಂದ ಈ ಹಣದ ವಿತರಣೆಯ ರೀತಿನೀತಿ ನಿರ್ಧರಿಸುವ ಅಧಿಕಾರ ಹಾಗೂ ಹೊಣೆ ಸರ್ಕಾರದ್ದು. ಅದರ ಅಭಿಕರ್ತೃವಾಗಿ ಕಾರ್ಯ ನಿರ್ವಹಿಸುವ ರಿಸರ್ವ್ ಬ್ಯಾಂಕಿನದು. ಸರ್ವಜನಹಿತಕ್ಕಾಗಿ, ಸರ್ವಜನ ಸುಖಕ್ಕಾಗಿ ಶ್ರಮಿಸುವ ಸರ್ಕಾರವಾಗಲಿ, ರಿಸರ್ವ್ ಬ್ಯಾಂಕಾಗಲಿ ಎಡಹುವುದು ಸಾಧ್ಯವುಂಟೆ?

ದೊರೆ ಎಂದೂ ತಪ್ಪು ಮಾಡಲಾರ ಎಂಬುದು ಇಂಗ್ಲೆಂಡಿನಲ್ಲೊಂದು ಜನಪ್ರಿಯ ಸಾಮತಿ. ಅಂತೆಯೇ, ಪ್ರಜಾಪ್ರಭುತ್ವ ವ್ಯವಸ್ಥೆಯೂ ತಪ್ಪು ಮಾಡಬಾರದೆಂಬುದು ಆಶಯ. ಆದರೆ ಪಕ್ಷಾಧಾರಿತ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಪಕ್ಷವೂ ತನ್ನ ಮತದಾರರ ಒಲುಮೆಯನ್ನು ಸಂಪಾದಿಸಿಕೊಳ್ಳುವುದೂ ಅದನ್ನು ರಕ್ಷಿಸಿಕೊಳ್ಳುವುದೂ ಅತ್ಯಗತ್ಯ. ಇದಕ್ಕಾಗಿ ಅದು ಹೊಸಹೊಸ ಹಾಗೂ ಆಕರ್ಷಕ ಜನಪ್ರಿಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ವಾಗ್ದಾನ ಮಾಡುವುದೂ, ಅಧಿಕಾರ ಪಡೆದಾಗ ಅವನ್ನು ಜಾರಿಗೆ ತರುವುದೂ ಸಾಮಾನ್ಯ. ಈ ರಾಜಕೀಯ ಪಕ್ಷಗಳ ಉದ್ದೇಶವನ್ನು ಯಾರೂ ಪ್ರಶ್ನಿಸಲಾರರಾದರೂ ಆ ಕಾರ್ಯಕ್ರಮಗಳನ್ನು ಸಮಾರಾಧನೆಯ ರೂಪದಲ್ಲಿ ಆಚರಣೆಗೆ ತಂದಾಗ ಸಂಪನ್ಮೂಲಗಳು ಪೋಲಾಗುವುದೂ ಅವಕ್ಕೆ ಯಾದೃಚ್ಛಿಕತೆಯ ದೋಷ ಅಂಟಿಕೊಳ್ಳುವುದೂ ಸಹಜ. ಸಾರ್ವಜನಿಕರ ಹಣದ ಅಪವ್ಯಯವಾಗುವ ಸಂಭವವೂ ಉಂಟು. ಉಳಿತಾಯದಾರರಿಂದ ಸಂಗ್ರಹವಾದ ಸಂಪನ್ಮೂಲವನ್ನು ವಿನಿಯೋಜನೆಯ ಮಾರ್ಗಗಳಲ್ಲಿ ಹರಿಯಿಸಿ ಆರ್ಥಿಕಾಭ್ಯುದಯ ಹಾಗೂ ಉದ್ಯೋಗಸೃಷ್ಟಿಗೆ ನೆರವಾಗಿ ಆ ಸಂಪನ್ಮೂಲ ಮತ್ತೆ ವ್ಯವಸ್ಥೆಯೊಳಕ್ಕೆ

ಹರಿದುಬಂದು ಪುನರ್ವಿನಿಯೋಜನೆಗೆ ಒದಗಿಬರುವಂತೆ ಮಾಡುವ ಬ್ಯಾಂಕಿಂಗ್ ಕಾರ್ಯಚಕ್ರಕ್ಕೆ ಇದರಿಂದ ಭಂಗ ಉಂಟಾಗುವ ಅಪಾಯವುಂಟು. ರಾಜಕಾರಣದ ಕೈ ಮೇಲಾದಾಗ, ಅರ್ಥ ವ್ಯವಸ್ಥೆಯ ಸಮಗ್ರ ಚಿತ್ರ ಕಣ್ಮರೆಯಾದಾಗ ಹೀಗಾಗುವುದು ಸಹಜ. ಅಂತಿಮವಾಗಿ ಬ್ಯಾಂಕುಗಳೇ ದುರ್ಬಲಗೊಳ್ಳಬಹುದು. ಅವುಗಳ ಲಾಭಪ್ರದತೆಗೆ ಊನ ಉಂಟಾಗಬಹುದು, ಇತರ ಉದ್ಯಮಗಳ ಅಸ್ವಸ್ಥತೆಯನ್ನು ಚಿಕಿತ್ಸೆಯ ಮೂಲಕ ಹೋಗಲಾಡಿಸಬೇಕಾದ ಬ್ಯಾಂಕುಗಳೇ ಅಸ್ವಸ್ಥವಾಗಬಹುದು. ವೈದ್ಯರಿಗೇ ವ್ಯಾಧಿ ತಗುಲಿದಂತಾಗಬಹುದು. ಎಲ್ಲವೂ ಸರಿಯಾಗಿದೆಯೆಂಬ ಚಿತ್ರವನ್ನೇ ಕೊಡುತ್ತಾಬಂದು, ಕೊನೆಗೆ ಹಠಾತ್ತನೆ ವ್ಯಾಧಿ ಉಲ್ಬಣಗೊಂಡಾಗ ಅವು ಕುಸಿಯುವಂತಾಗಬಹುದು. ಎಲ್ಲವೂ ಚೆನ್ನಾಗಿದೆಯೆಂಬ ಅವಗುಂಠನವನ್ನು ಸರಿಸಿ ನೋಡಿದರೆ ಒಳಗಿನ ವ್ಯಾಧಿ ಗೊತ್ತಾದೀತು. ಅದನ್ನು ಸರಿಸಲೇಬೇಕಾದ ಕಾಲವೂ ಬಂದೀತು,

ಬ್ಯಾಂಕಿಂಗ್ ಪ್ರಪಂಚದ ಪ್ರಸಕ್ತ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೆಲವು ಲೇಖನಗಳು ಈ ಕ್ಷೇತ್ರದಲ್ಲಿ ಹಬ್ಬುತ್ತಿರುವ ವ್ಯಾಧಿಯತ್ತ ನಮ್ಮ ಗಮನ ಸೆಳೆಯುತ್ತವೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರಾಜಕೀಯ ಹಸ್ತಕ್ಷೇಪ, ಕೃಷಿ ಹಾಗೂ ಗ್ರಾಮೀಣ ಋಣಪರಿಹಾರ ಯೋಜನೆ, ಭಿನ್ನಕ ಬಡ್ಡಿ ದರ, ಬ್ಯಾಂಕ್ ವಿಲೀನ – ಈ ಲೇಖನಗಳು ಬ್ಯಾಂಕಿಂಗ್ ವಲಯದಲ್ಲಿ ಹಬ್ಬುತ್ತಿರುವ ವ್ಯಾಧಿಗಳ ಸ್ವರೂಪವನ್ನು ವಿವರಿಸುತ್ತವೆ. ಇವನ್ನು ನಿವಾರಿಸದಿದ್ದರೆ ಮುಂದೆ ಅಪಾಯ ಕಾದಿಟ್ಟಿದ್ದೆಂಬುದನ್ನು ಮನವರಿಕೆ ಮಾಡಿಕೊಡುತ್ತವೆ.

ರಾಷ್ಟ್ರೀಕರಣಾನಂತರ

ಭಾರತದಂಥ ಹಿಂದುಳಿದ ದೇಶದ ಆರ್ಥಿಕ ಸಾಮಾಜಿಕ ಅಭ್ಯುದಯವನ್ನು ಸಾಧಿಸಲು ಬ್ಯಾಂಕ್ ರಾಷ್ಟ್ರೀಕರಣ ಒಂದು ಮಹಾ ಉಪಾಯ ಎಂದು ನಂಬಿದ್ದ ಕಾಲವೊಂದಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಜಾಲವನ್ನು ಹಬ್ಬಿಸಲೂ ಆರ್ಥಿಕವಾಗಿ ದುರ್ಬಲರಾಗಿರುವವರಿಗೂ ಸಾಮಾಜಿಕವಾಗಿ ಹಿಂದುಳಿದವರಿಗೂ ಅಗತ್ಯವಾದ ಹಣ ಪೂರೈಸಲೂ ಇದು ಅನುವಾಗಿ ಒದಗಿಬಂತು ಎಂಬುದು ನಿಜ. ಹಳೆಯ ಇಂಪೀರಿಯಲ್ ಬ್ಯಾಂಕನ್ನು ಭಾರತೀಯ ಸ್ಟೇಟ್ ಬ್ಯಾಂಕಾಗಿ ಪರಿವರ್ತಿಸಿ, ಹಲವಾರು ರಾಜ್ಯ ಬ್ಯಾಂಕುಗಳನ್ನು ಇದರ ತೆಕ್ಕೆಗೆ ಒಳಪಡಿಸಿ, ಗ್ರಾಮ ಪ್ರದೇಶದಲ್ಲಿ ಇವು ಶಾಖೆಗಳನ್ನು ತೆರೆಯುವ ಕ್ರಮ ಕೈಗೊಳ್ಳುವಂತೆ ಮಾಡಿದ್ದು ಮೊದಲ ಹೆಜ್ಜೆ. ಹದಿನಾಲ್ಕು ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ್ದು ಎರಡನೆಯ ಹೆಜ್ಜೆ. ಮತ್ತೆ ಹನ್ನೊಂದು ವರ್ಷಗಳ ಅನಂತರ ಇನ್ನೂ ಆರು ಬ್ಯಾಂಕುಗಳನ್ನು ಸರ್ಕಾರದ ಒಡೆತನಕ್ಕೆ ತಂದದ್ದು ಮೂರನೆಯದು. ತ್ರಿವಿಕ್ರಮನ ಮೂರು ಪಾದಗಳಂತೆ ಇವುಗಳ ಶಾಖೆಗಳು ಇಂದು ಪಟ್ಟಣ, ಅರೆಪಟ್ಟಣ

ಹಾಗೂ ಗ್ರಾಮಗಳಲ್ಲಿ ತುಂಬಿ ಹೋಗಿವೆ. ಇವುಗಳ ಜೊತೆಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ತಮ್ಮ 'ಅಳಿಲ ಸೇವೆ' ಮಾಡುತ್ತಿವೆ. ಇವು ವಾಣಿಜ್ಯ ಬ್ಯಾಂಕುಗಳ ಕೃಪಾಪೋಷಿತ ಸಂಸ್ಥೆಗಳು. ಹೀಗೆಲ್ಲಾ ಆಗಿದ್ದೂ ಕೆಲವು ಪ್ರದೇಶಗಳಲ್ಲಿ ಸಾಕಷ್ಟು ಬ್ಯಾಂಕಿಂಗ್ ಕಛೇರಿಗಳಿಲ್ಲವೆಂಬುದು ನಿಜ. ಆದರೆ ಇನ್ನು ಕೆಲವು ಕಡೆಗಳಲ್ಲಿ ಇವು ಕಿಕ್ಕಿರಿದು ತುಂಬಿವೆ. ಆರಂಭದ ಆತುರದಲ್ಲಿ ಹೀಗೆಲ್ಲಾ ಆಗುವುದು ಸಹಜವೇ. ಗುರಿ ತಲಪಿದೆವೆಂದು ತೋರಿಸುವ ಆತುರದಲ್ಲಿ ಆದ ಅತಿವ್ಯಾಪ್ತಿ ಹಾಗೂ ಅವ್ಯಾಪ್ತಿಯ ದೋಷಗಳು ಇವು.

ಅಂತೂ ಈ ಎರಡು ದಶಕಗಳಿಗೂ ಹೆಚ್ಚಿನ ಕಾಲದಲ್ಲಿ ಬ್ಯಾಂಕಿಂಗಿನ ಬೆಳವಣಿಗೆ ಅಗಾಧವೆಂಬುದರಲ್ಲಿ ಸಂದೇಹವಿಲ್ಲ. ಶಾಖೆಗಳ ಸಂಖ್ಯೆಯ ಜೊತೆಗೆ ವಹಿವಾಟಿನ ಗಾತ್ರವೂ ಬೆಳೆದಿದೆ. ಸುಮಾರು ಇಪ್ಪತ್ತು ವರ್ಷ ಹಿಂದೆ ಬ್ಯಾಂಕ್ ಠೇವಣಿಗಳ ಮೊತ್ತ ನಮ್ಮ ಸ್ಥೂಲ ದೇಶೀಯ ಉತ್ಪನ್ನದ ಶೇ. 14.5ರಷ್ಟು ಇತ್ತು. ಇಪ್ಪತ್ತು ವರ್ಷಗಳಲ್ಲಿ ಇದು ಶೇ.38ಕ್ಕೆ ಏರಿತು. ಹಣಕಾಸು ಆಸ್ತಿಗಳ ಪ್ರಮಾಣ ಈಗ ನಮ್ಮ ಸ್ಥೂಲ ದೇಶೀಯ ಉತ್ಪನ್ನದ ಸರಿಸುಮಾರು ಶೇ. 45ರಷ್ಟಿದೆ. ಇಂಥ ಪ್ರಗತಿ ಯಾವ ದೇಶದಲ್ಲೂ ಆಗಿಲ್ಲ. ಇದು ಹೆಮ್ಮೆ ಪಡಬೇಕಾದ್ದೇ.

ಆದರೆ ನಮ್ಮ ಬ್ಯಾಂಕ್ ಠೇವಣಿಗಳ ಶೇ. 53ಕ್ಕೂ ಹೆಚ್ಚು ಭಾಗ ಆದಾಯ ಸಂಪಾದಿಸದ ಆಸ್ತಿಗಳಲ್ಲಿ ಬಂಧಿತವಾಗಿದೆ. ಹೇಗೆಂಬ ಪ್ರಶ್ನೆಗೆ ಉತ್ತರ ಸುಲಭ. ಶೇ.15ರಷ್ಟನ್ನು ನಗದು ಮೀಸಲಾಗಿ ಇಡಬೇಕೆಂಬುದು ಶಾಸನದ ಆದೇಶ. ಇನ್ನು ಶೇ.38.5ರಷ್ಟನ್ನು ಸರ್ಕಾರಿ ಸಾಲ ಪತ್ರಗಳೇ ಮುಂತಾದವುಗಳಲ್ಲಿ ತೊಡಗಿಸಬೇಕೆಂಬುದು ಕಡ್ಡಾಯ. ಹೀಗೆ ನಗದು ಮೀಸಲು ಅನುಪಾತ, ಮತ್ತು ಪರಿನಿಯತ ದ್ರವತ್ವ ಅನುಪಾತ ತೆಗೆದಿಟ್ಟ ಮೇಲೆ (53.5%) ಉಳಿಯುವುದು ಶೇ. 46.5ರಷ್ಟು. ಬ್ಯಾಂಕುಗಳ ದ್ರವತ್ವ ಕಾಪಾಡಲೂ, ಅವುಗಳಲ್ಲಿ ಜನತೆಯ ವಿಶ್ವಾಸ ಉಳಿಯುವಂತೆ ಮಾಡಲೂ, ಹೆಚ್ಚು ಹಣ ಅರ್ಥವ್ಯವಸ್ಥೆಯಲ್ಲಿ ಹರಿದು ಬೆಲೆಗಳ ಮೇಲೆ ಒತ್ತಡ ಹೇರದಂತೆ ಎಚ್ಚರವಹಿಸಲೂ, ಸಂಪನ್ಮೂಲಗಳು ನಿಶ್ಚಿತ ಉಪಯುಕ್ತ ನಿಟ್ಟುಗಳಲ್ಲಿ ಹರಿಯುವಂತೆ ಮಾಡಲೂ, ಯೋಜಿತವಾದ ರೀತಿಯಲ್ಲಿ ಅರ್ಥವ್ಯವಸ್ಥೆ ವಿಕಾಸ ಹೊಂದುವಂತೆ ನಿರ್ದೇಶಿಸಲೂ ಇಂಥ ಕ್ರಮಗಳೆಲ್ಲ ಅಗತ್ಯ ಎಂಬ ವಾದದಲ್ಲಿ ಹುರುಳಿಲ್ಲದೆ ಇಲ್ಲ. ಆದರೆ ತಮ್ಮ ಮಗು ಮುಂದೆ ಬರಬೇಕೆಂಬ ಅತ್ಯಾಕಾಂಕ್ಷೆಯಿಂದ ಅದನ್ನು ಅತಿಯಾಗಿ ದಂಡಿಸುವ ತಂದೆತಾಯಂದಿರು ಅಂತಿಮವಾಗಿ ಆದರ ಅಭ್ಯುದಯಕ್ಕೆ ತಡೆ ಒಡ್ಡುವುದು ಸಾಮಾನ್ಯ. ಕೃತಕ ವ್ಯವಸ್ಥೆಯಿಂದಾಗಿ ಉದರಿಯ ಹರಿವಿಗೆ ತಡೆ ಉಂಟಾಗಿದೆ. ಬೇಡಿಕೆ ಪೂರೈಕೆಯ ಸಹಜ ಬಲಗಳ ಪ್ರವರ್ತನೆಗೆ ಅಡ್ಡಿಯಾಗಿದೆ, ಕೃತಕವಾದ ಬಡ್ಡಿ ದರ ವಿನ್ಯಾಸ ಅನೇಕ

ಸಂದಿಗ್ಧಗಳನ್ನು ತಂದೊಡ್ಡಿದೆ. ಬ್ಯಾಂಕ್ ವ್ಯವಹಾರದ ವೆಚ್ಚ ಅತಿಯಾಗಿದೆ. ಲಾಭಪ್ರವತೆ ಕುಗ್ಗುತ್ತಿದೆ, ನಿಷೇಧಾತ್ಮಕವಾಗುತ್ತಿದೆ.

ವಿಧಿಬದ್ಧ ಮೀಸಲುಗಳಲ್ಲಿ ತೊಡಗಿಸಿದ ಮೇಲೆ ಉಳಿಯುವ ಠೇವಣಿ ಹಣವನ್ನಾದರೂ ಲಾಭಪ್ರದವಾಗಿ ವಿನಿಯೋಜಿಸುವುದು ಬ್ಯಾಂಕುಗಳಿಗೆ ಸಾಧ್ಯವಿಲ್ಲ. ಅವು ನೀಡುವ ಒಟ್ಟು ಉದರಿಯಲ್ಲಿ ಕನಿಷ್ಠ ಶೇ 40ರಷ್ಟು ಆದ್ಯತಾ ವಲಯಕ್ಕೆ ಸಲ್ಲಬೇಕು. ಇದರಿಂದಲೂ ಬ್ಯಾಂಕು ಹೆಚ್ಚಿನ ಲಾಭ ನಿರೀಕ್ಷಿಸುವಂತಿಲ್ಲ. ಹಿಂದೆ ಹೇಳಿದ ಹಾಗೆ ಬ್ಯಾಂಕು ಠೇವಣಿಗಳ ಮೇಲೆ ನೀಡುವ ಬಡ್ಡಿ, ಅದು ನೀಡಿದ ಸಾಲದ ಮೇಲೆ ಪಡೆಯಬಹುದಾದ ಬಡ್ಡಿ ಎಲ್ಲವೂ ನಿಗದಿಯಾಗಿರುವುದರಿಂದ, ನೀಡಿದ ಸಾಲದಲ್ಲಿ ಗಮನಾರ್ಹ ಭಾಗ ಅರ್ಹರೆನಿಸಿದವರಿಗೆ ಹಾಗೂ ರಿಯಾಯಿತಿ ದರದಲ್ಲಿ ಹೋಗಬೇಕಾದ್ದರಿಂದ ಅದರ ಕಾರ್ಯನಿರ್ವಹಣೆಗೆ ಇರುವ ಅವಕಾಶ ಬಲು ಕಿರಿದು. ಬ್ಯಾಂಕು ಅನೇಕ ಕೈಗಾರಿಕೆಗಳಿಗೆ ನೀಡಿದ ಸಾಲವೂ ಹಿಂದಕ್ಕೆ ಬರುವ ಸ್ಥಿತಿಯಲ್ಲಿರುವುದಿಲ್ಲ. ಅಸ್ವಸ್ಥ ಕೈಗಾರಿಕೆಗಳಿಗೆ ಬದುಕಿ ಉಳಿಯುವ ಹಕ್ಕುಂಟು. ಇದೊಂದು ಮೂಲಭೂತ ಹಕ್ಕು ಎಂದೇ ಹೇಳಬಹುದು. ಆದರೆ ಇದಕ್ಕಾಗಿ ಸತತವಾಗಿ ನೀಡಬೇಕಾದ ಪ್ರಾಣವಾಯುವಿಗೂ ಒಂದು ಮಿತಿ ಉಂಟಲ್ಲವೆ? ಕೈಗಾರಿಕಾ ಅಸ್ವಸ್ಥತೆ ಹಾಗೂ ಆದ್ಯತಾ ವಲಯಕ್ಕೆ ನೀಡಿದ ಮುಂಗಡಗಳು ಜಿಗಟಾಗಿ ಪರಿಣಮಿಸಿ, ಕಿಲುಬು ಗಟ್ಟಿ, ಬ್ಯಾಂಕುಗಳ ಆರ್ಥಿಕ ತಳವನ್ನು ತಿಂದುಹಾಕುತ್ತಿವೆ. ಸುಮಾರು ನಾಲ್ಕು ಲಕ್ಷ ಅಸ್ವಸ್ಥ ಹಾಗೂ ದುರ್ಬಲ ಕೈಗಾರಿಕಾ ಘಟಕಗಳಲ್ಲಿ ಸಿಲುಕಿಕೊಂಡಿರುವ ಹಣ ರೂ.10,000 ಕೋಟಿಗೂ ಹೆಚ್ಚು ಎಂಬುದು ಒಂದು ಅಂದಾಜು. ಇದು ವಾಣಿಜ್ಯ ಬ್ಯಾಂಕುಗಳ ಒಟ್ಟು ಮುಂಗಡಗಳ ಶೇ.10ರಷ್ಟು!

ಗೋಷಾ ಪದ್ಧತಿ

ನಷ್ಟ ಅನುಭವಿಸುತ್ತಿದ್ದರೂ ಲಾಭದ ಕನಸು ಕಾಣುವುದು ನಮ್ಮ ಬ್ಯಾಂಕುಗಳಲ್ಲಿ ಅನೂಚಾನವಾಗಿ ನಡೆದುಬಂದಿರುವ ಒಂದು ಪ್ರಕ್ರಿಯೆ. ತೋಟದ ಶೃಂಗಾರದಲ್ಲಿ ಬ್ಯಾಂಕುಗಳು ನಿಷ್ಣಾತವಾಗಿವೆ. ಮೇಲ್ಮೆರಗು ಮಾಡುವುದು (ವಿಂಡೋ–ಡ್ರೆಸಿಂಗ್) ಒಂದು ಕಲೆ. ಬ್ಯಾಂಕುಗಳು ತಮ್ಮ ಪುಸ್ತಕಗಳಲ್ಲಿ ಅಗಾಧ ಮೊಬಲಗುಗಳನ್ನು ಈ ರೀತಿಯ ಕ್ರಿಯಾಶೀಲವಲ್ಲದ ಆಸ್ತಿಗಳ ರೂಪದಲ್ಲಿ ತುಂಬಿಕೊಂಡಿದ್ದರೂ ಇವನ್ನೆಲ್ಲ ಲಾಭ ಸಂಪಾದಿಸುವ ಆಸ್ತಿಗಳೆಂದೇ ಲೆಕ್ಕದಲ್ಲಿ ಕಾಣಿಸುತ್ತವೆ. ಬರಬೇಕಾದ ಸಾಲದ ಮೊಬಲಗಿನ ಮೇಲಣ ಬಡ್ಡಿಯನ್ನು ಲೆಕ್ಕ ಹಾಕುತ್ತ ಬಂದು, ವಸೂಲಾಗದ ಬಡ್ಡಿಯನ್ನೂ ಲಾಭವೆಂದು ಪರಿಗಣಿಸುತ್ತವೆ. ಈ ಲಾಭವೆಂಬುದು ಪುಸ್ತಕದ ಬದನೆಕಾಯಿ, ಬರೀ ಆಕಾಶ ಕುಸುಮ. ಅಸಲು

ವಸೂಲಾಗುವಂತಾದಾಗ ತಾನೇ, ಬಡ್ಡಿಯ ಮಾತು! ಬ್ಯಾಂಕ್ ಮುಂಗಡಗಳನ್ನು ಅವುಗಳ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ವರ್ಗಗಳಾಗಿ ವಿಂಗಡಿಸಿ ತೋರಿಸಬೇಕೆಂದು ರಿಸರ್ವ್ ಬ್ಯಾಂಕ್ ಆದೇಶಿಸುತ್ತದೆ. ಆದರೆ ಅಸ್ವಸ್ಥ ಘಟಕಗಳ ಬಾಕಿಗಳನ್ನು 'ತಾತ್ಕಾಲಿಕವಾಗಿ ಅನಿಯತವಾದ ಖಾತೆಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ತೋರಿಸುವುದು ಅವುಗಳ ಅಭ್ಯಾಸವಾಗಿದೆ. ಬ್ಯಾಂಕುಗಳು ತಮ್ಮ ಸ್ಥಿತಿವಿವರಣ ಪಟ್ಟಿಗಳಲ್ಲಿ ಆಧಾರಕ್ಕೆ ಅನುಗುಣವಾಗಿ ಬ್ಯಾಂಕ್ ಮುಂಗಡಗಳನ್ನು ವಿಂಗಡಿಸುವ ಬದಲು ಸ್ವಾಸ್ಥ್ಯ ಸಂಕೇತ ಸಂಖ್ಯೆಗಳಿಗೆ ಅನುಗುಣವಾಗಿ ವರ್ಗೀಕರಿಸಿ ತೋರಿಸಬೇಕೆಂಬ ವಿಚಾರ ಈಗ ಚರ್ಚೆಗೆ ಒಳಗಾಗಿದೆ. ಹೀಗೆ ಮಾಡುವುದರಿಂದ ಬ್ಯಾಂಕುಗಳ ವಿಶ್ವಾಸಾರ್ಹತೆಯ ಬಗ್ಗೆ ಸಂದೇಹ ಮೂಡಬಹುದೆಂಬ ಅಂಜಿಕೆ. ಅವಕ್ಕೆ ಬರಬೇಕಾದ ಬಡ್ಡಿಯನ್ನೂ ಆದಾಯವೆಂದು ಪರಿಗಣಿಸದೆ, ವಸೂಲಾದ್ದನ್ನು ಮಾತ್ರ ತೋರಿಸುವುದಕ್ಕೂ ಅವುಗಳ ವಿರೋಧ ಇರುವಂತಿದೆ. ಹೀಗೆ ಮಾಡುವುದಾದರೆ, ಮುಂದೆ ವಸೂಲಾಗಬಹುದಾದ ಎಷ್ಟೋ ಬಾಕಿಯನ್ನು ತೊಡೆದುಹಾಕಿದಂತೆ ಆದೀತೆಂದು ಅವಕ್ಕೆ ಭಯ. ಆದರೆ ಬ್ಯಾಂಕುಗಳು ಈಗ ಅನುಸರಿಸುತ್ತಿರುವ ಗೋಷಾ ಪದ್ಧತಿಯನ್ನು ತೊರೆದು, ತಮ್ಮ ಅವಗುಂಠನವನ್ನು ತೆಗೆದು ಹಾಕಿ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದೂ, ನಿಜ ಸ್ಥಿತಿಯ ಅರಿವು ಸರ್ಕಾರಕ್ಕೆ ಉಂಟಾಗುವಂತೆ ಮಾಡುವುದೂ ಅವಶ್ಯ ಎನಿಸಿದೆ. ಸೀಸರನ ಹೆಂಡತಿ ಸಂಶಯಾತೀತೆ ಎಂಬ ಭ್ರಮೆ ಬಹು ಕಾಲ ಉಳಿಯಲಾರದು.

ವ್ಯಾಧಿಲಕ್ಷಣ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎಲ್ಲವೂ ಚೆನ್ನಿಲ್ಲ ಎಂಬುದು ಬಹಳ ಕಾಲದಿಂದಲೂ ಒಂದು ಬಹಿರಂಗ ರಹಸ್ಯ. ಆಡುವುದಿಲ್ಲ, ಆದರೆ ಎಲ್ಲರಿಗೂ ಗೊತ್ತು – ಎಂಬ ರೀತಿಯಲ್ಲಿ ಸಂಬಂಧಪಟ್ಟವರು ವ್ಯವಹರಿಸುತ್ತಿದ್ದಾರೆ. ಆದರೆ ನಿತ್ಯನೂತನವಸನ ವ್ಯಸನಿ ರಾಜನ ಬತ್ತಲೆತನವನ್ನು ಏನೂ ಅರಿಯದ ಹಸುಳೆಯೊಂದು ಎಲ್ಲರಿಗೂ ಕೇಳುವಂತೆ ಕೂಗಿ ಹೇಳಿದಂತೆ. ನ್ಯೂ ಬ್ಯಾಂಕ್ ಆಫ್ ಇಂಡಿಯಾದ ಅಂಕಿ–ಅಂಶಗಳು ಸಾರಿಯೇ ಬಿಟ್ಟುವು. ಇನ್ನೂ ಕೆಲವು ಬ್ಯಾಂಕುಗಳು ನಷ್ಟದ ಹಾದಿಯಲ್ಲಿವೆ. ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳ ಒಟ್ಟು ಲಾಭ ಮೂರು ವರ್ಷಗಳಲ್ಲಿ ಸುಮಾರು ರೂ.250 ಕೋಟಿಗೂ ಹೆಚ್ಚಾಗಿ ಇಳಿದಿದೆಯೆಂದು ಅಂಕಿಗಳು ಸಾರುತ್ತವೆ. ನೀಡಿದ ಸಾಲಗಳು ವಾಪಸು ಬಾರದಿದ್ದಾಗ, ನಿಧಿಗಳ ಪುನಶ್ಚಕ್ರೀಕರಣ ಸಾಧ್ಯವಾಗದಾದಾಗ, ಗ್ರಾಮೀಣ ಸಾಲಗಾರರಲ್ಲಿ ಅನೇಕರು ಪಡೆದ ಸಾಲದ ಹಣವನ್ನು ಮರಳಿಸುವ

ಅಗತ್ಯವಿಲ್ಲವೆಂಬ ಧೋರಣೆ ತಳೆಯತೊಡಗಿದಾಗ ಬ್ಯಾಂಕುಗಳ ಕರಡು ಸಾಲ ಹೆಚ್ಚುತ್ತಿರುವಾಗ ಇಂಥ ಪರಿಸ್ಥಿತಿ ಸಹಜವೇ. ಬ್ಯಾಂಕ್ ಆಸ್ತಿಗಳ ಗಮನಾರ್ಹ ಭಾಗ ಕ್ರಿಯಾಶೀಲವಾಗದಿರುವಾಗ, ಠೇವಣಿಗಳಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಪರಿನಿಯತ ಮೀಸಲುಗಳಾಗಿ ಪರಿವರ್ತಿತವಾಗಿ ಅಲ್ಪ ಆದಾಯ ಸಂಪಾದಕಗಳಾದಾಗ, ಬ್ಯಾಂಕುಗಳ ಸಂಪಾದನೆಗೆ ಗರಿಷ್ಠ ಮಿತಿಯನ್ನು ನಿಗದಿಗೊಳಿಸಿದಾಗ ಅವು ನಷ್ಟದ ಹಾದಿ ಹಿಡಿಯಬೇಕಾದ್ದು ಅನಿವಾರ್ಯವಾಗುತ್ತದೆ. ದುರ್ಬಲವಾದ ಬ್ಯಾಂಕುಗಳು ಬೇಗ ಆ ಹಾದಿ ಹಿಡಿದರೆ, ಸ್ವಲ್ಪ ಬಲಿಷ್ಠವಾದವುಗಳಲ್ಲಿ ಈ ಪ್ರವೃತ್ತಿ ತಡವಾಗಿ ತಲೆಹಾಕುತ್ತದೆ. ದುರ್ಬಲವಾದ ಬ್ಯಾಂಕುಗಳನ್ನು ಬಲಿಷ್ಠ ಬ್ಯಾಂಕುಗಳಲ್ಲಿ ವಿಲೀನಗೊಳಿಸುವ ಮಾತೂ ಕೇಳಿಬರುತ್ತಿದೆ. ಕೆಲವು ಬಲಿಷ್ಠ ಬ್ಯಾಂಕುಗಳು ಪ್ರತಿಷ್ಠೆ ಬೆಳಸಿಕೊಳ್ಳುವ ಆಸೆಯಿಂದ ಈ ದುರ್ಬಲ ಬ್ಯಾಂಕುಗಳನ್ನು ವಿಲೀನಗೊಳಿಸಿಕೊಳ್ಳಲು ಮುಂದಾಗಿದ್ದುವೆಂದೂ ಸುದ್ದಿ. ಸದ್ಯಕ್ಕೆ ಸರ್ಕಾರ ಇದಕ್ಕೆ ಉತ್ತೇಜನ ನೀಡದಿರಬಹುದು. ಆದರೆ ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಪುನರ್‌ರಚನೆಗೊಳಿಸಿ ಅವುಗಳ ಸಂಖ್ಯೆಯನ್ನು ಇಳಿಸಿ, ಸಮನ್ವಯವನ್ನು ಸಾಧಿಸುವ ಚಿಂತನೆಯೂ ನಡೆದಿದೆ. ಆದರೆ ಮೂಲಭೂತವಾಗಿ ಅವುಗಳ ವ್ಯವಹಾರವನ್ನು ವೈಜ್ಞಾನಿಕ ತಳಹದಿಯ ಮೇಲೆ ನೇರ್ಪುಗೊಳಿಸದಿದ್ದರೆ, ಲಾಭ – ನಷ್ಟಗಳ ತಕ್ಕಡಿಯಲ್ಲಿ ತೂಗದಿದ್ದರೆ, ಅವುಗಳ ಪ್ರಾದೇಶಿಕ ಸ್ವರೂಪವನ್ನು ಕೂಡ ಗಣನೆಗೆ ತೆಗೆದುಕೊಳ್ಳದಿದ್ದರೆ, ಇಂಥ ಪುನರ‍್ರಚನೆಯೆಲ್ಲ ಮತ್ತೆ ಕೆಲವು ಹಿತಗಳ ಒತ್ತಡಗಳ ಪರಿಣಾಮವಾಗಿ ವಕ್ರವಾಗಿ ಮೈತಳೆಯಬಹುದಾದ ಅಪಾಯ ಇದ್ದೇ ಇದೆ.

ಸಾಮಾಜಿಕ ಆರ್ಥಿಕ ಪರಿವರ್ತನೆಯ ಹೊಣೆ ಹೊತ್ತ ಬ್ಯಾಂಕುಗಳು ಯಾವಾಗಲೂ ಲಾಭ ಸಂಪಾದನೆಯ ನಿಟ್ಟಿನಲ್ಲೇ ಚಿಂತಿಸಬಾರದೆಂಬುದು ನಿಜ. ಆದರೆ ಎರಡೂ ತುದಿಗಳು ಕೂಡಬೇಕೆಂಬುದನ್ನು ಮರೆಯುವಂತಿಲ್ಲ. ಅವಕ್ಕೆ ವಹಿಸಿಕೊಡುವ ಕಾರ್ಯಗಳಿಗೆ ತಗಲುವ ವೆಚ್ಚವೆಷ್ಟು, ಅದಕ್ಕೆ ಅಗತ್ಯವಾದ ಸಿಬ್ಬಂದಿ ಲಭ್ಯವಿದೆಯೆ, ಪರಿಣತಿಯನ್ನು ದೊರಕಿಸಿಕೊಳ್ಳಲಾಗಿದೆಯೇ ಎಂಬುವನ್ನು ಕುರಿತು ಚಿಂತಿಸುವುದೂ ಅಗತ್ಯ. ಬ್ಯಾಂಕುಗಳ ಪರಿಚಾಲನೆಯ ವೆಚ್ಚ ಅಗಾಧವಾಗಿ ಏರಿದೆ. ಅವುಗಳ ಸಿಬ್ಬಂದಿ ಬೆಳೆದಿದ್ದರೂ ಅದಕ್ಕೆ ಅನುಗುಣವಾಗಿ ಉತ್ಪಾದಕತೆ ಬೆಳೆದಿಲ್ಲ. ಪ್ರತಿ ಹತ್ತು ಲಕ್ಷ ಡಾಲರುಗಳ ಮೌಲ್ಯದ ಆಸ್ತಿಗಳಿಗೆ ಭಾರತದಲ್ಲಿನ ಬ್ಯಾಂಕ್ ಸಿಬ್ಬಂದಿ ಇತರ ದೇಶಗಳಿಗೆ ಹೋಲಿಸಿದರೆ ಬಲು ಅಧಿಕ ಎಂದು ಒಂದು ಅಧ್ಯಯನ ತಿಳಿಸುತ್ತದೆ. ಇದು ಪಾಕಿಸ್ತಾನದಲ್ಲಿರುವುದಕ್ಕಿಂತ ಶೇ 40ರಷ್ಟು, ಇಂಡೋನೇಷಿಯದಲ್ಲಿರುವುದಕ್ಕಿಂತ

ಶೇ. 150ರಷ್ಟು, ಮಲೇಷಿಯದ್ದಕ್ಕಿಂತ ಶೇ. 30ರಷ್ಟು ಹೆಚ್ಚು ಎಂಬುದು ಅವರ ಕಾಣ್ಕೆ. ಹೆಚ್ಚುತ್ತಿರುವ ವೆಚ್ಚ, ಕುಗ್ಗುತ್ತಿರುವ ಲಾಭ, ವಿಸ್ತರಿಸುತ್ತಿರುವ ಅಶಿಸ್ತು ಮತ್ತು ಅದಕ್ಷತೆ, ಅನಿಯಂತ್ರತೆ–ಇವು ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯ ಭೀಕರ ಕೋಡುಗಳು.

ಮಧ್ಯಸ್ಥಗಾರಿಕೆ ಚ್ಯುತಿ

ಬ್ಯಾಂಕಿಂಗ್ ಸೇವೆ ವಿಸ್ತರಿಸಿದಂತೆ ಠೇವಣಿಗಳೂ ಮುಂಗಡಗಳೂ ಹೆಚ್ಚುತ್ತಿವೆಯೆಂಬುದನ್ನು ಅಂಕಿ–ಅಂಶಗಳು ಸಾರುತ್ತವಾದರೂ ಇವುಗಳ ಪಥವೀಕ್ಷಣೆಯಿಂದ ಹಲವಾರು ಸ್ವಾರಸ್ಯಕರವಾದ – ಆದರೆ ಅಪಥ್ಯವೆನಿಸುವ – ಪ್ರವೃತ್ತಿಗಳು ಗೋಚರವಾಗುತ್ತವೆ. ರಾಷ್ಟ್ರೀಕರಣಾನಂತರದ ವರ್ಷಗಳಲ್ಲಿ ಠೇವಣಿಗಳು ಬಲು ವೇಗವಾಗಿ ವರ್ಧಿಸಿದವೆಂಬುದು ನಿಜ. ಆದಕ್ಕೆ ಮುಂಚಿನ ಹತ್ತು ವರ್ಷಗಳಲ್ಲಿ ಪ್ರಮುಖ ಬ್ಯಾಂಕುಗಳ ಠೇವಣಿಗಳು ಶೇ 13.3ರ ವಾರ್ಷಿಕ ದರದಲ್ಲಿ ಬೆಳೆಯುತ್ತಿದ್ದುವು. ಅನಂತರದ ಮೊದಲನೆಯ ದಶಕದಲ್ಲಿಯ ವಾರ್ಷಿಕ ಏರಿಕೆ ದರ ಶೇ. 21. ಮುಂಗಡಗಳೂ ಹೀಗೆಯೇ ಏರಿದುವು. ಅನಂತರದ ದಶಕದಲ್ಲೂ ಇವೆರಡೂ ಹೆಚ್ಚಿದುವಾದರೂ ಏರಿಕೆಯ ದರಗಳು ಇಳಿದಿವೆ. ಆರಂಭದಲ್ಲಿ ಕುಟುಂಬ ವಲಯದ ಉಳಿತಾಯ ಬಹುತೇಕ ಬ್ಯಾಂಕ್ ಠೇವಣಿಗಳಾಗಿ ಪರಿವರ್ತನೆಗೊಳ್ಳುತಿತ್ತು. ಈಗ ಆ ಉಳಿತಾಯದ ಹೆಚ್ಚು ಹೆಚ್ಚು ಭಾಗ ಇತರ ವಿನಿಯೋಜನ ಮಾರ್ಗಗಳ ಅನ್ವೇಷಣೆಯಲ್ಲಿ ತೊಡಗುತ್ತಿವೆ. ಉಳಿತಾಯದ ಉದ್ದೇಶಗಳು ವಿಸ್ತರಿಸುತ್ತಿರುವುದೂ, ಅವನ್ನು ಪೂರೈಸಬಲ್ಲ ಇತರ ವಿನಿಯೋಜನಾವಕಾಶಗಳು ಲಭ್ಯವಿರುವುದೂ ಇದಕ್ಕೆ ಕಾರಣ. ಉಳಿತಾಯದ ಸಂಗ್ರಹಣೆಯಲ್ಲಿ ಬ್ಯಾಂಕುಗಳೊಂದಿಗೆ ಇತರ ಸಂಸ್ಥೆಗಳು ಸ್ಪರ್ಧಿಸುತ್ತಿವೆ. ಬ್ಯಾಂಕುಗಳು ನೀಡುವುದಕ್ಕಿಂತ ಹೆಚ್ಚು ಆಕರ್ಷಕವಾಗಿರುವ ಇತರ ನಾನಾ ಅವಕಾಶಗಳು ಇಂದು ಒದಗುತ್ತಿವೆ. ಬ್ಯಾಂಕುಗಳು ಮಾತ್ರ ಈ ವಿಚಾರದಲ್ಲಿ ಹಲವು ನಿರ್ಬಂಧಗಳಿಗೆ ಒಳಗಾಗಿವೆ. ಉಳಿತಾಯದಾರರಿಂದ ಹಣ ಸಂಗ್ರಹಿಸುವುದು ಹಾಗೂ ವಿನಿಯೋಜನದಾರರಿಗೆ ಮುಂಗಡ ನೀಡುವುದು – ಇವೆರಡೂ ಬ್ಯಾಂಕುಗಳ ಮುಖ್ಯ ಕಾರ್ಯಭಾರಗಳು. ಈ ಎರಡೂ ನಿಟ್ಟುಗಳಲ್ಲಿ ಬ್ಯಾಂಕುಗಳ ಮಧ್ಯಸ್ಥಗಾರಿಕೆಗೆ ಚ್ಯುತಿ ಬರುತ್ತಿರುವುದು ಇತ್ತೀಚಿನ ಪ್ರವೃತ್ತಿ. ಹಿಂದೆ ಬ್ಯಾಂಕುಗಳಿಂದ ದುಡಿಯುವ ಬಂಡವಾಳಕ್ಕಾಗಿ ಸಾಲ ಪಡೆಯುತ್ತಿದ್ದವರು ಈಗ ನೇರವಾಗಿಯೇ ಉಳಿತಾಯದಾರರನ್ನು ಸಂಪರ್ಕಿಸುತ್ತಿದ್ದಾರೆ. ಆಕರ್ಷಕ ಯೋಜನೆಗಳನ್ನು ನೀಡುತ್ತಿದ್ದಾರೆ. ಹೀಗಾಗಿ ಉಭಯತಃ ಬ್ಯಾಂಕುಗಳು ಆತಂಕಕ್ಕೆ ಒಳಗಾಗಿವೆ. ಮೊದಲೇ ತಮ್ಮ ನಿಧಿಗಳ ಬಹುಪಾಲನ್ನು ಪರಿನಿಯತ

ಅನುಪಾತ ಪಾಲನೆಗಾಗಿ ತೆಗೆದಿಡಬೇಕಾದ ಹಾಗೂ ಸರ್ಕಾರ ವಿಧಿಸಿದ ಕ್ಷೇತ್ರಗಳಿಗೆ ಸಾಲ ನೀಡಲು ಬಳಸಬೇಕಾದ ಬ್ಯಾಂಕುಗಳು ತಮ್ಮ ಉಳಿದ ನಿಧಿಗಳನ್ನು ಲಾಭದಾಯಕವಾಗಿ ಹೇಗೆ ವಿನಿಯೋಜಿಸಬೇಕು, ಉಳಿತಾಯದಾರರಿಂದ ಹೇಗೆ ಹೆಚ್ಚು ನಿಧಿ ಪಡೆದುಕೊಳ್ಳಬೇಕು ಎಂದು ಯೋಚಿಸತೊಡಗಿವೆ. ಮಧ್ಯಸ್ಥಗಾರಿಕೆಯ ಚ್ಯುತಿ ಭಾರತದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾತ್ರವೇ ತಲೆದೋರಿರುವ ಪ್ರವೃತ್ತಿಯಲ್ಲ. ಇತರ ದೇಶಗಳಲ್ಲೂ ಕಂಡುಬಂದಿವೆ ಎಂಬುದು ನಿಜವಾದರೂ ಹಿಂದೆ ಹೇಳಿದ ಕಾರಣಗಳಿಂದಾಗಿ ಇಲ್ಲಿ ಅವು ಕ್ರಾನಿಕ್ ಸ್ವರೂಪ ಪಡೆದಿವೆ. ಇತರ ದೇಶಗಳ ಬ್ಯಾಂಕುಗಳು ನಡಸುವ ಪ್ರಯೋಗಗಳನ್ನು ಇಲ್ಲಿ ಅವು ನಡಸುತ್ತಿವೆ. ತಮ್ಮ ಕಲಾಪಗಳನ್ನು ವೈವಿಧೀಕರಣಗೊಳಿಸಿಕೊಳ್ಳುತ್ತಿವೆ. ಉದರಿ ಕಾರ್ಡ್ ನೀಡಿಕೆ, ಬಳಕೆದಾರರಿಗೆ ಉದರಿ ಪೂರೈಕೆ, ಗ್ರಾಹಕರ ಷೇರು–ಸ್ಟಾಕ್ ವ್ಯವಹಾರದ ನಿರ್ವಹಣೆ, ಉದ್ಯಮ ಸಂಸ್ಥೆಗಳ ಬಂಡವಾಳ ನೀಡಿಕೆಯ ನಿರ್ವಹಣೆ ಮತ್ತು ಸಲಹಾಸೇವೆ, ಗುತ್ತಿಗೆ ವ್ಯವಹಾರ, ಹೊಸ ಸಂಸ್ಥೆಗಳ ಬಂಡವಾಳದಲ್ಲಿ ಹಣ ತೊಡಗಿಸುವಿಕೆ, ಪರಸ್ಪರನಿಧಿ, ಉದ್ಯಮಿಗಳ ಸಾಲ ವಸೂಲಿ ಕಾರ್ಯ ಹಾಗೂ ಅದನ್ನು ವಹಿಸಿಕೊಳ್ಳುವಿಕೆ, ವಸತಿಗಾಗಿ ಹಣಕಾಸು ಮುಂತಾದ ನಾನಾ ಕಲಾಪಗಳನ್ನು ಅವು ಹಮ್ಮಿಕೊಳ್ಳುತ್ತಿವೆ. ಇವನ್ನು ನೇರವಾಗಿ ನಿರ್ವಹಿಸಲು ಸಾಧ್ಯವಿಲ್ಲದಾಗ ಇವಕ್ಕಾಗಿ ಪ್ರತ್ಯೇಕ ಸಹಾಯಕ ಸಂಸ್ಥೆಗಳನ್ನು ಹುಟ್ಟುಹಾಕುತ್ತಿವೆ. ಇವನ್ನೆಲ್ಲ ನಿರ್ವಹಿಸಲು ಎಷ್ಟು ಸಂಪನ್ಮೂಲವಿದೆ, ಅಧೋರಚನೆಯೆಷ್ಟಿದೆ, ಇವುಗಳ ಸಾಧ್ಯತೆಯೆಷ್ಟು, ತೊಡಕುಗಳೇನು, ಈ ಕಾರ್ಯ ನಡೆಸಲು ಅಗತ್ಯವಾದ ಪರಿಣತ ಸಿಬ್ಬಂದಿಯಿದೆಯೆ –ಮುಂತಾದವುಗಳ ಮುಂದಾಲೋಚನೆ ಅಷ್ಟೇನೂ ನಡೆದಿಲ್ಲ. ಈ ಕ್ಷೇತ್ರಗಳಲ್ಲಿ ಆಗಲೇ ಸಾಕಷ್ಟು ಸ್ಪರ್ಧೆಯೂ ಏರ್ಪಟ್ಟಿದೆ. ಸರ್ಕಾರವೂ ನಿಧಾನವಾಗಿ ಕಟ್ಟುಪಾಡುಗಳನ್ನು ವಿಧಿಸತೊಡಗಿದೆ. ಇವುಗಳ ವೆಚ್ಚ – ಲಾಭ ಅಧ್ಯಯನವನ್ನೂ ಸರಿಯಾಗಿ ನಡೆದಿಲ್ಲ. ಈ ಎಲ್ಲ ಕಲಾಪಗಳನ್ನೂ ಎಲ್ಲ ಬ್ಯಾಂಕುಗಳೂ ಹಮ್ಮಿಕೊಳ್ಳುವಂತಿಲ್ಲ. ದೊಡ್ಡ ಬ್ಯಾಂಕುಗಳು ಮಾತ್ರ ಈ ಸಾಹಸದಲ್ಲಿ ಕೈಹಾಕಬಲ್ಲುವು. ಸಣ್ಣವು ಇವುಗಳನ್ನು ಹಮ್ಮಿಕೊಳ್ಳುವಂತಿಲ್ಲ.

ಭಾರತದ ರಾಷ್ಟ್ರೀಕೃತ ಬ್ಯಾಂಕುಗಳು ಈಗ ಸಂಧಿಕಾಲದಲ್ಲಿವೆ. ಇವು ಸರ್ಕಾರಿ ಸಂಸ್ಥೆಗಳಾದ್ದರಿಂದ ಏನೂ ಭಯವಿಲ್ಲ ಎಂದು ಯಾರೂ ನಿಶ್ಚಿಂತೆಯಿಂದಿರುವಂತಿಲ್ಲ. ಇವನ್ನು ಹಠಾತ್ತನೆ ಖಾಸಗೀಕರಣಗೊಳಿಸುವಂತೆಯೂ ಇಲ್ಲ. ಖಾಸಗಿ ವಲಯದ ದೋಷನಿವಾರಣೆಗೆಂದು ರಾಷ್ಟ್ರೀಕರಣದ ಹಾದಿ ಹಿಡಿದೆವು. ರಾಷ್ಟ್ರೀಕರಣವೇನೂ ಸಂಜೀವಿನಿಯಲ್ಲವೆಂದು ಈಗ ಖಾಸಗೀಕರಣದ ಕೂಗು ಎದ್ದಿದೆ.

ಬ್ಯಾಂಕಿಂಗ್ ಕ್ಷೇತ್ರಕ್ಕೆ ಇದಿನ್ನೂ ಹಬ್ಬಿಲ್ಲವಾದರೂ, ಖಾಸಗಿ ವಲಯದ ಬ್ಯಾಂಕುಗಳು ಎಷ್ಟೋ ವಾಸಿ ಎಂದು ಅವುಗಳತ್ತ ಬೆಟ್ಟು ಮಾಡಿ ತೋರಿಸುವುದು ಆರಂಭವಾಗಿದೆ. ರಾಷ್ಟ್ರೀಕರಣ, ಖಾಸಗೀಕರಣ – ಎಂಬ ಘೋಷಣೆಗಳಿಂದಲೇ ಯಾವ ಯಕ್ಷಿಣಿಯೂ ಸಾಧ್ಯವಿಲ್ಲ. ವೈಜ್ಞಾನಿಕ ಚಿಂತನೆ, ಸುವ್ಯವಸ್ಥೆಯ ಸಾಧನೆಗಾಗಿ ಸಂಘಟಿತ ಪ್ರಯತ್ನ, ಪ್ರಾದೇಶಿಕ ಆವಶ್ಯಕತೆಗಳಿಗೆ ಹಾಗೂ ಆಶೋತ್ತರಗಳಿಗೆ ಅನುಗುಣವಾಗಿ ಕಾರ್ಯ ಯೋಜನೆ – ಇವು ಎಂದಿನಂತೆ ಇಂದಿಗೂ ನಮ್ಮಲ್ಲಿ ಅಭಾವವೇ.

26.

ಸೆಪ್ಟೆಂಬರ್ 1991
ಹೊಸ ಆರ್ಥಿಕ ನೀತಿ

ಪ್ರತಿಯೊಂದು ದೇಶವೂ ಆಗೊಮ್ಮೆ ಈಗೊಮ್ಮೆ ಸತ್ಯಕ್ಕೆ ಮುಖಾಮುಖಿಯಾಗಿ ನಿಲ್ಲಬೇಕಾಗುತ್ತದೆ. ಇತ್ತ ದರಿ, ಆತ್ತ ಪುಲಿ ಎಂಬ ಪರಿಸ್ಥಿತಿಯನ್ನು ತಂದೊಡ್ಡಿಕೊಳ್ಳಬೇಕಾಗುತ್ತದೆ. ಏನು ಮಾಡಿದರೂ ಕಷ್ಟ, ಮಾಡದಿದ್ದರೂ ಅಪಾಯ ಎಂದು ತವಕಿಸಬೇಕಾಗುತ್ತದೆ. ಹೇಗಾದರೂ ಟೀಕೆ ಅನುಭವಿಸಬೇಕಾಗುತ್ತದೆ.

ನಮ್ಮ ದೇಶ ಆರ್ಥಿಕ ಕ್ಷೇತ್ರದಲ್ಲಿ ಈಚೆಗೆ ಈ ಬಗೆಯ ಪರಿಸ್ಥಿತಿಯನ್ನೆದುರಿಸಬೇಕಾಗಿತ್ತು. ರಾಜಕೀಯ ಅಸ್ಥಿರತೆ ಉಂಟಾಗಿತ್ತು. ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಯಾವುದೋ ಒಂದು ದಿಕ್ಕಿನಲ್ಲಿ ಸಾಗಿ, ಅದರೊಳಗಿನ ವೈರುಧ್ಯಗಳನ್ನು ಆಗಿಂದಾಗಲೇ ಗಮನಿಸದೆ ಮತ್ತು ಅವಕ್ಕೆ ಅಗಾಗಲೇ ಪರಿಹಾರಗಳನ್ನು ನಿಯೋಜಿಸದೆ ಇದ್ದುದರ ಫಲವಾಗಿ ಕೂಡಿಕೊಂಡು ಬಂದ ಸಮಸ್ಯೆ, ಅಂತರರಾಷ್ಟ್ರೀಯ ಪರಿಸ್ಥಿತಿ, ಪ್ರಗತಿಪ್ರಿಯರಿಗೆಲ್ಲ ಆದರ್ಶವಿನಿಸಿದ್ದ ಸೋವಿಯತ್ ವ್ಯವಸ್ಥೆಯೇ ಇಸ್ಪೀಟೆಲೆಗಳಿ0ದ ಕಟ್ಟಿದ ಕನಸಿನ ಗೋಪುರದ0ತೆ ಕುಸಿದುಬಿದ್ದುದರಿಂದ ಉಂಟಾದ ಮಾನಸಿಕ ಪರಿಣಾಮ– ಇವೆಲ್ಲದರ ಫಲವೋ ಎ0ಬ0ತೆ ಭಾರತದ ಅರ್ಥ ವ್ಯವಸ್ಥೆಯೂ ಕವಲುದಾರಿಯ ಬಳಿಗೆ ಬಂದು ನಿಂತಿತ್ತು.

ಏಳನೆಯ ಯೋಜನೆಯ ಅವಧಿಯಲ್ಲಿ ನಮ್ಮ ಅರ್ಥ ವ್ಯವಸ್ಥೆ ಹಿ0ದೂ ಬೆಳವಣಿಗೆಯ ದರವೆ0ದು ಕುಖ್ಯಾತಿಗಳಿಸಿದ್ದ ಶೇ.3.5ರ ವಾರ್ಷಿಕ ಬೆಳವಣಿಗೆ ದರದ ಸಂಕೋಲೆಯನ್ನು ಕಡಿದುಕೊಂಡು ಶೇ. 5.5ರ ಬೆಳವಣಿಗೆ ಸಾಧಿಸಿತ್ತು. ಕೃಷಿ ಕೈಗಾರಿಕಾ ಕ್ಷೇತ್ರಗಳೆರಡರಲ್ಲೂ ಸಾಧಿಸಿದ ಬೆಳವಣಿಗೆಯಿಂದ ಆಶಾವಾದ ತಲೆಯೆತ್ತಿತ್ತು. ಮುಂದಿನ ಯೋಜನೆಯಲ್ಲಿ ಇನ್ನೂ ಮುಂದೆ ಸಾಗಬಹುದು ಎನಿಸುತ್ತಿತ್ತು.

ಆದರೆ ಇದರೊಂದಿಗೆ ಬೆಳೆದುಬಂದ ಕೆಲವು ಪ್ರವೃತ್ತಿಗಳು ಬೆದರಿಕೆ ಒಡ್ಡಿದ್ದವು. ಈ ಬೆಳವಣಿಗೆಗೆ ನಾವು ತೆರಬೇಕಾಗಿ ಬ0ದ ಬೆಲೆಯೇನು ಎಂಬುದನ್ನು ಕುರಿತ ಚಿಂತೆ ಬೆಳೆದಿತ್ತು. ಆಮದಿನ ಅತಿಯಾದ ಏರಿಕೆ, ಅದೇ ದರದಲ್ಲಿ ರಫ್ತು ಹೆಚ್ಚದ ಪರಿಸ್ಥಿತಿ, ಬೆಳೆಯುತ್ತಿದ್ದ ಆಂತರಿಕ ಹಾಗೂ ಬಾಹ್ಯ ಸಾಲ, ವಿದೇಶಿ ಸಾಲ ಮರುಪಾವತಿ ಹಾಗೂ ಬಡ್ಡಿ ಪಾವತಿಗಾಗಿ ನಮ್ಮ ರಫ್ತು ಸಂಪಾದನೆಯ ಗಣನೀಯ ಭಾಗದ ವಿನಿಯೋಗ, ರೂಪಾಯಿಯ ಬಾಹ್ಯ ಮೌಲ್ಯದ ದುರ್ಬಲತೆ, ಆಂತರಿಕವಾಗಿ ನಮ್ಮ ಬಜೆಟ್ ಕೊರತೆಯ ಏರಿಕೆಯಿಂದಾಗಿ ಹಾಗೂ ಆರ್ಥಿಕ ಶಿಸ್ತಿನ ಅಭಾವದಿಂದಾಗಿ

ತೀವ್ರಗೊಳ್ಳುತ್ತಿದ್ದ ಹಣದುಬ್ಬರ ಹಾಗೂ ಬೆಲೆಯೇರಿಕೆ ಇವೆಲ್ಲವೂ ಗಾಬರಿ ಹುಟ್ಟಿಸತೊಡಗಿದ್ದವು. ಇದರ ಜೊತೆ ಜೊತೆಗೆ ಸಂಭವಿಸಿದ ಖಾರಿ ಬಿಕ್ಕಟ್ಟಿನಿಂದಾಗಿ ನಮ್ಮ ತೈಲ ಆಮದಿಗೆ ಪೆಟ್ಟು ಬಿತ್ತು. ಪೆಟ್ರೋಲಿಯಂ ಉತ್ಪನ್ನದ ಬೆಲೆಯೇರಿಕೆಯಿಂದಾಗಿ ನಮ್ಮ ವಿದೇಶಿ ವಿನಿಮಯ ಪರಿಸ್ಥಿತಿ ಇನ್ನಷ್ಟು ಕಠಿಣವಾಯಿತು. ಪಶ್ಚಿಮ ಏಷ್ಯಾ ಪ್ರದೇಶದಿಂದ ಹರಿದು ಬರುತ್ತಿದ್ದ ಅನಿವಾಸಿ ಭಾರತೀಯರ ವಿದೇಶಿ ವಿನಿಮಯದ ಧಾರೆಗೂ ಕಡಿತ ಬಿತ್ತು. ರೂಪಾಯಿಯ

ಅಸ್ಥಿರತೆಯಿಂದಾಗಿಯೂ, ಭಾರತದ ವಿದೇಶಿ ಪಾವತಿ ಪರಿಸ್ಥಿತಿ ಬಲು ಸೂಕ್ಷ್ಮವಾದ್ದರಿಂದಲೂ ಭಾರತ ತನ್ನ ವಾಗ್ದಾನಗಳನ್ನು ಪೂರೈಸಲಾರದೆಂಬ ಶಂಕೆ ಉದ್ಭವಿಸಿದ್ದರಿಂದಲೂ ಭಾರತದಲ್ಲಿ ವಿನಿಯೋಗವಾಗಿದ್ದರ ವಿದೇಶಿ ಬಂಡವಾಳ ಇಲ್ಲಿಂದ ಪಲಾಯನ ಮಾಡುವ ಪ್ರವೃತ್ತಿ ತೋರಿತ್ತು. ಅನಿವಾಸಿ ಭಾರತೀಯರು ತಮ್ಮ ಹಣವನ್ನು ಇಲ್ಲಿಂದ ವಾಪಸು ಪಡೆದುಕೊಳ್ಳುವ ಮನಸ್ಸುಳ್ಳವರಾದರು. ಭಾರತದ ಸಾಲಮರುಪಾವತಿ ಸಾಮರ್ಥ್ಯದ ಮೇಲೆ ಕಣ್ಣಿಟ್ಟ ಪರಿಣತ ಅಂತರರಾಷ್ಟ್ರೀಯ ಸಂಸ್ಥೆಗಳು ಅಪಾಯದ ಬಾವುಟ ಹಾರಿಸಿದವು. ಇನ್ನು ಮೇಲೆ ಬಾರತಕ್ಕೆ ಸಾಲ ನೀಡುವವರು ಎಚ್ಚರಿಕೆಯಿಂದಿರಬೇಕು, ಮುಂದೆ ನೀಡುವ ಸಾಲ ಸುಭದ್ರ ವಿನಿಯೋಜನೆಯೆನಿಸದು. ಸಟ್ಟಾ ಎನಿಸಿಕೊಂಡೀತು ಎಂದು ಅವು ತಮ್ಮದೇ ಆದ ಪರಿಭಾಷೆಯಲ್ಲಿ ಸಾರಿದುವು. ಭಾರತದ ಋಣಪ್ರತ್ಯಯ ತೀರ ಕೆಳಮಟ್ಟಕ್ಕೆ ಜಾರುತ್ತಿದೆ ಎಂದೂ. ಮಾಮೂಲಾಗಿ ಹುಟ್ಟುತ್ತಿದ್ದ ಸಾಲವೂ ಹುಟ್ಟದ ಸ್ಥಿತಿ ಒಂದು ಕಡೆ. ಕೊಡಬೇಕಾದ ಸಾಲ ಕೊಡಲಾಗದಂಥ ಸಂಕಟ ಮತ್ತೊಂದು ಕಡೆ. ಸಾಲ ಮರುಪಾವತಿಯ ಕಂತು ತಪ್ಪಿಸಿದರೆ ಮುಂದೆ ಇನ್ನೂ ಸಂಕಷ್ಟ ಒದಗೀತೆ0ಬ ಭಯ ಕಾತರ ಮಗದೊಂದು ಕಡೆ ಹೀಗೆ ಮೂರಾಬಟ್ಟೆಯಾಗಿ ಭಾರತ ತೊಳಲಾಡತೊಡಗಿತ್ತು.

ತತ್‌ಕ್ಷಣದಲ್ಲಿ ಮಾಡಬೇಕಾಗಿ ಬಂದ ಪಾವತಿಗಳನ್ನು ಪೂರೈಸಲೂ ಸಾಕಷ್ಟು ವಿದೇಶಿ ಹಣ ಲಭ್ಯವಿರಲಾರದೆಂಬ ಅಂಜಿಕೆ ಮೂಡಿತ್ತು. ವಾಣಿಜ್ಯ ವಲಯಗಳಿಂದಲೂ, ಅಧಿಕ ಬಡ್ಡಿ ದರಗಳಲ್ಲಿ ಕೂಡ, ಕಡ ದೊರಕದೆಂಬ ಸ್ಥಿತಿ ಉಂಟಾದಾಗ ಸದ್ಯದ ದರದು ಪೂರೈಕೆಗಾಗಿ ಸರ್ಕಾರ ತನ್ನಲ್ಲಿದ್ದ ಚಿನ್ನವನ್ನು ಪರಭಾರೆ ಮಾಡುವ ಅನಿವಾರ್ಯ ಪರಿಸ್ಥಿತಿ ಉಂಟಾಯಿತು. ಸರ್ಕಾರ ಹಿಡಿದಿಟ್ಟುಕೊಂಡ ಕಳ್ಳಸಾಗಣೆ ಚಿನ್ನದ ದಾಸ್ತಾನಿನಲ್ಲಿ ಇಪ್ಪತ್ತು ಟನ್ ಕೈ ಬಿಟ್ಟ ಹೋಯಿತು. ಆರು ತಿಂಗಳ ಅನಂತರ ಅದೇ ಬೆಲೆಯಲ್ಲಿ ಆ ಚಿನ್ನವನ್ನು ಮತ್ತೆ ಕೊಳ್ಳಬಹುದೆಂಬ ಭರವಸೆಯ ಮೇಲೆ ಇದನ್ನ ಮಾರಲಾಯಿತು. ಅನಂತರ ಮತ್ತೆ ನಾಲ್ಕು ಕಂತುಗಳಲ್ಲಿ ಒಟ್ಟಾಗಿ 46.9 ಟನ್ ಚಿನ್ನವನ್ನು ಇಲ್ಲಿಂದ ಲಂಡನ್ನಿಗೆ ಸಾಗಿತು. ಅಲ್ಲಿ ಇದನ್ನು ಒತ್ತೆಯಾಗಿ

ಇಟ್ಟು ಡಾಲರ್ ಸಾಲ ಪಡೆಯುವ ಅವಕಾಶವನ್ನು ರಿಸರ್ವ್ ಬ್ಯಾಂಕ್ ಪಡೆದುಕೊಂಡಿತು. ರಿಸರ್ವ್ ಬ್ಯಾಂಕ್ ತನ್ನ ಮೀಸಲು, ಚಿನ್ನದಲ್ಲಿ ಶೇ.15 ರಷ್ಟನ್ನು ದೇಶದ ಹೊರಗಡೆ ಇಡಬಹುದೆಂಬ ಉಪಬಂಧವಿರುವುದು ನಮಗೆ ಈ ನಿಟ್ಟಿನಲ್ಲಿ ಅನುಕೂಲವಾಗಿ ಒದಗಿಬಂದಿತ್ತು.

ಇದೆಲ್ಲಾ ಬೀಸುವ ದೊಣ್ಣೆಯ ಪೆಟ್ಟು ತಪ್ಪಿಸಿಕೊಳ್ಳುವ ಪ್ರಯತ್ನ. ಏನೇ ಆಗಲಿ ದೇಶ ತನ್ನ ಮಾತನ್ನ ಉಳಿಸಿಕೊಳ್ಳದೆ ಇರದು ಎಂಬುದನ್ನು ತೋರ್ಪಡಿಸಿಕೊಳ್ಳುವುದೂ ಅಗತ್ಯವಾಗಿತ್ತು. ಆದರೆ ಮುಂದಿನ ಕ್ರಮವೇನು? ಇಂಥ ಸಂಕಟ ಸಮಯದಲ್ಲಿ ನೆರವಿಗೆ ಬರಲೆಂದೇ ಸ್ಥಾಪಿತವಾದ ಅಂತರ ರಾಷ್ಟ್ರೀಯ ಹಣ ನಿಧಿಯಿಂದ ಸಾಲ ಪಡೆಯಲು ಯತ್ನ ಮುಂದುವರಿದೇ ಇತ್ತು. ಆದರೆ ಸತತವಾಗಿ ಕೊರತೆಯಲ್ಲೇ ಇರುವ ವಿದೇಶಿ ಪಾವತಿ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳುವ ಕ್ರಮವೇನು? ಪದೇ ಪದೇ ನಿಮ್ಮ ಮೈಮೇಲೆ ಈ ಪರಿಸ್ಥಿತಿಯನ್ನು ಒಡ್ಡಿಕೊಳ್ಳದಂತೆ ನಿಮ್ಮ ಆರ್ಥಿಕತೆಯನ್ನು ಪುನಸ್ಸಂರಚಿಸುವ ಯತ್ನ ಮಾಡಿ ಎಂಬುದು ಇಂಥ ಸಂದರ್ಭಗಳಲ್ಲಿ ಹಣ ನಿಧಿ ನೀಡುವ ಸಲಹೆ. ದೀರ್ಘ ಕಾಲದಿಂದ ಮುಂದುವರಿದ ಕೃತಕ ವ್ಯವಸ್ಥೆಗಳನ್ನೂ ಕಟ್ಟುಪಾಡುಗಳನ್ನೂ ದಿಗ್ಬಂಧನಗಳನ್ನೂ ಕಿತ್ತೊಗೆದು ಅರ್ಥವ್ಯವಸ್ಥೆ ಸಲೀಸಾಗಿ ಉಸಿರಾಡುವಂತೆ ಮಾಡಬೇಕು ಎಂಬ ಹಣ ನಿಧಿಯ ಸಲಹೆಗೆ ಮಣಿದು ಸರ್ಕಾರ ಹೀಗೆ ಮಾಡಿತೋ, ಇಲ್ಲವೇ, ತಾನಾಗಿ ಮೂಡಿದ ಅರಿವಿನಿಂದ ಹೀಗೆ ಮಾಡಿತೋ ಅಂತೂ ಅದು ಅನೇಕ ಮೂಲಭೂತ ಬದಲಾವಣೆಗಳನ್ನು ಮಾಡಲು ಮುಂದಾಯಿತು. ಮೊದಲನೆಯದಾಗಿ ಎರಡು ಹಂತಗಳಲ್ಲಿ ರೂಪಾಯಿಯ ಬಾಹ್ಯ ಮೌಲ್ಯವನ್ನು ಶೇ.18ಕ್ಕೂ ಹೆಚ್ಚಾಗಿ ಕೊಚ್ಚಿಹಾಕಿತು. ಇದರಿಂದ ಭಾರತದ ಸರಕುಗಳನ್ನು ಅನ್ಯ ದೇಶಗಳಿಗೆ ಅಗ್ಗವನಿಸಿ ರಫ್ತು ಹೆಚ್ಚುವುದೆ0ಬುದು ತರ್ಕ. ರೂಪಾಯಿಯ ಇದರಿನಲ್ಲಿ ಇತರ ನಾಣ್ಯಗಳು ದುಬಾರಿ ಎನಿಸುವುದರಿಂದ ಆಮದೂ ದುಬಾರಿಯಾಗಿ ತಂತಾನೇ ಅದು ಕಡಿಮೆಯಾಗುವುದೆ0ಬುದೂ ನಿರೀಕ್ಷೆ. ಆಮದಿಗೆ ಇದ್ದ ನಿರ್ಬಂಧಗಳನ್ನೂ ಕಿತ್ತು ಹಾಕಲಾಯಿತು. ರಫ್ತು ಮಾಡಿದರೆ ಆಮದಿಗೆ ಅವಕಾಶ ಎಂಬುದು ಹೊಸ ದರ್ಶನ.

ಜೊತೆ ಜೊತೆಗೇ ಸರ್ಕಾರ ನಮ್ಮ ಕೈಗಾರಿಕ ನೀತಿಯನ್ನೂ ಮೂಲಭೂತವಾಗಿ ಮಾರ್ಪಡಿಸಿದೆ. ಸರ್ಕಾರಿ ಉದ್ಯಮ ವಲಯದ ಯಜಮಾನಿಕೆ ಇರುವ ಮಿಶ್ರ ಅರ್ಥ ವ್ಯವಸ್ಥೆ ನಮ್ಮದಾಗಿತ್ತು. ಮೂಲ ಕೈಗಾರಿಕೆಗಳು ಸರ್ಕಾರಿ ವಲಯದಲ್ಲಿ ಬೆಳೆಯಬೇಕೆಂಬುದೂ ಆ ವಲಯಕ್ಕೆ ಮೀಸಲಾಗಿರದ ಉಳಿದವು ಖಾಸಗಿ ವಲಯದಲ್ಲಿರಬಹುದೆಂಬುದೂ ಸುಮಾರು ನಲವತ್ತು ವರ್ಷಗಳಿಂದ ನಡೆದು ಬಂದ ಕೈಗಾರಿಕಾ ನೀತಿಯ

ಸಾರಭೂತ ಅಂಶ. ಯಾವ ಕೈಗಾರಿಕೆಯನ್ನು ಸ್ಥಾಪಿಸಬೇಕು. ಯಾವುದನ್ನು ಸ್ಥಾಪಿಸಬಾರದು. ಯಾವುದು ಎಷ್ಟು ಬೆಳೆಯಬೇಕು ಎಂಬ ತೀರ್ಮಾನವನ್ನು ಖಾಸಗಿಯವರಿಗೆ ಬಿಟ್ಟರೆ ದೇಶಕ್ಕೆ ಅಗತ್ಯವಾದ ಕೈಗಾರಿಕೆಗಳು ಬೆಳೆಯದೇ ಹೋಗಬಹುದು. ಖಾಸಗಿ ಒಡೆತನದ ಉದ್ಯಮಗಳು ಅಡ್ಡಾದಿಡ್ಡಿ ಬೆಳೆದು ಸಂಪತ್ತು ಕೆಲವರಲ್ಲೇ ಕೇಂದ್ರೀಕೃತವಾಗಬಹುದು. ಸಮಾಜದ ಹಿತಕ್ಕೆ ಇದರಿಂದ ಧಕ್ಕೆ ಉಂಟಾಗಬಹುದು ಎಂಬ ಚಿಂತನೆಯೇ ಈ ಕೈಗಾರಿಕೆ ನೀತಿಗೆ ಪ್ರೇರಣೆ. ಈ ನಲವತ್ತು ವರ್ಷಗಳಲ್ಲಿ ಸರ್ಕಾರಿ ವಲಯದ ಉದ್ಯಮಗಳು ಅಗಾಧವಾಗಿ ಬೆಳೆದಿವೆ. ಆರ್ಥಿಕ ಅಧೋರಚನೆಯ ನಿರ್ಮಾಣ ಗಮನಾರ್ಹವಾಗಿ ಸಾಧ್ಯವಾಗಿದೆ.

ಆದರೆ, ಯಾರು ಯಾವ ಕೈಗಾರಿಕೆ ಸ್ಥಾಪಿಸಬೇಕು ಎಷ್ಟರಮಟ್ಟಿಗೆ ಅದನ್ನು ಬೆಳೆಯಗೊಡಬೇಕು, ಉತ್ಪಾದನೆ ಎಷ್ಟಾಗಬೇಕು, ಬಂಡವಾಳ ಯಾವ ಮಿತಿಗೆ ಒಳಪಟ್ಟಿರಬೇಕು ಎಂಬುದನ್ನೆಲ್ಲ ನಿರ್ಣಯಿಸುವ ಸರ್ಕಾರದ ವ್ಯವಸ್ಥೆ ದಕ್ಷವೂ ನಿರ್ದುಷ್ಟವೂ ನಿಷ್ಪಕ್ಷಪಾತಿಯೂ ಆಗಿದ್ದಲ್ಲಿ ಮಾತ್ರ, ಆದರ ತೀರ್ಮಾನಗಳು ವೈಜ್ಞಾನಿಕವಾಗಿದ್ದಾಗ ಮಾತ್ರ, ಇದೆಲ್ಲ ಯಶಸ್ವಿಯಾಗುವುದು ಸಾಧ್ಯ. ಪರವಾನೆ ಅನುಮತಿಗಳ ಆಡಳಿತದಿಂದ ಅನೈತಿಕ ಬೆಳವಣಿಗೆಗಳಾದುವು. ಸ್ಪರ್ಧಾತ್ಮಕವಾಗಿ ಕೈಗಾರಿಕೆ ಬೆಳೆಯಲಾರದೆ ಹೋಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಕೈಗಾರಿಕೆಗಳು ಸ್ಪರ್ಧಿಸಲಾರವಾದುವು. ಡಿನೋಸಾರುಗಳಂತೆ ಬೆಳೆದ ಸರ್ಕಾರಿ ವಲಯದ ಉದ್ಯಮಗಳೆಲ್ಲ ಲಾಭಪ್ರದವಾಗಲಿಲ್ಲ. ಈ ಕೈಗಾರಿಕೆಗೆಲ್ಲ ಲಾಭದೃಷ್ಟಿಯನ್ನೇ ತಳೆದಿರಬೇಕಾಗಿಲ್ಲವಾದರೂ, ಇವುಗಳ ದಕ್ಷತೆಯನ್ನಳೆಯಲು ಸರಿಯಾದ ಮಾನಗಳು (ನಾರ್ಮ್ಸ್) ಇಲ್ಲದ್ದರಿಂದಾಗಿ ಇವು ಸರ್ಕಾರಕ್ಕೆ ಹೊರೆಯಾದುವು. ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಆಂತರಿಕವಾಗಿ ಸಂಪಾದಿಸಿಕೊಳ್ಳಲಾರದ ಈ ಉದ್ಯಮಗಳು ಸರಕಾರದ ಬಜೆಟ್ ಕೊರತೆ ಹೆಚ್ಚಲು ಕಾರಣವಾದುವು.

ಈಗಿನ ಸರ್ಕಾರದ ಹೊಸ ಕೈಗಾರಿಕಾ ನೀತಿ ಒಮ್ಮಿಂದೊಮ್ಮೆಲೇ ಈ ಎಲ್ಲ ಕಟ್ಟುಪಾಡುಗಳನ್ನೂ ಸಡಿಲಿಸಿದೆ. ಬಹುತೇಕ ಕೈಗಾರಿಕೆಗಳ ಸ್ಥಾಪನೆ ವಿಸ್ತರಣೆಗಳಿಗೆ ಲೈಸೆನ್ಸ್ ಇನ್ನು ಮುಂದೆ ಅಗತ್ಯವಿಲ್ಲ. ಏಕಸ್ವಾಮ್ಯ ಮತ್ತು ನಿರ್ಬಂಧಕ ವ್ಯಾಪಾರ ಪದ್ಧತಿಗಳ ಅಧಿನಿಯಮದ ವಿಧಿನಿಯಮಗಳೂ ಸಡಿಲವಾಗಿವೆ. ಗುಣಮಟ್ಟಕ್ಕೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಹಲವು ಉದ್ಯಮಗಳಲ್ಲಿ ವಿದೇಶಿ ಬಂಡವಾಳವನ್ನು ಶೇ.51ರವರೆಗೂ ಬರಮಾಡಿಕೊಳ್ಳಬಹುದು. ರಫ್ತಿಗಾಗಿಯೇ ಸ್ಥಾಪಿತವಾದ ಉದ್ಯಮಗಳಲ್ಲಿ ನೂರಕ್ಕೆ ನೂರರಷ್ಟೇ ವಿದೇಶಿ

ಬಂಡವಾಳವಿದ್ದರೂ ಚಿಂತೆಯಿಲ್ಲ ಎಂಬ ಭಾವನೆ ವ್ಯಕ್ತವಾಗಿದೆ. ಬಂಡವಾಳ ಸರಕು, ತಂತ್ರಜ್ಞಾನ ಮತ್ತು ಕಚ್ಚಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬೇಕಾದರೆ ವಿದೇಶಿ ವಿನಿಮಯ ಬೇಕು. ಆದರೆ ವಿದೇಶಿ ಬಂಡವಾಳವೇ ಬಂದರೆ ಅದರ ಒಡೆಯರು ತಾವಾಗಿಯೇ ಯಂತ್ರ ತಂತ್ರ ಸಾಮಗ್ರಿಗಳನ್ನು ತರುತ್ತಾರೆ. ಪರೋಕ್ಷವಾಗಿ ಇದು ವಿದೇಶಿ ವಿನಿಮಯದ ಕೊರತೆಯ ಪರಿಹಾರಕ್ಕೆ ಒಂದು ಉಪಾಯ ಎಂದು ಸರ್ಕಾರ ಭಾವಿಸುವಂತಿದೆ.

ಸರ್ಕಾರಿ ಉದ್ಯಮಗಳನ್ನು ಖಾಸಗೀಕರಣಗೊಳಿಸಲು ಸರ್ಕಾರ ಹಿಂದೆಗೆಯದು. ಹೇಗೆ ಮತ್ತು ಯಾವ ಉದ್ಯಮಗಳನ್ನು ಎಂಬುದರ ಬಗ್ಗೆ ಚಿಂತನೆಯಿನ್ನೂ ಹೆಪ್ಪುಗಟ್ಟಬೇಕಾಗಿದೆ. ಅಂತೂ ತಾನು ಹೊತ್ತುಕೊಂಡ ಅಪಾರ ಭಾರವನ್ನು ಇಳಿಸಿ ಹಾಯಾಗಬೇಕೆಂಬ ಕಾತರ, ಸರ್ಕಾರಕ್ಕೆ. ಆ ಉದ್ಯಮಗಳು ಹೆಚ್ಚು ಸಂಪನ್ಮೂಲ ಒದಗಿಸಿಕೊಂಡು ವಿಕಾಸ ಹೊಂದಲು ಇದರಿಂದ ನೆರವಾದೀತೆಂಬ ನಂಬಿಕೆ. ಸರ್ಕಾರಿ ವಲಯದಲ್ಲಿರುವ ಬ್ಯಾಂಕುಗಳ ಪ್ರಶ್ನೆಯೂ ಇದರಲ್ಲಿ ಅಡಕವಾಗಿದೆಯೆಂಬುದು ನಿರ್ವಿವಾದ.

ಸರ್ಕಾರಿ ವಲಯದ ಯಾವುದೇ ಉದ್ಯಮದ ಖಾಸಗೀಕರಣ ಎಂದೊಡನೆ ಮುಖ್ಯವಾಗಿ ಎದ್ದು ನಿಲ್ಲುವ ಸಮಸ್ಯೆಗಳು ಹಲವಾರು. ಅದರಲ್ಲಿರುವ ಉದ್ಯೋಗಿಗಳ ಭವಿಷ್ಯ ಕುರಿತದ್ದು ಒಂದು ಮುಖ್ಯ ಸಮಸ್ಯೆ. ಸರ್ಕಾರಿ ವಲಯದ ಬ್ಯಾಂಕುಗಳು ರಾಷ್ಟ್ರೀಕರಣದ ಅನಂತರದ ಈ ಎರಡು ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಗಾತ್ರದಲ್ಲಿ ಅಗಾಧವಾಗಿ ಬೆಳೆದಿದ್ದರೂ ಅವುಗಳ ದಕ್ಷತೆ, ಉತ್ಪಾದಕತೆ, ಲಾಭಪ್ರದತೆ ಸೇವಾತತ್ಪರತೆ ಸ್ಪರ್ಧಾತ್ಮಕತೆಗಳು ಅಷ್ಟೇನೂ ಹೇಳಿಕೊಳ್ಳುವಂತಿಲ್ಲ ಎಂಬುದು ಸರ್ವವಿದಿತ. ಅವು ಇಂದು ವ್ಯಾಧಿಗ್ರಸ್ತವಾಗಿವೆ. ಸರ್ಕಾರ ನೇರವಾಗಿ ಅವುಗಳ ವ್ಯವಹಾರದಲ್ಲಿ ಕೈಹಾಕುತ್ತಿರುವುದೂ, ಅವಕ್ಕೆ ಸ್ವಾಯತ್ತೆ ನೀಡದಿರುವುದೂ ಇದಕ್ಕೆ ಕಾರಣವೆನ್ನಬೇಕು. ಬ್ಯಾಂಕ್ ಶಾಖೆಗಳ ಸ0ಖ್ಯೆ ಅಗಾಧವಾಗಿ ಬೆಳೆದಿದೆ. ಹಲವಾರು ಶಾಖೆಗಳು ಆನಾರ್ಥಿಕವೆನಿಸಬಹುದು. ಬ್ಯಾಂಕಿಂಗ್ ಸಂರಚನೆಯನ್ನೇ ಸುಧಾರಿಸುವ ಅಗತ್ಯವೂ ಇದೆ. ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಿದರೆ ಹೊಸ ಆಡಳಿತ ವ್ಯವಸ್ಥೆ ಅವುಗಳ ಬೊಜ್ಜು ಕರಗಿಸುವ ಕ್ರಮ ತೆಗೆದುಕೊಳ್ಳಬಹುದು. ಸೇವಾ ಭದ್ರತೆಗೆ ಪೆಟ್ಟು ಬೀಳಬಹುದು. ಸರ್ಕಾರದ ಅತಿಯಾದ ನಿಯಂತ್ರಣವುಳ್ಳ ಸರ್ಕಾರಿ ವಲಯ ಒಂದು ತುದಿಯಾದರೆ, ಲಾಭವೊಂದೇ ಗುರಿಯಾಗಿ ಉಳ್ಳ, ಉಳಿದದ್ದೆಲ್ಲವನ್ನೂ ಇದಕ್ಕೆ ಅಧೀನಗೊಳಿಸುವ, ಖಾಸಗಿ ಒಡೆತನದ ವ್ಯವಸ್ಥೆ ಇನ್ನೊಂದು ತುದಿ. ಒಂದು ತುದಿಯಿಂದ ಇನ್ನೊಂದು ತುದಿಗೆ ನೆಗೆದ ಮಾತ್ರಕ್ಕೆ ಸ್ವರ್ಗವೇ ಕೈಗೆ

ಎಟುಕೀತೆಂಬ ಭ್ರಮೆಯ ಪರಿಣಾಮ ನೆಟ್ಟಗಾಗದು.

ಬ್ಯಾಂಕಿಂಗ್ ವ್ಯವಸ್ಥೆಯನ್ನು ಪುನರ್ರೂಪಿಸಬೇಕೆಂಬುದಂತೂ ನಿರ್ವಿವಾದ. ಅದನ್ನು ಖಾಸಗೀಕರಿಸುವುದಿಲ್ಲವೆಂದು ಪ್ರಧಾನಿ ಹೇಳಿದ್ದಾರೆ. ಆದರೆ ಮುಂದೆ ಅದು ಹೇಗೆ ರೂಪುಗೊಳ್ಳಬೇಕು? ಇತರ ಹಣಕಾಸು ಸಂಸ್ಥೆಗಳ ಸ್ವರೂಪ ಹೇಗಿರಬೇಕು? ಅವುಗಳ ದಕ್ಷತೆ ಮತ್ತು ಪರಿಣಾಮಕತೆಯನ್ನು ಸುಧಾರಿಸಲು, ಅವುಗಳ ಉತ್ತರವಾದಿತ್ವವನ್ನೂ ಲಾಭಪ್ರದತೆಯನ್ನೂ ಹೆಚ್ಚಿಸಲು ಏನು ಮಾಡಬೇಕು? ಬ್ಯಾಂಕುಗಳ ಆಧುನೀಕರಣ, ಸ್ಪರ್ಧಾತ್ಮಕತೆಯ ಸುಧಾರಣೆ, ಬಂಡವಾಳದ ಪೂರೈಕೆ, ವಿವಿಧ ಹಣಕಾಸು ಸಂಸ್ಥೆಗಳ ಪಾತ್ರ ಮುಂತಾದವನ್ನು ಕುರಿತು ಶಿಫಾರಸು ಮಾಡಲು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಎಂ. ನರಸಿಂಹಂ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸರ್ಕಾರ ನೇಮಕ ಮಾಡಿದೆ. ಈ ಸಮಿತಿಯ ವರದಿ ಹೇಗಿದ್ದೀತೆಂಬುದನ್ನು ಈಗಲೇ ಹೇಳಲಾಗದು.

ಅ0ತೂ ಸರ್ಕಾರದ ಹೊಸ ಆರ್ಥಿಕ ನೀತಿಯ ಪರಿಣಾಮವೇನೆಂಬುದು ದೊಡ್ಡ ಪ್ರಶ್ನೆ. ರೂಪಾಯಿಯ ಮೌಲ್ಯ ಛೇದನದಿಂದ ರಫ್ತು ಎಷ್ಟು ಹೆಚ್ಚುತ್ತದೆಂಬುದು ಪ್ರಶ್ನಾರ್ಹ. ಈಗಾಗಲೇ ಮತ್ತೆ ರೂಪಾಯಿಯ ಮೌಲ್ಯ ವಾಸ್ತವವಾಗಿ ಇನ್ನಷ್ಟು ಇಳಿದಿದೆಯೆಂಬ ಸುದ್ದಿಯಿದೆ. ಆಮದುಗಳನ್ನು ಅವಲಂಬಿಸಿದ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಿದೆ. ಕೈಗಾರಿಕೆಯಲ್ಲಿ ವಿದೇಶಿ ಸಹೋದ್ಯಮ ಪ್ರವೃತ್ತಿ ಇನ್ನು ಮುಂದೆ ಬೆಳೆಯಬೇಕು. ಹಣದ ಅತಿಯಾದ ಹರಿವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳು ಬ್ಯಾಂಕಿನ ಮೇಲೂ ಪರಿಣಾಮ ಬೀರಿವೆ. ಅಧಿಕ ಬಡ್ಡಿ ದರದಿ0ದ ಬ್ಯಾಂಕುಗಳು ಹೆಚ್ಚು ಠೇವಣಿ ಆಕರ್ಷಿಸಬಹುದಾದರೂ, ಇತರ ಸಂಸ್ಥೆಗಳು ಈ ಮೇಲಾಟದಲ್ಲಿ ಬ್ಯಾ0ಕಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಭವಿಷ್ಯದ ವ್ಯವಸ್ಥೆ ಹೇಗಿದ್ದೀತೋ ಎಂಬ ಪ್ರಶ್ನೆಯಂತೂ ಇದ್ದೇ ಇದೆ.

ಸರ್ಕಾರವಂತೂ ಧೈರ್ಯದಿಂದ ಹೊಸ ನೀತಿ ಘೋಷಿಸಿದೆ. ಎಲ್ಲವೂ ಸರಿಯಾದರೆ ಇನ್ನು ಎರಡು ಮೂರು ವರ್ಷಗಳ ಅಸಮತೋಲ ತೊಲಗಿ ಅರ್ಥ ವ್ಯವಸ್ಥೆಯ ಪುನಃ ಸಂಘಟನೆ ಸಾಧಿಸುವುದೆ0ಬುದು ಸರ್ಕಾರದ ಆಶಾವಾದ. ಅದರೊಂದಿಗೇ ಬ್ಯಾಂಕುಗಳೂ ತೇಲಿ ದಡ ಸೇರಬೇಕಾಗಿದೆ.

27.

ಮಾರ್ಚ್ 1992
ಬ್ಯಾಂಕಿಂಗ್ ವ್ಯವಸ್ಥೆಯ ಸುಧಾರಣೆ

ದೇಶಾದ್ಯಂತ ನಮ್ಮ ಆರ್ಥಿಕ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಅರ್ಥವ್ಯವಸ್ಥೆಯ ಮೇಲೆ ಯಜಮಾನ ಪಾತ್ರ ವಹಿಸಿದ್ದ ಸರ್ಕಾರ ಈಗ ಅದನ್ನು ಬಿಟ್ಟುಕೊಡುತ್ತಿದೆ. ಮಾರುಕಟ್ಟೆಯ ಮಾರ್ಗದರ್ಶನ ಮಾಡುವ ಬದಲು ಮಾರುಕಟ್ಟೆಯ ಮಿತ್ರನಾಗಿ ವರ್ತಿಸಬಯಸುತ್ತಿದೆ. ಇಡೀ ವ್ಯವಸ್ಥೆಯನ್ನು ಬಿಗಿದಿದ್ದ ಕಟ್ಟುಗಳನ್ನು ಸಡಿಲಿಸುತ್ತಿದೆ. ನಿರ್ದಿಷ್ಟ ದಿಕ್ಕುಗಳಲ್ಲಿ ಸಂಪನ್ಮೂಲಗಳು ಹರಿದು, ನಿರ್ದಿಷ್ಟ ಗಾತ್ರ ಹಾಗೂ ವೇಗವಲ್ಲಿ ಆರ್ಥಿಕ ಚಟುವಟಿಕೆಗಳು ನಡೆಯಬೇಕೆಂಬ ಹಠ ಅದಕ್ಕೆ ಇನ್ನು ಮುಂದೆ ಇರುವುದಿಲ್ಲ. ಅದು ಅರ್ಥವ್ಯವಸ್ಥೆಯ ಹೊಂದಾಣಿಕೆಯ ವ್ಯಾಪಕ ಪ್ರಕ್ರಿಯೆಯನ್ನಾರಂಭಿಸಿದೆ.

ಅಸಮತೋಲ

ಕಳೆದ ವರ್ಷದ ನಡುಗಾಲದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗ ದೇಶ ಅತ್ಯಂತ ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿತ್ತೆಂಬುದು ನಿರ್ವಿವಾದ. ವಿದೇಶಿ ವಿನಿಮಯದ ಕೊರತೆಯಿಂದಾಗಿ ಉತ್ಕಟವಾಗಿ ಪ್ರಕಟವಾದ ಬಿಕ್ಕಟ್ಟಿನ ಮೂಲ ಕಾರಣವೆಂದರೆ, ನಮ್ಮ ಅರ್ಥವ್ಯವಸ್ಥೆಯಲ್ಲಿ ಅಗಾಧವಾಗಿ ಬೆಳೆದುಕೊಂಡಿದ್ದ ಅಸಮತೋಲ. ಸರ್ಕಾರ ನಿರ್ವಹಿಸಲು ಸಾಧ್ಯ ವಾಗದಷ್ಟು ಕಾರ್ಯಭಾರಗಳನ್ನು ಹೊತ್ತುಕೊಂಡುದರ ಫಲವಾಗಿ ಅದರ ಆಯ–ವ್ಯಯದಲ್ಲಿ ವರ್ಷೇ ವರ್ಷೇ ಕೊರತೆ ಹಿಗ್ಗುತ್ತಲೇ ಬರುತ್ತಿತ್ತು. ಇದನ್ನು ತುಂಬಿಕೊಳ್ಳುವ ಸಲುವಾಗಿ ಅದು ಒಂದು ಕಡೆ ಸಾಲ ಎತ್ತುತ್ತಿತ್ತು. ಇನ್ನೊಂದು ಕಡೆ ಹಣಸೃಷ್ಟಿಗೆ ಪ್ರಚೋದನೆ ನೀಡಿತ್ತು. ಎತ್ತಿದ ಸಾಲ ಉತ್ಪಾದಕತೆಯನ್ನು ಹೆಚ್ಚಿಸುವ ಬದಲು ಅದಕ್ಷತೆಯನ್ನು ಪೋಷಿಸಲು ವಿನಿಯೋಗವಾಗುತ್ತಿತ್ತು. ಸಾಲದ ಹೊರೆಯೊಂದಿಗೆ ಅದರ ಮರುಪಾವತಿಯ ಹೊಣೆಯೂ ಬಡ್ಡಿಯ ಭಾರವೂ ಬೆಳೆಯುತ್ತಿದ್ದುವು. ಇದರಿಂದಾಗಿ ಸರ್ಕಾರದ ಆಯ–ವ್ಯಯದ ಕೋಶೀಯ ಕೊರತೆ (ಫಿಸ್ಕಲ್ ಡಿಫಿಸಿಟ್) ಇನ್ನಷ್ಟು ಹೆಚ್ಚುವಂತಾಯಿತು. ಹಣದುಬ್ಬರದಿಂದಾಗಿ ಅಸ್ಥಿರತೆ ಬೆಳೆಯಿತು. ಕೃತಕ ನಿರ್ಬಂಧಗಳಿಂದಾಗಿ ದಕ್ಷವಾಗಿ ಕಾರ್ಯನಿರ್ವಹಿಸಲಾಗದ ಕೈಗಾರಿಕೆಗಳ ಸ್ಪರ್ಧಾತ್ಮಕತೆಗೆ ಪೆಟ್ಟು ಬಿದ್ದಿತ್ತು. ಆಮದುಗಳಿಗೆ ಪಾವತಿ ಮಾಡುವಷ್ಟನ್ನು ನಮ್ಮ ರಫ್ತುಗಳಿಂದ ಸಂಪಾದಿಸಲಾಗದೆ, ನಮ್ಮ ಪಾವತಿಯ ಸಾಮರ್ಥ್ಯದಲ್ಲಿ ಇತರರಿಗೆ ನಂಬಿಕೆ ಕಡಿಮೆಯಾಗಿ, ಹೊಸ ಸಾಲಗಳನ್ನೂ ಹುಟ್ಟಿಸಿಕೊಳ್ಳಲಾಗದೆ, ಪರಿಸ್ಥಿತಿ ತುಂಬ ಹದಗೆಟ್ಟಿತ್ತು. ದೇಶದಲ್ಲಿ ಆಗುತ್ತಿದ್ದ ಉಳಿತಾಯವನ್ನು ವಿನಿಯೋಜನೆಯತ್ತ

ತಿರುಗಿಸಲು ಯತ್ನಿಸುತ್ತಿದ್ದರೂ, ಈ ವಿನಿಯೋಜನೆಯ ಉತ್ಪಾದಕತೆಯನ್ನು ಉತ್ತಮಪಡಿಸುವತ್ತ ಗಮನಹರಿಸಲಿಲ್ಲ. ಉಳಿತಾಯಕ್ಕೂ ವಿನಿಯೋಜನೆಗೂ ನಡುವೆ, ಮಧ್ಯವರ್ತಿಯಂತೆ, ಕೆಲಸಮಾಡುವ ಬ್ಯಾಂಕುಗಳೂ ಇತರ ಹಣಕಾಸು ಸಂಸ್ಥೆಗಳೂ ಇದರತ್ತ ಗಮನ ಹರಿಸುವ, ವಸ್ತುನಿಷ್ಠವಾಗಿ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯ ಕಳೆದುಕೊಂಡಿದ್ದುವು. ದೇಶದ ಉಳಿತಾಯವನ್ನು; ಸಂಪನ್ಮೂಲಗಳನ್ನು, ಅನುಕೂಲತಮ ಮಟ್ಟದಲ್ಲಿ ಅಭಿವೃದ್ಧಿಯ ಸಾಧನೆಯಾಗುವಂತೆ ನಿಶ್ಚಿತ ದಿಕ್ಕುಗಳಲ್ಲಿ ಹರಿಯಿಸುವ ಈ ಸಂಸ್ಥೆಗಳು ರಾಷ್ಟ್ರದ ಸ್ವತ್ತಾಗಿರುವುದು ಅವಶ್ಯವೆಂದು ಮನಗಂಡಿದ್ದರಿಂದಲೇ ಇವನ್ನು ರಾಷ್ಟ್ರೀಕರಿಸಲಾಗಿತ್ತು. ಆದರೆ ಇವು ರಾಷ್ಟ್ರದ ಸ್ವತ್ತಾದ ಮಾತ್ರಕ್ಕೆ ಅಧಿಕಾರದಲ್ಲಿರುವ ರಾಜಕೀಯ ಪಕ್ಷದ ತೊತ್ತುಗಳೆಂದು ತಿಳಿಯುವುದು ತಪ್ಪಲ್ಲವೆ? ರಾಜಕೀಯ ಶಕ್ತಿಗಳ ಮಧ್ಯಪ್ರವೇಶದಿಂದಾಗಿ ಈ ಸಂಸ್ಥೆಗಳ ಅದಕ್ಷತೆ ಬೆಳೆಯಿತು.

ನರಸಿಂಹಂ ಸಮಿತಿ

ದೇಶದ ವಿರಳವಾದ ಸಂಪನ್ಮೂಲಗಳು ನಿಶ್ಚಿತ ದಿಕ್ಕುಗಳಲ್ಲಿ ಹರಿಯದಂತೆ ತಡೆ ಒಡ್ಡಿದ್ದುದೇ ಮೂಲತಃ ಆಗಿದ್ದ ಪ್ರಮಾದ. ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಹೊಣೆಯನ್ನು ಆಡಳಿತ ವ್ಯವಸ್ಥೆಯ ಕೈಯಲ್ಲಿಡದೆ ವಿಕೇಂದ್ರೀಕರಿಸುವುದರಿಂದ, ಇದು ಸಾಧ್ಯವಾಗಲು ಅಗತ್ಯವಾದ ಸಂರಚನಾತ್ಮಕ ಹೊಂದಾಣಿಕೆಗೆ ಕ್ರಮ ತೆಗೆದುಕೊಳ್ಳುವುದರಿಂದ ಬಿಕ್ಕಟ್ಟನ್ನು ನಿವಾರಿಸಬಹುದೆಂಬುದಾಗಿ ಸರ್ಕಾರ ಬಗೆಯಿತು. ಅಂತೆಯೇ ಉದ್ಯಮಗಳ ಕಲಾಪಗಳ ಮೇಲೆ ಹೇರಲಾಗಿದ್ದ ನಿರ್ಬಂಧಗಳು ಹೋದುವು. ಬಂಡವಾಳ ಚಲನೆಗೆ ಮುಕ್ತ ಅವಕಾಶ ದೊರಕಿತು. ಸರ್ಕಾರ ತಮ್ಮ ಹೊಣೆಯನ್ನು ಕ್ರಮಕ್ರಮವಾಗಿ ಬಿಡಲು ಉಜ್ಜುಗಿಸಿತು. ರುಗ್ಣಶಯ್ಯೆಯಲ್ಲಿರುವ ಉದ್ಯಮಗಳು – ಅವು ಸರ್ಕಾರಿ ವಲಯದಲ್ಲೆ ಇರಲಿ, ಖಾಸಗಿ ವಲಯದಲ್ಲೆ ಇರಲಿ – ಚೇತರಿಸಿಕೊಳ್ಳುವಂತೆ ಮಾಡಲು ಯತ್ನ ನಡೆಸುವದು ಅವಶ್ಯ ಎನಿಸಿತು. ಆಧುನಿಕೀಕರಣ, ಸ್ಮರ್ಧಾತ್ಮಕ ವಾತಾವರಣ, ಪುನಸ್ಸಂರಚನೆ – ಇವಕ್ಕೆ ಹೆಚ್ಚಿನ ಒತ್ತು ಕೊಡಲಾಯಿತು. ಸಂಪನ್ಮೂಲಗಳ ವರ್ಗಾವಣೆಯ ಸಾಧನಗಳಾದ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳನ್ನು ಕೂಡ ಬಂಧನಗಳಿಂದ ಮುಕ್ತಗೊಳಿಸಬೇಕೆಂಬುದೂ, ಅವನ್ನು ಕೂಡ ಪುನಸ್ಸಂರಚನೆಯ ಪ್ರಕ್ರಿಯೆಗೆ ಒಳಪಡಿಸಬೇಕೆಂಬುದೂ ಸರ್ಕಾರದ ಆಲೋಚನೆಯಾಯಿತು. ಈ ಬಗ್ಗೆ ಪರಿಶೀಲನೆ ನಡೆಸಿ ಸಲಹೆ ನೀಡಲು ನೇಮಕವಾದದ್ದೇ ನರಸಿಂಹಂ ಸಮಿತಿ. ಅದು ತನ್ನ ವರದಿಯನ್ನು ನೀಡಿ ಹಲವು ತಿಂಗಳುಗಳೇ ಆಗಿವೆ. ಕ್ರಾಂತಿಕಾರಕವೆನ್ನಬಹುದಾದ ಇದರ ಸಲಹೆಗಳು ಈಗ ಬಹಳಷ್ಟು ಚರ್ಚೆಗೆ ಒಳಗಾಗಿವೆ.

ದಿಕ್ಕು ಬದಲಿಕೆಯೆ?

ಬ್ಯಾಂಕುಗಳ ಒಡೆತನ, ನಿಯಂತ್ರಣ, ದಕ್ಷತೆಯ ಸಾಧನೆ, ಸಂಪನ್ಮೂಲಗಳ ವಿತರಣೆ–ಮುಂತಾದವುಗಳಿಗೆ ಸಂಬಂಧಿಸಿದಂತೆ ಈ ಸಮಿತಿ ನೀಡಿರುವ ಶಿಫಾರಸುಗಳು ಇಂದಿನ ಸರ್ಕಾರದ ಮನೋಗತಕ್ಕೆ ಅನುಗುಣವಾಗಿವೆಯೆನ್ನಬೇಕು. ವಿದೇಶಿ ಚಾಲ್ತಿ ಲೆಕ್ಕದಲ್ಲಿ ಸಮತೋಲ ಸಾಧಿಸುವ ಸಲುವಾಗಿಯೂ, ಸಂರಚನಾತ್ಮಕ ಹೊಂದಾಣಿಕೆಗಾಗಿಯೂ ಅಂತರರಾಷ್ಟ್ರೀಯ ಹಣನಿಧಿ ಹಾಗೂ ವಿಶ್ವಬ್ಯಾಂಕಿನಿಂದ ಸಾಲ ಪಡೆಯುತ್ತಿರುವ ಸರ್ಕಾರ, ಆ ಸಂಸ್ಥೆಗಳು ವಿಧಿಸಿರುವ ಹಲವಾರು ಷರತ್ತುಗಳನ್ನೊಪ್ಪಿಕೊಂಡು ದೇಶದ ಸಾರ್ವಭೌಮತ್ವವನ್ನು ಅದಕ್ಕೆ ಮಾರಿಕೊಂಡಿದೆಯೆಂಬ ಟೀಕೆ ಸಾರ್ವತ್ರಿಕವಾಗಿರುವ ಈ ಸಂದರ್ಭದಲ್ಲಿ ನರಸಿಂಹಂ ಸಮಿತಿಯ ವರದಿಯೂ ಈ ಒತ್ತಡಗಳಿಗೆ ಮಣಿದಿದೆಯೆಂಬ ಆಸಮಾಧಾನ ಉಂಟಾಗಿದೆ. ದೇಶದಲ್ಲಿರುವ ಆರ್ಥಿಕ ಅಂತರಗಳನ್ನು ಹೋಗಲಾಡಿಸಿ ವ್ಯಾಪಕವಾದ ಉದ್ಯೋಗ ಕಲ್ಪಿಸಿ ವರಮಾನಗಳನ್ನು ಹೆಚ್ಚಿಸುವ ಕಾರ್ಯದಲ್ಲಿ ಬ್ಯಾಂಕುಗಳಲ್ಲಿರುವ ಸಂಪನ್ಮೂಲಗಳನ್ನು ತೊಡಗಿಸಬೇಕೆಂದೂ, ಅದರ ಸೇವೆಯನ್ನು ದೇಶಾದ್ಯಂತ ವಿಸ್ತರಿಸಬೇಕೆಂದೂ ಪ್ರಮುಖ ಬ್ಯಾಂಕುಗಳನ್ನು ಸರ್ಕಾರ ರಾಷ್ಟ್ರೀಕರಿಸಿತ್ತು. ಗುಣಾತ್ಮಕವಾಗಿ ಅಲ್ಲದಿದ್ದರೂ ಗಾತ್ರದ ದೃಷ್ಟಿಯಿಂದ ಬ್ಯಾಂಕುಗಳು ಈ ಉದ್ದೇಶ ಸಾಧಿಸಿವೆ. ಆದರೆ ದಕ್ಷತೆ, ಉತ್ಪಾದಕತೆ, ಲಾಭಪ್ರದತೆಗಳು ಬಹಳಷ್ಟು ಕುಗ್ಗಿವೆ. ಇವುಗಳನ್ನು ಸುಧಾರಿಸುವತ್ತ ಸರ್ಕಾರ ಗಮನ ಹರಿಸಬೇಕೆಂಬುದು ನ್ಯಾಯವೇ. ಈ ಸುಧಾರಣೆಯ ಸ್ವರೂಪ ಹೇಗಿರಬೇಕೆಂಬುದನ್ನು ಸೂಚಿಸಬೇಕೆಂಬುದೇ ನರಸಿಂಹಂ ಸಮಿತಿಗೆ ವಹಿಸಿಕೊಟ್ಟ ಹೊಣೆ. ನರಸಿಂಹಂ ಸಮಿತಿಯವರು ಈ ಬಗ್ಗೆ ಸಲಹೆ ನೀಡುವಾಗ, ಇದುವರೆಗೆ ಆಗಿರುವ ಸಾಧನೆಗೆ ಪೆಟ್ಟು ಕೊಡುವ ಕೆಲಸ ಮಾಡಿದ್ದಾರೆಯೆ, ಬ್ಯಾಂಕಿಂಗಿನ ದಿಕ್ಕನ್ನೇ ಬದಲಿಸಲು ಯತ್ನಿಸಿದ್ದಾರೆಯೇ ಎಂಬುದು ಪ್ರಶ್ನೆ. ಮಗುವಿನ ಮೈತೊಳೆದ ಕೊಳೆನೀರನ್ನು ಚೆಲ್ಲುವಾಗ ತೊಟ್ಟಿಯ ನೀರಿನೊಂದಿಗೆ ಮಗುವನ್ನೂ ಎಸೆಯುವಂತಾಗಿದೆಯೇ ಎಂಬುದನ್ನು ಯೋಚಿಸಬೇಕು.

ವಿಶ್ವ ಬ್ಯಾಂಕಿನ ಹಾಗೂ ಅಂತರರಾಷ್ಟ್ರೀಯ ಹಣ ನಿಧಿಯ ಮರ್ಜಿಗೆ ಅನುಗುಣವಾಗಿ ನರಸಿಂಹಂ ಸಮಿತಿಯ ವರದಿ ತಯಾರಾಗಿದೆಯೇ ಇಲ್ಲವೇ ಎಂಬ ಚರ್ಚೆಗಿಂತ, ಭಾರತದ ಹಣಕಾಸು ವಲಯದ ಬಗ್ಗೆ ವಿಶ್ವಬ್ಯಾಂಕಿನ 1990 ವರದಿಯ ಬೆಳಕಿನಲ್ಲಿ ಈ ವರದಿಯನ್ನು ತಯಾರಿಸಲಾಗಿದೆ ಎಂಬುದು ಬಹುಶಃ ಸರಿಯೆನಿಸೀತು. ವಿಶ್ವ ಬ್ಯಾಂಕಿನ ಪರಿಣತರು ತಮ್ಮ ವರದಿ ತಯಾರಿಸುವ ಮುನ್ನ ಭಾರತದ ಪ್ರಮುಖ ಬ್ಯಾಂಕ್ ಅಧ್ಯಕ್ಷರುಗಳೊಂದಿಗೂ ಹಣಕಾಸು

ಸಂಸ್ಥೆಗಳ ಮುಖ್ಯಸ್ಥರೊಂದಿಗೂ ಸಮಾಲೋಚನೆ ನಡೆಸಿದ್ದರು. ಅವರಲ್ಲಿ ಹಲವರು ನರಸಿಂಹಂ ಸಮಿತಿಯ ಸದಸ್ಯರು. ಆದ್ದರಿಂದ ನರಸಿಂಹು ಸಮಿತಿಯ ವರದಿ ವಿಶ್ವ ಬ್ಯಾಂಕಿನ ಚಿಂತನೆಗೆ ಅನುಗುಣವಾಗಿದೆ ಎಂದು ಹೇಳಿದರೆ ಅದು ಸತ್ಯಕ್ಕಿಂತ ದೂರವಾಗಿರದು. ನರಸಿಂಹಂ ಸಮಿತಿಯ ವರದಿಯನ್ನು ಸಂಸತ್ತಿನ ಮುಂದೆ ಇರಿಸುವ ಮುನ್ನ ರಿಸರ್ವ್ ಬ್ಯಾಂಕ್ ಗವರ್ನರರೂ ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರೂ ಈ ವರದಿಯ ಬಗ್ಗೆ ವಿಶ್ವ ಬ್ಯಾಂಕಿನ ಅಧ್ಯಕ್ಷರ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡರೆಂದು ಬಲ್ಲ ವಲಯಗಳು ತಿಳಿಸುತ್ತವೆ.

ಸಮಿತಿಯ ಸಲಹೆಗಳು

ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವನ್ನು ರದ್ದು ಮಾಡುವುದು ಅಗತ್ಯವಿಲ್ಲವೆಂದು ಸಮಿತಿ ಅಭಿಪ್ರಾಯಪಟ್ಟಿದೆಯಾದರೂ, ಹೊಸದಾಗಿ ಯಾವ ಬ್ಯಾಂಕುಗಳ ರಾಷ್ಟ್ರೀಕರಿಸಬಾರದೆಂದು ಹೇಳಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣ ಮಾಡದೆ, ಬ್ಯಾಂಕ್ ವ್ಯವಸ್ಥೆ ತೆಳ್ಳಗೆ ಬಳುಕುತ್ತ, ಸ್ಪರ್ಧಾತ್ಮಕವಾಗಿ ಆರೋಗ್ಯಕರವಾಗಿರುವಂತೆ ಮಾಡಬೇಕೆಂಬುದು ಸಮಿತಿಯ ಸಲಹೆ. ಖಾಸಗಿ ವಲಯದ ಬ್ಯಾಂಕುಗಳ ವಿಸ್ತರಣೆಗೆ ಅಡ್ಡಿಯಿರಬಾರದು, ಖಾಸಗಿ ವಲಯದಲ್ಲಿ ಹೊಸ ಬ್ಯಾಂಕುಗಳ ಸ್ಥಾಪನೆಗೂ ನಿರ್ಬಂಧ ಇರದಿರಲಿ, ವಿದೇಶಿ ಬ್ಯಾಂಕುಗಳ ಕಲಾಪಕ್ಕೂ ಅಡಚಣೆ ಬೇಡ, ಆದರೆ ಎಲ್ಲವೂ ಸಮಾನಾವಕಾಶ ಪಡೆದು ಚಟುವಟಿಕೆಯಲ್ಲಿ ನಿರತವಾಗುವಂತಾಗಲಿ ಎಂಬುದು ಸಮಿತಿಯ ಆಶಯ. ಹೊಸ ಶಾಖೆಗಳನ್ನು ತೆರೆಯಲಾಗಲಿ, ಇರುವುದನ್ನು ಮುಚ್ಚಲಾಗಲಿ ಪರವಾನಗಿ ಅಥವಾ ಒಪ್ಪಿಗೆ ಬೇಕಾದುದಿಲ್ಲ ಎಂದೂ ಸಮಿತಿ ಹೇಳುತ್ತದೆ. ಸರ್ಕಾರದ ಅತಿಯಾದ ಮಧ್ಯಪ್ರವೇಶದಿಂದ ಹಾಗೂ ರಾಜಕೀಯ ಒತ್ತಡಗಳಿಂದಾಗಿ ದಕ್ಷತೆ, ಲಾಭಪ್ರದತೆ ಹಾಗೂ ಚೈತನ್ಯಶೀಲತೆಯನ್ನು ಬಹುತೇಕ ಕಳೆದುಕೊಂಡಿರುವ ಸರ್ಕಾರಿ ವಲಯದ ಬ್ಯಾಂಕುಗಳು ಈ ಸ್ಪರ್ಧೆಯಲ್ಲಿ ಯಶಸ್ವಿಯಾಗಿ ಸೆಣಸಲಾದೀತೇ ಎಂಬುದು ಸಂದೇಹ. ಅನಾರ್ಥಿಕವಾದ ಹಾಗೂ ಚೈತನ್ಯರಹಿತವಾದ ಅನೇಕ ಶಾಖೆಗಳ ಭಾರ ಅವುಗಳ ಬೆನ್ನಿಗೆ ಬಿದ್ದಿದೆ. ಹೀಗಾಗಿ ಕ್ರಮೇಣ ಸರ್ಕಾರಿ ವಲಯದ ಬ್ಯಾಂಕುಗಳು ಕ್ರಿಯಾಹೀನವಾಗಿ ಕ್ಷೀಣಿಸತೊಡಗಿದರೆ ಆಶ್ಚರ್ಯವಿಲ್ಲ. ರಾಷ್ಟ್ರೀಕರಣವನ್ನು ಅಂತ್ಯಗೊಳಿಸಲು ದೇಶದಲ್ಲಿರುವ ವ್ಯಾಪಕ ವಿರೋಧದ ದೃಷ್ಟಿಯಿಂದ ಈ ಉಪಾಯವನ್ನು ಯೋಚಿಸಲಾಗಿದೆ ಎಂಬ ಟೀಕೆ ಕಟುವೆನಿಸಬಹುದಾದರೂ ಹಾಗೆ ಭಾವಿಸಲು ಅವಕಾಶ ಇದೆಯೆನ್ನಬಹುದು. ಈಗಾಗಲೇ ಖಾಸಗಿ ವಲಯದ ಬ್ಯಾಂಕುಗಳನ್ನು ವಶೀಕರಿಸಿಕೊಳ್ಳಲು ದೊಡ್ಡ ದೊಡ್ಡ

ಉದ್ಯಮಪತಿಗಳಲ್ಲಿ ಮೇಲಾಟ ನಡೆದಿದೆಯೆಂದು ವರದಿಯಾಗಿದೆ. ಖಾಸಗಿ ವಲಯದಲ್ಲಿ ಹೊಸ ಬ್ಯಾಂಕುಗಳನ್ನು ಸ್ಥಾಪಿಸಲೂ ಯತ್ನ ನಡೆಸಲಾಗುತ್ತಿದೆ. ಬ್ಯಾಂಕಿಂಗ್ ಸಂಸ್ಥೆಗಳು ಪಟ್ಟಭದ್ರ ಹಿತಗಳ ಕೈಗೂಸಾಗಬಾರದೆಂಬ ಉದ್ದೇಶದಿಂದಲೇ ಭಾರತದಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು. ಈಗ ಆ ಉದ್ದೇಶ ವಿಫಲಗೊಳ್ಳಬಹುದು. ಪಟ್ಟಭದ್ರ ಹಿತಗಳ ಕೈಗೆ ಬ್ಯಾಂಕಿಂಗ್ ಉದ್ಯಮ ಸಿಗದಂತೆ ನೋಡಿಕೊಳ್ಳಲಾಗುವುದೆಂದು ಸರ್ಕಾರ ಹೇಳಿದರೂ ಅದನ್ನು ತಡೆಹಿಡಿಯುವುದು ಕಷ್ಟವಾದೀತು.

ನಾಲ್ಕು ಸ್ತರಗಳ ವ್ಯವಸ್ಥೆ

ಈಗ ಅಸ್ತಿತ್ವದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳ ಸಂಖ್ಯೆ ಅತಿಯೆನಿಸಿದೆ. ಅವುಗಳ ಶಾಖಾಜಾಲ ಅಡ್ಡಾದಿಡ್ಡಿ ಬೆಳೆದಿದೆ. ಅವನ್ನು ಸುವ್ಯವಸ್ಥಿತಗೊಳಿಸಬೇಕೆಂಬುದು ನರಸಿಂಹಂ ಸಮಿತಿಯ ಸಲಹೆ. ದೇಶದಲ್ಲಿ ಎಂಟು–ಹತ್ತು ರಾಷ್ಟ್ರೀಕೃತ ಬ್ಯಾಂಕುಗಳಿರಲಿ. ಇವು ತಮ್ಮ ಶಾಖೆಗಳೊಂದಿಗೆ ಸಾರ್ವತ್ರಿಕವಾಗಿ ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿರಲಿ, ಸ್ಥಳೀಯ ಬ್ಯಾಂಕುಗಳ ಕಲಾಪಗಳು ಆಯಾ ನಿಶ್ಚಿತ ಪ್ರದೇಶಗಳಿಗೆ ಸೀಮಿತವಾಗಿರಬೇಕು. ಈಗ ಬ್ಯಾಂಕುಗಳ ಗ್ರಾಮೀಣ ಶಾಖೆಗಳು ಲಾಭದಾಯಕವಾಗಿಲ್ಲ. ಅವುಗಳಿಗೆ ಜೀವಂತಿಕೆಯಿಲ್ಲ. ಆದ್ದರಿಂದ ಅವು ಗ್ರಾಮೀಣ ಕಲಾಪಗಳನ್ನು ಬಿಟ್ಟುಕೊಡಬೇಕು. ಗ್ರಾಮೀಣ ಬ್ಯಾಂಕಿಂಗಿಗಾಗಿ ಅವು ಸಹಾಯಕ ಬ್ಯಾಂಕಿಂಗ್ ಸಂಸ್ಥೆಗಳನ್ನು ಸ್ಥಾಪಿಸಬಹುದು. ಅವಕ್ಕೆ ನಿಗದಿಯಾದ ಕ್ಷೇತ್ರಗಳಿರಲಿ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸ್ಥಳೀಯ ಸ್ವರೂಪವನ್ನೂ ವಾಣಿಜ್ಯ ಬ್ಯಾಂಕುಗಳ ಸಂಘಟನಾತ್ಮಕ ಹಾಗೂ ನಿರ್ವಹಣಾತ್ಮಕ ಕೌಶಲವನ್ನೂ ಸಮನ್ವಯಿಸಿಕೊಂಡ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆಯನ್ನು ವಿಕಾಸಗೊಳಿಸಬೇಕು ಎಂಬುದು ಸಮಿತಿಯ ಸಲಹೆ. ಒಟ್ಟಿನಲ್ಲಿ ಅಂತರರಾಷ್ಟ್ರೀಯ ಸ್ವರೂಪ ಹೊಂದಿದ ಮೂರು – ನಾಲ್ಕು ದೊಡ್ಡ ಬ್ಯಾಂಕುಗಳು, ರಾಷ್ಟ್ರೀಯ ವ್ಯಾಪ್ತಿಯ ಎಂಟುಹತ್ತು ಬ್ಯಾಂಕುಗಳು, ಸ್ಥಳೀಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು – ಹೀಗೆ ನಾಲ್ಕು ಸ್ತರಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ಸಂರಚನೆಯಾಗಬೇಕು ಎಂಬುದು ಸಮಿತಿಯ ಅಭಿಪ್ರಾಯ.

ಮಾರುಕಟ್ಟೆಗೆ ಮಿಡಿತ

ಬ್ಯಾಂಕುಗಳ ನಿಧಿಗಳು ಫಲಪ್ರದವಾಗಿ ವಿನಿಯೋಗವಾಗಬೇಕಾದರೆ ಅವನ್ನು ಬಿಗಿದಿರುವ ಮೀಸಲು ನಿಯಮಗಳನ್ನು ಸಡಿಲಗೊಳಿಸಬೇಕೆಂಬುದನ್ನು ಸಮಿತಿ ಮನಗಂಡಿದೆ. ಈಗಿರುವ ನಗದು ಮೀಸಲು ಅನುಪಾತ (ಕ್ಯಾಷ್ ರಿಸರ್ವ್ ರೇಷಿಯೊ) ಮತ್ತು ಪರಿನಿಯತ ದ್ರವತ್ವ ಅನುಪಾತಗಳು (ಸ್ಟ್ಯಾಚ್ಯುಟರಿ ಲಿಕ್ವಿಡಿಟಿ

ರೇಷಿಯೊ) ಬಲು ಹೆಚ್ಚು. ಇವನ್ನು ಇಳಿಸಬೇಕು. ಆಗ ಬ್ಯಾಂಕುಗಳಿಗೆ ಹೆಚ್ಚು ನಿಧಿ ಒದಗಿಬರುತ್ತದೆ. ಸರ್ಕಾರ ತನಗೆ ಸಾಲದ ಅಗತ್ಯ ಇದ್ದಾಗಲೆಲ್ಲ ಬ್ಯಾಂಕುಗಳ ಪರಿನಿಯತ ದ್ರವತ್ವ ಅನುಪಾತವನ್ನು ಹೆಚ್ಚಿಸುತ್ತ ಹೋಗಿದೆ. ಬ್ಯಾಂಕುಗಳು ತಮಗೆ ಬಂದ ಠೇವಣಿ ಹಣದಲ್ಲಿ ಶೇ.38:5 ರಷ್ಟನ್ನು ಸರ್ಕಾರಿ ಪತ್ರಗಳಲ್ಲಿ ತೊಡಗಿಸಬೇಕೆಂಬ ಹಾಗೂ ಶೇ.15ರಷ್ಟನ್ನು ನಗದು ಮೀಸಲಾಗಿ ಇಡಬೇಕು ಎಂಬ ನಿಯಮಗಳಿಂದಾಗಿ ಬ್ಯಾಂಕುಗಳ ಬಳಿ ಉಳಿಯುತ್ತಿದ್ದ ಠೇವಣಿ ಹಣ ಅರ್ಧಕ್ಕಿಂತ ಕಡಿಮೆ. ಶೇ. 40ರಷ್ಟನ್ನು ಆದ್ಯತಾ ವಲಯಗಳಿಗೆ ನೀಡಬೇಕೆಂಬ ನಿಯಮ ಬೇರೆ. ಈ ನಿರ್ದೇಶಿತ ಉದರಿಯೂ (ಡೈರೆಕ್ಟೆಡ್ ಕ್ರೆಡಿಟ್) ಲಾಭಪ್ರದವಲ್ಲ. ಹೀಗಾಗಿ ಬ್ಯಾಂಕುಗಳು ನಷ್ಟ ಅನುಭವಿಸುತ್ತ ಬಂದಿವೆ. ನಿರ್ದೇಶಿತ ಉದರಿಯನ್ನೂ – ಸಾಮಾಜಿಕ ಸಾಲ ನೀಡಿಕೆಯನ್ನೂ (ಸೋಷಿಯಲ್ ಲೆಂಡಿಂಗ್) ಕ್ರಮೇಣ ಇಳಿಸಬೇಕೆಂಬುದು ಸಮಿತಿಯ ಸಲಹೆ. ಬಡ್ಡಿ ವ್ಯವಸ್ಥೆಯ ಗಡಸುತನವನ್ನು ತೊಡೆದುಹಾಕಿ ಮಾರುಕಟ್ಟೆಗೆ ತಕ್ಕಂತೆ ದುಡಿಯಬೇಕೆಂಬುದಾಗಿಯೂ ಅದು ಸೂಚಿಸಿದೆ. ಬ್ಯಾಂಕುಗಳ ಬಂಡವಾಳ ತಳ ಸುಭದ್ರವಾಗಬೇಕು. ಅವುಗಳ ಆಸ್ತಿ–ಹೊಣೆ ಪಟ್ಟಿ ಪಾರದರ್ಶಕವಾಗಿರಲಿ. ಅವುಗಳ ಕರಡು ಋಣವನ್ನು ತೊಡೆದುಹಾಕಲು ಆಸ್ತಿ ಹೊಂದಾಣಿಕೆ ನಿಧಿಯೊಂದಿರಲಿ ಎಂದೆಲ್ಲ ಸಮಿತಿ ಆಶಿಸುತ್ತದೆ.

ಅಪಾಯಗಳು

ನರಸಿಂಹಂ ಸಮಿತಿಯ ವರದಿ ಮೇಲುನೋಟಕ್ಕೆ ಚೊಕ್ಕ, ಚೆನ್ನ, ಸರಳ, ಸುಸೂತ್ರ, ನಿರ್ದುಷ್ಟ. ಆದರೆ ಸರ್ಕಾರದ ಹೊಸ ಆರ್ಥಿಕ ನೀತಿಯ ಜಾರಿಯ ತರಾತುರಿಯ ಸಂದರ್ಭದಲ್ಲಿ, ವಿಶ್ವ ಬ್ಯಾಂಕ್ ಹಾಗೂ ಹಣ ನಿಧಿಗೆ ಸರ್ಕಾರದ ಕಾಳಜಿಯನ್ನು ಸಾಬೀತುಪಡಿಸಬೇಕೆಂಬ ಆತುರದಲ್ಲಿ, ಕೇವಲ ಮೂರೇ ತಿಂಗಳುಗಳಲ್ಲಿ ಇದನ್ನು ರಚಿಸಲಾಯಿತೆಂದು ಬ್ಯಾಂಕ್ ಉದ್ಯೋಗಿಗಳ ಸಂಘಗಳ ಆರೋಪ. ಬ್ಯಾಂಕ್ ರಾಷ್ಟ್ರೀಕರಣವನ್ನು ರದ್ದುಗೊಳಿಸುವುದಿಲ್ಲವೆಂದೇನೋ ಸರ್ಕಾರ ಹೇಳಿದೆ. ಆದರೆ ಇನ್ನು ಮುಂದೆ ಯಾವುದೇ ಬ್ಯಾಂಕಿನ ರಾಷ್ಟ್ರೀಕರಣವಾಗಬಾರದೆಂಬ, ಖಾಸಗಿ ಹಾಗೂ ವಿದೇಶಿ ಬ್ಯಾಂಕುಗಳ ವಿಸ್ತರಣೆಗೆ ಅವಕಾಶ ಇರಲೆಂಬ ಸೂಚನೆಯಿಂದ ರಾಷ್ಟ್ರೀಕರಣದ ಪ್ರಭಾವವನ್ನು ತಗ್ಗಿಸುವ ಹುನ್ನಾರು ನಡೆದಿದೆಯೆಂದು ಅವುಗಳ ಅಸಮಾಧಾನ. ಗ್ರಾಮೀಣ ಹಾಗೂ ಇತರ ಬ್ಯಾಂಕುಗಳನ್ನು ಪ್ರತ್ಯೇಕಿಸುವ ಮೂಲಕ ಗ್ರಾಮ ಪಟ್ಟಣಗಳೆಂಬ ವಿಭಜನೆಯ ಗೋಡೆಯ ನಿರ್ಮಾಣ ಆತಂಕಕಾರಿ. ಸಾಮಾಜಿಕ ಸಾಲನೀಡಿಕೆಯ ಪ್ರಮಾಣವನ್ನು ಇಳಿಸಬೇಕೆಂಬ ಸೂಚನೆ ನಮ್ಮ ಅಭಿವೃದ್ಧಿ ಪ್ರಕ್ರಿಯೆಗೆ ಅಡ್ಡಿ ಉಂಟುಮಾಡುತ್ತದೆ. ರಾಷ್ಟ್ರೀಕರಣದ ಉದ್ದೇಶವೇ ಇದರಿಂದ ವಿಫಲಗೊಳ್ಳುತ್ತದೆ. ಬ್ಯಾಂಕುಗಳಿಗೆ ನೇಮಕಾತಿಗಾಗಿ ಬ್ಯಾಂಕಿಂಗ್ ನೇಮಕಾತಿ

ಮಂಡಲಿ ಇರಬಾರದೆಂಬುದೂ ಉದ್ಯೋಗಿ ವಲಯಗಳಿಗೆ ಒಪ್ಪಿಗೆಯಿಲ್ಲ. ಬ್ಯಾಂಕುಗಳ ರಾಷ್ಟ್ರೀಕರಣವನ್ನು ರದ್ದುಪಡಿಸದಿದ್ದರೂ ಅವುಗಳಲ್ಲಿ ಸರ್ಕಾರದ ಬಂಡವಾಳವನ್ನು ತೆಳುಗೊಳಿಸುತ್ತ ಹೋಗುವುದರಿಂದ ಸರ್ಕಾರಿ ಸ್ವಾಮ್ಯವೆಂಬುದು ಕೇವಲ ನಾಮಕಾವಾಸ್ತೆ ಆಗಬಹುದು. ಉದ್ಯೋಗಿ ಸಂಘಗಳು ಇವನ್ನೆಲ್ಲ ವಿರೋಧಿಸುತ್ತವೆ. ಬಹುರಾಷ್ಟ್ರೀಯ ಸಂಸ್ಥೆಗಳ ಒತ್ತಡಕ್ಕೆ ಮಣಿದು ದೇಶದ ಹಿತಗಳನ್ನು ಅವಕ್ಕೆ ಒಪ್ಪಿಸಲಾಗಿದೆ ಎಂಬ ಅಸಮಾಧಾನ ಹಬ್ಬಿದೆ. ಆಧುನಿಕೀಕರಣ ಮತ್ತು ಕಂಪ್ಯೂಟರೀಕರಣದ ಹೆಸರಿನಲ್ಲಿ ಉದ್ಯೋಗಗಳನ್ನು ಕಡಿಮೆ ಮಾಡುವ ಪ್ರವೃತ್ತಿಗೂ ಹೆಚ್ಚಿನ ಇಂಬು ದೊರಕುವುದೆಂಬ ಅಂಜಿಕೆ ಅವಕ್ಕೆ.

ರಾಷ್ಟ್ರೀಕೃತ ಬ್ಯಾಂಕುಗಳನ್ನು ಸುರಕ್ಷಗೊಳಿಸಬೇಕು. ಅವುಗಳ ಉತ್ಪಾದಕತೆ ಯನ್ನೂ ಲಾಭಪ್ರವತೆಯನ್ನೂ ಹೆಚ್ಚಿಸಬೇಕು, ಅಸ್ವಸ್ಥತೆಯನ್ನು ನಿವಾರಿಸಬೇಕು ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ರಾಷ್ಟ್ರೀಕರಣದಿಂದ ಬ್ಯಾಂಕುಗಳ ಸ್ವಾಮ್ಯವನ್ನು ಸರ್ಕಾರ ಪಡೆದುಕೊಳ್ಳುವುದರ ಜೊತೆಗೆ ಅವುಗಳ ಕಲಾಪಗಳಲ್ಲಿ ಹಸ್ತಕ್ಷೇಪ ನಡೆಸಿದ್ದು ತಪ್ಪು. ರಾಜಕೀಯ ಒತ್ತಡಗಳಿಗೆ ಬ್ಯಾಂಕುಗಳು ಒಳಗಾಗುವಂತಾದ್ದು ದುರದೃಷ್ಟಕರ. ಅವುಗಳಿಗೆ ಸ್ವಾಯತ್ತತೆ ನೀಡಿ, ಸಂಸತ್ತಿಗೆ ಅವು ಹೊಣೆಯಾಗಿರುವಂತೆ ಮಾಡಬಹುದಿತ್ತು. ರಿಸರ್ವ್ ಬ್ಯಾಂಕ್, ಸರ್ಕಾರ – ಹೀಗೆ ಎರಡು ಬಗೆಯ ಯಜಮಾನಿಕೆಗಳಿಗೆ ಅದು ಒಳಪಡುವಂತಾಗಬಾರದಿತ್ತು. ನರಸಿಂಹಂ ಸಮಿತಿ ಈ ಬಗ್ಗೆಯೂ ವಿಚಾರ ಹರಿಸಿದೆ. ರಿಸರ್ವ್ ಬ್ಯಾಂಕಿನ ನೇತೃತ್ವದಲ್ಲಿ ಉಸ್ತುವಾರಿ ಸಮಿತಿಯೊಂದು ಇರಬೇಕೆಂದು ಸಲಹೆ ಮಾಡಿದೆ. ಬಹುಶಃ ಇದು ಸ್ವಾಗತಾರ್ಹವೆನಿಸೀತು.

ನರಸಿಂಹಂ ಸಮಿತಿಯ ಸಲಹೆಗಳನ್ನು ಉದ್ಯೋಗಿಗಳ ಸಂಘಗಳೊಂದಿಗೆ ಸಮಾಲೋಚಿಸದೆ ಜಾರಿಗೆ ತರುವುದಿಲ್ಲ ಎಂದು ಹಣಕಾಸು ಮಂತ್ರಿ ಭರವಸೆ ನೀಡಿದ್ದಾರೆ. ಪರಿನಿಯತ ದ್ರವತ್ವ ಅನುಪಾತವನ್ನು ಇಳಿಸುವ ಮತ್ತು ಬಡ್ಡಿ ದರಗಳಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡುವ ಕ್ರಮಗಳನ್ನು ಬಿಟ್ಟರೆ ಸಮಿತಿಯ ಸಲಹೆಗಳನ್ನು ಜಾರಿಗೊಳಿಸಲು ಯತ್ನಿಸಿಲ್ಲ ಎಂದಿದ್ದಾರೆ. ಸರ್ಕಾರ ಎಲ್ಲ ವರ್ಗಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೂಲಂಕಷವಾದ ಪರೀಕ್ಷೆ ಹಾಗೂ ಸಮಾಲೋಚನೆ ನಡೆಸಿದ ಅನಂತರವೇ ಸರ್ವಜನಕ್ಕೆ ಹಿತಕರವಾಗುವ ರೀತಿಯಲ್ಲಿ ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಸ್ಥೆಯನ್ನು ಪುನಸ್ಸಂರಚಿಸುವ ಯತ್ನ ನಡೆಸುವುದೆಂದು ಆಶಿಸಬೇಕಾಗಿದೆ.

28.

ಜೂನ್ 1992

ಅಭೂತಪೂರ್ವ ವಂಚನೆಯ ಜಾಲ

ಭಾರತದ ಹಣಕಾಸು ಪ್ರಪಂಚದಲ್ಲಿ ಭಾರಿ ಚಂಡಮಾರುತವೊಂದು ಬೀಸುತ್ತಿದೆ. ಬ್ಯಾಂಕುಗಳ ಮತ್ತು ಇತರ ಹಣಕಾಸು ಸಂಸ್ಥೆಗಳ ಭದ್ರತೆಯನ್ನು ಕುರಿತಂತೆ ಸಾರ್ವಜನಿಕರು ನಂಬಿಕೆ ಕಳೆದುಕೊಳ್ಳುವ ಅಪಾಯಕ್ಕೆ ಎಡೆ ಉಂಟಾಗಿದೆ. ಭಾರತದ ಅತ್ಯಂತ ದೊಡ್ಡ ಬ್ಯಾಂಕುಗಳೂ ಅವುಗಳ ಸಹಾಯಕ ಸಂಸ್ಥೆಗಳೂ ಸಾರ್ವಜನಿಕ ವಲಯದ ಇತರ ಹಲವು ಸಂಸ್ಥೆಗಳೂ ಲಾಭಕೋರ ವ್ಯಕ್ತಿಗಳೂ ಒಟ್ಟಾಗಿ ನಡೆಸಿದ ಸಂಚಿನ ವಿಷದಗಾಳಿ ಎಲ್ಲೆಲ್ಲೂ ಹಬ್ಬಿದೆ. ರಾಷ್ಟ್ರದ ಆರ್ಥಿಕ ಧಮನಿಯ ಆರೋಗ್ಯ ಕಾಪಾಡುವ ಹೊಣೆ ಹೊತ್ತ ರಿಸರ್ವ್ ಬ್ಯಾಂಕ್ ಕೂಡ ಈ ಸಂಬಂಧವಾದ ಅಪಪ್ರಥೆಯಿಂದ ಮುಕ್ತವಾಗಿಲ್ಲ. ಈ ಕುರಿತು ದಿನಕ್ಕೊಂದು ಹೊಸ ಸಂಗತಿ ಹೊರಬೀಳುತ್ತಲೇ ಇದೆ. ಈ ಪ್ರಕರಣಕ್ಕೆ ಸದ್ಯದಲ್ಲೇ ತೆರೆ ಬೀಳುವ ಸಂಭವವಿಲ್ಲ. ಭಾರತದ ಹಣಕಾಸು ವ್ಯವಸ್ಥೆ ಮತ್ತೆ ಮೊದಲಿನ ಸ್ಥಿತಿಗೆ ಎಂದೂ ಬರಲಾರದು. ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ ಸರ್ಕಾರ ಕೈಗೊಂಡಿರುವ ಅನೇಕ ಕ್ರಮಗಳಿಂದ ಜನರಲ್ಲಿ ನಂಬಿಕೆ ಮರುಕಳಿಸುವುದೇ, ಹಣಕಾಸು ವಹಿವಾಟುಗಳು ಶೀಘ್ರದಲ್ಲಿ ಎಂದಿನಂತೆ ನಡೆಯುವಂತಾಗುವುದೇ ಎಂಬುದನ್ನು ಹೇಳುವಂತಿಲ್ಲ.

ನೀರ ಮೇಲಣ ಗುಳ್ಳೆ

1991ರ ನಡುಗಾಲದಲ್ಲಿ ಹೊಸ ಸರ್ಕಾರ ನಮ್ಮ ಅರ್ಥವ್ಯವಸ್ಥೆಯನ್ನು ಬಿಗಿದಿದ್ದ ಕಟ್ಟುಪಾಡುಗಳನ್ನೆಲ್ಲ ಕಳಚಿಹಾಕುವ ಸಂಕಲ್ಪ ಮಾಡಿತು. ಆರ್ಥಿಕ ಚಟುವಟಿಕೆಗಳ ವಿಚಾರದಲ್ಲಿ ಸರ್ಕಾರ ಇನ್ನು ಮುಂದೆ ಅತ್ತೆಯಂತೆ ಬಾಯಿ ಹಾಕುವುದಿಲ್ಲ ಎಂದು ಹೇಳಿತು. ಮಾರುಕಟ್ಟೆಯ ಮೇಲೆ ಯಜಮಾನಿಕೆ ಮಾಡುವುದಿಲ್ಲ, ಮಾರುಕಟ್ಟೆಯೊಂದಿಗೆ ಸ್ನೇಹವಾಗಿ ವರ್ತಿಸುತ್ತೇನೆ ಎಂದಿತು. ಉದ್ಯಮಗಳ ಸ್ಥಾಪನೆ, ಬೆಳವಣಿಗೆ, ಬಂಡವಾಳದ ಹೂಡಿಕೆ, ಸರಕು ವಿತರಣೆ ಸಂಪನ್ಮೂಲಗಳ ಹರಿವು, ಆಮದು–ರಫ್ತು, ಮುಂತಾದ ಎಲ್ಲ ವಿಚಾರಗಳಲ್ಲೂ ಉದಾರ ನೀತಿಯನ್ನು ಜಾರಿಗೆ ತಂದಿತು. ಹಿಂಜರಿತದ ಪ್ರವೃತ್ತಿಗೆ ಒಳಗಾಗಿದ್ದ ಅರ್ಥವ್ಯವಸ್ಥೆಗೆ ಕಾಯಕಲ್ಪ ಚಿಕಿತ್ಸೆ ನಡೆಸುತ್ತಿರುವುದಾಗಿ ಸರ್ಕಾರ ಭಾವಿಸಿತು.

ಎಲ್ಲೆಲ್ಲೂ ಹಬ್ಬಿದ ಹೊಸ ವಾತಾವರಣದ ಫಲವೋ ಎಂಬಂತೆ ಷೇರು ಪೇಟೆಯಲ್ಲಿ ಚಟುವಟಿಕೆಗಳು ಚುರುಕಾದುವು. ಎಲ್ಲ ಪ್ರತಿಭೂತಿಗಳ ಬೆಲೆಗಳೂ ಒಂದೇ ಸಮನೆ ಏರತೊಡಗಿದುವು. ಇವನ್ನು ಕೊಂಡು ಹೆಚ್ಚು ಲಾಭಗಳಿಸಿ ಕುಬೇರರಾಗುತ್ತೇವೆ ಎಂದೇ ಅನೇಕ ಉಳಿತಾಯದಾರರು ಭಾವಿಸಿದರು. ತನ್ನ ಆರ್ಥಿಕ ನೀತಿ ಯಶಸ್ವಿಯಾಗುತ್ತಿದೆಯೆಂಬುದರ ದ್ಯೋತಕವಿದು ಎಂದು ಸರ್ಕಾರ ಅಂದುಕೊಂಡಿತು. ಇಲ್ಲದಿದ್ದರೆ

ಇಷ್ಟೊಂದು ಮಂದಿ ಸಣ್ಣ ಮತ್ತು ಮಧ್ಯಮ ಗಾತ್ರದ ಉಳಿತಾಯದಾರರು ಬಗೆಬಗೆಯ ಪ್ರತಿಭೂತಿಗಳಲ್ಲಿ ಇಷ್ಟು ಆಸಕ್ತಿ ತೋರಿಸುತ್ತಿರಲಿಲ್ಲವೆಂದೇ ಅದರ ಭಾವನೆಯಾಗಿತ್ತು.

ಭ್ರಮಾ ವಿಲಾಸ

ಆದರೆ ಇದೆಲ್ಲಾ ಬರೀ ಭ್ರಮೆ ಎನಿಸಲು ಬಹಳಕಾಲ ಬೇಕಾಗಲಿಲ್ಲ. ಸಟ್ಟಾ ವಹಿವಾಟುದಾರರ ಕಲಾಪಗಳಿಂದಾಗಿ ಈ ತೇಜಿ ಪ್ರವೃತ್ತಿ ಉಂಟಾಗಿತ್ತು. ಇದು ಬರೀ ಸಟ್ಟಾ ವಹಿವಾಟುಗಳಿಗೇ ಸೀಮಿತವಾಗಿರಲಿಲ್ಲ. ಭಾರತದಲ್ಲಿ ಹಿಂದೆಂದೂ ಕಂಡರಿಯದ ಗಾತ್ರದಲ್ಲಿ ವಂಚನೆಯ ಭಾರೀ ಸಂಚೊಂದು ಬೆಳೆದುಕೊಂಡಿತ್ತು. ಪ್ರತಿಭೂತಿಗಳೇ ಇಲ್ಲದ ವ್ಯವಹಾರ ನಡೆದಿತ್ತು. ಸುಳ್ಳು ಪತ್ರಗಳ ಆಧಾರದ ಮೇಲೆ ಅಗಾಧವಾಗಿ ಸಾಲ ನೀಡಲಾಗಿತ್ತು. ಇದೆಲ್ಲ ಗೊತ್ತಾದಾಗ ಇಡಿ ಷೇರು ಪೇಟೆಯೇ ಕುಸಿಯಿತು. ಅದರ ತಳವೇ ಕೊಚ್ಚಿ ಹೋಗುವ ಪರಿಸ್ಥಿತಿ ಉಂಟಾಯಿತು. ಷೇರು ಪತ್ರಗಳೇ ಮುಂತಾದ ಪ್ರತಿಭೂತಿಗಳನ್ನು ಕೊಳ್ಳುವವರ ಹಾಗೂ ಮಾರುವವರ ನಡುವೆ ವ್ಯಾಪಾರ ಕುದುರಿಸುವ ದಲ್ಲಾಳಿಗಳು ಹಲವರು ಸ್ವತಃ ಸಟ್ಟಾ ವ್ಯವಹಾರದಲ್ಲಿ ತೊಡಗಿದ್ದರು. ಕಾನೂನು ಮತ್ತು ಆಚರಣೆಯಲ್ಲಿರುವ ಲೋಪದೋಷಗಳನ್ನು ದುರುಪಯೋಗಪಡಿಸಿಕೊಂಡು ಕೋಟ್ಯಂತರ ರೂಪಾಯಿಗಳನ್ನು ಒಳಗೆ ಹಾಕಿ ಕೊಳ್ಳುವ ಕಲಾಪಗಳಲ್ಲಿ ತೊಡಗಿದಾಗ, ಬ್ಯಾಂಕುಗಳೇ ಮುಂತಾದ ಸಂಸ್ಥೆಗಳೂ ಅವುಗಳ ವರಿಷ್ಠರೂ ಇವರಿಗೆ ಸಾಮೀಲಾದಾಗ ಯಾವ ವ್ಯವಸ್ಥೆ ತಾನೇ ಕುಸಿಯದೆ ಇದ್ದೀತು ?

ವ್ಯವಸ್ಥೆಯ ವಿಷ ಫಲ

ಹಲವು ಪ್ರತಿಷ್ಠಿತ ಬ್ಯಾಂಕುಗಳು ಮತ್ತು ಅವುಗಳ ಸಹಾಯಕ ಸಂಸ್ಥೆಗಳು ಈ ವಂಚನೆಯ ಜಾಲದಲ್ಲಿ ಸೇರಿದ್ದುದು ದುರ್ದೈವದ ಸಂಗತಿ. ಇದು ಒಂದು ರೀತಿಯಲ್ಲಿ ವ್ಯವಸ್ಥೆಯ ದೋಷದ ಫಲ. ಇನ್ನೊಂದು ರೀತಿಯಲ್ಲಿ ಇದು ಪರಿಸ್ಥಿತಿಯ ಪರಿಣಾಮ ಕೂಡ. ಬ್ಯಾಂಕುಗಳು ಈಚಿನ ವರ್ಷಗಳಲ್ಲಿ ಲಾಭಪ್ರದವಾಗಿ ಕೆಲಸಮಾಡುತ್ತಿಲ್ಲ ಎಂಬ ಆರೋಪಕ್ಕೆ ಒಳಗಾಗಿವೆ. ವಿವೇಚನಾರಹಿತ ನಿರ್ಬಂಧಗಳೂ, ಅವುಗಳ ಕಲಾಪಗಳಲ್ಲಿ ಬೆಳೆದ ರಾಜಕೀಯ ಹಸ್ತಕ್ಷೇಪವೂ, ಹಣದ ಹಸಿವೆಗೆ ಒಳಗಾದ ಸರ್ಕಾರ ತನ್ನ ಬಜೆಟ್ಟಿನ ಅಸಮತೋಲವನ್ನು ಸರಿಪಡಿಸಿಕೊಳ್ಳಲು ನಿಯಮಗಳನ್ನೇ ತಿರುಚಿ ಬ್ಯಾಂಕುಗಳ ತಿಜೋರಿಗಳಿಂದ ಹಣವನ್ನು ಎತ್ತಿಕೊಳ್ಳಲು ತನ್ನ ಕಬಂಧ ಬಾಹುಗಳನ್ನು ಚಾಚುತ್ತಿದ್ದುದೂ ಇದಕ್ಕೆ ಕೆಲವು ಮುಖ್ಯ ಕಾರಣಗಳು. ನಗದು ಮೀಸಲು ಮತ್ತು ಪರಿನಿಯತ ದ್ರವತ್ವ ಅನುಪಾತಗಳ ನಿಮಿತ್ತವಾಗಿ ಒಟ್ಟು ಬ್ಯಾಂಕ್ ಠೇವಣಿಗಳ ಗಣನೀಯ ಭಾಗವನ್ನು ಅವು ಸಾಲವಾಗಿ ಕೊಡುವಂತಿರಲಿಲ್ಲ. ಉಳಿದ ಭಾಗದ

ವಿನಿಯೋಗಕ್ಕೂ ಹಲವು ನಿರ್ಬಂಧಗಳಿದ್ದುವು. ಬ್ಯಾಂಕುಗಳಿಂದ ಉದರಿ ಪಡೆಯುವ ಬದಲು ನೇರವಾಗಿ ಉಳಿತಾಯದಾರರಿಂದ ಹಣ ಪಡೆಯಲು ಉದ್ಯಮಗಳು ತೊಡಗಿದ್ದುವು. ಬ್ಯಾಂಕಿನ ಮುಖ್ಯ ಪಾತ್ರವಾದ ಮಧ್ಯಸ್ಥಗಾರಿಕೆಯ ಕಾರ್ಯಕ್ಕೆ ಚ್ಯುತಿಯುಂಟಾಯಿತು. ಇದರಿಂದಲೂ ಬ್ಯಾಂಕುಗಳ ಲಾಭಪ್ರದತೆ ತಗ್ಗಿತು. ಇರುವ ನಿಧಿಯನ್ನು ಆದಷ್ಟು ಲಾಭಪ್ರದವಾಗಿ ವಿನಿಯೋಗಿಸುವ ಅನಿವಾರ್ಯತೆ ತಲೆದೋರಿತು. ಪರಸ್ಪರ ನಿಧಿ, ಗುತ್ತಿಗೆದಾರಿಕೆ, ಹಣಕಾಸು ವಹಿವಾಟು ಮುಂತಾದ ಕಲಾಪಗಳನ್ನು ನಡಸುವುದಕ್ಕಾಗಿ ಹಲವು ಪ್ರಮುಖ ಬ್ಯಾಂಕುಗಳು ಪ್ರತ್ಯೇಕ ಸಹಾಯಕ ಸಂಸ್ಥೆಗಳನ್ನು ಆರಂಭಿಸಿದುದಕ್ಕೆ ಇದೊಂದು ಮುಖ್ಯ ಕಾರಣ. ಇವುಗಳ ಮೂಲಕ ಬ್ಯಾಂಕುಗಳು ಅಗಾಧ ನಿಧಿ ಸಂಗ್ರಹ ಹಾಗೂ ಅದರ ವಿನಿಯೋಜನೆಯ ಕಾರ್ಯದಲ್ಲಿ ತೊಡಗಿದುವು. ಈ ಪ್ರವೃತ್ತಿಯ ಬೆಳವಣಿಗೆಯೊಂದಿಗೆ ಅಭದ್ರತೆಯ ವಾತಾವರಣ ಹೆಚ್ಚಿತಲ್ಲದೆ, ಅನಾರೋಗ್ಯಕರ ಸ್ಪರ್ಧೆಗೂ ಎಡೆಯುಂಟಾಯಿತು.

ಬ್ಯಾಂಕುಗಳ ಪಾತ್ರ

ಸ್ವತಃ ಗಮನಾರ್ಹವಾದ ಪ್ರಮಾಣದಲ್ಲಿ ಪ್ರತಿಭೂತಿಗಳನ್ನು ಹೊಂದಿದ್ದು, ಅವುಗಳಲ್ಲಿ ವಹಿವಾಟು ನಡೆಸುವುದು ಬ್ಯಾಂಕುಗಳ ಕಲಾಪಗಳ ಒಂದು ಭಾಗ. ಜೊತೆಗೆ ಗ್ರಾಹಕರ ಪರವಾಗಿಯೂ ಅವು ಈ ಕಾರ್ಯದಲ್ಲಿ ತೊಡಗುತ್ತವೆ. ಸರ್ಕಾರದ ತುಟ್ಟಿಯ ಹಣ ನೀತಿಯ ಪರಿಣಾಮವಾಗಿ ಅದು ಹೆಚ್ಚು ಹೆಚ್ಚು ಬಡ್ಡಿ ದರಗಳಲ್ಲಿ ಹೊಸ ಹೊಸ ಸಾಲಗಳನ್ನು ಎತ್ತತೊಡಗಿದಾಗ, ಇತರ ಸರ್ಕಾರಿ ವಲಯ ಸಂಸ್ಥೆಗಳೂ ಈ ಬಗೆಯ ಕಲಾಪಗಳಲ್ಲಿ ತೊಡಗಿದಾಗ ಬ್ಯಾಂಕುಗಳು ತಮ್ಮ ಹಳೆಯ ಪ್ರತಿಭೂತಿಗಳನ್ನು ಮಾರುವ, ಹೊಸವನ್ನು ಕೊಳ್ಳುವ ಕ್ರಮ ತೆಗೆದುಕೊಳ್ಳುವುದು ಸಹಜವೇ. ಈ ಬಗೆಯ ಕಲಾಪಗಳಲ್ಲಿ ಅವು ದಲ್ಲಾಳಿಗಳ ನೆರವನ್ನು ಪಡೆದವು. ಪ್ರತಿಭೂತಿಗಳನ್ನು ಮಾರುವ ಬ್ಯಾಂಕಿಗೆ ಅದನ್ನು ಕೊಳ್ಳುವ ಬ್ಯಾಂಕಿನ ಹೆಸರನ್ನು ತಿಳಿಸದೆ, ಕೊಳ್ಳುವ ಬ್ಯಾಂಕಿಗೆ ಮಾರುವ ಬ್ಯಾಂಕಿನ ಹೆಸರಿನ ಪತ್ರ ಕೊಡದೆ ದಲ್ಲಾಳಿಗಳು ಬೇರೊಂದು ಬ್ಯಾಂಕಿನಿಂದ ಕೊಂಡಂತೆ ಆ ಬ್ಯಾಂಕಿನ ಹೆಸರಿನಲ್ಲಿ ವಹಿವಾಟು ನಡಸುವ ಪರಿಪಾಟಿಯನ್ನು ಬೆಳಸಿಕೊಂಡರು. ಆ ಮೂರನೆಯ ಬ್ಯಾಂಕು ಪ್ರತಿಭೂತಿಗಳ ಮಾರಾಟಕ್ಕೆ ಪ್ರತಿಯಾಗಿ ತನ್ನ ಹೆಸರಿಗೆ ಬಂದ ಚೆಕ್ಕನ್ನು ತನ್ನ ಹೆಸರಿನಲ್ಲೇ ದಾಖಲ ಮಾಡಿಕೊಳ್ಳದೆ, ನಿಜವಾಗಿ ಮಾರಾಟ ಮಾಡಿದ ಬ್ಯಾಂಕಿಗೂ ಕೊಡದೆ, ದಲ್ಲಾಳಿಯು ಹೆಸರಿಗೆ ಜಮಾ ಮಾಡುವವರೆಗೂ ಆ ಹಣ ದಲ್ಲಾಳಿಯ ಖಾತೆಯಲ್ಲಿ ಉಳಿಯುವಂತಾಯಿತು. ಇದು ಬಲು ಸ್ವಲ್ಪ ಕಾಲವೇ ಆಗಿದ್ದಿರಬಹುದು. ಆದರೂ ಅಷ್ಟರಲ್ಲಿ ಅವನು ಹಣ ಬಳಸಿಕೊಂಡು ಸಟ್ಟಾ ವಹಿವಾಟು ನಡೆಸುವುದು

ಸಾಧ್ಯವಾಯಿತು. ಅನೇಕ ವೇಳೆ ಪ್ರತಿಭೂತಿಗಳ ವಾಸ್ತವ ಬಟವಾಡೆಯೇ ಇಲ್ಲದೆ, ಬ್ಯಾಂಕು ನೀಡಿದ ಪಾವತಿ ಪತ್ರಗಳ ಆಧಾರದ ಮೇಲೆ, ವಹಿವಾಟು ನಡೆಸುವುದೂ ಸಾಮಾನ್ಯವಾಯಿತು. ಸರ್ಕಾರಿ ಪತ್ರಗಳ ವಹಿವಾಟಿಗಾಗಿ ರಿಸರ್ವ್ ಬ್ಯಾಂಕನ್ನು ಕೂಡ ದುರುಪಯೋಗಪಡಿಸಿಕೊಂಡಿದ್ದೂ, ಅದರ ಖಾತೆಗೂ ತಮ್ಮ ಪುಸ್ತಕಗಳ ದಾಖಲೆಗಳಿಗೂ ತಾಳೆ ಮಾಡುವ ಗೋಜಿಗೇ ಹೋಗದೆ, ರಿಸರ್ವ ಬ್ಯಾಂಕನ್ನು ಕೂಡ ಕತ್ತಲೆಯಲ್ಲಿಟ್ಟು ಕೆಲವು ಬ್ಯಾಂಕುಗಳು ವಹಿವಾಟು ನಡೆಸಿರುವುದು ಗೊತ್ತಾಗಿದೆ. ಪ್ರತಿಭೂತಿಗಳ ಕೊಳ್ಳಿಕೆಗಾಗಿ ಕೆಲವು ಬ್ಯಾಂಕುಗಳು ಕೋಟ್ಯಂತರ ರೂಪಾಯಿ ಪಾವತಿ ಮಾಡಿವೆ. ಅದಕ್ಕೆ ಪ್ರತಿಯಾಗಿ ಪ್ರತಿಭೂತಿಗಳಾಗಲಿ, ಬ್ಯಾಂಕ್ ರಸೀತಿಗಳಾಗಲಿ, ರಿಸರ್ವ್ ಬ್ಯಾಂಕಿನ ಉಪಖಾತೆಯ ದುರುಪಯೋಗದ ಸಂಗತಿಯೂ ಹೊರಬಿದ್ದಿದೆ. ಎಷ್ಟೋ ಬ್ಯಾಂಕ್ ರಸೀತಿಗಳು ಖೋಟಾ ಎನಿಸಿವೆ. ಅಷ್ಟೇನೂ ದೊಡ್ಡವಲ್ಲದ ಒಂದೆರಡು ಬ್ಯಾಂಕುಗಳು ಕೂಡ ಹಲವು ಕೋಟಿ ರೂಪಾಯಿಗಳಿಗೆ ಬ್ಯಾಂಕ್ ರಸೀತಿಗಳನ್ನು ಕೊಡುವುದಾಗಲಿ, ದೊಡ್ಡ ಬ್ಯಾಂಕುಗಳು ಅವನ್ನು ನಂಬುವುದಾಗಲಿ ಎಂಥ ಊಹೆಗೂ ಮೀರಿದ ಸಂಗತಿ. ಸಂಬಂಧಪಟ್ಟ ಎಲ್ಲ ಸಂಸ್ಥೆಗಳೂ ಅವುಗಳ ಹಲವು ಅಧಿಕಾರಿಗಳೂ ಒಟ್ಟಾಗದೆ ಇಂಥ ಅಕ್ರಮ ಸಾಧ್ಯವಿಲ್ಲ. ಬ್ಯಾಂಕುಗಳು ತಮ್ಮ ಹೆಸರಿನಲ್ಲಿ, ತಮ್ಮ ಗ್ರಾಹಕರ ಹೆಸರಿನಲ್ಲಿ ದಲ್ಲಾಳಿಗಳೊಂದಿಗೆ ಹಾಜರಿವಾಯಿದಾ ಹಾಗೂ ಇಮ್ಮಡಿ ಹಾಜರಿವಾಯಿದಾ ವಹಿವಾಟು ನಡಸಿವೆ. ಷೇರುಪೇಟೆಯಲ್ಲಿ ಅಂದು ಚಾಲ್ತಿಯಲ್ಲಿದ್ದ ದರಗಳಿಗಿಂತ ಕಡಿಮೆ ದರಗಳಲ್ಲಿ ಈ ವಹಿವಾಟುಗಳಾಗಿವೆ. ಇಂಥ ಹಲವಾರು ವಹಿವಾಟುಗಳಿಗೆ ಬ್ಯಾಂಕುಗಳು ಅಗಾಧವಾಗಿ ಹಣ ನೀಡಿವೆ. ಹಾಜರಿ ವಾಯಿದಾ ವಹಿವಾಟುಗಳ ಅಡಿಯಲ್ಲಿ, ಬೇರೆ ಯಾವ ಆಧಾರವೂ ಇಲ್ಲದೆಯೇ, ಹುಂಡಿಗಳನ್ನು ವಟಾಯಿಸಿ ಹಣ ನೀಡಿವೆ. ಕೆಲವು ವಾಯಿದಾ ವಹಿವಾಟುಗಳು ಅಪೂರ್ಣವಾಗಿದೆ. ಒಟ್ಟಿನಲ್ಲಿ ಹಲವು ಸಹಸ್ರ ಕೋಟಿ ರೂಪಾಯಿಗಳ ವಂಚನೆಯ ಮಹಾ ಪ್ರಕರಣವಿದು. ಈ ಬಗ್ಗೆ ಹೊಸ ಹೊಸ ಸಂಗತಿಗಳು ದಿನದಿನವೂ ಹೊರಬೀಳುತ್ತಲೇ ಇವೆ.

ಜಾನಕಿರಾಮನ್ ಸಮಿತಿ

ಈ ಪ್ರಕರಣ ಕುರಿತು ವಿಚಾರಣೆ ನಡೆಸಲು ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಆರ್ ಜಾನಕಿರಾಮನ್‌ರ ಅಧ್ಯಕ್ಷತೆಯಲ್ಲಿ ನೇಮಕವಾದ ಸಮಿತಿಯ ಮೊದಲನೆಯ ನಡುಗಾಲದ ವರದಿಯಿಂದ ಎಷ್ಟೋ ಅಂಶಗಳು ಬೆಳಕಿಗೆ ಬಂದಿವೆ. ಸರ್ಕಾರ ತತ್‌ಕ್ಷಣವೇ ಈ ವರದಿಯನ್ನೊಪ್ಪಿಕೊಂಡಿದೆ. ಕೇಂದ್ರ ತನಿಖಾ ಮಂಡಲಿಯ ತನಿಖೆ ತೀವ್ರವಾಗಿ ಮುಂದುವರಿದಿದೆ. ಇನ್ನು ಮುಂದೆ ಇಂಥ ಪ್ರಕರಣಗಳಾಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು

ಜಾನಕಿರಾಮನ್ ಸಮಿತಿ ಶಿಫಾರಸು ಮಾಡಿದೆ. ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳನ್ನು ಮೀರಿ ಬ್ಯಾಂಕುಗಳು ಸರ್ಕಾರಿ ಪ್ರತಿಭೂತಿಗಳನ್ನು ಬಿಟ್ಟು ಇತರ ಸೆಕ್ಯೂರಿಟಿಗಳಲ್ಲಿ ಹಾಜರಿವಾಯಿದಾ ಮತ್ತು ಇಮ್ಮಡಿ ಹಾಜರಿವಾಯಿದಾ ವ್ಯವಹಾರ ಮಾಡಬಾರದೆಂಬುದು ಅದರ ಒಂದು ಶಿಫಾರಸು. ಈ ವ್ಯವಹಾರ ಬ್ಯಾಂಕುಗಳ ನಡುವೆ ಮಾತ್ರ ನಡೆಯಬೇಕು. ಬ್ಯಾಂಕೇತರ ವ್ಯಕ್ತಿಗಳೊಂದಿಗೆ ಹಿಂಕೊಳ್ಳಿಕೆ ವಹಿವಾಟು ನಡೆಸಬಾರದೆಂಬ ನಿಯಮ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ತಮ್ಮ ಗ್ರಾಹಕರ ಪರವಾಗಿ ಕೂಡ ಹಿಂಕೊಳ್ಳಿಕೆ ವಹಿವಾಟು ನಡಸಬಾರದು. ಬ್ಯಾಂಕುಗಳ ಖಜಾನೆ ವಹಿವಾಟುಗಳ ಮೇಲೆ ಆಂತರಿಕ ನಿಯಂತ್ರಣ ಏರ್ಪಡಬೇಕು. ಬ್ಯಾಂಕುಗಳು ರಿಸರ್ವ್ ಬ್ಯಾಂಕಿನಲ್ಲಿ ಹೊಂದಿರುವ ತಮ್ಮ ಖಾತೆಗಳ ಮೇಲೆ ಚೆಕ್ಕುಗಳನ್ನು ಬರೆದು ಅನ್ಯ ವ್ಯಕ್ತಿಗಳ ವಹಿವಾಟುಗಳಿಗೆ ಪಾವತಿ ಮಾಡಬಾರದು. ಹೀಗೆ ಸಮಿತಿ ಹಲವಾರು ಶಿಫಾರಸುಗಳನ್ನು ಮಾಡಿದೆ.

ರಿಸರ್ವ್ ಬ್ಯಾಂಕಿನ ಕರ್ತವ್ಯಲೋಪ

ಇಡೀ ಪ್ರಕರಣವನ್ನು ಕುರಿತ ಅತ್ಯಂತ ಸೋಜಿಗದ, ಸಂಗತಿಯೆಂದರೆ ಹಲವು ಸಾವಿರ ಕೋಟಿ ರೂಪಾಯಿಗಳ ಅಕ್ರಮ ವ್ಯವಹಾರ ನಡೆಯುವವರೆಗೂ ಇದು ಹೇಗೆ ಬೆಳಕಿಗೆ ಬರಲಿಲ್ಲವೆಂಬುದು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಹಿರಿಯ ಹುದ್ದರಿಗಳೇ ಈ ವಂಚನೆಯಲ್ಲಿ ನಿರತರಾಗಿ ಕೊಳ್ಳೆಯಲ್ಲಿ ಪಾಲ್ಗೊಂಡಿದ್ದು ಎರಡನೆಯ ಅಶ್ಚರ್ಯದ ಸಂಗತಿ. ಇದರಲ್ಲಿ ರಿಸರ್ವ್ ಬ್ಯಾಂಕೇನೂ ದೋಷದಿಂದ ಮುಕ್ತವಾಗಿಲ್ಲ. ಕಳೆದ ವರ್ಷದ ಜುಲೈ 26ರಷ್ಟು ಹಿಂದೆಯೇ ರಿಸರ್ವ್ ಬ್ಯಾಂಕು ಕಳಿಸಿದ ಸುತ್ತೋಲೆಯೊಂದರಲ್ಲಿ ಇಂಥ ವ್ಯವಹಾರದತ್ತ ಕೆಲವು ಬ್ಯಾಂಕುಗಳ ಗಮನ ಸೆಳೆದಿತ್ತು. ಕೆಲವು ಬ್ಯಾಂಕುಗಳು ಸೆಕ್ಯೂರಿಟಿಗಳಲ್ಲಿ ಮಾಡುತ್ತಿರುವ ಕೆಲವು ಬಗೆಯ ವ್ಯವಹಾರಗಳು ಸರಿಯಲ್ಲ ಎಂದು ಎಚ್ಚರಿಸಿತ್ತು. ಇಂಥ ವ್ಯವಹಾರಗಳಿಂದ ರಿಸರ್ವ್ ಬ್ಯಾಂಕಿಗೆ ಆತಂಕವಾಗಿತ್ತಾದರೂ ಆ ಹಂತದಲ್ಲಿ ಅದು ಬೇರೆ ಯಾವುದದೇ ಕ್ರಮ ತೆಗೆದುಕೊಳ್ಳದಿದ್ದುದು ಆಶ್ಚರ್ಯಕರ. ಇದೊಂದು ಭಾರಿ ಲೋಪವೇ. ಆಗಲೇ ರಿಸರ್ವ್ ಬ್ಯಾಂಕು ಉಗ್ರ ಕ್ರಮ ತೆಗೆದುಕೊಳ್ಳುವುದಾಗಿ ಆ ಬ್ಯಾಂಕ್ ಗಳಿಗೆ ಎಚ್ಚರಿಕೆ ನೀಡಬೇಕಾಗಿತ್ತು. ರಿಸರ್ವ್ ಬ್ಯಾಂಕ್ ಅಧಿನಿಯಮದ 27 (2)ನೆಯ ಪ್ರಕರಣದನ್ವಯ ರಿಸರ್ವ್ ಬ್ಯಾಂಕಿಗೆ ಈ ಅಧಿಕಾರವುಂಟು. ತನಗೆ ಬೇಕಾದ ಎಲ್ಲ ಮಾಹಿತಿಯನ್ನೂ ಪಡೆಯುವ ಹಕ್ಕುಂಟು. ಯಾವುದೇ ಬ್ಯಾಂಕಿನ ವ್ಯವಹಾರಗಳನ್ನು ತನಿಖೆ ಮಾಡುವ ಅಧಿಕಾರ ಅದಕ್ಕೆ 35 (1–ಎ) ಪ್ರಕರಣದಲ್ಲಿ ದತ್ತವಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಮಾಣ ಮಾಡಿಸಿ ಅವರಿಂದ ವಿವರಣೆ ಕೇಳಲೂಬಹುದು. ಈ ವಿಚಾರಣೆಯ ಆಧಾರದ ಮೇಲೆ ಸಂಬಂಧಪಟ್ಟ

ಬ್ಯಾಂಕಿನ ವಿರುದ್ಧ ಉಗ್ರಕ್ರಮ ತೆಗೆದುಕೊಳ್ಳಬಹುದು. ಆದರೆ ರಿಸರ್ವ್ ಬ್ಯಾಂಕ್ ಈ ನಿಟ್ಟಿನಲ್ಲಿ ಏನೂ ಮಾಡಲಿಲ್ಲ. ಇನ್ನು ಮುಂದೆ ಇಂಥ ಕೆಲಸಕ್ಕೆ ರಿಸರ್ವ್ ಬ್ಯಾಂಕಿನ ನೇತೃತ್ವದಲ್ಲಿ ಪ್ರತ್ಯೇಕ ತನಿಖಾತಂಡವೊಂದು ಇರಬೇಕು ಎಂದು ಹೇಳಲಾಗಿದೆ. ರಿಸರ್ವ್ ಬ್ಯಾಂಕಿನಲ್ಲಿ ಹಿಂದಿನಿಂದಲೂ ಇದಕ್ಕೆ ಪ್ರತ್ಯೇಕವಾದ ಇಲಾಖೆ ಹೊಂದಿದೆ. ಬ್ಯಾಂಕಿಂಗ್ ಕಲಾಪ ಮತ್ತು ಅಭಿವೃದ್ಧಿ ಇಲಾಖೆಗೆ ಸೇರಿದ ಕೆಲಸವಿದು. ಇದರ ಅಡಿಯಲ್ಲಿರುವ ನೂರಾರು ಅಧಿಕಾರಿಗಳು ಈ ಕೆಲಸ ಮಾಡಬೇಕಾಗಿದೆ. ರಿಸರ್ವ್ ಬ್ಯಾಂಕು ಪ್ರತಿ ವರ್ಷವೂ ಪ್ರಕಟಿಸುವ 'ಭಾರತ ದಲ್ಲಿ ಬ್ಯಾಂಕಿಂಗಿನ ಪ್ರವೃತ್ತಿ ಮತ್ತು ಪ್ರಗತಿ' ಎಂಬ ವರದಿಯ ಉದ್ದೇಶ ಇದೇ. ಈಗ ಇಂಥ ತನಿಖೆಗಾಗಿಯೇ ಪ್ರತ್ಯೇಕ ವ್ಯವಸ್ಥೆ ಇರಬೇಕು ಎಂದು ನರಸಿಂಹಂ ಸಮಿತಿಯ ವರದಿಯಲ್ಲಿ ಹೇಳಲಾಗಿದೆ. ಮುಂದೆ ಆಗಬಹುದಾದ ವ್ಯವಸ್ಥೆ ಏನೇ ಇರಲಿ, ಈಗ ಆಗಿಹೋಗಿರುವ ಪ್ರಮಾದ ಇಷ್ಟೊಂದು ಬೆಳೆಯದಂತೆ ಮುಂದಾಗಿಯೇ ತಡೆಯಬಹುದಿತ್ತು. ರಿಸರ್ವ್ ಬ್ಯಾಂಕ್ ಈ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವುದು ಅಗತ್ಯವೆನಿಸುತ್ತದೆ. ಇಡೀ ಬಂಡವಾಳ ಮಾರುಕಟ್ಟೆಯ ಬಗ್ಗೆ, ಬ್ಯಾಂಕಿಂಗ್ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರ ವಿಶ್ವಾಸ ಬಹಳಮಟ್ಟಿಗೆ ಕಡಿಮೆಯಾಗಿದೆಯೆಂಬುದಂತೂ ನಿಜ. ಅರ್ಥವ್ಯವಸ್ಥೆಯನ್ನು ಸಡಿಲಗೊಳಿಸುವ ಹಾಗೂ ವಿದೇಶಿ ಸಂಖ್ಯೆಗಳಿಗೆ ಮುಕ್ತ ಅವಕಾಶ ನೀಡಬೇಕೆನ್ನುವ ಸರ್ಕಾರ ಈಗ ಇನ್ನೊಮ್ಮೆ ಈ ಬಗ್ಗೆ ಯೋಚಿಸಬೇಕಾಗಿದೆ. ಕೆಲವು ವಿದೇಶಿ ಬ್ಯಾಂಕಿಂಗ್ ಸಂಸ್ಥೆಗಳೂ ಈ ಇಡೀ ಹಗರಣದಲ್ಲಿ ತಮ್ಮ ಮುಖಕ್ಕೆ ಧಾರಾಳವಾಗಿ ಮಸಿ ಬಳಿದುಕೊಂಡಿವೆ. ವಿದೇಶಿ ಸಂಸ್ಥೆಗಳ ಮೋಹಕ್ಕೆ ತುತ್ತಾದ ಸರ್ಕಾರ ಈ ಬಗೆಗೆ ತನ್ನ ಧೋರಣೆಯನ್ನು ಬದಲಿಸಿಕೊಳ್ಳಬೇಕಾಗಿದೆ.

29.

ಸೆಪ್ಟೆಂಬರ್ 1992
ಯೂರೋಪಿಯನ್ ಕರೆನ್ಸಿ ಬಿಕ್ಕಟ್ಟು

ಪ್ರಪಂಚದಲ್ಲಿ ಈಗ ಪರಸ್ಪರ ವಿರುದ್ಧ ಎನಿಸಬಹುದಾದ ಎರಡು ವಿದ್ಯಮಾನಗಳು ಕಂಡುಬರುತ್ತಿವೆ. ಒಂದು, ಏಕೀಕರಣ ಪ್ರಯತ್ನ; ಇನ್ನೊಂದು, ಛಿದ್ರೀಕರಣ ಪ್ರವೃತ್ತಿ. ಮೊದಲನೆಯದು ಆದರ್ಶದಿಂದ ಹೊಮ್ಮಿದ್ದು, ಸ್ವಾರ್ಥದಿಂದ ಪ್ರೇರಿತವಾದದ್ದಲ್ಲವೆಂದೂ ಹೇಳುವಂತಿಲ್ಲ. ಎರಡನೆಯದೂ ಸ್ವಾರ್ಥಮೂಲವಷ್ಟೇ ಅಲ್ಲ, ಅದಕ್ಕೂ ಅದರದೇ ಆದ ಆದರ್ಶವುಂಟು. ರಾಜಕೀಯವಾಗಿ, ಆರ್ಥಿಕವಾಗಿ ಎಲ್ಲ ದೇಶಗಳೂ ಒಂದಾಗದಿದ್ದರೆ ಭವಿಷ್ಯ ನೆಟ್ಟಗಿರಲಿಕ್ಕಿಲ್ಲ ಎಂಬ ಮನವರಿಕೆ ಎಲ್ಲರಿಗೂ ಆಗುತ್ತಿದೆ. ಈ ಏಕೀಕರಣದ ಹಿಂಬದಿಯಲ್ಲಿ ತಂತಮ್ಮ ಬೇಳೆಯನ್ನು ಸ್ವಲ್ಪ ಹೆಚ್ಚಾಗಿ ಬೇಯಿಸಿಕೊಳ್ಳಬೇಕೆಂಬ ಸ್ವಾರ್ಥ ಬುದ್ಧಿಯೂ ಇಲ್ಲದಿಲ್ಲ. ಎಲ್ಲ ದೇಶಗಳೂ ಎಲ್ಲ ಪ್ರದೇಶಗಳೂ ಒಂದಾಗಿಬಿಟ್ಟರೆ ತಮ್ಮ ವೈಶಿಷ್ಟ್ಯವೆಲ್ಲಿ ಉಳಿದೀತು? ತಮ್ಮ ಹಿತಸಾಧನೆ ಹೇಗೆ ಆದೀತು? ಸಮಷ್ಟಿಯಲ್ಲಿ ವ್ಯಷ್ಟಿ ಕರಗಿಹೋದೀತು, ಕೊಚ್ಚಿಹೋದೀತು. ಬಲಿಷ್ಠವಾದ ಅಂಗಗಳು ತಮ್ಮ ಹಿತಸಾಧನೆಗಾಗಿ ಉಳಿದವನ್ನು ಬಲಿಕೊಡಬಹುದು ಎಂಬ ಅಂಜಿಕೆಯೂ ಉಂಟು. ಆದ್ದರಿಂದಲೇ ಏಕೀಕರಣ ಪ್ರವೃತ್ತಿ ಎಷ್ಟು ಪ್ರಬಲವಾಗಿದೆಯೋ, ಛಿದ್ರೀಕರಣ ಪ್ರವೃತ್ತಿಯೂ ಅಷ್ಟೇ ಪ್ರಬಲವಾಗಿದೆ. ಸಮಷ್ಟಿಯಲ್ಲಿ ವ್ಯಷ್ಟಿ ವೈಶಿಷ್ಟ್ಯವನ್ನುಳಿಸಿಕೊಳ್ಳುವ ಹಾದಿಯ ಅನ್ವೇಷಣೆಯೂ ನಡೆದೇ ಇದೆ.

ವಿಜ್ಞಾನ–ತಂತ್ರವಿದ್ಯೆಗಳ ಮುನ್ನಡೆಯೂ ಏಕವಿಶ್ವದ ಅನಿವಾರ್ಯತೆಯನ್ನು ಎತ್ತಿ ಹೇಳುತ್ತಿದೆ. ಪ್ರಪಂಚದ ದೂರದೂರದ ಸ್ಥಳಗಳು ಎಷ್ಟೆಷ್ಟು ಹತ್ತಿರಕ್ಕೆ ಬಂದಿವೆಯೆಂದರೆ, ಇಡೀ ಭೂಮಿಯೇ ಇಂದು ಒಂದು ಹಳ್ಳಿಯಂತಾಗಿದೆಯೆಂದು ಮೆಕ್ ಲೋಹನ್ ಅವರು ಹೇಳಿದ್ದಾರೆ. ಇದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲ. ಈ ನಿಕಟತೆಯಿಂದಾಗಿ ಏಕತೆಯನ್ನು ಸಾಧಿಸುವುದು, ಒಟ್ಟಾಗಿ ಬಾಳುವುದು ಅನಿವಾರ್ಯವೆನಿಸಿದೆ. ಹೊಸ ವಿಶ್ವ ಅರ್ಥವ್ಯವಸ್ಥೆಯ ಕನಸು ಇದರ ಇನ್ನೊಂದು ಮುಖ. ದೇಶಗಳ ನಡುವಣ ಅನಾಹುತಕಾರಿ ಸ್ಪರ್ಧೆಯನ್ನು ತಪ್ಪಿಸುವ, ಆರ್ಥಿಕವಾಗಿ ಅವನ್ನು ಒಂದುಗೂಡಿಸುವ, ವಿಶ್ವಕ್ಕೆಲ್ಲ ಒಂದೇ ಹಣವ್ಯವಸ್ಥೆಯನ್ನು ತರುವ ಪ್ರಯತ್ನಗಳೂ ನಡೆದೇ ಇವೆ.

ಎರಡನೆಯ ಮಹಾಯುದ್ಧದ ನಡುವೆ– 1944ರಲ್ಲಿ ಅಮೆರಿಕದ ಬ್ರೆಟನ್ ವುಡ್ಸ್ನಲ್ಲಿ ಸೇರಿದ್ದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಈ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆ ಇಡಲಾಯಿತು. ಆ ಸಮ್ಮೇಳನದ ನಿರ್ಣಯಕ್ಕೆ ಅನುಗುಣವಾಗಿ ವಿಶ್ವ ಬ್ಯಾಂಕ್ ಮತ್ತು

ಅಂತರರಾಷ್ಟ್ರೀಯ ಹಣ ನಿಧಿಗಳು ಸ್ಥಾಪಿತವಾದುವು. ಯುದ್ಧ ಜರ್ಜರಿತವಾದ ದೇಶಗಳ ಆರ್ಥಿಕ ಪುನರ‍್ರಚನೆ ಮತ್ತು ಎಲ್ಲ ದೇಶಗಳ ಅಭಿವೃದ್ಧಿಯ ಹೊಣೆ ವಿಶ್ವ ಬ್ಯಾಂಕಿನದಾಯಿತು. ಅದರ ವಿಸ್ತೃತ ಹೆಸರೇ ಈ ಹೊಣೆಯನ್ನು ಸೂಚಿಸುತ್ತದೆ. ವಿವಿಧ ದೇಶಗಳ ನಾಣ್ಯಗಳ ಪರಸ್ಪರ ವಿನಿಮಯ ಮೌಲ್ಯಗಳು ಅಹನ್ಯಹನಿ ಚಲನೆಗಳಿಗೆ ಒಳಗಾಗದೆ ಸ್ಥಾಯಿಯಾಗಿರುವಂತೆ ನೋಡಿಕೊಳ್ಳುವುದು ಅಂತರ ರಾಷ್ಟ್ರೀಯ ಹಣ ನಿಧಿಯ ಹೊಣೆಯಾಯಿತು. ಆಗ ಡಾಲರಿಗೆ ವಿಶ್ವಮಾನ್ಯತೆ ಇದ್ದದ್ದರಿಂದ (ಈಗಲೂ ಹೋಗಿಲ್ಲ) ಡಾಲರಿನ ಲೆಕ್ಕದಲ್ಲಿ ವಿವಿಧ ದೇಶಗಳ ನಾಣ್ಯಗಳ ಮೌಲ್ಯಗಳನ್ನು ನಿರ್ಧರಿಸಲಾಯಿತು. ಡಾಲರು ಆಗ ಚಿನ್ನಕ್ಕೆ ಮುಕ್ತ ಪರಿವರ್ತನೆಯಾಗುವ ಗುಣ ಹೊಂದಿತ್ತು. ವಿವಿಧ ನಾಣ್ಯಗಳ ಸುವಣ9 ಮೌಲ್ಯವನ್ನೂ ಆಂತೆಯೇ ಸಿರ್ಧರಿಸಲಾಗಿತ್ತು. ಅವುಗಳ ವಿನಿಮಯ ಮೌಲ್ಯಗಳು ನಿಗದಿಯಾದ ಈ ಮಟ್ಟಗಳಿಂದ ಆಚೀಚೆ ಒಂದು ಮಿತಿಯನ್ನು ಮೀರಿ ಚಲಿಸದಂತೆ ನೋಡಿಕೊಳ್ಳುವುದು ವಿವಿಧ ಸದಸ್ಯ ದೇಶಗಳ ಜವಾಬ್ದಾರಿಯಾಯಿತು. ಈ ಸ್ಥಾಯಿತ್ವವನ್ನು ಸಾಧಿಸಲು ಹಣ ನಿಧಿಯ ನೆರವು ಸಿದ್ಧವಿತ್ತು. ಒಂದು ರೀತಿಯಲ್ಲಿ ಅಖಿಲ ವಿಶ್ವ ಹಣ ವ್ಯವಸ್ಥೆಯ ದಿಕ್ಕಿನಲ್ಲಿ ಇಟ್ಟ ಒಂದು ಹೆಜ್ಜೆಯಿದು ಎನ್ನಬಹುದು. ಸರ್ವತ್ರ ಮಾನ್ಯತೆ ಪಡೆದ ಡಾಲರು ಒಂದು ಸೀಮಿತ ಅರ್ಥದಲ್ಲಿ ವಿಶ್ವದ ನಾಣ್ಯದ ಯೋಗ್ಯತೆ ಪಡೆದುಕೊಂಡಿತ್ತೆನ್ನಬಹುದು. ವಿಶ್ವಮಾನ್ಯವಾದ ಒಂದು ಕರೆನ್ಸಿ ವ್ಯವಸ್ಥೆಯನ್ನು ಚಲಾರ್ಥ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬುದು ಒಂದು ದೂರದ ಕನಸಾಗಿತ್ತು.

ಆದರೆ ಹಣ ನಿಧಿಯ ಅಧೀಕ್ಷತೆಯ ಈ ವ್ಯವಸ್ಥೆ ಬಹಳ ಕಾಲ ಸಮರ್ಪಕವಾಗಿ ಮುಂದುವರಿಯಲಾರದೆ ಹೋಯಿತು. ಯಾವುದೇ ದೇಶದ ಆರ್ಥಿಕ ಹಿತಸಾಧನೆಗೆ ಅದರ ನಾಣ್ಯದ ಮೌಲ್ಯದ ಸ್ಥಿರತೆ ಒಂದು ಸಾಧನ ಮಾತ್ರ. ಅದೇ ಅಂತಿಮ ಗುರಿಯಲ್ಲ. ದೇಶದಲ್ಲಿ ತೀವ್ರ ಬದಲಾವಣೆಗಳಾದಾಗ, ಉತ್ಪಾದನೆ ಉದ್ಯೋಗ ವರಮಾನ ಮುಂತಾದವೆಲ್ಲ ವ್ಯತ್ಯಾಸಗೊಂಡಾಗ, ಆಂತರಿಕವಾಗಿ ಅದರ ನಾಣ್ಯದ ಮೌಲ್ಯ ಹೆಚ್ಚು ಕಡಮೆಯಾಗುತ್ತದೆ. ಬೆಲೆಗಳು ಏರಿಳಿಯುತ್ತವೆ. ಅದರ ಕೊಳ್ಳುವ ಶಕ್ತಿಯ ಏರಿಕೆ ಅಥವಾ ಇಳಿತಾಯ ಆಗುತ್ತದೆ. ಆಂತರಿಕವಾಗಿ ಈ ಏರಿಳಿತಗಳಾದಾಗ ಬಾಹ್ಯವಾಗಿಯೂ ಆ ದೇಶದ ನಾಣ್ಯದ ಮೌಲ್ಯದಲ್ಲಿ ಈ ವ್ಯತ್ಯಾಸ ಪ್ರತಿಫಲಿತವಾಗಲೇಬೇಕು. ಅಂತಿಮವಾಗಿ ವಿವಿಧ ದೇಶಗಳ ನಾಣ್ಯಗಳ ಪರಸ್ಪರ ಮೌಲ್ಯಗಳು ಅವುಗಳ ಕೊಳ್ಳುವ ಶಕ್ತಿಗೆ ಅನುಗುಣವಾಗಿಯೇ ತಂತಮ್ಮ ನೆಲೆಗಳನ್ನು ಕಂಡುಕೊಳ್ಳಲೇಬೇಕು. ಹಾಗಾಗಲು ಬಿಡದೆ ಕೃತಕ ವಿಧಾನಗಳಿಂದ ಒಂದು ನಿಶ್ಚಿತ ನೆಲೆಗೆ ಅವನ್ನು ಗಂಟು ಹಾಕಲು ಯತ್ನಿಸಿದರೆ

ಅದು ಬಹುಕಾಲ ಯಶಸ್ಸು ಗಳಿಸಲಾರದು. ಅಂತೆಯೇ ಬಹಳ ಬೇಗ ಅಂತರರಾಷ್ಟ್ರೀಯ ಹಣ ನಿಧಿಯ ಕಟ್ಟುಪಾಡುಗಳಲ್ಲಿ ಬಿರುಕುಗಳು ಕಾಣಿಸಿಕೊಂಡುವು. ಇಪ್ಪತ್ತು ವರ್ಷಗಳಿಗೂ ಹಿಂದೆ ಈ ಪರಿಸ್ಥಿತಿ ಬಲು ತೀವ್ರವಾಗಿ ಕಾಣಿಸಿಕೊಂಡಿತು. ಬಲಾಢ್ಯವಾದ ಡಾಲರ್ ನಾಣ್ಯವೇ ಚಿನ್ನಕ್ಕೆ ಪರಿವರ್ತನೀಯತೆಯನ್ನು ಕಳೆದುಕೊಂಡಿತು. ವಿವಿಧ ದೇಶಗಳ ನಾಣ್ಯಗಳ ವಿನಿಮಯ ದರಗಳನ್ನು ಮತ್ತೆ ನಿರ್ಧರಿಸಲಾಯಿತು. ಅವು ಆಚೀಚೆ ಚಲಿಸಲು ಇನ್ನಷ್ಟು ಹೆಚ್ಚಿನ ಅಂತರವನ್ನು ನಿಗದಿಪಡಿಸಲಾಯಿತು. ಕೊನೆಗೆ ಇದೂ ಸಾಧ್ಯವಾಗಲಿಲ್ಲ. ಅಂತಿಮವಾಗಿ ಹಲವು ದೇಶಗಳ ನಾಣ್ಯಗಳು ಚಲನಾತ್ಮಕವಾದುವು. ಅನಿಶ್ಚಿತತೆ ವ್ಯಾಪಕವಾಗಿ ಹಬ್ಬಿತು. ಮುಂದುವರಿದ ದೇಶಗಳ ಕಥೆ ಇದು. ಅಭಿವೃದ್ಧಿಶೀಲ ದೇಶಗಳ ಪಾಡು ಹೇಳಬೇಕಾದ್ದೇ ಇಲ್ಲ. ಅವು ನಿರಂತರವಾಗಿ ಪ್ರತಿಕೂಲ ವ್ಯಾಪಾರ ಪರಿಸ್ಥಿತಿಗೆ ಒಳಗಾಗಿ, ಆಮದು–ರಫ್ತುಗಳನ್ನಾಗಲಿ ಪಾವತಿಗಳನ್ನಾಗಲಿ ಸರಿದೂಗಿಸಿಕೊಳ್ಳಲಾಗದೆ ಸದಾ ಅಸಮತೋಲಕ್ಕೊಳಗಾಗಿ, ಈ ಅಂತರವನ್ನು ತುಂಬಲು ಅಂತರ ರಾಷ್ಟ್ರೀಯ ಹಣ ನಿಧಿಯ ಬಾಯಂಬುಲಕ್ಕೆ ಕೈಯೊಡ್ಡುತ್ತಾ, ಆಗಾಗ ಅದರಿಂದ ವಿಸ್ತೃತ ಉದರಿ ನೆರವನ್ನು ಬೇಡುತ್ತಾ, ಚಿಂತಾಜನಕ ಸ್ಥಿತಿಯಲ್ಲೇ ಮುಂದುವರಿಯುತ್ತ ಬಂದಿವೆ.

ವಿಶ್ವ ಅರ್ಥವ್ಯವಸ್ಥೆಯನ್ನು, ಅದಕ್ಕೆ ಆಧಾರವಾಗಿ ಹಣ ವ್ಯವಸ್ಥೆಯನ್ನು, ಒತ್ತಾಗಿ ಹೆಣೆಯುವ ಪ್ರಯತ್ನ ಹೆಚ್ಚು ಹೆಚ್ಚು ಕಷ್ಟಕರವಾಗಿ ಪರಿಣಮಿಸುತ್ತಿದ್ದಂತೆಯೇ ಪ್ರಾದೇಶಿಕವಾಗಿ ವಿವಿಧ ದೇಶಗಳು ಒಂದಾಗುವ, ತಮ್ಮವೇ ಆದ ಗುಂಪುಗಳನ್ನು ರಚಿಸಿಕೊಳ್ಳುವ, ಯತ್ನ ಮುಂದುವರಿದಿತ್ತು. ಪೂರ್ವಪಶ್ಚಿಮ ಶಕ್ತಿಬಣಗಳು ಬಹಳ ಸ್ಥೂಲವಾದ ಅರ್ಥದಲ್ಲಿ ಇಂಥ ವ್ಯವಸ್ಥೆಗಳು. ಸೋವಿಯತ್ ಒಕ್ಕೂಟದ ಪತನ ಹಾಗೂ ಪೂರ್ವ ಯೂರೋಪಿಯನ್ ರಾಷ್ಟ್ರಗಳ ನೂರಾಬಟ್ಟೆಯಿಂದಾಗಿ ಒಂದು ಬಣ ಮುರಿದು ಬಿತ್ತು. ಇನ್ನೊಂದು ಶಕ್ತಿಬಣ ತನ್ನ ಅರ್ಥ ಕಳೆದುಕೊಂಡಿತು. ಎರಡು ಧ್ರುವಗಳ ವಿಶ್ವ ಏಕಧ್ರುವಯುಕ್ತ ವ್ಯವಸ್ಥೆಯಾಗುವ ರೀತಿಯಲ್ಲಿ ಪರಿಣಾಮಗೊಂಡಿತ್ತು. ಆದರೆ ಇದರೊಳಗಿನ ವಿವಿಧ ದೇಶಗಳ ವಿಭಿನ್ನ ಹಿತಗಳು, ಪರಸ್ಪರ ಅಂಜಿಕೆಗಳು, ಸ್ಪರ್ಧೆಗಳು – ಈ ಕಾರಣಗಳಿಂದಾಗಿ ಇದೊಂದು ಏಕಶಿಲಾವ್ಯವಸ್ಥೆಯಾಗಿ ಉಳಿಯುವ ಸೂಚನೆ ಕಂಡುಬರಲಿಲ್ಲ. ಬದಲಾಗಿ ಪ್ರಾದೇಶಿಕ ಸಂಘಟನೆಗಳು ಹೆಚ್ಚು ನಿಚ್ಚಳವಾಗಿ ಮೂಡುವ ಪ್ರವೃತ್ತಿ ಪ್ರಬಲವಾಯಿತು.

ಪೂರ್ವ–ಪಶ್ಚಿಮ ಬಣಗಳ ಇದಿರು–ಬದಿರುತನ ಅದೃಶ್ಯವಾಗುವ ಮುನ್ನವೇ ಪಶ್ಚಿಮ ಯೂರೋಪಿನ ದೇಶಗಳೆಲ್ಲ ಒಂದಾಗಿ ತಮ್ಮ ಸಮಾನ ಹಿತಗಳ ರಕ್ಷಣೆ ಪೋಷಣೆಗಳಿಗಾಗಿ ಒಂದು

ವ್ಯವಸ್ಥೆಯನ್ನು ರಚಿಸಿಕೊಳ್ಳುವ ಯತ್ನ ಮುಂದುವರಿದಿತ್ತು. ಒಗ್ಗಟ್ಟಿನಲ್ಲಿ ಬಲವುಂಟು ಎಂಬ ತತ್ತ್ವವನ್ನು ಇವು ಕಂಡುಕೊಂಡಿದ್ದುವು. ಇಡೀ ವಿಶ್ವಕ್ಕೆ ಅನ್ವಯಿಸಲು ಯತ್ನಿಸಿ 1971ರಲ್ಲಿ ಕೈಬಿಟ್ಟ ಸ್ಥಿರ ವಿನಿಮಯ ದರ ವ್ಯವಸ್ಥೆಯನ್ನು ಪಶ್ಚಿಮ ಯೂರೋಪಿಯನ್ ದೇಶಗಳು ಪ್ರಾದೇಶಿಕವಾಗಿ ತಮ್ಮತಮ್ಮಲ್ಲೇ ಜಾರಿಗೆ ತರಲು 1979ರಲ್ಲಿ ಒಂದು ಒಡಂಬಡಿಕೆ ಮಾಡಿಕೊಂಡಿದ್ದುವು.

ಯೂರೋಪಿಯನ್ ಹಣ ವ್ಯವಸ್ಥೆಯನ್ನು ರಚಿಸಿಕೊಳ್ಳಲು ಅವು ಮನಸ್ಸು ಮಾಡಿದುವು. ಈ ದೇಶಗಳ ನಾಣ್ಯಗಳ ನಡುವೆ ಪರಸ್ಪರವಾಗಿ ಸ್ಥಿರವಾದ ವಿನಿಮಯ ದರಗಳನ್ನು ನಿರ್ಧರಿಸಲಾಯಿತು. ಇವೆಲ್ಲ ಒಟ್ಟಾಗಿ ಒಂದು ಘಟಕವಾಗಿ ಇತರ ದೇಶಗಳೊಡನೆ ವ್ಯವಹಾರ ನಡೆಸುವುದು ಹೆಚ್ಚು ಲಾಭಕರ ಎಂಬುದನ್ನು ಕಂಡು ಕೊಂಡುವು. ಈ ದೇಶಗಳೆಲ್ಲ ಮುಂದೆ ರಾಜಕೀಯವಾಗಿಯೂ ಒಂದಾಗಬೇಕು; ಇವಕ್ಕೆಲ್ಲ ಮುಂದೆ ಸಾಮಾನ್ಯವಾದ ಒಂದೇ ನಾಣ್ಯವೂ ಚಲಾವಣೆಗೆ ಬರಬೇಕು–ಎಂಬುದು ಇವುಗಳ ಗುರಿ. ಕಳೆದ ವರ್ಷ ಮಾಸ್ಟ್ರಿಚ್ ಎಂಬಲ್ಲಿ ಈ ಬಗ್ಗೆ ಈ ದೇಶಗಳು ಒಡಂಬಡಿಕೆ ಮಾಡಿಕೊಂಡವು. ಸೂರ್ಯನೇ ಮುಳುಗದ ಸಾಮ್ರಾಜ್ಯದ ಒಡೆತನ ಹೊಂದಿದ್ದ ಬ್ರಿಟನ್ನು ತನ್ನ ಸಾಮ್ರಾಜ್ಯವನ್ನೆಲ್ಲ ಕಳೆದುಕೊಂಡು ಮೂರನೆಯ ದರ್ಜೆಯ ದೇಶವಾಗಿದ್ದರೂ ಯೂರೋಪ್ ಬೇರೆ ತಾನೇ ಬೇರೆ ಎಂಬ ಧೋರಣೆಯಿಂದ ಸ್ವಲ್ಪ ಕಾಲ ಈ ಯೂರೋಪಿಯನ್ ಹಣ ವ್ಯವಸ್ಥೆಗೆ ಸೇರಿಕೊಳ್ಳಲೊಲ್ಲದೆ ಬೇರೆಯೇ ಇರಲು ಯತ್ನಿಸಿತು. ಆದರೆ ಅದು ಸಾಧ್ಯವಿಲ್ಲವೆನಿಸಿ ಎರಡು ವರ್ಷ ಹಿಂದೆ ತಾನೂ ಈ ವ್ಯವಸ್ಥೆಯೊಳಗೆ ಸೇರಿಕೊಂಡಿತು. ಯೂರೋಪಿಯನ್ ಸಮುದಾಯದ ದೇಶಗಳ ನಡುವಣ ಸ್ಥಿರ ವಿನಿಮಯ ದರ ವ್ಯವಸ್ಥೆಗೆ ಬ್ರಿಟನ್ನೂ ಹೂಗುಟ್ಟಿತು. ಮಾಸ್ಟ್ರಿಕ್ ಒಡಂಬಡಿಕೆಯ ಪ್ರಕಾರ ಈ ಶತಮಾನದ ಅಂತ್ಯದ ವೇಳೆಗೆ ಇಡೀ ಸಮುದಾಯಕ್ಕೆ ಒಂದೇ ಕರೆನ್ಸಿ – ಚಲಾರ್ಥ–ಬರುವುದಿತ್ತು.

ಆದರೆ ಅಂತರ ರಾಷ್ಟ್ರೀಯ ಹಣ ನಿಧಿಯ ಆಶ್ರಯದಲ್ಲಿ ಪ್ರಪಂಚದ ವಿವಿಧ ದೇಶಗಳಿಗೆ ಅನ್ವಯಿಸುವಂತೆ ರೂಪಿಸಲಾದ ಸ್ಥಿರ ವಿನಿಮಯ ದರ ವ್ಯವಸ್ಥೆಯಲ್ಲಿ ಇಪ್ಪತ್ತು ವರ್ಷ ಹಿಂದೆ ಬಿರುಕು ಬಿಟ್ಟಂತೆ, ಈ ಪ್ರಾದೇಶಿಕ ಸ್ಥಿರ ವಿನಿಮಯ ದರ ವ್ಯವಸ್ಥೆಯಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಈ ವ್ಯವಸ್ಥೆಗೆ ಸೇರಿರುವ ವಿವಿಧ ದೇಶಗಳು ಆರ್ಥಿಕವಾಗಿ ಒಂದೇ ರೀತಿಯಾಗಿಲ್ಲ. ಅವುಗಳ ಹಿತಗಳೂ ಪರಸ್ಪರ ಭಿನ್ನವಾದವು. ಕೆಲವೇಳೆ ಸ್ಪರ್ಧಾತ್ಮಕವಾದವು. ಅವುಗಳ ಬೆಳವಣಿಗೆಯ ಮಟ್ಟ ಒಂದೇ ರೀತಿಯಿಲ್ಲ. ಪ್ರತಿಯೊಂದು ದೇಶದಲ್ಲೂ ಅಸಮವಾಗಿ ವ್ಯತ್ಯಾಸಗಳಾಗುತ್ತಿರುತ್ತವೆ. ಉತ್ಪಾದನೆ, ಉದ್ಯೋಗ, ಹಣದ ಸೃಷ್ಟಿ, ವರಮಾನ ಎಲ್ಲವೂ ವಿಭಿನ್ನವಾಗಿ ಬದಲಾಗುತ್ತಿರುತ್ತವೆ. ಸಾಮೂಹಿಕ

ಕವಾಯತಿನಲ್ಲಿ ಹೆಜ್ಜೆಗಳು ಹಿಂದೆ ಮುಂದೆ ಆಗುವುದು ಅನಿವಾರ್ಯ. ಆಂತರಿಕವಾಗಿ ಅವುಗಳ ನಾಣ್ಯಗಳ ಕೊಳ್ಳುವ ಶಕ್ತಿ ಬದಲಾದಾಗ ಸಾಪೇಕ್ಷವಾಗಿಯೂ ಅವುಗಳ ಪರಸ್ಪರ ವಿನಿಮಯ ದರ ಬದಲಾವಣೆ ಅನಿವಾರ್ಯ. ಒಂದೊಂದರ ಹಿತ ಒಂದೊಂದು ರೀತಿ.

ಈ ಸಮುದಾಯದಲ್ಲಿ ಜರ್ಮನಿ ಆರ್ಥಿಕವಾಗಿ ಅತ್ಯಂತ ಪ್ರಬಲ ದೇಶ. ಸಹಜವಾಗಿಯೇ ಅದರ ಮಾರ್ಕ್ ನಾಣ್ಯ ದೃಢವಾಗಿ ಬೆಳೆಯುತ್ತಿದೆ. ಅದೇ ಒಂದು ರೀತಿಯಲ್ಲಿ ಯುರೋಪಿಯನ್ ಸಮುದಾಯದಲ್ಲಿ ಸಾರ್ವತ್ರಿಕ ಮಧ್ಯವರ್ತಿಯಾಗಿದೆ. ಅದರ ಏಕಪಕ್ಷೀಯ ವರ್ತನೆಯಿಂದ ಇತರ ದೇಶಗಳ ಹಿತ ಏರುಪೇರಾಗುವುದು ಸಹಜ.

ಪಶ್ಚಿಮ–ಪೂರ್ವ ಜರ್ಮನಿಗಳ ಏಕೀಕರಣದಿಂದ ಅಲ್ಲೊಂದು ವಿಶಿಷ್ಟ ಸಮಸ್ಯೆ ಉದ್ಭವಿಸಿದೆ. ಪೂರ್ವ ಜರ್ಮನ್ ಭಾಗದ ಆರ್ಥಿಕ ಬೆಳವಣಿಗೆಗಾಗಿ ಅದು ಅಗಾಧ ಬಂಡವಾಳ ಹೂಡಬೇಕಾಗಿದೆ. ಇದಕ್ಕಾಗಿ ಬಂಡವಾಳ ಆಕರ್ಷಿಸಲು ಅದು ಬಡ್ಡಿ ದರವನ್ನು ಏರಿಸಿ ಕೂರಿಸಿದೆ. ಜರ್ಮನ್ ಏಕೀಕರಣದಿಂದಾಗಿ ಆರ್ಥಿಕ ಸಮಸ್ಯೆಗಳು ತಲೆದೋರಿ, ಹಣ ಸೃಷ್ಟಿ ಅಧಿಕವಾಗಿ, ಬೆಲೆಗಳು ಏರಿ, ಅನಾಹುತವಾದೀತೆಂಬ ಅಂಜಿಕೆಯೂ ಅದಕ್ಕುಂಟು. ಎರಡು ಯುದ್ಧಗಳ ನಡುವೆ, ಒಂದನೆಯ ಯುದ್ಧದಲ್ಲಿ ಜರ್ಮನಿ ಪರಾಭವ ಹೊಂದಿದ ಮೇಲೆ, ಅಲ್ಲಿ ತೀವ್ರ ಬೆಲೆಯೇರಿಕೆ ಪ್ರವೃತ್ತಿ ಪ್ರಬಲವಾಗಿ ದೇಶವೇ ದಿವಾಳಿ ಏಳುವ ಸ್ಥಿತಿ ಬಂದಿತ್ತು. ಹಿಟ್ಲರನ ಆಗಮನಕ್ಕೆ ಅದು ಹಾದಿ ಮಾಡಿಕೊಟ್ಟಿತು. ಆ ನೆನಪು ಆ ದೇಶವನ್ನು ನಡುಗಿಸುತ್ತದೆ. ಹಾಗಾಗದಿರಲೆಂದೂ ಅದರ ಮುನ್ನೆಚ್ಚರಿಕೆ; ಹಣವನ್ನು ತುಟ್ಟಿಯಾಗಿಡಲು ಬಡ್ಡಿ ದರದ ಏರಿಕೆ.

ಇದರಿಂದಾಗಿ ಇತರ ದೇಶಗಳಿಂದ ಅಲ್ಲಿಗೆ ಬಂಡವಾಳ ಹರಿದುಹೋಗುತ್ತಿದೆ. ಅಧಿಕ ಬಡ್ಡಿ ದರದ ಆಕರ್ಷಣೆ ಅಷ್ಟೊಂದು. ಇದರಿಂದಾಗಿ ಜರ್ಮನ್ ಮಾರ್ಕಿಗೆ ಅಗಾಧ ಬೇಡಿಕೆ. ಅದರ ಇದಿರಿನಲ್ಲಿ ಇತರ ನಾಣ್ಯಗಳ ವಿನಿಮಯ ದರಗಳು ಏರುಪೇರಾಗುತ್ತಿವೆ. ಬ್ರಿಟನ್ನು ಈ ವ್ಯವಸ್ಥೆಯಿಂದ ಕಳಚಿಕೊಂಡಿದೆ. ಫ್ರಾನ್ಸ್ ಅಲುಗುತ್ತಿದೆ. ಇಟಲಿ ಕಂಗಾಲಾಗಿದೆ. ಏಕ ಕರೆನ್ಸಿ ವ್ಯವಸ್ಥೆಯ ಕನಸಿಗೇ ಪೆಟ್ಟು ಬಿದ್ದಿದೆಯೆನಿಸುತ್ತಿದೆ. ಪ್ರಥಮ ಚುಂಬನದಲ್ಲೇ ದಂತ ಭಗ್ನವೆ? ಎನಿಸುತ್ತಿದೆ.

ಆದರೆ ಏಕ ಕರೆನ್ಸಿ ವ್ಯವಸ್ಥೆ ಅನಿವಾರ್ಯವೆಂಬುದಕ್ಕೆ ಇದೂ ಒಂದು ನಿದರ್ಶನ ಎಂದು ವಾದಿಸುವವರೂ ಇದ್ದಾರೆ. ಬೇರೆಬೇರೆ ಚಲಾರ್ಥಗಳಿದ್ದು, ಅವುಗಳ ನಡುವೆ ಸ್ಥಿರ ವಿನಿಮಯ ದರ ಸಾಧಿಸಲು ಯತ್ನಿಸಿದ್ದರಿಂದ ಹೀಗಾಗಿದೆ. ಅದರ ಬದಲು ಒಂದೇ ಕರೆನ್ಸಿ ಇದ್ದರೆ ಏನೂ ತೊಂದರೆ ಇರದು.

ಹಾಗಾಗಬೇಕೆಂಬುದಕ್ಕೆ ಇದು ಸೂಚನೆ ಎಂದೂ ಹೇಳಲಾಗಿದೆ.

ಆದರೆ ಆಗಿನ ಏಕೀಕೃತ ವ್ಯವಸ್ಥೆಯಲ್ಲಿ ಜರ್ಮನಿಯೇ ಪ್ರಬಲ ಭಾಗವಾಗಿರುತ್ತದೆ; ಜರ್ಮನಿಯ ಹಿತಕ್ಕೆ ಅನುಗುಣವಾಗಿ ಇತರ ಭಾಗಗಳ ಹಿತಗಳು ನಿರ್ಧಾರವಾಗುತ್ತವೆ; ಇದು ಒಂದು ರೀತಿಯಲ್ಲಿ ವಿಸ್ತೃತ ಜರ್ಮನ್ ಪ್ರಭುತ್ವವೇ ಆಗುತ್ತದೆ ಎನ್ನುವವರೂ ಇದ್ದಾರೆ. ತಂತಮ್ಮ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಬಲಿಗೊಟ್ಟು, ಸಮುದ್ರದಲ್ಲಿ ಒಂದಾಗಿಹೋಗುವುದರಿಂದ ಏನು ಪ್ರಯೋಜನ? ಎಂದು ಇವರು ಪ್ರಶ್ನಿಸುತ್ತಾರೆ. ಇವರು ಈ ಸ್ಥಿತಿಯನ್ನೊಲ್ಲರು.

ಪ್ರಾದೇಶಿಕವಾಗಿಯಾಗಲಿ, ವಿಶ್ವವ್ಯಾಪಿಯಾಗಿಯಾಗಲಿ ಒಂದು ಸಮರ್ಪಕ ಹಾಗೂ ಸರ್ವಹಿತಪಾಲಕ ಕರೆನ್ಸಿ ವ್ಯವಸ್ಥೆಯ ರಚನೆ ಎಷ್ಟು ಕಷ್ಟಕರ ಎಂಬುದು ಯೂರೋಪಿಯನ್ ಕರನ್ಸಿ ಬಿಕ್ಕಟ್ಟಿನಿಂದ ಇನ್ನಷ್ಟು ಮನದಟ್ಟಾಗುತ್ತದೆ.

30.

ಡಿಸೆಂಬರ್ 1992
ಬ್ಯಾಂಕುಗಳ ಅಸ್ಪಷ್ಟ ಭವಿಷ್ಯ

ಈ ಸಂಚಿಕೆಯೊಂದಿಗೆ ಬ್ಯಾಂಕಿಂಗ್ ಪ್ರಪಂಚ'ದ ಹದಿಮೂರನೆಯ ಸಂಪುಟ ಮುಗಿಯುತ್ತದೆ. ಬ್ಯಾಂಕಿಂಗ್ ಪ್ರಪಂಚ ಆರಂಭವಾಗಿ ಸುಮಾರು ಹದಿಮೂರು ವರ್ಷಗಳಾಗಿವೆ. ಈ ಹದಿಮೂರು ವರ್ಷ ದೇಶದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಕಾಲ. ರಾಜಕೀಯ ಆರ್ಥಿಕ ಸಾಮಾಜಿಕ ರಂಗಗಳಲ್ಲಿ ಮಹಾ ಏಳುಬೀಳುಗಳು ಸಂಭವಿಸಿದ ಕಾಲ. ಈ ಅವಧಿಯಲ್ಲಿ ಭಾರತದ ಇಬ್ಬರು ಪ್ರಧಾನಮಂತ್ರಿಗಳು ಕೊಲೆಯಾದರು. ದೇಶ ಐವರು ಪ್ರಧಾನಮಂತ್ರಿಗಳ ಆಡಳಿತ ಸುಖವನ್ನನುಭವಿಸಿತು. ಹಳೆಯ ಮೌಲ್ಯಗಳು ಶಿಥಿಲವಾದವು. ಅವುಗಳ ತಳಹದಿಯ ಮೇಲೆ ಹೊಸ ವ್ಯವಸ್ಥೆಯನ್ನು ರಚಿಸುವ ಪ್ರಯತ್ನಗಳಾಗುತ್ತಿವೆ. ಹಳೆಯದು ಉಳಿಯಲಿಲ್ಲ. ಹೊಸದೇನೂ ದಕ್ಕಲಿಲ್ಲ ಎಂಬ ಸಂದೇಹ ಈಗ ಪ್ರಧಾನವಾಗಿ ಎದ್ದು ನಿಂತು ನಮ್ಮನ್ನು ನಿಟ್ಟಿಸುತ್ತಿದೆ.

1947ರಲ್ಲಿ ಸ್ವತಂತ್ರ ಭಾರತ ದೇಶ ತನ್ನ ಭವಿತವ್ಯದೊಂದಿಗೆ ಅಭಿಸಾರದಲ್ಲಿ ತೊಡಗಿತು. ದೇಶವನ್ನು ಈ ನಿಟ್ಟಿನಲ್ಲಿ ತೊಡಗಿಸಿದ ನಮ್ಮ ನೇತಾರರು ಭವ್ಯವಾದ ಕನಸುಗಳನ್ನೇ ಕಂಡರು. ಸಮಾಜದ ಪಂಚ ಮಹಾಶತ್ರುಗಳಾದ ಬಡತನ, ನಿರುದ್ಯೋಗ, ವ್ಯಾಧಿ, ಅಜ್ಞಾನ, ಕ್ಲೈಬ್ಯಗಳನ್ನು ಹೊಡೆದೋಡಿಸುವ ಸಂಕಲ್ಪ ಮಾಡಿದರು. ಆರ್ಥಿಕವಾಗಿ ಎಲ್ಲರನ್ನೂ ಮೇಲೆತ್ತುವುದು ಮೊದಲ ಕರ್ತವ್ಯ ಎಂದುಕೊಂಡರು. ದೊಡ್ಡ ದೊಡ್ಡ ಅಣೆಕಟ್ಟುಗಳು, ಮಹಾ ವಿದ್ಯುತ್ ಜಾಲಗಳು, ಬೃಹತ್ ಉತ್ಪಾದನ ಕೇಂದ್ರಗಳು ಮುಂತಾದವುಗಳ ನಿರ್ಮಾಣವಾದುವು. ಇವೇ ರಾಷ್ಟ್ರದ ಮಹಾ ದೇಗುಲಗಳು ಎಂದು ಬಣ್ಣಿಸಿದರು.

ಖಾಸಗಿ ಯತ್ನಶೀಲತೆಯೂ ಬಂಡವಾಳವೂ ಅಷ್ಟಾಗಿ ಮುಂದೆ ಬಾರದ್ದರಿಂದ, ಸರ್ಕಾರವೇ ಪ್ರಧಾನವಾಗಿ ಆರ್ಥಿಕ ಕ್ಷೇತ್ರದಲ್ಲಿ ಮುನ್ನುಗ್ಗಬೇಕೆಂಬುದು ಅಂದಿನ ದರ್ಶನವಾಗಿತ್ತು. ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಅಧೋರಚನೆಯ ನಿರ್ಮಾಣ ಅತ್ಯಂತ ಜರೂರಿನದಾಗಿತ್ತು. ಅಂತೆಯೇ ಸರ್ಕಾರದ ಒಡೆತನದಲ್ಲಿ ಪ್ರಮುಖೋದ್ಯಮಗಳು ಮೇಲೆದ್ದುವು. ಲಾಭಕ್ಕಿಂತ ಹೆಚ್ಚಾಗಿ ಆವಶ್ಯಕವಾದ ಮೂಲಭೂತ ಸೌಲಭ್ಯಗಳ ಹಾಗೂ ಸಾಮಗ್ರಿಗಳ ನಿರ್ಮಾಣವೇ ಇವುಗಳ ಗುರಿಯಾಯಿತು. ಯಾವ ಕ್ಷೇತ್ರಗಳು ಸರ್ಕಾರಕ್ಕೆ ಮೀಸಲು, ಯಾವವುಗಳಲ್ಲಿ ಸರ್ಕಾರ ಹಾಗೂ ಖಾಸಗಿ ಎರಡೂ ಉದ್ಯಮಶೀಲತೆಗಳಿಗೆ ಅವಕಾಶ, ಖಾಸಗಿಗೇ ಬಿಟ್ಟುಕೊಡಬಹುದಾದ, ಆದರೂ ಸರ್ಕಾರ ತನ್ನ ಪ್ರವೇಶಾವಕಾಶ ಹೊಂದಿರುವ ಕ್ಷೇತ್ರಗಳು ಯಾವುವು – ಎಂಬುದೆಲ್ಲ ನಿಷ್ಕರ್ಷೆಯಾಯಿತು. ಕಳೆದ

ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ನಡೆದುಬಂದ ಹಾದಿ ಇದು. ಇದು ಯೋಜನೆಗಳ ಉಚ್ಛ್ರಾಯದ ಯುಗ.

ದುರ್ಬಲ ವರ್ಗಗಳ ಹಾಗೂ ವಲಯಗಳ ಮುಂಬರವಿಗಾಗಿಯೂ ಸರ್ಕಾರ ವಿಶೇಷ ಯತ್ನ ನಡೆಸಿತು. ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ವಿಸ್ತರಣ ಯೋಜನೆ ಮುಂತಾದವುಗಳ ಉದ್ದೇಶ ಇದೇ. ಇಂಥವಕ್ಕೆಲ್ಲ ಸರ್ಕಾರ ಅಗಾಧ ಹಣ ವೆಚ್ಚ ಮಾಡಬೇಕಾಗಿತ್ತು.

ಹಳ್ಳಿಗಳಲ್ಲಿ ಕೃಷಿ ಮತ್ತು ಇತರ ಕಸಬುಗಳಲ್ಲಿ ನಿರತರಾದ ಮಂದಿ ನಮ್ಮ ದೇಶದ ಜನಸಂಖ್ಯೆಯಲ್ಲಿ ಸುಮಾರು ಐದನೆಯ ನಾಲ್ಕರಷ್ಟು ಜನಸಂಖ್ಯೆಯ ಈ ಆಗಾಧ ಭಾಗ ಬಹುತೇಕ ಚೈತನ್ಯರಹಿತ. ಈ ಜಡಭರಿತ ಜನಸಮುದಾಯಕ್ಕೆ ಚೈತನ್ಯ ತುಂಬುವುದಾದರೆ, ಇದು ಎಚ್ಚತ್ತು ಕಾರ್ಯನಿರತವಾಗುವಂತೆ ಮಾಡುವುದಾದರೆ ಅದಕ್ಕಿಂತ ದೊಡ್ಡ ಸಾಧನೆಯುಂಟೆ? ಈ ಜನಕ್ಕೆ ಬೇಕಾದುದೇನು? ತಲೆಯಲ್ಲೊಂದು ಕನಸು, ಕೈಗೆ ಹಚ್ಚಿದ ಕೆಲಸ, ಕೆಲಸಕ್ಕಿಷ್ಟು ಪ್ರತಿಫಲ; ಅಧುನಾತನ ಕಾರ್ಯ ವಿಧಾನ. ಆದರೆ ಇದಕ್ಕೆಲ್ಲ ಮೂಲವೆಂದರೆ ಹಣ, ಬಂಡವಾಳ. ಜನಸಾಮಾನ್ಯರ ಉಳಿತಾಯದ ಹಣ ಇದಕ್ಕಾಗಿ ಒದಗಿಬರುವುದಾದರೆ ಹೇಗಿದ್ದೀತು? ಈ ಕೆಲಸ ಮಾಡಬಲ್ಲ ಬ್ಯಾಂಕುಗಳು ಈ ನಿಟ್ಟಿನಲ್ಲಿ ಕಾರ್ಯನಿರತವಾಗುವುದಾದರೆ ಅದಕ್ಕಿಂತ ಇನ್ನೇನು ಬೇಕು?
ಆದರೆ ಬ್ಯಾಂಕುಗಳೆಲ್ಲ ಪಟ್ಟಣಮೂಲ; ಪಟ್ಟಭದ್ರರ ಕೈಯಲ್ಲಿ; ಪಟ್ಟಣಗಳಿಗೆ ಸೀಮಿತ. ವರ್ಗ ವಿಶಿಷ್ಟವಾದ ಈ ಬ್ಯಾಂಕುಗಳಿಗೆ ತಂತಮ್ಮ ನೇತಾರರ ಬೃಹತ್ ಉದ್ಯಮಗಳಿಗೆ ಬಂಡವಾಳ ಪೋಷಣೆ ಮಾಡುವುದೇ ಪ್ರಮುಖೋದ್ದೇಶ. ಒಬ್ಬೊಬ್ಬ ಉದ್ಯಮಪತಿಯ ಮನೆತನಕ್ಕೆ ಒಂದೊಂದು ಬ್ಯಾಂಕು. ಆದು ಆ ಮನೆತನದ ಊಳಿಗದಾಳು. ಅದರ ವಿವಿಧ ಉದ್ಯಮಗಳ ನಿರ್ದೇಶಕ ಪ್ರಭೃತಿಗಳೇ ಆ ಬ್ಯಾಂಕನ್ನು ನಿರ್ವಹಿಸುವವರು. ಲಾಭವೇ ಪ್ರಧಾನವಾದ ಈ ಬ್ಯಾಂಕುಗಳು ದಿಳ್ಳಿಯಿಂದ ಹಳ್ಳಿಗಳಿಗೆ ಇಳಿದುಬರುವುವೆಂದು ಆಶಿಸುವುದರಿಂದ ಏನು ಪ್ರಯೋಜನ?

ವಸಿಷ್ಠರ ಕಾಮಧೇನುವಿಗೆ ವಿಶ್ವಾಮಿತ್ರ ಆಸೆಪಟ್ಟಂತೆ ಸರ್ಕಾರ ತನ್ನ ಕ್ಷಾತ್ರಶಕ್ತಿಯನ್ನು ಪ್ರಯೋಗಿಸಿತು. ಪ್ರಮುಖ ಬ್ಯಾಂಕುಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಸುಗ್ರೀವಾಜ್ಞೆಯೆಂಬ ಬ್ರಹ್ಮಾಸ್ತ್ರ ಪ್ರಯೋಗಿಸಿತು. ಇನ್ನು ಮುಂದೆ ಈ ಬ್ಯಾಂಕುಗಳು ಹಳ್ಳಿಗಳತ್ತ ಅಭಿಗಮಿಸಬೇಕು. ತಮ್ಮ ಅಗಾಧ ಸಂಪನ್ಮೂಲಗಳಲ್ಲಿ ತಕ್ಕಷ್ಟು ಭಾಗವನ್ನು ಈ ಜಡವಲಯದಲ್ಲಿ ಚೈತನ್ಯ ತುಂಬಲು ಎರೆಯಬೇಕು ಎಂದು ತಾಕೀತು ಮಾಡಿತು. ಹಳೆಯ ಇಂಪೀರಿಯಲ್ ಬ್ಯಾಂಕು ಇದಕ್ಕೂ ಹಿಂದೆಯೇ

ಭಾರತೀಯ ಸ್ಟೇಟ್ ಬ್ಯಾಂಕ್ ಆಗಿ ಪರಿವರ್ತನೆ ಹೊಂದಿದ್ದು, ಹಿಂದಿನ ಸಂಸ್ಥಾನಗಳ ವರಿಷ್ಠ ಬ್ಯಾಂಕುಗಳನ್ನೆಲ್ಲ ಅಧೀನ ಸಂಸ್ಥೆಗಳಾಗಿ ಮಾಡಿಕೊಂಡು ಗ್ರಾಮಯಾತ್ರೆಯಲ್ಲಿ ನಿರತವಾಗಿತ್ತು. ಸ್ಟೇಟ್ ಬ್ಯಾಂಕ್ ಗುಂಪಿನ ಜೊತೆಗೆ ಹೊಸದಾಗಿ ಮತಪರಿವರ್ತನೆಗೊಂಡ ಈ ರಾಷ್ಟ್ರೀಕೃತ ಬ್ಯಾಂಕುಗಳೂ ಸೇರಿದುವು. ಇವುಗಳದೊಂದು ದೊಡ್ಡ ದಂಡು. ಶತ್ರುವಿನ ಧ್ವಂಸಕಾರ್ಯಕ್ಕಾಗಿ ಎಲ್ಲವೂ ಸಜ್ಜು.

ಜೊತೆಗೆ ಗ್ರಾಮಗಳಿಗೇ ಮೀಸಲಾದ ಬ್ಯಾಂಕುಗಳೂ ಬಂದುವು: ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು. ಇವುಗಳದೇ ಒಂದು ವ್ಯವಸ್ಥೆ. ಸ್ವತಂತ್ರವೆಂದರೆ ಸ್ವತಂತ್ರವಲ್ಲ. ಜನ್ಮದಾತ ಎನಿಸಿದ, ಪಟ್ಟಣ ಮೂಲದ ವಾಣಿಜ್ಯ ಬ್ಯಾಂಕುಗಳಿಗೆ ಆಧೀನವೆಂದರೆ ಅಧೀನವೂ ಅಲ್ಲ. ಸಹಕಾರಿ ಬ್ಯಾಂಕುಗಳಂತೆ ಪೂರ್ಣ ಗ್ರಾಮ್ಯವಲ್ಲ, ಅಲ್ಲದೆಯೂ ಇಲ್ಲ. ಒಂದು ಬಗೆಯ ತ್ರಿಶಂಕು ಸ್ಥಾನ. ಆದರೆ ನಿಶ್ಚಿತ ಗುರಿಗೆ ಅಸ್ತ್ರಪ್ರಯೋಗ ಮಾಡುವ ಹೊಣೆಯುಳ್ಳದ್ದು. ಇದೊಂದು ವಿಚಿತ್ರ ಅಡ್ಡ ತಳಿ; ಅಥವಾ, ಬಾವಲಿಯನ್ನಬಹುದೇನೋ!

ಒಟ್ಟಿನಲ್ಲಿ ಸುಮಾರು ಎರಡೂಕಾಲು ದಶಕದಲ್ಲಿ ಆದದ್ದೇನು? ಬ್ಯಾಂಕಿಂಗ್ ಚಾಲ ಬೃಹತ್ತಾಗಿ ಬೆಳೆದಿದೆ. ಬ್ಯಾಂಕ್ ಶಾಖೆಗಳ ಸಂಖ್ಯೆ ಸುಮಾರು ಎಂಟು ಸಾವಿರದಿಂದ ಅರವತ್ತು ಸಾವಿರಕ್ಕೆ ಏರಿದೆ. ಆಗ ಪ್ರತಿ ಅರವತ್ತೈದು ಸಾವಿರ ಮಂದಿಗೆ ಒಂದು ಬ್ಯಾಂಕ್ ಶಾಖೆ ಇತ್ತು, ಈಗ ತಲಾ ಹನ್ನೊಂದು ಸಾವಿರ ಮಂದಿಗೆ ಒಂದು ಶಾಖೆ. ಅಂದು ಗ್ರಾಮಪ್ರದೇಶದಲ್ಲಿದ್ದ ಬ್ಯಾಂಕ್ ಶಾಖೆಗಳು ಒಟ್ಟು ಶಾಖೆಗಳ ಸಂಖ್ಯೆಯಲ್ಲಿ ಕಾಲುಭಾಗಕ್ಕೂ ಕಡಿಮೆ. ಇಂದು ಇದು ಸುಮಾರು ಮೂರನೆಯ ಎರಡರಷ್ಟು.

ಬ್ಯಾಂಕುಗಳ ಈ ವಿಶ್ವರೂಪದ ದರ್ಶನದಿಂದ ಎಂಥವರ ಕಣ್ಣೂ ಕೋರೈಸದಿರದು. ಆದರೆ ಈ ಉಬ್ಬಿನೊಳಗಿನ ಗಟ್ಟಿ ಮಾಂಸವೆಷ್ಟು, ಟೊಳ್ಳು ಎಷ್ಟು? ದೇಹ ಉಬ್ಬಿದಷ್ಟೂ ಹೆಚ್ಚು ಹೆಚ್ಚು ರೋಗಗಳಿಗೆ ಅವಕಾಶವಾಗುವ ಅಪಾಯ. ಇದು ಬ್ಯಾಂಕಿಂಗ್ ವಲಯಕ್ಕೆ ಮಾತ್ರ ಸೀಮಿತವಾದ್ದಲ್ಲ. ಸರ್ಕಾರ ನೆಟ್ಟು ಬೆಳಸಿದ ಎಲ್ಲದರಲ್ಲೂ ಇದೇ ಲಕ್ಷಣ.

ಸಾಮಾಜಿಕ ಆರ್ಥಿಕ ವಿಕಾಸಕ್ಕಾಗಿ ಸರ್ಕಾರ ಆರಂಭಿಸಿ, ನಿರ್ವಹಣೆಯ ಜವಾಬ್ದಾರಿಯನ್ನು ಬ್ಯಾಂಕುಗಳಿಗೆ ವಹಿಸಿಕೊಟ್ಟ ಹಲವಾರು ಯೋಜನೆಗಳ ಗತಿ, ಗುರಿ ಏನಾಗಿವೆಯೆಂಬುದನ್ನು ನಿರ್ಲಿಪ್ತತೆಯಿಂದ ವಿವೇಚಿಸುವ ಹಲವು ಲೇಖನಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿವೆ. ಸಮಗ್ರಗ್ರಾಮೀಣ ಅಭಿವೃದ್ಧಿ ಯೋಜನೆ, ಸೀಯು ಯೋಜನೆ, ಆದ್ಯತಾ ವಲಯಕ್ಕೆ ಸಾಲದ ಯೋಜನೆ – ಇವು ಕೆಲವು. ತುಂಬ ಯಶಸ್ವಿಯಾಗಿ, ಇಂದ್ರನ ಐರಾವತವನ್ನೇ

ಗ್ರಾಮೀಣ ಲೋಕಕ್ಕೆ ಕರೆತರುವುವೆಂದು ಭಾವಿಸಲಾಗಿದ್ದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಇದುವರೆಗಿನ ಸಾಧನೆ, ವೈಫಲ್ಯಗಳನ್ನು ಕುರಿತ ಲೇಖನಗಳಿವೆ. ಆ ಕ್ಷೇತ್ರಗಳಲ್ಲೇ ಕೆಲಸ ಮಾಡುತ್ತಿರುವವರು ಬರೆದ ಈ ಅನುಭವಪೂರ್ಣ ಲೇಖನಗಳು ಈ ಬಗ್ಗೆ ಮರುಚಿಂತನೆಗೆ ಸಾಕಷ್ಟು ಸಾಮಗ್ರಿ ಒದಗಿಸುತ್ತವೆ. ಉಷಾರಾಣಿ, ಇಂದಿರಾ ಸರಾಫ್, ಡಾ. ಚಾಂದಕವಟೆ, ಶ್ರೀಪೂರ್ಣಬೋಧ – ಇವರ ಲೇಖನಗಳು ಬೋಧಪ್ರದವಾಗಿವೆ. ಡಾ. ಚಾಂದಕವಟೆ ಅವರ ಲೇಖನ ಸಂಶೋಧನಾಧಾರಿತವಾದದ್ದು.
ಮೂಲತಃ ಈ ಯೋಜನೆಗಳ ಪರಿಕಲ್ಪನೆಗಳಲ್ಲೇನೂ ದೋಷವಿಲ್ಲ. ಇವುಗಳ ಅನುಷ್ಠಾನದಲ್ಲೇ ಎಲ್ಲ ಪ್ರಮಾದ. Between the idea and the reality, between the motion and the act, falls the shadow ಎನ್ನುತ್ತಾನೆ ಕವಿ ಟಿ. ಎಸ್. ಎಲಿಯಟ್. ಈ ಮಾತು ಈ ಯೋಜನೆಗಳ ವಿಚಾರಕ್ಕೂ ಬಹಳ ನಿಜ.

ಬದಲಾದ ಪರಿಸ್ಥಿತಿಯಲ್ಲಿ ಬ್ಯಾಂಕುಗಳು ನಡೆಸುತ್ತಿರುವ ಹೆಣಗಾಟಗಳನ್ನು ಕುರಿತ ಲೇಖನಗಳೂ ಇಲ್ಲಿವೆ. ಧನಂಜಯ ಭಂಡಿಯವರ 'ಬ್ಯಾಂಕಿಂಗ್ ಕ್ಷೇತ್ರದ ಈಚಿನ ವಿದ್ಯಮಾನಗಳು', ಹೇಮಚಂದ್ರರ 'ಉಳಿತಾಯ ಖಾತೆಗಳ ಹೆಚ್ಚಳದ ಸಮಸ್ಯೆ' – ಇವು ಈ ಬಗೆಯವು. ಬ್ಯಾಂಕುಗಳು ಇಷ್ಟೆಲ್ಲ ಗೊಂದಲದ ನಡುವೆಯೂ ಹೊಸಹೊಸ ಹುಲ್ಲುಗಾವಲುಗಳತ್ತ ಕಣ್ಣು ಹಾಯಿಸುತ್ತಿವೆ. 'ಪ್ರತಿಭೂತೀಕರಣ' ಎಂಬ ಲೇಖನ ಇಂಥ ಒಂದು ಹುಡುಕು ನೋಟದ ಪರಿಚಯ. ಯಾವಾಗಲೂ ಹೊಸಹೊಸದನ್ನೇ ಅರಸಿ ವಿಚಾರಮಾಡುವ, ಅಪರಿಚಿತದ ಪಂಥಾಹ್ವಾನವನ್ನು ಸದಾ ಸ್ವೀಕರಿಸುವ ಮಹಾಬಲ ಅವರ ಲೇಖನ ವಿಚಾರಯೋಗ್ಯವಾದ್ದು. ಯಾವುದೇ ಸಂಸ್ಥೆಯಲ್ಲಿ ಶಿಸ್ತು, ಅತ್ಯಾವಶ್ಯಕ. ಬ್ಯಾಂಕುಗಳಲ್ಲಿ ಶಿಸ್ತು ಮತ್ತು ನಿಯಮಪಾಲನಾ ವ್ಯವಸ್ಥೆ ಕುರಿತ ಲೇಖನ ಬರೆದಿರುವ ವೆಂಕಟರಾಮ್ ಅವರು ಆ ಕ್ಷೇತ್ರದಲ್ಲಿ ತುಂಬ ನಿಷ್ಣಾತರು. ಅವರ ಲೇಖನ ಎಲ್ಲ ಶಿಸ್ತುಗೇಡಿಗಳನ್ನೂ ಎಚ್ಚರಿಸುವಂತಿದೆ. ಸರ್ಕಾರ ಈಚಿನ ದಿನಗಳಲ್ಲಿ ವಿನಿಮಯ ದರದ ನಿರ್ವಹಣೆಯಲ್ಲಿ ಹೊಸಹೊಸ ಪ್ರಯೋಗಮಾಡುತ್ತಿದೆ. ಆರ್ಥಿಕ ವಲಯದಲ್ಲಿ ಲಗಾಮು ಸಡಿಲಗೊಳಿಸಿರುವ ಸರ್ಕಾರ ನಮ್ಮ ರೂಪಾಯಿ ನಾಣ್ಯದ ಕೊರಳಿಗೆ ಕಟ್ಟಿದ ಸರಪಳಿಯನ್ನೂ ಅರ್ಧಂಬರ್ಧ ಕಳಚಿಬಿಟ್ಟಿದೆ. ಕಾಂತಿಲಕ್ಷ್ಮಿ ಅವರು ತಮ್ಮ ಲೇಖನದಲ್ಲಿ ವಿದೇಶಿ ವಿನಿಮಯದ ಚಾಂಚಲ್ಯವನ್ನು ಕುರಿತ ವಿವೇಚನೆ ನಡೆಸಿದ್ದಾರೆ. ಇವೆಲ್ಲ ವಾಚನಯೋಗ್ಯ ಲೇಖನಗಳು; ಚಿಂತನ ಮಂಥನಕ್ಕೆ ಸಾಕಷ್ಟು ಆಹಾರ ಒದಗಿಸುವಂಥವು. ಹೊಸ ವಿಚಾರಗಳನ್ನು ಅಭಿವ್ಯಕ್ತಿಸುವಲ್ಲಿ ಈ ಲೇಖನಗಳು ಈ ಸಂಬಂಧವಾಗಿ ಅಗತ್ಯವಾದ ಪರಿಭಾಷೆಯನ್ನು ಸೃಷ್ಟಿಸಿವೆ.

ಭಾರತೀಯ ಬ್ಯಾಂಕಿಂಗ್ ಇಂದು ಕವಲು ದಾರಿಯಲ್ಲಿದೆ. ಭವಿತವ್ಯದೊಂದಿಗೆ ಅಭಿಸಾರದಲ್ಲಿ ತೊಡಗಿದ ಸರ್ಕಾರದ ಪರಮ ಪ್ರಯತ್ನವಾಗಿ ಕೈಗೊಂಡ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣದ ಕ್ರಮ ಎಷ್ಟರಮಟ್ಟಿಗೆ ಫಲ ನೀಡಿದೆ ಎಂಬುದನ್ನು ವಿವೇಚಿಸುವುದರ ಜೊತೆಗೆ, ಬ್ಯಾಂಕಿಂಗ್ ವ್ಯವಸ್ಥೆಗೆ ಏನಾಗಿದೆ ಎಂಬುದನ್ನೂ ತೀವ್ರವಾಗಿ ಪರಿಶೀಲಿಸಬೇಕಾಗಿದೆ. ಇತರರ ಕಾಯಿಲೆಗಳನ್ನು ವಾಸಿಮಾಡಬೇಕಾದ ವೈದ್ಯನೇ ವ್ಯಾಧಿಗ್ರಸ್ತನಾದರೆ ಗತಿಯೇನು? 'ಧನ್ವಂತರಿಗೇ ಏನಾಗಿದೆ?' ಎಂದು ಕೇಳುವಂತಾಗಿದೆ. ಆರ್ಥಿಕ ಜಡತ್ವವನ್ನು ತೊಡಗಿಸಬೇಕಾದ ಬ್ಯಾಂಕುಗಳೇ ಜಡ್ಡಾಗಿವೆ. ಅವುಗಳ ಆಸ್ತಿಹೊಣೆ ಪಟ್ಟಿಗಳು ಇದನ್ನು ತೋರಿಸುತ್ತವೆ. ಇದನ್ನು ವ್ಯಕ್ತಪಡಿಸಬಾರದೆಂದು ಎಷ್ಟೆಷ್ಟೇ ಮುಚ್ಚಿಟ್ಟರೂ ಇದು ಎದ್ದು ಕಾಣುತ್ತಿದೆ. ದೇಶದ ನೂರಕ್ಕೆ ತೊಂಬತ್ತೈದು ಪಾಲು ಬ್ಯಾಂಕಿಂಗ್ ಇಂದು ಸರ್ಕಾರದ ಒಡೆತನದಲ್ಲಿದೆ. ಸರ್ಕಾರಿ ಬ್ಯಾಂಕು ಸರ್ವಂಸಹೆಯಂತೆ; ಎಲ್ಲವನ್ನೂ ಸಹಿಸಿಕೊಳ್ಳಬಲ್ಲದು – ಎಂಬ ನಂಬಿಕೆಗೆ ಪೆಟ್ಟು ಬಿದ್ದಿದೆ. ಈ ಬ್ಯಾಂಕುಗಳ ಸಾಮಾಜಿಕ ಗುರಿಗಳ ನಿರ್ವಹಣೆಯ ಪ್ರಾಮಾಣಿಕತೆಯ ವಿಚಾರದಲ್ಲಿ ಯಾರೂ ಬೆರಳು ಮಡಿಸುವಂತಿಲ್ಲ. ಆದರೆ ನಾನಾ ಬಗೆಯ ಮಧ್ಯಪ್ರವೇಶದಿಂದ ಹಾಗೂ ವ್ಯಾವಹಾರಿಕವಲ್ಲದ ನಿರ್ಧಾರಗಳಿಂದಾಗಿ, ತಮ್ಮದಲ್ಲದ ತಪ್ಪಿಗಾಗಿ ಅವು ಇಂದು ಈ ಸ್ಥಿತಿ ತಲುಪಿವೆ. ಅವುಗಳ ಜೀವಂತಿಕೆಗೆ ಊನ ಉಂಟಾಗಿದೆ. ಅನಾವಶ್ಯಕವಾದ ಹಣ ಸೃಷ್ಟಿಯ ತಡೆಗಾಗಿ ಮತ್ತು ಸರ್ಕಾರಿ ಯೋಜನೆಗಳ ಹಾಗೂ ಖರ್ಚುಗಳ ಪೂರೈಕೆಗಾಗಿ ಬ್ಯಾಂಕುಗಳ ಮೇಲೆ ವಿಧಿಸಿದ ನಗದು ಮೀಸಲು ಮತ್ತು ಪರಿನಿಯತ ದ್ರವತ್ವ ಅನುಪಾತ ನಿರ್ಬಂಧಗಳು ಅವುಗಳ ಲಾಭಪ್ರದ ವ್ಯವಹಾರದ ಬಹ್ವಂಶವನ್ನು ಕೊಚ್ಚಿಹಾಕಿವೆ. ಉದರಿ ಪಡಿತರ, ಆದ್ಯತಾ ವಲಯಕ್ಕೆ ರಿಯಾಯಿತಿ ಬಡ್ಡಿ ದರ ಮುಂತಾದವು ಬ್ಯಾಂಕುಗಳ ಲಾಭದಾಯಕತೆಯನ್ನು ಕಡಿಮೆ ಮಾಡಿವೆ; ಬ್ಯಾಂಕುಗಳ ಕ್ರಿಯಾಶೂನ್ಯ (ನಾನ್ ಪರ್‌ಫಾರ್ಮಿಂಗ್) ಆಸ್ತಿಗಳನ್ನು ಹೆಚ್ಚಿಸಿವೆ. ಬ್ಯಾಂಕುಗಳ ವಹಿವಾಟುಗಳಿಗೆ ಹಾಗೂ ಹೊಣೆಗಳಿಗೆ ಅನುಗುಣವಾಗಿ ಅವುಗಳ ಬಂಡವಾಳ ಅಧಿಕವಾಗಿಲ್ಲ. ಅನ್ಯರ ಹಣದಲ್ಲಿ ವಹಿವಾಟು ನಡೆಸುವ ಧುರೀಣ ಸಂಸ್ಥೆಗಳೆಂದರೆ ಬ್ಯಾಂಕುಗಳು. ಆದರೂ ಸ್ವಂತದ್ದೆಂದು ಸಾಕಷ್ಟು ಹಣವಿಲ್ಲದಿದ್ದರೆ ಅಪಾಯ ಕಾಯ್ದಿಟ್ಟಂತೆ! ಅವು ಸರ್ಕಾರಿ ಸಂಸ್ಥೆಗಳು ಎಂದು ಹೇಳಿದ ಮಾತ್ರಕ್ಕೆ ಯಮಧರ್ಮರಾಯ ಬರಿಗೈಯಲ್ಲಿ ತೆರಳಲಾರ, ಅಂತಕನ ದೂತರಿಗೆ ಕಿಂಚಿತ್ತು ದಯೆಯಿಲ್ಲ!

ಇಡೀ ಅರ್ಥವ್ಯವಸ್ಥೆಯನ್ನೇ ಆಮೂಲಾಗ್ರವಾಗಿ ಸುಸ್ಥಿತಗೊಳಿಸಲು ಹೊರಟಿರುವ ಸರ್ಕಾರ ಬ್ಯಾಂಕಿಂಗ್ ಭವನದ ದುರಸ್ತಿಗೂ ಕೈಹಾಕದಿಲ್ಲ.

ನರಸಿಂಹಂ ಸಮಿತಿಯ ವರದಿ ಈ ನಿಟ್ಟಿನಲ್ಲಿ ಏನೇನಾಗಬೇಕೆಂದು ಹೇಳಿದೆ. (ಈ ಬಗ್ಗೆ ಲೇಖನಗಳು ಬ್ಯಾಂಕಿಂಗ್ ಪ್ರಪಂಚದಲ್ಲಿ ಪ್ರಕಟವಾಗಿವೆ.) ಜರೂರಾಗಿ ಆಗಬೇಕಾದ್ದೆಂದರೆ, ಬ್ಯಾಂಕುಗಳು ಸಾಕಷ್ಟು ಬಂಡವಾಳ ಹೊಂದುವುದು, ಕ್ರಿಯಾಶೂನ್ಯ ಆಸ್ತಿಗಳನ್ನು ತೊಡೆದುಹಾಕಿ ಬಚ್ಚಬರಿ ಕಪ್ಪು ಹಲಗೆಯ ಮೇಲೆ ಮತ್ತೆ ಹೊಸದಾಗಿ ಬರೆಯತೊಡಗುವುದು, ಬ್ಯಾಂಕಿಂಗ್ ವ್ಯವಸ್ಥೆಯನ್ನು ನೇರ್ಪುಗೊಳಿಸುವುದು, ಬರೀ ಗುರಿ ಆಧಾರಿತ ಕಾರ್ಯಕ್ರಮಗಳನ್ನು ಪುನರ್ವಿಮರ್ಶಿಸಿ ಗುಣಕ್ಕೆ ಹಾಗೂ ನಿಜವಾದ ಪರಿಮಾಣಕ್ಕೆ ಗಮನ ಹರಿಸುವುದು, ಬ್ಯಾಂಕುಗಳ ಮೇಲೆ ವಿಧಿಸಿರುವ ನಗದು ಮೀಸಲು ಮತ್ತು ಪರಿನಿಯತ ದ್ರವತ್ವ ಅನುಪಾತಗಳ ಹೊರೆಯನ್ನು ಹಗುರಗೊಳಿಸುವುದು, ಇತ್ಯಾದಿ. ಇವುಗಳಲ್ಲಿ ಒಂದೊಂದೂ ವಾದಗ್ರಸ್ತ ವಿಚಾರವೇ. ಯಾವುದನ್ನೇ ಕೆದಕಿದರೂ ಅದರಿಂದ ಉದ್ಭವಿಸುವ ಸಮಸ್ಯೆಗಳು ಹಲವಾರು. ಯಾವ ಹಿತಕ್ಕೂ ಧಕ್ಕೆ ಬಾರದಂತೆ ಏನು ಮಾಡಬೇಕೆಂಬುದನ್ನು ತೀರ್ಮಾನಿಸುವುದು ಸುಲಭವಲ್ಲ.

ನಗದು ಮೀಸಲು ಅನುಪಾತವನ್ನೂ ಪರಿನಿಯತ ದ್ರವತ್ವ ಅನುಪಾತವನ್ನೂ ಇಳಿಸುವ ಮೊದಲ ಹೆಜ್ಜೆಯನ್ನು ಈಗಾಗಲೇ ಇಟ್ಟದ್ದಾಗಿದೆ. ವಿದೇಶಿ ಶಾಖೆಗಳುಳ್ಳ ಭಾರತೀಯ ಬ್ಯಾಂಕುಗಳು ಆದಷ್ಟುಬೇಗ, ಅಂತೂ 1994ರ ಮಾರ್ಚ್ 31ರೊಳಗಾಗಿ, ತಮ್ಮ ನಷ್ಟಭಾರ ಆಸ್ತಿಗಳ ಶೇ.8ರಷ್ಟು ಸ್ವಂತ ಬಂಡವಾಳ ಹೊಂದಿರಬೇಕೆಂದೂ, ಇತರ ಬ್ಯಾಂಕುಗಳು 1993ರ ಮಾರ್ಚ್ 31ರೊಳಗೆ ಶೇ 4ರಷ್ಟು ಮತ್ತು 1996ರ ಮಾರ್ಚ್ 31ರೊಳಗೆ ಶೇ.8ರಷ್ಟು ಬಂಡವಾಳ ಹೊಂದಿರಬೇಕೆಂದೂ ವಿಧಿಸಲಾಗಿದೆ. ಸರ್ಕಾರಿ ಬ್ಯಾಂಕುಗಳಿಗೆ ಅಗತ್ಯವಾದ ಬಂಡವಾಳವನ್ನು ಸರ್ಕಾರವೇ ಒದಗಿಸಲಾರದು. ತನ್ನ ಮೈಭಾರವನ್ನೇ ಇಳಿಸಿಕೊಳ್ಳಲು ಹೊರಟಿರುವ ಸರ್ಕಾರ ಇದಕ್ಕೆ ಹೇಗೆ ಹಣ ಒದಗಿಸಿತು? ಬ್ಯಾಂಕುಗಳು ಖಾಸಗಿಯವರಿಗೆ ಷೇರುಮಾರಾಟ ಮಾಡುವುದೇ, ಅವರಿಂದ ಸಾಲ ಎತ್ತುವುದೇ – ಎಂಬುದೂ ಒಂದು ಪ್ರಶ್ನೆ. ಸರ್ಕಾರಿ ಬ್ಯಾಂಕುಗಳ ಖಾಸಗೀಕರಣದ ಮೊದಲ ಹೆಜ್ಜೆ ಇಡುವುದೇ ಎಂಬುದನ್ನು ಈಗಲೇ ಹೇಳುವಂತಿಲ್ಲ.

ನಗದು ಮೀಸಲು ಮತ್ತು ಪರಿನಿಯತ ದ್ರವತ್ವ ಅನುಪಾತಗಳನ್ನು ಇಳಿಸುವುದರಿಂದ ಮತ್ತು ಈಗಾಗಲೇ ಇವುಗಳ ಅಡಿಯಲ್ಲಿ ಹಿಡಿದಿಟ್ಟ ನಗದನ್ನು ಬಿಡುಗಡೆ ಮಾಡುವುದರಿಂದ ಕೂಡ ಸಮಸ್ಯೆಗಳು ಉದ್ಭವಿಸುತ್ತವೆ. ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳಿಂದ ಈ ವರ್ಷ ಒಟ್ಟು ರೂ 3,000 ಕೋಟಿ ಬಿಡುಗಡೆಯಾಗುತ್ತದೆ. ಇದರಲ್ಲಿ ಶೇ. 40ರಷ್ಟು ಆದ್ಯತಾವಲಯಕ್ಕೆ ಹೋಗಬೇಕಾಗುತ್ತದೆ. ಎಂದರೆ ಅಷ್ಟರಮಟ್ಟಿಗೆ ಬ್ಯಾಂಕುಗಳ ಲಾಭದಲ್ಲಿ

ಕಡಿತಬೀಳುತ್ತದೆ. ಆದ್ಯತಾವಲಯಕ್ಕೆ ನೀಡುವ ಸಾಲದ ಪ್ರಮಾಣವನ್ನೇ ಕ್ರಮೇಣ ತಗ್ಗಿಸಬೇಕೆಂದೂ ನರಸಿಂಹಂ ಸಮಿತಿ ತಿಳಿಸುತ್ತದೆ. ಹೀಗಾದರೆ ಬ್ಯಾಂಕುಗಳ ಸಾಮಾಜಿಕ ಉದ್ದೇಶಕ್ಕೆ ಪೆಟ್ಟು ಬೀಳುತ್ತದೆ. ಹೀಗಾಗಿ, ಇತ್ತ ದರಿ ಅತ್ತ ಪುಲಿ ಎಂಬ ಸನ್ನಿವೇಶ ಸೃಷ್ಟಿಯಾಗಿದೆ. ಬ್ಯಾಂಕುಗಳ ಬಡ್ಡಿ ದರಗಳನ್ನು ಪುನರ್ವಿವೇಚಿಸುವ ಹಾಗೂ ಇದರಲ್ಲಿ ನಮ್ಯತೆಯನ್ನು ಸಾಧಿಸುವ ಪ್ರಶ್ನೆಯೂ ಪ್ರಧಾನವಾಗಿದೆ. ಆದರೆ ಇದಕ್ಕೆ ಕೈ ಹಾಕಿದರೆ ಹಣದುಬ್ಬರದ ಗುಮ್ಮ ಎದುರಾಗುತ್ತದೆ. ಒಟ್ಟಿನಲ್ಲಿ ಈಗ ಬ್ಯಾಂಕುಗಳೂ ಸರ್ಕಾರಗಳೂ ಹುಲಿಯ ಬೆನ್ನೇರಿ ನಡೆದಿವೆ. ಅದರ ಮೇಲೆ ಕುಳಿತಿದ್ದರೂ ಪ್ರಮಾದ, ಇಳಿದರೂ ಅಪಾಯ.

ಈ ನಡುವೆ ಸರ್ಕಾರ ಖಾಸಗಿ ಬ್ಯಾಂಕುಗಳ ಸ್ಥಾಪನೆಗೆ ಅವಕಾಶ ನೀಡುವ ಯೋಚನೆ ಮಾಡುತ್ತಿದೆ. ಹಿಂದೆ ಆದಂತೆ ಖಾಸಗಿ ಬ್ಯಾಂಕುಗಳು ಕೆಲವು ಉದ್ಯಮಪತಿಗಳ ಕೈಗೊಂಬೆಗಳಾಗದಂತೆ ಎಚ್ಚರಿಕೆ ವಹಿಸುವುದಾಗಿ ಸರ್ಕಾರ ಹೇಳಿದೆ. ಅವುಗಳನ್ನು ಆರಂಭಿಸಲು ಸೂತ್ರಗಳನ್ನು ರೂಪಿಸಲಾಗಿದೆ. ಸರ್ಕಾರಿ ಬ್ಯಾಂಕುಗಳಂತೆ ಖಾಸಗಿ ಬ್ಯಾಂಕುಗಳನ್ನು ನಾನಾ ಸಾಮಾಜಿಕ ಹೊಣೆಗಳಿಗೆ ಗುರಿ ಮಾಡುವಂತಿಲ್ಲ. ಖಾಸಗಿ ಬ್ಯಾಂಕುಗಳಿಗೂ ಸರ್ಕಾರಿ ಬ್ಯಾಂಕುಗಳಿಗೂ ನಡುವೆ ಆರೋಗ್ಯಕರ ಸ್ಪರ್ಧೆಯಿದ್ದರೆ ಚೆನ್ನ ಎಂದು ಸರ್ಕಾರದ ಭಾವನೆ. ಆದರೆ ಒಂದು ವಲಯಕ್ಕೆ ಭಾರ ಹೇರಿ, ಇನ್ನೊಂದಕ್ಕೆ ಹೇರದಿದ್ದರೆ ಅವುಗಳ ನಡುವಣ ಸ್ಪರ್ಧೆ ಅಸಮರ್ಪಕವೆನಿಸುತ್ತದೆ, ಅರ್ಥಹೀನವೆನಿಸುತ್ತದೆ. ಕ್ರಮೇಣ ಸರ್ಕಾರಿ ಬ್ಯಾಂಕುಗಳು ಅಸ್ತಂಗತವಾಗುವಂತೆ, ಇಲ್ಲವೇ ಅವು ಖಾಸಗೀಕರಣಗೊಳ್ಳುವಂತೆ ಮಾಡುವುದೇ ಸರ್ಕಾರದ ಉದ್ದೇಶವೇ? ಜೊತೆಗೆ ವಿದೇಶಿ ಬ್ಯಾಂಕುಗಳಿಗೂ ಭಾರತ ಒಂದು ಆಡುಂಬೊಲವಾಗುತ್ತಿದೆ. ಹೀಗಾಗಿ, ಭಾರತೀಯ ಬ್ಯಾಂಕಿಂಗಿನ – ಅದರಲ್ಲೂ ಸರ್ಕಾರಿ ಬ್ಯಾಂಕಿಂಗಿನ – ಭವಿಷ್ಯ ಹೇಗಿರುವುದೆಂಬುದು ಸಾವಿರ ಡಾಲರಿನ ಪ್ರಶ್ನೆಯಾಗಿದೆ.

31.

ಮಾರ್ಚ್ 1994
ನಮ್ಮ ನಿಮ್ಮ ನಡುವೆ

ಈ ಸಂಚಿಕೆಯೊಂದಿಗೆ 'ಬ್ಯಾಂಕಿಂಗ್ ಪ್ರಪಂಚ'ದ ಹದಿನೈದನೆಯ ಸಂಪುಟ ಆರಂಭವಾಗುತ್ತಿದೆ. ಹದಿನಾಲ್ಕು ವರ್ಷಗಳು ಮುಗಿಯುತ್ತಿವೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡದ ಸೊಲ್ಲು ಕೇಳಿಸುವಂತೆ ಮಾಡಬೇಕೆಂಬ ಗೀಳು ಹತ್ತಿಸಿಕೊಂಡ ಕೆಲವು ಬಿಸಿರಕ್ತದ ಗೆಳೆಯರು ಇಂಥ ಒಂದು ಪತ್ರಿಕೆ ಆರಂಭಿಸಬೇಕೆಂದು ಯೋಚಿಸಿದಾಗ ಇದೊಂದು ಅವ್ಯಾವಹಾರಿಕವಾದ ಹುಚ್ಚು ಎಂದು ನಕ್ಕವರು ಹಲವರು. 'ಆರಂಭಿಸಿ; ಆದರೆ ಬರೀ ಬ್ಯಾಂಕಿಂಗ್ ಕ್ಷೇತ್ರಕ್ಕೆ ಇದನ್ನು ಸೀಮಿತಗೊಳಿಸಿಕೊಳ್ಳಬೇಡಿ' ಎಂದು ಹೇಳಿದವರು ಕೆಲವರು. ಪ್ರತಿಸಾರಿಯೂ ಒಂದು ಸಂಚಿಕೆ ತುಂಬುವಷ್ಟು ಲೇಖನಗಳನ್ನು ಬರೆಯಲು ವಿಷಯಗಳಾದರೂ ಎಲ್ಲಿವೆ? ಎಂಬುದು ಅವರ ಪ್ರಶ್ನೆ. ಅರ್ಥಶಾಸ್ತ್ರದ ಎಲ್ಲ ವಿಷಯಗಳನ್ನೂ ಇದು ಒಳಗೊಳ್ಳಲಿ, ಎಂದರು ಅವರು. ಆಗ ಪುಟಗಳೂ ತುಂಬುತ್ತವೆ, ಲೇಖಕರು ಸಿಗುತ್ತಾರೆ, ಎಂಬುದು ಅವರು ನೀಡಿದ ಕಾರಣ. ಬ್ಯಾಂಕಿಂಗಿಗೆ ಬಂಜೆತನವಿಲ್ಲ. ವಿಪುಲ ಸಾಮಗ್ರಿ ಒದಗಿಸುವ ಸಾಮರ್ಥ್ಯ ಉಂಟು ಅದಕ್ಕೆ. ಅದು ನಿಂತನೀರಲ್ಲ, ಒಣಗಿದ ಮರವಲ್ಲ. ಅದರದು ನಿರಂತರ ಚಿಲುಮೆ. ವೃಕ್ಷದ ಕೊಂಬೆರೆಂಬೆ ಬೇರು ಬಿಳಲುಗಳು ಅಪಾರ. ಇಂದು ಬ್ಯಾಂಕಿಂಗಿಗೆ ಸಂಬಂಧಪಡದ ಚಟುವಟಿಕೆ ಯಾವುದುಂಟು? ಅದರೊಂದಿಗೆ ಸಂಪರ್ಕ ಇಟ್ಟುಕೊಳ್ಳದ ಯಾವ ಉದ್ಯಮವುಂಟು? ವ್ಯವಹಾರವುಂಟು? ಕುಬೇರನಿಂದ ಕಡ ಪಡೆದ ತಿರುಪತಿಯ ದೇವರ ಹಾಗೆ ಸರ್ಕಾರಗಳೇ ಬ್ಯಾಂಕುಗಳನ್ನಾಶ್ರಯಿಸುತ್ತಿವೆ. ಚಿನ್ನದ ಕೆಚ್ಚಲಿನ ಈ ಕಾಮಧೇನುಗಳನ್ನು ವಿಶ್ವಾಮಿತ್ರನಂತೆ ತಮ್ಮವನ್ನಾಗಿ ಮಾಡಿಕೊಳ್ಳಲು ಶಾಸನ ಮಾಡುತ್ತಿವೆ. ಕೆಚ್ಚಲಿಗೂ ಚೂರಿ ಹಾಕುತ್ತಿವೆ. ಅಲ್ಲದೆ ಬ್ಯಾಂಕಿಂಗಿನ ಸ್ವರೂಪವೇ ಇಂದು ಬದಲಾಗುತ್ತಿದೆ. ವೈವಿಧ್ಯಮಯವೂ ಸಂಕೀರ್ಣವೂ ಆಗುತ್ತಿದೆ. ಬ್ಯಾಂಕಿಂಗಿನ ಬತ್ತಳಿಕೆಗೆ ಅನೇಕ ಹೊಸ ಹೊಸ ಸಮ್ಮೋಹನಾಸ್ತ್ರಗಳು ಸೇರಿ ಕೊಳ್ಳುತ್ತಿವೆ. ಸದಾ ವಿಕಸನಶೀಲವಾದ, ಜೀವಚೈತನ್ಯಪೂರ್ಣವಾದ ಬ್ಯಾಂಕಿಂಗ್ ಕುರಿತ ವಿಚಾರಗಳಿಗೆ ಕೊನೆಯೆಲ್ಲಿ? ಸಾಹಿತ್ಯಕ್ಕೆ ನಿಲುಗಡೆಯಲ್ಲಿ? ಬ್ಯಾಂಕಿಂಗಿನ ವಿವಿಧ ಮುಖಗಳನ್ನೂ ವ್ಯಾಪಾರಗಳನ್ನೂ ಅರಿತು ಒಕ್ಕಣಿಸಬಲ್ಲವರ ತಂಡ ನಮಗೆ ಬೇಕಷ್ಟೆ. ಈ ಕೆಲಸ ಮಾಡಬಲ್ಲವರು ಬ್ಯಾಂಕಿಂಗಿನಲ್ಲಿ ನಿರತರಾದವರಲ್ಲದೆ ಬೇರೆ ಯಾರು ತಾನೇ ಆಗಬಲ್ಲರು? ಈ ಸಂಪನ್ಮೂಲವನ್ನು ಬ್ಯಾಂಕುಗಳೊಳಗಿಂದಲೇ ನಾವು ಸಂಪಾದಿಸಿಕೊಳ್ಳಬೇಕು ಎಂಬುದು ಅಂದಿನ ಚಿಂತನೆಯಾಗಿತ್ತು,

ಆದರೂ ಇದು ಆರಂಭಶೌರ್ಯ ಆಗಬಾರದೆಂಬ ಎಚ್ಚರಿಕೆಯೂ ಇಲ್ಲದಿರಲಿಲ್ಲ. ಬ್ಯಾಂಕಿಂಗಿನಲ್ಲಿ ಬರೆಯುವುದಕ್ಕೇನಿದೆ ಎಂದು ಮೂಗೆಳೆಯುವವರ ಮುಂದೆ ನಗೆಪಾಟಲಾಗಬಾರದಲ್ಲ! ದೇವತೆಗಳು ಕಾಲಿಡಲು ಅಂಜುವ ಎಡೆಗೆ ಮೂರ್ಖರು ಮುನ್ನುಗ್ಗುತ್ತಾರೆ ಎಂಬ ಮಾತು ನಿಜ ಎನ್ನಲು ಅವರು ನಮ್ಮೆಡೆಗೆ ಬೆಟ್ಟು ಮಾಡುವಂತಿರಬಾರದು. ಆದ್ದರಿಂದ ಆರಂಭದಲ್ಲಿ ಅರ್ಧವಾರ್ಷಿಕವಾಗಿ ಇದನ್ನಾರಂಭಿಸೋಣ ಎಂಬುದು ಈ ಗೆಳೆಯರ ತೀರ್ಮಾನವಾಗಿತ್ತು. ಹಾಗೆಯೇ ಮೊದಲಿಟ್ಟ 'ಬ್ಯಾಂಕಿಂಗ್ ಪ್ರಪಂಚ' ಕೆಲವೇ ವರ್ಷಗಳಲ್ಲಿ ತ್ರೈಮಾಸಿಕವಾಯಿತು. ಈ ಹದಿನಾಲ್ಕು ವರ್ಷ ಒಂದು ಸಂಚಿಕೆಯೂ ತಪ್ಪದೆ ಇದು ಪ್ರಕಟವಾಗುತ್ತ ಬರುತ್ತಿದೆ. ಕನ್ನಡದ ಸಂದರ್ಭದಲ್ಲಿ ಇದು ಒಂದು ಹೆಮ್ಮೆಯ ಮಾತೇ ಎನ್ನಬೇಕು.

ಆದರೆ ಈ ಹದಿನಾಲ್ಕು ವರ್ಷಗಳಲ್ಲಿ ನಾವು ಸಾಧಿಸಿದ್ದಾದರೂ ಏನು? ಇದೊಂದು ಸವಾಲು ಎಂಬ ರೀತಿ ಈ ಪ್ರಶ್ನೆ ಹಾಕುವುದಾದರೆ ಇದಕ್ಕೆ ನಮ್ಮಲ್ಲಿ ಉತ್ತರ ಸಿದ್ಧವಾಗುಂಟು. ಈ ಹದಿನಾಲ್ಕು ಸಂಪುಟಗಳ ಪುಟಗಳನ್ನು ತಿರುವಿ ಹಾಕುವವರಿಗೆ ನಾವು ಏನು ಸಾಧಿಸಿದ್ದೇವೆ ಎಂಬುದು ಗೊತ್ತಾದೀತು. ಮೊತ್ತಮೊದಲಿಗೆ ಬ್ಯಾಂಕಿಂಗ್ ಮತ್ತು ಹಣ ಕುರಿತಂತೆ ಇಷ್ಟೊಂದು ವಿಷಯಗಳಿವೆಯೆ ಎಂದು ಅಚ್ಚರಿಯಾಗದಿರದು. ಇದರ ಕಲಾಪಗಳು ಎಷ್ಟೊಂದು ವೈವಿಧ್ಯಮಯ ಎನಿಸದಿರದು. ಬರೆದಷ್ಟೂ ಹೊಸಹೊಸ ವಿಷಯಗಳು ದೊರಕುತ್ತಲೇ ಇವೆ. ಅಂತರರಾಷ್ಟ್ರೀಯವಾಗಿ ಬ್ಯಾಂಕಿಂಗು ಅನೇಕ ಸವಾಲುಗಳನ್ನೆದುರಿಸುತ್ತಿದೆ. ಭಾರತದಲ್ಲೂ ರಾಷ್ಟ್ರೀಕರಣದ ಅನಂತರ ಬ್ಯಾಂಕಿಂಗ್ ಕ್ಷೇತ್ರ ಎಷ್ಟರಮಟ್ಟಿಗೆ ವಿಸ್ತರಿಸಿದೆಯೆಂಬುದನ್ನೂ ಬೇರೆ ಯಾವ ದೇಶದಲ್ಲೂ ನಡೆಯದ ಎಷ್ಟೊಂದು ಪ್ರಯೋಗಗಳು ಇಲ್ಲಿ ಅಗಿವೆ – ಎಂಬುದನ್ನೂ ಕಣ್ಣಾರೆಕಂಡು, ಈ ಬೆಳವಣಿಗೆಯನ್ನೆಲ್ಲ ಅಂದಂದೇ ವ್ಯಾಖ್ಯಾನಿಸುವ, ಪರಿಚಯಿಸುವ, ಕನ್ನಡದಲ್ಲಿ ಇದನ್ನೆಲ್ಲ ಹೇಳುವುದು ಸಾಧ್ಯವಾಗುವಂತೆ ಭಾಷೆಗೆ ಹೊಸ ಹೊಸ ತೊಡವುಗಳನ್ನಿಡುವ ಕೆಲಸವನ್ನು ಬ್ಯಾಂಕಿಂಗ್ ಪ್ರಪಂಚ' ಮಾಡಿದೆ. ಪ್ರಪಂಚದ ಯಾವ ಮೂಲೆಯಲ್ಲಾಗಲಿ, ಬ್ಯಾಂಕಿಂಗ್ ವಲಯದಲ್ಲಿ ಏನು ಬೆಳವಣಿಗೆಯಾದರೂ, ಪ್ರಯೋಗವಾದರೂ ಅದನ್ನು ಆ ಕೂಡಲೇ ಕನ್ನಡದಲ್ಲಿ ಬ್ಯಾಂಕಿಂಗ್ ಪ್ರಪಂಚ'ದ ಮೂಲಕ ಪರಿಚಯಿಸಿಕೊಡಲಾಗುತ್ತಿದೆ. ಭಾರತದ ಬೇರೆ ಯಾವ ಭಾಷೆಯಲ್ಲೂ, ಹಿಂದಿಯಲ್ಲಿ ಕೂಡ, ಇಂಥ ಕೆಲಸ ನಡೆದಿಲ್ಲ. ಇಂಥ ಪತ್ರಿಕೆ ಬಂದಿಲ್ಲ ಎಂಬುದಾಗಿ ನಮ್ಮ ಬೆನ್ನನ್ನೇ ಚಪ್ಪರಿಸಿಕೊಂಡರೆ ಅದು ಅಕ್ಷಮ್ಯವಾದ ಅಹಂಕಾರವಾಗುತ್ತದೆಂದು ಯಾರೂ ತಿಳಿಯುವುದಿಲ್ಲವೆಂದು ನಾವು ಭಾವಿಸಿದ್ದೇವೆ.

ಆದರೆ ನಮ್ಮನ್ನೇ ನಾವು ವಿಮರ್ಶೆ ಮಾಡಿಕೊಂಡಾಗ ನಮ್ಮಲ್ಲಿ ವಿಷಾದಯೋಗವೇ ಉಂಟಾಗುತ್ತದೆ. ಅರ್ಜುನನ ವಿಷಾದಯೋಗದಿಂದ ಭಗವದ್ಗೀತೆಯೇ ಹುಟ್ಟಿಕೊಂಡಿತು. ಆದರೆ ನಮ್ಮ ವಿಷಾದಯೋಗ ನಮಗೆ ನಿರಾಶೆಯನ್ನೇ ಹೆಚ್ಚಿಸುತ್ತದೆ. ಕೆಲವರ ಟೀಕೆಯನ್ನು ನೆನಸಿಕೊಂಡಾಗ ಮನಸ್ಸು ಆಳಕುತ್ತದೆ. ಬ್ಯಾಂಕಿಂಗ್ ಪ್ರಪಂಚ'ಕ್ಕಾಗಿ ದುಡಿಯುತ್ತಿದ್ದವರೆಲ್ಲ ಇಂದು ಚದರಿಹೋಗಿದ್ದಾರೆ. ಸೇವಾವೃತ್ತಿ ಅವಲಂಬಿಸಿದವರಿಗೆ ಇದು ಅನಿವಾರ್ಯ. ಆದರೆ ಹೊಸಬರು ಈ ಕೆಲಸಕ್ಕೆ ಮುಂದಾಗಿ ಬರುತ್ತಿಲ್ಲ. ಅಂದು ಕಪ್ಪು ಕುರುಳಿನ ಕನಸುಗಣ್ಣಿನ ತರುಣರಾಗಿದ್ದ ಕೆಲಸಗಾರರು ಇಂದು ನರೆ ಬೆರೆತ, ಸುಕ್ಕುಗೆನ್ನೆಯ ವಿಷಾದಯೋಗಿಗಳಾಗಿದ್ದಾರೆ. ಅವರ ಉತ್ಸಾಹವೇನೂ ಕುಂದಿಲ್ಲ. ಆದರೆ ಅನೇಕ ಭೌತಿಕ ಅಡಚಣೆಗಳು ಸುತ್ತಿಕೊಂಡಿವೆ. ಮತ್ತೆ ಅವರೆಲ್ಲರನ್ನೂ ತಬ್ಬಿ ಹಿಡಿದು, ತೋಳತೆಕ್ಕೆಗೆ ಹೊಸಬರನ್ನು ಸೇರಿಸಿಕೊಳ್ಳುವ ಕೆಲಸ ಸುಲಭವಲ್ಲ. ಅಸಾಧ್ಯವೇಯೋ ಏನೋ !

'ಬ್ಯಾಂಕಿಂಗ್ ಪ್ರಪಂಚ' ಜನಪ್ರಿಯ ಏಕಾಗಿಲ್ಲ? ಇದರ ಲೇಖನಗಳನ್ನು ಓದಬಲ್ಲವರು ಎಷ್ಟು ಜನ? ಸಾಮಾನ್ಯ ಜನರಿಗೆ ಬ್ಯಾಂಕಿಂಗ್ ವಿಷಯ ತಿಳಿಯಹೇಳುವ ಲೇಖನಗಳು ಏಕೆ ಹೆಚ್ಚಾಗಿ ಇಲ್ಲ? ಎಂಬ ಪ್ರಶ್ನೆಗಳೂ ಇವೆ. ಇವಕ್ಕೆ ಒಂದೇ ಉತ್ತರವೆಂದರೆ, 'ಬ್ಯಾಂಕಿಂಗ್ ಪ್ರಪಂಚ'ವನ್ನು ಒಂದು ಜನಪ್ರಿಯಪತ್ರಿಕೆಯಾಗಿ ಮಾಡಬೇಕೆಂಬುದು ಎಂದೂ ಉದ್ದೇಶವಾಗಿರಲಿಲ್ಲ. ಹೀಗೆಂದರೆ ಅನೇಕರು ಹುಬ್ಬೇರಿಸಿಯಾರು. ಕನ್ನಡದಲ್ಲಿ ಇದುವರೆಗೂ ಅಭಿವ್ಯಕ್ತವಾಗದ ವಿಚಾರಗಳಿಗೆ ಮೂರ್ತರೂಪ ಕೊಡಲು ಹೊರಟ ಪತ್ರಿಕೆ ಇದು. ಜನಪ್ರಿಯಲೇಖನಗಳನ್ನು ಬರೆಯಲು ಒದಗಿಬರುವ ಸಾಮಗ್ರಿ ಇಲ್ಲಿ ಧಾರಾಳವಾಗಿ ಉಂಟು. ಅದಕ್ಕೆ ಹಿಂದಿನ ಮೆಟ್ಟಿಲು ಇದು. ಇದು ಸಿದ್ಧವಾಗದೆ ಮುಂದಿನದು ಆಗದು. ಯಾವುದೇ ಶಾಸ್ತ್ರದ ವಿಚಾರದಲ್ಲೂ ಈ ಮಾತು ನಿಜ. ಒಂದು ಪತ್ರಿಕೆಯ ಪ್ರಸಾರಸಂಖ್ಯೆಯಿಂದ ಅದರ ಪ್ರಭಾವವನ್ನಳೆಯುವ ಯತ್ನ ಸಲ್ಲದು. ಹೆಚ್ಚು ಪ್ರಸಾರವಿಲ್ಲದ ಪತ್ರಿಕೆಗಳೇ ಜನಾಭಿಪ್ರಾಯವನ್ನು ರೂಪಿಸುತ್ತ ಬಂದಿರುವುದು ಇತಿಹಾಸದ ಸಂಗತಿ. ನಿದರ್ಶನಗಳನ್ನು ಕೊಡಲು ಇಲ್ಲಿ ಯತ್ನಿಸುವುದಿಲ್ಲ. ಬ್ಯಾಂಕಿಂಗ್ ಪ್ರಪಂಚ' ಅಂಥ ಕೆಲಸ ಮಾಡಿರುವುದಾಗಿ ಹೇಳಿಕೊಳ್ಳುವುದಿಲ್ಲ. ಏಕೆಂದರೆ ಇದರ ವಿಸ್ತಾರವೇ ಕಿರಿದು. ಆದರೆ ಹಣ ಬ್ಯಾಂಕಿಂಗ್ ಕುರಿತ ವಿಪುಲ ಸಾಹಿತ್ಯ ಸೃಷ್ಟಿ ಮಾಡಿ, ಅಷ್ಟರಮಟ್ಟಿಗೆ ಕನ್ನಡಕ್ಕೆ ಒಂದು ಆಯಾಮ ನೀಡುವ ಕೆಲಸವನ್ನಂತೂ ಈ ಪತ್ರಿಕೆ ಮಾಡಿದೆಯೆಂದು ವಿನಯದಿಂದ ಹೇಳಿಕೊಳ್ಳಬಹುದು.

ಆದರೆ ಈಗೀಗ ದಾರಿ ನಡೆದ ಶ್ರಮದ

ಅನುಭವವಾಗುತ್ತಿದೆ. ಹೆಚ್ಚು ಜನ ಕೂಡಿಕೊಳ್ಳದಿರುವುದು ಒಂದು ಕಾರಣ. ಹೆಚ್ಚು ಮಂದಿ ಇದರಲ್ಲಿ ಆಸಕ್ತಿ ತಳೆದಾಗ, ಇದರೊಂದಿಗೆ ಸಂವಾದದಲ್ಲಿ ನಿರತರಾದಾಗ, ರಚನಾತ್ಮಕ ವಿಮರ್ಶೆ ಮಾಡಿದಾಗ, ಪತ್ರಿಕೆಯ ಉಸಿರಾಟ ಚುರುಕಾಗುತ್ತದೆ. ಹದಿನೈದನೆಯ ವರ್ಷದಲ್ಲಿ ಇದಕ್ಕಾಗಿ ಕಾಯುತ್ತಿದ್ದೇವೆ.

32.

ಸೆಪ್ಟೆಂಬರ್ 1994
ಕಮ್ಮಟ : ಕಾಲು ಶತಕ

ಇದೇ ಅಕ್ಟೋಬರ್ 23ರಿಂದ 28ರ ವರೆಗೆ ಆರು ದಿನಗಳ ಕಾಲ ಮೈಸೂರಿನಲ್ಲಿ ಸಮನ್ವಯ ಸಮಿತಿಯ ಆಶ್ರಯದಲ್ಲಿ ಬ್ಯಾಂಕಿಂಗ್ ಕಮ್ಮಟ ನಡೆಯುತ್ತಿದೆ. ಇದು ಇಪ್ಪತ್ತೈದನೆಯ ಕಮ್ಮಟ.

ಕಮ್ಮಟ ಎಂದರೆ ಕುಲುಮೆ, ಟಂಕಸಾಲೆ. ಲೋಹವನ್ನು ಕಾಯಿಸಿ, ಕರಗಿಸಿ, ಅದರ ಕಶ್ಮಲ ಹೋಗಿಸಿ, ಅದನ್ನು ಕುಟ್ಟಿ, ತಟ್ಟಿ, ಅದಕ್ಕೆ ಬೇಕಾದ ರೂಪು ಆಕಾರ ನೀಡುವ, ಅದನ್ನು ಎರಕಹೊಯ್ಯುವ, ಟಂಕಿಸುವ ಕಾರ್ಯಕ್ಕೆ ಸಂಬಂಧಿಸಿದ್ದು. ಬ್ಯಾಂಕಿಂಗ್ ವಿಚಾರ ಕುರಿತಂತೆ ಸಾಹಿತ್ಯ ರಚನೆ, ಲೇಖನಮಂಡನೆ, ಚರ್ಚೆ, ಭಾಷೆಯ ಮತ್ತು ಪದಗಳ ಉಚಿತ ಪ್ರಯೋಗದ ಬಗ್ಗೆ ಸಮಾಲೋಚನೆ – ಇಂಥ ಕೆಲಸವೇ ಬ್ಯಾಂಕಿಂಗ್ ಕಮ್ಮಟದ – ಉದ್ದೇಶ. ಇದನ್ನೆಲ್ಲ ನಾವು ನಮ್ಮ ಭಾಷೆಯಾದ ಕನ್ನಡದಲ್ಲಲ್ಲದೆ ಬೇರೆ ಯಾವ ಭಾಷೆಯಲ್ಲಿ ಮಾಡಿದರೆ ಸಾರ್ಥಕವಾದೀತು? ಬ್ಯಾಂಕಿಂಗ್ ಕಮ್ಮಟ ಎಂದರೆ ಅದು ಕನ್ನಡದ ಕಮ್ಮಟ ಎಂಬುದು ಸ್ವಯಂವೇದ್ಯ.

ಭಾಷೆ ಒಂದು ಮಾಧ್ಯಮವಷ್ಟೆ. ಅದೊಂದು ಸಂವಹನಸಾಧನ. ವಿದ್ಯುತ್ತನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಸಾಧನವಾದ ತಂತಿಯಂತೆ, ವಿದ್ಯುದ್ವಾಹಕದಂತೆ ಅದು ವಿಚಾರ ವಾಹಕ. ವಾಹಕವೇ ನಿರೋಧವನ್ನೊಡ್ಡಿದರೆ ಅದರಿಂದ ವೃಥಾ ಘರ್ಷಣೆ, ಸಂವಹನಕ್ಕೆ ತಡೆ, ಶಕ್ತಿಯ ಸೋರಿಕೆ. ಅದರಿಂದ ಅಪಾಯ ಕೂಡ. ವಿಚಾರದ ಸಂವಹನದಲ್ಲಿ ಹೀಗಾದರೆ ಅದು ವಿಕೃತಗೊಳ್ಳಬಹುದು. ಸಂದೇಶವೇ ತಪ್ಪಾಗಬಹುದು. ಅದರಿಂದ ವ್ಯವಹಾರದಲ್ಲಿ ಅಪಾರವಾದ ಕಷ್ಟ ನಷ್ಟ, ಭಾಷೆ ಸುವಾಹಕವಾದಾಗ ಎಲ್ಲವೂ ನೇರ್ಪು. ಯಾರು ವ್ಯವಹಾರ ಮಾಡುತ್ತಾರೋ ಅವರ ಭಾಷೆಯೇ ಅವರ ಮಟ್ಟಿಗೆ ಸುವಾಹಕ, ಅನ್ಯಭಾಷೆ ದುರ್ವಾಹಕ, ಅದನ್ನಿಟ್ಟುಕೊಂಡು ಏನು ಮಾಡಬೇಕು ?

ಜನರ ಭಾಷೆಯಲ್ಲಿ ಬ್ಯಾಂಕಿಂಗ್ ವಿಚಾರ ಕುರಿತ ಚಿಂತನ ಅಭಿವ್ಯಕ್ತಿಗಳನ್ನು ಸಮರ್ಥವಾದ ರೀತಿಯಲ್ಲಿ ಸಾಧಿಸುವ ಉದ್ದೇಶದಿಂದ ಭಾರತೀಯ ಸ್ಟೇಟ್ ಬ್ಯಾಂಕಿನ ಕನ್ನಡ ಸಂಘಗಳ ಸಮನ್ವಯ ಸಮಿತಿ ಈಗ್ಗೆ ಸುಮಾರು ಹದಿನೈದು ವರ್ಷಗಳ ಹಿಂದೆ 'ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಯನ್ನು ಆರಂಭಮಾಡಿತು. ಇದು ಭಾರತೀಯ ಸ್ಟೇಟ್ ಬ್ಯಾಂಕಿನ ಮುಖಪತ್ರವೇನೂ ಅಲ್ಲ, ಅದರ ಗೃಹ ಪತ್ರಿಕೆಯೂ ಅಲ್ಲ, ಆ ಬ್ಯಾಂಕಿನ ಕನ್ನಡ ಸಂಘಗಳ ಸಮನ್ವಯ ಸಮಿತಿಯ ವಾರ್ತಾಪತ್ರವಲ್ಲ. ಹಣ ಮತ್ತು ಬ್ಯಾಂಕಿಂಗ್ ವಿಚಾರಗಳನ್ನು ಕುರಿತ – ಈ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ

ಉಪಯುಕ್ತವಾಗುವ ಸಾಹಿತ್ಯಸೃಷ್ಟಿ ಮತ್ತು ಪ್ರಸಾರವೂ, ಈ ವಿಚಾರಗಳಲ್ಲಿ ಅತ್ಯಂತ ಈಚಿನದೆನ್ನಬಹುದಾದಂಥ ಎಲ್ಲ ಬೆಳವಣಿಗೆಗಳ ವಿವೇಚನೆಯೂ ಇದರ ಉದ್ದೇಶ. ಬ್ಯಾಂಕಿಂಗ್ ಉದ್ಯೋಗಿಗಳ ತಿಳಿವಿನ ಮಟ್ಟವನ್ನು ಹೆಚ್ಚಿಸುವ, ಬ್ಯಾಂಕಿಂಗ್ ಸೇವೆಯನ್ನು ಹೆಚ್ಚು ದಕ್ಷವಾದ್ದನ್ನಾಗಿ ಮಾಡುವ ಪ್ರಯತ್ನವಿದು. ಎಲ್ಲವನ್ನೂ ಇಲ್ಲಿಯ ಭಾಷೆಯಾದ ಕನ್ನಡದ ಮೂಲಕ ಮಾಡುವುದರಿಂದ ಸಂವಹನ ನೇರ, ಸುಲಭ. ಸಂಕೀರ್ಣವಾದ ಭಾವನೆಗಳನ್ನು ಕನ್ನಡದಲ್ಲಿ ಅಭಿವ್ಯಕ್ತಿಸುವುದು ಸಾಧ್ಯವಾಗುವಂತೆ ಅದಕ್ಕೆ ತಕ್ಕ ಪರಿಭಾಷೆಯ ಸೃಷ್ಟಿ ಮತ್ತು ಅದರ ಪ್ರಚಾರಕ್ಕಾಗಿಯೂ 'ಬ್ಯಾಂಕಿಂಗ್ ಪ್ರಪಂಚ' ಶ್ರಮಿಸುತ್ತಿದೆ.

ಆದರೆ ಇಂಥ ಪತ್ರಿಕೆಯೊಂದನ್ನು ನಡೆಸುವುದು ಸುಲಭದ ಕೆಲಸವಲ್ಲ. ಆರ್ಥಿಕ ಸಮಸ್ಯೆಯ ಜೊತೆಗೆ ಲೇಖನಗಳನ್ನು ಸಂಪಾದಿಸುವ ಸಮಸ್ಯೆ. ಈ ಕ್ಷೇತ್ರದಲ್ಲೇ ಕಾರ್ಯನಿರತರಾದ ಹಾಗೂ ಈ ವಿಚಾರದಲ್ಲಿ ಆಸಕ್ತಿ ಹೊಂದಿರುವ ಲೇಖಕರ ಮತ್ತು ವಾಚಕರ ಪ್ರೋತ್ಸಾಹ ಹಾಗೂ ಸಕ್ರಿಯವಾದ ನೆರವು ಇಲ್ಲದಿದ್ದರೆ ಇದು ನಡೆಯುವುದು ಕಷ್ಟ. ಹಣ ಮತ್ತು ಬ್ಯಾಂಕಿಂಗ್ ವಿಚಾರಗಳನ್ನು ಕುರಿತು ಲೇಖನಗಳನ್ನು ಬರೆಯಬಲ್ಲವರ ತಂಡವೊಂದನ್ನು ರಚಿಸುವುದು ಅಗತ್ಯವೆನಿಸಿತು. ಜೊತೆಗೆ ಇದಕ್ಕೆ ಸಂಬಂಧಿಸಿದ ಪರಿಭಾಷೆಯ ಸೃಷ್ಟಿಗೂ ಯತ್ನ ನಡೆಸಬೇಕಾಗಿತ್ತು. ಈ ಎರಡೂ ಉದ್ದೇಶಗಳನ್ನು ಪೂರೈಸುವ ಸಲುವಾಗಿ ಹನ್ನೆರಡು ವರ್ಷಗಳ ಹಿಂದೆ ಬ್ಯಾಂಕಿಂಗ್ ಕಮ್ಮಟದ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಇಂಥ ಪ್ರಯೋಗವೊಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಡೆದಿತ್ತು. ಕನ್ನಡ ಮಾಧ್ಯಮ ತರಗತಿಗಳ ಉತ್ಸಾಹ ಇದ್ದ ಕಾಲ ಅದು. ಕನ್ನಡ ಮಾಧ್ಯಮದಲ್ಲಿ ಪದವಿ ತರಗತಿಗಳಿಗೆ ಬೋಧನೆ ಮಾಡುವ ಬಗ್ಗೆ ಕಾಲೇಜುಗಳ ಅಧ್ಯಾಪಕರಿಗೆ ತರಬೇತಿ ನೀಡುವ ಉದ್ದೇಶದಿಂದ ವಿಶ್ವವಿದ್ಯಾನಿಲಯ ಅನುದಾನ ಅಯೋಗದ ನೆರವಿನಿಂದ ಕಾರ್ಯಶಿಬಿರವನ್ನು ಏರ್ಪಡಿಸಲಾಗುತ್ತಿತ್ತು. ಅದರಲ್ಲಿ ಭಾಗವಹಿಸುತ್ತಿದ್ದ ಅಧ್ಯಾಪಕರಲ್ಲಿ ಒಬ್ಬೊಬ್ಬರೂ ತಂತಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಅಲ್ಲಿ ಕನ್ನಡದಲ್ಲಿ ಬೋಧನೆ ಮಾಡಬೇಕಾಗಿತ್ತು. ಉಳಿದವರು ಆಲಿಸುವವರು. ಬೋಧನೆಯಲ್ಲಿ ಬಳಸಿದ ಭಾಷೆ, ಪಾರಿಭಾಷಿಕ ಪದಗಳು, ವಿಷಯ ಪ್ರತಿಪಾದನೆ ಮುಂತಾದ ವಿಚಾರಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಜೊತೆಗೆ ಭಾಷಾಂತರ ಕಾರ್ಯವನ್ನೂ ಕೈಗೊಳ್ಳಲಾಗುತ್ತಿತ್ತು. ನಾನಾ ವಿಷಯಗಳಿಗೆ ಸಂಬಂಧಿಸಿದಂತೆ ತಜ್ಞರಿಂದ ಅತಿಥಿ ಭಾಷಣಗಳನ್ನು ಏರ್ಪಡಿಸಲಾಗುತ್ತಿತ್ತು,

ಸಾಕಷ್ಟು ಉತ್ಸಾಹ ಹಾಗೂ ಪ್ರೋತ್ಸಾಹವಿಲ್ಲದ್ದರಿಂದ ಮೈಸೂರು ವಿಶ್ವವಿದ್ಯಾನಿಲಯದ ಆ ಪ್ರಯೋಗ ಕೆಲವು ವರ್ಷಗಳ ಅನಂತರ ನಿಂತು ಹೋಯಿತು. ಸಮನ್ವಯ ಸಮಿತಿಯ ಆಶ್ರಯದಲ್ಲಿ ಹಣ ಮತ್ತು ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಮ್ಮಟವನ್ನು ನಡೆಸಬಾರದೇಕೆಂಬ ವಿಚಾರ ಬಂದಾಗ ಅದರ ಉತ್ಸಾಹಿ ಕಾರ್ಯಕರ್ತರು ಕೂಡಲೇ ಈ ಕಾರ್ಯಕ್ಕೆ ಮುಂದೆ ಬಂದರು. ಆದರೆ ವಿಶ್ವ ವಿದ್ಯಾನಿಲಯದಂಥ ಸಂಸ್ಥೆಯೇ ಕಮ್ಮಟವನ್ನು ನಡೆಸಲಾರದೆ ನಿಲ್ಲಿಸಿರುವಾಗ ಯಾವುದೇ ನೆರವಾಗಲಿ, ಪ್ರೋತ್ಸಾಹವಾಗಲಿ ಇಲ್ಲದೆ ಸಮನ್ವಯ ಸಮಿತಿಯಂಥ ಸ್ವಯಂಪ್ರೇರಣೆಯ ಸಂಘ ಇದನ್ನು ಕೈಗೆತ್ತಿಕೊಂಡು ಯಶಸ್ವಿಯಾಗಿ ನಡೆಸಬಲ್ಲದೆ ಎಂಬ ಸಂದೇಹ ಮೂಡಿತು. ಆದರೆ ಸಮಿತಿಯ ಕಾರ್ಯಕರ್ತರಲ್ಲಿ ಉತ್ಸಾಹಕ್ಕೇನೂ ಕೊರತೆಯಿರಲಿಲ್ಲ. 1982ರ ಏಪ್ರಿಲ್ ತಿಂಗಳಲ್ಲಿ ಮೊದಲನೆಯ ಬ್ಯಾಂಕಿಂಗ್ ಕಮ್ಮಟ ಮೈಸೂರಿನಲ್ಲಿ ನಡೆಯಿತು. ಇದೇ ಮೊದಲನೆಯ ಹಾಗೂ ಕೊನೆಯ ಕಮ್ಮಟವಾದೀತೇನೋ ಎಂಬ ಶಂಕೆಯಂತೂ ಇದ್ದೇ ಇತ್ತು.

ಸ್ವಯಂಪ್ರೇರಣೆಯ ಈ ಕಮ್ಮಟ ಪಡೆದ ಯಶಸ್ಸು ತುಂಬ ಆಶ್ಚರ್ಯವನ್ನೇ ಉಂಟುಮಾಡಿತು. ಇನ್ನು ಮುಂದೆ ಪ್ರತಿ ಆರು ತಿಂಗಳುಗಳಿಗೆ ಒಂದರಂತೆ ರಾಜ್ಯದ ಬೇರೆಬೇರೆ ಜಿಲ್ಲೆಗಳಲ್ಲಿ ಬ್ಯಾಂಕಿಂಗ್ ಕಮ್ಮಟ ಏರ್ಪಡಿಸಬೇಕೆಂಬ ಹುರುಪು ಮೂಡಿತು. ಅಂದಿನಿಂದ ವರ್ಷಕ್ಕೆ ಎರಡರಂತೆ ಕಮ್ಮಟಗಳು ನಡೆಯುತ್ತ ಬಂದಿವೆ. ರಾಜ್ಯದ ಎಲ್ಲ ಜಿಲ್ಲೆಗಳನ್ನೂ ಮುಗಿಸಿ ಸೊಲ್ಲಾಪುರ ಮತ್ತು ಕಾಸರಗೋಡಿನಲ್ಲಿ ಕಮ್ಮಟಗಳು ನಡೆದಿವೆ. ಮತ್ತೆ ರಾಜ್ಯದ ಜಿಲ್ಲೆಗಳಲ್ಲಿ ಮುರಿದುವರಿದಿವೆ. ಈಗ ಮೈಸೂರಿನಲ್ಲಿ ಎರಡನೆಯ ಬಾರಿಗೆ ಇದು ನಡೆಯುತ್ತಿದೆ.

ಆರಂಭದಲ್ಲಿ ಬ್ಯಾಂಕುಗಳ ಆಡಳಿತ ವ್ಯವಸ್ಥೆಯಿಂದ ಕಮ್ಮಟಕ್ಕೆ ಅಂಥದೇನೂ ಉತ್ತೇಜನ ದೊರಕಲಿಲ್ಲ. ಕನ್ನಡವೆಂದರೇ ಆಡಳಿತ ವರ್ಗಗಳವರು ಬೆಚ್ಚಿಬೀಳುತ್ತಿದ್ದ ಕಾಲ ಅದು. ಅವರಿಂದ ಪ್ರೋತ್ಸಾಹ ದೊರಕುವುದಿರಲಿ, ಇದರಲ್ಲಿ ಭಾಗವಹಿಸುತ್ತಿದ್ದವರನ್ನು ಅವರು ಸಂಶಯದೃಷ್ಟಿಯಿಂದ ನೋಡುತ್ತಿದ್ದರು. ಇದರಲ್ಲಿ ಭಾಗವಹಿಸುವವರಿಗೆ ರಜೆ ಕೊಡಲು ಕೂಡ ಅವರಿಗೆ ಇಷ್ಟ ಇರಲಿಲ್ಲ. ಆದರೆ ಕ್ರಮೇಣ ಅವರ ಧೋರಣೆ ಬದಲಾಗಿರುವುದು ಸಂತೋಷದ ಸಂಗತಿ. ಈಗ ಭಾರತೀಯ ಸ್ಟೇಟ್ ಬ್ಯಾಂಕ್, ಮೈಸೂರು ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಇವುಗಳಿಂದ ಅಧಿಕೃತವಾಗಿ ಉದ್ಯೋಗಿಗಳು ಕಮ್ಮಟದಲ್ಲಿ ಭಾಗ ವಹಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವೂ ಆಗಾಗ ಸಹಯೋಗ ನೀಡುತ್ತಿದೆ, ಸಹಾಯವನ್ನೂ ಮಾಡುತ್ತಿದೆ. ಈ

ಬ್ಯಾಂಕುಗಳ ಉದ್ಯೋಗಿಗಳಲ್ಲದೆ ಇತರ ಕೆಲವು ಬ್ಯಾಂಕುಗಳ ಉದ್ಯೋಗಿಗಳು, ಲೇಖಕರು, ಅಧ್ಯಾಪಕರು, ನ್ಯಾಯವಾದಿಗಳು, ಹೀಗೆ ಹಲವರು ಸ್ವಇಚ್ಛೆಯಿಂದ ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಕಮ್ಮಟದಿಂದ ಕಮ್ಮಟಕ್ಕೆ ಭಾಗಿಗಳ ಸಂಖ್ಯೆ ಹೆಚ್ಚುತ್ತಿದೆ. ಕಮ್ಮಟಿಗರ ಸಂಖ್ಯೆ ಹೆಚ್ಚಿದಷ್ಟೂ ಗುಣಮಟ್ಟ ಕಡಿಮೆಯಾಗುವುದೆಂಬ ಅಂಜಿಕೆ ಇಲ್ಲದಿಲ್ಲ. ಆದರೆ ಉತ್ಸಾಹದಿಂದ ಬರುವವರನ್ನು ತಡೆಯುವುದು ಉಚಿತವಲ್ಲವನಿಸಿದೆ.

ಬ್ಯಾಂಕಿಂಗ್ ಕಮ್ಮಟ ಯಶಸ್ವಿಯಾಗಿರುವುದಕ್ಕೆ ಮುಖ್ಯ ಕಾರಣವೆಂದರೆ ಅದರ ಹೊಸತನ. ಇತರೆ ಕಮ್ಮಟಗಳಲ್ಲೂ, ತರಬೇತಿ ಕೇಂದ್ರಗಳಲ್ಲೂ ತರಬೇತಿ ನೀಡುವವರು ಮತ್ತು ತರಬೇತಿ ಪಡೆಯುವವರು ಎಂಬ ಎರಡು ವರ್ಗಗಳುಂಟು. ಅತಿಥಿ ಭಾಷಣಕಾರರೂ ಉಪನ್ಯಾಸ ಮಾಡುವವರೇ ಆಗಿರುತ್ತಾರೆ. ಈ ಕಮ್ಮಟದ ವೈಶಿಷ್ಟ್ಯವೆಂದರೆ, ಇದರಲ್ಲಿ ಭಾಗವಹಿಸುವ ಒಬ್ಬೊಬ್ಬರೂ ಬೋಧಕರೂ ಪ್ರಶಿಕ್ಷಣಾರ್ಥಿಗಳೂ ಆಗಿರುತ್ತಾರೆ. ಪ್ರತಿಯೊಬ್ಬರೂ ತಮಗೆ ಪರಿಚಿತವಾದ ಯಾವುದಾದರೊಂದು ವಿಷಯದ ಬಗ್ಗೆ ಒಂದು ಪ್ರಬಂಧವನ್ನು ಮಂಡಿಸಬೇಕು. ಆ ವಿಷಯಕ್ಕೆ ಸಂಬಂಧಿಸಿದಂತೆ ಅವರೇ ತಜ್ಞರು. ಆ ಪ್ರಬಂಧದ ವಿಷಯ, ಭಾಷೆ, ಪಾರಿಭಾಷಿಕ ಪದ, ಪ್ರತಿಪಾದನೆಯ ವಿಧಾನ, ಪರಿಣಾಮ ಮುಂತಾದವನ್ನು ಕುರಿತು ಇನ್ನೊಬ್ಬರು ಪ್ರಧಾನವಾಗಿ ವಿಮರ್ಶೆ ಮಾಡುತ್ತಾರೆ. ಅವರು ಆ ಪ್ರಬಂಧದ ಮಟ್ಟಿಗೆ ಪ್ರಧಾನ ವಿಮರ್ಶಕರು. ಆಮೇಲೆ ಪ್ರತಿಯೊಬ್ಬ ಕಮ್ಮಟಿಗರೂ ತಂತಮ್ಮ ಅನಿಸಿಕೆಗಳನ್ನು ತಿಳಿಸುತ್ತಾರೆ. ಮೇಜಿನ ಸುತ್ತಲೂ ಸಮಾನರಾಗಿ ಕುಳಿತ ಈ ಎಲ್ಲರ ವಿಮರ್ಶೆಯು ಮುಗಿವ ಮೇಲೆ, ಅವರ ಈ ಎಲ್ಲ ವಿಮರ್ಶೆಗಳಿಗೂ ಪ್ರಬಂಧಕಾರರು ಉತ್ತರ ನೀಡುತ್ತಾರೆ. ಸೂಚನೆಗಳ ಯಾವುವನ್ನು ಸ್ವೀಕರಿಸಬಹುದು, ಪ್ರಬಂಧವನ್ನು ಹೇಗೆ ಪರಿಷ್ಕರಿಸಿ ಉತ್ತಮಪಡಿಸಬಹುದು ಎಂಬುದರ ಬಗ್ಗೆ ತಮ್ಮ ಇಂಗಿತವನ್ನು ತಿಳಿಸುತ್ತಾರೆ. ಅನಂತರ ಕಮ್ಮಟದ ನಿರ್ದೇಶಕರು ಈ ಎಲ್ಲ ಚರ್ಚೆಯ ಬೆಳಕಿನಲ್ಲಿ ತಾವು ಹೇಳಬೇಕಾದ್ದನ್ನು ಹೇಳುತ್ತಾರೆ. ಪ್ರಬಂಧದಲ್ಲಿ ಬಳಸಲಾಗಿರುವ ಪಾರಿಭಾಷಿಕ ಪದಗಳ ಬಗ್ಗೆ ಚರ್ಚೆ ನಡೆಯುತ್ತದೆ. ಯಾವ ಪದಗಳನ್ನು ಇಟ್ಟುಕೊಳ್ಳಬಹುದು ಎಂಬುದರ ನಿರ್ಣಯವಾಗುತ್ತದೆ. ಅಗತ್ಯವಿದ್ದರೆ ಹೊಸ ಪದಗಳನ್ನು ಟಂಕಿಸಲಾಗುತ್ತದೆ.

ಕಮ್ಮಟದಲ್ಲಿ ಭಾಷಾಂತರಕ್ಕೆ ಯಾವುದಾದರೊಂದು ಇಂಗ್ಲಿಷ್ ಲೇಖನವನ್ನು ಆರಿಸಿಕೊಳ್ಳಲಾಗುತ್ತದೆ. ಆ ಲೇಖನದ ಒಂದೊಂದು ಭಾಗವನ್ನು ಒಬ್ಬ ಕಮ್ಮಟಿಗರು ಭಾಷಾಂತರ ಮಾಡಿ ತಂದಿರುತ್ತಾರೆ. ಒಂದೊಂದು ವಾಕ್ಯವನ್ನೂ ಕಮ್ಮಟದಲ್ಲಿ ಓದಿ ಅದರ ಬಗ್ಗೆ ಚರ್ಚೆ ನಡೆಸಲಾಗುತ್ತದೆ.

ಮೂಲದ ಭಾವ ಕನ್ನಡದಲ್ಲಿ ಸಾಧ್ಯವಾದಮಟ್ಟಿಗೆ ಮೂಡುವಂತೆ ಮಾಡಲು ಯತ್ನಿಸಲಾಗುತ್ತದೆ. ಈ ಸಾಮೂಹಿಕ ಚಿಂತನೆಯ ಫಲವಾಗಿ ಅಂತಿಮವಾಗಿ ಲೇಖನದ ಕನ್ನಡ ಅನುವಾದ ರೂಪು ತಳೆಯುತ್ತದೆ. ಇಲ್ಲಿ ಕೂಡ ಪಾರಿಭಾಷಿಕ ಪದಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತದೆ. ಪರಿಷ್ಕರಿಸಿದ ಪ್ರಬಂಧಗಳನ್ನೂ ಭಾಷಾಂತರಿಸಲಾದ ಲೇಖನವನ್ನೂ 'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಪ್ರಕಟಿಸಲಾಗುತ್ತದೆ. ಹೀಗಾಗಿ 'ಬ್ಯಾಂಕಿಂಗ್ ಪ್ರಪಂಚಕ್ಕೆ' ಪ್ರಚಲಿತ ಬ್ಯಾಂಕಿಂಗ್ ವಿಚಾರಗಳನ್ನು ಕುರಿತ ಲೇಖನಗಳು ದೊರಕುತ್ತಿವೆ. ಕನ್ನಡದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಪರಿಭಾಷೆ ಸೃಷ್ಟಿಯಾಗುತ್ತಿದೆ. ಕನ್ನಡದಲ್ಲಿ ಸಮರ್ಥವಾಗಿ ಅಭಿ ವ್ಯಕ್ತಿಸಬಲ್ಲ ಲೇಖಕರ ತಂಡದ ನಿರ್ಮಾಣವಾಗುತ್ತಿದೆ. ಯಾವುದೇ ನಿರ್ಬಂಧವಿಲ್ಲದೆ ವಸ್ತುನಿಷ್ಠೆಯಿಂದ ಕೂಡಿದ ಚರ್ಚೆ ಅಭ್ಯಾಸವಾಗುತ್ತದೆ. ಕಮ್ಮಟದಲ್ಲಿ ಭಾಗವಹಿಸುವವರಲ್ಲಿ ಆತ್ಮೀಯತೆ ಬೆಳೆಯುತ್ತದೆ. ಅವರಿಗೆ ಅರಿವಿಲ್ಲದೆಯೇ ಅವರಲ್ಲಿ ಕನ್ನಡದ ಬಗ್ಗೆ ಅಭಿಮಾನ ಬೆಳೆಯುತ್ತದೆ. ಅಲ್ಲದೆ ತಮ್ಮ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಜ್ಞಾನದ ಸಂಪಾದನೆಯಾಗುತ್ತದೆ. ಬ್ಯಾಂಕುಗಳ ತರಬೇತಿ ಕೇಂದ್ರಗಳ ಉದ್ದೇಶವನ್ನು ಕಮ್ಮಟ ಹೆಚ್ಚು ಸಮರ್ಥವಾಗಿ, ಸಮರ್ಪಕವಾಗಿ ನಿರ್ವಹಿಸುತ್ತಿದೆ. ಬ್ಯಾಂಕುಗಳ ಮೇಲಧಿಕಾರಿಗಳೂ ಸಾರ್ವಜನಿಕರೂ ಸಾಹಿತಿಗಳೂ ವಿಚಾರವಂತರೂ ಕಮ್ಮಟಗಳಿಗೆ ಅತಿಥಿ ಭಾಷಣಕಾರರಾಗಿ ಬಂದು, ಇಲ್ಲಿಯ ಕಲಾಪಗಳನ್ನು ನೋಡಿ ಮೆಚ್ಚುಗೆಯ ಮಾತಾಡಿದ್ದಾರೆ, ಕಮ್ಮಟದಲ್ಲಿ ತಾವೂ ಭಾಗವಹಿಸಿದ್ದಾರೆ.

ಕಮ್ಮಟ ಸಾಮಾನ್ಯವಾಗಿ ಆರು ದಿನಗಳ ಕಾಲ ನಡೆಯುತ್ತದೆ. ಬೆಳಗ್ಗೆ ಒಂಬತ್ತರಿಂದ ಸಂಜೆ ಐದು ಗಂಟೆಯವರೆಗೆ ಎಂದು ವೇಳೆಯನ್ನು ಗೊತ್ತುಮಾಡಿಕೊಂಡಿದ್ದರೂ ಅನೇಕ ವೇಳೆ ಕಮ್ಮಟಿಗರು ಉತ್ಸಾಹದಿಂದ ಅರ್ಧರಾತ್ರಿಯವರೆಗೂ ಕುಳಿತು ಚರ್ಚೆಯಲ್ಲಿ ತೊಡಗಿರುವುದುಂಟು. ಅನೇಕ ವೇಳೆ ಅನಂತರವೂ ಬಿಡಾರದಲ್ಲಿ ಚರ್ಚೆಯನ್ನು
ಮುಂದುವರಿಸಿರುವುದುಂಟು.
ಇಷ್ಟೊಂದು ಉತ್ಸಾಹ ಬಹುಶಃ ಬೇರೆ ಕಮ್ಮಟಗಳಲ್ಲಿ ಕಂಡುಬರಲಾರದು. ಜಾತಿ, ಮತ, ಅಂತಸ್ತು ಮುಂತಾದ ಯಾವ ಭೇದಭಾವವೂ ಇಲ್ಲದ, ಸಹಜೀವನ ಸಹಚಿಂತನಗಳ ಮಹಾಪ್ರಯೋಗವಿದು ಎನಿಸುತ್ತದೆ.

ಕಮ್ಮಟ ಕೇವಲ ಬೌದ್ಧಿಕ ಕಸರತ್ತಾಗಿ ಉಳಿದಿಲ್ಲ. ಈ ಆರು ದಿನಗಳಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ರಸ ಪ್ರಶ್ನೆ, ಆಶುಭಾಷಣ, ಭಾವಗೀತೆಗಳ ಹಾಡುಗಾರಿಕೆ, ಕವಿಗೋಷ್ಠಿ, ಸಾಂಸ್ಕೃತಿಕ ಪ್ರವಾಸ, ಸಂವಾದ ಕಾರ್ಯಕ್ರಮ, ಕ್ರೀಡೆಗಳು ಮುಂತಾದವುಕ್ಕೂ ಈ ಆರು ದಿನಗಳಲ್ಲಿ

ಅವಕಾಶ ಇರುತ್ತದೆ. ಸ್ಥಳೀಯ ಕವಿಗಳೂ ಕಮ್ಮಟಿಗರೂ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳುತ್ತಾರೆ. ವಿಚಾರ ಸಾಹಿತ್ಯ, ಸೃಜನಶೀಲ ಸಾಹಿತ್ಯ ಎಂದು ಸಾಹಿತ್ಯವನ್ನು ಬೇರೆಬೇರೆಯಾಗಿ ಕಾಣುವ ಪ್ರವೃತ್ತಿಯನ್ನು ತೊಡೆದು ಹಾಕುವ ಪ್ರಯತ್ನ ನಡೆದಿದೆ. ಕಮ್ಮಟಿಗರನೇಕರಲ್ಲಿ ಸುಪ್ತವಾಗಿರುವ ಪ್ರತಿಭೆ ಹೊಮ್ಮಲು ಇದೊಂದು ನಿಮಿತ್ತ. ಕಮ್ಮಟದಲ್ಲಿ ಮೊದಲ ಬಾರಿಗೆ ಕವನ ಬರೆದು ಓದಿದವರಲ್ಲಿ ಹಲವರು ಈಗ ಈ ಕ್ಷೇತ್ರದಲ್ಲೂ ಮುಂದುವರಿದಿದ್ದಾರೆ.

ರಾಜ್ಯದ ಬೇರೆ ಬೇರೆ ಎಡೆಗಳಲ್ಲಿ ಕಮ್ಮಟ ನಡೆಸುವುದರಿಂದ ಅಲ್ಲಲ್ಲಿಯ ಜನಜೀವನ, ಆರ್ಥಿಕ ಪರಿಸ್ಥಿತಿ, ಭಾಷೆಯ ಪರಿಸ್ಥಿತಿ, ಸಾಂಸ್ಕೃತಿಕ ಸ್ವರೂಪ ಇವುಗಳ ಪರಿಚಯ ಕಮ್ಮಟಿಗರಿಗೆ ಆಗುತ್ತದೆ. ಇದರಿಂದ ಅವರ ಭಾವಲೋಕ, ಅನುಭವಲೋಕ ವಿಸ್ತಾರವಾಗುತ್ತವೆ.

ಬ್ಯಾಂಕಿಂಗ್ ಕಮ್ಮಟ ನಡೆಯುವ ಪ್ರತಿಯೊಂದು ಸ್ಥಳದಲ್ಲೂ ಒಂದು ದಿನ ಸಂಜೆ ನಡೆಸುವ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಸ್ಥಳೀಯ ಕವಿಗಳೂ ಪಾಲ್ಗೊಳ್ಳುವುದರಿಂದ ಮೇಲೆ ಹೇಳಿದ ಉದ್ದೇಶವನ್ನೂ ಸಾಧಿಸಲು ಬಹಳ ಮಟ್ಟಿಗೆ ಅವಕಾಶ ಒದಗುತ್ತದೆ. ಸಾಧ್ಯವಿದ್ದ ಎಡೆಗಳಲ್ಲೆಲ್ಲ ಸ್ಥಳೀಯ ವಿಚಾರವಂತರನ್ನೂ ಉದ್ಯಮಶೀಲರನ್ನೂ ಬ್ಯಾಂಕ್ ಗ್ರಾಹಕರನ್ನೂ ಒಳಗೊಂಡ ವಿಚಾರಸಂಕಿರಣಗಳನ್ನೂ ಕೂಡ ಏರ್ಪಡಿಸಲಾಗುತ್ತದೆ. ಇದರಿಂದ ಸ್ಥಳೀಯ ಸಮಸ್ಯೆಗಳ ಅರಿವು ಕಮ್ಮಟಿಗರಿಗೆ ಉಂಟಾಗುವುದಲ್ಲದೆ, ಸ್ಥಳೀಯರಿಗೆ ಕಮ್ಮಟದ ಉದ್ದೇಶದ ಪರಿಚಯ ಮಾಡಿಕೊಟ್ಟಂತಾಗುತ್ತದೆ. ಬ್ಯಾಂಕುಗಳಲ್ಲಿ ಕನ್ನಡದಲ್ಲಿ ವ್ಯವಹಾರ ಮಾಡುವುದರ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿ ಮೂಡಿಸಲೂ ಸಹಾಯವಾಗುತ್ತದೆ.

ಬ್ಯಾಂಕಿಂಗ್ ಕಮ್ಮಟಗಳಲ್ಲಿ ನಡೆದ ಚರ್ಚೆಗಳ ಫಲವಾಗಿ ಹಲವು ಕೃತಿಗಳು ಹೊರಬಂದಿವೆ. ಅವುಗಳಲ್ಲಿ ಬ್ಯಾಂಕಿಂಗ್ ನಿಘಂಟು' ಒಂದು ಮುಖ್ಯವಾದ್ದು. ಹಣ–ಬ್ಯಾಂಕಿಂಗ್ ವಿಚಾರಗಳಿಗೆ ಸಂಬಂಧಿಸಿದ ಸುಮಾರು ಮೂರು ಸಾವಿರ ಪಾರಿಭಾಷಿಕ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳ ಜೊತೆಗೆ ಅವುಗಳ ವಿವರಣೆಗಳೂ ಇಲ್ಲಿವೆ. ಇದು ಒಂದು ಪದಕೋಶವಷ್ಟೇ ಅಲ್ಲ, ಬ್ಯಾಂಕಿಂಗ್ ವಿಷಯ ಕುರಿತ ಒಂದು ವಿಶ್ವಕೋಶ ಎನಿಸಿದೆ.

ಬ್ಯಾಂಕಿಂಗ್ ಕಮ್ಮಟ ಒಂದು ಅದರ್ಶ ತರಬೇತಿ ಕೇಂದ್ರವಾಗಿ ಪರಿಣಮಿಸಿದೆ. ಕಮ್ಮಟಿಗರದೇ ಒಂದು ವಿಶಿಷ್ಟ ಸಂಸ್ಕೃತಿ ರೂಪುಗೊಂಡಿದೆ. ಒಂದು ಸಾರಿ ಕಮ್ಮಟಕ್ಕೆ ಬಂದವರು ಪದೇ ಪದೇ ಅದರಲ್ಲಿ ಭಾಗವಹಿಸಬಯಸುತ್ತಾರೆ. ಪ್ರತಿ ಕಮ್ಮಟದಲ್ಲ ಹೊಸತನ ಇರುತ್ತದೆ. ಮೊದಲ ಕಮ್ಮಟಕ್ಕೆ ಬಂದವರಲ್ಲಿ ಅನೇಕರು ಈ ಇಪ್ಪತ್ತೈದನೆಯ

ಕಮ್ಮಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಕಮ್ಮಟದ ಇನ್ನೊಂದು ವೈಶಿಷ್ಟ್ಯವೆಂದರೆ, ಪ್ರತಿ ಕಮ್ಮಟದಲ್ಲೂ ಅದರಲ್ಲಿ ಭಾಗವಹಿಸಿದವರೆಲ್ಲರಿಗೂ ಆ ಕಮ್ಮಟದ ಕೊನೆಯ ದಿನ ಬಿರುದುಗಳ ಪ್ರದಾನ ಮಾಡುವುದು. ಹಾಸ್ಯಪೂರಿತವೂ ಅರ್ಥಗರ್ಭಿತವೂ ಆದ ಈ ಬಿರುದುಗಳು ಕಮ್ಮಟದ ಕೆಲಸದ ಆಯಾಸವನ್ನು ಬಹಳಮಟ್ಟಿಗೆ ಕಡಿಮೆ ಮಾಡಿ ಕಮ್ಮಟಿಗರು ಉಲ್ಲಾಸದಿಂದ ಕಮ್ಮಟವನ್ನು ಪದೇ ಪದೇ ನೆನೆದುಕೊಳ್ಳುವಂತೆ ಮಾಡುತ್ತವೆ.

ಕಮ್ಮಟದ ಇನ್ನೊಂದು, ಉಪೋತ್ಪನ್ನವೆಂದರೆ, 'ಪದನಿಧಿ' ಎಂಬ ವ್ಯವಸ್ಥೆಯ ಯೋಜನೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸದಾಗಿ ಬರುವ ಪಾರಿಭಾಷಿಕ ಪದಗಳಿಗೆ ಕೂಡಲೇ ಕನ್ನಡ ಪದಗಳನ್ನು ಸೂಚಿಸುವ ನಿರಂತರ ವ್ಯವಸ್ಥೆ. ಕಮ್ಮಟದಲ್ಲಿ ಪಾಲ್ಗೊಂಡು ಸಾಕಷ್ಟು ನುರಿತಿರುವವರನ್ನೊಳಗೊಂಡ ಒಂದು ಸಮಿತಿ ಈ ಕೆಲಸ ನಿರ್ವಹಿಸುತ್ತಿದೆ. 'ಪದನಿಧಿ' ಎಂಬ ಅನಿಯತಕಾಲಿಕವನ್ನು ಇದಕ್ಕಾಗಿ ಹೊರಡಿಸಲಾಗುತ್ತಿದೆ.

ಬ್ಯಾಂಕಿಂಗ್ ಕಮ್ಮಟದ ಪಥದರ್ಶನ ಮಾಡಿದಾಗ ನನಗೆ ಧನ್ಯತೆಯ ಭಾವ ಉಂಟಾಗುತ್ತದೆ. ಭಾರತದ ಬೇರೆ ಯಾವುದೇ ಭಾಷೆಯಲ್ಲಿ ಇಂಥ ಪ್ರಯೋಗ ನಡೆದದ್ದಿಲ್ಲ ಎಂದರೆ ಅದು ಅಹಂಕಾರದ ಮಾತಲ್ಲ. ಇಪ್ಪತ್ತೈದು ಕಮ್ಮಟಗಳನ್ನು ನಾವು ಹೇಗೆ ನಡಸಿದೆವು ಎಂದು ನಮಗೇ ಆಶ್ಚರ್ಯವಾಗುತ್ತದೆ. ಇನ್ನೂ ನಡೆಯಬೇಕಾದ ದೂರ ಬಹಳ ಇದೆ ಎನಿಸದೆ ಇರುವುದಿಲ್ಲ. ಇದುವರೆಗೆ ಕಮ್ಮಟವನ್ನು ನಡೆಸಿಕೊಂಡು ಬಂದ ಶಕ್ತಿಯೇ ಮುಂದೆಯೂ ಇದನ್ನು ನಡೆಸೀತು ಎಂಬುದು ನಮ್ಮ ಆಶಾವಾದ.

33.

ಡಿಸೆಂಬರ್ 1995
ನಡುನೀರಿನಲ್ಲಿ ಬ್ಯಾಂಕಿಂಗ್ ಸುಧಾರಣೆ

1995 ಮುಗಿಯುತ್ತಿದೆ. ಕೇಂದ್ರ ಸರ್ಕಾರ ಜಾರಿಗೆ ತಂದ ಹೊಸ ಆರ್ಥಿಕ ನೀತಿಯ ಐದನೆಯ ವರ್ಷ ನಡೆಯುತ್ತಿದೆ. ಇಡೀ ಅರ್ಥ ವ್ಯವಸ್ಥೆಯೇ ಬದಲಾವಣೆಗೆ ಒಳಪಟ್ಟಿದೆ. ಹಣಕಾಸು ವಲಯವೂ ಇದಕ್ಕೆ ಹೊರತಾಗಿಲ್ಲ.

ನಮ್ಮ ಹಣಕಾಸು ವ್ಯವಸ್ಥೆಯ ಸ್ಥಿತಿಗತಿಗಳನ್ನು ಅವಲೋಕಿಸಿ, ಅದರ ಸುಧಾರಣೆಯ ಬಗ್ಗೆ ಸಲಹೆ ನೀಡಲು ನೇಮಕಗೊಂಡಿದ್ದ ನರಸಿಂಹಂ ಸಮಿತಿಯ ಶಿಫಾರಸುಗಳ ಪ್ರಕಾರ ಈಗಾಗಲೇ ಈ ವಲಯದಲ್ಲಿ ಅನೇಕ ಬದಲಾವಣೆಗಳಾಗಿವೆ. ಬ್ಯಾಂಕಿಂಗ್ ವ್ಯವಸ್ಥೆಯ ಪುನರ್ರಚನೆಯಾಗಬೇಕು; ಬ್ಯಾಂಕಿಂಗ್ ವಲಯದ ವಿಸ್ತರಣೆಯ ವಿಚಾರದಲ್ಲಿ ಉದಾರ ನೀತಿ ಜಾರಿಗೆ ಬರಬೇಕು; ಸರ್ಕಾರಿ ವಲಯದ ಬ್ಯಾಂಕುಗಳ ಏಕಸ್ವಾಮ್ಯದ ಕೋಟೆಯನ್ನು ತೆರೆದು ಖಾಸಗಿ ವಲಯ ಬ್ಯಾಂಕುಗಳಿಗೂ ವಿದೇಶಿ ಬ್ಯಾಂಕುಗಳಿಗೂ ಪ್ರವೇಶ ದೊರಕಿಸಿ ಕೊಡಬೇಕು; ಇನ್ನು ಮುಂದೆ ಯಾವುದೇ ಬ್ಯಾಂಕನ್ನು ರಾಷ್ಟ್ರೀಕರಿಸಬಾರದು; ಬ್ಯಾಂಕುಗಳ ಬಂಡವಾಳತಳವನ್ನು ಹೆಚ್ಚಿಸಬೇಕು; ಬಡ್ಡಿ ದರಗಳ ಮೇಲೆ ಯಾವುದೇ ಹಿಡಿತ ಬೇಡ; ಇಡೀ ಬಡ್ಡಿ ದರ ವ್ಯವಸ್ಥೆಯೇ ವೈಜ್ಞಾನಿಕವಾದ್ದಾಗಿರಲಿ; ಇಂಥವರಿಗೆ ಸಾಲ ನೀಡಿ, ಇಂಥವರಿಗೆ ಬೇಡ ಎಂದಾಗಲಿ, ಬ್ಯಾಂಕುಗಳು ಇಂಥಿಂಥ ರೀತಿಯಲ್ಲೇ ಹಣ ವಿನಿಯೋಜನೆ ಮಾಡಬೇಕೆಂದಾಗಲಿ ಕಟ್ಟುಪಾಡುಗಳು ಇರುವುದು ಬೇಡ; ಬ್ಯಾಂಕುಗಳಿಗೆ ಬರಬೇಕಾಗಿರುವ ಅಗಾಧ ಬಾಕಿಗಳ ವಸೂಲಿಗೆ ತ್ವರಿತಕ್ರಮ ಜಾರಿಗೆ ಬರಬೇಕು; ಅನುಮಾನದ ಹಾಗೂ ವಸೂಲಾಗವೆಂದು ಬಹುತೇಕ ಖಾತ್ರಿಯಾದ ಸಾಲಗಳನ್ನೆಲ್ಲ ಆಸ್ತಿಗಳೆಂದು ಬ್ಯಾಂಕುಗಳು ಪರಿಗಣಿಸಿ ಭ್ರಮಾವಿಲಾಸದಲ್ಲಿ ಓಲಾಡುವುದು ಶೋಚನೀಯವಾದ್ದರಿಂದ ಅಂಥ ಕಳಪೆ ಆಸ್ತಿಗಳನ್ನೆಲ್ಲ ಕಳೆಯಲು ವ್ಯವಸ್ಥೆ ರೂಪಿಸುವುದು ಅಗತ್ಯ; ಬ್ಯಾಂಕುಗಳಿಗೆ ಬರಬೇಕಾದ ಕರಡು ಸಾಲ ಹಾಗೂ ಅನುಮಾನ ಸಾಲಗಳನ್ನು ಸೋಡಿಯ ಮೇಲೆ ತೆಗೆದುಕೊಳ್ಳುವುದಕ್ಕಾಗಿ ಆಸ್ತಿ, ಪುನರ್ರಚನಾ ನಿಧಿಯೊಂದರ ರಚನೆಯಾಗಲಿ; ಬ್ಯಾಂಕಿಂಗ್ ವ್ಯವಸ್ಥೆಯ ನಿಯಂತ್ರಣದ ಸಂಪೂರ್ಣ ಹೊಣೆ ರಿಸರ್ವ್ ಬ್ಯಾಂಕಿನದೇ ಆಗಿರಲಿ, ಬಂಡವಾಳ ಮಾರುಕಟ್ಟೆಗೂ ಉದಾರ ನೀತಿಯ ಗಾಳಿ ಬೀಸಲಿ – ಎಂಬವು ಸ್ಥೂಲವಾಗಿ ನರಸಿಂಹಂ ಸಮಿತಿಯ ಶಿಫಾರಸುಗಳು.

1991ರ ಕೊನೆಯ ಭಾಗದಲ್ಲಿ ನರಸಿಂಹಂ ಸಮಿತಿ ವರದಿಗೆ ಸರ್ಕಾರ ಒಪ್ಪಿಗೆ ನೀಡಿತು. ಕೆಲವು ಬದಲಾವಣೆಗಳೊಡನೆ ಇದನ್ನು

ಜಾರಿಗೊಳಿಸಲಾಗುತ್ತಿದೆ. ಈ ಶಿಫಾರಸುಗಳ ಕೆಲವು ಮುಖ್ಯಾಂಶಗಳನ್ನು ಕುರಿತಂತೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನರಸಿಂಹಂ ಸಮಿತಿಯ ಶಿಫಾರಸುಗಳ ಮೂರು ಪ್ರಮುಖ ಉದ್ದೇಶಗಳೆಂದರೆ, ಹೆಚ್ಚಿನ ಸ್ಪರ್ಧೆ, ಬ್ಯಾಂಕುಗಳ ಆರೋಗ್ಯಸಾಧನೆ ಮತ್ತು ದಕ್ಷತೆಗೆ ಅಗ್ರಮಾನ್ಯತೆ. ಮುಕ್ತ ಸ್ಪರ್ಧೆ ಇದ್ದಾಗ ಬ್ಯಾಂಕುಗಳು ಹೆಚ್ಚು ದಕ್ಷವಾಗಿ ಕೆಲಸ ಮಾಡುವಂತಾಗುವುದೆಂಬ ಕಾರಣದಿಂದ ಖಾಸಗಿ ಹಾಗೂ ವಿದೇಶಿ ಬ್ಯಾಂಕುಗಳಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ಸುಮಾರು ಹನ್ನೆರಡು ಹೊಸ ಖಾಸಗಿ ಬ್ಯಾಂಕುಗಳು ಕಣವನ್ನು ಪ್ರವೇಶಿಸಿವೆ. ವಿದೇಶಿ ಬ್ಯಾಂಕುಗಳೂ ತಮ್ಮ ಚುಂಚಗಳನ್ನು ಚಾಚುತ್ತಿವೆ. ಅಗಾಧ ಸಂಖ್ಯೆಯ ಶಾಖೆಗಳನ್ನು ಅಷ್ಟೇನೂ ಲಾಭದಾಯಕವಾದ ಕ್ಷೇತ್ರಗಳಲ್ಲಿ ತೆರೆಯಬೇಕಾಗಿಲ್ಲದ ಇತರ ಬ್ಯಾಂಕುಗಳಂತೆ ಸರ್ಕಾರಿ ಬ್ಯಾಂಕುಗಳು ಕಡಿಮೆ ವೆಚ್ಚದಲ್ಲಿ ಹೆಚ್ಚು ದಕ್ಷವಾಗಿ ಕೆಲಸ ಮಾಡುವುದು ಎಷ್ಟರಮಟ್ಟಿಗೆ ಸಾಧ್ಯ ಎಂಬುದು ಪ್ರಶ್ನೆ. ಲಾಭವೇ ಪ್ರಧಾನ, ಅದರಿಂದಲೇ ಒಂದು ಬ್ಯಾಂಕಿನ ದಕ್ಷತೆಯ ಅಳತೆ ಎನ್ನುವುದಾದರೆ, ಸಮಾಜ ಕಲ್ಯಾಣ ಹಾಗೂ ಸಾಮಾಜಿಕ ಆರ್ಥಿಕ ಪ್ರಗತಿಯ ಸಾಧನೆಯನ್ನೂ ಒಂದು ಪ್ರಮುಖ ಹೊಣೆಯಾಗಿ ಉಳ್ಳ ಸರ್ಕಾರಿ ವಲಯ ಬ್ಯಾಂಕುಗಳು ಏನು ಮಾಡಬೇಕು? ಪರಸ್ಪರ ವಿರುದ್ಧವೆನಿಸುವ ಈ ಎರಡು ಗುರಿಗಳ ಸಮನ್ವಯ ಹೇಗೆ? ಈ ಪ್ರಶ್ನೆಗೆ ಯಾರೂ ಉತ್ತರ ಹೇಳುವವರಿಲ್ಲ. ಬ್ಯಾಂಕುಗಳು ಬಳುಕುವ ಮೈ ತಳೆದು ಲವಲವಿಕೆಯಿಂದ ಕೂಡಿದವವಾಗಿರಬೇಕೆನ್ನುವುದಾದರೆ, ಅವು ಆಧುನಿಕ ಯಂತ್ರ ತಂತ್ರ ಗಣಕ ವ್ಯವಸ್ಥೆಯನ್ನು ಹೊಂದಿ ಕ್ಷಿಪ್ರಾತಿಕ್ಷಿಪ್ರವಾಗಿ ಸೇವೆ ಸಲ್ಲಿಸಬೇಕಾಗುತ್ತದೆ. ಆದರೆ ದೂರ ದೂರದ ಹಳ್ಳಿಗಳಲ್ಲಿ ಗೆಲ್ಗಂಬಗಳಂತೆ ನಿಲ್ಲಿಸಲಾದ ಶಾಖೆಗಳಿಗೆಲ್ಲ ಇದನ್ನು ವಿಸ್ತರಿಸುವುದು ಹೇಗೆ? ಇದಕ್ಕೆ ಎಷ್ಟು ವೆಚ್ಚ? ಈ ಆಧುನಿಕ ವ್ಯವಸ್ಥೆಯ ಒಂದು ಫಲವೆಂದರೆ, ಹೆಚ್ಚಿನ ತರಬೇತಿ ಪಡೆದ, ಕಡಮೆ ಸಂಖ್ಯೆಯ ಸಿಬ್ಬಂದಿಯ ಸೇವೆ. ಹಾಗಾದರೆ ಬ್ಯಾಂಕುಗಳನ್ನು ನಂಬಿದ ಅಗಾಧ ಸಿಬ್ಬಂದಿಯ ಭವಿಷ್ಯವೇನು? ಹಣ ಕೊಟ್ಟು ಕೈ ಕುಲುಕಿ ಹಲವರಿಗೆ ಮನೆಯ ದಾರಿ ತೋರಿಸುವುದೆ? ಅನಾರ್ಥಿಕವಾದ ಶಾಖೆಗಳನ್ನು ಮುಚ್ಚುವುದೆ? ಇಂಥ ಹಲವಾರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವಿನ್ನೂ ದೊರಕಿಲ್ಲ.

ಇಂಥವರಿಗೆ ಸಾಲ ಕೊಡಿ, ಇದಿದಕ್ಕಾಗಿ ಸಾಲ ಕೊಡಿ ಎಂಬ ನಿರ್ದೇಶ ಈಗಲೂ ಮುಂದುವರಿದೇ ಇದೆ. ಇದನ್ನು ಬಿಡುವಂತಿಲ್ಲ. ಆದರೆ ಆದ್ಯತಾ ವಲಯದ ವ್ಯಾಖ್ಯೆ ವಿಸ್ತಾರವಾಗಿದೆ. ಸಾಲದ ಮೇಲಣ ಬಡ್ಡಿ ದರಗಳ ಮೇಲಣ ಹಿಡಿತ ಒಂದಿಷ್ಟು ಸಡಿಲಗೊಂಡಿದೆ. ಎರಡು ಲಕ್ಷ ರೂಪಾಯಿಗಳನ್ನು ಮೀರಿದ ಸಾಲಗಳ ಮೇಲೆ ಎಷ್ಟು ಬಡ್ಡಿದರ

ವಿಧಿಸಬೇಕೆಂಬುದನ್ನು ಬ್ಯಾಂಕುಗಳ ವಿವೇಚನೆಗೆ ಬಿಡಲಾಗಿದೆ. ಬ್ಯಾಂಕುಗಳು ಯಾವ ನಿಟ್ಟಿನಲ್ಲಿ ಎಷ್ಟು ವಿನಿಯೋಜಿಸಬೇಕೆಂಬ ನಿಯಮ ಸ್ವಲ್ಪ ಮಟ್ಟಿಗೆ ಸಡಿಲವಾಗಿದೆ. ಶಾಸನ ವಿಧಿಸಿದ ದ್ರವತ್ವ ಅನುಪಾತ ಸ್ವಲ್ಪ ಕಡಿಮೆಯಾಗಿದೆ. ಸರ್ಕಾರದ ಸಾಲಗಳಲ್ಲಿ ಬ್ಯಾಂಕುಗಳ ಹಣ ತೊಡಗಿಸಬೇಕೆಂಬ ಒತ್ತಡ ಇಳಿದಿದೆ. ಲಾಭ ತರದ ಆಸ್ತಿಗಳ ಪ್ರಮಾಣ ತಗ್ಗಿದೆ. ಬ್ಯಾಂಕುಗಳ ಲಾಭಪ್ರದತೆ ಅಧಿಕವಾಗಿದೆ. ಬ್ಯಾಂಕುಗಳ ಸಾಲದ ಮೇಲಣ ಬಡ್ಡಿ ದರವನ್ನು ಮುಕ್ತಗೊಳಿಸಿದ್ದರಿಂದ ಠೇವಣಿಗಳ ಮೇಲೆ ಬಡ್ಡಿ ದರ ವಿಧಿಸುವುದಕ್ಕೂ ಬ್ಯಾಂಕುಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಲಾಗಿದೆ. ಈ ಕ್ಷೇತ್ರದಲ್ಲಿ ಸ್ಪರ್ಧೆಯ ಗಾಳಿ ಮಂದಮಂದವಾಗಿ ಬೀಸತೊಡಗಿದೆಯೆನ್ನಬಹುದು.

ಬ್ಯಾಂಕುಗಳ ಹಣಕಾಸು ಸ್ಥಿತಿ ಸುಧಾರಿಸುತ್ತಿದೆ. 1996ರ ಮಾರ್ಚ್ ವೇಳೆಗೆ ಬ್ಯಾಂಕುಗಳ ಬಂಡವಾಳ ಅವುಗಳ ನಷ್ಟಸಂಭಾವ್ಯಭರಿತ ಹೊಣೆಗಳ ಶೇ.8ರಷ್ಟಾದರೂ ಇರಬೇಕೆಂಬ ನಿಯಮವನ್ನು ಅನೇಕ ಬ್ಯಾಂಕುಗಳು ಸಾಧಿಸಿವೆ. ಆದರೂ ಹಲವು ದುರ್ಬಲ ಕೊಂಡಿಗಳಿವೆ. ಇವಕ್ಕೆ ಸರ್ಕಾರ ಒಳಲೆಯಿಂದ ಬಂಡವಾಳದ ಹಾಲನ್ನು ನೀಡುವ ಕೆಲಸ ಈಗ ಹಿಂದಕ್ಕೆ ಬಿದ್ದಿದೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಚಿಕ್ಕದೊಡ್ಡ ಹಾಗೂ ಬಲಿಷ್ಠ ದುರ್ಬಲ ಸರ್ಕಾರಿ ಬ್ಯಾಂಕುಗಳು, ಖಾಸಗಿ ವಲಯದ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು – ಮುಂತಾಗಿ ಕಿಕ್ಕಿರಿದು ತುಂಬಿದ ಬ್ಯಾಂಕುಗಳೂ ಅವುಗಳ ಕಛೇರಿಗಳೂ ಯಾವ ಬಗೆಯಲ್ಲಿ ಸ್ಪರ್ಧೆ ನಡಸಿಯಾವು? ಅವುಗಳ ಆಟದ ನಿಯಮಗಳು ಎಲ್ಲಕ್ಕೂ ಒಂದೇ ಸಮನಾಗಿವೆಯೆ? ಇದನ್ನು ಯೋಚಿಸಬೇಕು.

ಬ್ಯಾಂಕುಗಳ ಮೇಲೆ ರಿಸರ್ವ್ ಬ್ಯಾಂಕ್ ಹಾಗೂ ಸರ್ಕಾರದ ಹಣಕಾಸು ಇಲಾಖೆಯ ಬ್ಯಾಂಕಿಂಗ್ ವಿಭಾಗ – ಇವೆರಡರ ಯಜಮಾನಿಕೆಯೂ ಮುಂದುವರಿದಿದೆ. ಭಾರತೀಯ ಬ್ಯಾಂಕುಗಳ ಸಂಘ ಈ ರಥದ ಮೂರನೆಯ ಚಕ್ರ. ಅನೇಕ ವೇಳೆ ಇದು ಸರ್ಕಾರದ ಆದೇಶದಂತೆ ನಡೆದುಕೊಂಡಿರುವುದೂ ಉಂಟು. ಬ್ಯಾಂಕುಗಳ ಎಲ್ಲ ಸ್ತರದ ಉದ್ಯೋಗಿಗಳನ್ನೂ ಒಂದೇ ರೀತಿಯಾಗಿ ನಡಸಿಕೊಳ್ಳುತ್ತಿಲ್ಲವೆಂಬ ಅಸಮಾಧಾನವೂ ಇದೆ. ಇವೆಲ್ಲದರ ನಡುವೆ ರಾಜಕೀಯ ಹಸ್ತಕ್ಷೇಪವೂ ಕಂಡೂ ಕಾಣದಂತೆ ಇದ್ದೇ ಇದೆ. ಸರ್ಕಾರಿ ಬ್ಯಾಂಕುಗಳ ವ್ಯವಸ್ಥಾಪಕವರ್ಗಕ್ಕೆ ಹೆಚ್ಚಿನ ಸ್ವಾತಂತ್ರ್ಯ ಈಗಲೂ ಇಲ್ಲ. ಒಡೆತನ ಮತ್ತು ನಿಯಂತ್ರಣಗಳನ್ನು ಪ್ರತ್ಯೇಕಗೊಳಿಸಿಲ್ಲ. ಒಟ್ಟಿನಲ್ಲಿ ಒಂದು ಬಗೆಯ ನೆನೆಗುದಿಯ ಸ್ಥಿತಿ ಉಂಟಾಗಿದೆ. ಈ ಅನಿಶ್ಚಿತತೆ ಒಳ್ಳೆಯದಲ್ಲ.

34.

ಡಿಸೆಂಬರ್ 1997
ಸುಧಾರಣೆ – ಮೊದಲ ಮಜಲು

1992–1997:

ಈ ಆರು ವರ್ಷಗಳಲ್ಲಿ ದೇಶದ ನದಿಗಳಲ್ಲಿ ಎಷ್ಟೊ ನೀರು ಹರಿದುಹೋಗಿದೆ. ನಮ್ಮ ಅರ್ಥವ್ಯವಸ್ಥೆಯಲ್ಲಿ ಸಾಗರಿಕ ಬದಲಾವಣೆಗಳೇ ಸಂಭವಿಸಿವೆ. ಕೇಂದ್ರದ ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟಿದ್ದ ಅರ್ಥವ್ಯವಸ್ಥೆ ಈಗ ಮುಕ್ತ ಮಾರುಕಟ್ಟೆಯ ಚಲನವಲನಗಳಿಗೆ ಅನುಗುಣವಾಗಿ ಸ್ಪಂದಿಸುವಂತಾಗಿದೆ. ಸರ್ಕಾರಿ ಉದ್ಯಮವಲಯದ ಪ್ರಾಶಸ್ತ್ಯ ಕಡಿಮೆಯಾಗಿದೆ. ಸರ್ಕಾರಿ ಎಂದರೆ ಅದಕ್ಷ, ಭ್ರಷ್ಟಾಚಾರಪೂರಿತ, ದುಬಾರಿ, ಅನುಭೋಗಿಹಿತದೂರ – ಎಂಬೆಲ್ಲ ಭಾವನೆಗಳು ಅನೇಕರಲ್ಲಿ ಮೂಡಿವೆ. ಅತ್ಯಂತ ಚಾಂಚಲ್ಯದಿಂದ ಕೂಡಿದ ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸಲು ತಕ್ಕ ವ್ಯವಸ್ಥೆಯಾಗಲಿ, ಯೋಗ್ಯತೆಯಾಗಲಿ ಸರ್ಕಾರಕ್ಕೆ ಇಲ್ಲ; ಆದ್ದರಿಂದ ಸರ್ಕಾರ ಇದನ್ನು ಬಿಟ್ಟುಕೊಡಲಿ, ಮಾರುಕಟ್ಟೆಗೆ ಸ್ನೇಹಿಯಾಗಿ ವರ್ತಿಸಲಿ; ಆರ್ಥಿಕ ಚಟುವಟಿಕೆಗಳು ವಿಶ್ವಕ್ಕೆ ಮುಖಮಾಡಿಕೊಳ್ಳಲಿ. ವಿಶ್ವವ್ಯಾಪಿ ಅರ್ಥವ್ಯವಸ್ಥೆ, ಮಾರುಕಟ್ಟೆಯ ಭೂಮಂಡಲೀಕರಣ ಇದು ಇಂದಿನ ಐಹಿಕ ದರ್ಶನ – ಎಂಬ ವಾದವೀಗ ಮುಂದಾಗಿದೆ. ಖಾಸಗಿ ಉದ್ಯಮ ವಲಯವೇ ಹೆಚ್ಚು ದಕ್ಷ. ಸಹಜ; ಅದರಿಂದಲೇ ಉದ್ಧಾರ ಸಾಧ್ಯ; ಸ್ಪರ್ಧೆಯ ವಾತಾವರಣದಿಂದಲೇ ಸಕಲರ ಕಲ್ಯಾಣ ಎಂಬ ಭಾವನೆ ಬೆಳೆದಿದೆ.

ಈ ಬದಲಾದ ನಿಲುವಿಗೆ ಅನುಗುಣವಾಗಿ ಬ್ಯಾಂಕಿಂಗ್ ವಲಯದಲ್ಲೂ ಅನೇಕ ಬದಲಾವಣೆಗಳಾಗಿವೆ. ದೇಶದಲ್ಲಿ ಹೊಸ ಆರ್ಥಿಕ ನೀತಿ – ಆರ್ಥಿಕ ಉದಾರೀಕರಣದ ನೀತಿ ಜಾರಿಗೆ ಬಂದಾಗ (1991) ಬ್ಯಾಂಕಿಂಗ್ ವಲಯದಲ್ಲಿ ಮೂಲಭೂತ ಸುಧಾರಣೆ ಅಗತ್ಯವೆನಿಸಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿ ಶಿಫಾರಸುಗಳನ್ನು ನೀಡಲು ಎಂ.ನರಸಿಂಹಂ ಅವರ ನೇತೃತ್ವದಲ್ಲಿ ಒಂದು ಸಮಿತಿಯ ನೇಮಕವಾಯಿತು. ಆ ಸಮಿತಿಯ ಸಲಹೆಗಳ ಪೈಕಿ ಹಲವನ್ನು ಕಳೆದ ಆರು ವರ್ಷಗಳಲ್ಲಿ ಜಾರಿಗೆ ತರಲಾಗಿದೆ. ನರಸಿಂಹಂ ಸಮಿತಿ ಸೂಚಿಸದೆ ಇದ್ದಂಥ ಹಲವು ಬೆಳವಣಿಗೆಗಳು ಕೂಡ ಆಗಿವೆ. ನರಸಿಂಹಂ ಸಮಿತಿಯ ಶಿಫಾರಸುಗಳಲ್ಲಿ ಸರ್ಕಾರ ಕೆಲವನ್ನು ಆರಿಸಿಕೊಂಡು, ಇನ್ನು ಕೆಲವನ್ನು ಮಾರ್ಪಡಿಸಿ ಜಾರಿಗೊಳಿಸಿದೆ. ಸಮಿತಿಯ ಆಶಯಕ್ಕೆ ಭಂಗ ಬರುವ ರೀತಿಯ ಬೆಳವಣಿಗೆಗಳೂ ಆಗಿವೆ. ಇತ್ತ ಮುಕ್ತ ವ್ಯವಸ್ಥೆಯೂ ಅಲ್ಲ, ಅತ್ತ ಕೇಂದ್ರದ ನಿಯಂತ್ರಣಕ್ಕೆ ಒಳಪಟ್ಟೂ ಇಲ್ಲ ಎಂಬ

ಇಬ್ಬಂದಿಯ ಸ್ಥಿತಿ ಉಂಟಾಗಿದೆ. ಬದಲಾವಣೆಯೇನೋ ಆಗಬೇಕು. ಯಾವ ವ್ಯವಸ್ಥೆಯೇ ಆಗಲಿ, ನಿಂತ ನೀರಾದರೆ ಕೊಳೆಯುತ್ತದೆ. ಆದ್ದರಿಂದ ಬದಲಾವಣೆ ಅಗತ್ಯ. ಆದರೆ ಬಯಸಿದ್ದು ಏನು? ಆಗಿರುವುದು ಏನು? ನಾವು ಎಲ್ಲಿಗೆ ಬಂದಿದ್ದೇವೆ? ಎತ್ತ ಸಾಗಿದ್ದೇವೆ? ಈ ಬಗ್ಗೆ ನಮಗೆ ನಾವೇ ಪ್ರಶ್ನಿಸಿಕೊಳ್ಳುವ ಕಾಲ ಬಂದಿದೆ.

ಬ್ಯಾಂಕ್ ರಾಷ್ಟ್ರೀಕರಣ

ಆಯೋಜಿತ ಹಾಗೂ ನಿಯಂತ್ರಿತ ಅರ್ಥವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯವೇ ಸಿಂಹಾಸನವನ್ನೇರಿ ಮೆರೆಯಬೇಕು ಎಂಬ ದರ್ಶನಕ್ಕೆ ಅನುಗುಣವಾಗಿ ರಾಷ್ಟ್ರೀಕರಣಗೊಂಡ ಪ್ರಧಾನ ಬ್ಯಾಂಕುಗಳು ಸಾರ್ವಜನಿಕ ವಲಯ ಸಂಸ್ಥೆಗಳೆನಿಸಿಕೊಂಡಿದ್ದುವು. ಗ್ರಾಮಗ್ರಾಮಕ್ಕೂ ಬ್ಯಾಂಕಿಂಗ್ ಸೇವೆ ವಿಸ್ತರಿಸಬೇಕೆಂಬ ಗುರಿಯನ್ನು ಇರಿಸಿಕೊಳ್ಳಲಾಗಿತ್ತು. ದೇಶದ ವಿರಳ ಸಂಪನ್ಮೂಲಗಳನ್ನು ಬಳಸಿಕೊಂಡು ಬಡತನದ ರೇಖೆಯನ್ನು ತಗ್ಗಿಸಿ ಅಂತಿಮವಾಗಿ ಅದನ್ನು ಅಳಿಸಿಹಾಕಬೇಕೆಂಬ ಕನಸನ್ನು ಕಾಣಲಾಗಿತ್ತು, ಬೃಹತ್ ಬ್ಯಾಂಕುಗಳ ಗ್ರಾಮೀಣ ಶಾಖಾಜಾಲದ ನಿರ್ಮಾಣದ ಜೊತೆಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿಂಗ್ ಎಂಬ ಹೊಸ ಪ್ರಯೋಗವೊಂದು ಕಾರ್ಯರೂಪಕ್ಕೆ ಬಂದಿತ್ತು. ಹೀಗೆ ಮೂವತ್ತು ವರ್ಷಗಳಲ್ಲಿ ಕ್ರಮಿಸಿದ ದಿಕ್ಕುಗಳೂ, ಮಾಡಲಾದ ಸಾಧನೆಗಳೂ, ಅನುಭವಿಸಲಾದ ವೈಫಲ್ಯಗಳೂ ಅನೇಕ.

ಸಾಫಲ್ಯ–ವೈಫಲ್ಯ

ಆದರೂ ಒಟ್ಟಿನಲ್ಲಿ ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶಗಳು ಸಫಲವಾಗಿವೆಯೆಂಬುದೇ ಸಾಮಾನ್ಯವಾಗಿ ಇರುವ ತಿಳಿವಳಿಕೆ. ಬ್ಯಾಂಕಿಂಗ್ ವ್ಯವಸ್ಥೆ ಭೌಗೋಲಿಕವಾಗಿ ಹಾಗೂ ಪ್ರಾದೇಶಿಕವಾಗಿ ಅಗಾಧವಾಗಿ ವಿಸ್ತರಿಸಿದೆ. ಪ್ರಾದೇಶಿಕ ಆರ್ಥಿಕ ಅಸಮತೋಲಗಳ ನಿವಾರಣೆಯಾಗಿದೆ. ಅಲಕ್ಷಕ್ಕೆ ಒಳಗಾದ ವಲಯಗಳಿಗೆ ಉದರಿ ದೊರಕುವಂತಾಗಿದೆ. ಚೈತನ್ಯಹೀನವಾದ, ಲಾಭಪ್ರದವೆನಿಸದ ಚಟುವಟಿಕೆಗಳಿಗೂ ಸಾಲ ಲಭ್ಯವಿದೆ. ಪ್ರಾದೇಶಿಕ ವೈವಿಧ್ಯೀಕರಣದ ಜೊತೆಗೆ ಕಾರ್ಯಭಾರಾತ್ಮಕ ವೈವಿಧ್ಯೀಕರಣವೂ ಸಾಧಿಸಿದೆ. ಆಧಾರವಿದ್ದರೆ ಸಾಲ ಎಂಬ ದೃಷ್ಟಿಯು ಬದಲು, ಉದ್ದೇಶಕ್ಕೆ ಅನುಗುಣವಾಗಿ ಸಾಲ ಎಂಬ ದೃಷ್ಟಿ ಉಂಟಾಗಿದೆ. ಹಣವಿಲ್ಲವೆಂಬ ಕಾರಣದಿಂದಲೇ ಯಾವುದೇ ಆರ್ಥಿಕ ಚಟುವಟಿಕೆ ಸೊರಗಬಾರದು, ಯಾವುದೇ ಅಭಿವೃದ್ಧಿ ಕಾರ್ಯ ನಿಲ್ಲಬಾರದು, ದಾರಿದ್ರ ನಿರ್ಮೂಲನ ಪ್ರಯತ್ನಕ್ಕೆ ಅಡ್ಡಿಯಾಗಬಾರದು ಎಂಬ ಆಶಯ ಬಹುತೇಕ ಫಲಿಸುವಂತಾಗಿದೆ.

ಆದರೆ ಈ ಮೂರು ದಶಕಗಳಲ್ಲಿ ಎದುರಾಗಿರುವ ಸಮಸ್ಯೆಗಳೇನೂ ಸಾಮಾನ್ಯವಲ್ಲ. ಗಾತ್ರಾನುಗುಣ

ವಿಸ್ತರಣೆಯ ಫಲವಾಗಿ ಬ್ಯಾಂಕುಗಳ ಕಲಾಪಗಳಲ್ಲಿ ದಕ್ಷತೆ ಕುಗ್ಗಿತು. ಆಡಳಿತ ವ್ಯವಸ್ಥೆಯ ಹಸ್ತಕ್ಷೇಪ ಅಧಿಕವಾಯಿತು. ತೀರ್ಮಾನ ತೆಗೆದುಕೊಳ್ಳುವ ವಿಚಾರದಲ್ಲಿ ಬ್ಯಾಂಕಿಂಗ್ ವ್ಯವಸ್ಥಾಪಕವರ್ಗದ ಪಾತ್ರ ಬಹುತೇಕ ಇರಲಿಲ್ಲವೆಂದೇ ಹೇಳಬೇಕು. ರಾಜಕೀಯ ಉದ್ದೇಶಗಳೇ ಪ್ರಧಾನವಾದುವು. ಬ್ಯಾಂಕಿಂಗಿನ ನೀತಿ ನಿಯಮಗಳೆಲ್ಲ ಗಾಳಿಯಲ್ಲಿ ತೂರಿ ಹೋದುವು. ಬ್ಯಾಂಕುಗಳಿಗೆ ಬರಬೇಕಾದ ಬಾಕಿ ಭೂತಾಕಾರಕ್ಕೆ ಬೆಳೆಯಿತು. ವಸೂಲಿ ಬಹುತೇಕ ಅಸಾಧ್ಯವೆನಿಸಿತು. ಬ್ಯಾಂಕುಗಳು ನೀಡಿದ ಸಾಲಗಳು ಸರಸ್ವತೀಪ್ರಸನ್ನವಾಗಿ, ಅವೆಲ್ಲ ನಿಷ್ಕ್ರಿಯ ಆಸ್ತಿಗಳಾದುವು. ಪುಸ್ತಕದಲ್ಲಿ ಲಾಭದ ರಾಶಿ. ವಾಸ್ತವವಾಗಿ ಎಲ್ಲವೂ ಮರೀಚಿಕೆ. ಇದರ ಪರಿಣಾಮವಾಗಿ ಬ್ಯಾಂಕುಗಳ ಲಾಭದಾಯಕತೆ ಕುಗ್ಗಿತು.

ನರಸಿಂಹಂ ಸಮಿತಿ

ಈ ಅನುಭವದ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ಸುಧಾರಣೆ ಅತ್ಯಂತ ಜರೂರಾದ್ದು ಎನಿಸಿತು. ಇಡೀ ಅರ್ಥವ್ಯವಸ್ಥೆಯೇ ಮರುಪರಿಶೀಲನೆಗೆ, ಪುನರ್‍ರಚನೆಗೆ, ಕೇಂದ್ರದ ಹಿಡಿತದಿಂದ ಬಿಡುಗಡೆಗೆ ಒಳಗಾಗುವುದು ಅವಶ್ಯವೆನಿಸಿರುವಾಗ, ಬ್ಯಾಂಕಿಂಗ್ ವಲಯ ಇದರಿಂದ ಹೊರಗೆ ಉಳಿಯುವುದು ಹೇಗೆ? ಇದನ್ನು ಪರಿಶೀಲಿಸಿ ಸುಧಾರಣೆಗಳನ್ನು ಶಿಫಾರಸು ಮಾಡಬೇಕೆಂದೇ ನರಸಿಂಹಂ ಸಮಿತಿಯ ರಚನೆ ಆದದ್ದು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಲೆದೋರಿದ್ದ ಸಮಸ್ಯೆಗಳನ್ನೆಲ್ಲ ಪರಿಶೀಲಿಸಿ, ಅವಕ್ಕೆ ಸಮಗ್ರವಾದ ಉಪಾಯಗಳನ್ನು ಸೂಚಿಸಿದ್ದು ನರಸಿಂಹಂ ಸಮಿತಿಯ ಸಾಧನೆ.

ಪುನಸ್ಸಂರಚನೆ

ಮೊದಲನೆಯದಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಪುನಸ್ಸಂರಚನೆಯ ಪ್ರಶ್ನೆ. ದೇಶದಲ್ಲಿರುವ ಬ್ಯಾಂಕಿಂಗ್ ಸಂಸ್ಥೆಗಳ ವಿಸ್ತರಣೆಯಲ್ಲಿ ಯಾವುದೇ ತರ್ಕಬದ್ಧತೆ ಇಲ್ಲ. ಅತಿವ್ಯಾಪ್ತಿ ಹಾಗೂ ಅವ್ಯಾಪ್ತಿಯ ದೋಷಗಳು ಎದ್ದು ಕಾಣುತ್ತಿವೆ. ಇವನ್ನೆಲ್ಲ ನಿವಾರಿಸಲು ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ನಾಲ್ಕು ಸ್ತರಗಳಲ್ಲಿ ಮರುವಿಂಗಡಿಸಬೇಕು, ಪುನಸ್ಸಂರಚಿಸಬೇಕು ಎಂಬುದು ನರಸಿಂಹಂ ಸಮಿತಿಯ ಒಂದು ಮುಖ್ಯ ಶಿಫಾರಸು. ಅಂತರರಾಷ್ಟ್ರೀಯ, ರಾಷ್ಟ್ರೀಯ, ಸ್ಥಳೀಯ ಹಾಗೂ ಗ್ರಾಮೀಣ ಸ್ತರಗಳಲ್ಲಿ ಕೆಲಕೆಲವೇ ಬ್ಯಾಂಕುಗಳು ಇರುವಂತಾಗಬೇಕು ಎಂಬುದು ಅದರ ಸೂಚನೆ.

ವಿಸ್ತರಣೆ

ಬ್ಯಾಂಕ್ ವಿಸ್ತರಣೆಯ ವಿಚಾರದಲ್ಲಿ ಉದಾರ ನೀತಿಯನ್ನು ಅನುಸರಿಸಬೇಕೆಂಬುದು ಸಮಿತಿಯ ಇನ್ನೊಂದು ಸಲಹೆ. ಈ ಹಿಂದೆ ಹೊಸದಾಗಿ ಬ್ಯಾಂಕುಗಳನ್ನು ಸ್ಥಾಪಿಸುವಂತಿರಲಿಲ್ಲ. ಅದಕ್ಕೆ ರಿಸರ್ವ್

ಬ್ಯಾಂಕಿನ, ಸರ್ಕಾರದ ಅನುಮತಿ ಬೇಕಿತ್ತು. ಯಾವುದೇ ಬ್ಯಾಂಕು ಬೆಳೆದರೆ ಅದನ್ನು ಸರ್ಕಾರ ರಾಷ್ಟ್ರೀಕರಿಸಿವುದೆಂಬ ಅಂಜಿಕೆಯೂ ಇತ್ತು. ಇನ್ನು ಮುಂದೆ ಯಾವುದೇ ಬ್ಯಾಂಕಿನ ರಾಷ್ಟ್ರೀಕರಣ ಬೇಡವೆಂಬುದು ನರಸಿಂಹ ಸಮಿತಿಯ ಅಭಿಪ್ರಾಯ. ಖಾಸಗಿ ವಲಯದ ಬ್ಯಾಂಕುಗಳಿಗೂ ಅವಕಾಶವಿರಲಿ, ಬ್ಯಾಂಕಿಂಗ್ ಕ್ಷೇತ್ರದಲ್ಲೂ ಸ್ಪರ್ಧೆಯ ವಾತಾವರಣ ಇರಲಿ ಎಂಬುದು ಸಮಿತಿಯ ಇನ್ನೊಂದು ಸಲಹೆ.

ಬಂಡವಾಳಪರ್ಯಾಪ್ತತೆ

ರಾಷ್ಟ್ರೀಕರಣದ ಅನಂತರ ಬ್ಯಾಂಕುಗಳು ಅಗಾಧವಾಗಿ ಬೆಳೆದಿವೆ. ಅವುಗಳ ಶಾಖೆಗಳು ಹಬ್ಬಿವೆ. ಠೇವಣಿಗಳ ಸಂಗ್ರಹಣೆಯಲ್ಲಿ ಅಗಾಧ ಬೆಳವಣಿಗೆಯಾಗಿದೆ. ಸಾಲ ನೀಡಿಕೆಯೂ ಅಧಿಕವಾಗಿದೆ. ಹೀಗೆ ವಿಸ್ತರಿಸಿದ ಕಲಾಪಗಳಿಗೆ ಅನುಗುಣವಾಗಿ ಬ್ಯಾಂಕುಗಳ ಸ್ವಂತ ಬಂಡವಾಳ ಅಧಿಕವಾಗಿಲ್ಲ. ಇದು ಆರೋಗ್ಯಕರ ಬ್ಯಾಂಕಿಂಗಿನ ಲಕ್ಷಣವಲ್ಲ. ಭದ್ರತೆಗೆ ಇದರಿಂದ ಅಪಾಯ. ಆದ್ದರಿಂದ ಅಂತರ ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ಬ್ಯಾಂಕುಗಳ ಬಂಡವಾಳ ತಳವನ್ನು ವಿಸ್ತರಿಸಬೇಕು, ನಷ್ಟ ಸಂಭಾವ್ಯತಾಧಾರಿತ ಆಸ್ತಿಗಳಿಗೆ ನಿಗದಿಯಾದ ಅನುಪಾತದಲ್ಲಿ ಬಂಡವಾಳ ಇರಬೇಕು. ಬಂಡವಾಳಪರ್ಯಾಪ್ತತೆಯನ್ನು ಕಡೆಗಣಿಸಬಾರದು.

ತರ್ಕಬದ್ಧ ಬಡ್ಡಿ ದರ ಸಂರಚನೆ

ನರಸಿಂಹಂ ಸಮಿತಿಯ ಇನ್ನೊಂದು ಮುಖ್ಯ ಸಲಹೆಯೆಂದರೆ, ಬಡ್ಡಿ ದರಗಳ ವಿನಿಯಮನ ಹಾಗೂ ಬಡ್ಡಿ ಸಂರಚನೆಯ ತರ್ಕ ಬದ್ಧತೆ. ಯೋಜಿತ ಅರ್ಥವ್ಯವಸ್ಥೆಯಲ್ಲಿ ಬಡ್ಡಿ ದರಗಳು ಸರ್ಕಾರದ ನೀತಿಗೆ ಹಾಗೂ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಟ್ಟಿದ್ದುವು. ಬ್ಯಾಂಕುಗಳು ಠೇವಣಿಗಳ ಮೇಲೆ ಯಾವ ಬಡ್ಡಿ ದರಗಳನ್ನು ನೀಡಬೇಕು, ಅವು ನೀಡುವ ಯಾವಯಾವ ಬಗೆಯ ಸಾಲಗಳಿಗೆ ಹಾಗೂ ಯಾವಯಾವ ವಲಯಕ್ಕೆ ನೀಡುವ ನೆರವುಗಳಿಗೆ ಯಾವಯಾವ ದರಗಳಲ್ಲಿ ಬಡ್ಡಿ ವಿಧಿಸಬೇಕು ಎಂಬುದನ್ನೆಲ್ಲ ರಿಸರ್ವ್ ಬ್ಯಾಂಕ್ ಸೂಚಿಸುತ್ತಿತ್ತು. ದುರ್ಬಲವರ್ಗಗಳಿಗೆ ಹಾಗೂ ಆದ್ಯತಾ ವಲಯಕ್ಕೆ ನೀಡುವ ಸಾಲಗಳ ಮೇಲೆ ಸುಲಭ ಬಡ್ಡಿ ದರಗಳನ್ನು ನಿಗದಿಪಡಿಸುತ್ತಿತ್ತು. ಅನೇಕ ವೇಳೆ ಈ ಬಡ್ಡಿ ಸಂರಚನೆ ಅತ್ಯಂತ ಯಾದೃಚ್ಛಿಕವೆಂದನಿಸುತ್ತಿತ್ತು. ವಿವಿಧ ವಲಯಗಳಿಗೆ ಸಂಪನ್ಮೂಲಗಳ ಹರಿವಿನಲ್ಲಿ ಅಡೆತಡೆಗಳುಂಟಾಗುತ್ತಿದ್ದುವು. ಮಾರುಕಟ್ಟೆಯ ಅಗತ್ಯಗಳನ್ನು ಕಡೆಗಣಿಸಿದಂತಾಗುತ್ತಿತ್ತು. ಈ ಪರಿಸ್ಥಿತಿಯನ್ನು ತಪ್ಪಿಸಬೇಕೆಂಬುದು ನರಸಿಂಹ ಸಮಿತಿಯ ಇನ್ನೊಂದು ಶಿಫಾರಸು. ಉಳಿತಾಯದ ಪೂರೈಕೆ, ಬಂಡವಾಳದ ಬೇಡಿಕೆ, ವಿನಿಯೋಜನೆಯ ಗಾತ್ರ ಮತ್ತು ವಿವಿಧ ವಲಯಗಳ ಅಗತ್ಯ – ಇವುಗಳಿಗೆ ಅನುಗುಣವಾಗಿ ಬಡ್ಡಿ ದರಗಳು

ನಿರ್ಧಾರವಾಗಬೇಕೇ ವಿನಾ, ಯಾವುದೇ ಪ್ರಾಧಿಕಾರದ ನಿಯಂತ್ರಣಕ್ಕೆ, ನಿರ್ದೇಶನಕ್ಕೆ ಇದು ಅಧೀನವಾಗಿರಬಾರದು ಎಂಬುದು ನರಸಿಂಹಂ ಸಮಿತಿಯ ಅಭಿಪ್ರಾಯ.

ನಿರ್ದೇಶಿತ ಸಾಲ ನೀತಿ ರದ್ದು

ಸಾಲ ನೀಡಿಕೆ ಮತ್ತು ಬಡ್ಡಿ ದರಗಳಿಗೆ ನೇರವಾಗಿ ಸಂಬಂಧಿಸಿದ ಇನ್ನೊಂದು ವಿಚಾರವೆಂದರೆ, ನಿರ್ದೇಶಿತ ಉದರಿ ಕಾರ್ಯಕ್ರಮ. ಬ್ಯಾಂಕು ಯಾವಯಾವ ವಲಯಕ್ಕೆ ಎಷ್ಟೆಷ್ಟು ಸಾಲ ನೀಡಬೇಕು, ಯಾವ ಬಡ್ಡಿ ದರ ವಿಧಿಸಬೇಕು, ಏನು ಷರತ್ತುಗಳನ್ನು ಹಾಕ ಬೇಕು – ಎಂಬುದೆಲ್ಲ ರಿಸರ್ವ್ ಬ್ಯಾಂಕಿನ ವಿವೇಚನೆಗೆ ಒಳಪಟ್ಟಿತ್ತು, ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯ ಬ್ಯಾಂಕುಗಳಿಗೆ ಇರಲಿಲ್ಲ. ದುರ್ಬಲ ವರ್ಗಗಳಿಗೆ ಸಾಲ ನೀಡುವ ದೇಶವ್ಯಾಪಿ ಕಾರ್ಯಕ್ರಮವೊಂದು ಜಾರಿಗೆ ಬಂದಿತ್ತು. ಸಾಲ ಮೇಳಗಳು ಸರ್ಕಾರ ಘೋಷಿಸಿಕೊಂಡ ಸದುದ್ದೇಶದ ವಿಪರ್ಯಾಸಗಳೆನಿಸಿದ್ದುವು, ವಿಕರಾಳ ರೂಪ ತಳೆದಿದ್ದುವು. ಬ್ಯಾಂಕುಗಳು ಮಂತ್ರಿಗಳು ಹೇಳಿದಂತೆ ಹೆಬ್ಬೆಟ್ಟು ಗುರುತು ಒತ್ತಿಸಿಕೊಂಡು ಸಾಲ ನೀಡಬೇಕಾಗಿತ್ತು. ಈ ಸಮಾರಾಧನೆಗಳು ಬ್ಯಾಂಕ್ ಉದರಿ ನೀತಿಯನ್ನೇ ಗಾಳಿಗೆ ತೂರಿಬಿಟ್ಟುವು. ಈ ವಿವೇಚನಾರಹಿತ ಸಾಲಗಳನ್ನು ಫಲಾನುಭವಿಗಳು ಹಿಂದಿರುಗಿಸಬೇಕಿರಲಿಲ್ಲ. ಅಸಲೇ ಕೊಡಬೇಕಿಲ್ಲವೆಂದ ಮೇಲೆ ಬಡ್ಡಿ ಪಾವತಿ ಮಾಡುವ ವಿಷಯವೆಲ್ಲಿ ಬಂತು? ಬ್ಯಾಂಕುಗಳು ಕಂಡಕಂಡವರಿಗೆಲ್ಲ ಹಣ ಹಂಚುವ, ಆಮೇಲೆ ಒಟ್ಟೊಟ್ಟಾಗಿ ಆ ಸಾಲವನ್ನೆಲ್ಲ ಮಾಫಿ ಮಾಡುವ, ಮನ್ನಾ ಮಾಡುವ, ಸರ್ಕಾರದ ರಬ್ಬರ್ ಠಸ್ಸೆಗಳಾಗಿ ಪರಿಣಮಿಸಿದುವು. ಆದ್ದರಿಂದ ನಿರ್ದೇಶಿತ ಸಾಲ ನೀಡಿಕೆಯನ್ನು ಕ್ರಮಕ್ರಮವಾಗಿ ಕಡಮೆ ಮಾಡಿ ರದ್ದು ಮಾಡಬೇಕು. ಆದ್ಯತಾವಲಯವನ್ನು ಕಟ್ಟುನಿಟ್ಟಾದ ವ್ಯಾಖ್ಯೆಗೆ ಒಳಪಡಿಸಬೇಕು. ಬ್ಯಾಂಕ್‌ಸಾಲ ಸಾರ್ಥಕವಾಗಬೇಕೆಂಬುದು ನರಸಿಂಹಂ ಸಮಿತಿಯ ಇನ್ನೊಂದು ಆಶಯ.

ಮೀಸಲು ಅನುಪಾತ ಇಳಿತ

ಸರ್ಕಾರದ ಒಡೆತನಕ್ಕೆ ಒಳಪಟ್ಟ ಬ್ಯಾಂಕುಗಳು ಸರ್ಕಾರದ ದರದುಗಳಿಗೆ ಹಣ ಒದಗಿಸುವ ಯಂತ್ರಗಳಾಗಿ ಮಾರ್ಪಟ್ಟಿದ್ದುವು. ಸರ್ಕಾರ ಯೋಜನೆಗಳ ಅಡಿಯಲ್ಲಿ ಹಾಗೂ ಬೇರೆ ಉದ್ದೇಶಗಳಿಗಾಗಿ ಅಗಾಧವಾಗಿ ವೆಚ್ಚ ಮಾಡಬೇಕಾಗಿತ್ತು. ಇವಕ್ಕೆ ಬ್ಯಾಂಕುಗಳು ಹಣ ಒದಗಿಸುವಂತೆ ಮಾಡಲು ಸರ್ಕಾರಕ್ಕೆ ಇದ್ದ ಒಂದು ಉಪಾಯವೆಂದರೆ, ಪರಿನಿಯತ ದ್ರವತ್ವ ಅನುಪಾತ – ಎಂದರೆ ಬ್ಯಾಂಕುಗಳು ತಮ್ಮ ಠೇವಣಿಗಳ ಹಣದಲ್ಲಿ ಒಂದು ಗೊತ್ತಾದ ಹಣವನ್ನು ಸರ್ಕಾರಿ ಪ್ರತಿಭೂತಿಗಳಲ್ಲಿ ತೊಡಗಿಸಬೇಕೆಂಬ ನಿಯಮ. ಈ ಸರ್ಕಾರಿ

ಪ್ರತಿಭೂತಿಗಳನ್ನು ಯಾವಾಗ ಬೇಕಾದರೂ ಬ್ಯಾಂಕುಗಳು ಸುಲಭವಾಗಿ ನಗದಾಗಿ ಪರಿವರ್ತಿಸಿಕೊಳ್ಳಬಹುದೆಂಬುದು ನಂಬಿಕೆ. ಎಂದರೆ ಅವುಗಳನ್ನು ಹೊಂದಿದ್ದರೆ ಬ್ಯಾಂಕು ದ್ರವತ್ವ (ನಗದು ಗುಣ ಅಥವಾ ಸಾಮರ್ಥ್ಯ) ಹೊಂದಿದ್ದಂತೆ. ಒಟ್ಟು ಠೇವಣಿಯಲ್ಲಿ ಯಾವ ಪ್ರಮಾಣವನ್ನು ಈ ಪ್ರತಿಭೂತಿಗಳ ರೂಪದಲ್ಲಿಡಬೇಕೆಂಬುದನ್ನು ಶಾಸನದ ಮೂಲಕ ಗೊತ್ತು ಪಡಿಸಲಾಗುತ್ತಿತ್ತು. ಶಾಸನ ವಿಧಿಸಿದ ನಿಯಮವಿದು ಅಥವಾ ಶಾಸನ ವಿಧಿಸಿದ (ಪರಿನಿಯತ) ದ್ರವತ್ವ (ನಗದು ಗುಣ) ಅನುಪಾತದ ನಿಯಮ. ಬ್ಯಾಂಕುಗಳ ಠೇವಣಿಗಳಲ್ಲಿ ಹೆಚ್ಚು ಕಡಮೆ ಮೂರನೆಯ ಒಂದು ಪಾಲನ್ನು ಇದಕ್ಕಾಗಿ ತೆಗೆದಿರಿಸಬೇಕಾಗುತ್ತಿತ್ತು. ಬ್ಯಾಂಕುಗಳ ಕೈಯಲ್ಲಿ ಹೆಚ್ಚು ಹಣವಿದ್ದರೆ ವಿವೇಚನಾರಹಿತವಾಗಿ ಎಲ್ಲ ಬಗೆಯ ಉದ್ಯಮಗಳಿಗೂ ಇತರ ಚಟುವಟಿಕೆಗಳಿಗೂ ಅವು ಸಾಲ ನೀಡಬಹುದು. ದೇಶದಲ್ಲಿ ಹಣದುಬ್ಬರದ ಪರಿಸ್ಥಿತಿಗೆ ಎಡೆ ಉಂಟುಮಾಡಬಹುದು. ಆದ್ದರಿಂದ ಬ್ಯಾಂಕುಗಳು ಸುಭದ್ರವಾಗಿ ಆರೋಗ್ಯಕರವಾಗಿ ಕಲಾಪ ನಡೆಸುವಂತೆ ಅವುಗಳ ರೆಕ್ಕೆ ಪುಕ್ಕಗಳನ್ನು ಕತ್ತರಿಸುವ ಉದ್ದೇಶದಿಂದ ಬ್ಯಾಂಕುಗಳು ಠೇವಣಿಗಳಲ್ಲಿ ಸ್ಥೂಲವಾಗಿ ಶೇ.15ರಷ್ಟು ಭಾಗವನ್ನು ಕಡ್ಡಾಯವಾಗಿ ರಿಸರ್ವ್ ಬ್ಯಾಂಕಿನ ಬಳಿ ಇಡಬೇಕೆಂಬ ನಿಯಮವಿತ್ತು. ಬ್ಯಾಂಕುಗಳ ಉಸಿರಾಟಕ್ಕೆ ಅನೇಕ ವೇಳೆ ಇದು ತೊಂದರೆ ಒಡ್ಡುತ್ತಿದೆಯೆನಿಸಿತ್ತು. ಈ ನಗದು ಮೀಸಲು ಅನುಪಾತ ಬಹಳ ಕಠಿಣ ಎಂದು ಹಲವರು ಹೇಳುತ್ತಿದ್ದರು. ಪರಿನಿಯತ ದ್ರವತ್ವ ಅನುಪಾತ, ನಗದು ಮೀಸಲು ಅನುಪಾತ, ಆದ್ಯತಾ ವಲಯಕ್ಕೆ ಸುಲಭ ದರದಲ್ಲಿ ಸಾಲ ನೀಡಿಕೆ – ಈ ಮೂರು ಕ್ರಮಗಳಿಂದಾಗಿ ಬ್ಯಾಂಕುಗಳ ಸುಮಾರು ಮೂರನೆಯ ಎರಡರಷ್ಟು ಸಂಪನ್ಮೂಲಗಳೇ ಅವುಗಳ ವ್ಯವಹಾರಕ್ಕೆ ಇಲ್ಲದಂತಾದಾಗ, ಕೃಶವಾದ ಸಂಪನ್ಮೂಲಗಳಿಂದ ಬ್ಯಾಂಕುಗಳು ಹೇಗೆ ತಾನೇ ಲಾಭಪ್ರದವಾಗಿ ಕಲಾಪ ನಡೆಸಿಯಾವು? ಹೀಗಾಗಿ, ಅನೇಕ ಬ್ಯಾಂಕುಗಳು ನಷ್ಟಜೀವಿಗಳೆನಿಸಿದುವು; ಅವುಗಳ ಅಂತಿಮ ಲೆಕ್ಕಗಳ ತಳಗಳು ರಕ್ತವರ್ಣಕ್ಕೆ ತಿರುಗಿದವು; ಮುಟ್ಟಿದರೆ ಚುರುಕು ಮುಟ್ಟಿಸತೊಡಗಿದುವು. ಭಾರತೀಯ ಬ್ಯಾಂಕುಗಳೆಂಬ ಡಿನೋಸಾರುಗಳು ಸಂಪೂರ್ಣವಾಗಿ ನಿರ್ವಂಶಿಗಳಾಗಿ ಅಳಿದುಹೋಗುವ ಕಾಲ ಬಹುದೂರವಿಲ್ಲ ಎಂದು ಅನೇಕರು ಭಾವಿಸಿದ್ದರು. ಅಂತೆಯೇ ನರಸಿಂಹಂ ಸಮಿತಿ ಈ ಪರಿಸ್ಥಿತಿಯನ್ನು ದೂರ ಮಾಡಲು ಸಲಹೆ ನೀಡಿತು. ಬ್ಯಾಂಕುಗಳು ರಕ್ತಹೀನತೆಯಿಂದ ನರಳದಂತೆ – ಬೇಕಾದಾಗ ಅವಕ್ಕೆ ನಗದು ದೊರಕುವಂತೆ ಮಾಡುವ ಉದ್ದೇಶದಿಂದ ನಿಯೋಜಿಸಲಾದ ಪರಿನಿಯತ (ಶಾಸನ ವಿಧಿಸಿದ) ದ್ರವತ್ವ (ನಗದು ಗುಣ) ಹಾಗೂ ನಗದು

ಮೀಸಲು ಅನುಪಾತಗಳನ್ನು ಕ್ರಮಕ್ರಮವಾಗಿ ಇಳಿಸಿ, ಬ್ಯಾಂಕು ಆರೋಗ್ಯ ಸಾಧನೆಗೆ ಹಾಗೂ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಅಗತ್ಯವಾಗುವ ಮಟ್ಟದಲ್ಲಿ ಇವನ್ನು ನಿಲ್ಲಿಸಬೇಕೆಂಬುದು ನರಸಿಂಹಂ ಸಮಿತಿಯ ಇನ್ನೊಂದು ಆಶಯ.

ಅನುಮಾನ/ಕರಡು ಸಾಲ ಮೀಸಲು

ಸರ್ಕಾರದ ಒಡೆತನಕ್ಕೆ ಸೇರಿದ ಬ್ಯಾಂಕುಗಳು ಸರ್ಕಾರದ ನಾನಾ ನಿರ್ದೇಶನಗಳಿಗೆ ಒಳಪಟ್ಟು ತಮ್ಮ ಸಾಲ ನೀಡಿಕೆಯ ಕಲಾಪವನ್ನು ನಡಸಬೇಕಾಗಿ ಬಂದಾಗ, ಇಂಥ ಸಂದರ್ಭಗಳಲ್ಲಿ ಅವಶ್ಯವಾಗಿರಬೇಕಾದ ವಿವೇಚನೆ ನಷ್ಟವಾದಾಗ, ಬ್ಯಾಂಕುಗಳ ಮುಂಗಡಗಳಲ್ಲಿ ಗಮನಾರ್ಹ ಭಾಗ ಆನುಮಾನ ಸಾಲಗಳಾಗಿ ಪರಿಣಮಿಸಿದ್ದು ಸಹಜವೇ. ಬ್ಯಾಂಕ್ ಉದರಿಗೆ ಪ್ರತಿಯಾಗಿ ಗಳಿಸಲಾದ ಆಸ್ತಿಗಳು ಕಳಪೆಯಾಗಿದ್ದುವು. ಸಾಲಗಳ ಗುಣಮಟ್ಟ ಅಸಮರ್ಪಕವೆನಿಸಿತು. ಅನುಮಾನ ಹಾಗೂ ಕರಡು ಋಣಗಳಿಗೆ ಸಾಕಷ್ಟು ಉಪಬಂಧ ಮಾಡದಿದ್ದದ್ದು ಒಂದು ದೋಷ. ಬ್ಯಾಂಕ್ ಆಸ್ತಿಗಳನ್ನು ಆರೋಗ್ಯಕರವಾದ ರೀತಿಯಲ್ಲಿ ಪುನರ್ರಚಿಸುವುದು ಅಗತ್ಯವಾಗಿತ್ತು. ಬ್ಯಾಂಕುಗಳು ಈ ಕಡೆಗೆ ಸಾಕಷ್ಟು ಲಕ್ಷ್ಯಕೊಡಲು ಸಾಧ್ಯವಾಗದಂಥ ಪರಿಸ್ಥಿತಿ ಉದ್ಭವಿಸಿತ್ತು. ಬ್ಯಾಂಕುಗಳು ಬಿಳಿಯಾನೆಗಳು, ಅವು ನಷ್ಟಜೀವಿಗಳು ಎಂಬ ಅಪವಾದವನ್ನು ತಪ್ಪಿಸಿಕೊಳ್ಳುವುದಕ್ಕೆ ಅವು ಯತ್ನಿಸಿದುವು. ಹೀಗಾಗಿ ಬ್ಯಾಂಕುಗಳ ಅಂತಿಮ ಲೆಕ್ಕಗಳು ಹಾಗೂ ಆಸ್ತಿ–ಹೊಣೆ ತಃಖ್ತೆಗಳು ಅವುಗಳ ನಿಜಸ್ಥಿತಿಯನ್ನು ತೋರಿಸುವಂತಿರಲಿಲ್ಲ. ನೀಡಿದ ಸಾಲಗಳ ವಸೂಲಿಯಾಗದೆ ಸಂಭವಿಸಬಹುದಾದ ನಷ್ಟವನ್ನು ಲಾಭನಷ್ಟ ತಃಖ್ತೆಯ ಲಾಭದಿಂದ ತೆಗೆದಿರಿಸಿದ್ದು ಇದಕ್ಕೆ ಕಾರಣ. ಬ್ಯಾಂಕುಗಳು ಈ ನಷ್ಟ ಸಂಭಾವ್ಯತೆಗೆ ಉಪಬಂಧ ಮಾಡಬೇಕು; ಅವುಗಳ ಆಸ್ತಿಗಳ ಪುನರ್ರಚನೆಗಾಗಿ, ಅವಕ್ಕೆ ಆರೋಗ್ಯ ದೊರಕಿಸಿಕೊಡುವ ಸಲುವಾಗಿ ಆಸ್ತಿ, ಪುನರ್ರಚನಾ ನಿಧಿಯೊಂದನ್ನು ರಚಿಸಬೇಕು ಎಂದು ನರಸಿಂಹಂ ಸಮಿತಿ ಶಿಫಾರಸು ಮಾಡಿತು.

ರಿಸರ್ವ್ ಬ್ಯಾಂಕ್ ಅಧಿಕಾರ

ಭಾರತೀಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಇನ್ನೊಂದು ದಯನೀಯ ಸಂಗತಿಯೆಂದರೆ, ಅವು ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಎರಡಕ್ಕೂ ತಗ್ಗಿ ಬಗ್ಗಿ ನಡೆಯಬೇಕಾಗಿದ್ದುದು. ಹೀಗಿದ್ದಾಗ ಅವ್ಯವಸ್ಥೆ, ಗೊಂದಲವುಂಟಾಗುವುದು ಸಹಜ. ಮಾರುಕಟ್ಟೆಯನ್ನು ನಾನಾ ದಿಗ್ಬಂಧನಗಳಿಂದ ಬಿಡುಗಡೆಮಾಡಿ ಉದಾರೀಕರಣವನ್ನು ಸಾಧಿಸುವ ಸಂಪೂರ್ಣ ಹೊಣೆ ಒಂದು ಸಂಸ್ಥೆಗೆ ಒಳಪಡಿಸಬೇಕು. ರಿಸರ್ವ್ ಬ್ಯಾಂಕ್ ಕೇಂದ್ರೀಯ ಬ್ಯಾಂಕಾದ್ದರಿಂದ ಈ

ಕಾರ್ಯ ಭಾರವನ್ನು ಅದಕ್ಕೆ ಸಂಪೂರ್ಣವಾಗಿ ವಹಿಸಿಕೊಡಬೇಕೆಂಬುದು ಕೂಡ ನರಸಿಂಹಂ ಸಮಿತಿಯು ಅಭಿಪ್ರಾಯ.

ಈ ಸಮಿತಿಯ ವರದಿಯಲ್ಲಿ ಮಾಡಲಾದ ನಾನಾ ಸಲಹೆಗಳನ್ನು ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಪರಿಶೀಲಿಸಿ ಅವನ್ನು ಕ್ರಮಕ್ರಮವಾಗಿ ಜಾರಿಗೆತರುವುದರಲ್ಲಿ ನಿರತವಾದುವು. ಬ್ಯಾಂಕಿಂಗ್ ವಲಯದ ಸುಧಾರಣೆಯ ಕಾರ್ಯವನ್ನು ರಿಸರ್ವ್ ಬ್ಯಾಂಕ್ ಅತ್ಯಂತ ಕಳಕಳಿಯಿಂದ ಕೈಗೆತ್ತಿಕೊಂಡಿತು. ನರಸಿಂಹಂ ಸಮಿತಿಯ ವರದಿಯ ಬಗ್ಗೆ ಟೀಕೆಗಳೂ ಬರದಿರಲಿಲ್ಲ. ತೀವ್ರ ಆರ್ಥಿಕ ಬಿಕ್ಕಟ್ಟನ್ನೊದಗಿಸುತ್ತಿದ್ದ ಕೇಂದ್ರ ಸರ್ಕಾರ ಅಂತರರಾಷ್ಟ್ರೀಯ ಹಣ ನಿಧಿ ಮತ್ತು ವಿಶ್ವ ಬ್ಯಾಂಕಿನ ಒತ್ತಡಕ್ಕೆ ಒಳಗಾಗಿ ಈ ಕಠೋರ ಕ್ರಮಗಳನ್ನು ಜಾರಿಗೆ ತರಲು ಒಂದು ನೆಪವಾಗಿ ನರಸಿಂಹಂ ಸಮಿತಿಯನ್ನು ನೇಮಿಸಿತೆಂದೂ ಆ ಸಮಿತಿಯ ಶಿಫಾರಸುಗಳೆಲ್ಲ ಈ ಸಂಸ್ಥೆಗಳು ಹೇಳಿ ಬರೆಯಿಸಿದವೆಂದೂ ಆರೋಪಗಳು ಬಂದುವು. ಇಡೀ ಆರ್ಥಿಕ ಸುಧಾರಣೆಗೆ ವ್ಯಾಪಕವಾದ ವಿರೋಧ ಇಲ್ಲದಿರಲಿಲ್ಲ. ಸರ್ಕಾರಿ ವಲಯವನ್ನು ವಿಸರ್ಜಿಸಿ, ಖಾಸಗಿ ವಲಯ ಪ್ರಧಾನವಾದ ಬಂಡವಾಳಶಾಹಿ ವ್ಯವಸ್ಥೆಗೆ ಕೆಂಪು ಜಮಖಾನೆ ಹಾಸಲು ಸರ್ಕಾರ ಉದ್ಯುಕ್ತವಾಗಿದೆಯೆಂದೂ ಹೇಳಲಾಗುತ್ತಿತ್ತು.

ಅಂತೂ ಈ ಆರು ವರ್ಷಗಳಲ್ಲಿ ಬ್ಯಾಂಕಿಂಗ್ ವಲಯ ಸುಧಾರಣೆಯ ಹಾದಿಯಲ್ಲಿ ನಡೆದಿದೆ. ಇದನ್ನು ಮುನ್ನಡೆ ಎಂದು ಕೆಲವರು ಪ್ರಶಂಸಿಸಿದರೆ ಇದು ಹಿನ್ನಡೆಯೆಂದು ಹೇಳುವವರೂ ಇಲ್ಲದಿಲ್ಲ.

ಸುಧಾರಣೆಯ ಕ್ರಮಗಳು

ಬಂಡವಾಳಪರ್ಯಾಪ್ತತೆ : ಮೊದಲನೆಯದಾಗಿ, ಬ್ಯಾಂಕುಗಳ ಬಂಡವಾಳ ಪರ್ಯಾಪ್ತತೆ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಉದ್ದವಾಗಿ ಬೆಳೆದರೆ ಹಾಸಿಗೆಯನ್ನು ಉದ್ದಮಾಡಲೇ ಬೇಕು. ಕಾಲು ಕತ್ತರಿಸುವುದು ಹಾನಿಕರ. ಬ್ಯಾಂಕಿನ ನಷ್ಟ ಸಂಭಾವ್ಯತ್ಯಾಭರಿತ ಆಸ್ತಿಗಳ ಶೇ.8ರಷ್ಟಾದರೂ ಬಂಡವಾಳ ಇರತಕ್ಕದ್ದೆಂಬುದು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ. ಒಂದು ಗೊತ್ತಾದ ಅವಧಿಯೊಳಗೆ ಇದನ್ನು ಸಾಧಿಸಬೇಕೆಂಬುದು ರಿಸರ್ವ್ ಬ್ಯಾಂಕಿನ ಆದೇಶ, ಬ್ಯಾಂಕುಗಳಿಗೆ ಹೆಚ್ಚಿನ ಸಂಪನ್ಮೂಲಗಳು ದೊರಕಿ, ಅವು ಬಿಡುಬೀಸಾಗಿ ತಮ್ಮ ಉದರಿ ನೀಡಿಕೆಯ ಕಲಾಪಗಳಲ್ಲಿ ತೊಡಗುವಂತೆ, ನಮ್ಯತೆ ಪಡೆದುಕೊಳ್ಳುವಂತೆ ಮಾಡಲು ನಗದು ಮೀಸಲು ಅನುಪಾತ ಮತ್ತು ಪರಿನಿಯುತ (ಶಾಸನ ವಿಧಿಸಿದ) ದ್ರವತ್ವ (ನಗದು ಗುಣ) ಅನುಪಾತಗಳನ್ನು ಹಂತಹಂತವಾಗಿ ಇಳಿಸುವ ಕ್ರಮವನ್ನು ರಿಸರ್ವ್ ಬ್ಯಾಂಕ್ ತೆಗೆದುಕೊಂಡಿದೆ. ಮಾರುಕಟ್ಟೆಗೆ ಹೆಚ್ಚು ಹಣ ಹಾಗೂ ಉದ್ಯಮಗಳಿಗೆ ಹೆಚ್ಚು ಉದರಿ ಒದಗಿ

ಬರುವಂತೆ ನೋಡಿ ಕೊಳ್ಳಲಾಗುತ್ತಿದೆ. ಉದರಿಯಿಲ್ಲದೆ ಯಾವುದೇ ಉದ್ಯಮ ಸೊರಗಬಾರದು, ಆರ್ಥಿಕ ಬೆಳವಣಿಗೆ ಅಕುಂಠಿತವಾಗಿ ಸಾಗಬೇಕು ಎಂಬುದು ಉದ್ದೇಶ. ಈ ಹಾದಿಯಲ್ಲಿ ನಡುನಡುವೆ ರಿಸರ್ವ್ ಬ್ಯಾಂಕು ಕೆಲವು ಆತಂಕಗಳನ್ನು ಎದುರಿಸಬೇಕಾಗಿ ಬಂದು, ತಾತ್ಕಾಲಿಕವಾಗಿ ನಗದು ಮೀಸಲು ಅನುಪಾತವನ್ನು ಸ್ವಲ್ಪ ಏರಿಸಬೇಕಾಗಿ ಬಂದರೂ, ಒಟ್ಟಿನಲ್ಲಿ ಈ ಕುರಿತಂತೆ ದಿಕ್ಕು ಬದಲಾಗಿಲ್ಲ.

ಬಡ್ಡಿ ದರ ಸಂರಚನೆ

ಮುಕ್ತ ಮಾರುಕಟ್ಟೆಯ ಒಂದು ಮುಖ್ಯ ಲಕ್ಷಣವೆಂದರೆ, ಬಡ್ಡಿ ದರಗಳ ಸ್ವತಂತ್ರ ಚಲನಶೀಲತೆ. ಬಡ್ಡಿ ದರಗಳ ಸಂರಚನೆಯ ತರ್ಕಬದ್ಧತೆ. ರಿಸರ್ವ್ ಬ್ಯಾಂಕು ನಾನಾ ಬಡ್ಡಿ ದರಗಳನ್ನು ನಿರ್ಧರಿಸಿ ಜಾರಿಗೆ ತರುವ ಕಾರ್ಯವನ್ನು ಬಿಟ್ಟುಕೊಟ್ಟಿದೆ. ನಿಧಿಗಳ ಬೇಡಿಕೆ ಪೂರೈಕೆಗಳಿಗೆ ಅನುಗುಣವಾಗಿ ಬಡ್ಡಿ ದರಗಳು ಚಲಿಸುವುದಕ್ಕೆ ಎಡೆಮಾಡಿಕೊಡಲಾಗಿದೆ. ಆರಂಭಿಕ ತೊಡಕುಗಳು ಹಲವಾರು. ದೀರ್ಘಕಾಲದ ಜಡತೆಯಿಂದಾಗಿ ಕೀಲುಗಳು ಜಡ್ಡುಕಟ್ಟಿವೆ. ಆ ಜಡ್ಡು ಬಿಟ್ಟಾಗ ಸಹಜ ಚಲನೆ ಸಾಧ್ಯವಾದೀತು. ರಿಸರ್ವ್ ಬ್ಯಾಂಕು ಅಂತಿಮವಾಗಿ ವಿಧಿಸುವ ಬಡ್ಡಿ ದರವನ್ನು ಆಗಾಗ ಘೋಷಿಸುತ್ತಿದೆ. ಇದೊಂದು ಪರಾಮರ್ಶನ ದರ. ದೇಶದ ಆರ್ಥಿಕ ಸ್ಥಿತಿಗತಿಗಳ ದೃಷ್ಟಿಯಿಂದ ಬಡ್ಡಿ ದರ ನೀತಿ ಹೇಗಿರಬೇಕೆಂಬ ಬಗ್ಗೆ ರಿಸರ್ವ್ ಬ್ಯಾಂಕು ತನ್ನ ಇಂಗಿತವನ್ನು ಈ ರೀತಿ ವ್ಯಕ್ತಪಡಿಸುತ್ತಿದೆ. ಇದಕ್ಕೆ ಅನುಗುಣವಾಗಿ ಠೇವಣಿ ಬಡ್ಡಿ ದರ, ಬ್ಯಾಂಕುಗಳು ನೀಡುವ ಸಾಲದ ಮೂಲ ಬಡ್ಡಿ ದರ, ಇತರೆ ದರಗಳು ಎಲ್ಲವೂ ಹೊಂದಿಕೊಳ್ಳುವ ಪ್ರವೃತ್ತಿಗಳು ದೃಢವಾಗುವ ಸೂಚನೆ ತೋರುತ್ತಿದೆ. ಇಡೀ ಅರ್ಥವ್ಯವಸ್ಥೆಯೇ ಮುಕ್ತ ವಾತಾವರಣದಲ್ಲಿ ಕಾರ್ಯನಿರ್ವಹಿಸುವಂತೆ ಆದಾಗ, ಬ್ಯಾಂಕಿಂಗ್ ಮತ್ತು ಇತರ ಹಣಕಾಸು ವಲಯಗಳು ಬಲಿಷ್ಠವಾಗಿ ಬೆಳೆದಾಗ ಆರೋಗ್ಯಕರವಾದ ರೀತಿಯಲ್ಲಿ ಇದು ವರ್ತಿಸಿತು. ಇದು ಕ್ರಮೇಣ ಸಾಧಿಸಬೇಕಾದ ಬೆಳವಣಿಗೆ.

ವರಮಾನ ಗುರುತಿಸುವಿಕೆಯ ಸೂತ್ರಗಳು

ಬ್ಯಾಂಕ್ ವ್ಯವಹಾರ ಸುರಕ್ಷಿತವಾಗಿರಬೇಕು, ಆರೋಗ್ಯಕರವಾಗಿರಬೇಕು. ಆದರೆ ಬ್ಯಾಂಕುಗಳು ಅಭದ್ರ ಬುನಾದಿಯ ಮೇಲೆ ತಮ್ಮ ಹಣದ ಸೌಧವನ್ನು ರಚಿಸಿಕೊಂಡಾಗ, ಯಾವಾಗೆಂದರೆ ಆಗ ಇಸ್ಪೀಟಿನ ಮನೆಯಂತೆ ಆ ಸೌಧ ಕುಸಿದೀತು. ಮರಳಿನ ಮೇಲೆ ಭವನದ ನಿರ್ಮಾಣ ಮಾಡುವುದು ಮೂರ್ಖತನದ ಪರಮಾವಧಿ. ಬ್ಯಾಂಕುಗಳು ರಾಷ್ಟ್ರೀಕೃತವಾದವಾಗಿರಲಿ, ಖಾಸಗಿಯವೇ ಆಗಿರಲಿ, ಎರಡೂ ಬಗೆಯವಕ್ಕೂ ಈ ಮಾತು ಅನ್ವಯ. ಒಳ್ಳೆಯ ಸಾಲ, ಕೆಟ್ಟ ಸಾಲ, ಅನುಮಾನ

ಸಾಲ ಎಲ್ಲವುಗಳ ಮೇಲೂ ಬಡ್ಡಿ ವಸೂಲಾಗುವುದೆಂದು ನಂಬಿ, ಅದನ್ನೆಲ್ಲ ವರಮಾನವೆಂದು ಲಾಭ–ನಷ್ಟ ಲೆಕ್ಕದಲ್ಲಿ, ಬರಲಿರುವ ವರಮಾನವೆಂದು ಆಸ್ತಿ–ಹೊಣೆ ತಃಖ್ತೆಯಲ್ಲಿ, ತೋರಿಸುತ್ತಿದ್ದ ಬ್ಯಾಂಕುಗಳು ಈ ಸಂತೃಪ್ತ ಧೋರಣೆಯನ್ನು ತೊರೆಯಬೇಕಾಯಿತು. ವಸೂಲಾಗಬೇಕಿದ್ದ ಬಡ್ಡಿಯಲ್ಲಿ ಯಾವುದು ಗಟ್ಟಿ, ಯಾವುದು ಜಳ್ಳು ಎಂಬುದನ್ನು ಪತ್ತೆ ಹಚ್ಚಿ, ಗಟ್ಟಿ ಕಾಳನ್ನು ಮಾತ್ರ ಲಾಭವೆಂದು ಪರಿಗಣಿಸುವುದು ಸಾಧ್ಯವಾಗುವಂತೆ ವಿವೇಚನಾಯುತವಾದ ಮಾನಗಳನ್ನು (ನಾರ್ಮ್) ಅನುಸರಿಸಬೇಕಾಯಿತು. ಕರಡು ಹಾಗೂ ಅನುಮಾನ ಋಣಗಳಿಗೆ ಉಪಬಂಧ ಮಾಡಲು ಸೂತ್ರಗಳು ಜಾರಿಗೆ ಬಂದುವು. ಉತ್ಪ್ರೇಕ್ಷೆ ತಪ್ಪಿತು. ಬೊಜ್ಜು ಕರಗಿತು. ಅನೇಕ ಬ್ಯಾಂಕುಗಳ ತಳಗಳು ತಾತ್ಕಾಲಿಕವಾಗಿ ಕೆಂಪು ಅಕ್ಷರಗಳಿಂದ ಕೂಡಿದುವು. ತೆಳ್ಳಗೆ ಬಳಕುವ, ಸ್ಪರ್ಧಾತ್ಮಕವಾದ, ಆರೋಗ್ಯಕರವಾದ ಬ್ಯಾಂಕಿಂಗ್ ಸಂಸ್ಥೆಗಳೇ ನರಸಿಂಹಂ ಸಮಿತಿಯ ಕನಸು.

ಸಮಸ್ಯೆಗಳು

ಆದರೆ ನರಸಿಂಹಂ ಸಮಿತಿಯ ಎಲ್ಲ ಸಲಹೆಗಳನ್ನೂ ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ರಿಸರ್ವ್ ಬ್ಯಾಂಕಾಗಲಿ ಸರ್ಕಾರವಾಗಲಿ ಮಾಡಲಿಲ್ಲ. ದೇಶದಲ್ಲಿ ಬ್ಯಾಂಕುಗಳ ಸಂಖ್ಯೆಯನ್ನು ನಿಗದಿಗೊಳಿಸಿ, ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಸ್ಥಳೀಯ ಮತ್ತು ಗ್ರಾಮೀಣ ಎಂಬ ಸ್ತರಗಳಲ್ಲಿ ಕೆಲಕೆಲವು ಬ್ಯಾಂಕುಗಳು ಕಾರ್ಯನಿರತವಾಗುವಂತೆ ಅವುಗಳನ್ನು ಪುನರ್ರಚಿಸುವ ಬಗ್ಗೆ ಯಾವುದೇ ಪ್ರಯತ್ನ ಮಾಡಲಿಲ್ಲ. ಬ್ಯಾಂಕುಗಳು ಸಂಪೂರ್ಣವಾಗಿ ಸ್ವಯಂ ಆಡಳಿತ ಸಂಸ್ಥೆಗಳಾಗಲಿಲ್ಲ. ಬಂಡವಾಳಪರ್ಯಾಪ್ತತೆಯನ್ನು ಸಾಧಿಸುವ ಸಲುವಾಗಿ ಕೆಲವು ಬ್ಯಾಂಕುಗಳು ಸಾರ್ವಜನಿಕರಿಗೆ ಷೇರುಗಳನ್ನು ನೀಡಿ ಬಂಡವಾಳ ಸಂಗ್ರಹಿಸಿವೆ. ಈ ಪ್ರಕ್ರಿಯೆ ಸಂಪೂರ್ಣವಾಗಿಲ್ಲ. ಇನ್ನೂ ಕೆಲವು ತೊಡಕುಗಳಿವೆ.

ಕೆಲವು ಸಮಸ್ಯೆಗಳೂ ತಲೆದೋರಿವೆ. ಹಣಕಾಸು ವಹಿವಾಟುಗಳ ಉದಾರೀಕರಣ, ದೇಶೀಯ ಮಾರುಕಟ್ಟೆಗಳ ವಿಮೋಚನೆ ವಿದೇಶೀ ಮಾರುಕಟ್ಟೆಗಳೊಡನೆ ಸಂಯೋಜನೆ, ವಿದೇಶೀ ಬ್ಯಾಂಕುಗಳ ಆಗಮನ, ಕಂಪ್ಯೂಟರೀಕರಣ, ಹಣಕಾಸು ವ್ಯವಹಾರ ಕುರಿತ ಮಾಹಿತಿಯ ಸ್ಫೋಟ, ಹಣಕಾಸುಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ನಷ್ಟ ಸಂಭಾವ್ಯತೆಯ ಹೆಚ್ಚಳ – ಇವೆಲ್ಲ ಈಗ ಅಕರಾಳ ವಿಕರಾಳ ರೂಪ ಹಾಗೂ ಗಾತ್ರಗಳನ್ನು ತಳೆಯುತ್ತಿವೆ. ಉದರಿ ಮತ್ತು ಮಾರುಕಟ್ಟೆ ನಷ್ಟ ಸಂಭಾವ್ಯತೆ, ಬಡ್ಡಿ ದರ ಕುರಿತಂತೆ ನಷ್ಟ ಸಂಭಾವ್ಯತೆ, ಬೆಲೆಗಳಿಗೆ ಸಂಬಂಧಿಸಿದಂತೆ ನಷ್ಟಭಯ, ವಿದೇಶೀ ವಿನಿಮಯ ಕ್ಷೇತ್ರದಲ್ಲಿ

ಗಂಡಾಂತರದ ಭಯ, ದ್ರವತ್ವ ಸಂಬಂಧಿತ ನಷ್ಟಭಯ – ಇವನ್ನೆಲ್ಲ ನಮ್ಮ ಬೃಹತ್ ಬ್ಯಾಂಕುಗಳು ಇಂದು ಎದುರಿಸಬೇಕಾಗಿದೆ. ತೆಳ್ಳಗೆ, ಬೆಳ್ಳಗೆ ಬಳಕುವ ವಿದೇಶಿ ಬ್ಯಾಂಕುಗಳೂ, ಖಾಸಗಿ ವಲಯವ ಬ್ಯಾಂಕುಗಳೂ ಭಾರೀ ಸವಾಲು ಒಡ್ಡಿವೆ. ನಮ್ಮ ಡಿನೋಸಾರ್‌ಸದೃಶ ಬ್ಯಾಂಕುಗಳು ಎಲ್ಲಿಗೆ ಹೋಗಬೇಕಾದರೂ ಅವಕ್ಕೆ ರಾಜಮಾರ್ಗ ಬೇಕು. ರಾಜರು – ಅರ್ಥಾತ್ ರಾಜಕೀಯ ನಾಯಕರು ಅವುಗಳ ಮಾರ್ಗವನ್ನು ಇನ್ನೂ ಸುಲಭವಾಗಿ ಮಾಡಿಲ್ಲ. ಗ್ರಾಮೀಣ ಹಣಕಾಸಿನ ಸಮಸ್ಯೆಯಂತೂ ಇದ್ದೇ ಇದೆ.

ನರಸಿಂಹಂ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿರದ ಒಂದು ಬೆಳವಣಿಗೆಯನ್ನು ನಾವು ಇಂದು ನಿರೀಕ್ಷಿಸಬಹುದು. ಸರ್ಕಾರ ಘೋಷಿಸಿದ ಸ್ಥಳೀಯ ಕ್ಷೇತ್ರದ ಖಾಸಗಿ ಬ್ಯಾಂಕುಗಳ ಯೋಜನೆಯೊಂದು ಬ್ಯಾಂಕಿಂಗ್ ವಲಯದಲ್ಲಿ ಕಾಣಿಸಿಕೊಂಡಿದೆ. ಗ್ರಾಮೀಣ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಶಾಖೆಗಳ ಜೊತೆಗೆ ಬರಲಿರುವ ಸ್ಥಳೀಯ ಕ್ಷೇತ್ರ ಬ್ಯಾಂಕುಗಳು ಯಾವ ರೀತಿ ವ್ಯವಹರಿಸುತ್ತವೆ, ಹೇಗೆ ಲಾಭಪ್ರದವಾಗಿ ನಿಂತು ಬೆಳೆಯುತ್ತವೆ ಎಂಬುದೊಂದು ಪ್ರಶ್ನೆ. ಏನಾದರೊಂದು ಮಾಡಿ ಸೈ ಎನ್ನಿಸಿಕೊಳ್ಳಬೇಕೆಂಬುದು ಸರ್ಕಾರದ ಆಶಯ. ಈ ವಿಚಿತ್ರ ಪ್ರಯೋಗ ಫಲಪ್ರದವಾದರೆ ಸಂತೋಷ.

ಮತ್ತೆ ನಾವು ಇಂದು ಕವಲು ದಾರಿಯ ಬಳಿಗೆ ಬಂದು ನಿಂತಿದ್ದೇವೆ. ಸುಧಾರಣೆಯ ಮೊದಲ ಮಜಲು ಹೆಚ್ಚು ಕಡಿಮೆ ಮುಗಿದಿದೆ. ಅದನ್ನು ಇನ್ನೊಂದು ಮಜಲು ಮುಂದಕ್ಕೆ ಕೊಂಡೊಯ್ಯಬೇಕಾಗಿದೆ. ರಾಜಕೀಯ ಅಸ್ಥಿರತೆಯ ನಡುವೆ ಇದು ಹೇಗೆ ಸಾಗುವುದೆಂಬುದನ್ನು ನೋಡಬೇಕಾಗಿದೆ. ಇದಕ್ಕೆ ಬ್ಯಾಂಕುಗಳೇ ನಾಂದಿ ಹಾಡಬೇಕಾಗಿದೆ. ಹೊಸಹೊಸ ಅವಕಾಶಗಳನ್ನು ಆವಿಷ್ಕಾರಗೊಳಿಸುವುದು ಇಂದಿನ ಅಗತ್ಯ. ಹೊಸ ತಂತ್ರಜ್ಞಾನವೇ ಇದಕ್ಕೆ ಬೇಕಾಗಿರುವ ಉಪಾಯ. ಹೊಸಹೊಸ ಕ್ಷೇತ್ರಗಳಲ್ಲಿ ಹೊಸ ಹೊಸ ರೀತಿಯ ಸೇವೆಗಳನ್ನು ಹೆಚ್ಚು ಹೆಚ್ಚು ಪರಿಣಾಮಕಾರಿಯಾಗಿ ನೀಡಲು ಏನು ಮಾಡಬೇಕೆಂಬುದು ಪ್ರಶ್ನೆ. ಸಾಮಾನ್ಯರ ಬಳಿಗೆ ಬ್ಯಾಂಕಿಂಗ್ ಸೇವೆಯನ್ನು ಕೊಂಡೊಯ್ಯುವ ಹಾದಿಯಲ್ಲಿ ಅದರ ತುದಿ ಮುಟ್ಟಬೇಕಾಗಿದೆ. ಹೊಸಹೊಸ ಉತ್ಪನ್ನಗಳನ್ನು ರೂಪಿಸುವುದು ಅತ್ಯವಶ್ಯ, ಹೊಸ ಮಾರುಕಟ್ಟೆ ವಲಯಗಳ ಅನ್ವೇಷಣೆ ನಡೆಸಬೇಕಾಗಿದೆ. ಮಧ್ಯಸ್ತಿಕೆಯ ಕಾರ್ಯಭಾರವನ್ನಷ್ಟೇ ನಡಸುತ್ತಿದ್ದ ಬ್ಯಾಂಕು ಈಗ ಅದನ್ನು ಬಿಟ್ಟುಕೊಡಬೇಕಾಗಿದೆ. ಅದಕ್ಕೆ ಚ್ಯುತಿ ಬಂದಿದೆ. ಅದು ಹೊಸ ಮೇವುಗಳನ್ನು ಅರಸುವುದು ಅನಿವಾರ್ಯ. ಸ್ಥೂಲಕಾಯದಿಂದ ಕೂಡಿದ ನಮ್ಮ ಸಾರ್ವಜನಿಕ ವಲಯ ಬ್ಯಾಂಕುಗಳು ವಿದೇಶಿ ಹಾಗೂ ಖಾಸಗಿ ವಲಯದ

ಬ್ಯಾಂಕುಗಳೊಡನೆ ಸ್ಪರ್ಧಿಸುವುದು ಕಷ್ಟವೆನಿಸುತ್ತಿದೆ. ಹೀಗಾಗಿ, ನರಸಿಂಹಂ ಸಮಿತಿ ಸೂಚಿಸಿದಂತೆ ಬ್ಯಾಂಕಿಂಗ್ ವ್ಯವಸ್ಥೆಯ ಪುನಸ್ಸಂರಚನೆ ಅತ್ಯಂತ ಜರೂರು ಎನಿಸಿದೆ.

ಉದ್ಯೋಗಿಗಳ ಸಮಸ್ಯೆ

ಈ ಎಲ್ಲ ಬದಲಾವಣೆಗಳ ಕೋಲಾಹಲದ ನಡುವೆ ಬ್ಯಾಂಕ್ ಉದ್ಯೋಗಿಗಳು ಎಲ್ಲಿದ್ದಾರೆ? ಇದು ಈಗ ವಿವೇಚಿಸಬೇಕಾದ ಇನ್ನೊಂದು ಮುಖ್ಯ ಪ್ರಶ್ನೆ. ಬ್ಯಾಂಕ್ ಉದ್ಯೋಗಿಗಳೂ ಈಗ ಕವಲುದಾರಿಯಲ್ಲಿದ್ದಾರೆ. ಅವರು ತಮ್ಮ ಚಿಂತನೆಯ ಮಾರ್ಗವನ್ನು, ಕಾರ್ಯವಿಧಾನಗಳನ್ನು ಬದಲಾಯಿಸಿಕೊಳ್ಳುವುದು ಅಗತ್ಯವೇನೋ ಎನಿಸಿದೆ.

ಉದ್ಯೋಗಿಗಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳನ್ನು ಇಲ್ಲಿ ಸ್ಥೂಲವಾಗಿ ನಿರೂಪಿಸಬಹುದು. ಬ್ಯಾಂಕುಗಳು ತೆಳ್ಳಗೆ, ಬಳಕುವಂತೆ, ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುವಂತೆ ಮಾಡಲು ಯತ್ನಿಸಲಾಗುತ್ತಿದೆ. ಹೆಚ್ಚುವರಿ ಉದ್ಯೋಗಿಗಳನ್ನು ನಿವಾರಿಸಿಕೊಳ್ಳುವ ಮಾತೂ ಕೇಳಿ ಬರುತ್ತಿದೆ. ಇಡೀ ಅರ್ಥವ್ಯವಸ್ಥೆಗೆ, ಉದ್ಯಮ ಪ್ರಪಂಚಕ್ಕೆ, ಸಂಬಂಧಿಸಿದಂತೆ ಕೇಳಿಬರುತ್ತಿರುವ ಮಾತೆಂದರೆ, "ಹೊನ್ನು ಕೊಟ್ಟು ಕೈಕುಲುಕಿ ಕಳಿಸುವುದು; ಉದ್ಯೋಗಿಗಳು ತಾವಾಗಿಯೇ ನಿವೃತ್ತಿ ಪಡೆಯಬಯಸಿ, ಇದಕ್ಕೆ ಪ್ರತಿಯಾಗಿ ನೀಡಲಾಗುವ ಪರಿಹಾರ ಮತ್ತು ಇತರ ಬಳುವಳಿಗಳನ್ನು ಪಡೆದು ನಿರ್ಗಮಿಸುವುದು ಅತಿರಿಕ್ತ; ಉದ್ಯೋಗಿಗಳ ಪುನರ್ನೇಮಕಕ್ಕೆ, ಹೊಸ ಬಗೆಯ ಕೆಲಸಗಳಲ್ಲಿ ಅವರನ್ನು ತೊಡಗಿಸುವುದಕ್ಕೆ ಅಗತ್ಯವಾದ ತರಬೇತಿ ನೀಡುವುದು; ಇದಕ್ಕಾಗಿ ರಾಷ್ಟ್ರೀಯ ಪುನರ್ನವೀಕರಣ ನಿಧಿಯ ರಚನೆ. ಇಂಥ ಮಾತುಗಳು ಗಾಳಿಯಲ್ಲಿ ತೂರಾಡುತ್ತಿವೆ. ಕೆಲವು ಬ್ಯಾಂಕುಗಳು ತಮ್ಮ ಉದ್ಯೋಗಿಗಳ ಹೆಚ್ಚು ವೇತನದ ಬೇಡಿಕೆಯನ್ನು ಪೂರೈಸಲಾಗದೆ ಅದನ್ನು ಸ್ಥಗಿತಗೊಳಿಸುವ ಮಾತನ್ನೂ ಆಡುತ್ತಿವೆ. ಗ್ರಾಮೀಣ ಬ್ಯಾಂಕ್ ಉದ್ಯೋಗಿಗಳ ವೇತನ ಕುರಿತ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ತೊಡಕುಂಟಾಗಿದೆ. ಮುಷ್ಕರಗಳಲ್ಲಿ ಭಾಗವಹಿಸುವವರ ಪೆನ್ಷನ್ ನೀಡಬಾರದೆಂಬ ಸೂಚನೆಯು ಬಂದದ್ದುಂಟು. ಒಟ್ಟಿನಲ್ಲಿ ಚೆನ್ನಾಗಿ ಕೆಲಸ ಮಾಡುವ ಬ್ಯಾಂಕುಗಳಿಗೆ ಚಿಂತೆಯಿಲ್ಲ. ಅಷ್ಟು ಅದೃಷ್ಟ ಹೊಂದಿಲ್ಲದ ಬ್ಯಾಂಕುಗಳೂ ಅವುಗಳ ನೌಕರರೂ ಶಿಕ್ಷೆ ಅನುಭವಿಸಬೇಕಾದ ವಿಚಿತ್ರ ಪರಿಸ್ಥಿತಿ ತಲೆದೋರಿದೆ.

ಬ್ಯಾಂಕುಗಳಲ್ಲಿ ಉನ್ನತ ಹುದ್ದೆಗಳನ್ನು ತುಂಬುವ ವಿಚಾರವಾಗಿಯೂ ಸ್ಪಷ್ಟ ಖಚಿತ ನೀತಿಯನ್ನು ರೂಪಿಸಿಲ್ಲ. ಕೆಳಗಿನ ಸ್ತರಗಳ ಅಧಿಕಾರಿಗಳು ಅತ್ಯುನ್ನತ ಸ್ತರವನ್ನು ತಲಪಲು ಅಡಚಣೆ ಇರದಿದ್ದಾಗ ಅವರ ಭವಿಷ್ಯ ಆಶಾದಾಯಕ. ಅಂಥ ಆಶಾವಾದಿ ಉದ್ಯೋಗಿಗಳೇ ಸಂಸ್ಥೆಯ ಸಂಪತ್ತು.

ಆದರೆ ಇಂಥ ವಾತಾವರಣ ಸೃಷ್ಟಿಯಾಗುವಂತೆ ಕಾಣುತ್ತಿಲ್ಲ.

ಒಟ್ಟಿನಲ್ಲಿ ಉದ್ಯೋಗಿಗಳು ನಾನಾ ಬಗೆಯ ಒತ್ತಡಗಳಿಗೆ ಗುರಿಯಾಗಿದ್ದಾರೆ. ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಸಾರ್ವಜನಿಕರ ಸಹಾನುಭೂತಿಯನ್ನು ಕಳೆದುಕೊಳ್ಳದಂತೆ ಅವರು ಎಚ್ಚರಿಕೆ ವಹಿಸಬೇಕಾಗಿದೆ. ಗ್ರಾಹಕಸೇವೆಗೆ ಹೆಚ್ಚಿನ ಮಹತ್ವ ನೀಡಬೇಕಾದ್ದು ಅಗತ್ಯ. ಗೋಯ್ಪೂರಿಯ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸುವುದು ಬಾಯಲ್ಲಿ ಹೇಳುವಷ್ಟು ಸುಲಭವಲ್ಲ. ಬ್ಯಾಂಕಿಂಗ್ ಸೇವೆಗೆ ನಾನಾ ಮುಖ. ಎತ್ತೆತ್ತಲೂ ಅದಕ್ಕೆ ಬಾಗಿಲು, ಪಾರದರ್ಶಕತೆ ಅತ್ಯಂತ ಮುಖ್ಯ. ಯಾಂತ್ರೀಕರಣ, ಗಣಕೀಕರಣ ಪ್ರಕ್ರಿಯೆ ಒಂದು ಕಡೆ, ಶೀಘ್ರ ಸಮರ್ಥ ಯಾಂತ್ರೀಕೃತ ಸೇವೆಯನ್ನು ನೀಡುವಾಗ ವ್ಯಕ್ತಿಗತ ಆಸಕ್ತಿ, ಆತ್ಮನಿಷ್ಠೆ ನಷ್ಟವಾಗುತ್ತದೆ. ವ್ಯಕ್ತಿಗತ ಸೇವೆಗೆ ಪ್ರಾಮುಖ್ಯ ನೀಡುವಾಗ ಕ್ಷಿಪ್ರ ಸಮರ್ಥ ದಕ್ಷ ಸೇವೆ ಮುಕ್ಕಾಗುವ ಭಯವಿರುತ್ತದೆ. ಉದ್ಯೋಗಿಗಳಿಗೆ ಹೀಗೆ ಇಬ್ಬಗೆಯ ಆತಂಕ – ಹೋಗುತ್ತಲೂ ಕೊಯ್ಯುವ, ಬರುತ್ತಲೂ ಕೊಯ್ಯುವ ಗರಗಸದ ಹಾಗೆ.

ಇಂಥ ಪರಿಸರದಲ್ಲಿ ನಮ್ಮ ಬ್ಯಾಂಕಿಂಗ್ ಕ್ಷೇತ್ರದ ಸುಧಾರಣೆಯ ಎರಡನೆಯ ಮಜಲನ್ನು ಸಾಧಿಸಬೇಕಾಗಿದೆ. ಇದಕ್ಕಾಗಿ ತೀವ್ರ ಚಿಂತನೆ ನಡೆದಿದೆ. ಬೇಗ ಇದನ್ನು ಕಾರ್ಯರೂಪಕ್ಕೆ ತರುವುದು ಅಗತ್ಯ.

35.

ಸೆಪ್ಟೆಂಬರ್ 1998
ಬ್ಯಾಂಕಿಂಗ್ ಸುಧಾರಣೆ : ಇಂದು – ಮುಂದೆ

ಭಾರತೀಯ ಬ್ಯಾಂಕಿಂಗ್ ಈಗ ಕವಲು ದಾರಿಯಲ್ಲಿದೆ. ಇದುವರೆಗೆ ಕ್ರಮಿಸಿದ ಹಾದಿಯೇನೂ ಸಾಮಾನ್ಯವಾದುದ್ದಲ್ಲ. ದಾಟಿ ಬಂದ ಗಂಡಾಂತರಗಳೆಷ್ಟೋ ಸಾಧನೆಗಳೂ ಅಷ್ಟೇ. ಬಹುಶಃ ಇನ್ನೂ ಅಧಿಕ. ಈ ಐವತ್ತು ವರ್ಷಗಳಲ್ಲಿ ಈ ವಲಯದಲ್ಲಿ ಸಾಗರಿಕ ಬದಲಾವಣೆಗಳಾಗಿವೆ. ಐವತ್ತು ವರ್ಷ ಹಿಂದೆ ಕುಬ್ಜವೆನಿಸಿದ್ದ ಬ್ಯಾಂಕಿಂಗ್ ಈಗ ದೈತ್ಯಾಕಾರಕ್ಕೆ ಬೆಳೆದಿದೆ. ಭೂಮಿ ಆಕಾಶಗಳನ್ನೆಲ್ಲ ವ್ಯಾಪಿಸಿಕೊಂಡಿದೆಯೋ ಎಂಬ ಹಾಗೆ ತೋರುತ್ತಿದೆ.

ಐವತ್ತು ವರ್ಷ ಹಿಂದೆ ದೇಶದಲ್ಲಿಯ ಬ್ಯಾಂಕುಗಳ ಸಂಖ್ಯೆ ಸುಮಾರು 650 ಆಗಿತ್ತು. ಈಗ ಅವುಗಳ ಸಂಖ್ಯೆ ಸುಮಾರು 300. ಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚಿನ ಇಳಿತವಾಗಿದೆಯೆನಿಸಬಹುದು. ಹಲವು ಬ್ಯಾಂಕುಗಳ ವಿಲೀನವಾಗಿದೆ; ಅವು ಕೂಡಿ ದೊಡ್ಡವಾಗಿವೆ. ಸಣ್ಣವನ್ನು ದೊಡ್ಡವು ನುಂಗಿವೆ; ಸಣ್ಣ ಮೀನನ್ನು ದೊಡ್ಡ ಮೀನು ನುಂಗುವ ಹಾಗೆ. ಉದ್ಯಮ ಪ್ರಪಂಚದಲ್ಲಿ ಇದೆಲ್ಲಾ ಸಾಮಾನ್ಯ. ಮುಕ್ತ ಅರ್ಥವ್ಯವಸ್ಥೆಯಲ್ಲಂತೂ ಇದು ಸಲೀಸು. ಶಕ್ತವಾದ ಉದ್ಯಮಗಳು ಉಳಿದುಕೊಳ್ಳುತ್ತವೆ. ದುರ್ಬಲ ಸಂಸ್ಥೆಗಳಿಗೆ ಅವಸಾನ. ಈ ಪ್ರಕ್ರಿಯೆಯೂ ನಡೆದಿದೆ.

ದೇಶ ಸ್ವತಂತ್ರವಾದಾಗ ಬ್ಯಾಂಕುಗಳು ಬಹುತೇಕ ಖಾಸಗಿ ವಲಯದಲ್ಲಿದ್ದುವು. 1969ರಲ್ಲಿ ಒಂದು ಮಹಾ ಪರಿವರ್ತನೆ ಸಂಭವಿಸಿತು. ಪ್ರಮುಖ ಬ್ಯಾಂಕುಗಳು ರಾಷ್ಟ್ರೀಕರಣಗೊಂಡುವು. ರಾಷ್ಟ್ರೀಕರಣದ ಎರಡನೆಯ ಹಂತ ಸಾಧಿಸಿದ್ದು 1980ರಲ್ಲಿ. ಅಂತೂ 1947ರಿಂದ 1969ರ ವರೆಗೆ, ಅನಂತರ 1969ರಿಂದ ಇಂದಿನ ವರೆಗೆ ಬ್ಯಾಂಕಿಂಗ್ ವಲಯದಲ್ಲಿ ಆಗಿರುವ ಬದಲಾವಣೆ ಮಹತ್ತರ. ಗುಣ, ಗಾತ್ರ ಎರಡರಲ್ಲಿ ಮಹಾ ಪರಿವರ್ತನೆ. ರಾಷ್ಟ್ರೀಕರಣದವರೆಗಿನ ಬೆಳವಣಿಗೆಗಿಂತ ಅನಂತರದ ಬೆಳವಣಿಗೆ ಅಗಾಧ. ಹಿಂದೆ ಹೇಳಿದ ಹಾಗೆ ಈ ಅವಧಿಯಲ್ಲಿ ಒಟ್ಟು ಬ್ಯಾಂಕುಗಳ ಸಂಖ್ಯೆ ಇಳಿದಿದ್ದರೂ, ಶಾಖೆಗಳ ಸಂಖ್ಯೆ 4,288ರಿಂದ ಸುಮಾರು 63.5 ಸಾವಿರಕ್ಕೆ ಹೆಚ್ಚಿದೆ. ಠೇವಣಿಗಳು ರೂ.1,164 ಕೋಟಿಯಿಂದ ಸುಮಾರು ರೂ.5 ಲಕ್ಷ ಕೋಟಿಗೆ ಏರಿವೆ. ಮುಂಗಡಗಳು ಆಗ ರೂ.531 ಕೋಟಿ, ಈಗ ಸುಮಾರು ರೂ.3 ಲಕ್ಷ ಕೋಟಿ. ವಿನಿಯೋಜನೆಗಳು ರೂ.428 ಕೋಟಿಯಿಂದ ಸುಮಾರು ರೂ.2 ಲಕ್ಷ ಕೋಟಿಗೆ ಚಿಮ್ಮಿವೆ. ಭಾರತದ ಬ್ಯಾಂಕಿಂಗ್ ಭೂಪಟದಲ್ಲಿ 36 ಸಾವಿರಕ್ಕೂ ಹೆಚ್ಚು ಸ್ಥಳಗಳನ್ನು ನಾವು ಇಂದು ಗುರುತಿಸಬಹುದು. ಇವೆಲ್ಲಾ ಸಾಮಾನ್ಯ ಸಾಧನೆಗಳೇನೂ ಅಲ್ಲ.

ಈ ಬದಲಾವಣೆಯೊಂದಿಗೇ ಅನೇಕ ಸಮಸ್ಯೆಗಳು ಹುಟ್ಟಿಕೊಂಡುವೆಂಬುದು ಹೊಸ ಸಂಗತಿಯೇನೂ ಅಲ್ಲ. ಉದರಿ ವಿನ್ಯಾಸ ಬದಲಾಗಿದೆ. ಪರಂಪರಾಗತ ಬ್ಯಾಂಕಿಂಗಿನ ಸ್ವರೂಪದಲ್ಲಿ ಬದಲಾವಣೆ ಯಾಗಿದೆ. ಉದರಿ ನಿರ್ವಹಣೆ ನಾಜೂಕಿನದಾಗಿ ಪರಿಣಮಿಸುತ್ತಿದೆ. ಸ್ಥಿತಿ ವಿವರಣ ಪಟ್ಟಿಯಿಂದಾಚೆಗಿನ ವ್ಯವಹಾರ ಬೆಳೆದಿದೆ. ಹಣಕಾಸಿನ ವಿಚಾರದಲ್ಲಿ ಮಧ್ಯಸ್ಥಗಾರಿಕೆಯ ಪಾತ್ರ ವಹಿಸುತ್ತಿದ್ದ ಬ್ಯಾಂಕುಗಳು ಈ ಪೌರೋಹಿತ್ಯವನ್ನು ಸ್ವಲ್ಪ ಮಟ್ಟಿಗೆ ಬಿಟ್ಟುಕೊಡಬೇಕಾಗಿ ಬಂದಿದೆ. ಮಧ್ಯಸ್ಥಗಾರಿಕೆಗೆ ಚ್ಯುತಿ ಬಂದಿದೆ. ಬ್ಯಾಂಕುಗಳು ಹೊಸ ಹೊಸ ಮೇವುಗಳನ್ನು ಅರಸಬೇಕಾಗಿದೆ. ನಿಧಿ ಆಧಾರದ ವ್ಯವಹಾರಗಳಿಗಿಂತ ಸೇವೆಯ ಆಧಾರದ ವ್ಯವಹಾರಗಳು ಪ್ರಾಮುಖ್ಯ ತಳೆಯುತ್ತಿವೆ. ಇವೆಲ್ಲಾ ಸಾಮಾನ್ಯವಾಗಿ ವಿಶ್ವವ್ಯಾಪಿ ಬದಲಾವಣೆಗಳು.

ರಾಷ್ಟ್ರೀಕರಣ, ಶಾಖಾಜಾಲ ನಿರ್ಮಾಣ, ಆರ್ಥಿಕ ಅಭಿವೃದ್ಧಿ ಕಾರ್ಯದಲ್ಲಿ ಬ್ಯಾಂಕುಗಳ ನೇರವಾದ ಪಾತ್ರ, ಕಲ್ಯಾಣ ಯೋಜನೆಗಳಲ್ಲಿ ಅವುಗಳ ಆಸಕ್ತಿ, ಯೋಜನಾ ಕಾರ್ಯಕ್ಕೆ ಬ್ಯಾಂಕುಗಳ ನಿಧಿಗಳ ಬಳಕೆ. ಬ್ಯಾಂಕುಗಳ ಠೇವಣಿಗಳಲ್ಲಿ ಗಮನಾರ್ಹ ಭಾಗವನ್ನು ನಗದು ಮೀಸಲಾಗಿ ಹಾಗೂ ಸುಲಭ ನಗದೀಕರಣ ಸಾಧ್ಯವಾದ ಸರ್ಕಾರಿ ಪತ್ರಗಳ ರೂಪದಲ್ಲಿ ಇಡಬೇಕೆಂಬ ಶಾಸನದ ವಿಧಿ. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೂ ಉದರಿಯನ್ನು ನೀಡಬೇಕೆಂಬ ನಿಯಮ – ಹೀಗೆ ನಾನಾ ಬಗೆಯ ಪರಿವರ್ತನೆಗಳಾಗಿರುವುದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ.

ಸಮಸ್ಯೆಗಳ ಹುತ್ತ

ಗಾತ್ರ ವಿಸ್ತಾರದೊಂದಿಗೆ ಗುಣೋತ್ಕರ್ಷೆಗೂ ಗಮನ ಕೊಡುವುದು ಸಾಧ್ಯವಾಗದೆ ಹೋದದ್ದರಿಂದ, ಅದರ ಪ್ರಾಮುಖ್ಯವನ್ನು ಅರಿಯಲಾಗದೆ ಹೋದದ್ದರಿಂದ, ಇದರೊಂದಿಗೆ ಹುಟ್ಟಿಕೊಂಡ ಸಮಸ್ಯೆಗಳ ನಿವಾರಣೆಗೆ ಈಚಿನ ವರ್ಷಗಳಲ್ಲಿ ಗಮನ ಹರಿಸಲಾಗುತ್ತಿದೆ. ಆರ್ಥಿಕ ಉದಾರೀಕರಣದ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ವಲಯದ ಸುಧಾರಣೆಯ ಅನಿವಾರ್ಯವೆನಿಸಿದೆ.

ಉದರೀಕರಣದ ಮಾತು ಹಾಗಿರಲಿ, ಅದಿಲ್ಲದೆಯೂ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ನಿರ್ವಹಣೆ ಕಠಿಣವೂ ಸಂಕೀರ್ಣವೂ ಆಗಿದೆ. ಇಡೀ ವಿಶ್ವದಲ್ಲೇ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ಗ್ರಾಹಕ ತಳ ಬಲು ವಿಸ್ತಾರವಾದದು. ಭಾರತದ ಬ್ಯಾಂಕುಗಳು ಸುಮಾರು 38 ಕೋಟಿ ಖಾತೆಗಳನ್ನು ನಿರ್ವಹಿಸಬೇಕಾಗಿದೆ. ಪಟ್ಟಣ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ಹಲವರು ತಲಾ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಒಂದಕ್ಕಿಂತ ಹೆಚ್ಚು ಶಾಖೆಗಳಲ್ಲಿ ಹೊಂದಿದ್ದಾರೆಂಬುದನ್ನು ಮರೆಯುವಂತಿಲ್ಲ. ಅಂತೂ ಕನಿಷ್ಠ ಪಕ್ಷ 25 ಕೋಟಿಯಷ್ಟಾದರೂ

ಗ್ರಾಹಕರಿದ್ದಾರೆಂಬುದು ಒಂದು ಅಂದಾಜು. ಆದರೂ ದೇಶದ ಒಟ್ಟು ದುಡಿಯುವ ವಯಸ್ಸಿನ ಜನರ ಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿಲ್ಲವೆಂಬುದನ್ನು ನೆನೆದಾಗ, ಈ ಅಗಾಧ ಖಾತಾ ಸಂಖ್ಯೆಯೂ ಅಗತ್ಯಕ್ಕೆ ತಕ್ಕಷ್ಟು ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಒಂದು ಕಡೆ ನಿರ್ವಹಣೆ ಅಸಾಧ್ಯವೆನಿಸುವಷ್ಟು ಖಾತಾ ಸಂಖ್ಯೆ, ಇನ್ನೊಂದು ಕಡೆ ಈ ಸಂಖ್ಯೆಯೂ ಎಲ್ಲ ಜನರನ್ನೂ ಒಳಗೊಳ್ಳಲಾರದು ಎಂಬ ವಾಸ್ತವಿಕ ಪರಿಸ್ಥಿತಿ – ಪರಸ್ಪರ ವಿರುದ್ಧವೆನಿಸುವ ಅನುಭವ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯದಾಗಿದೆಯೆನ್ನಬಹುದು. ಸಾಲ ಖಾತೆಗಳ ಸಂಖ್ಯೆ ಕೇವಲ ಸುಮಾರು 6 ಕೋಟಿ..

ಠೇವಣಿ ಖಾತೆ ಹಾಗೂ ಸಾಲ ಖಾತೆಗಳಿಗೆ ಸಂಬಂಧಿಸಿದಂತೆ ಇನ್ನೊಂದು ಅಂಶವನ್ನು ಗಮನಿಸಬೇಕು. ಬಹುತೇಕ ಖಾತೆಗಳು ಬಲು ಸಣ್ಣವು. ಎಂದರೆ ಅವುಗಳ ಶಿಲ್ಕುಗಳು ಹಾಗೂ ವಹಿವಾಟು ಬಲು ಕಡಿಮೆ. ಪರಿಣಾಮವೆಂದರೆ, ಇವುಗಳ ಸೇವಾ ವೆಚ್ಚ ಅಗಾಧವಾಗಿರುವುದು. ಬಹುತೇಕ ಖಾತೆಗಳು ಬ್ಯಾಂಕುಗಳಿಗೆ ಲಾಭ ದೊರಕಿಸುತ್ತಿಲ್ಲ. ನಷ್ಟಕರಗಳಾಗಿವೆ. ಸಾಲಗಾರರಿಗೆ ವಿಧಿಸುವ ಬಡ್ಡಿ ದರಕ್ಕೂ ಠೇವಣಿಗಳ ಮೇಲೆ ನೀಡಬೇಕಾಗುವ ಬಡ್ಡಿ ದರಕ್ಕೂ ಅಂತರ ಬಲು ಕಡಮೆ. ಗ್ರಾಹಕ ತಳವನ್ನು ವಿಸ್ತರಿಸುವುದು ಬ್ಯಾಂಕುಗಳ ಸಾಮಾಜಿಕ ಹೊಣೆ. ಆದರೆ ಅವು ಲಾಭದಾಯಕವಾಗಿಯೂ ಕೆಲಸ ಮಾಡಬೇಕಾದ್ದು ಅನಿವಾರ್ಯ. ಮತ್ತೆ ಈ ಎರಡು ತುದಿಗಳ ನಡುವೆ ವೈರುದ್ಧಗಳ ಮಧ್ಯದಲ್ಲಿ ಬ್ಯಾಂಕುಗಳು ಕಾರ್ಯನಿರ್ವಹಿಸಬೇಕಾಗಿದೆ.

ಬ್ಯಾಂಕುಗಳು ನೀಡುತ್ತಿರುವ ಸಾಲಗಳು ಸಂಖ್ಯೆಯಲ್ಲಿ ಅಧಿಕವಾದರೂ ಗಾತ್ರದಲ್ಲಿ ಬಹುತೇಕ ಕಿರಿದು. ತಲಾ ರೂ.10 ಕೋಟಿಗಿಂತ ಹೆಚ್ಚಿನ ಮೊತ್ತದ ಸಾಲಗಳ ಖಾತೆಗಳ ಸಂಖ್ಯೆ ಕೇವಲ ಸುಮಾರು 1,050. ಇವುಗಳ ಅಡಿಯಲ್ಲಿ ನೀಡಲಾಗಿರುವ ಸಾಲ ಸುಮಾರು ರೂ. 27 ಸಾವಿರ ಕೋಟಿ. ಇದು ಒಟ್ಟು ಸಾಲದ ಶೇ.16ರಷ್ಟು ಮಾತ್ರ. ಉಳಿದ ಸುಮಾರು ಶೇ.84ರಷ್ಟು ಸಾಲ ಸುಮಾರು 5 ಕೋಟಿ ಖಾತೆಗಳ ಅಡಿಯಲ್ಲಿ ಹಂಚಿಹೋಗಿದೆ. ಒಟ್ಟು ಉದರಿಯಲ್ಲಿ ಶೇ.20ಕ್ಕೂ ಕಡಮೆ ಉದರಿಯನ್ನು ಒಟ್ಟು ಸಾಲದ ಖಾತೆಗಳ ಶೇ.94ರಷ್ಟಕ್ಕೆ ವಿತರಿಸಲಾಗಿದೆ. ಬ್ಯಾಂಕುಗಳು ಎಷ್ಟರ ಮಟ್ಟಿಗೆ ಲಾಭದಾಯಕವಾಗಿ ಕಾರ್ಯನಿರ್ವಹಿಸುವುದು ಸಾಧ್ಯ ಎಂಬುದನ್ನು ಈ ಅಂಕಿಗಳೇ ಘೋಷಿಸುತ್ತವೆ. ನಿರ್ದೇಶಿತ ಉದರಿ ವಿಸ್ತರಣೆಯಿಂದಾಗಿ ಅಶಕ್ತ ವಲಯಗಳಿಗೆ ನೆರವು ಹೆಚ್ಚಿದೆಯಾದರೂ, ಇವು ಎಷ್ಟರ ಮಟ್ಟಿಗೆ ಚೇತರಿಸಿಕೊಂಡಿವೆ ಆರೋಗ್ಯಕರವಾಗಿವೆ, ರಾಷ್ಟ್ರೀಯ ವರಮಾನಕ್ಕೆ ಎಷ್ಟರಮಟ್ಟಿಗೆ ಕಾಣಿಕೆ ಸಲ್ಲಿಸುತ್ತಿವೆ ಎಂಬುದನ್ನು

ಹೇಳಬೇಕಾಗಿಲ್ಲ. ಇವು ಬೇಡವೆಂದಲ್ಲ. ಆದರೆ ಸಾರ್ಥಕತೆಯ ದೃಷ್ಟಿಯಿಂದ ನಿರಾಶೆ ಉಂಟಾಗುತ್ತದೆ. ಒಟ್ಟಿನಲ್ಲಿ ಬ್ಯಾಂಕಿಂಗ್ ವಲಯದ ವಿಸ್ತರಣೆ ಹಾಗೂ ಅದರ ಕಲಾಪಗಳ ಬಹುಮುಖವಾದ ಬೆಳವಣಿಗೆಯಿಂದಾಗಿ ಬ್ಯಾಂಕ್ ಸಿಬ್ಬಂದಿಯಲ್ಲಿ ಅಗಾಧವಾದ ಹೆಚ್ಚಳವಾಗಿದೆ. ಸುಮಾರು ಮೂವತ್ತು ವರ್ಷ ಹಿಂದೆ (ರಾಷ್ಟ್ರೀಕರಣಕ್ಕೆ ಮೊದಲು) ಉದ್ಯೋಗಿಗಳ ಸಂಖ್ಯೆ ಸುಮಾರು ಎರಡೂಕಾಲು ಲಕ್ಷವಿತ್ತು. ಈಗ ಇದು ಸುಮಾರು ಹತ್ತು ಲಕ್ಷಕ್ಕೆ ಏರಿದೆ. ಕಾರ್ಯತಂತ್ರ ಜ್ಞಾನವನ್ನು ಉತ್ತಮಪಡಿಸುವುದು, ಅದನ್ನು ಉನ್ನತಮಟ್ಟಕ್ಕೆ ಏರಿಸುವುದು ಕಲಾಪದ ವೆಚ್ಚವನ್ನು ತಗ್ಗಿಸುವುದು ಅತ್ಯಂತ ಜರೂರು. ಕಂಪ್ಯೂಟರೀಕರಣ ಕಾರ್ಯಕ್ರಮವೇನೋ ಸಾಗಿದೆ. ಆದರೆ ಇದು ಬಹುತೇಕ ನಗರ ಶಾಖೆಗಳಿಗೆ ಸೀಮಿತವಾಗಿದೆ. ಗ್ರಾಮ ಪ್ರದೇಶಕ್ಕೆ ವಿಸ್ತರಿಸುವಲ್ಲಿ ತೊಂದರೆಗಳುಂಟು; ಅಗತ್ಯದ ಪ್ರಶ್ನೆಯನ್ನು ಪರಿಗಣಿಸಬೇಕಾಗಿದೆ. ಸಿಬ್ಬಂದಿಯ ಸೇವಾಭದ್ರತೆ, ವ್ಯವಹಾರ ಸೌಲಭ್ಯ, ವೆಚ್ಚದ ಇಳಿತ ಮುಂತಾದವುಗಳನ್ನು ಸಮನ್ವಯಗೊಳಿಸುವ ಕಾರ್ಯಯೋಜನೆಯೊಂದು ಇನ್ನೂ ರೂಪುಗೊಳ್ಳಬೇಕಾಗಿದೆ.

1991ರಲ್ಲಿ ಸರ್ಕಾರ ಆರ್ಥಿಕ ಉದಾರೀಕರಣ ನೀತಿಯನ್ನಾರಂಭಿಸಿದಾಗ, ಭಾರತೀಯ ಬ್ಯಾಂಕಿಂಗ್ ವಲಯ ಆರೋಗ್ಯಕರವಾಗೇನೂ ಇರಲಿಲ್ಲ. ಹಿಂದೆ ಹೇಳಿದ ಹಾಗೆ, 1947ರಲ್ಲಿ ದೇಶದಲ್ಲಿ ಸಣ್ಣ ದೊಡ್ಡ 648 ಬ್ಯಾಂಕುಗಳಿದ್ದುವು. 1949ರಲ್ಲಿ ಜಾರಿಗೆ ಬಂದ ನಿಯಂತ್ರಣಕ್ರಮಗಳಿಂದ ಅವುಗಳ ಸಂಘಟನೆ ಸಾಧ್ಯವಾಯಿತು. 1974ರ ವೇಳೆಗೆ ಬ್ಯಾಂಕುಗಳ ಸಂಖ್ಯೆ 81ಕ್ಕೆ ಇಳಿದಿತ್ತು. ರಾಷ್ಟ್ರೀಕೃತ ಬ್ಯಾಂಕುಗಳು, ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಅದರ ಸಹವರ್ತಿ ಬ್ಯಾಂಕುಗಳು, ಇವುಗಳ ಜೊತೆಗೆ 1975ರಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಉದಯವಾಯಿತು. ಇವುಗಳ ಜೊತೆಗೆ ಖಾಸಗಿ ವಲಯದ ಬ್ಯಾಂಕುಗಳೂ ಮುಂದುವರಿದಿದ್ದುವು. ಆದರೆ ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಸ್ಥೆಯಲ್ಲಿ ದೌರ್ಬಲ್ಯದ ಚಿಹ್ನೆಗಳು ಕಾಣಿಸಿಕೊಂಡಿದ್ದುವು. ವಸೂಲಾಗದೆ ಉಳಿದ ಸಾಲದ ಹಾಗೂ ಬಡ್ಡಿಯ ಬಾಕಿ, ಬ್ಯಾಂಕುಗಳ ನಿಧಿಗಳಲ್ಲಿ ಗಮನಾರ್ಹ ಭಾಗ ಅವುಗಳ ಕಲಾಪಗಳಿಗೆ ಒದಗಲಾರದ ಸ್ಥಿತಿ, ಬ್ಯಾಂಕುಗಳಿಗೆ ಲಾಭ ದೊರಕಿಸಿಕೊಡಲಾರದ ನಿಷ್ಕ್ರಿಯ ಆಸ್ತಿಗಳ ಅಗಾಧತೆ, ವೆಚ್ಚದ ಭಾರ, ನಷ್ಟದಿಂದ ನರಳುವ ಶಾಖೆಗಳು, ಗುರಿ ಸಾಧಿಸಲಾರದ, ದಕ್ಷವಾಗಿ ಲಾಭದಾಯಕವಾಗಿ ಕಾರ್ಯನಿರ್ವಹಿಲಾರದ ಹಾಗೂ ಬಂಡವಾಳವನ್ನೇ ಕ್ಷಯಿಸಿಕೊಳ್ಳುತ್ತ ಬಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕಗಳ ಸ್ಥಿತಿ, ನಷ್ಟ ಸಂಭಾವ್ಯಾತಾಧಾರಿತ ಆಸ್ತಿಗಳಿಗೆ ಅನುಗುಣವಾಗಿ ಬಂಡವಾಳ

ಪೂರಣವಾಗದ ಪರಿಸ್ಥಿತಿ, ಅಪಾರದರ್ಶಕವಾದ ಬ್ಯಾಂಕ್ ಸ್ಥಿತಿ ವಿವರಣ ಪಟ್ಟಿಗಳು, ವಸೂಲಾಗದ್ದರಿಂದ ಸಂಭವಿಸುವ ನಷ್ಟವನ್ನು ತುಂಬಲು ಮೀಸಲು ನಿರ್ಮಾಣಮಾಡದಿರುವುದು – ಇಂಥ ಅನೇಕ ಸಮಸ್ಯೆಗಳು ಬ್ಯಾಂಕಿಂಗ್ ವಲಯವನ್ನು ಕಾಡಿಸುತ್ತಿದ್ದುವು.

ನರಸಿಂಹಂ ಸಮಿತಿ 1

ಸರ್ಕಾರದ ಉದಾರ ಆರ್ಥಿಕ ನೀತಿಯ ಅನಾವರಣದೊಂದಿಗೆ ಎಂ. ನರಸಿಂಹಂ ಅವರ ನೇತೃತ್ವದಲ್ಲಿ ಸರ್ಕಾರ ನೇಮಕ ಮಾಡಿದ ಸಮಿತಿ ಈ ವಲಯದ ಸಮಸ್ಯೆಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ, ಇದರ ಸುಧಾರಣೆಗಾಗಿ ಸಲಹೆಗಳನ್ನು ನೀಡಿತು. ಅವುಗಳ ಪೈಕಿ ಮುಖ್ಯವಾದವನ್ನು ಇಲ್ಲಿ ಉಲ್ಲೇಖಿಸಬಹುದು: ಬ್ಯಾಂಕಿಂಗ್ ವಲಯದ ಸಂರಚನೆಯನ್ನು ನೇರ್ಪುಗೊಳಿಸಬೇಕು. ಮೂರು ನಾಲ್ಕು ದೊಡ್ಡ ಬ್ಯಾಂಕುಗಳು ವಿಶ್ವವ್ಯಾಪಿಯಾಗಿಯೂ, ಎಂಟು ಹತ್ತು ಬ್ಯಾಂಕುಗಳು ರಾಷ್ಟ್ರವ್ಯಾಪಿಯಾಗಿಯೂ, ಸ್ಥಳೀಯ ಬ್ಯಾಂಕುಗಳು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತವಾಗಿಯೂ ಗ್ರಾಮೀಣ ಬ್ಯಾಂಕುಗಳು ಗ್ರಾಮಪ್ರದೇಶದಲ್ಲಿ ಮಾತ್ರವೂ ಕಾರ್ಯನಿರತವಾಗತಕ್ಕದ್ದು ಎಂಬುದು ಒಂದು ಮುಖ್ಯ ಸಲಹೆ. ಖಾಸಗಿ ವಲಯದ ಬ್ಯಾಂಕುಗಳ ಬೆಳವಣಿಗೆಗೆ ನಿರುತ್ತೇಜಕವಾದ ಪರಿಸ್ಥಿತಿಯ ನಿವಾರಣೆಯಾಗಬೇಕೆಂದೂ ಅದು ಸೂಚಿಸಿತು. ವಿದೇಶೀ ಬ್ಯಾಂಕುಗಳಿಗೂ ಅವಕಾಶ ದೊರಕಬೇಕೆಂಬುದು ಮತ್ತೊಂದು ಸಲಹೆ. ಬ್ಯಾಂಕ್ ವಹಿವಾಟುಗಳನ್ನು ಕಂಪ್ಯೂಟರೀಕರಿಸಬೇಕು ಎಂದು ಕೂಡ ಅದು ಅಭಿಪ್ರಾಯಪಟ್ಟಿತು. ಬ್ಯಾಂಕಿಂಗ್ ಸೇವಾ ಆಯೋಗದ ಅಗತ್ಯವಿಲ್ಲವೆಂಬುದು ಒಂದು ಸಲಹೆ. ಬ್ಯಾಂಕಿಂಗ್ ವ್ಯವಸ್ಥೆಯ ಮೇಲಣ ನಿಯಂತ್ರಣಾಧಿಕಾರ ರಿಸರ್ವ್ ಬ್ಯಾಂಕಿಗೆ ಇರಬೇಕು. ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರ ನೇಮಕದ ಹಿಂದೆ ರಾಜಕೀಯ ಉದ್ದೇಶವಿರಕೂಡದು. ಬ್ಯಾಂಕ್ ಆಸ್ತಿಗಳ ಪುನರ್ರಚನೆ, ಸಾಕಷ್ಟು ಬಂಡವಾಳದ ಪೂರೈಕೆ, ಶಾಸನ ವಿಧಿಸಿದ ದ್ರವತ್ವ ಅನುಪಾತದ ಹಾಗೂ ನಗದು ಮೀಸಲು ಅನುಪಾತದ ಇಳಿತ, ಮಾರುಕಟ್ಟೆಯ ಉದಾರೀಕರಣ – ಹೀಗೆ ನರಸಿಂಹಂ ಸಮಿತಿಯ ಸಲಹೆಗಳು ಮಹತ್ವಪೂರ್ಣವಾದಂಥವು. ಒಟ್ಟಿನಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ತನ್ನ ಕೊಬ್ಬನ್ನು ಕರಗಿಸಿಕೊಳ್ಳಬೇಕು, ತೆಳ್ಳಗೆ ಬಳುಕಬೇಕು, ದಕ್ಷತೆ ಹೆಚ್ಚಿಸಿಕೊಳ್ಳಬೇಕು; ಇಡೀ ಹಣಕಾಸು ವ್ಯವಸ್ಥೆ ಚುರುಕಿನಿಂದ ಕೂಡಿರಬೇಕು ಎಂಬುದು ನರಸಿಂಹಂ ಸಮಿತಿಯ ಆಶಯ.

ಸುಧಾರಣೆಯ ಹಾದಿಯಲ್ಲಿ

ಈ ಆರು ವರ್ಷಗಳಲ್ಲಿ ನಮ್ಮ ಹಣಕಾಸು ವ್ಯವಸ್ಥೆ ಬಹಳಷ್ಟು

ಸುಧಾರಣೆಗೆ ಒಳಪಟ್ಟಿದೆ. ಬ್ಯಾಂಕುಗಳು ಜಡತ್ವವನ್ನು ತೊರೆದು ಚುರುಕಾಗತೊಡಗಿದೆ. ಬ್ಯಾಂಕುಗಳ ಆಸ್ತಿಗಳನ್ನು ಗುರುತಿಸುವಿಕೆಯಲ್ಲಿ ತರ್ಕಬದ್ಧ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಲಾಭ ಬರಲಿ ಬರದಿರಲಿ, ಆಸ್ತಿಗಳು ಲಾಭವನ್ನು ದುಡಿಯಲಿ, ಜಡವಾಗಿರಲಿ, ಬಡ್ಡಿಗಳು ವಸೂಲಾಗುವಂಥವಾಗಿರಲಿ ಇರದಿರಲಿ – ಸಾರಾಸಗಟಾಗಿ ಎಲ್ಲವನ್ನೂ ಒಳಗೊಳಿಸಿಕೊಂಡು ಲಾಭವನ್ನು ತೋರಿಸುವ ಪದ್ಧತಿಯನ್ನು ಕೈಬಿಡಬೇಕಾಯಿತು. ಲಾಭ–ನಷ್ಟ ತಃಖ್ತೆ ಹಾಗೂ ಸ್ಥಿತಿವಿವರಣ ಪಟ್ಟಿಯ ತಯಾರಿಕೆಯಲ್ಲಿ ವೈಜ್ಞಾನಿಕ ವಿಧಾನವನ್ನು ಅನುಸರಿಸಬೇಕಾಗಿ ಬಂದದ್ದರಿಂದ, ಅದು ಪಾರದರ್ಶಕವಾಗಿರಬೇಕೆಂಬ ನಿಯಮದಿಂದ ಬಹಳಷ್ಟು ಬ್ಯಾಂಕುಗಳು ತಮ್ಮ ನಿಜಸ್ಥಿತಿಯನ್ನು ಮೊದಲ ಬಾರಿಗೆ ತೋರ್ಪಡಿಸಬೇಕಾಗಿ ಬಂತು. ಅವುಗಳ ತಳರೇಖೆಗಳು ಕೆಂಪು ಬಣ್ಣ ತಳೆದುವು; ನಷ್ಟ ಎದ್ದು ಕಾಣಿಸತೊಡಗಿತು. ಸಂಸಾರ ಗುಟ್ಟು, ವ್ಯಾಧಿ ರಟ್ಟು ಎಂಬ ಗಾದೆಗೆ 'ನಷ್ಟ ರಟ್ಟು' ಎಂಬ ಸೂತ್ರವನ್ನೂ ಸೇರಿಸಬೇಕಾಗಿ ಬಂತು. ಬ್ಯಾಂಕಿಂಗ್ ವ್ಯವಸ್ಥೆಯ ದೌರ್ಬಲ್ಯವನ್ನು ಸರಿಪಡಿಸುವುದು ಅತ್ಯಂತ ಜರೂರು ಎಂಬ ಅಂಶವೂ ವ್ಯಕ್ತಪಟ್ಟಿತು. ಅಂತೂ ಇಡೀ ಬ್ಯಾಂಕಿಂಗ್ ವ್ಯವಸ್ಥೆ ಸುಧಾರಣೆಯ ಹಾದಿಯಲ್ಲಿ ಮುನ್ನಡೆಯಿತೆನ್ನಬಹುದು. ಬ್ಯಾಂಕುಗಳ ಸ್ವಂತ ಬಂಡವಾಳ ಸಮಿತಿ ಶಿಫಾರಸು ಮಾಡಿದ ಶೇ.8ರಷ್ಟಿರಬೇಕೆಂಬ ನಿಯಮವನ್ನು ಪಾಲಿಸಲು ಅವು ಕ್ರಮ ತೆಗೆದುಕೊಂಡುವು. ಶಾಸನ ವಿಧಿಸಿದ ದ್ರವತ್ವ ಅನುಪಾತ, ನಗದು ಮೀಸಲು ಅನುಪಾತ – ಇವುಗಳನ್ನು ರಿಸರ್ವ್ ಬ್ಯಾಂಕು ಹಂತಹಂತವಾಗಿ ಇಳಿಸತೊಡಗಿದೆ. ಆದ್ಯತಾ ವಲಯದ ಮರುವ್ಯಾಖ್ಯೆ, ಅದಕ್ಕೆ ನೆರವಿನ ನೀಡಿಕೆಯ ಇಳಿತ ಈ ನಿಟ್ಟಿನಲ್ಲಿ ನರಸಿಂಹಂ ಸಮಿತಿಯ ಸಲಹೆ ಸಮರ್ಪಕವಾಗಿ ಜಾರಿಗೆ ಬಂದಿಲ್ಲ. ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಸ್ಥಳೀಯ ಹೀಗೆ ಮೂರು ಸ್ತರಗಳಲ್ಲಿ ಬ್ಯಾಂಕಿಂಗ್ ಸಂರಚನೆಯನ್ನು ಮರುಹೊಂದಿಸಬೇಕೆಂಬ ಶಿಫಾರಸು ಕಾರ್ಯಗತವಾಗಿಲ್ಲ. ಖಾಸಗಿ ವಲಯದಲ್ಲಿ ಕೆಲವು ಹೊಸ ಬ್ಯಾಂಕುಗಳ ಉದಯವಾಗಿದೆ. ವಿದೇಶಿ ಬ್ಯಾಂಕುಗಳ ಶಾಖೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸುದೃಢಗೊಳಿಸಲು ಸರ್ಕಾರ ಕೆಲವು ಆರಂಭಿಕ ಕ್ರಮಗಳನ್ನು ತೆಗೆದುಕೊಂಡಿದೆ. ಸ್ಥಳೀಯ ವಲಯ ಬ್ಯಾಂಕುಗಳೆಂಬ ಹೊಸ ಬ್ಯಾಂಕಿಂಗ್ ಸಂಸ್ಥೆಗಳ ಯೋಜನೆಯೊಂದನ್ನು ಸರ್ಕಾರ ಘೋಷಿಸಿದೆ. ಆದರೆ ಅದರ ಸ್ವರೂಪ ಹೇಗೆ ಎಂಬುದು ಗೊತ್ತಿಲ್ಲ. ಇನ್ನೂ ಅವುಗಳ ಅವತಾರವಾವಾಗಿಲ್ಲ. ಬಡ್ಡಿ ದರಗಳ ಸಂರಚನೆ ರಿಸರ್ವ್ ಬ್ಯಾಂಕಿನ ಹಿಡಿತದಿಂದ ಬಹುಮಟ್ಟಿಗೆ ಮುಕ್ತವಾಗಿದೆ. ಬ್ಯಾಂಕುಗಳಿಗೆ ಈ ನಿಟ್ಟಿನಲ್ಲಿ ಹೆಚ್ಚಿನ ಸ್ವಾತಂತ್ರ್ಯ ದೊರಕಿದೆ.

ಆದರೆ ಇಂದಿನ ಅತ್ಯಂತ ಚಾಂಚಲ್ಯಯುಕ್ತ ಹಣಕಾಸು ವಾತಾವರಣದಲ್ಲಿ ಬಹಳಷ್ಟು ಗೊಂದಲದ ಪರಿಸ್ಥಿತಿ ಏರ್ಪಟ್ಟಿದೆ. ಸ್ಪರ್ಧೆಯೂ ಬೆಳೆಯುತ್ತಿವೆ. ಆಧುನಿಕ ತಂತ್ರಜ್ಞಾನ ಸಜ್ಜಿತವಾದ ವಿದೇಶಿ ಹಾಗೂ ಆಧುನಿಕ ಖಾಸಗಿ ವಲಯ ಬ್ಯಾಂಕುಗಳು ಸರ್ಕಾರಿ ವಲಯದ ಡಿನೋಸಾರುಗಳಿಗೆ ಭಾರೀ ಸವಾಲನ್ನೊಡುತ್ತಿದೆ. ಸ್ಪರ್ಧೆ ತೀವ್ರವಾಗಿದೆ. ಹೆಚ್ಚು ಲಾಭ ತರುವ ವಲಯಕ್ಕೆ ಆಧುನಿಕ ಉಪಕರಣಗಳ ಸಜ್ಜಿಕೆಯಿಂದ ದಕ್ಷ ಹಾಗೂ ಶೀಘ್ರ ಸೇವೆಯನ್ನೊದಗಿಸುವುದರ ಜೊತೆಗೆ ಗ್ರಾಮಪ್ರದೇಶದಲ್ಲಿ ಹಬ್ಬಿರದ ಶಾಖಾಜಾಲವನ್ನು ಸೆರಗಿಗೆ ಕಟ್ಟಿಕೊಂಡು, ಉದ್ಯೋಗಿಗಳ ದಂಡಿನ ನೆರವಿನಿಂದ ತಮ್ಮ ಸೇವೆಯನ್ನು ಸುಧಾರಿಸುವುದು ಹೇಗೆಂಬುದರ ಬಗ್ಗೆ ನಮ್ಮ ಸರ್ಕಾರಿ ವಲಯದ ಬ್ಯಾಂಕುಗಳು ತೀವ್ರವಾಗಿ ಯೋಚಿಸಬೇಕಾಗಿದೆ.

ನರಸಿಂಹಂ ಸಮಿತಿ II

ಬ್ಯಾಂಕಿಂಗ್ ವಲಯದಲ್ಲಿ ಇದುವರೆಗೆ ಆಗಿರುವ ಸುಧಾರಣೆಗಳನ್ನು ಪರಿಶೀಲಿಸಿ, ಇವನ್ನು ಇನ್ನೊಂದು ಮಜಲು ಮುಂದಕ್ಕೆ ಕೊಂಡೊಯ್ದು, ಮುಂದಿನ ಶತಮಾನವನ್ನು ನಮ್ಮ ಬ್ಯಾಂಕುಗಳು ಯಶಸ್ವಿಯಾಗಿ ಎದುರುಗೊಳ್ಳುವಂತೆ ಮಾಡಲು ಶಿಫಾರಸುಗಳನ್ನು ನೀಡಬೇಕೆಂದು ಸರ್ಕಾರ ಮತ್ತೆ ನರಸಿಂಹಂ ಅವರ ಅಧ್ಯಕ್ಷತೆಯಲ್ಲೇ ಇನ್ನೊಂದು ಸಮಿತಿಯನ್ನು ನೇಮಕ ಮಾಡಿತ್ತು. ಆ ಸಮಿತಿ ತನ್ನ ವರದಿಯನ್ನು ಈಚೆಗೆ ಸರ್ಕಾರಕ್ಕೆ ಒಪ್ಪಿಸಿದೆ. ಬ್ಯಾಂಕುಗಳ ವಿಲೀನ, ವಿಶ್ವವ್ಯಾಪಿ ಕಾರ್ಯಾಚರಣೆಯ ಬ್ಯಾಂಕುಗಳ ರಚನೆ, ದುರ್ಬಲ ಬ್ಯಾಂಕುಗಳ ಸಮಾಪನ, ಬ್ಯಾಂಕ್ ನಿರ್ದೇಶಕ ಮಂಡಲಿಗಳ ಪುನರ್ರಚನೆ, ಬ್ಯಾಂಕಿಂಗ್ ಕಾನೂನಿನ ಸುಧಾರಣೆ ಮುಂತಾದ ನಾನಾ ವಿಷಯಗಳನ್ನು ಕುರಿತು ಈ ಎರಡನೆಯ ಸಮಿತಿಯು ಹಲವಾರು ಸಲಹೆಗಳನ್ನು ನೀಡಿದೆ. ದೇಶದ ಆರ್ಥಿಕ ಸುಧಾರಣೆಗಳನ್ನು ಇನ್ನಷ್ಟು ಮುಂದುವರಿಸಬೇಕೆಂಬ ಸರ್ಕಾರದ ಆಲೋಚನೆಯ ಹಿನ್ನೆಲೆಯಲ್ಲಿ ಈ ವರದಿಗೆ ವಿಶೇಷ ಮಹತ್ವ ಉಂಟಾಗಿದೆ.

ನಮ್ಮ ರೂಪಾಯಿಯನ್ನು ಚಾಲ್ತಿ ಲೆಕ್ಕಕ್ಕೆ ಸಂಬಂಧಿಸಿದಂತೆ ಈಗಾಗಲೇ ಪರಿವರ್ತನೀಯವಾಗಿ ಮಾಡಲಾಗಿದೆ. ಅದನ್ನು ಮುಕ್ತವಾಗಿ ಅನ್ಯದೇಶಗಳ ನಾಣ್ಯಗಳಿಗೆ ಪರಿವರ್ತಿಸಬಹುದಾಗಿದೆ. ಮಾರುಕಟ್ಟೆಯ ಪರಿಸ್ಥಿತಿಗೆ ಅನುಗುಣವಾಗಿ ಅದರ ಮೌಲ್ಯ ಚಲನಶೀಲವಾಗಿದೆ. ಆದರೆ ದೀರ್ಘಕಾಲೀನ ವಹಿವಾಟುಗಳಿಗೆ ಸಂಬಂಧಿಸಿದಂತೆ ಬಂಡವಾಳ ಲೆಕ್ಕದ ವಿಭಾಗದಲ್ಲಿ ರೂಪಾಯಿಯನ್ನು ಪರಿವರ್ತನೀಯವಾಗಿ ಮಾಡಿಲ್ಲ. ಈ ವಿಭಾಗದಲ್ಲಿ ಮುಕ್ತ ವಾತಾವರಣವನ್ನು ನಿರ್ಮಿಸಬೇಕೆಂಬ ಆಶಯವನ್ನು ಪೂರೈಸಬೇಕಾದರೆ ಅದಕ್ಕೆ ತಕ್ಕಂತೆ

ನಮ್ಮ ಇಡೀ ಹಣಕಾಸು ವಲಯ, ಅದರಲ್ಲೂ ಬ್ಯಾಂಕಿಂಗ್ ವಲಯ, ದಕ್ಷವಾಗಿ ಕಾರ್ಯನಿರ್ವಹಿಸಬೇಕು. ಏಷ್ಯನ್ ಮಾರುಕಟ್ಟೆಗಳಲ್ಲಿ ಈಚೆಗೆ ಸಂಭವಿಸಿರುವ ಭಾರೀ ಕುಸಿತ, ಆ ದೇಶಗಳ ಕರೆನ್ಸಿಗಳ ಪತನ, ಬೆಲೆಗಳ ಏರಿಕೆ, ಪಾವತಿ ಶಿಲ್ಕಿನ ಬಿಕ್ಕಟ್ಟು, ವಿದೇಶಿ ವಿನಿಮಯದ ನಿರಂತರ ಹೊರ ಹರಿವು ಮುಂತಾದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಭಾರತದ ಬ್ಯಾಂಕಿಂಗ್ ವಲಯ ಸುದೃಢವಾಗಿರದಿದ್ದರೆ ಇಲ್ಲೂ ವ್ಯವಸ್ಥೆ ಕುಸಿದು, ಬಿಕ್ಕಟ್ಟು ಸ0ಭವಿಸುವುದರಲ್ಲಿ ಆಶ್ಚರ್ಯವಿಲ್ಲ. ಈಚೆಗೆ ಭಾರತದ ರೂಪಾಯಿಯ ವಿದೇಶಿ ಮೌಲ್ಯದಲ್ಲೂ ಇಳಿತವಾಗುತ್ತಿರುವದೂ ವಿದೇಶಿ ಹಣದ ಹೊರ ಹರಿವು ಹೆಚ್ಚಿರುವದೂ, ಬಂಡವಾಳ ಮಾರುಕಟ್ಟೆಯಲ್ಲಿ ವಿದೇಶೀಯರು ತೊಡಗಿಸಿರುವ ವಿನಿಯೋಜನೆಯನ್ನು ಅವರು ಹಿಂತೆಗೆದುಕೊಳ್ಳುತ್ತಿರುವುದೂ ಅಪಾಯದ ಚಿಹ್ನೆಗಳು. ಈ ಪರಿಸ್ಥಿತಿಯನ್ನು ಗಮನಿಸಿದಾಗ ಬ್ಯಾಂಕಿಂಗ್ ವಲಯದ ಸುಧಾರಣೆಗೆ ಹೆಚ್ಚಿನ ಮಹತ್ವ ನೀಡುವುದು ಅಗತ್ಯವೆನಿಸಿದೆ.

ನಿರಾಶಾದಾಯಕ ವರದಿ

ಭಾರತದ ಹಣಕಾಸು ವ್ಯವಸ್ಥೆ ಕುರಿತ ತಮ್ಮ ಮೊದಲನೆ ವರದಿಯಲ್ಲಿ ಹಲವಾರು ಮುಖ್ಯ ಸಲಹೆಗಳನ್ನು ನೀಡಿರುವ ನರಸಿಂಹಂ ಅವರು ತಮ್ಮ ಈ ಎರಡನೆಯ ವರದಿಯಲ್ಲಿ ಬ್ಯಾಂಕಿಂಗ್ ವಲಯದ ಸುಧಾರಣೆ ಕುರಿತ ವರದಿಯಲ್ಲಿ ಅಂಥ ಕ್ರಾಂತಿಕಾರಕ ಸಲಹೆಗಳನ್ನೇನೂ ನೀಡಿಲ್ಲ ಎನ್ನುವುದು ಅನೇಕರಲ್ಲಿ ನಿರಾಶೆಯನ್ನುಂಟುಮಾಡಿದೆ. ಮೊದಲನೆಯ ವರದಿಯ ಹಲವು ಸಲಹೆಗಳನ್ನೇ ಅವರು ಪುನರುಚ್ಚರಿಸಿದ್ದಾರೆಂದು ಕಾಣುತ್ತದೆ. ಆ ವರದಿಯಲ್ಲಿ ಮಾಡಲಾಗಿದ್ದು, ಇನ್ನೂ ಜಾರಿಗೆ ಬಾರದಿರುವ ಸಲಹೆಗಳನ್ನು ನರಸಿಂಹಂ ಅವರು ಪುನರುಚ್ಚರಿಸಿದ್ದಾರೆ. ಹೀಗಾಗಬೇಕು, ಹಾಗೆ ಮಾಡಬಾರದು ಎಂದು ಖಚಿತವಾಗಿ ಹೇಳುವ ವಿಧಾನವನ್ನು ಬಿಟ್ಟು, ಹೀಗಾದರೆ ಚೆನ್ನ ಎನ್ನಬಹುದು, ಹಾಗೆ ಮಾಡದಿರುವುದು ಲೇಸೆಂದು ತೋರುತ್ತದೆ, ಇದನ್ನು ಪರೀಕ್ಷಿಸ ಬಹುದಾಗಿದೆ – ಎಂದು ದಾಕ್ಷಿಣ್ಯಪರವಾದ ನಿಲುವನ್ನು ತಳೆದಿದ್ದಾರೆಂಬುದು ಒಂದು ಟೀಕೆ.

ಬ್ಯಾಂಕಿಂಗ್ ವ್ಯವಸ್ಥೆಯ ಪುನಸ್ಸಂರಚನೆಯ ವಿಚಾರವನ್ನು ತೆಗೆದುಕೊಳ್ಳೋಣ. ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಸ್ಥಳೀಯ ಸ್ತರಗಳಲ್ಲಿ ಇದರ ಪುನಸ್ಸಂರಚನೆಯಾಗಬೇಕೆಂಬ ಅವರ ಮೊದಲನೆಯ ವರದಿಯ ಸಲಹೆ ಇನ್ನೂ ಕಾರ್ಯಗತವಾಗದಿರುವುದಕ್ಕೆ ಅವರಿಗೆ ಏನೂ ದುಃಖವೆನಿಸುವುದಿಲ್ಲ. ಆ ಬಗ್ಗೆ ಖಡಾ ಖಂಡಿತವಾಗಿ ನುಡಿಯುವ ಸಾಹಸಕ್ಕೆ ಅವರು ಹೋಗಿಲ್ಲ. ಭಾರತೀಯ ಬ್ಯಾಂಕಿಂಗ್ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಯಶಸ್ವಿಯಾಗಿ ತೊಡಗುವುದು

ಸಾಧ್ಯವಾಗುವಂತೆ ಮಾಡುವುದು ಹೇಗೆಂಬ ಬಗ್ಗೆ ಖಚಿತವಾದ ನಿರ್ಣಯ ನೀಡಿಲ್ಲ. ಆತಂಕಕಾರಿ ಪ್ರವೃತ್ತಿಗಳನ್ನೇನೋ ಸಮಿತಿ ಗುರುತಿಸಿದೆ. ಅಲ್ಲಿಂದ ಮುಂದೆ ನಿರ್ಣಾಯಕವಾದ ಸಲಹೆ ನೀಡಿಲ್ಲ. ಬಲಿಷ್ಠವಾದ ಬ್ಯಾಂಕುಗಳು ಪರಸ್ಪರ ವಿಲೀನಗೊಳ್ಳಬಹುದು ಎಂದು ಸಮಿತಿ ಹೇಳಿದೆ. ಆದರೆ ದುರ್ಬಲ ಬ್ಯಾಂಕುಗಳನ್ನು ಏನು ಮಾಡಬೇಕು? ಪ್ರಬಲ ಬ್ಯಾಂಕುಗಳೊಂದಿಗೆ ಅವನ್ನು ವಿಲೀನಗೊಳಿಸುವುದು ವಿವೇಕದ ಕ್ರಮವಲ್ಲ. ಯಾವ ಬ್ಯಾಂಕಿನ ಸಂಚಿತ ನಷ್ಟಗಳೂ ನಿಷ್ಕ್ರಿಯ ಆಸ್ತಿಗಳೂ ಅದರ ಬಂಡವಾಳ ನಿಧಿಗಿಂತ ಅಧಿಕವಾಗಿವೆಯೋ, ಅದರ ಪುನರ್ ಬಂಡವಾಳೀಕರಣ ಬಾಂಡುಗಳಿಂದ ಬರುವ ವರಮಾನಕ್ಕಿಂತ ಕಾರ್ಯಕಲಾಪಗಳ ವೆಚ್ಚವೇ (ಮೂರು ವರ್ಷಗಳನ್ನು ಮೀರಿದ ಅವಧಿಯಲ್ಲಿ) ಹೆಚ್ಚಾಗಿದೆಯೋ, ಅಂಥ ಬ್ಯಾಂಕು ದುರ್ಬಲ ಬ್ಯಾಂಕು ಎನಿಸಿಕೊಳ್ಳುತ್ತದೆ. ಅಂಥ ಬ್ಯಾಂಕನ್ನು ಸೀಮಿತ (ನ್ಯಾರೋ) ಬ್ಯಾಂಕ್ ಎಂದು ಪರಿಗಣಿಸಿ, ಸರ್ಕಾರಿ ಪತ್ರಗಳೇ ಮುಂತಾದ ಸುಭದ್ರ ಆಸ್ತಿಗಳಲ್ಲಿ ಅದು ಹಣ ತೊಡಗಿಸುವಂತೆ ನೋಡಿಕೊಳ್ಳಬೇಕು ಎಂದು ವರದಿ ಸೂಚಿಸುತ್ತದೆ. ಆದರೆ ಈ ಪ್ರಯೋಗ ಸಫಲವಾಗದೆಹೋದರೆ, ಅಂಥ ಬ್ಯಾಂಕು ಮುಂದೆಯೂ ನಷ್ಟದ ಹಾದಿಯಲ್ಲೇ ನಡೆದರೆ ಆಗ ಏನು ಮಾಡಬೇಕು? ಅದನ್ನು ಮುಚ್ಚ ಬೇಕೆ, ಬೇಡವೆ? ಅದಕ್ಕೆ ಕಾಯಕಲ್ಪ ಚಿಕಿತ್ಸೆ ನೀಡುವ ಬೇರೆ ಉಪಾಯವುಂಟೆ? ಸಮಿತಿ ಈ ಬಗ್ಗೆ ಮೌನವಾಗಿದೆ. ಮುಚ್ಚಬೇಕು ಎನ್ನುವಂತಿಲ್ಲ, 'ಶಾಂತಂ ಪಾಪಂ!' ಮುಚ್ಚದೆ ಮುಂದುವರಿಸುವುದು ಹೇಗೆ? ವರದಿ ಈ ಬಗ್ಗೆ ಬೆಳಕು ಚೆಲ್ಲುವುದಿಲ್ಲ. ಬಲಿಷ್ಠ ಬ್ಯಾಂಕುಗಳು ಮಿತವ್ಯಯದ ದೃಷ್ಟಿಯಿಂದ, ದಕ್ಷತೆಯ ಸಾಧನೆಗಾಗಿ, ಸ್ಪರ್ಧೆಯನ್ನು ಎದುರಿಸುವ ಸಲುವಾಗಿ ಪರಸ್ಪರ ವಿಲೀನಗೊಳ್ಳಬೇಕು ಎನ್ನುವ ಸಲಹೆಯನ್ನು ನೋಡೋಣ, ಅವು ಆ ರೀತಿ ವಿಲೀನಗೊಳ್ಳದಿದ್ದರೆ ಅವನ್ನು ಒಂದುಗೂಡಿಸಲು ಏನಾದರೂ ಉಪಾಯವಿದೆಯೆ? ಮಲೇಷಿಯಾದಲ್ಲಿ ಅವನ್ನು ಬಲವಂತದಿಂದ ಸಂಲಗ್ನ–ಗೊಳಿಸಲಾಯಿತು. ಅಂಥ ಕ್ರಮ ಇಲ್ಲಿ ಸಾಧುವೆ, ಅಲ್ಲವೆ? 'ಈ ಬಗ್ಗೆ ನಮ್ಮನ್ನು ಪ್ರಶ್ನಿಸಬೇಡಿ ಸ್ವಾಮಿ. ನಾವು ಬಾಯಿ ಬಿಡುವುದಿಲ್ಲ!' ಎನ್ನುವಂತಿದೆ, ಸಮಿತಿಯ ವರದಿ.

ನಿಷ್ಕ್ರಿಯ ಆಸ್ತಿಗಳ ಸಮಸ್ಯೆ, ಆಸ್ತಿಗಳ ಪುನರ್ರಚನಾ ನಿಧಿಯ ಸೃಷ್ಟಿ, ಬಂಡವಾಳ ಪರ್ಯಾಪ್ತತೆ, ರಿಸರ್ವ್ ಬ್ಯಾಂಕಿನ ನಿಬಂಧನಾತ್ಮಕ ಹಾಗೂ ಉಸ್ತುವಾರಿ ಕಾರ್ಯಭಾರಗಳ ಪ್ರತ್ಯೇಕತೆ, ಬ್ಯಾಂಕ್ ಮಂಡಲಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ, ಒಡೆತನ ಮತ್ತು ನಿರ್ವಹಣೆಗಳನ್ನು ಬೇರೆ ಬೇರೆ ಮಾಡುವ ಅಗತ್ಯ ಮುಂತಾದ ನಾನಾ ವಿಚಾರಗಳಲ್ಲಿ ಸಮಿತಿಯ ವರದಿ ಹೆಚ್ಚು ದೂರ ಕ್ರಮಿಸಿಲ್ಲ. ಹಿಂದೆ ಮಾಡಿದ್ದಂಥ ಶಿಫಾರಸುಗಳನ್ನೇ ಮತ್ತೊಮ್ಮೆ ಅದೂ ಕಡಿಮೆ ಜೋರಾಗಿ ಉಚ್ಚರಿಸಿದೆ.

ಸರ್ಕಾರ ತನ್ನ ಒಡೆತನದ ಪಾತ್ರವನ್ನು ಮಾತ್ರ ಉಳಿಸಿಕೊಂಡು ಬ್ಯಾಂಕುಗಳಿಗೆ ಸ್ವಾಯತ್ತತೆ ನೀಡುವ ಬಗ್ಗೆ ಪರಿಶೀಲಿಸಬಹುದು ಎಂದು ಸಮಿತಿ ಹೇಳುತ್ತದೆ. ಇದಕ್ಕಿಂತ ಗಟ್ಟಿಯಾಗಿ ಹೇಳಲು ಅದಕ್ಕೇ ಅಧೈರ್ಯ? ಬ್ಯಾಂಕುಗಳು ತಮ್ಮ ನಷ್ಟಸಂಭಾವ್ಯತಾಧಾರಿತ ಆಸ್ತಿಗಳ ಕನಿಷ್ಠ ಶೇ.8ರಷ್ಟು ಬಂಡವಾಳ ಹೊಂದಿರಬೇಕು ಎಂದು ಹಿಂದಿನ (ಹಣಕಾಸು ಪುನರಚನಾ ಸಮಿತಿಯ) ವರದಿಯಲ್ಲಿ ಹೇಳಲಾಗಿತ್ತು. ಈಗ ಇದನ್ನು ಪುನರ್ಪರಿಶೀಲಿಸಿ, ಕನಿಷ್ಠ ಅನುಪಾತವನ್ನು ನಿರ್ಧರಿಸುವ ಬಗ್ಗೆ ಯೋಚಿಸಬೇಕು ಎಂದಷ್ಟೇ ಸಮಿತಿ ಈಗ ಹೇಳಿದೆ. ಇದನ್ನು ಎಷ್ಟಕ್ಕೆ ಏರಿಸಬೇಕು? ಎಷ್ಟು ಹಂತಗಳಲ್ಲಿ ಈ ಮಟ್ಟ ತಲುಪಬೇಕು – ಎಂಬ ಬಗ್ಗೆ ಸಮಿತಿ ಮೌನವಾಗಿದೆ. ಏಕೆ ಭಯವೋ? ಅಥವಾ ಸಂದೇಹವೋ?

ನಿಷ್ಕ್ರಿಯ ಆಸ್ತಿಗಳ ಬಗ್ಗೆಯೂ ಸಮಿತಿ ಆತಂಕ ವ್ಯಕ್ತಪಡಿಸಿದೆ, ಅಷ್ಟೇ. ಈ ಸಮಸ್ಯೆಯ ಪರಿಹಾರಕ್ಕೆ, ಇವುಗಳ ಅನುಪಾತವನ್ನು ಇಳಿಸುವುದಕ್ಕೆ ನಿರ್ದಿಷ್ಟ ಸಲಹೆಯೇನನ್ನೂ ನೀಡಿಲ್ಲ. ಬ್ಯಾಂಕುಗಳ ನಿಷ್ಕ್ರಿಯ ಆಸ್ತಿಗಳನ್ನು ವಹಿಸಿಕೊಳ್ಳಲು ಆಸ್ತಿ ಪುನರ್ರಚನಾ ನಿಧಿಯ ಪರಿಕಲ್ಪನೆಯನ್ನು ಪುನಃ ಸೃಷ್ಟೀಕರಿಸುವ ಬಗ್ಗೆ ಯೋಚಿಸುವುದು ಅಗತ್ಯ ಎಂದಷ್ಟೇ ಹೇಳಿದೆ. ಹಿಂದಿನ ವರದಿಯಲ್ಲಿ ಈ ಬಗ್ಗೆ ಸಮಿತಿ ಮಾಡಿದ್ದ ಸಲಹೆಯನ್ನು ಸರ್ಕಾರವೂ ರಿಸರ್ವ್ ಬ್ಯಾಂಕೂ ತಳ್ಳಿಹಾಕಿದ್ದವು. ಈ ಆರು ವರ್ಷಗಳ ನಿರಾಶಾದಾಯಕ ಅನುಭವದ ಹಿನ್ನೆಲೆಯಲ್ಲಿ ಸಮಿತಿ ಈಗ ಈ ಬಗ್ಗೆ ಖಚಿತ ನಿಲುವು ತಳೆಯಬೇಕಿತ್ತು. ಆ ಧೈರ್ಯ ಸಮಿತಿಗೆ ಏಕೆ ಬರಲಿಲ್ಲ?

ಬ್ಯಾಂಕುಗಳು, ಅಭಿವೃದ್ಧಿ ಹಣಕಾಸು ಸಂಸ್ಥೆಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ನಡುವಣ ಗೆರೆಯ ವಿಚಾರವನ್ನೂ ಸಮಿತಿ ಪರಿಶೀಲಿಸಿದೆ. ವಾಣಿಜ್ಯ ಬ್ಯಾಂಕಿಂಗ್ ಹಾಗೂ ಅಭಿವೃದ್ಧಿ ಬ್ಯಾಂಕಿಂಗ್‌ಗಳನ್ನು ಪ್ರತ್ಯೇಕವಾಗಿ ಮುಂದುವರಿಸಬೇಕೆ, ಅವನ್ನು ಒಂದುಮಾಡಬೇಕೆ – ಎಂಬ ಬಗ್ಗೆ ಸಮಿತಿ ತನ್ನ ವಿವೇಚನಾಯುತ ಅಭಿಪ್ರಾಯವನ್ನು ತಿಳಿಸಬೇಕಾಗಿತ್ತು. ಅಭಿವೃದ್ಧಿ ಹಣಕಾಸು ಸಂಸ್ಥೆಗಳು ಬ್ಯಾಂಕಿಂಗ್ ವ್ಯವಹಾರವನ್ನೂ ಮಾಡಲು ಅವಕಾಶ ನೀಡಬೇಕು ಎಂದು ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕಿನ (ಐಡಿಬಿಐ) ಅಧ್ಯಕ್ಷರಾದ ಎಸ್. ಎಚ್. ಖಾನ್ ಅವರ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ. ನರಸಿಂಹಂ ಸಮಿತಿಯೂ ಇದಕ್ಕೆ ಒಲವು ತೋರಿಸುವಂತಿದೆ. ಖಡಾಖಂಡಿತವಾಗಿ ಶಿಫಾರಸು ಮಾಡಿಲ್ಲ!

ಭವಿಷ್ಯದ ವಿಶ್ವವ್ಯವಸ್ಥೆ

ಭಾರತದಲ್ಲಿ ಮಾತ್ರವಲ್ಲದೆ ಇಡೀ ವಿಶ್ವದಲ್ಲೇ ಇಂದು ಹಣಕಾಸು ವಲಯ ಬಹಳಷ್ಟು ಗೊಂದಲಮಯವಾಗಿದೆ. ಏಷ್ಯನ್ ದೇಶಗಳಲ್ಲಿ ಹಲವಾರು

ಹಣಕಾಸು ಸಂಸ್ಥೆಗಳು ಉರುಳಿಬೀಳುತ್ತಿವೆ. ಬಂಡವಾಳ ಹಾಗೂ ಹಣ ಪೇಟೆಗಳು ಬಿಕ್ಕಟ್ಟನ್ನೆದುರಿಸುತ್ತಿವೆ. ಇಡೀ ವಿಶ್ವದ ಹಣಕಾಸು ಪರಿಸ್ಥಿತಿಯನ್ನು ಸಮಸ್ಥಿತಿಯಲ್ಲಿಡುವ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಐವತ್ತು ವರ್ಷ ಹಿಂದೆ ಸ್ಥಾಪಿಸಲಾದ ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣ ನಿಧಿಗಳು ನಿರೀಕ್ಷೆಯಂತೆ ಯಶಸ್ಸು ಗಳಿಸಿಲ್ಲ. ವಿವಿಧ ದೇಶಗಳಲ್ಲಿಯ ಹಣಕಾಸು ವ್ಯವಸ್ಥೆಗಳು ಕುಸಿದಾಗ ಈ ಸಂಸ್ಥೆಗಳು ನೀಡಿದ ನೆರವು ಪರಿಣಾಮಕಾರಿಯಾಗಿಲ್ಲ. ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಇವುಗಳ ಬಳಿ ಯಾವ ಮದ್ದೂ ಇಲ್ಲ. ಪ್ರತಿಯೊಂದು ದೇಶಕ್ಕೂ ಒಂದು ಕೇಂದ್ರೀಯ ಬ್ಯಾಂಕ್ ಇರುವಂತೆಯೇ ಇಡೀ ವಿಶ್ವಕ್ಕೂ ಒಂದು ಪರಿಣಾಮಕಾರಿ ಬ್ಯಾಂಕಿಂಗ್ ವ್ಯವಸ್ಥೆ ಇರಬೇಕೆಂಬ ಸಲಹೆಯಿದೆ. ಈ ಬಗ್ಗೆ ಎಲ್ಲ ದೇಶಗಳೂ ವಿಚಾರ ಹರಿಸಬೇಕಾಗಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಭೂಮಂಡಲೀಯ ಹಣಕಾಸು ವಲಯದ ಪರಿಕಲ್ಪನೆ ಎಂಥದಾಗಿರಬೇಕು? ಈ ವ್ಯವಸ್ಥೆಯೊಳಗಡೆ ಬೇರೆ ಬೇರೆ ದೇಶಗಳ ಬ್ಯಾಂಕಿಂಗ್ ವ್ಯವಸ್ಥೆಗಳು ಯಾವ ಪಾತ್ರ ವಹಿಸಬೇಕು? ಎಲ್ಲ ದೇಶಗಳೂ, ಎಲ್ಲ ವ್ಯವಸ್ಥೆಗಳೂ, ಈ ಮಹಾ ಪಥಸಂಚಲನದಲ್ಲಿ ಏಕರೀತಿಯಾಗಿ ಹೆಜ್ಜೆ ಇಡುವುದು ಹೇಗೆ? ಭಾರತೀಯ ಬ್ಯಾಂಕುಗಳೂ ಆತ್ಮ ವಿಶ್ವಾಸದಿಂದ, ಸ್ವತಂತ್ರವಾಗಿ, ದಕ್ಷವಾಗಿ ಮುನ್ನಡೆಯಲು ಏನು ಮಾಡಬೇಕು? ಇಂಥ ಮಹತ್ತ್ವದ ಪ್ರಶ್ನೆಗಳಿಗೆ ನರಸಿಂಹಂ ಸಮಿತಿಯ ವರದಿಯಲ್ಲಿ ಉತ್ತರಗಳಿಲ್ಲ. ಮಹತ್ತರವಾದ ಕಾಣ್ಕೆಗೆ ಮಹತ್ತರವಾದ, ನವೋನವವಾಗಿ ಚಿಂತನೆ ಹರಿಸಬಲ್ಲ ಮನಸ್ಸು ಇರಬೇಕು. ನಡೆದ ಜಾಡಿನಲ್ಲೇ ನಡೆಯುವ ಮನಸ್ಸು ಹೊಸ ನೋಟಗಳನ್ನು ಕಾಣಲಾರದು. ನಮ್ಮಲ್ಲಿರುವ ಮಹಾ ಮನಸ್ಸುಗಳ ಸಮಿತಿಯೊಂದು ಇಪ್ಪತ್ತೊಂದನೆಯ ಶತಮಾನಕ್ಕೆ ಹೋಗಲು ನಮಗೆ ದಾರಿ ತೋರಬೇಕು. ಅದಕ್ಕೆ ಅನುವುಮಾಡಿಕೊಡುವ ಇಚ್ಛೆಯುಳ್ಳವರು, ಸಾಮರ್ಥ್ಯ ಇರುವವರು ಯಾರು?

36.

2000–2001
ಸಂಪಾದಕರ ಬಿನ್ನಹ

ಬ್ಯಾಂಕಿಂಗ್ ಪ್ರಪಂಚ'ವೇಕೆ ಇದ್ದಕ್ಕಿದ್ದಹಾಗೆ ಅದೃಶ್ಯವಾಗಿದೆ? 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಹಾಗೆ, ಪ್ರಪಂಚವೆಂದರೆ 'ಬ್ಯಾಂಕಿಂಗ್ ಪ್ರಪಂಚವಯ್ಯ' ಎನ್ನುವ ರೀತಿಯಲ್ಲಿ ತಪ್ಪದೆ ಹೊರಬರುತ್ತಿದ್ದ ಬ್ಯಾಂಕಿಂಗ್ ಪ್ರಪಂಚ' ಎರಡು ವರ್ಷಗಳಿಂದ ಕಾಣೆಯಾಗಿದೆ ಎಂದು ಅನೇಕ ಓದುಗರೂ, ಬ್ಯಾಂಕಿಂಗ್ ವಿಚಾರದಲ್ಲಿ ಆಸಕ್ತರಾದವರೂ ಕನ್ನಡ ಪ್ರೇಮಿಗಳೂ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ಸರಸ್ವತೀ ನದಿಯಂತೆ ಇದು ನೆಲದ ಅಡಿಯಲ್ಲಿ ಬತ್ತಿಹೋಯಿತೆ? ಬ್ಯಾಂಕಿಂಗ್ ಪ್ರಪಂಚ'ವನ್ನು ಹೊರತರುವ ಹೊಣೆ ಹೊತ್ತ ಕಾರ್ಯಕರ್ತರ ಉತ್ಸಾಹ ಇಂಗಿಹೋಯಿತೆ? ಹಾಗಾಗಿದ್ದರೆ ಇದೊಂದು ಮಹಾ ದುರಂತವೆಂದು ಹಲವರು ಹಲುಬುತ್ತಿದ್ದಾರೆ. ಇಡೀ ಭಾರತದಲ್ಲಿ ಭಾರತೀಯ ಭಾಷೆಯೊಂದರಲ್ಲಿ ಬ್ಯಾಂಕಿಂಗ್ ಮತ್ತು ಹಣ ಕುರಿತ ವಿಚಾರಗಳಿಗೆ ಮೀಸಲಾಗಿದ್ದ ಪತ್ರಿಕೆ ಇದೊಂದೇ. ಹಿಂದಿಯಲ್ಲಿ ಕೂಡ, ಪ್ರಭುತ್ವದ ವಿಶೇಷವಾದ ಪ್ರೋತ್ಸಾಹವಿದ್ದರೂ, ಇಂಥ ಪತ್ರಿಕೆ ಪ್ರಕಟವಾಗುತ್ತಿಲ್ಲ. ಇದು ಕನ್ನಡದ ಹೆಮ್ಮೆ ಎಂದು ಭಾವಿಸುತ್ತ ಬಂದವರು ಹಲವರು. ಪತ್ರಿಕೆ ಅಂತರ್ಧಾನವಾದ್ದರಿಂದ ಅವರಿಗೆಲ್ಲ ಆಗಿರುವ ನಿರಾಶೆ, ಅಸಮಾಧಾನ, ದುಃಖ ಅಪಾರ.

ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಪ್ರಕಟವಾಗುತ್ತ ಬಂದ ಬ್ಯಾಂಕಿಂಗ್ ಪ್ರಪಂಚ'ದಿಂದಾಗಿ ಕನ್ನಡದಲ್ಲಿ ಇಂಥ ವಿಚಾರವನ್ನು ಕುರಿತು ಬರೆಯಬಲ್ಲವರ ತಂಡವೊಂದರ ನಿರ್ಮಾಣವಾಗಿದೆ. ಬೇರಾವ ಭಾಷೆಯಲ್ಲೂ ಬಾರದ ಅನೇಕ ಹೊಸ ಹೊಸ ವಿಷಯಗಳನ್ನು ಆವಿಷ್ಕಾರಗಳನ್ನು ಆಚರಣೆಗಳನ್ನೂ ಪರಿಕಲ್ಪನೆಗಳನ್ನೂ ಕುರಿತ ಲೇಖನಗಳು ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಪ್ರಕಟವಾಗಿವೆ. ಹಣ, ಬ್ಯಾಂಕಿಂಗ್ ಮತ್ತು ತತ್ಸಂಬಂಧವಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ಬ್ಯಾಂಕಿಂಗ್ ಪ್ರಪಂಚ ಟಂಕಿಸಿ ಪ್ರಚಾರಕ್ಕೆ ಕೊಟ್ಟಿದೆ. ಅನೇಕ ಇಂಗ್ಲಿಷ್ ಲೇಖನಗಳ ಭಾಷಾಂತರಗಳನ್ನೂ ಪ್ರಕಟಿಸಿದೆ. ನಾವು ಮಾಡಿದ್ದೆಲ್ಲ ಸಂಪೂರ್ಣವಾಗಿ ಸಮರ್ಪಕ ಎಂದು ನಾವು ಹೇಳಲಾರೆವು. ಆದರೆ ಪ್ರಥಮ ಪ್ರಾಮಾಣಿಕ ಪ್ರಯತ್ನವೆ0ದು ನಾವು ಸಮಾಧಾನಪಟ್ಟುಕೊಂಡಿದ್ದೇವೆ. ಮುಂದೆ ಈ ಕುರಿತ ಚಿಂತನೆ ನಡೆಸುವವರಿಗೆ, ಲೇಖನ ಬರೆಯುವವರಿಗೆ, ವಿಚಾರವಿನಿಮಯ ಮಾಡುವವರಿಗೆ ಸಹಾಯವಾಗುವಂತೆ ಕಾಡುಕಡಿದು ಹಾದಿ ನಿರ್ಮಿಸುವುದರಲ್ಲಿ 'ಬ್ಯಾಂಕಿಂಗ್ ಪ್ರಪಂಚ'ದ ಯತ್ನ ಸಫಲಗೊಂಡಿದೆ. 'ಬ್ಯಾಂಕಿಂಗ್ ಪ್ರಪಂಚ' – ಎಷ್ಟೇ ಅಡೆತಡೆಗಳಿದ್ದರೂ – ನಿಯತವಾಗಿ

ಹೊರಬರುತ್ತಿದ್ದಾಗ ಅದನ್ನು ಅಷ್ಟೇನೂ ಗಮನಿಸದಿದ್ದ ಅನೇಕರು, ಅದು ಬಾರದಿರುವಾಗ ಯಾವುದೋ ಶೂನ್ಯ ಉಂಟಾಗಿದೆಯೆಂದು ಭಾವಿಸತೊಡಗಿದ್ದಾರೆ. 'ಬ್ಯಾಂಕಿಂಗ್ ಪ್ರಪಂಚ' ನಿಲ್ಲಬಾರದು, ಅದು ಪ್ರಕಟವಾಗಬೇಕು ಎಂಬ ಆಶಯ ವ್ಯಕ್ತಪಡಿಸುತ್ತಿದ್ದಾರೆ.

'ಬ್ಯಾಂಕಿಂಗ್ ಪ್ರಪಂಚ' ಯಾರೊಬ್ಬರ ದುಡಿಮೆಯ ಫಲವಲ್ಲ. ಅದು ಒಂದು ರೀತಿಯಲ್ಲಿ ಸಮಷ್ಟಿ ಪ್ರಜ್ಞೆಯ ಪ್ರತೀಕ. ಅವರಿವರು ಅವಲಂಬಿಸದೆ ತಾವೇ ಸ್ವಪ್ರಯತ್ನದಿಂದ ಇದನ್ನು ಹೊರತರಬೇಕೆಂಬ ಹಂಬಲದುಂಬಿದ, ಸಂಕಲ್ಪದಿಂದ ಕೂಡಿದ ತಂಡದ ಅವಿರತ ದುಡಿಮೆಯಿಂದ ಪತ್ರಿಕೆ ಪ್ರಕಟವಾಗುತ್ತ ಬಂತು. ಇದಕ್ಕೆ ಹಿನ್ನೆಲೆಯಲ್ಲಿ ಪ್ರತಿ ಆರು ತಿಂಗಳುಗಳಿಗೆ ಒಂದರಂತೆ ನಡೆಸುತ್ತಿದ್ದ ಬ್ಯಾಂಕಿಂಗ್ ಕಮ್ಮಟ'ದಲ್ಲಿ ಮಂಡಿತವಾಗಿ, ಕಮ್ಮಟದ ಸದಸ್ಯರ ಪರಿಶೀಲನೆ ಹಾಗೂ ವಿಮರ್ಶೆಗೆ ಒಳಪಟ್ಟು, ಪರಿಷ್ಕೃತವಾದ ಲೇಖನಗಳನ್ನು 'ಬ್ಯಾಂಕಿಂಗ್ ಪ್ರಪಂಚ' ಪ್ರಕಟಿಸುತ್ತ ಬಂತು. ಈ ಕಮ್ಮಟಗಳು ಮೈಸೂರು ಅಥವಾ ಬೆಂಗಳೂರು ನಗರಕ್ಕೆ, ಅಥವಾ ಕೆಲವೇ ಉತ್ಸಾಹಿಗಳಿಗೆ, ಸೀಮಿತವಾಗಿರದೆ, ಇವು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಪ್ರಮುಖ ಸ್ಥಳಗಳಲ್ಲೂ ನಡೆಯಬೇಕು, ಎಲ್ಲ ಆಸಕ್ತರೂ ಇದರಲ್ಲಿ ಪಾಲ್ಗೊಳ್ಳುವಂತಾಗಬೇಕು ಎಂಬ ಉದ್ದೇಶದಿಂದಾಗಿ ಈ ಚಳವಳಿ ರಾಜ್ಯಕ್ಕೆಲ್ಲ ಹಬ್ಬಿತು. ಇದೇನೂ ಅಗಾಧ ಅಲೆಯನ್ನೆಬ್ಬಿಸಲಿಲ್ಲವಾದರೂ, ತನ್ನ ಸೀಮಿತ ಪರಿಧಿಯಲ್ಲಿ ಸಾರ್ಥಕವೆನಿಸಿತೆಂದು ಹೇಳಬಹುದು.


ಆದರೆ ಈ ಎಲ್ಲ ಕೆಲಸವನ್ನೂ ನಿರ್ವಹಿಸುವ ಹೊಣೆ ಹೊತ್ತವರ ತಂಡ ಮುಂದೆ ಅನೇಕ ಅಡೆತಡೆಗಳನ್ನೆದುರಿಸಬೇಕಾಗಿ ಬಂತು. ತಂಡದ ಸದಸ್ಯರು ಬ್ಯಾಂಕ್ ಉದ್ಯೋಗಿಗಳಾದ್ದರಿಂದ ಅವರು ಮೈಸೂರು ಬೆಂಗಳೂರುಗಳಿಂದ ಬೇರೆಡೆಗೆ ವರ್ಗವಾದರು. ಸಂಪರ್ಕ ಕಷ್ಟವಾಯಿತು. ಅನೇಕರು ಪದೋನ್ನತಿ ಪಡೆದು ತುಂಬ ಹೊಣೆಗಾರಿಕೆಯ ಕಾರ್ಯಭಾರಗಳನ್ನು ನಿರ್ವಹಿಸುವುದು ಅನಿವಾರ್ಯವಾಯಿತು. ಅದರ ಪ್ರಥಮ ನಿಷ್ಠೆ ತಮ್ಮ ಬ್ಯಾಂಕಿಗೆ. ಇದೂ ಬ್ಯಾಂಕಿಂಗ್ ಕೆಲಸವಾದರೂ ಮೂಲ ನಿಷ್ಠೆಗೆ ಅನ್ಯಾಯವಾಗದಂತೆ ಈ ಕೆಲಸದ ಹೊಣೆ ಹೊರುವುದು ಕಷ್ಟವಾಯಿತು. ಈ ತಂಡಕ್ಕೆ ಸಹಾಯಕವಾಗಿ ಎರಡು ಮೂರನೆಯ ಸ್ತರಗಳಲ್ಲಿ ಕಿರಿಯ ಉತ್ಸಾಹಿ ಕಾರ್ಯಕರ್ತರನ್ನು ಈ ಕಾರ್ಯದಲ್ಲಿ ತೊಡಗಿಸುವುದು ಸಾಧ್ಯವಾಗದಂತಾಯಿತು. ಕಿರಿಯರಲ್ಲಿ ಇದೇ ಬಗೆಯ ಶ್ರದ್ಧೆ, ಉತ್ಸಾಹಗಳಿರುವವರು ದೊರಕದಂತಾಯಿತು. ಹೀಗಾಗಿ ಚಟವಟಿಕೆ ತಗ್ಗತೊಡಗಿತು. ಅರ್ಧವಾರ್ಷಿಕವಾಗಿ ನಡೆಯುತ್ತಿದ್ದ ಕಮ್ಮಟಗಳೂ ಇಲ್ಲವಾದುವು. 'ಫಸಲು

ಧಾರಾಳವಾಗಿದೆ, ಕೊಯ್ಯುವವರು ಕಡಿಮೆ' ಎಂಬ ಬೈಬಲ್ ವಾಕ್ಯ ನಮಗೂ ಅನುಭವಕ್ಕೆ ಬಂತು.

ಸಹಜವಾಗಿಯೇ 'ಬ್ಯಾಂಕಿಂಗ್ ಪ್ರಪಂಚ'ವನ್ನು ನಡೆಸುವುದು ಕಷ್ಟವಾಯಿತು. ಲೇಖನಗಳ ಸಂಗ್ರಹ, ಪರಿಷ್ಕರಣೆ, ಸಂಪಾದನೆ, ಮುದ್ರಣ, ಹಂಚಿಕೆ – ಎಲ್ಲವೂ ಕಠಿಣ ಎನಿಸಿತು. ಹೀಗಾಗಿ 'ಬ್ಯಾಂಕಿಂಗ್ ಪ್ರಪಂಚ' ನಿಲ್ಲುವ ಸ್ಥಿತಿಗೆ ಬಂತು.

ಆದರೂ ನೈತಿಕ ಹೊಣೆಯನ್ನು ತಪ್ಪಿಸಿಕೊಳ್ಳುವಂತಿಲ್ಲ. ನಿರಂತರ ಶ್ರಮದ ಫಲವಾಗಿ 'ಬ್ಯಾಂಕಿಂಗ್ ಪ್ರಪಂಚಕ್ಕೆ ಅನೇಕ ಆಜೀವ ಚಂದಾದಾರರ ಸಂಪತ್ತಿ ಪ್ರಾಪ್ತವಾಗಿದೆ. ಅನೇಕ ಜಾಹೀರಾತುದಾರರು ಪ್ರೋತ್ಸಾಹ ನೀಡಿದ್ದಾರೆ. ಅವರೆಲ್ಲರನ್ನೂ ನಾವು ಮರೆಯುವಂತಿಲ್ಲ. ಆದ್ದರಿಂದ ಇದನ್ನೂ ಪುನರುಜ್ಜೀವನಗೊಳಿಸುವ ಸಂಕಲ್ಪ ಮಾಡಿದ್ದೇವೆ. ಸುಮಾರು ಎರಡುವರ್ಷಕಾಲ ಅಜ್ಞಾತವಾಸದಲ್ಲಿದ್ದ ಪತ್ರಿಕೆ ಈಗ ಹೊಸ ಶಕ್ತಿ ಸಂಪಾದನೆ ಮಾಡಿಕೊಳ್ಳಲು ಹವಣಿಸುತ್ತಿದೆ. ನಿರಂತರವಾಗಿ ಸಾಗುವಳಿ ಮಾಡಿದ ಜಮೀನನ್ನು ಸ್ವಲ್ಪ ಕಾಲ ಪಾಳು ಬಿಟ್ಟರೆ ಅದು ತನ್ನ ಸಾರವನ್ನು ಮತ್ತೆ ಪಡೆದುಕೊಳ್ಳುತ್ತದೆ, ಹೆಚ್ಚು ಫಲಪ್ರದವಾಗುತ್ತದೆ. ಅಂತೆಯೇ 'ಬ್ಯಾಂಕಿಂಗ್ ಪ್ರಪಂಚ' ಇನ್ನೂ ಹೆಚ್ಚಿನ ಕಳೆಯಿಂದ, ವೈವಿಧ್ಯದಿಂದ, ಉಪಯುಕ್ತತೆಯಿಂದ ಕೂಡಿ ಹೊರಬರುವಂತೆ ಮಾಡಲು ಯತ್ನಿಸುತ್ತಿದ್ದೇವೆ.

ಈ ನಡುವಿನ ಕಾಲಕ್ಕೆ ಸಂಬಂಧಿಸಿದಂತೆ ನಮ್ಮ ಓದುಗರಿಗೆ ಏನಾದರೂ ಕೊಡುಗೆ ನೀಡಬೇಕೆಂಬುದು ನಮ್ಮ ಹಂಬಲ. ಅಂತೆಯೇ ಈ ಹಿಂದಿನ ವರ್ಷಗಳಲ್ಲಿ ಬ್ಯಾಂಕಿಂಗ್ ಪ್ರಪಂಚದಲ್ಲಿ ಪ್ರಕಟವಾದ ಲೇಖನಗಳಲ್ಲಿ ಉತ್ತಮವಾದವನ್ನು ಪ್ರಾತಿಧಿಕವೆನಿಸಿದವನ್ನೂ ಸಂಕಲಿಸಿ ಎರಡು ಸಂಪುಟಗಳಲ್ಲಿ ಓದುಗರಿಗೆ ಸಮರ್ಪಿಸಬೇಕೆಂದು ಉದ್ದೇಶಿಸಿ ಈ ಮೊದಲನೆಯ ಸಂಪುಟವನ್ನು ಅವರ ಮಡಿಲಿಗೆ ಹಾಕುತ್ತಿದ್ದೇವೆ. ಅರ್ಥವ್ಯವಸ್ಥೆಯಲ್ಲಿ ಚಿನ್ನ, ಭಾರತ ರಫ್ತು ವ್ಯಾಪಾರ, ಸರ್ಕಾರದ ಹೊಸ ಆರ್ಥಿಕ ನೀತಿ, ಕೃಷಿ ಪತ್ತಿಗೆ ಸಂಬಂಧಿಸಿದಂತೆ ಖುಸ್ರೋ ಸಮಿತಿಯ ಶಿಫಾರಸುಗಳು, ಸಹಕಾರಿ ಬ್ಯಾಂಕಿಂಗ್, ಗ್ರಾಹಕರ ಸೇವೆ, ರಫ್ತು ಉದರಿ ಖಾತರಿ ನಿಗಮ, ಬ್ಯಾಂಕ್ ಸಾಲಕ್ಕೆ ಆಧಾರಗಳು, ವಿದ್ಯುನ್ಮಾನ ಬ್ಯಾಂಕಿಂಗ್ – ಮುಂತಾದ ಲೇಖನಗಳು ಇಲ್ಲಿವೆ. ಇವೆಲ್ಲ ಶಾಶ್ವತ ಮೌಲ್ಯ ಉಳ್ಳಂಥವು. ಪರಾಮರ್ಶನಕ್ಕೆ ಒದಗಿಬರುವಂಥವು. ಮುಂದೆ ಈ ಬಗೆಯ ಇನ್ನೊಂದು ಸಂಪುಟವೂ ಬರಲಿದೆ. ಅನಂತರ 'ಬ್ಯಾಂಕಿಂಗ್ ಪ್ರಪಂಚ' ಎಂದಿನಂತೆ ನಿಯತಕಾಲಿಕವಾಗಿ, ಮೈತುಂಬಿಕೊಂಡು, ಹೆಚ್ಚಿನ ಕಳೆ ಹಾಗೂ ಉಪಯುಕ್ತತೆಯಿಂದ ಕೂಡಿ ಹೊರಬರುವಂತೆ ಎಲ್ಲ ಪ್ರಯತ್ನಗಳನ್ನು ಮಾಡುವೆವೆಂಬ ಭರವಸೆ ನೀಡುತ್ತೇವೆ.



ನಮ್ಮ ಎಚ್ಚೆಸ್ಕೆ

"ಚಲಿಸುವ ವಿಶ್ವಕೋಶ" ಎಂದೇ ಕರ್ನಾಟಕದಲ್ಲಿ ಮನೆಮಾತಾಗಿದ್ದ ಪ್ರಾಚಾರ್ಯ ಎಚ್ಚೆಸ್ಕೆ (ಡಾ.ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್) ಮತ್ತು ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು) ಕೂಡಿಕೊಂಡು 1980ರಿಂದ 2008ರ ವರೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡವನ್ನು ಕಟ್ಟಲು ಪಟ್ಟಿರುವ ಶ್ರಮ ಅಪಾರವಾದುದು. 1979ರಲ್ಲಿ ಸಮನ್ವಯ ಸಮಿತಿಯು ಹಣ ಮತ್ತು ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆಯನ್ನು ಆರಂಭಿಸಿದಾಗ ಅದರ ಸಂಪಾದಕತ್ವವನ್ನು ವಹಿಸಿಕೊಂಡವರು ಎಚ್ಚೆಸ್ಕೆ. ಕನ್ನಡದಲ್ಲಿ ಬ್ಯಾಂಕಿಂಗ್ - ಬ್ಯಾಂಕಿಂಗ್ ನಲ್ಲಿ ಕನ್ನಡ ಎಂಬ ಧ್ಯೇಯ ವಾಕ್ಯದೊಂದಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡವನ್ನು ಯೋಜನಾಬದ್ಧವಾಗಿ ಚಿಂತಿಸಿ ಆಧುನಿಕ ಬ್ಯಾಂಕಿಂಗ್‌ನ್ನು ಸಮರ್ಥವಾಗಿ ಅಭಿವ್ಯಕ್ತಿಸಬಹುದೆಂದು ತೋರಿಸಿಕೊಟ್ಟವರು. ಅಧ್ಯಯನ, ಬರಹಗಳಲ್ಲಿ ಅಸಾಧಾರಣ ಹಿಡಿತವನ್ನು ಸಾಧಿಸಿ ಜ್ಞಾನ ದಾಸೋಹವನ್ನು ನಿಷ್ಕಾಮವಾಗಿ ಮಾಡಿದ ಎಚ್ಚೆಸ್ಕೆ ನಮಗೆಲ್ಲ ಯಾವಾಗಲೂ ಸ್ಫೂರ್ತಿಯ ಚಿಲುಮೆ.

1980ರಲ್ಲಿ ಆರಂಭವಾದ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆಯು 2003ರ ವರೆಗೆ ಪ್ರಕಾಶಗೊಳ್ಳುತ್ತಿತ್ತು. ಈ ಸಂದರ್ಭದಲ್ಲಿ ಬ್ಯಾಂಕಿಂಗ್ ಬರಹಗಾರರ ಪಡೆಯನ್ನು ಬ್ಯಾಂಕಿಂಗ್ ಕಮ್ಮಟಗಳ ಮೂಲಕ ಕಟ್ಟಿದ್ದು ಎಚ್ಚೆಸ್ಕೆ. ಕರ್ನಾಟಕದಾದ್ಯಂತ ಸತತ 27 ಕಮ್ಮಟಗಳು ಜರುಗಿದವು. ಜೊತೆಗೆ 1985ರಲ್ಲಿ ಎಚ್ಚೆಸ್ಕೆಯವರ ಸಂಪಾದಕತ್ವದಲ್ಲಿ ಬ್ಯಾಂಕಿಂಗ್ ನಿಘಂಟು, 1990ರಲ್ಲಿ ಬ್ಯಾಂಕಿಂಗ್ ತ್ರಿಭಾಷಾ ಪದಕೋಶ ಬಿಡುಗಡೆಯಾಯಿತು. ಅಲ್ಲದೆ, ರಾಜ್ಯಾದ್ಯಂತ ಬ್ಯಾಂಕಿಂಗ್ ವಿಚಾರ ಸಂಕಿರಣಗಳು ಜರುಗಿದವು. ನಮ್ಮ ಜೊತೆಗೂಡಿ ಹಲವಾರು ಕನ್ನಡಪರ ಹೋರಾಟಗಳಲ್ಲಿ ತೊಡಗಿಸಿಕೊಂಡವರು ಎಚ್ಚೆಸ್ಕೆ. ಜೊತೆಗೆ ಬ್ಯಾಂಕಿನ ಆಡಳಿತ ವರ್ಗಗಳ ಜೊತೆಗೂಡಿ ಬ್ಯಾಂಕಿಂಗ್ ನಲ್ಲಿ ಕನ್ನಡವನ್ನು ಬಳಸಲು ಅಗತ್ಯವಾದ ಅರ್ಜಿ ನಮೂನೆಗಳನ್ನೂ ದಸ್ತಾವೇಜುಗಳನ್ನೂ ಸಿದ್ಧಪಡಿಸಿದರು.

ಮೈಸೂರು ಜಿಲ್ಲೆಯ ಹಳೆಯೂರಿನಲ್ಲಿ ಜನಿಸಿದ ಎಚ್ಚೆಸ್ಕೆ, ಪ್ರಾಥಮಿಕ ಮತ್ತು ಪ್ರೌಢ ಅಧ್ಯಯನಗಳನ್ನು ಹಳೆಯೂರು ಮತ್ತು ಮೈಸೂರಿನಲ್ಲಿ ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಕಾಂ ಪದವಿಯನ್ನು ಪಡೆದರು... ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದರು. ನಂತರ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಎಮ್.ಎ ಪದವಿಯನ್ನು ಪಡೆದರು. ಈ ನಡುವೆ ಆರ್ಥಿಕ ಹಾಗೂ ರಾಜಕೀಯ ಅಂಕಣಕಾರರಾಗಿ ಹೆಸರು ಮಾಡಿದರು. ವ್ಯಕ್ತಿಚಿತ್ರಗಳನ್ನು ರೂಪಿಸುವುದರಲ್ಲಿ ಇವರದೇ ವಿಶಿಷ್ಟ ಶೈಲಿ. ಚುಟುಕಾಗಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ವ್ಯಕ್ತಿ ಪರಿಚಯವನ್ನು ಮಾಡುತ್ತಿದ್ದ ರೀತಿಗೆ ಸರಿಸಾಟಿಯಾದವರಿಲ್ಲ. ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಇವರದು ಅನುಪಮ ಕೊಡುಗೆ. ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶದ ಸಂಪಾದಕರಾಗಿದ್ದ ಎಚ್ಚೆಸ್ಕೆಯವರನ್ನು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್‌ನ್ನು ನೀಡಿತು. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿತು.

ಯಾವ ಕೆಲಸವನ್ನೇ ಕೈಗೆತ್ತಿಗೊಳ್ಳಲಿ, ಎಚ್ಚೆಸ್ಕೆ ಸ್ಪಷ್ಟ ಹಾದಿಯನ್ನು ಗುರುತಿಸಿಕೊಳ್ಳುತ್ತಿದ್ದರು. ಆಳವಾದ ವ್ಯವಸ್ಥಿತ ಚಿಂತನ, ತೀವ್ರನಿಷ್ಠೆ, ವಿಶ್ಲೇಷಣೆ ಹಾಗೂ ಅನುಭವಗಳೇ ಅವರ ಸಾಧನ. ಸಲಹೆ, ಸಂವಾದಗಳಿಗೆ ಸ್ವಾಗತವಿತ್ತು. ಯುವಪೀಳಿಗೆಗೆ ಅನುಕರಣೀಯವಾದ ಪ್ರಜಾಪ್ರಭುತ್ವವಾದಿ. ಮುಗುಳುನಗು, ಮೂಲಂಗಿ ಷರಾಯಿ, ಸವೆಯುತ್ತಿರುವ ಚಪ್ಪಲಿ, ನುಣುಪಾಗಿ ಸವರಿದ ಕೆನ್ನೆ, ಬೋಳಾದ ನೆತ್ತಿಯ ಅಕ್ಕಪಕ್ಕ ಸ್ವಲ್ಪ ಕಪ್ಪು ಬಿಳಿ ಬಿಳಿಯಾದ ಕೂದಲು, ಕೊಂಚ ಸೊಟ್ಟಗೆ ಕೂತ ಕನ್ನಡಕ, ತಳವನ್ನು ಶೋಧಿಸುವ ಕಾಂತಿಯುಕ್ತ ಕಣ್ಣುಗಳು, ಕ್ರೀಡಾಪಟುವಿನ ದೇಹ. ಈ ಸಾಮಾನ್ಯ ಆಕಾರದೊಳಗೆ ಅಸಾಮಾನ್ಯ ವ್ಯಕ್ತಿತ್ವ, ಪಂಡಿತ, ಜ್ಞಾನಪಿಪಾಸು, ಅಧ್ಯಯನ ಶೀಲ, ಅಸ್ಖಲಿತ ಮಾತುಗಾರ, ಬ್ಯಾಂಕಿಂಗ್ ಪರಿಣಿತ, ನುರಿತ ಅರ್ಥಶಾಸ್ತ್ರ ಪ್ರಾಧ್ಯಾಪಕ. ಒಂದಂಗುಲ ಅಂಕಣದಲ್ಲಿ ಸಾವಿರ ವರುಷಗಳ ಚಿತ್ತಾರ ಬಿಡಿಸುವ ಕುಶಲ ಇತಿಹಾಸಕಾರ. ರಾಜರ ಕಾಲದ ಮೈಸೂರಿನವರಂತೆ ಕಂಡರೂ, ಕ್ರಾಂತಿಕಾರಿ ಮನಸಿನ ಯುವಕ. ಆಧುನಿಕತೆಯ ತೀಕ್ಷ್ಣ ದೃಷ್ಟಿಯನ್ನು ಹೊಂದಿ, ಪರಂಪರೆಯಲ್ಲಿ ತಳವೂರಿದ ವ್ಯಕ್ತಿ ನಮ್ಮ ಎಚ್ಚೆಸ್ಕೆ. ಕಳೆದ ಶತಮಾನದ ಕೊನೆಯ ಎರಡು ದಶಕಗಳ ಬ್ಯಾಂಕಿಂಗ್ ಇತಿಹಾಸವನ್ನು ದಾಖಲಿಸುವ ಅವರ ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳು ಸಂಗ್ರಹವಾಗಿ ಪ್ರಕಾಶನಗೊಳ್ಳುತ್ತಿರುವುದು ಸಂತಸದ ವಿಷಯ.

..ಬೆಂಶ್ರೀ ರವೀಂದ್ರ